
# ಚೌಕಟ್ಟಿನಾಚೆ




## ಪದ್ಮರಾಜ ದಂಡಾವತಿ

# ಚೌಕಟ್ಟಿನಾಚೆ

ಪ್ರಜಾವಾಣಿಯಲ್ಲಿ ಪ್ರಕಟವಾದ ಅಂಕಣಬರಹಗಳು

**ಪದ್ಮರಾಜ ದಂಡಾವತಿ**



**ಅಕ್ಷರ ಪ್ರಕಾಶನ ಹೆಗ್ಗೋಡು ಸಾಗರ ಕರ್ನಾಟಕ ೫೭೭ ೪೧೭**

Choukattinaache: Essays in Kannada, published in Prajavani, by Padmaraj Dandavati,

Published by Akshara Prakashana, Heggodu (Sagara) Karnataka 577 417 First Edition: 2015

Prajavani, Bangalore

Pages: 232, Paper: 70gsm, N. S. bookprint, Size: demy 1/8.

**ಬೆಲೆ: ಇನ್ನೂರಾ ಹತ್ತು ರೂಪಾಯಿ**

**ಅಕ್ಷರ ಜೋಡಣೆ: ಅಕ್ಷರ ಗಣಕ, ಹೆಗ್ಗೋಡು**

**ಮುದ್ರಣ: ಸ್ಕ್ಯಾನ್ ಪ್ರಿಂಟರ್, O :** ೦೮೦ ೨೬೭೪ ೨೨೩೩

## ನನ್ನ ಮಾತು

ಇಲ್ಲಿನ ಲೇಖನಗಳನ್ನು ಪುಸ್ತಕದ ರೂಪದಲ್ಲಿ ಪ್ರಕಟಿಸಲು ಅನುಮತಿ ಕೊಟ್ಟ ನನ್ನ ಸಂಪಾದಕರಾದ ಶ್ರೀ ಕೆ.ಎನ್.ಶಾಂತಕುಮಾರ್ ಅವರಿಗೆ,

ಈ ಪುಸ್ತಕವನ್ನು ಪ್ರೀತಿಯಿಂದ ಪ್ರಕಟಿಸುತ್ತೇವೆ ಎಂದು ಹೇಳಿದ ಮತ್ತು ಪ್ರಕಟಿಸುತ್ತಿರುವ ಕೆ.ವಿ.ಅಕ್ಷರ ಅವರಿಗೆ,

# ಪರಿಚಯ

ಕನ್ನಡ ಅಧ್ಯಾಪಕನಾಗಬೇಕು ಎಂದು ಅಂದುಕೊಂಡಿದ್ದ ಪದ್ಮರಾಜ ದಂಡಾವತಿ (1955) ಪತ್ರಕರ್ತನಾದುದು ಒಂದು ವಿಚಿತ್ರ ಯೋಗಾಯೋಗ. ಆದರೆ, ಅದು ತೀರಾ ಆಕಸ್ಮಿಕ ಇರಲಾರದು. ಏಕೆಂದರೆ ತೀರಾ ಚಿಕ್ಕ ವಯಸ್ಸಿನಲ್ಲಿಯೇ ಅವರಿಗೆ ಪತ್ರಿಕೆಗಳಿಗೆ ಬರೆಯುವ ರೂಢಿ ಇತ್ತು. ಈಗ ಸತತವಾಗಿ 35 ವರ್ಷ ಅವರು ಪತ್ರಿಕೋದ್ಯಮ ವೃತ್ತಿಯಲ್ಲಿ ಇದ್ದಾರೆ. ಸದ್ಯ 'ಪ್ರಜಾವಾಣಿ'ಯ ಕಾರ್ಯ ನಿರ್ವಾಹಕ ಸಂಪಾದಕರಾಗಿ ಕೆಲಸ ಮಾಡುತ್ತಿದ್ದಾರೆ. ಕಳೆದ ಆರು ವರ್ಷಗಳಿಂದ ಪ್ರತಿ ಭಾನುವಾರ ಅವರು ಬರೆಯುತ್ತಿರುವ ನಾಲ್ಕನೇ ಆಯಾಮ ಅಂಕಣ ಕನ್ನಡ ಪತ್ರಿಕೋದ್ಯಮದಲ್ಲಿ ತನ್ನದೇ ಛಾಪನ್ನು ಮೂಡಿಸಿದೆ, ತನ್ನ ವಿಸ್ತಾರ ಮತ್ತು ವಿಷಯ ವೈವಿಧ್ಯದಿಂದ. ಅವರ ಪತ್ರಿಕಾ ಭಾಷೆ (ನಾಲ್ಕನೇ ಮುದ್ರಣ) ಮತ್ತು ರಿಪೋರ್ಟಿಂಗ್ (ತೃತೀಯ ಮುದ್ರಣ) ಪುಸ್ತಕಗಳು ಕನ್ನಡ ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ನಿತ್ಯ ಸಾಥಿ ಎನಿಸುವಂಥ ಸಂದರ್ಭ ಗ್ರಂಥಗಳು. ನಾಲ್ಕನೇ ಆಯಾಮದ ಆರು ಸಂಪುಟಗಳು, ಅವಲೋಕನ (ದ್ವಿತೀಯ ಮುದ್ರಣ), ಗೊಮ್ಮಟ (ಶ್ರವಣ ಬೆಳಗೊಳದ ಪ್ರಾಗೈತಿಹಾಸದ ಮಹತ್ವ ತಿಳಿಸುವ ಗ್ರಂಥ) ಮತ್ತು ಆರಂಭ (ಸಂಕೀರ್ಣ ಲೇಖನಗಳ ಸಂಕಲನ) ಅವರ ಇತರ ಕೃತಿಗಳು.

ಅಮೆರಿಕಾ ಸರ್ಕಾರ 2009ನೇ ಇಸವಿಯಲ್ಲಿ ತನ್ನ ಪ್ರತಿಷ್ಠಿತ ಅಂತರ ರಾಷ್ಟ್ರೀಯ ಸಂದರ್ಶಕರ ನಾಯಕತ್ವ ಶಿಬಿರಕ್ಕೆ ದಂಡಾವತಿಯವರನ್ನು ಆಯ್ಕೆ ಮಾಡಿ ಆಹ್ವಾನಿಸಿತ್ತು. ಅದೇ ವರ್ಷ ಇಟಲಿಯಲ್ಲಿ ನಡೆದ ಜಿ8-ಜಿ ರಾಷ್ಟ್ರಗಳ ಶೃಂಗಸಭೆಯಲ್ಲಿ ದಂಡಾವತಿ, ಆಗಿನ ಪ್ರಧಾನಿ ಮನಮೋಹನ್ ಸಿಂಗ್ ಜತೆಗಿನ ಮಾಧ್ಯಮ ನಿಯೋಗದಲ್ಲಿ ಇದ್ದರು. ಅವರು ಭೇಟಿ ನೀಡಿದ ಇತರ ದೇಶಗಳು : ನೇಪಾಳ, ಥೈಲ್ಯಾಂಡ್, ಫ್ರಾನ್ಸ್, ದಕ್ಷಿಣ ಆಫ್ರಿಕಾ, ಸಿಂಗಪುರ, ಜೋರ್ಡನ್ ಮತ್ತು ಆಸ್ಟ್ರೇಲಿಯಾ, ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ ಮತ್ತು ಮಾಧ್ಯಮ ಅಕಾಡೆಮಿಯ ಜೀವಮಾನ ಸಾಧನೆ ಪ್ರಶಸ್ತಿಗಳು ಸೇರಿದಂತೆ ಅನೇಕ ಪ್ರಶಸ್ತಿಗಳನ್ನು ಪಡೆದಿರುವ ದಂಡಾವತಿ ಅವರಿಗೆ ಅವರು ಕಲಿತ ಕರ್ನಾಟಕ ವಿಶ್ವ ವಿದ್ಯಾಲಯ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ.

# ಪ್ರವೇಶ

ನೆನಪುಗಳ ಉಲ್ಲೇಖವಿಲ್ಲದೆ ನನಗೆ ಯಾವ ಲೇಖನವನ್ನೂ ಬರೆಯಲು ಸಾಧ್ಯವಿಲ್ಲವೇನೋ ಎಂದು ಇತ್ತೀಚೆಗೆ ನನಗೆ ಅನಿಸುತ್ತಿದೆ. (ಪ್ರಾಯಃ, ವಯಸ್ಸಿನ ಕಾರಣವಿರಬಹುದು.) ಅಂಕಣ ಬರಹಗಳು' ಎಂದ ಕೂಡಲೇ ಅನೇಕಾನೇಕ ನೆನಪುಗಳು ನುಗ್ಗಿ ಬರುತ್ತವೆ; ನನ್ನ ವಿದ್ಯಾರ್ಥಿ ಜೀವನದ ಕಾಲದಲ್ಲಿ ಹಾಗೂ ಅನಂತರ ಓದಿದ ಅನೇಕ ಅಂಕಣ ಬರಹಗಳಲ್ಲಿ ಹೆಚ್ಚಿನವು ಈಗಲೂ ನೆನಪಿನಲ್ಲುಳಿದಿವೆ: ಐವತ್ತರ ದಶಕದಲ್ಲಿ ಪ್ರಜಾಮತದಲ್ಲಿ ಬರುತ್ತಿದ್ದ ಅನಕೃ ಅವರ ಅಂಕಣ 'ಕನ್ನಡ ಕುಲ ಪುರುಷರು', ಚಿತ್ರಗುಪ್ತ ಮತ್ತು ಜನಪ್ರಗತಿ ವಾರಪತ್ರಿಕೆಗಳಲ್ಲಿ ಬರುತ್ತಿದ್ದ ನಿರಂಜನ ಅವರ ಅಂಕಣಗಳು, ಮೈಸೂರಿನ ಕಿಡಿ (?) ಪತ್ರಿಕೆಯಲ್ಲಿ ಬರುತ್ತಿದ್ದ ತರಾಸು ಅವರ 'ಹೂಬಾಣ,' ಇತ್ಯಾದಿ; ಹಾಗೆಯೇ, ಅರವತ್ತು-ಎಪ್ಪತ್ತರ ದಶಕಗಳಲ್ಲಿ ತುಂಬಾ ಜನಪ್ರಿಯವಾಗಿದ್ದ ಹಾಮಾನಾ ಅಂಕಣಗಳು, ಬಸವರಾಜ ಕಟ್ಟಿಮನಿ ಅವರ 'ಶಾಸಕ-ಸಾಹಿತಿಯ ದಿನಚರಿ,' ಟಿ ಎಸ್ ಆರ್ ಅವರ 'ಭೂಬಾಣ' ಮತ್ತು ವೈ ಎನ್ ಕೆ ಅವರ 'ವಂಡರ್ ಕಣ್ಣು' ಪ್ರಜಾವಾಣಿಯ ಅಂಕಣಗಳು; 80ರ ದಶಕದಲ್ಲಿ ಪ್ರಸಿದ್ಧವಾಗಿದ್ದ ಲಂಕೇಶರ 'ಟೀಕೆ-ಟಿಪ್ಪಣಿ' (ಲಂಕೇಶ್ ಪತ್ರಿಕೆ), ಕು. ಶಿ. ಹರಿದಾಸ ಭಟ್ಟರ 'ಲೋಕಾಭಿರಾಮ' (ಉದಯವಾಣಿ), ಕೆ.

ನಾರಾಯಣಾಚಾರ್ಯರ 'ಮಹಾಭಾರತದ ಪಾತ್ರಗಳು' (ತರಂಗ), ವಿವೇಕ ರೈ ಅವರ 'ಗಿಳಿಸೂವೆ' (ಮುಂಗಾರು), ಶೂದ್ರ ಶ್ರೀನಿವಾಸ್ ಅವರ 'ಕನಸಿಗೊಂದು ಕಣ್ಣು' (ಶೂದ್ರ); ಕಳೆದ ದಶಕದಲ್ಲಿ ಮೂಡಿಬಂದ ಎಚ್ ಎಸ್ ವಿ ಅವರ ಮಹಾಭಾರತವನ್ನು ಕುರಿತ ಧಾರಾವಾಹಿ ಅಂಕಣ (ಉದಯವಾಣಿ), ಇತ್ತೀಚೆಗೆ ಬಂದ ನಾಗತಿಹಳ್ಳಿ ಅವರ 'ರೆಕ್ಕೆಬೇರು' (ಪ್ರಜಾವಾಣಿ), ಇತ್ಯಾದಿ.

ಬೇರೆಲ್ಲವನ್ನು ಮರೆತರೂ ಮೇಲ್ಕಾಣಿಸಿದ ಅಂಕಣ ಬರಹಗಳು ಮಾತ್ರ ಏಕೆ ನೆನಪಿನಲ್ಲುಳಿದಿವೆ? ಅಂಕಣ ಬರಹಗಳು ವರ್ತಮಾನದ ಜ್ವಲಂತ ಸಮಸ್ಯೆಗಳಿಗೆ | ಸಂಗತಿಗಳಿಗೆ ನೇರವಾಗಿ ಸ್ಪಂದಿಸುತ್ತವೆ; ಅವುಗಳನ್ನು ಆಯಾಯಾ ಕ್ಷೇತ್ರದಲ್ಲಿ ತಜ್ಞರಾದವರು ಬರೆಯುತ್ತಾರೆ; ಮತ್ತು ಅವರುಗಳು ಹೆಚ್ಚಾಗಿ ಸಾಹಿತಿಗಳೇ ಆದುದರಿಂದ ಅವರ ಬರಹಗಳು ನೇರವಾಗಿ ನಮ್ಮ ಬುದ್ಧಿ-ಭಾವಗಳನ್ನು ತಟ್ಟುತ್ತವೆ, ಇತ್ಯಾದಿ ಕಾರಣಗಳಿರಬಹುದು.

ಎಂದರೆ, 'ಅಂಕಣ ಬರಹ' ಎಂಬುದು ಇತರ ಎಲ್ಲಾ ಬರಹ-ಪ್ರಕಾರಗಳಿಗಿಂತ ಭಿನ್ನವಾದ ಒಂದು ವಿಶಿಷ್ಟ ಬಗೆಯ ಬರಹ ಎಂಬುದು ಸ್ಪಷ್ಟ ಅದು ಸಾಂದರ್ಭಿಕವಾಗಿದ್ದೂ ಆಯಾಯಾ ಸಂದರ್ಭದ ಒತ್ತಡವನ್ನು ಮೀರುವಂತಿರಬೇಕು;ಜನಪ್ರಿಯ ವಿಶ್ಲೇಷಣೆ- ತೀರ್ಮಾನಗಳನ್ನು ಪರೀಕ್ಷಿಸುವ ಹಾಗೂ ಅವಶ್ಯಕವಾದರೆ ಅವುಗಳನ್ನು ತಿರಸ್ಕರಿಸುವ ಸ್ವಂತಿಕೆ ಅಂಕಣಕಾರನಲ್ಲಿರಬೇಕು; ಮತ್ತು, ಅತಿ ಮುಖ್ಯವಾಗಿ, ಅಂಕಣಗಳ ಆಳದಲ್ಲಿ ಯಾವ ಒತ್ತಡಗಳಿಗೂ ಮಣಿಯದೆ ತನಗೆ ಕಂಡ 'ಸತ್ಯ'ವನ್ನು ಸ್ಪಷ್ಟವಾಗಿ ದಾಖಲಿಸುವ ನೈತಿಕ ಧೈರ್ಯವಿರಬೇಕು. ಈ ಎಲ್ಲಾ ಗುಣಗಳು ಕಂಡು ಬರುವ ಕೆಲವೇ ಕೆಲವು ಅಂಕಣಕಾರರಲ್ಲಿ ಒಬ್ಬರೆಂದರೆ ಕಳೆದ ನಾಲ್ಕೈದು ವರ್ಷಗಳಲ್ಲಿ ತುಂಬಾ ಮೆಚ್ಚುಗೆಯಿಂದ ನಾನು ಓದುತ್ತಿರುವ 'ನಾಲ್ಕನೆಯ ಆಯಾಮ' (ಪ್ರಜಾವಾಣಿ) ಎಂಬ ಅಂಕಣವನ್ನು ಬರೆಯುತ್ತಿರುವ ಪದ್ಮರಾಜ ದಂಡಾವತಿ.

***

ಪ್ರಜಾವಾಣಿ ದಿನಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕರಾಗಿರುವ ಪದ್ಮರಾಜ ದಂಡಾವತಿಯವರು ಕಳೆದ ಆರು ವರ್ಷಗಳಿಂದ ಪ್ರತಿ ಭಾನುವಾರ ಪ್ರಕಟವಾಗುವ “ನಾಲ್ಕನೆಯ ಆಯಾಮ” ಎಂಬ ಅಂಕಣವನ್ನು ಬರೆಯುತ್ತಿದ್ದಾರೆ; ಈ ಹೆಸರು, ಪ್ರಾಯಃ, ಇಂಗ್ಲೀಷ್‌ನ `Fourth Estate' ಎಂಬುದರ ಕನ್ನಡ ರೂಪಾಂತರ. ಈಗೆರಡು ವರ್ಷಗಳ ಹಿಂದೆ (2013) ಅವರು ಬರೆದಿದ್ದ ಅಂಕಣಗಳ ಸಂಕಲನ ಅದೇ ಹೆಸರಿನಲ್ಲಿ ಪ್ರಕಟವಾಗಿ ಸಾಕಷ್ಟು ಓದುಗರ ಗಮನ ಸೆಳೆಯಿತು. ಇದುವರೆಗೆ ಅವರ ಅಂಕಣಗಳ ಆರು ಸಂಪುಟಗಳು ಪ್ರಕಟವಾಗಿವೆ. ಕಳೆದೆರಡು ವರ್ಷಗಳಲ್ಲಿ ಅವರು ಬರೆದಿರುವ ಅಂಕಣಗಳ ಆಯ್ದ ಲೇಖನಗಳು “ಚೌಕಟ್ಟಿನಾಚೆ” ಎಂಬ ಹೆಸರಿನಲ್ಲಿ ಈಗ ಪ್ರಕಟವಾಗುತ್ತಿದೆ. ಅವರ ಒಟ್ಟಾರೆ ಅಂಕಣ ಬರಹ ಕೆಲವು ಸಮಾನ ಸಂಗತಿಗಳನ್ನು ಚರ್ಚಿಸಿದರೂ, ಈ ಸಂಕಲನದ ಲೇಖನಗಳ ಚೌಕಟ್ಟು ಬೇರೆಯಾಗಿದ್ದು, ಹೆಚ್ಚು ವೈವಿಧ್ಯತೆ ಇಲ್ಲಿ ಕಂಡುಬರುತ್ತದೆ. ಈ ಸಂಕಲನದಲ್ಲಿರುವ ಸುಮಾರು 52 ಲೇಖನಗಳು 'ವರ್ತಮಾನ,' 'ಭಾಷೆ, ಮಾಧ್ಯಮ, ಮುಂತಾಗಿ,' 'ಬೇಕಿರುವುದು' ಮತ್ತು 'ಹುಡುಕಾಟ' ಎಂಬ ನಾಲ್ಕು ಭಾಗಗಳಲ್ಲಿ ಸೇರ್ಪಡೆಯಾಗಿವೆ. ಸ್ಥೂಲವಾಗಿ ಈ ಭಾಗಗಳಲ್ಲಿರುವ ಲೇಖನಗಳ ವಸ್ತುವನ್ನು ಹೀಗೆ ಗುರುತಿಸಬಹುದು: ಮೊದಲ ಭಾಗದಲ್ಲಿ ಸದ್ಯದ ರಾಜಕೀಯ ನಾಯಕರು ಮತ್ತು ಅವರ ಯೋಜನೆಗಳು, ಪ್ರಮುಖ ಘಟನೆಗಳು; ಎರಡನೆಯ ಭಾಗದಲ್ಲಿ ಕನ್ನಡ ಭಾಷೆ, ಶಿಕ್ಷಣ ಮಾಧ್ಯಮದ ತೊಡಕುಗಳು, ಪತ್ರಿಕೋದ್ಯಮದ ಎಡರು-ತೊಡರುಗಳು; ಮೂರನೆಯ ಭಾಗದಲ್ಲಿ ಕೃಷಿ, ಆಡಳಿತ ವ್ಯವಸ್ಥೆ, ಇತ್ಯಾದಿ; ಮತ್ತು ಕೊನೆಯ ಭಾಗದಲ್ಲಿ ಸದ್ಯದ ಕಾನೂನು ವ್ಯವಸ್ಥೆ, ಸಮಾಜದಲ್ಲಿ ಸ್ತ್ರೀಯ ಸ್ಥಾನಮಾನಗಳು, ಇತ್ಯಾದಿ ಸಮಸ್ಯೆಗಳು ಇವುಗಳ ವಿಶ್ಲೇಷಣೆ- ವ್ಯಾಖ್ಯಾನಗಳಿವೆ. ನಾವು ನಿರೀಕ್ಷಿಸುವಂತೆಯೇ 'ವರ್ತಮಾನ' ಎಂಬ ಭಾಗದಲ್ಲಿ ಹೆಚ್ಚಿನ ಸಂಖ್ಯೆಯ ಲೇಖನಗಳು (20) ಸೇರಿವೆ.

ಮೊದಲಿಗೆ ದಂಡಾವತಿಯವರ ಅಂಕಣಗಳ ಆಕೃತಿಯ ಬಗ್ಗೆ. ಅವರ ಅಂಕಣದ ಹೆಸರೂ ಸೇರಿದಂತೆ ಈ ಸಂಕಲನದಲ್ಲಿ ಸೇರಿರುವ ಪ್ರತಿಯೊಂದು ಲೇಖನದ ಶೀರ್ಷಿಕೆಯೂ ಆಕರ್ಷಕವಾಗಿದೆ ಹಾಗೂ ಅರ್ಥಪೂರ್ಣವಾಗಿದೆ. 'ಚೌಕಟ್ಟಿನಾಚೆ' ಎಂಬ ಶೀರ್ಷಿಕೆ 'ಈ

ಸಂಕಲನದ ಲೇಖನಗಳು ಎಲ್ಲಾ ವೈಚಾರಿಕ-ರಾಜಕೀಯ ಸಿದ್ಧ ಚೌಕಟ್ಟುಗಳನ್ನು ಮೀರುತ್ತವೆ' ಎಂಬುದನ್ನು ಸೂಚಿಸುತ್ತದೆ. ಪ್ರತಿಯೊಂದು ಲೇಖನದ ತಲೆಬರಹವೂ ಲೇಖನದ ಸಾರರೂಪಿ ನಿಲುವನ್ನು ಧ್ವನಿಸುತ್ತದೆ: 'ಬಿಸಾಕುವ, ಬಳಸುವ ಇತಿಹಾಸದ ಪರಿ,' 'ತಂದೆ ಯಾರು ಎಂಬ ಮೌನವಲಯ ಕೆದಕಿ . . .' 'ನಮ್ಮ ಶಾಸಕರಿಗೆ ಒಂದಿಷ್ಟಾದರೂ ಲಜ್ಜೆ ಬೇಡವೇ?' ಇತ್ಯಾದಿ. ಈ ಬಗೆಯ ಅಸಾಂಪ್ರದಾಯಿಕ ಶೀರ್ಷಿಕೆಗಳು ಓದುಗರ ಕುತೂಹಲವನ್ನು ಕೆಣಕಿ, ಆಯಾಯಾ ಲೇಖನಗಳನ್ನು ಓದುವಂತೆ ಪ್ರಚೋದಿಸುತ್ತವೆ. ಹೆಚ್ಚಿನ ಲೇಖನಗಳು ನಾಟಕೀಯವಾಗಿ ಪ್ರಾರಂಭವಾಗುತ್ತವೆ: ಯಾವುದೋ ಒಂದು ಘಟನೆಯ, ಸಂಗತಿಯ ಅಂಶವೊಂದನ್ನು ಹಠಾತ್ತನೆ ನಮ್ಮ ಕಣ್ಣು ಮುಂದೆ ಚಿತ್ರಿಸಿ, ಅನಂತರ ಲೇಖಕರು ವಿಷಯ ಪ್ರವೇಶ ಮಾಡುತ್ತಾರೆ: 'ಇತಿಹಾಸ ಬಳಸಿಕೊಳ್ಳುತ್ತದೆ ಮತ್ತು ಬಿಸಾಕುತ್ತದೆ. ಅದಕ್ಕೆ ದಯೆ ಎಂಬುದು ಇರುವುದಿಲ್ಲ' ಎಂದು ಪ್ರಾರಂಭವಾಗುವ ಲೇಖನ ಅದು ಯಾರ ಅಥವಾ ಯಾವ ಘಟನೆಯ ಬಗ್ಗೆ ಇದೆ ಎಂಬುದನ್ನು ಮೊದಲ ಪ್ಯಾರಾದಲ್ಲಿ ಬಿಟ್ಟುಕೊಡುವುದಿಲ್ಲ; 'ಇದು ಈಗ ಗೋಡೆ ಮೇಲಿನ ಬರಹ' ಎಂದು ಶುರುವಾಗುವ ಲೇಖನ 'ಇದು' ಯಾವುದು ಎಂಬುದನ್ನು ಅನಂತರ ತಿಳಿಸುತ್ತದೆ; 'ನೂರೆಂಟು ಪ್ರಶ್ನೆಗಳು ಮನಸ್ಸನ್ನು ಮುತ್ತಿ ಕಾಡುತ್ತಿವೆ. ಉತ್ತರಕ್ಕಾಗಿ ಮನಸ್ಸು ತಡಕಾಡುತ್ತದೆ' ಎಂದು ಪ್ರಾರಂಭವಾಗುವ ಮನ ಕಲಕುವ ಲೇಖನ ದೆಹಲಿಯ ಅತ್ಯಾಚಾರಕ್ಕೆ ಸಂಬಂಧಿಸಿದುದು ಎಂಬುದು ನಮಗೆ ಲೇಖನವನ್ನು ಸ್ವಲ್ಪ ಓದಿದನಂತರ ತಿಳಿಯುತ್ತದೆ. ಅರ್ಥಾತ್, ಈ ಬಗೆಯ ನಾಟಕೀಯ ಹಾಗೂ ಭಾವನಾತ್ಮಕ ಪ್ರಾರಂಭ ಓದುಗರ ಕುತೂಹಲವನ್ನು ಬಡಿದೆಬ್ಬಿಸಿ, ಅವರು ಲೇಖನವನ್ನು ಕೂಡಲೇ ಓದುವಂತೆ ಪ್ರಚೋದಿಸುತ್ತದೆ.

ಕೆಲವು ಅಪವಾದಗಳನ್ನು ಬಿಟ್ಟರೆ, ದಂಡಾವತಿಯವರ ಅಂಕಣಗಳೆಲ್ಲವೂ ಒಂದು ಪ್ರಶ್ನೆಯಿಂದ ಮುಗಿಯುತ್ತವೆ ('ನಾವು ಮುಖ ಮುಚ್ಚಿಕೊಳ್ಳಲು ಇನ್ನೂ ಏನೇನು ಆಗಬೇಕು?'.) ಭಾಷೆ ಎಲ್ಲಿಯೂ ಗ್ರಂಥಸ್ಥವಾಗದೆ, ಕ್ಲಿಷ್ಟವಾಗದೆ, ಸ್ನೇಹಿತರು ಪರಸ್ಪರ ಮಾತನಾಡುವಾಗ ಉಪಯೋಗಿಸುವ ದೈನಂದಿನ ಭಾಷಾಸ್ತರವನ್ನು ಪ್ರತಿನಿಧಿಸುತ್ತಾ ಸ್ಪಷ್ಟ ಹಾಗೂ ಸರಳವಾಗಿದೆ. ಈ ಬಗೆಯ 'ಕಟ್ಟುವಿಕೆ'ಯೂ ದಂಡಾವತಿಯವರ ಅಂಕಣಗಳ ಜನಪ್ರಿಯತೆಯ ಒಂದು ಮುಖ್ಯ ಕಾರಣ ಎಂದು ನನಗೆ ತೋರುತ್ತದೆ. (ಈ ನೆಲೆಯಲ್ಲಿ, ದಂಡಾವತಿಯವರು ಯುವ ಬರಹಗಾರರಿಗೆ ಪತ್ರಿಕೋದ್ಯಮಿಗಳಿಗೆ ವಾರ್ಷಿಕ ಕಮ್ಮಟಗಳನ್ನು ಏಕೆ ಆಯೋಜಿಸಬಾರದು?)

ಕೂಡಲೇ ಹೇಳಬೇಕಾದ ಮಾತೆಂದರೆ, ಒಂದು ಲೇಖನದ 'ಕಟ್ಟುವಿಕೆ' ಎಷ್ಟೇ ಆಕರ್ಷಕವಾಗಿದ್ದರೂ ಅಂಕಣಕಾರನ ನಿಜವಾದ ಸವಾಲೆಂದರೆ ಆ ಅಂಕಣ ಸಾಂದರ್ಭಿಕ ಚೌಕಟ್ಟನ್ನು ಮೀರುತ್ತದೆಯೆ ಎಲ್ಲವೆ ಎಂಬುದು. ಹೆಚ್ಚಿನ ಅಂಕಣಕಾರರ ಅಂಕಣಗಳು ಈ ನಿಕಷದಲ್ಲಿ ಸೋಲುತ್ತವೆ. ಆದರೆ, ತಮ್ಮ ಒಂದು ವಿಶಿಷ್ಟ ಆಲೋಚನಾಕ್ರಮದಿಂದ ದಂಡಾವತಿಯವರು ಈ ಸವಾಲನ್ನು ಧೈರ್ಯವಾಗಿ ಎದುರಿಸಿ ಗೆಲ್ಲುತ್ತಾರೆ.

ಸಾಂದರ್ಭಿಕತೆಯನ್ನು ಮೀರಲು ಇವರು ಅನುಸರಿಸುವರ ಆಲೋಚನಾ ಕ್ರಮವೆಂದರೆ, ಲೇಖನವನ್ನು ವ್ಯಕ್ತಿಯೊಬ್ಬರಿಂದ ಸಂಗತಿಯೊಂದರಿಂದ ಪರಿಚಯಿಸಿ, ಅನಂತರ ಆ ವ್ಯಕ್ತಿಯ/ ಸಂಗತಿಯ ವಿವರಗಳನ್ನು

ಕೊಡುತ್ತಲೇ ಅಂತಹ ವ್ಯಕ್ತಿಯನ್ನು ಸಂಗತಿಯನ್ನು ರೂಪಿಸುವ ಹಾಗೂ ಪ್ರಭಾವಿಸುವ 'ವ್ಯವಸ್ಥೆ'ಯನ್ನು ಗುರುತಿಸಿ, ಲೇಖನದಲ್ಲಿ ಹೆಚ್ಚಿಗೆ ಆ ವ್ಯವಸ್ಥೆಯನ್ನು



ವಿಶ್ಲೇಷಿಸುತ್ತಾರೆ. ವ್ಯಕ್ತಿ ಅಥವಾ ಸಂಗತಿಗಳು ಬದಲಾದರೂ ವ್ಯವಸ್ಥೆಗಳು ಬದಲಾಗದಿರುವುದ ರಿಂದ, ಆ ಲೇಖನ ತನ್ನ ವಿಶಿಷ್ಟ ಸಾಂದರ್ಭಿಕತೆಯನ್ನು ಮೀರಿ ಸಾರ್ವಕಾಲಿಕ ಪ್ರಸ್ತುತತೆಯನ್ನು ಪಡೆಯುತ್ತದೆ. ಈ ಅಂಶವನ್ನು ನಿದರ್ಶಿಸಲು ಒಂದೆರಡು ಲೇಖನಗಳನ್ನು ನೋಡಬಹುದು.

ತೆಹೆಲ್ಕಾ ಪತ್ರಿಕೆಯ ಸಂಪಾದಕರಾಗಿದ್ದ, ಹಾಗೂ ಪ್ರಸಿದ್ಧ ಕಾದಂಬರಿಕಾರರಾಗಿದ್ದ ತರುಣ್ ತೇಜಪಾಲ್ ಕೇವಲ ಹತ್ತು ಹನ್ನೆರಡು ವರ್ಷಗಳಲ್ಲಿಯೇ ಅತ್ಯಂತ ಪ್ರಭಾವಶಾಲಿಯಾಗಿ ಬೆಳೆದವರು; ತಮ್ಮ ಕುಟುಕು ಕಾರ್ಯಾಚರಣೆಗಳ ಮೂಲಕ ಬಂಗಾರು ಲಕ್ಷ್ಮಣ್, ಜಯಾ ಜೇಟ್ಲಿ, ಮುಂತಾದ ಎತ್ತರದ ರಾಜಕೀಯ ವ್ಯಕ್ತಿಗಳ ಅಧಃಪತನಕ್ಕೆ ಕಾರಣರಾದವರು. ಗ್ರೀಕ್ ನಾಟಕಗಳ ದುರಂತನಾಯಕರಂತೆ ಅವರು ಹೇಗೆ ಕ್ಷಿಪ್ರವಾಗಿ ಎತ್ತರಕ್ಕೆ ಬೆಳೆದರೋ ಅಷ್ಟೇ ಕ್ಷಿಪ್ರವಾಗಿ ಆಳಕ್ಕೆ ಬಿದ್ದವರು. ತೇಜಪಾಲ್ ಅವರ ಬದುಕನ್ನು ಚಿತ್ರಿಸುತ್ತಾ, ದಂಡಾವತಿ ಎತ್ತುವ ಮೊದಲ ಪ್ರಶ್ನೆಯೆಂದರೆ ತೇಜಪಾಲ್ ಅಂತಹ ಸ್ತ್ರೀಸ್ವಾತಂತ್ರ್ಯವನ್ನು ತಮ್ಮ ಬರಹಗಳಲ್ಲಿ ಎತ್ತಿ ಹಿಡಿದವರು ತಮ್ಮ ಸಹೋದ್ಯೋಗಿ ಸ್ತ್ರೀಯೊಬ್ಬಳೊಡನೆ 'ಪುರುಷ ದಾರ್ಷ್ಟ್ಯ'ದಿಂದ ಏಕೆ ನಡೆದುಕೊಂಡರು? ಇದಕ್ಕೆ ಕಾರಣ ಅವರಿಗೆ (ಗ್ರೀಕ ನಾಟಕಕಾರರು ದರ್ಶಿಸುವ) `hubris' 'ಗರ್ವ' ಕಾರಣವೇ? ಈ ಅಂಶವನ್ನು ವ್ಯಾಖ್ಯಾನಿಸುತ್ತಾ ಕೊನೆಗೆ ಅಂಕಣಕಾರರು ಎತ್ತುವ ಸಾರ್ವಕಾಲಿಕ ಪ್ರಸ್ತುತವಾದ ಪ್ರಶ್ನೆ ಲೇಖಕರಾದವರು ಬರವಣಿಗೆ ಮತ್ತು ಬದುಕಿನ ನಡುವಿನ ದ್ವಂದ್ವ'ವನ್ನು ಹೇಗೆ ನಿಭಾಯಿಸಬೇಕು?'

ಇದೇ ನೆಲೆಯಲ್ಲಿ, ಮನಮೋಹನ್ ಸಿಂಗ ಅವರ ವ್ಯಕ್ತಿತ್ವವನ್ನು ವ್ಯಾಖ್ಯಾನಿಸುತ್ತಾ, ಅಂಕಣಕಾರರು ಎತ್ತುವ ಮುಖ್ಯ ಪ್ರಶ್ನೆಯೆಂದರೆ, ಒಂದು ಬೃಹತ್ ರಾಷ್ಟ್ರದ ನಾಯಕನಾದವನು ತಾನು ಪ್ರಾಮಾಣಿಕನಾಗಿದ್ದೂ ಇತರರ ಭ್ರಷ್ಟಾಚಾರವನ್ನು ಹೇಗೆ ಮತ್ತು ಏಕೆ ಸಹಿಸಿಕೊಳ್ಳುತ್ತಾನೆ? ನಾಯಕನು ಸ್ವತಃ ಅಪ್ರಾಮಾಣಿಕನಾಗಿದ್ದೂ ರಾಷ್ಟ್ರದ ಅಭಿವೃದ್ಧಿಯನ್ನು ಸಾಧಿಸಬಹುದೆ? ಎಂಬ ಪ್ರಶ್ನೆಗಳು, ದೆಹಲಿಯಲ್ಲಾದ ಅತ್ಯಾಚಾರ ಪ್ರಕರಣವನ್ನು ವ್ಯಾಖ್ಯಾನಿಸುತ್ತಾ, ಕೊನೆಗೆ ಲೇಖಕರು 'ಬಾಲಾಪರಾಧಿ' ಎಂದು ಯಾರನ್ನು ಗುರುತಿಸಬೇಕು? ತರುಣಿಯೊಬ್ಬಳ ದೇಹದ ಮೇಲೆ ಅತ್ಯಾಚಾರ ಮಾಡಿದವನೂ ಬಾಲಾಪರಾಧಿಯಾಗಿ ಪರಿಗಣಿಸಲ್ಪಡಬೇಕೆ? ಎಂಬ ಪ್ರಶ್ನೆಗಳನ್ನು ಎತ್ತುತ್ತಾರೆ.

ಸಾಂದರ್ಭಿಕ ಪ್ರಸ್ತುತತೆಯನ್ನು ಮೀರುವುದಲ್ಲದೆ, ಅಂಕಣಕಾರನು ಎದುರಿಸುವ ಮತ್ತೊಂದು ಸವಾಲು ಪ್ರಾಮಾಣಿಕತೆ ಹಾಗೂ ನೈತಿಕ ಸ್ಥೈರ್ಯವನ್ನು ಕುರಿತದ್ದು: ಅಂಕಣ- ಕಾರನ ನಿಲುವು ಪಕ್ಷಾತೀತವಾಗಿದೆಯೆ ಮತ್ತು

ವೈಯಕ್ತಿಕ ರಾಗ-ದ್ವೇಷಗಳಿಂದ ಅವನು ಮುಕ್ತನಾಗಿದ್ದಾನೆಯೆ? ಮತ್ತು ತನ್ನ ನಿಲುವನ್ನು ಯಾವ ಮುಲಾಜೂ ಇಲ್ಲದೆ ನೇರವಾಗಿ ವ್ಯಕ್ತಪಡಿಸುತ್ತಾನೆಯೆ? ಈ ಪ್ರಶ್ನೆಗಳಿಗೆ ಧೈರ್ಯವಾಗಿ 'ದಂಡಾವತಿಯವರು ತಮ್ಮ ಬರಹಗಳಲ್ಲಿ ವಸ್ತುನಿಷ್ಠರಾಗಿದ್ದಾರೆ' ಎಂದು ಉತ್ತರಿಸಬಹುದು. ರಾಜ್ಯದ ಮುಖ್ಯಮಂತ್ರಿ ಸಿದ್ಧರಾಮಯ್ಯನವರ ಬಗ್ಗೆ ಕೆಲ ಸಂದರ್ಭಗಳಲ್ಲಿ ಕಟುವಾಗಿ ಬರೆಯುವಂತೆ ಪ್ರಧಾನಿ ಮೋದಿಯವರ ಬಗ್ಗೆಯೂ ಬರೆಯುತ್ತಾರೆ; 'ಕೇವಲ ಹಿಂದುಳಿದ ಮತ್ತು ಅಲ್ಪಸಂಖ್ಯಾತ ಮಕ್ಕಳನ್ನು ಪ್ರವಾಸಕ್ಕೆ ಕಳುಹಿಸಲು ತೆಗೆದುಕೊಂಡ ತೀರ್ಮಾನ ಶುದ್ಧ ಅವಿವೇಕದ್ದು' (ಪು. 22) ಎಂದು ರಾಜ್ಯದ



ಮುಖ್ಯಮಂತ್ರಿಯನ್ನು ಟೀಕಿಸಿದರೆ, 'ಈಗ ಮೋದಿಯವರಿಗೆ ಮತ್ತೆ ರಾಜಧರ್ಮದ ಪಾಠ ಹೇಳುವವರು ಬಿಜೆಪಿಯಲ್ಲಿ ಯಾರೂ ಇಲ್ಲವೆ? ಎಂಥ ದುರ್ದೆಸೆ? (ಪು.10) ಎಂದು ಪ್ರಧಾನಿಯನ್ನು ಟೀಕಿಸುತ್ತಾರೆ. 'ಬೆವರು ಸುರಿಸದೇ ಬಂದ ದುಡ್ಡು ಮತ್ತು ಅನಾಯಾಸವಾಗಿ ಬಂದ ಅಧಿಕಾರ ಅಹಂಕಾರವನ್ನು ಬೆಳೆಸುತ್ತದೆ' (ಪು.30) ಎಂದು ಬಳ್ಳಾರಿಯ ರೆಡ್ಡಿಗಳ ಬಗ್ಗೆ ಟಿಪ್ಪಣಿ ಬರೆದರೆ, ನಮ್ಮ ಶಾಸಕರಿಗೆ ಒಂದಿಷ್ಟಾದರೂ ಲಜ್ಜೆ ಬೇಡವೆ?' (ಪು. 58) ಎಂದು ತಮ್ಮ ಸಂಬಳವನ್ನು ಯಾವ ಚರ್ಚೆಯೂ ಇಲ್ಲದೆ ದುಪ್ಪಟ್ಟು ಏರಿಸಿಕೊಂಡ ಶಾಸಕರನ್ನು ಪ್ರಶ್ನಿಸುತ್ತಾರೆ.

ಪ್ರಾಮಾಣಿಕತೆಯ ಮತ್ತೊಂದು ಆಯಾಮ ತಮ್ಮ ವೃತ್ತಿಯನ್ನು ವೈಭವೀಕರಿಸದೆ ಅದರ ಆಪತ್ತುಗಳು ಹಾಗೂ ಮಿತಿಗಳು ಎರಡನ್ನೂ ಗುರುತಿಸುವುದು. ತಮ್ಮ ಎರಡೂ ಸಂಕಲನಗಳ ಹತ್ತಾರು ಲೇಖನಗಳಲ್ಲಿ ದಂಡಾವತಿಯವರು ಈ ಬಗೆಯ ಪ್ರಾಮಾಣಿಕತೆಯನ್ನು ದರ್ಶಿಸುತ್ತಾರೆ. 'ಮಾಧ್ಯಮದಲ್ಲಿ ಕೆಲಸ ಮಾಡುವವರ ಕಷ್ಟ ಒಂದು ಎರಡಲ್ಲ; ನಮಗೆ ಯಾರನ್ನೂ ಸಮಾಧಾನ ಮಾಡಲು ಆಗುವುದಿಲ್ಲ' (86) ಎಂಬುದನ್ನು ಸಾರ್ವಜನಿಕರಿಗೆ ಮನವರಿಕೆ ಮಾಡಿಕೊಡುತ್ತಾರೆ. ಇತ್ತೀಚೆಗೆ ಪತ್ರಿಕಾಕರ್ತರ ಮೇಲೆ ಆಗುತ್ತಿರುವ ಧಾಳಿ ಹಾಗೂ ಕೊಲೆ ಆ ವೃತ್ತಿ ಇಂದು ಎಷ್ಟು ಅಪಾಯಕಾರಿಯಾಗಿದೆ ಎಂಬುದು ನಮಗೆಲ್ಲರಿಗೂ ಗೊತ್ತಿರುವಂತಹುದೆ. ಆದರೆ, 'ಹೋಗುತ್ತಾ ಕತ್ತರಿಸುವ ಬರುತ್ತಾ ಕತ್ತರಿಸುವ' ಆ ವೃತ್ತಿಯ ಮತ್ತೊಂದು ಮುಖವನ್ನೂ ದಂಡಾವತಿ ನೇರವಾಗಿ ಚಿತ್ರಿಸುತ್ತಾರೆ. ಆ ವೃತ್ತಿಯಲ್ಲಿರುವವರು ಪ್ರಭಾವಿ ವ್ಯಕ್ತಿ-ಸಂಸ್ಥೆಗಳ ಒತ್ತಡಕ್ಕೆ ಒಂದಲ್ಲಾ ಒಂದು ದಿನ ಮಣಿದು, 'ಕಿಚ್ಚು ಇಲ್ಲದ ಸಂಪಾದಕ ನಾಗಬಹುದು ಎಂಬುದನ್ನು ವಿನೋದ್ ಮೆಹ್ರಾ ಅವರ ಬದುಕನ್ನು ವಿವರಿಸುವಾಗ ನಿದರ್ಶಿಸುತ್ತಾರೆ; ಒಬ್ಬಳು ಅಜ್ಞಾತ ಯುವತಿಯ ಮಾತುಗಳ ಮೂಲಕ ಪತ್ರಕರ್ತರೆಲ್ಲಾ ಸರ್ವಜ್ಞರೆ? ಅವರಿಗೂ ಒಂದಿಷ್ಟು ಕನಿಷ್ಠ ವಿದ್ಯಾರ್ಹತೆ ಬೇಡವೆ? ಜವಾಬ್ದಾರಿ ಬೇಡವೆ? ಎಂದು ಕೇಳುತ್ತಾರೆ (ಪು. 95). 'ಪತ್ರಕರ್ತರಿಗೆ ಸಾಮಾನ್ಯವಾಗಿ ತಲೆಯ ಮೇಲೆ ಎರಡು

ಮೂರು ಕೊಂಬುಗಳು ಇರುತ್ತವೆ; ಟಿ. ವಿ. ಪತ್ರಕರ್ತರಿಗೆ ತಲೆ ತುಂಬ ಬರೀ ಕೊಂಬುಗಳು' (ಪು.102) ಎಂದು ಅವರ ಅಹಂಅನ್ನು ಚುಚ್ಚುತ್ತಾರೆ; 'ನಾವು ಪತ್ರಕರ್ತರು ಪ್ರಶ್ನಾತೀತರಲ್ಲ' ಎಂದು ಒಪ್ಪಿಕೊಳ್ಳುತ್ತಾರೆ.

ಸಾಮಾಜಿಕ ಕಳಕಳಿ ದಂಡಾವತಿಯವರ ಎಲ್ಲಾ ಲೇಖನಗಳಲ್ಲಿಯೂ ಹಾಸು ಹೊಕ್ಕಾಗಿದೆ. 'ಬೇಕಿರುವುದು' ಎಂಬ ಭಾಗದ ಲೇಖನಗಳಲ್ಲಿ, ಹೇಗೆ ಅಧಿಕಾರಶಾಹಿ ಮತ್ತು ಆಡಳಿತ ವರ್ಗಗಳು ಸ್ವಲ್ಪ ಸೂಕ್ಷ್ಮಮತಿಗಳಾದರೆ, ಸ್ವಲ್ಪ ಹೃದಯವಂತಿಕೆಯನ್ನು ಬೆಳೆಸಿಕೊಂಡರೆ ಸಾಧಾರಣ ಪ್ರಜೆಗಳು ತಮ್ಮ ಬಡ ಬದುಕಿನಲ್ಲೇ ಸಂತೋಷ-ಸಮಾಧಾನಗಳನ್ನು ಕಾಣಬಹುದು ಎಂಬುದನ್ನು ತಿಳಿಸಿಕೊಡುತ್ತಾರೆ -ಬಲಿಪಶುಗಳ ಮೂಲಕ: ಅತಿಕ್ರಮಣಗೊಂಡ ತನ್ನ 27 ಗುಂಟೆ ಜಮೀನನ್ನು ತನಗೆ ವಾಪಸ್ ಕೊಡಿಸಬೇಕೆಂದು ವೃದ್ಧನೊಬ್ಬನು 15 ವರ್ಷಗಳ ಕಾಲ ಸರ್ಕಾರಿ ಕಛೇರಿಗೆ ಅಲೆದು ಕೊನೆಗೆ ವಿಧಾನಸೌಧದ ಮಹಡಿಯಿಂದ ಕೆಳಗೆ ಹಾರಿ ಅಸು ನೀಗಿದ ಗಂಗಯ್ಯನ ಮೂಲಕ; ರಾಜ್ಯ



ಹೆದ್ದಾರಿ ಇಲಾಖೆ ಹೃದಯವಿಲ್ಲದ ಯಂತ್ರದಂತೆ ಬುಡ ಮಟ್ಟ ಕತ್ತರಿಸಿ ಹಾಕಿದ ಸುಮಾರು 3000 ರಸ್ತೆ ಸಾಲುಮರಗಳ ಹಿಂದೆ ಅವುಗಳನ್ನು ನಿಸ್ವಾರ್ಥದಿಂದ ನೀರು ಹಾಕಿ ಬೆಳೆಸಿದ ಒಂಟಿ ಕಾಲಿನ ತಿರಕಪ್ಪನ ಮೂಲಕ; ಕೃಷಿಯನ್ನು ಸಂಪೂರ್ಣ ನಿರ್ಲಕ್ಷಿಸಿ, ಆ ಮೂಲಕ ಸಾವಿಗೆ ದೂಡಿ, ಆತ್ಮಹತ್ಯೆ ಎಂದು ದಾಖಲಿಸಿಕೊಂಡ ವಿಠಲ ಅರಭಾವಿ ಮೂಲಕ. ಇದೇ ನೆಲೆಯಲ್ಲಿ, ದೂರಾಲೋಚನೆಯಿಲ್ಲದ ಸರಕಾರಗಳ ಯೋಜನೆಗಳ ಬಗ್ಗೆ ಹಾಗೂ ನಿರ್ಲಕ್ಷಿಸಲ್ಪಡುವ ಭ್ರಷ್ಟಾಚಾರ ಪ್ರಕರಣಗಳ ಬಗ್ಗೆ, ಒಬ್ಬ ಯುವ ಅಧಿಕಾರಿಯ ಸಾವಿನಲ್ಲಿಯೂ ಪಕ್ಷಭೇದವನ್ನು ಮರೆಯಲಾಗದ ರಾಜಕೀಯ ಪಕ್ಷಗಳ ಬಗ್ಗೆ ದಂಡಾವತಿಯವರ ಲೇಖನಗಳು ಬೆಳಕು ಚೆಲ್ಲುತ್ತವೆ.

ಈ ಲೇಖನವು ದೀರ್ಘವಾಗುತ್ತಿರುವುದರಿಂದ, ನನಗೆ ಮುಖ್ಯವೆಂದು ಕಾಣುವ ಇನ್ನೂ ಅನೇಕ ವಿಷಯಗಳನ್ನು ಬದಿಗಿಟ್ಟು, ಒಟ್ಟಾರೆಯಾಗಿ 'ನಾಲ್ಕನೆಯ ಆಯಾಮ'ದ ಅಂಕಣಗಳ ಬಗ್ಗೆ ಹೇಳುವುದಾದರೆ, ಈ ವೈವಿಧ್ಯಪೂರ್ಣ ಲೇಖನಗಳಲ್ಲಿ ರಾಜಕೀಯ-ಸಾಮಾಜಿಕ ಸಮಸ್ಯೆಗಳ ಜಿಜ್ಞಾಸೆಯಿರುವಂತೆಯೇ ಹೆಗ್ಗೋಡಿನ ಸುಬ್ಬಣ್ಣ-ಅಕ್ಷರ, ಪ್ರಸನ್ನ, ಮುಂತಾದ ತತ್ವಕ್ಕಾಗಿ ಹೋರಾಡುವ ವ್ಯಕ್ತಿಗಳ ಬಗ್ಗೆ, ಧಾರವಾಡದಲ್ಲಿ ನಡೆದ 'ಸಾಹಿತ್ಯ ಸಂಭ್ರಮ' ಮತ್ತು ಶ್ರವಣಬೆಳಗೊಳದಲ್ಲಿ ನಡೆದ ಅಖಿಲ ಭಾರತ ಸಾಹಿತ್ಯ ಸಮ್ಮೇಳನ ಇತ್ಯಾದಿಗಳ ಬಗ್ಗೆ, 'ಅಸ್ತು' 'ಲಂಚ್ ಬಾಕ್ಸ್' ಮುಂತಾದ ಕೆಲವು ಅಪರೂಪದ ಸದಭಿರುಚಿಯ ಚಲನಚಿತ್ರಗಳ ಬಗ್ಗೆ, ನೈತಿಕ ಪೋಲೀಸ್‌ಗಿರಿ ಬಗ್ಗೆ, ಅತಿ ಮುಖ್ಯವಾಗಿ, ಸ್ತ್ರೀಜಾತಿಯ ಮೇಲೇ ಇಂದು ನಡೆಯುತ್ತಿರುವ ಅಸಾಧಾರಣ ಕ್ರೌರ್ಯದ ಬಗ್ಗೆ, 'ನಾಲ್ಕನೆಯ ಆಯಾಮ'ದ ಲೇಖನಗಳು ಬೆಳಕು ಚೆಲ್ಲುತ್ತವೆ; ಹಾಗೆ ಮಾಡುವುದರ ಮೂಲಕ ನಮ್ಮ ಮಲಗಿರುವ ಪಾಪಪ್ರಜ್ಞೆಯನ್ನು ಸ್ವಲ್ಪವಾದರೂ ಜಾಗೃತಗೊಳಿಸುತ್ತವೆ.

ಬೌದ್ಧಿಕ ಚಿಂತನೆ ಮತ್ತು ಭಾವುಕ ಸ್ಪಂದನೆ ಇವೆರಡೂ ಸಮನಾಗಿ ಒಂದನ್ನೊಂದು ಪೋಷಿಸುವ 'ಚೌಕಟ್ಟಿನಾಚೆ' ಇರುವ ದಂಡಾವತಿಯವರ ಲೇಖನಗಳು ಇನ್ನೂ ಹತ್ತಾರು ವರ್ಷಗಳ ಕಾಲ ನಿರಾತಂಕವಾಗಿ ಬೆಳಕುಕಂಡು, ನಮಗೂ 'ಬೋಧನೆ ಹಾಗೂ ರಂಜನೆ'ಗಳ ಬೆಳಕನ್ನು ಕೊಡಲಿ ಎಂದು ಆಶಿಸುತ್ತೇನೆ.

**ಸಿ. ಎನ್. ರಾಮಚಂದ್ರನ್**

ಜುಲೈ 12, 2015



# ಒಳನೋಟ

**ವಿಷಯ** **ಪುಟ**

**ವರ್ತಮಾನ**

ಬಿಸಾಕುವ, ಬಳಸುವ ಇತಿಹಾಸದ ಪರಿ 1

ಈಗ ರಾಜಧರ್ಮದ ಪಾಠ ಹೇಳುವವರು ಯಾರು? 6

ತಂದೆ ಯಾರು ಎಂಬ ಮೌನವಲಯ ಕೆದಕಿ... 11

ಡಿ.ಕೆ.ರವಿ ಐಎಎಸ್ ಎಂಬ ಒಡಕಲು ಬಿಂಬ! 15

ಅರಸು ಆಗ ಹೊರಟ ನಾಯಕನ ಕಷ್ಟಗಳು... 19

ಸಮುದ್ರ ಮಥನದ ಅಮೃತಕ್ಕೆ ಇನ್ನೂ ಕಾಯಬೇಕು... 24

ಜೈಲಿಗೆ ಹೋದವರು ನಮ್ಮ ನಾಯಕರೇ ಅಥವಾ
ಅವರನ್ನು ಅಲ್ಲಿಗೆ ಕಳಿಸಿದವರೇ? 28

| | |
|---|---|
| ಬಿಟ್ಟಿ ಅಕ್ಕಿ ಕೊಟ್ಟು... ಸ್ವಾಭಿಮಾನ ಕಿತ್ತುಕೊಂಡು... | 32 |
| ಬೊಕ್ಕಸ ಬರಿದು ಮಾಡುವ ಆಮಿಷಗಳಿಗೆ ಕೊನೆಯೇ ಇಲ್ಲವೇ? | 37 |
| ಗೆಳೆಯರನ್ನು ಉಚ್ಚಾಟಿಸಿ ಕೇಜಿವಾಲ್ ಗೆದ್ದರೇ... ಅಥವಾ...? | 41 |
| ಅಧಿಕಾರ ಬಂದಾಗ ಅರಿಯದವರು... | 45 |
| ಇಲ್ಲಿ ಯಾರು ಯಾರನ್ನು ಸೋಲಿಸುತ್ತಿದ್ದಾರೆ? ಮತ್ತು ಏಕೆ? | 49 |
| ಅತಿದೊಡ್ಡ ಪ್ರಜಾತಂತ್ರವನ್ನು ಅತಿ ಶ್ರೇಷ್ಠ ಪ್ರಜಾತಂತ್ರ ಮಾಡುವ ದಾರಿಯಲ್ಲಿ.. | 53 |
| ನಮ್ಮ ಶಾಸಕರಿಗೆ ಒಂದಿಷ್ಟಾದರೂ ಲಜ್ಜೆ ಬೇಡವೇ? | 58 |
| ಲಾಟರಿ ಹೊಡೆಯುವುದು ಎಂದರೆ ಇದೇ ಇರಬೇಕು! | 62 |
| ಒಳ್ಳೆಯ ಮಾದರಿ ಹಾಕುವುದು ಅಸಾಧ್ಯವೇನೂ ಅಲ್ಲ | 66 |
| ಅರ್ಧ ಜನಸಂಖ್ಯೆಯನ್ನು ನಡೆಸಿಕೊಳ್ಳುವ ರೀತಿಯೇ ಇದು? | 71 |


**ಭಾಷೆ-ಮಾಧ್ಯಮ ಮುಂತಾಗಿ**


| | |
|---|---|
| ಕನ್ನಡ ಪ್ರೇಮ: ಭ್ರಮೆ ಮತ್ತು ವಾಸ್ತವ | 76 |
| ಕಲಿಕೆ ಮಾಧ್ಯಮ : ಈಗ ಯಾರನ್ನು ದೂರೋಣ?... | 81 |
| ಅನಂತಮೂರ್ತಿ: ಒಂದಿಷ್ಟು ನೆನಪುಗಳು... | 86 |
| ವಿಜ್ಞಾನದ ಗೆಲುವನ್ನು ನಾವು ಸಂಭ್ರಮಿಸುವುದಿಲ್ಲ... ಏಕೆ? | 90 |
| ನೀವೆಲ್ಲ ಸರ್ವಜ್ಞರೇ ಎಂದ ಆ ಹೆಣ್ಣುಮಗಳಿಗೆ ಏನು ಉತ್ತರ ಕೊಡಲಿ? | 95 |
| ಪತ್ರಿಕೋದ್ಯಮಕ್ಕೆ ಇದು ಕೊನೆಯ ಅವಕಾಶವೇ? | 99 |
| ಬೆಳಗೊಳ ಸಮ್ಮೇಳನದ ಬೆಳಕಿನಲ್ಲಿ... | 104 |
| ವಿನೋದ್ ಮೆಹ್ತಾ: ಮಾಧ್ಯಮಕ್ಕೆ ಕಲಿಸಿದ ಪಾಠ ಒಂದೇ ಎರಡೇ? | 108 |

...ಫಲಕ ನೆಟ್ಟು ಮರಾಠಿ ಉಳಿಸಲು ಸಾಧ್ಯವಿಲ್ಲ! 112

ಮಾಧ್ಯಮ ಎಂಬುದು ಕತ್ತರಿಸುವ ಗರಗಸ! 117

ಚೌಕಟ್ಟುಗಳನ್ನು ಒಡೆದರು ಮತ್ತು ವಿಸ್ತರಿಸಿದರು 121

ಹಂಗಿನರಮನೆಯ ಗುಂಗಿನಿಂದ ಪರಿಷತ್ತು ಹೊರಗೆ ಬರುವುದು ಯಾವಾಗ? 125 125

ಹೆಗ್ಗೋಡಿನಲ್ಲಿ ನಾಲ್ಕು ದಿನ... 129

**ಬೇಕಿರುವುದು...**

ತಬರನ ಕಥೆಗೆ ಕೊನೆಯೇ ಇಲ್ಲ... 136

ನಿಸರ್ಗಕ್ಕೆ ಮಾತ್ರ ಏಕೆ ದಯೆ ಇರಬೇಕು? 140

ನಿಸರ್ಗವೇ ನಮಗೆ ಉತ್ತರ ಕೊಡುತ್ತಿರಬಹುದೇ? 144

ಉತ್ತರದಲ್ಲಿ ಉತ್ತರಕ್ಕೆ ಕಾಯುತ್ತಿರುವ ಪ್ರಶ್ನೆಗಳು... 148

ಹಿತ್ತಿಲ ವಿವೇಕದಲ್ಲಿ ಉತ್ತರ ಹುಡುಕಬೇಕು 152

ಪಾಪಪ್ರಜ್ಞೆಯೇ ಇಲ್ಲದ ಬೆಂಗಳೂರು ಎಂಬ ನಗರ... 57

ಬೈನಾ ಕನ್ನಡಿಗರ ಗುಳೆಗೆ ಉತ್ತರ ಯಾರ ಬಳಿ ಇದೆ? 161

ಬೇಕಿರುವುದು ಒಂದಿಷ್ಟು ಸೂಕ್ಷ್ಮತೆ ಅಷ್ಟೇ!... 165

ಉತ್ತರ ಕರ್ನಾಟಕ ಎಂಬ ಅಳುವ ಕೂಸು 169

ಚಕ್ರ ಹಿಂದಕ್ಕೆ ಚಲಿಸುವುದು ಸುಲಭವೇ? 174

**ಹುಡುಕಾಟ**

ಗಲ್ಲು ಶಿಕ್ಷೆ ಆಯಿತು. ಆದರೆ, ಅದು ಉತ್ತರವೇ? 180

ಅಸ್ವಸ್ಥ ಸಮಾಜವೂ, ಓಬೀರಾಯನ ಕಾಲದ ಕಾನೂನೂ... 184

ನಾಶವಾಗುವ ದಾರಿ ನಿಕಟದಲ್ಲಿಯೇ ಇರುತ್ತದೆ...! 188

ಐಪಿಎಲ್ ಎಂಬ ನಮ್ಮೊಳಗಿನ ಒಬ್ಬ ವೇಶ್ಯ...! 192

ಉಕ್ಕಿನ ಚೌಕಟ್ಟು ಒಡೆದು ಹಾಕುವುದು ಕಷ್ಟವೇನೂ ಅಲ್ಲ 196

ಸತ್ತು ಹೋದ ಮೇಲೆ ಮುಗಿಯಿತಲ್ಲ? ಇನ್ನೆಲ್ಲಿಯ ನ್ಯಾಯ? 200

ಚೂರುಪಾರು ಪ್ರೀತಿಗೆ ಹಂಬಲಿಸುವ ಮನ... 204

ಬೆಳಕು ಇಲ್ಲದ ದಿನಗಳಲ್ಲಿ ಕನಸುಗಳ ಬೆನ್ನು ಹತ್ತಿ... 208

ಸಾಲು ಸೋಲುಗಳ ನಡುವೆ ಸೊಗಸು ಹುಡುಕುತ್ತ... 212

# ವರ್ತಮಾನ

# ಬಿಸಾಕುವ, ಬಳಸುವ ಇತಿಹಾಸದ ಪರಿ

ಇತಿಹಾಸ ಬಳಸಿಕೊಳ್ಳುತ್ತದೆ ಮತ್ತು ಬಿಸಾಕುತ್ತದೆ. ಅದಕ್ಕೆ ದಯೆ ಎಂಬುದು ಇರುವುದಿಲ್ಲ. ಯಾರೂ ಅನಿವಾರ್ಯವಲ್ಲ ಎಂದು ಅದು ಮತ್ತೆ ಮತ್ತೆ ಹೇಳುತ್ತ ಇರುವಂತೆ ಕಾಣುತ್ತದೆ; ಕೆಲವೊಮ್ಮೆ ಕ್ರೂರವಾಗಿ ಹೇಳುತ್ತದೆ. ಅದು ದಯಾಳು ಆಗಿರಬೇಕು ಎಂದು ನಾವು ಬಯಸುತ್ತೇವೆ. ಜೀವನದಲ್ಲಿ ಕಾವ್ಯನ್ಯಾಯ ಎಂದು ಇರುವುದಿಲ್ಲ. ಈ ದೇಶವನ್ನು ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಅವರ ನಂತರ ಮೊದಲ ಬಾರಿಗೆ ಸತತವಾಗಿ ಎರಡು ಅವಧಿಗೆ ಆಳಿದ ಪ್ರಧಾನಿ ಡಾ.ಮನಮೋಹನಸಿಂಗ್ ಅವರ ಬಗೆಗೆ ವರ್ತಮಾನ ಇಷ್ಟು ಕ್ರೂರ ಆಗಿರಬಾರದಿತ್ತು.

ತಾನು ಪ್ರಧಾನಿ ಎಂಬ ಅಹಂಕಾರವೇ ಅವರಿಗೆ ಇರಲಿಲ್ಲ. ಅವರು ಆಕಸ್ಮಿಕವಾಗಿ ಇಷ್ಟು ದೊಡ್ಡ ದೇಶದ ಪ್ರಧಾನಿ ಆದರು. ಹಾಗೆಂದು ಅವರು ಬರೀ ರಾಜಕೀಯವನ್ನೇ ಉಸಿರಾಗಿಸಿಕೊಂಡ ರಾಜಕಾರಣಿಯಾಗಿರಲಿಲ್ಲ. ಸಾಮಾನ್ಯ ಉಪನ್ಯಾಸಕ ವೃತ್ತಿಯಿಂದ ದೇಶದ ಪ್ರಧಾನಿ ಗದ್ದುಗೆ ವರೆಗೆ ಏರಿದ್ದರು. ನಡುವೆ ಏನೆಲ್ಲ ಅಧಿಕಾರ, ಹುದ್ದೆ ಏರಬೇಕೋ ಅದನ್ನೆಲ್ಲ ಏರಿದ್ದರು. ಈ ಬೃಹತ್ ದೇಶಕ್ಕೆ ಆರ್ಥಿಕ ವಿಮೋಚನೆಯ ದಿಕ್ಕು ತೋರಿಸಿದ್ದರು. ಲೈಸೆನ್ಸ್ ರಾಜ್, ಪರ್ಮಿಟ್ ರಾಜ್‌ನಿಂದ ಬಿಡುಗಡೆ ಮಾಡಿದ್ದರು. ವಿಶ್ವದ ಮುಕ್ತ ಮಾರುಕಟ್ಟೆಗೆ ಭಾರತವನ್ನು ತೆರೆದು ಇಟ್ಟಿದ್ದರು. ಪಾಕಿಸ್ತಾನದ ಬಡ ಸಿಖ್ ಕುಟುಂಬದಲ್ಲಿ ಹುಟ್ಟಿ, ದೇಶಕ್ಕೆ ಸ್ವಾತಂತ್ರ್ಯ ಬಂದ ಅವಧಿಯಲ್ಲಿ ಭಾರತಕ್ಕೆ ವಲಸೆ ಬಂದ ಮನಮೋಹನ್ ಒಂದು ದಿನ ದೇಶದ ಪ್ರಧಾನಿ ಆಗಬೇಕು ಎಂದು ಅಂದುಕೊಂಡಿದ್ದರು ಎಂದು ಊಹಿಸಲೂ ಆಗದು. ಆ ಹುದ್ದೆಯೂ ಅವರಿಗೆ ಒದಗಿ ಬಂತು. ಮೊದಲ ಅವಧಿಗೆ ಅವರು ಮಾಡಿದ ಕೆಲಸ ನೋಡಿ ಎರಡನೇ ಅವಧಿಗೆ ಅವರ ನೇತೃತ್ವದಲ್ಲಿಯೇ ಕಾಂಗ್ರೆಸ್ ಪಕ್ಷ ಚುನಾವಣೆ ಎದುರಿಸಿತು. 2004ರಲ್ಲಿ ಕಾಂಗ್ರೆಸ್ ನೇತೃತ್ವದ ಯುಪಿಎ ಗೆಲುವು ವಿರೋಧ ಪಕ್ಷಗಳನ್ನು ಅವಾಕ್ಕಾಗಿಸಿದರೆ 2009ರ ಗೆಲುವು ಕಂಗಾಲಾಗಿಸಿತು.

ರಾಜಕಾರಣಕ್ಕೂ ಬಳಸಿಕೊಂಡು ಬಿಸಾಡುವ ಗುಣ ಇದೆ. ಕಾಂಗ್ರೆಸ್‌ನ ಪ್ರಗತಿಪರತೆಯ, ಉದಾರ ಆರ್ಥಿಕ ಚಿಂತನೆಯ, ಅಲ್ಪಸಂಖ್ಯಾತರಿಗೆ ಭರವಸೆಯ ಮುಖ ಎನಿಸಿದ್ದ ಮನಮೋಹನ್ 2014ರ ಚುನಾವಣೆಯಲ್ಲಿ 'ಇಳಿಸಬೇಕಾದ ಹೊರೆ' ಎನಿಸಿಬಿಟ್ಟರು. ಈ

ಸಾರಿಯ ಚುನಾವಣೆಯಲ್ಲಿ ಅವರು ಎಲ್ಲಿಯಾದರೂ ಭಾಷಣ ಮಾಡಿದರೇ? ಕಾಂಗ್ರೆಸ್ ಪರ ಮತ ಕೇಳಿದರೇ? ಅವರು ಏಕೆ ಒಂದೇ ಸಾರಿ ಬೇಡ ಅನಿಸಿಬಿಟ್ಟರು? ಅದರಲ್ಲಿ ಅವರ ತಪ್ಪು ಏನು ಇತ್ತು? ಜನರಿಗೆ ಮನಮೋಹನ್ ಮಾತ್ರ ಬೇಡ ಅನಿಸಿದ್ದರೇ? ಅಥವಾ ಒಟ್ಟು ಯುಪಿಎ ಆಡಳಿತವೇ ಬೇಡ ಅನಿಸಿತ್ತೇ? ಇತಿಹಾಸ ಮಾತ್ರವಲ್ಲ ವರ್ತಮಾನವೂ ಕ್ರೂರವಾಗಿರುತ್ತದೆ.

2004ರಲ್ಲಿ ತೀರಾ ಆಕಸ್ಮಿಕವಾಗಿ ಪ್ರಧಾನಿಯಾದ ಮನಮೋಹನರಿಗೆ ಅನೇಕ ಸಮಸ್ಯೆಗಳು ಇದ್ದುವು. ಪ್ರಧಾನಿ ಹುದ್ದೆ ಮನಮೋಹನರಿಗೆ ಎಷ್ಟು ಅನಿರೀಕ್ಷಿತವಾಗಿತ್ತೋ, ತೆರೆಯ ಪಕ್ಕದಲ್ಲಿ, ಅದೇ ಹುದ್ದೆಗೆ ಅರ್ಹರಾಗಿದ್ದ ಅಥವಾ ಕಾಯುತ್ತಿದ್ದ ಅನೇಕರಿಗೆ ಅದು ಆಘಾತಕಾರಿಯಾಗಿತ್ತು; ಸುಲಭವಾಗಿ ಅರಗಿಸಿಕೊಳ್ಳಲು ಆಗದ ಸಂಗತಿಯಾಗಿತ್ತು. ಪ್ರಣವ್ ಮುಖರ್ಜಿ, ಎ.ಕೆ.ಆಂಟನಿ ಅವರು ಈ ಎರಡನೇ ವರ್ಗಕ್ಕೆ ಸೇರಿದ್ದರು. ಪ್ರಣವ್ ಅವರು ಕೇಂದ್ರದಲ್ಲಿ ಹಣಕಾಸು ಸಚಿವರಾಗಿದ್ದಾಗ ಮನಮೋಹನ್ ಅವರು ರಿಸರ್ವ್ ಬ್ಯಾಂಕಿನ ಗವರ್ನರ್ ಆಗಿದ್ದರು. ಅಧಿಕಾರ ಕೇಂದ್ರಗಳು ಹೀಗೆ ಬದಲಾಗುವುದು ರಾಜಕೀಯದಲ್ಲಿ ಬಹು ಅಪರೂಪ. 'ವರದಿ' ಮಾಡಿಕೊಳ್ಳುವ ಸ್ಥಾನಗಳು ಹೀಗೆ ಅದಲು ಬದಲು ಆಗುವುದೂ ಅಪರೂಪ, ಹಣಕಾಸು ಖಾತೆಯಲ್ಲಿ ರಾಜ್ಯ ಮಂತ್ರಿ ಸ್ಥಾನದಲ್ಲಿ ಇದ್ದ ಒಬ್ಬರು ನನ್ನ ಎದುರು ಮತ್ತೆ ಮತ್ತೆ 'ಈ ಪ್ರಧಾನಿ ಮನಮೋಹನ್, ನನಗೆ ವರದಿ ಮಾಡಿಕೊಳ್ಳುತ್ತಿದ್ದರು' ಎಂದು ಹೇಳಿಕೊಳ್ಳುತ್ತಿದುದ್ದು ರಾಜಕಾರಣದಲ್ಲಿ 'ಹಿರಿತನ'ದ ಮತ್ತು 'ಅಹಂಕಾರ'ದ ಸಮಸ್ಯೆಯನ್ನು ಪುನರಪಿ ತೋರಿಸುತ್ತಿತ್ತು. ಆಂಟನಿ ನೇರವಾಗಿ ಸೋನಿಯಾ ಅಂತರಂಗದ ವಲಯಕ್ಕೆ ಸೇರಿದವರೇ ಆಗಿದ್ದರು. ಪ್ರಧಾನಿ ಹುದ್ದೆಗೆ ಎಲ್ಲ ದೃಷ್ಟಿಯಿಂದಲೂ ಅರ್ಹರಾಗಿದ್ದ ಸೋನಿಯಾ ಬಿಟ್ಟುಕೊಟ್ಟ ಕುರ್ಚಿಯಲ್ಲಿ ಕುಳಿತುಕೊಂಡಿದ್ದ ಮನಮೋಹನ್ ಸದಾ ಒಬ್ಬ ಕೃತಜ್ಞ ವ್ಯಕ್ತಿಯಂತೆ ನಡೆದುಕೊಳ್ಳಬೇಕಿತ್ತು. ಸೋನಿಯಾ ಅದನ್ನು ಅಪೇಕ್ಷೆ ಪಡುತ್ತಿದ್ದರೋ ಇಲ್ಲವೋ ಗೊತ್ತಿಲ್ಲ, ಮನಮೋಹನ್ ಮಾತ್ರ ಹಾಗೆ ನಡೆದುಕೊಳ್ಳುತ್ತಿದ್ದರು.

ಮನಮೋಹನ್ ಅವರು ಹತ್ತು ವರ್ಷ ಪ್ರಧಾನಿ ಆಗಿದ್ದರು. ಆದರೆ ಅವರು ಒಟ್ಟು ರಾಜಕೀಯ ಜೀವನದಲ್ಲಿ ಒಮ್ಮೆ ಬಿಟ್ಟು ನೇರ ಚುನಾವಣೆಯಲ್ಲಿ ಸ್ಪರ್ಧಿಸಲೇ ಇಲ್ಲ. 1999ರ ಚುನಾವಣೆಯಲ್ಲಿ ದೆಹಲಿಯಲ್ಲಿ ಸೋತ ನಂತರ ಅವರಿಗೆ ನೇರ ಚುನಾವಣೆ ಎದುರಿಸುವ ಧೈರ್ಯವೇ ಇರಲಿಲ್ಲ. ಜನರಿಂದ ನೇರವಾಗಿ ಚುನಾಯಿತರಾಗದ 'ನಾಯಕ'ರಿಗೆ ರಾಜಕೀಯದಲ್ಲಿ ಗೌರವ ಕಡಿಮೆ. ಮನಮೋಹನರಿಗೂ ಆ ಸಮಸ್ಯೆ ಇತ್ತು. ಅವರ ಸೋನಿಯಾ ನಿಷ್ಠೆ ಮತ್ತು ನೇರವಾಗಿ ಜನರನ್ನು ಎದುರಿಸಿ ಗೆಲ್ಲದ ಅಳುಕಿನಿಂದಾಗಿ ಅವರಿಗೆ ಸೋನಿಯಾ ಅವರ 'ಮುಖವಾಡ' ಎಂದ ಅಭಿಧಾನವೂ ದೊರಕಿತು.

ಹಾಗೆಂದು ಮನಮೋಹನ್ ದುರ್ಬಲರಾಗಿದ್ದರೇ? ಆಗಿರಲಿಲ್ಲ. ದುರ್ಬಲ ಮನುಷ್ಯ ಕಠಿಣ ನಿರ್ಧಾರ ತೆಗೆದುಕೊಳ್ಳುವುದು ಸಾಧ್ಯವಿಲ್ಲ. 1991ರ ಪಿ.ವಿ.ನರಸಿಂಹರಾವ್ ಸರ್ಕಾರದಲ್ಲಿ ರಾವ್ ಮತ್ತು ಸಿಂಗ್ ತೆಗೆದುಕೊಂಡ ನಿರ್ಣಯಗಳು ಮಿಶ್ರ ಮತ್ತು ಸಮಾಜವಾದಿ ತಳಹದಿಯ ಆರ್ಥಿಕ ಪದ್ಧತಿಯನ್ನು ಒಪ್ಪಿಕೊಂಡು ಬಂದ ಸಾಂಪ್ರದಾಯಿಕ

ಭಾರತಕ್ಕೆ ಬೇಗ ಅರಗಿಸಿಕೊಳ್ಳುವಂತೆಯೇನೂ ಇರಲಿಲ್ಲ. ಯುಪಿಎ ಮತ್ತು 2ನೇ ಅವಧಿಯಲ್ಲಿ ಕೂಡ ಮನಮೋಹನರು, ಅಮೆರಿಕೆಯ ಜತೆಗೆ ಪರಮಾಣು ಒಪ್ಪಂದದಂಥ ಬಹುಜನರಿಗೆ ಅರಗಿಸಿಕೊಳ್ಳಲು ಆಗದಂಥ ಅನೇಕ ನಿರ್ಣಯಗಳನ್ನು ತೆಗೆದುಕೊಂಡಿದ್ದರು. ಇವು, ಎರಡು ಉದಾಹರಣೆಗಳು ಮಾತ್ರ. ಅವರು ಹಣಕಾಸು ಸಚಿವರಾಗಿ, ಪ್ರಧಾನಿಯಾಗಿ ಏನೆಲ್ಲ ಮಾಡಿದರು ಎಂಬ ಪಟ್ಟಿ ಒಪ್ಪಿಸುವುದು ನನ್ನ ಕೆಲಸವಲ್ಲ. ಅದು ಈಗ ಇತಿಹಾಸದ ಭಾಗ.

ವೃತ್ತಿಪರ ರಾಜಕಾರಣಿಯಲ್ಲದ ಮನಮೋಹನ್, 14 ಪಕ್ಷಗಳ ಸಮ್ಮಿಶ್ರ ಸರ್ಕಾರವನ್ನು ಎರಡು ಅವಧಿಗೆ ತೂಗಿಸಿಕೊಂಡು ಹೋದುದೂ ಸರಳ ಸಂಗತಿಯಲ್ಲ. ಅವರು ಯಾವಾಗಲೂ ಒಂದು ಕಡೆ ಎನ್‌ಸಿಪಿಯ ಶರದ್ ಪವಾರ್ ಜತೆಗೆ ಇನ್ನೊಂದು ಕಡೆಗೆ ಡಿಎಂಕೆಯ ಎಂ.ಕರುಣಾನಿಧಿ ಜತೆಗೆ ಸಂಪರ್ಕ ಇಟ್ಟುಕೊಂಡು ಸರ್ವ ಸಮ್ಮತಿಯ ಸರ್ಕಾರವನ್ನು ತೂಗಿಸಿಕೊಂಡು ಹೋದರು. ಹಾಗಾಗಿಯೇ ಕಾಂಗ್ರೆಸ್ಸಿಗರು ಎರಡು ಅವಧಿಗೆ ಕೇಂದ್ರದಲ್ಲಿ ಹಾಯಾಗಿ ಅಧಿಕಾರ ಅನುಭವಿಸಿದರು.

ಆದರೆ, ಒಂದು ಸರ್ಕಾರದ ಮುಖ್ಯಸ್ಥರಾಗಿ ಮನಮೋಹನ್ ಸಿಂಗ್ ತಪ್ಪು ಮಾಡಿದವರ ಕಿವಿ ಹಿಂಡುವ ಕೆಲಸ ಮಾಡಲಿಲ್ಲ. ಅವರು ತಾನು ಪ್ರಾಮಾಣಿಕನಾಗಿದ್ದರೆ ಸಾಕು ಎಂದುಕೊಂಡರು. ಮಿತ್ರ ಪಕ್ಷಗಳ ಸಚಿವರು ಪ್ರಾಮಾಣಿಕರಾಗಿರಬೇಕು ಎಂದು ಬಯಸುವುದು, ಸೂಚಿಸುವುದು ತಮ್ಮ ಕೆಲಸವಲ್ಲ ಎಂದು ಅಂದುಕೊಂಡರು. ಎ.ರಾಜಾ ಅವರಂಥವರು ಯುಪಿಎ 2 ಸರ್ಕಾರದ ವರ್ಚಸ್ಸಿಗೆ ಬಳಿದ ಮಸಿಯನ್ನು ಎಷ್ಟು ಗಂಗೆಯರ, ಯಮುನೆಯರ ನೀರಿನಿಂದಲೂ ತೊಳೆದು ಹಾಕಲು ಸಾಧ್ಯವಿರಲಿಲ್ಲ. ಪ್ರಧಾನಿ ಮನಮೋಹನ್ ವೈಯಕ್ತಿಕವಾಗಿ ಪ್ರಾಮಾಣಿಕ ಆದರೆ ರಾಜಕೀಯವಾಗಿ ಅಪ್ರಾಮಾಣಿಕ ಎನ್ನುವಂತೆ ಆಯಿತು. ಯುಪಿಎ 2ರ ಅವಧಿಯಲ್ಲಿ ಭ್ರಷ್ಟಾಚಾರ ಎಷ್ಟು ಮೇರೆ ಮೀರಿತು ಎಂದರೆ ಅಣ್ಣಾ ಹಜಾರೆ ನೇತೃತ್ವದಲ್ಲಿ ದೊಡ್ಡ ಆಂದೋಲನವನ್ನೇ ಈ ದೇಶ ಕಂಡಿತು. ಕೇಂದ್ರದಲ್ಲಿನ ಯುಪಿಎ ಸರ್ಕಾರವನ್ನು ಮನೆಗೆ ಕಳುಹಿಸಬೇಕು ಎಂದು ಜನರು ಆಗಲೇ ತೀರ್ಮಾನ ಮಾಡಿದರು. ಎ.ಎ.ಪಿಯಂಥ ಒಂದು ಪಕ್ಷ ಇದ್ದಕ್ಕಿದ್ದಂತೆ ಹುಟ್ಟಿಕೊಂಡು ಜನರ ಮನಸ್ಸನ್ನು ಗೆಲ್ಲುವುದಕ್ಕೆ ಕೂಡ ಯುಪಿಎ 2 ಸರ್ಕಾರವೇ ಕಾರಣವಾಯಿತು. ಅಣ್ಣಾ ಹಜಾರೆ ಅವರ ಹೋರಾಟದ ಹಿಂದೆ ಕಾರ್ಪೊರೆಟ್ ಹುನ್ನಾರ ಇತ್ತೇ? ನರೇಂದ್ರ ಮೋದಿ ಅವರು ಪ್ರಧಾನಿ ಅಭ್ಯರ್ಥಿಯಾಗಿ ಹೊರಹೊಮ್ಮಿದ್ದು, ಅಣ್ಣಾ ಹಜಾರೆ ಮತ್ತು ಮೋದಿ ಬೆನ್ನ ಹಿಂದೆ ಮಾಧ್ಯಮ ಬಿದ್ದುದು ಈ ಹುನ್ನಾರದ ಒಂದು ಭಾಗವೇ? ಇರಬಹುದು... ಇತಿಹಾಸ ಬಳಸಿಕೊಳ್ಳುತ್ತದೆ!

ಮನಮೋಹನ್ ಒಬ್ಬ ಸಾದಾ ಸೀದಾ ಮನುಷ್ಯ, ಶ್ರೀಮಂತನಾಗಬೇಕು ಎಂದು ಅವರು ರಾಜಕಾರಣಕ್ಕೆ ಬಂದವರಲ್ಲ. ರಾಜ್ಯಸಭೆಯ ವಿರೋಧ ಪಕ್ಷದ ನಾಯಕರಾಗಿದ್ದಾಗ ಈಗಲೂ ತಮ್ಮ ಬಳಿ ಇರುವ ಮಾರುತಿ 800 ಕಾರಿನಲ್ಲಿಯೇ ಅಧಿವೇಶನಕ್ಕೆ ಬಂದು ಹೋದವರು. ತಮ್ಮ ಮೂವರು ಹೆಣ್ಣು ಮಕ್ಕಳನ್ನು ಮತ್ತು ಅವರ ಗಂಡಂದಿರನ್ನು ಸ್ವಂತ ವಿದ್ವತ್ತಿನಿಂದ,

ಬುದ್ಧಿಮತ್ತೆಯಿಂದ ದುಡಿದು ಬಾಳುವಂತೆ ನೋಡಿಕೊಂಡವರು. ಹೀಗೆ ಮಾಡುವವರು ಬಹಳ ವಿರಳ. ಮಕ್ಕಳು ಮತ್ತು ಅಳಿಯಂದಿರೇ ಅಧಿಕಾರದ ತಲೆಹಿಡುಕರು ಆಗಿರುವ ಎಷ್ಟು ರಾಜಕಾರಣಿಗಳನ್ನು ನಾವು ನೋಡಿಲ್ಲ? ಮನಮೋಹನ್ ಪ್ರಧಾನಿಯಾಗಿದ್ದರು ನಿಜ. ಆದರೆ, ಮನೋಸ್ಥಿತಿಯಲ್ಲಿ ಅವರು ಮಧ್ಯಮ ವರ್ಗದವರೇ ಆಗಿದ್ದರು. ಆದರೆ, ಅವರಿಗೆ ಮಧ್ಯಮ ವರ್ಗವನ್ನು ಬಲವಾಗಿ ಕಾಡಿದ ದೇಶದ ಆರ್ಥಿಕ ಬಿಕ್ಕಟ್ಟನ್ನು ಸರಿಯಾಗಿ ನಿಭಾಯಿಸಲು ಆಗಲಿಲ್ಲ. ಅದು ಒಂದು ಸಹಜಸ್ಥಿತಿ ಎನ್ನುವಂತೆ ಅವರು ಕೊನೆ ಕೊನೆಗೆ ಒಪ್ಪಿಕೊಂಡು ಬಿಟ್ಟಿದ್ದರು. ಅದು ಸಾಮಾನ್ಯ ಜನರ ನಿತ್ಯ ಜೀವನದ ಮೇಲೆ ಬೀರುವ ಪರಿಣಾಮಗಳೂ ಅವರಿಗೆ ಅರ್ಥವಾಗಲಿಲ್ಲ. ಮನೆಯಲ್ಲಿ ಅಡುಗೆ ಮಾಡಲು ನಿತ್ಯ ಬೇಕಾಗುವ ಅನಿಲ ಸಿಲಿಂಡರ್‌ಗಳ ಸಂಖ್ಯೆಯನ್ನು 12ಕ್ಕೆ ಏರಿಸಬೇಕು ಎಂದು ರಾಹುಲ್ ಗಾಂಧಿ ಕೂಗಿ ಹೇಳುವಂತೆ ಆಯಿತು. ಭ್ರಷ್ಟ ಸಂಸದರನ್ನು ಅನರ್ಹಗೊಳಿಸಲು ಸುಪ್ರೀಂ ಕೋರ್ಟ್ ಕೊಟ್ಟ ತೀರ್ಪನ್ನು ಭಂಗಗೊಳಿಸುವ ಸುಗ್ರೀವಾಜ್ಞೆಯನ್ನು ತರಾತುರಿಯಲ್ಲಿ ಹೊರಡಿಸಿದಾಗಲೂ ಮತ್ತೆ ಬಹಿರಂಗವಾಗಿಯೇ ರಾಹುಲ್ 'ನಾನ್‌ಸೆನ್ಸ್' ಎಂದರು. 80 ವರ್ಷದ ಆಸುಪಾಸಿನ ಮನಮೋಹನರಿಗೆ ಮುಖಕ್ಕೆ ಹೊಡೆದಂತೆ ಆಯಿತು. ಅಭಿಪ್ರಾಯ ರೂಪಿಸುವ ಜನಸಮುದಾಯಕ್ಕೆ ನಿರಸನ ಆಗುತ್ತ ಹೋಯಿತು. ಅದನ್ನು ಬಳಸಿಕೊಳ್ಳುವ ಅವಕಾಶಕ್ಕೆ ಇತಿಹಾಸ ಹೊಂಚು ಹಾಕುತ್ತ ಇತ್ತು.

'ಭಾರತ ಬೆಳಗುತ್ತಿದೆ' ಎಂಬ ಬಿಜೆಪಿ ಜಾಹೀರಾತನ್ನು ಸೋಲಿಸಿ ಗೆದ್ದಿದ್ದ ಮಿತ್ರ ಪಕ್ಷಗಳ ಕೂಟದ ಅಧ್ವರ್ಯುವಾಗಿದ್ದ ಸಿಂಗ್ ಅವರು ಕೂಡ 'ಭಾರತ ಎಲ್ಲರಿಗೂ ಬೆಳಗಬೇಕು' ಎಂದು ದೃಢವಾಗಿ ಭಾವಿಸಿದ್ದರು. ಆದರೆ, ಅವರ ನಂಬಿಕೆ ನಿಧಾನವಾಗಿ ಅವರ ಸಚಿವ ಸಹೋದ್ಯೋಗಿಗಳ ತರಂಗಾಂತರ, ಕಲ್ಲಿದ್ದಲು ಹಂಚಿಕೆಯಂಥ ಅಕ್ರಮಗಳಲ್ಲಿ ಕಪ್ಪಾಗಿ ಹೋಯಿತು. ಒಂದು ಅದ್ಭುತ ಚಿತ್ರವನ್ನು ಒಂದು ಹನಿ ಮಸಿ ಹಾಳು ಮಾಡಿತು ಎನ್ನುವಂತೆ ಆಯಿತು.

ಮನಮೋಹನಸಿಂಗ್ ಅವರ ಯುಪಿಎ 1 ಅವಧಿ ಅವರಿಗೆ ಎಂಥ ಕೀರ್ತಿ ತಂದಿತ್ತು ಎಂದರೆ ವಿಶ್ವದ ಅಗ್ರಸಾಲಿನ ನಾಯಕರ ಜತೆಗೆ ಅವರಿಗೂ ಒಂದು ಆಸನ ಮೀಸಲು ಇತ್ತು. ಪ್ರಪಂಚದ ಅತ್ಯಂತ ಪ್ರಭಾವಿ ನಾಯಕರಲ್ಲಿ ಅವರೂ ಒಬ್ಬರು ಎಂದು 'ನ್ಯೂಸ್ ವೀಕ್'ನಂಥ ಅಂತರರಾಷ್ಟ್ರೀಯ ಪತ್ರಿಕೆ ವರದಿ ಮಾಡಿತ್ತು. ಅದು ಭಾರತದಂಥ ತೃತೀಯ ಜಗತ್ತಿನ ದೇಶದ ನಾಯಕನಿಗೆ ಸಿಕ್ಕ ಅತಿದೊಡ್ಡ ಗೌರವವಾಗಿತ್ತು. ಆದರೆ, ಯುಪಿಎ 2 ಅವಧಿಯಲ್ಲಿ 'ಟೈಂ' ನಿಯತಕಾಲಿಕೆ ಸಿಂಗ್ ಅವರನ್ನು 'ಅಂಡರ್ ಪರ್‌ಫಾರ್ಮರ್' ಎಂದು ವರದಿ ಮಾಡಿತು. ಸಿಂಗ್ ಅವರು ಮಾತನಾಡುತ್ತಿರಲಿಲ್ಲ. ಮೌನ ಬಂಗಾರ ಎಂದುಕೊಂಡವರು ಅವರು. ಮಾತೇ ಬಂಗಾರ ಎಂದುಕೊಂಡ ಕಾಲದಲ್ಲಿ, ಮಾತಿನಿಂದಲೇ ಗೆಲ್ಲುವ ಈಗಿನ ಕಾಲದಲ್ಲಿ ಸಿಂಗ್ ಅವರಿಗೆ ಅವಕಾಶ' ಇರಲಿಲ್ಲ. ಒಂದು ಕಾಲದ ವಿಶ್ವದ ಅಗ್ರಸಾಲಿನ ನಾಯಕ, ವಿರೋಧಿಗಳಿಗೆ 'ದುರ್ಬಲ' ನಾಯಕನಾಗಿ ಕಾಣಿಸತೊಡಗಿತು. ಎಲ್.ಕೆ.ಅಡ್ವಾಣಿ ಅದನ್ನೇ ಹೇಳಿದರು.

ಈ ದೇಶ ಕಂಡ ಅತ್ಯಂತ ವಿರಳ ಪ್ರಾಮಾಣಿಕರಲ್ಲಿ ಮನಮೋಹನ್ ಒಬ್ಬರು. ಆದರೆ, ಅದು ಸಾಲಲಿಲ್ಲ. ಹತ್ತು ವರ್ಷ ಪ್ರಧಾನಿ ಹುದ್ದೆಯಲ್ಲಿ ಕೂಡ್ರಿಸಿದ್ದ ಕಾಂಗ್ರೆಸ್ ಪಕ್ಷವೇ, ಗಾಂಧಿ ಕುಟುಂಬವೇ ಅವರನ್ನು ತೆರೆಯ ಹಿಂದೆ ಸರಿಸಿತು, ಅವರನ್ನು ಸಮರ'ದ ಸೇನಾನಿ ಎಂದು ಪರಿಗಣಿಸಲಿಲ್ಲ. ಒಂದು ದಳವನ್ನು ಗೆಲುವಿನ ದಡ ಸೇರಿಸಲು ಬೇಕಾಗಿದ್ದ ಸೇನಾನಿಯೇ ಇಲ್ಲದ ಕಾಂಗ್ರೆಸ್ ಪಕ್ಷವನ್ನು ಮತ್ತು ಅದರ ಜತೆಗಾರರನ್ನು ಜನರು ಮರಳಿ ನೋಡಲೂ ಆಗದಂತೆ ಓಡಿಸಿ ಬಿಟ್ಟಿದ್ದಾರೆ. ಇತಿಹಾಸದ ಚಕ್ರ ತಿರುಗುತ್ತ ಇರುತ್ತದೆ. ಕಾಲ ಹೀಗೆಯೇ ಇರುವುದಿಲ್ಲ. ಅದು ಒಂದು ದಿನ ಕರುಣೆಯಿಂದ ನಮ್ಮ ಕಡೆ ನೋಡಬೇಕು ಎಂದು ಬಯಸುತ್ತೇವೆ. ಮನಮೋಹನರೂ ಇತಿಹಾಸ ತಮ್ಮ ಬಗ್ಗೆ ದಯಾಳು ಆಗಿರಲಿ ಎಂದು ಬಯಸಿದ್ದಾರೆ. ತನ್ನ ಬಹುಪಾಲು ಜೀವನವನ್ನು ಈ ದೇಶದ ಒಳಿತಿಗೆ ಅಭಿಮಾನದಿಂದ, ನಿರ್ಮಮಕಾರವಾಗಿ ಮತ್ತು ಪ್ರಾಮಾಣಿಕವಾಗಿ ಸವೆಸಿದ ಒಬ್ಬ ವ್ಯಕ್ತಿ ಇದಕ್ಕಿಂತ ಹೆಚ್ಚು ಏನು ಬಯಸಲು ಸಾಧ್ಯ? ಇತಿಹಾಸದ ಈ ಗತಿಯಲ್ಲಿ ಪ್ರಧಾನಿ ಅಭ್ಯರ್ಥಿ ನರೇಂದ್ರ ಮೋದಿ ಅವರಿಗೂ ಪಾಠಗಳು ಇರಬಹುದೇ?

**18.05.2014**

# ಈಗ ರಾಜಧರ್ಮದ ಪಾಠ

# ಹೇಳುವವರು ಯಾರು?

ಇದೆಲ್ಲ ಇಷ್ಟು ಬೇಗ ಶುರುವಾಗುತ್ತದೆ ಎಂದು ಯಾರೂ ಅಂದುಕೊಂಡಿರಲಿಲ್ಲ. ಕೇಂದ್ರದಲ್ಲಿ ನರೇಂದ್ರ ಮೋದಿ ಸರ್ಕಾರ ಅಧಿಕಾರಕ್ಕೆ ಬಂದು ಇನ್ನೂ ಈಗಷ್ಟೇ ಇನ್ನೂರು ದಿನಗಳು ಕಳೆದಿವೆ. ಅಂದರೆ ಸುಮಾರು ಆರೂವರೆ ತಿಂಗಳು ಅಷ್ಟೇ. ಇನ್ನೂ ನಾಲ್ಕೂವರೆ ವರ್ಷ ಅವರು ಅಧಿಕಾರದಲ್ಲಿ ಇರಬೇಕು. ಅವರು ಗುಜರಾತಿನಿಂದ ಸೀದಾ ದೆಹಲಿಗೆ ಬಂದಿದ್ದಾರೆ. ಕೇಂದ್ರದಲ್ಲಿ ಅವರಿಗೆ ಅಧಿಕಾರ ನಡೆಸಿದ ಅನುಭವ ಎಳ್ಳಷ್ಟೂ ಇಲ್ಲ. ಇಡೀ ದೇಶವನ್ನು ಅರ್ಥ ಮಾಡಿಕೊಳ್ಳಲು, ಆಳಲು ತುಂಬ ಕಾಲಾವಕಾಶ ಬೇಕು. ಇದು ಬಹಳ ಕ್ಲಿಷ್ಟಕರ ದೇಶ. 120 ಕೋಟಿ ಜನ, ನೂರೆಂಟು ಧರ್ಮ, ನೂರೆಂಟು ಆಶೋತ್ತರ...

ಜನರು ಮೋದಿ ಅವರಿಗೆ ಮತ ಹಾಕಲು ಹುಚ್ಚರೇನೂ ಆಗಿರಲಿಲ್ಲ. ಅವರಿಗೂ 'ಹಿಂದೆ ಮುಂದೆ' ಎಲ್ಲ ಗೊತ್ತಿತ್ತು. ಆದರೂ ಅವರು ಈ ವ್ಯಕ್ತಿಯನ್ನು ಅಧಿಕಾರಕ್ಕೆ ತಂದರು. ಅದೂ ಮೂವತ್ತು ವರ್ಷಗಳ ನಂತರ ಒಂದೇ ಪಕ್ಷ ಅಧಿಕಾರ ಮಾಡುವಷ್ಟು ಬಲವನ್ನು ಕೊಟ್ಟರು. ಅವರು ಬಿಜೆಪಿಗೆ ಮತ ಹಾಕಿರಲಿಲ್ಲ. ನರೇಂದ್ರ ಮೋದಿ ಅವರಿಗೆ ಮತ ಹಾಕಿದ್ದರು. ಅವರಿಗೆ ನರೇಂದ್ರ ಮೋದಿ ಒಂದು ಭರವಸೆಯಾಗಿ, ಒಂದು ಆಶಾಕಿರಣವಾಗಿ ಕಾಣಿಸಿದ್ದರು. ಕಳೆದ ಹತ್ತು ವರ್ಷಗಳ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದಿಂದ ಅವರು ಎಷ್ಟು ಭ್ರಮ ನಿರಸನಗೊಂಡಿದ್ದರು ಎಂದರೆ ಈ ಸರ್ಕಾರ ಹೋದರೆ ಸಾಕು ಎಂದು ಕಾಯುತ್ತಿದ್ದರು. ನರೇಂದ್ರ ಮೋದಿ ಬರೀ ಕೇಂದ್ರದಲ್ಲಿ ಇದ್ದರೆ ಸಾಲದು ಎಂದು ಜನರು ಅವರಿಗೆ ಮಹಾರಾಷ್ಟ್ರದಲ್ಲಿ, ಹರಿಯಾಣದಲ್ಲಿ, ಜಾರ್ಖಂಡಿನಲ್ಲಿ ಅಧಿಕಾರ ಕೊಟ್ಟಿದ್ದಾರೆ. ಜಮ್ಮು- ಕಾಶ್ಮೀರದಲ್ಲಿ ಅಧಿಕಾರ ಮಾಡಲು ಅವಕಾಶ ಕೊಡದೇ ಇದ್ದರೂ ಅಧಿಕಾರದಲ್ಲಿ ಪಾಲುಗೊಳ್ಳುವ ಅವಕಾಶವನ್ನು ಕೊಟ್ಟಿದ್ದಾರೆ. ಮತ್ತೆ ಅದೇ, ತಮಗೆ ಈ ಬದಲಾವಣೆಯಿಂದ ಒಳ್ಳೆಯದಾದೀತು ಎಂದು ಅವರು ಕನಸು ಕಾಣುತ್ತಿದ್ದಾರೆ; ಆಶಿಸುತ್ತಿದ್ದಾರೆ.

ಆದರೆ, ಈಗ ದೇಶದಲ್ಲಿ ನಡೆಯುತ್ತಿರುವುದೆಲ್ಲ ಅವರ ಆಸೆಗಳಿಗೆ ಪೂರಕವಾಗಿ ಇದೆಯೇ? ಅವರು ಬಯಸಿದ್ದೇನು, ಈಗ ಆಗುತ್ತಿರುವುದು ಏನು? ಎಲ್ಲಿಂದಲೋ ಕೆಲವರು ಬಡ ಮುಸ್ಲಿಮರನ್ನು ಹಿಡಿದುಕೊಂಡು ಬಂದು ಅವರನ್ನು ಹಿಂದೂ ಧರ್ಮಕ್ಕೆ

ಸೇರಿಸಿಕೊಳ್ಳುತ್ತಿದ್ದಾರೆ. ಮಹಾತ್ಮರನ್ನು ಕೊಂದ ನಾಥರಾಂ ಗೋಡ್ಸೆ ಅವರನ್ನು ರಾಷ್ಟ್ರಭಕ್ತ ಎಂದು ಬಿಂಬಿಸಲಾಗುತ್ತಿದೆ. ಒಂದು ಕಾಲದಲ್ಲಿ ಕೋಮುದ್ವೇಷ ಹಬ್ಬಿಸುತ್ತದೆ ಎಂಬ ಕಾರಣ ನೀಡಿ ನಿಷೇಧಿಸಲಾಗಿದ್ದ ಅವರ ಪುಸ್ತಕ ಈಗ ಮತ್ತೆ ಜನವರಿ 30ರಂದೇ ಪ್ರಕಟವಾಗುತ್ತಿದೆ. ಕ್ರೈಸ್ತರ ಮೇಲೆ ಎಲ್ಲೆಂದರಲ್ಲಿ ದಾಳಿಯಾಗುತ್ತಿವೆ. ಸಂಘ ಪರಿವಾರದ ಮುಖಂಡರು ಇಡೀ ದೇಶದಲ್ಲಿ ಹಿಂದೂ ಮೌಲ್ಯಗಳನ್ನು ಸ್ಥಾಪನೆ ಮಾಡುತ್ತೇವೆ ಎಂದು ಉಗ್ಗಡಿಸುತ್ತಿದ್ದಾರೆ. ಭಗವದ್ಗೀತೆಗೆ ರಾಷ್ಟ್ರೀಯ ಗ್ರಂಥದ ಸ್ಥಾನಮಾನ ಕೊಡುವ ಮಾತನ್ನು ಸರ್ಕಾರದ ಸಚಿವೆಯೇ ಆಡಿದ್ದಾರೆ.

ಇದನ್ನೆಲ್ಲ ಇವರು ಯಾವಾಗ ಬೇಕಾದರೂ ಮಾಡಬಹುದಿತ್ತು. ಆದರೆ, ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಬಂದಿರುವಾಗಲೇ ಏಕೆ ಮಾಡುತ್ತಾರೆ? ಅನೇಕರಿಗೆ ಮರೆತು ಹೋಗಿರಬಹುದು: 1999ರಲ್ಲಿ ಕೇಂದ್ರದಲ್ಲಿ ಅಟಲ ಬಿಹಾರಿ ವಾಜಪೇಯಿ ನೇತೃತ್ವದ ಸರ್ಕಾರ ಇದ್ದಾಗ ಒಡಿಶಾದಲ್ಲಿ ಆಸ್ಟ್ರೇಲಿಯಾದ ಧರ್ಮ ಪ್ರಚಾರಕ ಗ್ರಹಾಂ ಸ್ಟೇನ್ ಅವರನ್ನು ಸುಟ್ಟು ಹಾಕಲಾಯಿತು. ಕರ್ನಾಟಕದಲ್ಲಿ ಕಳೆದ ಅವಧಿಯಲ್ಲಿ ಬಿಜೆಪಿ ಸರ್ಕಾರ ಬರುತ್ತಿದ್ದಂತೆಯೇ ಚರ್ಚ್‌ಗಳ ಮೇಲೆ ನಿರಂತರ ದಾಳಿ ಆರಂಭವಾಯಿತು. ಇದೆಲ್ಲ ಕಾಕತಾಳೀಯ ಇರಲಾರದು. ಸಂಘ ಪರಿವಾರದವರಿಗೆ ಅಧಿಕಾರ ಸಿಕ್ಕ ಕೂಡಲೇ ಅವರು ಮೊದಲು ತಮ್ಮ ಧಾರ್ಮಿಕ ಅಜೆಂಡಾವನ್ನೇ ಜಾರಿಗೆ ತರಲು ಪ್ರಯತ್ನ ಮಾಡುತ್ತಾರೆ ಎಂಬುದಕ್ಕೆ ಈಚಿನ ವರ್ಷಗಳಲ್ಲಿ ಅನೇಕ ಉದಾಹರಣೆಗಳು ದೊರೆತಿವೆ. ಈಗಲೂ ಅದೇ ಆಗುತ್ತಿದೆ. ಅದರಲ್ಲಿ ಹೊಸದೇನೂ ಇಲ್ಲ.

ಹಾಗಾದರೆ, ಈ ದೇಶದಲ್ಲಿ ಕೇವಲ ಹಿಂದೂ ಮೌಲ್ಯಗಳ ಸ್ಥಾಪನೆ ಆಗಬೇಕೇ? ಈ ದೇಶದಲ್ಲಿಯೇ ಜನಿಸಿದ ಬೌದ್ಧ ಧರ್ಮದ ಮೌಲ್ಯಗಳ ಸ್ಥಾಪನೆ ಏಕೆ ಆಗಬಾರದು? ಜೈನ ಧರ್ಮದ ಮೌಲ್ಯಗಳ ಸ್ಥಾಪನೆ ಏಕೆ ಬೇಡ? ಸಿಖ್ ಧರ್ಮದ ಮೌಲ್ಯಗಳಲ್ಲಿ ಏನು ಕೊರತೆ ಇದೆ? ಯಾವ ಧರ್ಮವೂ ಪರಿಪೂರ್ಣವಲ್ಲ. ಯಾವುದಾದರೂ ಒಂದು ಧರ್ಮ ಪರಿಪೂರ್ಣ ಆಗಿದ್ದರೆ ಜಗತ್ತಿನಲ್ಲಿ ಇಷ್ಟು ಧರ್ಮಗಳು ಇರುತ್ತಿರಲಿಲ್ಲ. ಎಲ್ಲ ಧರ್ಮಗಳ ಪ್ರವರ್ತಕರೂ ಸತ್ಯದ ಶೋಧನೆಗೆ ಹೊರಟವರು. ತಮ್ಮ ತಮ್ಮ ಕಾಣೆಗಳನ್ನು ತಮ್ಮ ಅನುಯಾಯಿಗಳ ಮುಂದೆ ಇಟ್ಟವರು. ಕೆಲವು ಧರ್ಮಗಳು ವಿಶ್ವವ್ಯಾಪಿ ಆಗಿರಬಹುದು. ಹಾಗೆಂದು ಎಲ್ಲರೂ ಅದೇ ಧರ್ಮಗಳನ್ನು ಅನುಸರಿಸಬೇಕು ಎಂದು ಇಲ್ಲ. ಝುರತೃಷ್ಟನ ಅನುಯಾಯಿಗಳಾದ ಪಾರಸಿಗಳು ಸಂಖ್ಯೆಯಲ್ಲಿ ಕಡಿಮೆ ಇರಬಹುದು. ಆದರೆ, ಅವರ ನಂಬಿಕೆ ಅವರಿಗೆ ದೊಡ್ಡದು. ಭಾರತ ದೇಶ ಬರೀ ಭೌಗೋಳಿಕವಾಗಿ ದೊಡ್ಡದಲ್ಲ. ಅದು ಇಂಥ ಎಲ್ಲ ನಂಬಿಕೆಗಳಿಗೆ 'ಅನೇಕಾಂತವಾದ'ದ ನೆಲೆಯಲ್ಲಿ ಅವಕಾಶ ಕೊಟ್ಟಿದೆ. ಎಲ್ಲರ ನಂಬಿಕೆಗಳನ್ನು ಪೋಷಿಸಿದೆ, ಮೊರೆದಿದೆ. ನಮ್ಮ ದೇಶದ ನಿರ್ಮಾಪಕರು ವಿವಿಧತೆಯಲ್ಲಿ ಏಕತೆಯ ಮಾತು ಆಡಿದ್ದು ಈ ಉದ್ದೇಶದಿಂದ, ಅವರು ಹೇಳಿದ್ದು ಭಾರತೀಯ ಮೌಲ್ಯದ ಸ್ಥಾಪನೆಯ ಮಾತು. ಯಾವುದೋ ಒಂದು ಧರ್ಮದ ಮೌಲ್ಯಗಳ ಸ್ಥಾಪನೆಯ ಮಾತನ್ನು ಅವರು ಆಡಲಿಲ್ಲ.

ನಮ್ಮ ಪಕ್ಕದ ಪಾಕಿಸ್ತಾನದಲ್ಲಿ ಧರ್ಮ ತತ್ವಗಳ ಆಧಾರದ ಮೇಲೆ ಸರ್ಕಾರ ನಡೆದಿದೆ. ಅದಕ್ಕೇ ಅಲ್ಲಿ ಸಮಸ್ಯೆ ಇದೆ. ಅಲ್ಲಿ ಇಸ್ಲಾಂ ಧರ್ಮದಲ್ಲಿನ ಅಲ್ಪಸಂಖ್ಯಾತ ಪಂಗಡದವರಿಗೂ ಭದ್ರತೆ ಎಂಬುದು ಇಲ್ಲ. ಹಿಂದೂಗಳನ್ನಂತೂ ಕೇಳುವುದೇ ಬೇಡ. ಆಫ್ಘಾನಿಸ್ತಾನದಲ್ಲಿಯೂ ಬೋಮಿಯಾನ್ ಬುದ್ಧ ಪ್ರತಿಮೆಗಳಿಗೆ ಅದೇ ಗತಿಯಾಯಿತು. ಈಗ ಸಿರಿಯಾ-ಇರಾಕ್‌ಗಳ ನಡುವೆ ಅಧಿಕಾರ ಹಿಡಿದಿರುವ ಐ.ಎಸ್ 'ದೇಶ ಸ್ಥಾಪಕರು ಅದೇ ಕೆಲಸ ಮಾಡುತ್ತಿದ್ದಾರೆ. ಪುಟ್ಟ ಮತ್ತು ಅತ್ಯಂತ ಸುಂದರ ಯಾಜಿದಿ ಸಮುದಾಯ ನಾಶವಾಗಿ ಹೋಗಿದೆ. ಆ ಸಮುದಾಯದ ಹೆಣ್ಣು ಮಕ್ಕಳ ಆಕ್ರಂದನ ಇಡೀ ಜಗತ್ತಿನಾದ್ಯಂತ ಕೇಳುತ್ತಿದ್ದರೂ ನಾವು "ಏನೂ ಮಾಡದಷ್ಟು ಅಸಹಾಯಕರಾಗಿದ್ದೇವೆ. ಶಾಲೆಗೆ ಬಂದ ಪುಟ್ಟ ಅಮಾಯಕ ಮಕ್ಕಳನ್ನು ನಿರ್ದಯವಾಗಿ ಕೊಲ್ಲುವ ಕ್ರೌರ್ಯ ಕೂಡ ಎಲ್ಲಿಯೋ ಧರ್ಮಾಂಧತೆಯ ಭಾಗವಾಗಿಯೇ ಇರುವಂತೆ ಕಾಣುತ್ತದೆ. ಅಲ್ಲಿ ನೆಮ್ಮದಿ ಕನಸಾಗಿರುತ್ತದೆ, ಸಾವಿನ ಭಯ ಮನೆಬಾಗಿಲಲ್ಲಿ ನಿಂತು ಹೆದರಿಸುತ್ತ ಇರುತ್ತದೆ.

ಇತಿಹಾಸದಿಂದ ಯಾವ ಅರಸರೂ ಪಾಠ ಕಲಿಯಲಿಲ್ಲ. ಸಾಮ್ರಾಜ್ಯ ವಿಸ್ತರಣೆಯಲ್ಲಿ ಹಿಂಸೆ, ದುಃಖ ಇರುತ್ತದೆ ಎಂದು ಯಾವ ಅರಸರಿಗೆ ಗೊತ್ತಿರಲಿಲ್ಲ? ಆದರೂ ಅವರು ದಂಡೆತ್ತಿ ಹೋದರು. ಊರುಗಳನ್ನು ಕೊಳ್ಳೆ ಹೊಡೆದರು, ಸಾಮ್ರಾಜ್ಯ ವಿಸ್ತರಿಸಿದರು. ಅರಸರನ್ನು ಆಶ್ರಯಿಸಿಯೇ ಧರ್ಮಗಳೂ ತಮ್ಮ ತಮ್ಮ ಸಾಮ್ರಾಜ್ಯಗಳನ್ನು ವಿಸ್ತರಿಸಿಕೊಂಡಿವೆ. ಒಂದು ಧರ್ಮದ ಅನುಯಾಯಿಗಳನ್ನು ಮತ್ತೊಂದು ಧರ್ಮಕ್ಕೆ ಮತಾಂತರ ಮಾಡಲು ಏನೆಲ್ಲ ನಡೆದಿದೆ ಎಂಬುದೆಲ್ಲ ಇತಿಹಾಸದಲ್ಲಿ ದಾಖಲಾಗಿದೆ. ಯಾವ ಧರ್ಮಕ್ಕೆ ಅರಸನ ಆಶ್ರಯ ಸಿಗಲಿಲ್ಲವೋ ಆ ಧರ್ಮ ಬೆಳೆಯಲಿಲ್ಲ. ಅಥವಾ ಅರಸನ ಕೃಪೆ ಕಳೆದುಕೊಂಡ ಧರ್ಮಗಳು ತಮ್ಮ ಪ್ರಭಾವವನ್ನೂ ಕಳೆದುಕೊಳ್ಳುತ್ತ ಹೋದುವು. ಸ್ವೇಚ್ಛೆಯಿಂದ ಮತಾಂತರ ಎಂಬುದೆಲ್ಲ ಒಂದು ಆಶಯ ಅಷ್ಟೇ. ಯಾರೂ ಅಷ್ಟು ಸುಲಭವಾಗಿ ತಮ್ಮ ಧರ್ಮವನ್ನು ಬಿಟ್ಟುಕೊಡುವುದಿಲ್ಲ. ಮತಾಂತರಕ್ಕೆ ಒಂದೋ ಆಮಿಷ ಕಾರಣ, ಇಲ್ಲವೇ ದುರಾಗ್ರಹ ಕಾರಣ. ಇದಕ್ಕೆ ಅಂಬೇಡ್ಕರ್ ಮಾತ್ರ ಒಂದು ದೊಡ್ಡ ಅಪವಾದ. ಸಣ್ಣ ಪುಟ್ಟ ಅಪವಾದಗಳು ಅಲ್ಲಿಯೋ ಇಲ್ಲಿಯೋ ಇರಬಹುದು.

ಈಗ ಉತ್ತರ ಪ್ರದೇಶದ ಆಗ್ರಾದಲ್ಲಿ, ಗುಜರಾತಿನ ವಲಸಾಡ್‌ನಲ್ಲಿ ನಡೆದ ಮರುಮತಾಂತರಗಳೆಲ್ಲ ಪ್ರಹಸನದಂತೆ ಕಾಣುತ್ತಿವೆ. ಅವರೆಲ್ಲ ಬಡವರೂ, ದಿಕ್ಕೇಡಿಗಳೂ ಆಗಿರುವುದು ಆಕಸ್ಮಿಕವಾಗಿರಲಾರದು. ಒಂದು ಹಿಡಿ ಅಕ್ಕಿಯ ಆಸೆಗೆ ಅವರು ಯಾವ ಧರ್ಮಕ್ಕೂ ಹೋದರು. ಅವರು ಹಿಂದೂ ಧರ್ಮಕ್ಕೆ ಮತಾಂತರಗೊಂಡಿದ್ದಾರೆ. ಆದರೆ, ಹಿಂದೂ ಎಂಬ ಧರ್ಮ ಯಾರದು? ಅದು ಒಂದು ಧರ್ಮವೇ? ಅಥವಾ ಹಲವು ಧರ್ಮಮೌಲ್ಯಗಳ ಒಂದು ಜೀವನ ವಿಧಾನವೇ?

ಕೇಂದ್ರದಲ್ಲಿ ಬಿಜೆಪಿ ಅಥವಾ ಎನ್.ಡಿ.ಎ ಸರ್ಕಾರ ಬಂದಾಗಲೆಲ್ಲ ಮತ್ತು ರಾಜ್ಯಗಳಲ್ಲಿ ಬಿಜೆಪಿ ಸರ್ಕಾರ ಬಂದಾಗಲೆಲ್ಲ ಸಂಘ ಪರಿವಾರದವರು ಹೀಗೆ ಮುಸ್ಲಿಂ ಮತ್ತು ಕ್ರೈಸ್ತ ಧರ್ಮಗಳಿಗೆ ಬೆದರಿಕೆ ಒಡ್ಡುವ ಮೂಲಕ ಇತರ ಅಲ್ಪಸಂಖ್ಯಾತ ಧರ್ಮಗಳಿಗೂ ಪರೋಕ್ಷ

ಬೆದರಿಕೆ ಒಡ್ಡುವಂತೆ ಕಾಣುತ್ತದೆ. ನೀವು ನಿಮಗೇ ವಿಶಿಷ್ಟವಾದ ಪ್ರತ್ಯೇಕ ಅಸ್ಮಿತೆಯನ್ನು ತೊರೆದು ಹಿಂದೂ ಧರ್ಮದ ಛತ್ರದ ಅಡಿಯಲ್ಲಿ ಬರಬೇಕು, ಇಲ್ಲವಾದರೆ ನಿಮಗೂ ಇದೇ ಗತಿ ಕಾದಿದೆ' ಎಂದು ಅವರು ಹೇಳುವಂತೆ ತೋರುತ್ತದೆ; ಅಥವಾ ಮುಸ್ಲಿಂ ಮತ್ತು ಕ್ರೈಸ್ತ ಧರ್ಮದವರ ಪ್ರತಿಕ್ರಿಯೆ'ಗೆ ಹೆದರಿ ಈ ಸಣ್ಣ ಪುಟ್ಟ ಧರ್ಮಗಳು ತಾವೇ ಹಿಂದೂ ಧರ್ಮದ ಛತ್ರದ ಅಡಿಯಲ್ಲಿ ಆಶ್ರಯ ಪಡೆಯುವಂತೆ ಒತ್ತಾಯಿಸುವ ಹುನ್ನಾರವೂ ಇಂಥ ತಂತ್ರಗಳಲ್ಲಿ ಇರಬಹುದು. ಏನಿದ್ದರೂ ಭಾರತೀಯ ಮೌಲ್ಯ ಸ್ಥಾಪಿಸಬೇಕು ಎಂದ ನಮ್ಮ ದೇಶದ ನಿರ್ಮಾಪಕರ ಆಶಯಕ್ಕೆ ಇದೆಲ್ಲ ವಿರುದ್ಧವಾದುದು.

ಹಾಗಾದರೆ, (ಎಲ್ಲ ಧರ್ಮಗಳು ಸಮಾನ ಎಂದು ಪರಿಗಣಿಸುವ) ಸಂವಿಧಾನದ ಆಶಯಗಳನ್ನು ಎತ್ತಿ ಹಿಡಿಯುತ್ತೇನೆ ಎಂದು ಪ್ರಮಾಣ ಮಾಡಿದ, ಪ್ರಜಾಪ್ರಭುತ್ವದ ದೇಗುಲ ಎನಿಸಿದ ಸಂಸತ್ತಿನ ಮೆಟ್ಟಿಲುಗಳಿಗೆ ತಲೆ ಇಟ್ಟು ನಮಸ್ಕರಿಸಿ ಒಳಗೆ ಪ್ರವೇಶಿಸಿದ ಪ್ರಧಾನಿ ನರೇಂದ್ರ ಮೋದಿ ಏಕೆ ಮೌನವಾಗಿದ್ದಾರೆ? ಅವರು, 'ನಾವು ಅಧಿಕಾರಕ್ಕೆ ಬಂದರೆ ಹೀಗೆಲ್ಲ ಮಾಡುತ್ತೇವೆ' ಎಂದು ಪ್ರಚಾರ ಸಭೆಗಳಲ್ಲಿ ಹೇಳಿರಲಿಲ್ಲವಲ್ಲ? ಹೇಳಿದ್ದರೆ ನಾವು ಬೇರೆ ಇನ್ನೇನೋ ಯೋಚನೆ ಮಾಡಬಹುದಿತ್ತಲ್ಲ? ಅಂದರೆ ಸಂಘ ಪರಿವಾರದ ಅಜೆಂಡಾಕ್ಕೂ, ಕೇಂದ್ರ ಸರ್ಕಾರಕ್ಕೂ ಅರ್ಥಾತ್ ಸಂಬಂಧ ಇಲ್ಲವೇ? ಈ ಎಲ್ಲ ಬೆಳವಣಿಗೆ ತಾವು ನಮಗೆ ಕೊಟ್ಟ ಭರವಸೆಗಳ ಈಡೇರಿಕೆಗೆ ಆಗುವ ಅಡ್ಡಿ, ಭಂಗ ಎಂದು ಮೋದಿ ಅವರಿಗೆ ಅನಿಸುತ್ತಿರಬೇಕಲ್ಲ? ಎಲ್ಲ ಪಕ್ಷಗಳು ಏನೆಲ್ಲ ಹೇಳಿ ಅಧಿಕಾರಕ್ಕೆ ಬರುತ್ತವೆ. ಅಧಿಕಾರಕ್ಕೆ ಬಂದ ಮೇಲೆ ಅನೇಕ ಭರವಸೆಗಳನ್ನು ಈಡೇರಿಸಲು ಆಗದು ಎಂದು ಅವುಗಳಿಗೆ ಅನಿಸತೊಡಗುತ್ತದೆ. ತಮ್ಮನ್ನು ವಿರೋಧ ಪಕ್ಷ ಎಚ್ಚರಿಸೀತು ಎಂದು ಅದರ ದಿಕ್ಕು ತಪ್ಪಿಸುವ ಏನಾದರೂ ಒಂದು ವಿವಾದವನ್ನು ಸರ್ಕಾರಗಳು ಹುಟ್ಟಿ ಹಾಕುತ್ತವೆ, ಅಥವಾ ತನ್ನ ಮೇಲೆ ತಾನೇ ಎಳೆದುಕೊಳ್ಳುತ್ತವೆ! ಆದರೆ, ಕೇಂದ್ರದಲ್ಲಿ ಆಗುತ್ತಿರುವುದೇ ಬೇರೆ. ಆಡಳಿತ ಪಕ್ಷ ಮತ್ತು ಅದರ ಪರಿವಾರದ ಮಂದಿ ತಮ್ಮನ್ನು ಕೆಣಕುವ ವಿರೋಧ ಪಕ್ಷಗಳ ಬದಲಾಗಿ ನೇರವಾಗಿ ಜನರನ್ನೇ ದಾರಿ ತಪ್ಪಿಸುವ ಕೆಲಸದಲ್ಲಿ ತೊಡಗಿದ್ದಾರೆ! ಇದು, ಕನಿಷ್ಠ ಶಬ್ದಗಳಲ್ಲಿ ಬಣ್ಣಿಸಬಹುದಾದರೆ, ಒಂದು ದ್ರೋಹ, ಅವರು ಅಧಿಕಾರಕ್ಕೆ ಬರುವಾಗ ಹೇಳಿದ್ದೇನು? ಈಗ ಮಾಡುತ್ತಿರುವುದೇನು? ಯಾರೋ ಕಡುಬಡವ ನಾಲ್ಕು ಮಂದಿಯನ್ನು ಕರೆದುಕೊಂಡು ಬಂದು ಹೋಮ-ಹವನ ಹಾಕಿ ಅವರ ಹಣೆಗೆ ತಿಲಕ ಇಟ್ಟರೆ ಅದರಿಂದ ಹಿಂದೂ ಧರ್ಮ ಉದ್ಧಾರ ಆಗುತ್ತದೆಯೇ? ಗೋಡ್ಸೆಯನ್ನು ರಾಷ್ಟ್ರೀಯ ವ್ಯಕ್ತಿ ಎಂದು ಕರೆದರೆ ಮಹಾತ್ಮ ಗಾಂಧಿಯ ಪ್ರಭಾವ ಕಡಿಮೆ ಆಗುತ್ತದೆಯೇ?... ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳು ಜನರಿಗೆ ಏಕೆ 'ಆಕರ್ಷಕ'ವಾಗಿ ಕಂಡುವು ಎಂಬುದಕ್ಕೆ ಹಿಂದೂ ಧರ್ಮದ ಅಧ್ವರ್ಯುಗಳು ಎನಿಸಿಕೊಂಡವರು ಕಾರಣಗಳನ್ನು ಕಂಡುಕೊಳ್ಳಬೇಕು. ಹಿಂದೂ ಧರ್ಮದಲ್ಲಿ ಯಾವ ಕೊರತೆಗಳೂ ಇಲ್ಲವೇ ಇಲ್ಲವೇ? ಅಸ್ಪೃಶ್ಯತೆ ಎಂಬುದು ಹಿಂದೂ ಧರ್ಮದ ಕಳಂಕ ಅಲ್ಲವೇ?... ಧರ್ಮ ದೊಡ್ಡದೇ? ಅದಕ್ಕಿಂತ ಜೀವನ ದೊಡ್ಡದೇ? ಯಾವ ಕಾಲಕ್ಕೂ ಧರ್ಮಕ್ಕಿಂತ ಜೀವನವೇ ದೊಡ್ಡದು. ಜೀವನದ ಕಠಿಣ ಪ್ರಶ್ನೆಗಳಿಗೆ ಧರ್ಮ ಉತ್ತರ ಕಂಡು

ಹಿಡಿಯಲು ಪ್ರಯತ್ನ ಮಾಡುತ್ತದೆ ಅಷ್ಟೇ. ಸರ್ಕಾರದ ಕೆಲಸ ಜನರ ಜೀವನವನ್ನು ಉತ್ತಮಗೊಳಿಸುವುದು, ಅವರ ಬದುಕನ್ನು ಸಹನೀಯ ಮಾಡುವುದು; ಯಾರಿಗಾದರೂ ಅವರ ಪ್ರಾಣಕ್ಕೆ, ಅಭಿವ್ಯಕ್ತಿಗೆ ಅಥವಾ ಧರ್ಮಾಚರಣೆಯ ಸ್ವಾತಂತ್ರ್ಯಕ್ಕೆ ಧಕ್ಕೆ ಬಂದರೆ ಅಥವಾ ಬರುವ ಹಾಗೆ ಕಾಣಿಸಿದರೆ ಅವರ ರಕ್ಷಣೆಗೆ ಧಾವಿಸುವುದು. 'ರಾಜಧರ್ಮ' ಎಂದರೆ ಅದೇ. ನರೇಂದ್ರ ಮೋದಿ ಅವರಿಗೆ 2002ರಲ್ಲಿ ಆಗಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿಯವರು 'ರಾಜಧರ್ಮ' ದ ಪಾಠ ಹೇಳಿದ್ದರು. ಈಗ ಅವರು ರುಗ್ಣಶಯ್ಯೆಯಲ್ಲಿ ಇದ್ದಾರೆ; ಮಾತು ಕಳೆದುಕೊಂಡಿದ್ದಾರೆ. ಈಗ ಮೋದಿಯವರಿಗೆ ಮತ್ತೆ 'ರಾಜಧರ್ಮ'ದ ಪಾಠ ಹೇಳುವವರು ಬಿಜೆಪಿಯಲ್ಲಿ ಯಾರೂ ಇಲ್ಲವೇ? ಎಂಥ ದುರ್ದೆಸೆ?

**28.12.2014**

# ತಂದೆ ಯಾರು ಎಂಬ

# ಮೌನವಲಯ ಕೆದಕಿ...

ಇದು ಮೊದಲ ಬಾರಿಯೇನೂ ಅಲ್ಲ. ಹಿಂದೆಯೂ ಆಗಿತ್ತು. ಮುಂದೆಯೂ | ಆಗುವುದಿಲ್ಲ ಎಂದು ಹೇಳುವುದು ಕಷ್ಟ ಚುನಾವಣೆ ಬಂದರೆ ಸಾಕು. ರಾಜ- ಕಾರಣಿಗಳ ನಾಲಿಗೆ ಹಗುರವಾಗಿ ಬಿಡುತ್ತದೆ. ಅಲ್ಲಿ ಕ್ಷೇತ್ರದ ಜನರ ಕಷ್ಟಗಳ ಬಗ್ಗೆ ಚರ್ಚೆ ಆಗುವುದಿಲ್ಲ. ನಾಡಿನ ಬಗ್ಗೆ ಚರ್ಚೆ ಆಗುವುದಿಲ್ಲ. ತಾನು ಕ್ಷೇತ್ರಕ್ಕೆ ಏನು ಮಾಡುತ್ತೇನೆ ಎಂದು ಅಭ್ಯರ್ಥಿ ಹೇಳುವುದಿಲ್ಲ. ಮತಭಿಕ್ಷೆ ಕೇಳುವ ದಿನ ಬರುತ್ತಿದ್ದಂತೆಯೇ ವೇದಿಕೆ ಏರುವ ಅಭ್ಯರ್ಥಿಗಳು ಎದುರಾಳಿಯ ಜನ್ಮ ಜಾಲಾಡಲು ಶುರು ಮಾಡುತ್ತಾರೆ. ಒಂದು ಸಾರಿ ವೈಯಕ್ತಿಕ ನೆಲೆಯ ಪ್ರಚಾರ ಆರಂಭ ಆಗಿಬಿಟ್ಟಿತು ಎಂದರೆ ಅದು ಕೊನೆ ಆಗುವುದೇ ಇಲ್ಲ. ಕೊನೆಗೆ ಚುನಾವಣೆಯೇ ಮುಗಿಯಬೇಕು. ಆಗಲೇ ಅವರ ನಾಲಿಗೆಗೆ ವಿಶ್ರಾಂತಿ ಸಿಗುತ್ತದೆ.

ಚುನಾವಣೆಗಳು ಪಕ್ಷದ ನೆಲೆಯಲ್ಲಿ ನಡೆಯಬೇಕು. ವ್ಯಕ್ತಿಗಳಿಗಿಂತ ಪಕ್ಷಗಳಿಗೇ ಅವು ಹೆಚ್ಚು ಮುಖ್ಯವಾಗಬೇಕು. ಒಂದು ಪಕ್ಷ ಮತ್ತೊಂದು ಪಕ್ಷದ ತೆಕ್ಕೆಯಿಂದ ಒಂದು ಸ್ಥಾನವನ್ನು ಕಿತ್ತುಕೊಳ್ಳಲು ಶ್ರಮಿಸಬೇಕು. ತನ್ನ ತೆಕ್ಕೆಯ ಕ್ಷೇತ್ರವನ್ನು ತನ್ನ ತೆಕ್ಕೆಯಲ್ಲಿಯೇ ಉಳಿಸಿಕೊಳ್ಳಲು ಇನ್ನೊಂದು ಪಕ್ಷ ಹೆಣಗಬೇಕು. ಅದಕ್ಕೆ ತತ್ವ, ಸಿದ್ಧಾಂತ ಮತ್ತು ಕಾರ್ಯಕ್ರಮಗಳು ಆಧಾರ ಆಗಿರಬೇಕು. ಈಗ ಹಾಗೆ ಆಗುವುದಿಲ್ಲ. ಚುನಾವಣೆ ದಿನಾಂಕ ಪ್ರಕಟವಾಗುತ್ತಿದ್ದಂತೆಯೇ ಅದು ಯಾರ ಪ್ರತಿಷ್ಠೆ ಎಂಬ ಲೆಕ್ಕಾಚಾರ ಶುರುವಾಗಿಬಿಡುತ್ತದೆ. ವಿಧಾನಸಭೆ ಚುನಾವಣೆ ಮುಗಿದು ಇನ್ನೂ ಮೂರು ತಿಂಗಳು ಆಗುವುದಕ್ಕಿಂತ ಮುಂಚೆಯೇ ಬಂದಿರುವ ಎರಡು ಲೋಕಸಭಾ ಕ್ಷೇತ್ರಗಳ ಉಪ ಚುನಾವಣೆ ಕಾಂಗ್ರೆಸ್ ಮತ್ತು ಜನತಾದಳ (ಎಸ್) ನಡುವಿನ ಹೋರಾಟ ಎನ್ನುವುದಕ್ಕಿಂತ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ವಿರೋಧ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ನಡುವಿನ ಸೆಣಸಾಟ ಎನ್ನುವಂತೆ ಆಗಿಬಿಟ್ಟಿದೆ. ಅದಕ್ಕೆ ನಾವು ಮಾಧ್ಯಮದವರೂ ಕಾರಣ ಆಗಿರಬಹುದು.

ಪರಸ್ಪರರನ್ನು ಕಂಡರೆ ಹಾವು ಮುಂಗುಸಿಯಂತೆ ಆಡುವ ಈ ಇಬ್ಬರು ನಾಯಕರ ನಡುವಿನ ಪೈಪೋಟಿ ಚುನಾವಣೆ ರಂಗಕ್ಕೂ ವಿಸ್ತರಿಸಿದೆ. ಅವರಿಬ್ಬರೂ ಆಡುವ ಮಾತು ಕೇಳಿದರೆ ಹಳೆಯ ವೈರವನ್ನು ತೀರಿಸಿಕೊಳ್ಳಲು ಈ ಚುನಾವಣೆಯನ್ನು ಎದುರಿಸುತ್ತಿರುವಂತೆ

ಕಾಣುತ್ತದೆ. ಇಬ್ಬರೂ ಹಳೆಯ ಗಾಯಗಳನ್ನು ಕೆದಕುತ್ತಿದ್ದಾರೆಯೇ ಹೊರತು ಈ ಚುನಾವಣೆಯಲ್ಲಿ ಗೆದ್ದರೆ ಕ್ಷೇತ್ರಕ್ಕೆ ಏನು ಲಾಭ ಎಂದು ಹೇಳುತ್ತಿಲ್ಲ. ನಾಯಕರ ನಡುವೆ ಹೀಗೆ ಪೋಟಿ ಶುರುವಾಗುತ್ತಿದ್ದಂತೆಯೇ ಮರಿಪುಡಾರಿಗಳು ಹೆಂಡ ಕುಡಿದ ಮಂಗನ ಹಾಗೆ ಕುಣಿದಾಡತೊಡಗುತ್ತಾರೆ. ನಾಯಕರಿಗೇ ನಾಲಿಗೆಯ ಮೇಲೆ ನಿಯಂತ್ರಣ ಇಲ್ಲದೇ ಇದ್ದರೆ ಅವರ ಅನುಯಾಯಿಗಳಿಗೆ ಏಕೆ ಇರುತ್ತದೆ? ಮಂಡ್ಯದಲ್ಲಿ ಕಣಕ್ಕೆ ಇಳಿದಿರುವ ನಟಿ ರಮ್ಯಾ ಅವರ ಹುಟ್ಟಿನ ಬಗ್ಗೆ ಮಾಜಿ ಶಾಸಕ ಎಂ.ಶ್ರೀನಿವಾಸ್ ಆಡಿದ ಮಾತು ಇದಕ್ಕೆ ಒಂದು ನಿದರ್ಶನ. ಶ್ರೀನಿವಾಸ್ ನಂತರ ವಿಷಾದ ವ್ಯಕ್ತಪಡಿಸಿರಬಹುದು. ಆದರೆ, ನಮ್ಮ ರಾಜ- ಕಾರಣಿಗಳು ಎಷ್ಟು ಅಸಭ್ಯವಾಗಿ ನಡೆದುಕೊಳ್ಳಲು ಸಾಧ್ಯ ಎಂಬುದಕ್ಕೆ ಈ ಘಟನೆ ಮತ್ತೊಂದು ನಿದರ್ಶನ ಒದಗಿಸಿತು.

ನಮ್ಮ ತಂದೆ ಯಾರು ಎಂಬುದು ತಾಯಿಗೆ ಮಾತ್ರ ಗೊತ್ತಿರುವ ಸತ್ಯ. ಆಕೆ ಮಗುವಿಗೆ ತಿಳಿವಳಿಕೆ ಬಂದ ಮೇಲೆ ಒಬ್ಬ ವ್ಯಕ್ತಿಯನ್ನು ತೋರಿಸಿ 'ನೋಡು ಈತ ನಿನ್ನ ತಂದೆ, ಅವನಿಗೆ ಅಪ್ಪ ಅನ್ನು' ಎಂದರೆ ಮಗು ಒಪ್ಪಿಕೊಳ್ಳಬೇಕು. ತನ್ನ ಮಗುವಿನ ತಂದೆಯನ್ನು ಗುರುತಿಸಲು ಆಕೆ ಇಷ್ಟಪಡದೇ ಇದ್ದರೆ ಸಮಾಜ ಅದನ್ನು ಗೌರವಿಸಬೇಕು. ನಮ್ಮ ಸಮಾಜದಲ್ಲಿ ತಂದೆಯೇ ಇಲ್ಲದ ಎಷ್ಟು ಮಕ್ಕಳು ಇಲ್ಲ? ಇದು ಆ ಮಗುವಿನ ಸಮಸ್ಯೆ ಎಂದುಕೊಳ್ಳುವ ಬದಲು ಸಮಾಜ ತನ್ನೊಳಗೆ ತಾನು ನೋಡಿಕೊಳ್ಳಬೇಕಾದ ಸಮಸ್ಯೆ ಎಂದು ನಾವು ಅರ್ಥ ಮಾಡಿಕೊಳ್ಳಬೇಕು. ನಾಮಪತ್ರ ಸಲ್ಲಿಸುವಾಗ ರಮ್ಯಾ ಅವರು ತಮ್ಮ ತಂದೆಯ ಹೆಸರು ಬರೆಯುವ ಜಾಗವನ್ನು ಖಾಲಿ ಬಿಟ್ಟು ತಾಯಿಯ ಹೆಸರು ಮಾತ್ರ ಬರೆದಿದ್ದರೆ ಅದು ಅವರ ಹಕ್ಕು. ನಮ್ಮದು ಪುರುಷಪ್ರಧಾನ ವ್ಯವಸ್ಥೆ ಎನ್ನುವ ಕಾರಣಕ್ಕೆ ತಂದೆ ಅಥವಾ ಗಂಡನ ಹೆಸರಿಗೆ ಅಷ್ಟು ಪ್ರಾಧಾನ್ಯ ಬರುತ್ತಿರಬಹುದು. ಮೂಲಭೂತವಾಗಿ ನಮ್ಮದು ಮಾತೃಪ್ರಧಾನ ವ್ಯವಸ್ಥೆಯೇ. ತಾಯಿಯೇ ಇಲ್ಲಿ ಮುಖ್ಯ. ಆಕೆಯೇ ಮಗುವನ್ನು ಒಂಬತ್ತು ತಿಂಗಳು ಹೊತ್ತು ಹೆರುವುದು. ತಂದೆಯ ಹೆಸರು ಗೊತ್ತಿರಲಿ, ಇಲ್ಲದೇ ಇರಲಿ ತಾಯಿಯ ಹೆಸರಿಗೇ ಅಲ್ಲಿ ಪ್ರಾಧಾನ್ಯ ಇರಬೇಕು. ತಂದೆ ಎಂಬುದು ಒಂದು ಮೌನವಲಯ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕು.

ಇಷ್ಟೆಲ್ಲ ಸೂಕ್ಷ್ಮಗಳು ನಮ್ಮ ರಾಜಕಾರಣಿಗಳಿಗೆ ತಿಳಿದಿರಲು ಸಾಧ್ಯವಿಲ್ಲ. ಆರು ವರ್ಷ (2007 ಆಗಸ್ಟ್ 30)ಗಳ ಹಿಂದೆ ಕುಮಾರಸ್ವಾಮಿಯವರು ಮುಖ್ಯಮಂತ್ರಿ ಆಗಿದ್ದಾಗ ಇಂಥದೇ ಒಂದು ಘಟನೆ ನಡೆದಿತ್ತು. ರಾಜಕೀಯವಾಗಿ ಕಡುವೈರಿಗಳಾದ ಡಿ.ಕೆ.ಶಿವಕುಮಾರ್ ಮತ್ತು ಕುಮಾರಸ್ವಾಮಿ ನಡುವಿನ ಜಟಾಪಟಿಯದು. ಅದೇನು ಚುನಾವಣೆ ಕಾಲವಾಗಿರಲಿಲ್ಲ. ಆದರೂ ಕುಮಾರಸ್ವಾಮಿಯವರು ಶಿವಕುಮಾರ್ ಅವರಿಗೆ, “ನೀವು ನಿಜವಾದ ತಂದೆಗೆ ಹುಟ್ಟಿದ ಮಗನೇ ಆಗಿದ್ದರೆ...' ಎಂದೆಲ್ಲ ಸವಾಲು ಹಾಕಿದ್ದರು. ಶಿವಕುಮಾರ್ ತಮ್ಮ ತಾಯಿಯನ್ನು ಕುಮಾರಸ್ವಾಮಿ ಮತ್ತು ತಾವು ಭಾಗವಹಿಸಿದ್ದ ಸಾತನೂರಿನ ಒಂದು ಬಹಿರಂಗ ಸಭೆಗೆ ಕರೆದುಕೊಂಡು ಬಂದು 'ನನ್ನ ತಂದೆ ಯಾರು ಎಂಬುದನ್ನು ನನ್ನ ತಾಯಿಯಿಂದಲೇ ಕುಮಾರಸ್ವಾಮಿ ತಿಳಿದುಕೊಳ್ಳಲಿ' ಎಂದು ಸವಾಲಿಗೆ ಸಿದ್ಧತೆ ಮಾಡಿಕೊಂಡಿದ್ದರು.

ಕುಮಾರಸ್ವಾಮಿ ಕ್ಷಮೆ ಕೇಳಿದ್ದರು. ಶಿವಕುಮಾರ್ ಅವರ ತಾಯಿ ತಮಗೂ ತಾಯಿ ಇದ್ದಂತೆ ಎಂದಿದ್ದರು. ಇತಿಹಾಸ ಮರುಕಳಿಸುತ್ತದೆ. ಕೆಟ್ಟ ಇತಿಹಾಸ ಇನ್ನೂ ಬೇಗ ಮರುಕಳಿಸುತ್ತದೆ. ಎಂ.ಶ್ರೀನಿವಾಸ್ ಅವರಿಗೆ ಈ ಘಟನೆ ನೆನಪು ಇದ್ದಿದ್ದರೆ ಅವರು ಮತ್ತೆ ಅದೇ ತಪ್ಪು ಮಾಡುತ್ತಿರಲಿಲ್ಲ.

ಇದು ಈಚಿನ ರಾಜಕೀಯದ ಸಮಸ್ಯೆ ಎಂದು ನನಗೆ ಅನಿಸುತ್ತಿದೆ. ಇಲ್ಲಿ ತತ್ವ ಸಿದ್ಧಾಂತಕ್ಕೆ ಎಂಥ ಬೆಲೆಯೂ ಇದ್ದಂತೆ ಕಾಣುವುದಿಲ್ಲ. ಅದೂ ನಮ್ಮ ಮನೆಯವರು ಕಣಕ್ಕೆ ಇಳಿದಾಗಲಂತೂ ಇನ್ನೂ ಸಮಸ್ಯೆಯಾಗುತ್ತದೆ. ಈಗ ಚುನಾವಣೆ ನಡೆಯುತ್ತಿರುವ ಎರಡೂ ಕ್ಷೇತ್ರಗಳು ಒಕ್ಕಲಿಗರ ಪ್ರಾಬಲ್ಯ ಇರುವಂಥವು ಮತ್ತು ಇದುವರೆಗೆ ಎಚ್.ಡಿ.ದೇವೇಗೌಡರ ಜನತಾದಳ (ಎಸ್) ತೆಕ್ಕೆಯಲ್ಲಿ ಇದ್ದಂಥವು. ಈಗ ಅವುಗಳನ್ನು ಕಳೆದುಕೊಂಡು ಬಿಟ್ಟರೆ ಇನ್ನು ಆರೆಂಟು ತಿಂಗಳಲ್ಲಿ ಬರುವ ಸಾರ್ವತ್ರಿಕ ಚುನಾವಣೆಯಲ್ಲಿ ಮತ್ತೆ ಅವುಗಳನ್ನು ಗೆಲ್ಲುವುದು ಕಷ್ಟ ಎಂದು ದೇವೇಗೌಡರಿಗೆ ಅನಿಸುತ್ತಿರಬಹುದು. ಒಂದು ಕ್ಷೇತ್ರದಲ್ಲಿ ಅವರು ತಮ್ಮ ಸೊಸೆಯನ್ನು ಕಣಕ್ಕೆ ಇಳಿಸಿರುವುದಕ್ಕೆ ಕ್ಷೇತ್ರವನ್ನು ತಮ್ಮ ಪಕ್ಷದಲ್ಲಿ ಮಾತ್ರವಲ್ಲ ತಮ್ಮ ಕುಟುಂಬದಲ್ಲಿಯೇ ಉಳಿಸಿಕೊಳ್ಳಬೇಕು ಎಂಬ ಉದ್ದೇಶವೂ ಇದ್ದಂತಿದೆ. ಜತೆಗೆ ಮಾಡಬೇಕಾದ ಖರ್ಚನ್ನು ಯಾರೋ ಒಬ್ಬ ಬೇರೆ ಅಭ್ಯರ್ಥಿಗಾಗಿ ಮಾಡದೇ ತಮ್ಮ ಕುಟುಂಬದವರಿಗಾಗಿ ಮಾಡುವುದು ಸೂಕ್ತ ಎಂದೂ ಅವರಿಗೆ ಅನಿಸಿರಬಹುದು. ಈ ಚುನಾವಣೆಯಲ್ಲಿ ದೇವೇಗೌಡರು ಬಿಜೆಪಿ ಜತೆಗೆ ಯಾವ ಸಖ್ಯವೂ ಇಲ್ಲ ಎಂದು ಒಂದು ಕಡೆ ಹೇಳುತ್ತಿದ್ದಾಗಲೇ ಇನ್ನೊಂದು ಕಡೆ ಇಂಥ 'ತತ್ವ ಸಿದ್ಧಾಂತ'ಗಳ ಬಗ್ಗೆ ಯಾವಾಗಲೂ ತಲೆ ಕೆಡಿಸಿಕೊಳ್ಳದ ಕುಮಾರಸ್ವಾಮಿ ತಣ್ಣಗೆ ಬಿಜೆಪಿ ಜತೆಗೆ ಹೊಂದಾಣಿಕೆ ಮಾಡಿಕೊಂಡಿದ್ದರು. ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಚುನಾವಣೆ ದೇವೇಗೌಡರಿಗಿಂತ ಕುಮಾರಸ್ವಾಮಿ ಅವರಿಗೆ ಹೆಚ್ಚು ಪ್ರತಿಷ್ಠೆಯದು. ಅದಕ್ಕೆ ಮೂರು ಕಾರಣಗಳು ಇವೆ : ಒಂದು, ಇದು ಅವರು ಪ್ರತಿನಿಧಿಸಿದ ಕ್ಷೇತ್ರ ಎರಡು, ಈಗ ಅಲ್ಲಿ ಅವರ ಪತ್ನಿ ಸ್ಪರ್ಧಿಸಿದ್ದಾರೆ. ಮೂರು, ತಮ್ಮ ರಾಜಕೀಯ ಕಡುವೈರಿ ಶಿವಕುಮಾರ್ ಅವರ ಸೋದರ ಎದುರಾಳಿಯಾಗಿದ್ದಾರೆ. ಚಿಗಿತುಕೊಳ್ಳುವುದಕ್ಕಿಂತ ಮುಂಚೆಯೇ ಸಿದ್ದರಾಮಯ್ಯನವರನ್ನು ಬಡಿಯಲು ಈ ಚುನಾವಣೆ ಒಂದು ಒಳ್ಳೆಯ ಬಡಿಗೆ ಎಂಬ ನಾಲ್ಕನೇ ರಹಸ್ಯ ಕಾರಣವೂ ಅವರಿಗೆ ಇರಬಹುದು! ಈ ಎಲ್ಲ ಕಾರಣಗಳಲ್ಲಿ ವೈಯಕ್ತಿಕತೆ ಹೆಚ್ಚು ಪ್ರಾಧಾನ್ಯ ಪಡೆದಿದೆಯೇ ಹೊರತು ತತ್ವ ಸಿದ್ಧಾಂತಗಳಿಗೆ ಇಲ್ಲಿ ಯಾವ ಜಾಗವೂ ಇಲ್ಲ. ಚುನಾವಣೆಗಳಲ್ಲಿ ವ್ಯಕ್ತಿಗತವಾದ ಟೀಕೆಗಳು ಏಕೆ ಕೇಳಿಬರುತ್ತವೆ ಎಂಬುದಕ್ಕೆ ಇಲ್ಲಿಯೇ ಕಾರ- ಣಗಳು ಇವೆ. ಪಕ್ಷಗಳು ವ್ಯಕ್ತಿಗತವಾಗುತ್ತಿವೆ. ರಾಜಕೀಯವೂ ವ್ಯಕ್ತಿಗತವಾಗುತ್ತಿದೆ. ತಮ್ಮ ಆಚೆ ನಾಡು ಮತ್ತು ಜನರು ಇರುವುದು ರಾಜಕಾರಣಿಗಳಿಗೆ ಕಾಣುತ್ತಿಲ್ಲ.

ಇದು ಬರೀ ರಾಜ್ಯಮಟ್ಟದಲ್ಲಿ ಮಾತ್ರ ಆಗುತ್ತಿಲ್ಲ. ದೇಶದ ಮಟ್ಟದಲ್ಲಿಯೂ ಆಗುತ್ತಿದೆ. ಹಿಂದೆ ಆಗಿದೆ. 2004ರ ಸಾರ್ವತ್ರಿಕ ಚುನಾವಣೆ ನಂತರ ಸೋನಿಯಾ ಗಾಂಧಿ ಪ್ರಧಾನಿಯಾದರೆ ತಾವು ತಲೆ ಬೋಳಿಸಿಕೊಳ್ಳುವುದಾಗಿ ಸುಷ್ಮಾ ಸ್ವರಾಜ್ ಹೇಳಿದ್ದರು. ಚುನಾವಣೆ ಮುಗಿಯುವ ವರೆಗೆ ಮೌನವಾಗಿದ್ದ ಸೋನಿಯಾ ಗಾಂಧಿಯವರು

ಮನಮೋಹನಸಿಂಗ್ ಅವರಿಗೆ ಪ್ರಧಾನಿ ಪಟ್ಟ ಕಟ್ಟಿ ಪದವಿ ರಾಜಕೀಯದಿಂದ ದೂರ ಉಳಿದರು. 2004ರ ನಂತರ ಭಾರತದ ಇತಿಹಾಸದಲ್ಲಿ ಸೋನಿಯಾ ಅವರ ಹೆಸರು ಒಂದು ಕಾರಣಕ್ಕೆ ಉಳಿದರೆ ಸುಷ್ಮಾ ಅವರ ಹೆಸರು ಇನ್ನೊಂದು ಕಾರಣಕ್ಕೆ ಉಳಿಯಿತು. ಸುಷ್ಮಾ ಸ್ವರಾಜ್ ಅವರು ಹಾಗೆ ಹೇಳಿದ್ದಕ್ಕೆ ರಾಜಕೀಯ ಬದ್ಧದ್ವೇಷಕ್ಕಿಂತ ಹೆಚ್ಚಿನ ಕಾರಣಗಳೇನೂ ಇರಲಿಲ್ಲ. ಸೋನಿಯಾ ಅವರ ಹುಟ್ಟು ಯಾವ ದೇಶದಲ್ಲಿಯೇ ಆಗಿರಲಿ, ಭಾರತದ ಸೊಸೆಯಾಗಿ ಬಂದ ಆಕೆಗೆ ಇಲ್ಲಿ ಸಾಂವಿಧಾನಾತ್ಮಕ ಹುದ್ದೆಗಳನ್ನು ಹೊಂದಲು ಯಾವ ನಿರ್ಬಂಧವೂ ಇರಲಿಲ್ಲ.

ಆಡಿದ ಮಾತು, ಒಡೆದ ಮುತ್ತು ಎರಡೂ ಒಂದೇ, ಅವು ಮರಳಿ ಸಿಗುವುದಿಲ್ಲ. ನಟಿ ರಮ್ಯಾ ತಂದೆ ಯಾರು ಎಂದು ಶ್ರೀನಿವಾಸ್ ಕೇಳಿ ಬಿಟ್ಟರು. ನಂತರ ಅದಕ್ಕೆ ಎಂಥದೋ ಆಧಾರ ಕೊಟ್ಟರು. ಶ್ರೀನಿವಾಸ್ ಮಾತಿನಿಂದ ಬರೀ ರಮ್ಯಾ ಮಾತ್ರ ನೊಂದುಕೊಂಡರೇ? ನನಗೆ ಹಾಗೆ ಅನಿಸುವುದಿಲ್ಲ. ಹೆಣ್ಣು ಮಕ್ಕಳ ಬಗ್ಗೆ ಕೆಟ್ಟ ಮಾತು ಆಡುವುದನ್ನು ನಮ್ಮ ಸಮಾಜ ಸಹಿಸಿಕೊಳ್ಳುವುದಿಲ್ಲ. ಸೋನಿಯಾ ಪ್ರಧಾನಿಯಾದರೆ ತಲೆಬೋಳಿಸಿಕೊಳ್ಳುತ್ತೇನೆ ಎಂದ ಸುಷ್ಮಾ ಅವರ ಪಕ್ಷಕ್ಕೆ ಆ ಚುನಾವಣೆಯಲ್ಲಿ ಲಾಭ ಆಗಲಿಲ್ಲ. ಮಂಡ್ಯದಲ್ಲಿ ಚುನಾವಣೆ ಫಲಿತಾಂಶ ಏನಾಗುತ್ತದೋ ನನಗೆ ಗೊತ್ತಿಲ್ಲ.* ಆದರೆ, ಅಲ್ಲಿ ನನಗೆ ಮತದಾನ ಮಾಡುವ ಹಕ್ಕು ಇದ್ದಿದ್ದರೆ, ಶ್ರೀನಿವಾಸ್ ಆಡಿದ ಮಾತಿಗೆ ಪ್ರತಿಭಟನೆ ಎನ್ನುವಂತೆ, ನಾನು ರಮ್ಯಾ ಅವರಿಗೇ ಮತ ಹಾಕುತ್ತಿದ್ದೆ!

**18.08.2013**

* ಈ ಚುನಾವಣೆಯಲ್ಲಿ ರಮ್ಯಾ ಭಾರಿ ಬಹುಮತದಿಂದ ಗೆದ್ದರು.

# ಡಿ.ಕೆ.ರವಿ ಐಎಎಸ್ ಎಂಬ

# ಒಡಕಲು ಬಿಂಬ!

ಅವರು ಒಂದು ಬಿಂಬವನ್ನು ಕಾಪಾಡಿಕೊಂಡು ಬಂದಿದ್ದರು. ಅದನ್ನು ರಕ್ಷಿಸಲು ಮತ್ತು ಆಗಾಗ ವಿಸ್ತರಿಸಲು ಪ್ರಯತ್ನ ಪಟ್ಟಿದ್ದರು. ಅದಕ್ಕೆ ಕಾರಣವಿತ್ತು. ಅವರ ಹಿನ್ನೆಲೆ ತೀರಾ ದಾರುಣವಾಗಿತ್ತು. ಅಲ್ಲಿ ಕಡು ಬಡತನ ಇತ್ತು. ಅವಮಾನ ಇತ್ತು. ಕಠಿಣ ಶ್ರಮದಿಂದ ಮತ್ತು ಒಂದಿಷ್ಟು ಅದೃಷ್ಟದಿಂದ ಬದುಕು ಬದಲಾಗಿತ್ತು. ಬಾಲ್ಯದ ಬಡತನ ಮತ್ತು ಅವಮಾನಗಳು ಅವರನ್ನು ಸದಾ ಹಲ್ಲುಕಚ್ಚುವಂತೆ ಮಾಡುತ್ತಿದ್ದುವು.

ಅವರ ಒಳಗೆ ಶ್ರೀಮಂತರ ಬಗ್ಗೆ ಸಿಟ್ಟು ಮತ್ತು ತಾತ್ಸಾರ ಎರಡೂ ಇದ್ದುವು. ಅದಕ್ಕೇ ಅವರು ಶ್ರೀಮಂತರನ್ನು, ಲಾಭಕೋರರನ್ನು ಬಗ್ಗುಬಡಿಯಲು ಮುಂದಾಗುತ್ತಿದ್ದರು. ಅವರ ಮೇಲೆ ದಾಳಿ ಮಾಡುತ್ತಿದ್ದರು. ದಾಳಿ ಮಾಡಿದ್ದು ಬಹಿರಂಗ ಜಗತ್ತಿಗೆ ಗೊತ್ತಾಗುವಂತೆ ನೋಡಿಕೊಳ್ಳುತ್ತಿದ್ದರು. ಆಳದಲ್ಲಿ ಬಡವರಿಗೆ ಸಹಾಯ ಮಾಡಬೇಕು ಎಂಬ ಇರಾದೆಯೂ ಇತ್ತು. ಅದನ್ನೂ ಸುದ್ದಿಯಾಗುವಂತೆ ನೋಡಿಕೊಳ್ಳುತ್ತಿದ್ದರು. ಅವರು ಬಿಂಬವನ್ನು ಸೃಷ್ಟಿ ಮಾಡಿಕೊಳ್ಳುತ್ತಿದ್ದರು. ಇಲ್ಲದಿದ್ದರೆ ಅವರು ತಮ್ಮ ನಾಯಿ ಜತೆಗೆ ಇದ್ದ, ಕ್ರಿಕೆಟ್ ಆಡುತ್ತಿದ್ದ, ನಂದಿ ಪಟ ಹೊತ್ತು ಕುಣಿಯುತ್ತಿದ್ದ, ವಿದ್ಯಾರ್ಥಿಗಳಿಗೆ ಪಾಠ ಮಾಡುತ್ತಿದ್ದ 'ಬೈಟ್'ಗಳು ಸಿದ್ಧವಾಗಿರುತ್ತಿರಲಿಲ್ಲ.

ವೃತ್ತಿಯ ಆರಂಭದಲ್ಲಿಯೇ ಹೀಗೆ ಪ್ರಚಾರ ಗಿಟ್ಟಿಸಿದವರು ಬಹಳ ಕಡಿಮೆ. ಅದೆಲ್ಲ ತೋರಿಕೆ ಯಾಗಿತ್ತೇ? ಆಳದಲ್ಲಿ ಅವರು ದುಃಖಿಯಾಗಿದ್ದರೇ? ಸಿಗದ ಪ್ರೇಮಕ್ಕಾಗಿ ಹಂಬಲಿಸುವ 'ದೇವದಾಸ'ನಾಗಿದ್ದರೇ? ತಾವು ದಾಳಿ ಮಾಡುವ, ಬಗ್ಗು ಬಡಿಯುವ ಶ್ರೀಮಂತರಂತೆಯೇ ತಾವೂ ಆಗಬೇಕು ಎಂದು ಅವರು ಒಳಗೊಳಗೇ ಅಂದುಕೊಂಡಿದ್ದರೇ? ಅವರು ಅಸಹಜ ರೀತಿಯಲ್ಲಿ ಸತ್ತ ಸಂಜೆ ವಾಣಿಜ್ಯ ಇಲಾಖೆಯಲ್ಲಿ ಉನ್ನತ ಅಧಿಕಾರಿ ಯಾಗಿರುವ ನನ್ನ ಸ್ನೇಹಿತರೊಬ್ಬರ ಜತೆಗೆ ಮಾತನಾಡುತ್ತಿದ್ದೆ.

ಆಗಾಗಲೇ ಟೀವಿ ಚಾನೆಲ್‌ಗಳು ಅಬ್ಬರಿಸಲು ಆರಂಭಿಸಿದ್ದುವು. ಅವರು ತಣ್ಣಗಿನ ದನಿಯಲ್ಲಿ ಹೇಳಿದರು : ನಿಮ್ಮ ಟೀವಿಗಳಲ್ಲಿ ಬರುವಂಥದು ಏನಾದರೂ ಆಗಿದೆ ಎಂದು ನನಗೆ ಅನಿಸುವುದಿಲ್ಲ. ಡಿ.ಕೆ.ರವಿ ಒಬ್ಬ ಅದ್ಭುತ ಅಧಿಕಾರಿ. ಆದರೆ, ಅವರು ತಮ್ಮ ಒಳಗಿನ ಏನೋ ಒಂದು ಕೊರತೆಯನ್ನು ತುಂಬಿಕೊಳ್ಳಲು ಹಾಗೆಲ್ಲ ಮಾಡುತ್ತಿದ್ದರು ಎಂದು ನನಗೆ ಅನಿಸುತ್ತದೆ. ಅವರಿಗೆ ಮತ್ತೆ ಜಿಲ್ಲಾಧಿಕಾರಿ ಆಗಬೇಕು ಎಂಬ ಕನಸು ಇದ್ದಂತಿತ್ತು.

ಜಿಲ್ಲಾಧಿಕಾರಿ ಆಗಿರುವುದು ಎಂದರೆ ಇಡೀ ಜಿಲ್ಲೆಯ 'ರಾಜ'ನಾಗಿದ್ದಂತೆ ಎಂಬುದು ಅವರಿಗೆ ಗೊತ್ತಿತ್ತು. ಅದೆಲ್ಲ ಏನೇ ಇದ್ದರೂ ಅವರ ಸಾವು ದುರದೃಷ್ಟಕರ' ಎಂದು ಅವರು ಮಾತು ಮುಗಿಸಿದರು.

ಡಿ.ಕೆ.ರವಿ ಯಾವುದಕ್ಕಾಗಿ ಹಂಬಲಿಸುತ್ತಿದ್ದರು ಎಂದು ನಮ್ಮ ಪತ್ರಿಕೆಯಲ್ಲಿಯೇ ವರದಿ ಮಾಡಿದ್ದೇವೆ. ಆ ವರದಿಯನ್ನು ಬಹಳ ಮಂದಿ ನಂಬಲು ಸಿದ್ಧರಿಲ್ಲ ಎಂದು ಅದಕ್ಕೆ ಬಂದಿರುವ ಉಗ್ರ ಪ್ರತಿಕ್ರಿಯೆಯಿಂದಲೇ ಗೊತ್ತಾಗುತ್ತದೆ. ಏಕೆಂದರೆ ಡಿ.ಕೆ.ರವಿ ಕಾಪಾಡಿ ಕೊಂಡು ಬಂದಿದ್ದ ಬಿಂಬಕ್ಕೆ ಧಕ್ಕೆಯಾಗಿದೆ. ಅದು ರವಿ ಕಾಪಾಡಿಕೊಂಡು ಬಂದ ಬಿಂಬ ಮಾತ್ರವಲ್ಲ. ರವಿಯವರನ್ನು ಒಂದು ಆದರ್ಶ ಎಂದು ಸಮಾಜ ನಂಬಿದೆ. ಆ ನಂಬಿಕೆಯ ರೂಪದಲ್ಲಿ ಇರುವ ಬಿಂಬಕ್ಕೆ ಭಂಗ ಬಂದಿದೆ. ಅದನ್ನು ಅರಗಿಸಿಕೊಳ್ಳಲು ಸಮಾಜಕ್ಕೆ ಆಗುತ್ತಿಲ್ಲ! ಏಕೆಂದರೆ ಸಮಾಜಕ್ಕೆ ಅದು ಒಂದು ಭರವಸೆಯ, ಇದೀಗ ದೈವೀ ಸ್ವರೂಪ ತೆಗೆದುಕೊಳ್ಳುತ್ತಿರುವ ಬಿಂಬವಾಗಿತ್ತು.

ಅದು ಕೆಟ್ಟುದರ ವಿರುದ್ಧದ ಹೋರಾಟದ ಪ್ರತೀಕವಾಗಿತ್ತು. ರವಿ ಆತ್ಮಹತ್ಯೆ ಮಾಡಿ- ಕೊಂಡರು ಎಂಬ ಸುದ್ದಿಯನ್ನು ನಂಬಲು ಯಾರೂ ಸಿದ್ಧರಿರಲಿಲ್ಲ. ಅದು ಕೊಲೆ ಎಂದೇ ಎಲ್ಲರೂ ವಾದಿಸುತ್ತಿದ್ದರು. ಈಗಲೂ ವಾದಿಸುವವರು ಬಹಳ ಮಂದಿ ಇದ್ದಾರೆ. ಏಕೆಂದರೆ ರವಿ ಧೈರ್ಯದ ಸಂಕೇತದಂತೆ ಸಮಾಜಕ್ಕೆ ತೋರಿಸಿಕೊಂಡಿದ್ದರು. ಅಂಥವರನ್ನು ಮುಗಿಸಲು ಸಚಿವರು, ಶಾಸಕರು, ಪ್ರಭಾವಿಗಳು, ಭೂ ಮಾಫಿಯಾಗಳು, ಗೂಂಡಾಗಳು ಎಲ್ಲರೂ ಭರ್ಚಿ ಹಿರಿದು ನಿಂತಿದ್ದರು ಎಂದೇ ಟೀವಿ ಮಾಧ್ಯಮಗಳು ಬಿಂಬಿಸಿದುವು. ಜನರು ಅದನ್ನು ನಂಬಿದರು.

ಅಣ್ಣಾ ಹಜಾರೆ ಅವರ ಹೋರಾಟದ ನಂತರ ಯುವಕರಲ್ಲಿ ಒಂದು ಬಗೆಯ ವಿಶಿಷ್ಟ ಜಾಗೃತಿ ಉಂಟಾಗಿದೆ. ದೆಹಲಿಯಲ್ಲಿ ಕೇಜಿವಾಲ್ ಗೆಲುವು ಆ ಜಾಗೃತಿಯ ಫಲ. ರವಿ ಇನ್ನೂ 36ರ ಯುವಕ. ತಾವು ಮಾಡಲಾಗದ್ದನ್ನು ಅವರು ಮಾಡುತ್ತಿದ್ದಾರೆ ಎಂದು ಎಷ್ಟೋ ಮಂದಿ ಯುವಕ ಯುವತಿಯವರು ಅಂದುಕೊಂಡಿದ್ದರು. ಸಿನಿಮಾ ತೆರೆಯ ಮೇಲಿನ ಹೀರೊ ಎಂದಾದರೂ ಸೋಲಲು ಸಾಧ್ಯವೇ? ಎಷ್ಟು ಮಂದಿ ಕೇಡಿಗಳು ಎದುರು ಬಂದರೂ ಆತ ಲೀಲಾಜಾಲವಾಗಿ ಹೊಡೆದು ಉರುಳಿಸುವಾಗ ಆತನೇ ಸಾಯುವುದು ಎಂದರೆ ಏನು? ಯುವಕ-ಯುವತಿಯರಿಗೆ ಅರಗಿಸಿಕೊಳ್ಳಲು ಆಗಲಿಲ್ಲ. ಬೀದಿಗೆ ಬಂದರು. ರವಿ ಸಾವಿನ ತನಿಖೆಯನ್ನು ಸಿಬಿಐಗೆ ವಹಿಸಬೇಕು ಎಂಬ ಆಗ್ರಹಕ್ಕೆ ಕೆಲವೇ ಗಂಟೆಗಳಲ್ಲಿ ಎರಡು ಲಕ್ಷ ಮಂದಿ ಸಹಿ ಮಾಡಿದರು.

ರವಿ ಅವರನ್ನು ಕೋಲಾರದಿಂದ ದಿಢೀರ್ ಎಂದು ವರ್ಗ ಮಾಡಿದಾಗ ಅವರ ಹೆಸರು ಹಾಕದೆ ಅವರ ಕುರಿತು ಬರೆದಿದ್ದ ನನ್ನ ಅಂಕಣ ವಾಟ್ಸ್ ಆಪ್‌ನಲ್ಲಿ ಓಡಾಡತೊಡಗಿತು. ಎಲ್ಲೆಲ್ಲಿಗೋ ಹೋಗಿ ಮತ್ತೆ ನನಗೇ ವಾಪಸು ಬರುತ್ತಿತ್ತು! ಆದರೆ, ಮೊದಲು ಅದು ಎಲ್ಲಿಂದ ಹೊರಟಿತು ಎಂದು ನನಗೆ ಗೊತ್ತಿತ್ತು. ಹಾಗೆ ಮಾಡುವುದು ಅವರಿಗೆ ಬೇಕಾಗಿತ್ತು. ವಾಟ್ಸ್ ಆಪ್‌ನಲ್ಲಿ ರವಿ ಸಾವಿನ ಸುತ್ತ ಪ್ರಶ್ನೆಗಳು, ಅನುಮಾನಗಳು, ಕಪೋಲ ಕಲ್ಪಿತ ಕಥೆಗಳು

ಓಡಾಡಿದ್ದಕ್ಕೆ ಲೆಕ್ಕವೇ ಇರಲಿಲ್ಲ... ಯಾವಾಗಲೂ ಸೇವಾ ನಿಯಮಗಳ ಸಂಕೋಲೆಗಳಲ್ಲಿ ಬಂಧಿತರಂತೆ ಕಾಣುವ ಐಎಎಸ್ ಅಧಿಕಾರಿಗಳು ಕೂಡ ಟೀವಿ ಸ್ಟುಡಿಯೊಗಳಲ್ಲಿ ಕುಳಿತು ಸರ್ಕಾರದ ವಿರುದ್ಧ ಮಾತನಾಡಿದರು.

ಇನ್ನೊಂದು ಕಡೆ ಸರ್ಕಾರವನ್ನು, ಅದಕ್ಕಿಂತ ಹೆಚ್ಚಾಗಿ ವೈಯಕ್ತಿಕವಾಗಿ ಸಿದ್ದರಾಮಯ್ಯ ಅವರನ್ನು ಬಡಿಯಲು ವಿರೋಧ ಪಕ್ಷಗಳ ಕೈಗೆ ದೊಡ್ಡ ಕೋಲು ಸಿಕ್ಕಿತು. ಅಲ್ಲಿಯವರೆಗೆ ರವಿ ಅವರ ಜಾತಿ ಯಾವುದು ಎಂದು ನಮಗೆ ಗೊತ್ತಿರಲಿಲ್ಲ. ಇದ್ದಕ್ಕಿದ್ದಂತೆ ಅವರು ಒಕ್ಕಲಿಗರು ಇರಬಹುದೇ ಎಂದು ಅನಿಸತೊಡಗಿತು. ಅನೇಕ ತಿಂಗಳಿಂದ ಪರಸ್ಪರ ಮುಖ ಕೂಡ ನೋಡದ ಎಚ್.ಡಿ.ಕುಮಾರಸ್ವಾಮಿ ಮತ್ತು ಚೆಲುವರಾಯ ಸ್ವಾಮಿ ಅಕ್ಕಪಕ್ಕ ಕುಳಿತು ಪತ್ರಿಕಾಗೋಷ್ಠಿ ನಡೆಸುತ್ತಿದ್ದಂತೆಯೆ ಹೌದು ರವಿ ಒಕ್ಕಲಿಗರೇ ಎಂದು ಖಚಿತವಾಯಿತು.

'ಅಹಿಂದ' ರಾಜಕಾರಣ ಮಾಡಲು ಹೊರಟ ಸಿದ್ದರಾಮಯ್ಯ ಅವರಿಗೆ ಬಡಿಯಲು ಒಕ್ಕಲಿಗರ ಜತೆಗೆ ಲಿಂಗಾಯತರೂ ಸೇರಿಕೊಂಡರು. 'ಕೋಮುವಾದಿ'ಗಳು ಮತ್ತು 'ಜಾತ್ಯತೀತವಾದಿ'ಗಳು ಒಂದಾದರು. ಜತೆಯಾಗಿ ಪಾದಯಾತ್ರೆ ಮಾಡುತ್ತೇವೆ ಎಂದರು. ಅದುವರೆಗೆ ತೆರೆಯ ಹಿಂದೆ ಇದ್ದ ಸ್ವಾಮೀಜಿಗಳು ಕೂಡ ಮುಂದೆ ಬಂದು ಕಾಣಿಸಿಕೊಂಡರು. ವಿರೋಧಿ ಪಾಳೆಯ ಹೀಗೆ ಬಲಗೂಡಿಸಿ ಕೊಳ್ಳುತ್ತಿದ್ದಾಗ ಮುಖ್ಯಮಂತ್ರಿ ಸಿದ್ದರಾಮಯ್ಯ ನಿಶ್ಯಸ್ತರಾಗಿದ್ದಂತೆ ಕಂಡರು. ರಾಜಕೀಯದಲ್ಲಿ ಸಮಯಪ್ರಜ್ಞೆ ಬಹಳ ಮುಖ್ಯವಾದುದು. ರವಿ ಅವರ ಸಾವಿನಲ್ಲಿ ಸಿದ್ದರಾಮಯ್ಯ ಅವರ ಕೈವಾಡ ಇದೆ ಎಂದು ಯಾರೂ ಹೇಳಿರಲಿಲ್ಲ.

ನಿಜವೋ ಸುಳ್ಳೋ, ಅವರ ಸಂಪುಟದ ಒಬ್ಬಿಬ್ಬ ಪ್ರಭಾವಿ ಸಚಿವರ ಕೈವಾಡ ಇರಬಹುದು ಎಂಬ ಅನುಮಾನ ಇತ್ತು. ಯಾರೂ ಕೇಳುವುದಕ್ಕಿಂತ ಮುಂಚೆಯೇ ಸಿಬಿಐ ವಿಚಾರಣೆಗೆ ಅನುಮತಿ ಕೊಟ್ಟು ಬಿಟ್ಟಿದ್ದರೆ ಈಗ ವಿರೋಧ ಪಕ್ಷಗಳಿಗೆ ಸಿಕ್ಕಿರುವ ರಾಜಕೀಯ ಲಾಭವನ್ನು ಸಿದ್ದರಾಮಯ್ಯ ತಾವೇ ಪಡೆಯ ಬಹುದಿತ್ತು. ಕಳ್ಳಕಾಕರ ರಕ್ಷಣೆ ಮಾಡುತ್ತಿದೆ ಎಂದು ಕಾಂಗ್ರೆಸ್ ಪಕ್ಷಕ್ಕೆ ವಿನಾಕಾರಣ ಕಳಂಕ ಅಂಟಿಕೊಳ್ಳುವುದನ್ನು ತಪ್ಪಿಸಬಹುದಿತ್ತು. ಸೋನಿಯಾ ಗಾಂಧಿಯವರು ಹೇಳಿದ್ದರಿಂದ ಸಿಬಿಐಗೆ ವಹಿಸುವುದು ಅನಿವಾರ್ಯವಾಯಿತು ಎಂದೇ ಈಗ ಎಲ್ಲರೂ ಹೇಳುತ್ತಿರುವುದು.

ಸಿದ್ದರಾಮಯ್ಯ ವ್ರತವೂ ಕೆಟ್ಟರು. ಸುಖವನ್ನೂ ಪಡಲಿಲ್ಲ. ಸಿಬಿಐಗೆ ವಹಿಸುವುದಕ್ಕಿಂತ ಮುಂಚೆ ವಿಧಾನಸಭೆಯಲ್ಲಿ ಮಾತನಾಡಿದ ಸಿದ್ದರಾಮಯ್ಯ ಅವರಿಗೆ ಎಲ್ಲಿಲ್ಲದ ಸಿಟ್ಟು ಬಂದಿತ್ತು. ಅವರಿಗೆ ತಾನು ಸೋತೆ ಎಂದು ಅನಿಸಿತ್ತು. ಅವರು ಒಂಟಿಯಾಗಿದ್ದಾರೆಯೇ? ಅವರ ಪರವಾಗಿ, ಅವರ ಸರ್ಕಾರದ ಪರವಾಗಿ ಇಡೀ ಒಂದು ವಾರ ಅವರ ಸಂಪುಟದ ಸದಸ್ಯರೇ ಮಾತನಾಡಲಿಲ್ಲ. ಪಕ್ಷದ ಅಧ್ಯಕ್ಷರಂತೂ ದೂರವೇ ಉಳಿಯಿತು.

'ಅಸ್ಮಿತೆ'ಯ ರಾಜಕಾರಣ ಮಾಡಲು ಹೊರಟಿರುವ ಸಿದ್ದರಾಮಯ್ಯ ಕೇವಲ 'ತುಷ್ಟಿಕರಣ'ದ ರಾಜಕೀಯ ಮಾತ್ರ ಮಾಡಿದಂತೆ ಆಗಿದೆಯೇ? 'ಅಸ್ಮಿತೆ'ಯ ರಾಜಕಾರಣ ಒಂದು ನಂಟನ್ನು ಸೃಷ್ಟಿಸುತ್ತದೆ. ಪ್ರಬಲ ಜಾತಿಗಳು

ಒಂದು ಕಡೆ ತಮ್ಮ ಶಕ್ತಿಯನ್ನು ಕ್ರೋಡೀಕರಿಸಿಕೊಳ್ಳುವಾಗ 'ಅಹಿಂದ' ವರ್ಗದ ಜಾತಿಗಳು ಒಟ್ಟಾಗಿ ಎದುರಿಗೆ ನಿಲ್ಲಬೇಕಿತ್ತು.



ಹಾಗೆ ಏಕೆ ಆಗಲಿಲ್ಲ ಎಂಬ ಪ್ರಶ್ನೆಗೆ ಸಿದ್ದರಾಮಯ್ಯನವರು ಈಗ ಉತ್ತರ ಕಂಡು ಕೊಳ್ಳಬೇಕು. ಅದು ರಾಜಕೀಯವಾಗಿ ಮತ್ತು ಕಾಂಗ್ರೆಸ್ಸಿನ ಭವಿಷ್ಯದ ದೃಷ್ಟಿಯಿಂದ ಬಹಳ ಮುಖ್ಯವಾದ ಪ್ರಶ್ನೆ.

ಆದರೆ, ಸಿದ್ದರಾಮಯ್ಯ ನಿಜವಾಗಿಯೂ ತತ್ತರಿಸಿ ಹೋಗಿದ್ದು ಟೀವಿ ಮಾಧ್ಯಮಗಳ ಅಟ್ಟಹಾಸಕ್ಕೆ, ಅಬ್ಬರಕ್ಕೆ ಮತ್ತು ಕಟಕಟೆಯಲ್ಲಿ ನಿಲ್ಲಿಸಿ ವಿಚಾರಣೆ ಮಾಡುವ ಅವಸರಕ್ಕೆ ಟೀವಿ ಮಾಧ್ಯಮಗಳಿಗೆ ಇಡೀ ಜೀವನ ಅಂದರೆ ಅದು ಒಂದೇ ದಿನ ಮತ್ತು ಅದು ಇವೊತ್ತು ಮಾತ್ರ ಎಲ್ಲವನ್ನು ಅವರು ಇಂದೇ ತೀರ್ಮಾನಿಸಿಬಿಡಬೇಕು. ಮಾಧ್ಯಮದವರಾಗಿ ನಾವು ಅಭಿಪ್ರಾಯ ರೂಪಿಸಬೇಕು ನಿಜ. ಆದರೆ, ಅದಕ್ಕಿಂತ ಹೆಚ್ಚಾಗಿ ಸತ್ಯದ ಹುಡುಕಾಟಕ್ಕೆ ನಾವು ಅನುವು ಮಾಡಿಕೊಡಬೇಕು. ಇಲ್ಲಿ ಬರೀ ಪತ್ರಿಕಾ ರಂಗ ಮಾತ್ರ ಇಲ್ಲ. ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗಗಳೂ ಇವೆ.

ನಾವು ಮಾಧ್ಯಮದವರು ಹೀಗೆ ಒಂದೇ ದಿನ ನಮಗೆ ಬೇಕಾದ ಪ್ರಕರಣವನ್ನು ದಾಖಲಿಸಿ, ವಿಚಾರಣೆಯನ್ನೂ ನಡೆಸಿ, ತೀರ್ಪನ್ನೂ ಕೊಟ್ಟು, ಗಲ್ಲಿಗೂ ಏರಿಸಿ ಬಿಡುವುದಾದರೆ ಉಳಿದ ಮೂರೂ ಅಂಗಗಳಿಗೆ ಕೆಲಸವೇ ಇಲ್ಲದಂತೆ ಆಗುತ್ತದೆ. ಪ್ರಜಾಪ್ರಭುತ್ವದಲ್ಲಿ ಎಲ್ಲ ಅಂಗಗಳೂ ಸರಿಯಾಗಿ ಕೆಲಸ ಮಾಡಬೇಕು. ಅದರಲ್ಲಿ ಏನೇನೋ ಕೊರತೆ ಇರಬಹುದು. ಹಾಗೆಂದು ಮಾಧ್ಯಮ ತನ್ನದಲ್ಲದ ವೇಷ ಹಾಕಿಕೊಳ್ಳಲು ಆಗುತ್ತದೆಯೇ? ನಮ್ಮ ಆಶಯ ಸರಿ ಇರಬಹುದು, ಆದರೆ ನಾವು ಹೊರಟ ದಾರಿ ಸರಿ ಇಲ್ಲ.

ಏಕೆಂದರೆ ಎಲ್ಲ ಅನ್ಯಾಯಗಳಿಗೆ ಅದೇ ದಿನವೇ ನಾವು ತೀರ್ಪು ನೀಡಿ ಬಿಟ್ಟರೆ ನ್ಯಾಯಾಲಯದ ಮುಂದೆ ಈಗಲೂ ನ್ಯಾಯಕ್ಕಾಗಿ ನಿಂತವರ ಪರವಾಗಿ ನಾವು ದನಿ ಎತ್ತುವುದು ಯಾವಾಗ? ನಿರ್ಭಯಳ ಮೇಲೆ ಅತ್ಯಾಚಾರ ಆಗಿ ಎಷ್ಟು ತಿಂಗಳಾಯಿತು? ಆಕೆಯ ತಂದೆ ತಾಯಿಗೆ ಇದುವರೆಗೆ ನ್ಯಾಯ ಸಿಕ್ಕಿದೆಯೇ? ಆರೋಪಿಗಳ ವಿಚಾರಣೆ ಪೂರ್ಣಗೊಂಡಿದೆಯೇ? ಆದರೆ, ನಾವು ಆರೋಪಿಗಳಿಗೆ ನೇಣು ಹಾಕಿ ಆಗಿದೆಯಲ್ಲ? ಅಂದರೆ, ಇದೆಲ್ಲ ತಾರ್ಕಿಕ ಅಂತ್ಯ ಕಾಣುವುದು ನಮಗೆ ಬೇಡವೇ? ಇದೆಲ್ಲ ವ್ಯವಧಾನ ಕೇಳುವ ವಿಚಾರ.

ಮತ್ತೆ ಅದೇ ವ್ಯವಧಾನ ಇಲ್ಲದ ಸಮಸ್ಯೆ. ರವಿ ಅವರ ಸಾವಿನ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಿ ಬಿಟ್ಟರೆ ಎಲ್ಲವನ್ನೂ ಸಾಧನೆ ಮಾಡಿದಂತೆ ಆಯಿತೇ? ಸರ್ಕಾರವನ್ನು ಅದಕ್ಕಾಗಿ ಬಗ್ಗಿಸಿದ್ದೇ ಒಂದು ದೊಡ್ಡ ಸಾರ್ಥಕತೆ

ಎಂದು ಬಿಂಬಿಸುವುದು ಸರಿಯೇ? ಅದ- ರಿಂದ ರವಿ ಕುಟುಂಬಕ್ಕೆ ನ್ಯಾಯ ಸಿಕ್ಕಂತೆ ಆಯಿತೇ? ಅಥವಾ ಎಲ್ಲೆಲ್ಲೂ ಒಡಕಲು ಬಿಂಬಗಳೇ ಇವೆಯೇ?

**29-3-2015**



# ಅರಸು ಆಗ ಹೊರಟ

# ನಾಯಕನ ಕಷ್ಟಗಳು...

ನಮ್ಮ ಉದ್ದೇಶಗಳು ಸರಿ ಇರಬಹುದು, ಅದರಲ್ಲಿ ನಾವು ಪ್ರಾಮಾಣಿಕರೂ ಆಗಿರಬಹುದು; ಆದರೆ, ಅವುಗಳ ಅನುಷ್ಠಾನದಿಂದ ಆಗುವ ಪರಿಣಾಮಗಳ ಕಡೆಗೆ ಗಮನ ಇಲ್ಲದೇ ಇದ್ದರೆ ನಮಗೆ ಅಷ್ಟೇ ಏಟಾಗುವುದಿಲ್ಲ. ಉದ್ದೇಶಕ್ಕೂ ಏಟು ಬೀಳುತ್ತದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಏಕಪಕ್ಷೀಯ ತೀರ್ಮಾನಗಳು ಮತ್ತು ಅದರಿಂದ ಆಗುತ್ತಿರುವ ಪರಿಣಾಮಗಳು ಈಗ ಇದೇ ಕಥೆಯನ್ನು ಹೇಳುತ್ತಿವೆ.

ಅವರಿಗೆ ಗೊತ್ತಿದೆ, ಇದು ತಾವು ಮುಖ್ಯಮಂತ್ರಿ ಗಾದಿಯಲ್ಲಿ ಇರುವ ಕೊನೆಯ ಅವಕಾಶ ಎಂದು. ಅದನ್ನು ಅವರು ಹೇಳಿಯೂ ಬಿಟ್ಟಿದ್ದಾರೆ. ಕೊನೆಯ ಅವಕಾಶದಲ್ಲಿ ಏನಾದರೂ ಮಹತ್ತರವಾದುದನ್ನು ಮಾಡಬೇಕು ಎಂದೂ ಅವರಿಗೆ ತೀವ್ರವಾಗಿ ಅನಿಸುತ್ತಿರಬಹುದು. ಅದಕ್ಕೆ ಅವರು ಉದ್ದಕ್ಕೂ ಅನುಭವಿಸಿದ ಸಂಕಟಗಳು, ಅವಮಾನಗಳು, ಅವರು ಹುಟ್ಟಿ ಬೆಳೆದ ಸಾಮಾಜಿಕ ಪರಿಸರ ಎಲ್ಲವೂ ಕಾರಣವಾಗಿರಬಹುದು.

ಒಂದು ಸಾರಿ ಅಧಿಕಾರದಲ್ಲಿ ಕುಳಿತುಕೊಂಡಾಗ ಜನರಿಗೆ ತಾನು ನೆನಪಿನಲ್ಲಿ ಉಳಿಯುವಂತೆ ಏನಾದರೂ ಮಾಡಬೇಕು ಎಂಬ ಕಳಕಳಿಯೂ ಅವರಲ್ಲಿ ಇರಬಹುದು. ಆದರೆ, ಏನು ಮಾಡಬೇಕು ಮತ್ತು ಹೇಗೆ ಮಾಡಬೇಕು ಮತ್ತು ಅದರ ಪರಿಣಾಮಗಳು ಏನಾಗಬಹುದು ಎಂಬುದರ ತಿಳಿವಳಿಕೆ ಇಲ್ಲದೇ ಇದ್ದರೆ ಈಗ ಆದಂತೆಯೇ ಆಗುತ್ತದೆ. ಅಂತಿಮವಾಗಿ ಅವರು ಮಾಡಬೇಕು ಎಂದು ಅಂದುಕೊಂಡುದನ್ನು ಮಾಡಲು ಆಗುವುದಿಲ್ಲ. ಆಗ ಸೋಲು ಮತ್ತು ಹತಾಶೆ ಕಾಡಲು ತೊಡಗುತ್ತದೆ.

ಎಲ್ಲ ರಾಜಕಾರಣಿಗಳು 'ಪಕ್ಷಪಾತ'ದ ನಿರ್ಣಯಗಳನ್ನೇ ತೆಗೆದುಕೊಳ್ಳುತ್ತಾರೆ. ಆ ಮೂಲಕವೇ ಅವರು ಒಂದು ಮತಬ್ಯಾಂಕ್ ಸೃಷ್ಟಿ ಮಾಡಿಕೊಳ್ಳಲು ಹುನ್ನಾರ ಹಾಕುತ್ತಾರೆ. ಎಲ್ಲರಿಗೂ ಒಳ್ಳೆಯದು ಮಾಡುತ್ತೇವೆ ಎಂಬ ಕವಚದ ಒಳಗೆ ಯಾರಿಗೋ ಕೆಲವರಿಗೆ ಹೆಚ್ಚು ಒಳ್ಳೆಯದು ಮಾಡಲು ಹೊರಡುವುದು ಅವರ ತಂತ್ರಗಾರಿಕೆ. ಅದರಿಂದ ಮತಬ್ಯಾಂಕ್ ಏಕತ್ರೀಕರಣಗೊಳ್ಳುತ್ತದೆ ಎಂಬುದು ಅವರ ನಂಬಿಕೆ.

ಕರ್ನಾಟಕದಲ್ಲಿ ಇದನ್ನು ಆರಂಭ ಮಾಡಿದವರು ದೇವರಾಜ ಅರಸು. 1972 ರಿಂದ 77 ಮತ್ತು 78ರಿಂದ 80ರವರೆಗೆ ಅವರು ಮುಖ್ಯಮಂತ್ರಿ ಆಗಿದ್ದರು. ಬಲಿಷ್ಠ ಲಿಂಗಾಯತ ಸಮುದಾಯದ ಕೈಯಿಂದ ಅವರು ಅಧಿಕಾರ ಕಿತ್ತುಕೊಂಡಿದ್ದರು. ಆ ಸಮುದಾಯ 16 ವರ್ಷಗಳ ಕಾಲ ನಿರಂತರವಾಗಿ ಏಕೀಕೃತ ಕರ್ನಾಟಕ ರಾಜ್ಯವನ್ನು ಆಳಿತ್ತು. ಅರಸು ಬೇರೆ ದಾರಿ ತುಳಿಯಬೇಕಿತ್ತು. ಅವರು ಸ್ವತಃ ಇಂದಿರಾ ಗಾಂಧಿ ನೇತೃತ್ವದ ಕಾಂಗ್ರೆಸ್‌ನ ರಾಜ್ಯ ಘಟಕದ ಅಧ್ಯಕ್ಷರಾಗಿ ಪಕ್ಷವನ್ನು ಅಧಿಕಾರಕ್ಕೆ ತಂದಿದ್ದರು.

ಅದಕ್ಕಾಗಿಯೇ ಅವರು ಸರ್ಕಾರದಲ್ಲಿ ಪ್ರಶ್ನಾತೀತ ನಾಯಕರಾಗಿದ್ದರು. ಅವರ ಅಧಿಕಾರದ ಅವಧಿ ಈಗಲೂ ನೆನಪಿನಲ್ಲಿ ಉಳಿದಿರುವುದಕ್ಕೆ ಮುಖ್ಯವಾಗಿ ಎರಡು ಕಾರಣ: ಒಂದು, ಭೂ ಸುಧಾರಣೆ. ಎರಡು, ಹಿಂದುಳಿದ ವರ್ಗಗಳಿಗೆ ಸಿಕ್ಕ ಮೀಸಲಾತಿ, ಎರಡೂ ಕ್ರಮಗಳು ಬದುಕು ಕಟ್ಟುವ ದಾರಿಗಳಾಗಿದ್ದುವು. ಆಗ ನೇಮಕಗೊಂಡ ಹಿಂದುಳಿದ ವರ್ಗಗಳ ನೌಕರರು ಈಗ ನಿವೃತ್ತಿಯ ಅಂಚಿನಲ್ಲಿ ಇದ್ದಾರೆ. ಅಂದರೆ ಒಂದು ತಲೆಮಾರು ಅರಸು ಅವರಿಗೆ ಆಜೀವ ಕೃತಜ್ಞವಾಗಿದೆ.

ಸಿದ್ದರಾಮಯ್ಯ ಅವರೇನು ತಮ್ಮ ರಾಜಕೀಯ ಜೀವನದ ಉದ್ದಕ್ಕೂ ಅರಸು ಅವರ ಅನುಯಾಯಿ ಆಗಿದ್ದವರಲ್ಲ. ಹಾಗೆ ನೋಡಿದರೆ ಅವರು ಎದುರು ಪಾಳೆಯದಲ್ಲಿಯೇ ಇದ್ದವರು. ಆದರೆ, ಅವರ ತಲೆಯಲ್ಲಿ ಯಾರೋ ವಂದಿಮಾಗಧರು 'ನೀವೂ ಅರಸು ಆಗಬೇಕು' ಎಂದು ಹುಳು ಬಿಟ್ಟಂತೆ ಕಾಣುತ್ತದೆ. ಅದರಲ್ಲಿಯೂ ಒಳ್ಳೆಯ ಉದ್ದೇಶವೇ ಇರಬಹುದು. ಆದರೆ, ಒಬ್ಬ ನಾಯಕ ಹುಟ್ಟಿ ಬರುವುದಕ್ಕೆ, ಅವರ ನಿರ್ಣಯಗಳು ಕಾಲದ ಪರೀಕ್ಷೆಗೆ ಒಳಪಟ್ಟು ಉಳಿಯುವುದಕ್ಕೆ, ಒಂದು ಸಂದರ್ಭ ಎಂದು ಇರುತ್ತದೆ.

ಬಹುಶಃ ಅದು ಕುದಿಯುವಿಕೆ, ಮಥನ, ಮಥನದ ನಂತರ ಬರುವ ಅಮೃತವನ್ನು ಇನ್ನಾರೋ ಕುಡಿಯುತ್ತ ಆರಾಮವಾಗಿ ಇದ್ದರೆ ಮಥನದಲ್ಲಿ ಹೊರ ಬಂದ ಹಾಲಾಹಲವನ್ನು ಕುಡಿಯಲು ಇನ್ನಾರೋ ಸಿದ್ಧರಿರಬೇಕಾಗುತ್ತದೆ. ಅರಸು ಅವರು ಅಧಿಕಾರದಲ್ಲಿ ಇದ್ದಷ್ಟು ಕಾಲ ಇಂಥ ಕಠಿಣ ನಿರ್ಣಯಗಳನ್ನು ತೆಗೆದುಕೊಂಡು ಅನುಭವಿಸಿದ ಕಷ್ಟ ನಿಷ್ಠುರಗಳು ಈಗ ಇತಿಹಾಸದಲ್ಲಿ ದಾಖಲಾಗಿವೆ. ಆದರೆ, ಅವರು ಆಗ ತೆಗೆದುಕೊಂಡ ನಿರ್ಣಯಗಳು ಕಾಲದ ನಿಕಷದಲ್ಲಿ ಗೆದ್ದು ಉಳಿದುಕೊಂಡಿವೆ.

ಅದಕ್ಕೆ, ಬಲಿಷ್ಠ ಅರಸು ಅವರ ಹಿಂದೆ ಇಂದಿರಾ ಗಾಂಧಿಯವರಂಥ ಪ್ರಶ್ನಾತೀತ ನಾಯಕಿಯೂ ನಿಂತಿದ್ದರು. ಇಂದಿರಾ ಅವರಿಗೆ ಅಖಂಡ ಜನಬೆಂಬಲವಿತ್ತು. ಜನರು ಅವರನ್ನು ಹುಚ್ಚರಂತೆ ಅನುಸರಿಸುತ್ತಿದ್ದರು. ಹೀಗಾಗಿ ಅರಸು ಅವರು ತಮ್ಮ



ತೀರ್ಮಾನಗಳನ್ನು ಎಂಥ ವಿರೋಧದ ನಡುವೆಯೂ ಉಳಿಸಿಕೊಳ್ಳಲು ಯಶಸ್ವಿಯಾದರು. ಇಂದಿರಾ ಅವರ ಬೆಂಬಲ ಇರುವ ತನಕ ಅವರಿಗೆ ಅಧಿಕಾರ ನಷ್ಟದ ಭಯವೂ ಇರಲಿಲ್ಲ.

ಆದರೆ, ಅವರು ಒಂದು ಸಾರಿ ಇಂದಿರಾ ಅವರಿಂದ ದೂರವಾದ ಕೂಡಲೇ ಅವರ ಎಲ್ಲ ವರ್ಚಸ್ಸು ಅಡಗಿ ಹೋಯಿತು, ಅಧಿಕಾರ ಕಳೆದುಕೊಂಡರು. ಜನರೂ ಅವರನ್ನು ಸಾರಾಸಗಟಾಗಿ ತಿರಸ್ಕರಿಸಿದರು. ಇದು ಇತಿಹಾಸ. ಅದು ಯಾವಾಗಲೂ ಕ್ರೂರವಾಗಿಯೇ ಇರುತ್ತದೆ. ಸಿದ್ದರಾಮಯ್ಯನವರು ಅರಸು ಅವರ ಹಾಗೆ ಪ್ರಶ್ನಾತೀತ ನಾಯಕರಲ್ಲ. ಅವರು ಮುಖ್ಯಮಂತ್ರಿಯಾಗಿ ಆಯ್ಕೆಯಾಗಿರಬಹುದಾದರೂ ಇದು ಅವರಿಗೆ ಸಿಕ್ಕ ಜನಾದೇಶವಲ್ಲ. ಅವರ ಜಾಗದಲ್ಲಿ ಇನ್ನು ಬೇರೆ ಯಾರಾದರೂ ಮುಖ್ಯಮಂತ್ರಿ ಆಗಿರಬಹುದಿತ್ತು.

ಮೊದಲು ಈ ಮಿತಿಯನ್ನು ಅವರು ಅರ್ಥ ಮಾಡಿಕೊಳ್ಳಬೇಕು. ಸಿದ್ದರಾಮಯ್ಯನವರು ಏನೇ ತೀರ್ಮಾನ ತೆಗೆದುಕೊಂಡರೂ ಮೊದಲು ಅವರು ಪಕ್ಷವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಮತ್ತು ತಮ್ಮ ಸಂಪುಟದಲ್ಲಿ ತಮಗೆ ಆಪ್ತರಾದ ಎಂಟು ಹತ್ತು ಸಚಿವರನ್ನಾದರೂ ಸದಾ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. 'ಉಧೋ' 'ಉಧೋ' ಎನ್ನುವ ಶಾಸಕರು ಬೆನ್ನ ಹಿಂದೆ ಇರಬೇಕು. ಈಗ ಹಾಗೆ ಆಗುತ್ತಿಲ್ಲ. ಏನೋ ಮಾಡಲು ಹೋಗಿ ಏನೋ ಮಾಡಿದಂತೆ ಆಗುತ್ತಿದೆ. ಇಲಿ ಹೊಡೆಯಲು ಹೋಗಿ ಗಣಪನಿಗೆ ಏಟು ಬೀಳುತ್ತಿದೆ.

ಗಣಪನಿಗೆ ಏಟು ಬಿದ್ದರೆ ಏನು ವ್ಯತಿರಿಕ್ತ ಪರಿಣಾಮ ಆಗಬೇಕೋ ಅದೇ ಆಗುತ್ತಿದೆ. ಗಣಪನಿಗೇ ಹೊಡೆಯಬೇಕು ಎಂದು ಇದ್ದರೆ ಅದಕ್ಕೆ ಬಹಳ ಧೈರ್ಯ ಬೇಕು ಮತ್ತು ಆ ತೀರ್ಮಾನದಿಂದ ಹಿಂದೆ ಸರಿಯಬಾರದು. ಈಗ ಏನಾಗುತ್ತಿದೆ ಎಂದರೆ ಮುಖ್ಯಮಂತ್ರಿಗಳು ಇಲಿಗೆ ಹೊಡೆಯಲು ಹೊರಟಿದ್ದಾರೆಯೇ ಅಥವಾ ಗಣಪನಿಗೆ ಹೊಡೆಯಲು ಹೊರಟಿದ್ದಾರೆಯೇ ಎಂದೇ ತಿಳಿಯುತ್ತಿಲ್ಲ. ಕೊನೆಗೆ ಅವರಿಗೆ ಇಲಿ ಹೊಡೆಯಲೂ ಆಗುತ್ತಿಲ್ಲ.

ಮೂಢ ನಂಬಿಕೆ ನಿಷೇಧ ಮಸೂದೆ ವಿಚಾರದಲ್ಲಿ ಅದೇ ಆಯಿತು. ಯಾರಿಗೋ ಕೆಲವರಿಗೆ ಕರಡು ತಯಾರಿಸಲು ಹೇಳುವಾಗಲೇ ಅದರ ಪರಿಣಾಮಗಳು ಏನಾಗಬಹುದು ಎಂದು ಅವರು ಯೋಚಿಸಬೇಕಿತ್ತು. ಮತ್ತೆ ಅದೇ ಸಮಸ್ಯೆ, ಉದ್ದೇಶ ಒಳ್ಳೆಯದು. ಆದರೆ, ಅದರ ಪರಿಣಾಮ ಏನಾಗಬಹುದು ಎಂಬುದರ ವಿವೇಚನೆ ಇರಲಿಲ್ಲ.

ಕರಡು ಪ್ರತಿ ಸ್ವೀಕರಿಸಿದ ನಂತರ ಹುಟ್ಟಬಹುದಾದ ವಿವಾದವನ್ನು ಅವರು ಮೊದಲೇ ಅಂದಾಜು ಮಾಡಬೇಕಿತ್ತು. ನಂತರ ಹೆಜ್ಜೆ ಇಡಬೇಕಿತ್ತು. ಈಗ ಏನಾಯಿತು ಎಂದರೆ ಮೂಢ ನಂಬಿಕೆ ನಿಷೇಧಿಸಬೇಕು ಎಂಬ ಅವರ ಪ್ರಾಮಾಣಿಕ ನಂಬಿಕೆಗೇ ಹಿನ್ನಡೆಯಾಯಿತು.

ಆದರೆ, ಇದೇ ಮಾತನ್ನು ಅವರ 'ಬಿದಾಯಿ' ಮತ್ತು 'ಹಿಂದುಳಿದ ಮತ್ತು ಅಲ್ಪಸಂಖ್ಯಾತ ಮಕ್ಕಳ ಪ್ರವಾಸ'ದ ತೀರ್ಮಾನದಲ್ಲಿ ಹೇಳಲು ಆಗದು. ಅವರ ಉದ್ದೇಶವೇ ಪ್ರಾಮಾಣಿಕವಾಗಿ ಇರಲಿಲ್ಲ. 'ಬಿದಾಯಿ' ಯೋಜನೆ ಪ್ರಕಟಿಸುವಾಗ ಮುಂದಿನ ಲೋಕಸಭೆ ಚುನಾವಣೆ ಅವರ ಗಮನದಲ್ಲಿ ಇದ್ದಿರಬಹುದು. ಅದು ತಕ್ಕ ಮಟ್ಟಿಗೆ ಅವರ ನೆರವಿಗೆ



ಬಂದರೂ ಬರಬಹುದು. ಆದರೆ, ಕೇವಲ ಹಿಂದುಳಿದ ಮತ್ತು ಅಲ್ಪಸಂಖ್ಯಾತ ಮಕ್ಕಳನ್ನು ಪ್ರವಾಸಕ್ಕೆ ಕಳುಹಿಸಲು ತೆಗೆದುಕೊಂಡ ತೀರ್ಮಾನ ಶುದ್ಧ ಅವಿವೇಕದ್ದು, ಸಿದ್ದರಾಮಯ್ಯ ಸರ್ಕಾರಿ ಶಾಲೆಯಲ್ಲಿ ಓದಿದವರು. ಅವರ ನಂತರದ ನಮ್ಮ ತಲೆಮಾರಿನವರೂ ಅಲ್ಲಿಯೇ ಓದಿದವರು. ಅಲ್ಲಿ ಜಾತಿಭೇದ ಎಂಬ ಮಾತೇ ಇರಲಿಲ್ಲ. ನಾವೆಲ್ಲ ಒಂದೇ ಬಳ್ಳಿಯ ಹೂಗಳ ಹಾಗೆ ಇದ್ದೆವು. ಈಗಲೂ ಸರ್ಕಾರಿ ಶಾಲೆಗಳು ಹಾಗೆಯೇ ಇರುತ್ತವೆ. ಅಂಥ ಮಕ್ಕಳಲ್ಲಿ ಎಂಥ ಭೇದ? ಯಾರಿಗಾದರೂ ಇಂಥ ಯೋಚನೆಗಳು ಏಕೆ ಬರುತ್ತವೆ? ಸಿದ್ದರಾಮಯ್ಯ ಈ ತೀರ್ಮಾನವನ್ನೂ ಬದಲಿಸಿದ್ದಾರೆ. ಅಂದರೆ ಏನು ಅರ್ಥ? ಒಂದೋ ಅವರಿಗೆ ತಾನು ಏನು ಮಾಡಲು ಹೊರಟಿದ್ದೇನೆ ಎಂದು ಗೊತ್ತಿಲ್ಲ ಅಥವಾ ಗೊತ್ತಿದ್ದರೂ ಅದಕ್ಕೆ ಗಟ್ಟಿಯಾಗಿ ಅಂಟಿಕೊಳ್ಳಲು ಆಗುತ್ತಿಲ್ಲ. ಅಂದರೆ ಏನು ಅರ್ಥ? ಸೋಲು, ಹತಾಶೆಯೇ ಅಲ್ಲವೇ?

ಅನುಮಾನ ಬೇಡ, ಸಿದ್ದರಾಮಯ್ಯ ಅವರ ಮುಂದೆ ಕಠಿಣ ಸವಾಲು ಇದೆ. ಅದು ಅವರು ಮುಂದಿನ ವರ್ಷ ಎದುರಿಸಬೇಕಿರುವ ಲೋಕಸಭೆ ಚುನಾವಣೆ. ಅದು ಅವರಿಗೆ ಅಗ್ನಿ ಪರೀಕ್ಷೆ. ಲೋಕಸಭೆ ಚುನಾವಣೆ ಆದ ಕೂಡಲೇ ಅವರು ಅಧಿಕಾರ ಕಳೆದುಕೊಳ್ಳುತ್ತಾರೆ ಎಂಬ 'ಅಪಶಕುನದ ಭವಿಷ್ಯ'ವನ್ನು ಸಿದ್ದರಾಮಯ್ಯ ಸುಳ್ಳು ಮಾಡಬೇಕಿದೆ. ತಮ್ಮನ್ನು ಮುಖ್ಯಮಂತ್ರಿ ಮಾಡಿದ ಪಕ್ಷಕ್ಕೆ ಅವರು ಮುಂಬರುವ ಮಹತ್ವದ ಚುನಾವಣೆಯಲ್ಲಿ ಬಾಹುಬಲ ತುಂಬ ಬೇಕಿದೆ.

ಜತೆಗೆ ತಮ್ಮ ನಾಯಕತ್ವವನ್ನೂ ಭದ್ರ ಮಾಡಿಕೊಳ್ಳಬೇಕಿದೆ. ಅದಕ್ಕೆ ಅವರ 'ಅಸ್ಮಿತೆ' ರಾಜಕಾರಣ ಮಾಡಬೇಕಾಗಿದೆ. ಮತಬ್ಯಾಂಕ್ ಅನ್ನು ಸೃಷ್ಟಿಸಬೇಕಿದೆ. ಆದರೆ, ಇದು “ವಿಭಜನೆ'ಯ ಕಾಲ, ಇನ್ನೊಂದು ಅರ್ಥದಲ್ಲಿ 'ಧ್ರುವೀಕರಣ'ದ ಕಾಲ. ಒಂದು ಕಡೆ ಮತಗಳ 'ಧ್ರುವೀಕರಣ' ನಡೆದರೆ ಅದರ ಪರಿಣಾಮ ಇನ್ನೊಂದು ಕಡೆ

'ಧ್ರುವೀಕರಣ'ಕ್ಕೆ ಕಾರಣವಾಗುತ್ತದೆ. ಇನ್ನೊಂದು 'ಧ್ರುವೀಕರಣ' ಮಾಡುವ ಶಕ್ತಿಗಳು ಮೆತ್ತಗೇನೂ ಇಲ್ಲ. ಮತ್ತು ಆ ಶಕ್ತಿಗಳಿಗೆ ಧ್ವನಿ ದೊಡ್ಡದಿದೆ. ಸಿದ್ದರಾಮಯ್ಯ 'ಧ್ರುವೀಕರಣ' ಮಾಡಲು ಹೊರಟಿರುವ ಮತಗಳಿಗೆ ಬಾಯಿಯೇ ಇಲ್ಲ.

ಆಗ ಅವರು ಇನ್ನೂ ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಅವರು ತಮ್ಮ ಉದ್ದೇಶದಲ್ಲಿ ರಾಜಿ ಮಾಡಿಕೊಳ್ಳುವುದು ಬೇಡ. ಆದರೆ, ಅದರಿಂದ ಸಮಾಜದಲ್ಲಿ ಸಂಘರ್ಷ ಹುಟ್ಟಿಕೊಳ್ಳದಂತೆ ನೋಡಿಕೊಳ್ಳಬೇಕು. ರೋಗಕ್ಕೆ ಮಾತ್ರೆ ಕೊಡಲೇಬೇಕು. ಮಾತ್ರೆ ಸಿಹಿಯಾಗಿ ಇರುವಂತೆ ನೋಡಿಕೊಳ್ಳಬೇಕು. ಕಹಿ ಮಾತ್ರೆ ಕೊಟ್ಟು ದಕ್ಕಿಸಿಕೊಳ್ಳುವ ಶಕ್ತಿ ಸಿದ್ದರಾಮಯ್ಯ ಅವರಿಗೆ ಇದ್ದಂತೆ ಇಲ್ಲ. ಸಿದ್ದರಾಮಯ್ಯ ಮುಖ್ಯವಾಗಿ ಆಡಳಿತಗಾರ. ಅಧಿಕಾರಕ್ಕೆ ಬರುವಾಗ ಅವರ ಮುಖ್ಯ ಗುರಿ ಕೂಡ ಆಡಳಿತವನ್ನು ಸರಿದಾರಿಗೆ ತರುವುದೇ ಆಗಿತ್ತು. ಅವರು ಈಗ ಸೃಷ್ಟಿ ಮಾಡಿಕೊಂಡಿರುವ ವಿವಾದಗಳ ನಡುವೆ ಆಡಳಿತದ ಕಡೆಗೆ ಗಮನ ಕೊಡಲು ಆಗುವುದಿಲ್ಲ. ಸುಮ್ಮನೆ ಸಮಯ ಹಾಳಾಗುತ್ತದೆ. ಅವರು ಅಧಿಕಾರಕ್ಕೆ ಬಂದ ದಿನವೇ ಬೊಕ್ಕಸದ ಮೇಲೆ ಭಾರಿ ಹೊರೆ ಹಾಕುವ 'ಅನ್ನ ಭಾಗ್ಯ' ಯೋಜನೆ ಪ್ರಕಟಿಸಿದ್ದಾರೆ. ಅದು



ರಾಜ್ಯದ ಬೊಕ್ಕಸದ ಮೇಲೆ ಈಗ ಹಾಕಿರುವ ಹೆಚ್ಚುವರಿ ಹೊರೆ ರೂ 3,500 ಕೋಟಿ. ಪತ್ರಿಕೆಗಳಲ್ಲಿ ಬಂದ ವರದಿಗಳ ಪ್ರಕಾರ ಈಗ ರಾಜ್ಯ ಸರ್ಕಾರ ಎದುರಿಸುತ್ತಿರುವ ವರಮಾನ ಖೋತಾ ರೂ 4,500 ಕೋಟಿ. ಅಂದರೆ ಒಟ್ಟು ರೂ 8,000 ಕೋಟಿ ಖೋತಾ. ಹಣಕಾಸು ಖಾತೆಯನ್ನೂ ನಿಭಾಯಿಸುತ್ತಿರುವ ಸಿದ್ದರಾಮಯ್ಯ ಅವರಿಗೆ ಇದು ಶುಭ ಸುದ್ದಿಯಲ್ಲ.

ಜೇಬಿನಲ್ಲಿ ಹಣವಿದ್ದರೆ ಹೇಗಾದರೂ ಖರ್ಚು ಮಾಡಬಹುದು. ಬೊಕ್ಕಸದಲ್ಲಿ ಹಣ ಇಲ್ಲದೇ ಇದ್ದರೆ, ಸರಿಯಾಗಿ ತೆರಿಗೆ ಸಂಗ್ರಹ ಆಗದೇ ಇದ್ದರೆ ಹಣಕಾಸು ಸಚಿವರಾಗಿ ಸಿದ್ದರಾಮಯ್ಯ ಸರಿಯಾಗಿ ಕೆಲಸ ಮಾಡಲು ಸಮರ್ಥರಾಗಲಿಲ್ಲ ಎಂದು ಅರ್ಥ. ಅವರು ಹಣಕಾಸು ಸಚಿವರಾಗಿ ಸರಿಯಾಗಿ ಕೆಲಸ ಮಾಡಲು ಆಗದೇ ಇದ್ದರೆ ಮುಖ್ಯಮಂತ್ರಿಯಾ- ಗಿಯೂ ಸಮರ್ಪಕವಾಗಿ ಕೆಲಸ ಮಾಡಲು ಆಗುವುದಿಲ್ಲ. ತಮ್ಮ ಸಂಪುಟ ಸಹೋದ್ಯೋಗಿಗಳಿಗೆ 'ನೀವೇನು ಮಾಡುತ್ತಿದ್ದೀರಿ' ಎಂದು ಝುಂಕಿಸಿ ಕೇಳಲು ಆಗುವುದಿಲ್ಲ.

ಈಗ ಆಗಿರುವುದೂ ಅದೇ. ಮುಖ್ಯಮಂತ್ರಿಗಳು ಎಷ್ಟು ಆಕ್ರಮಣಕಾರಿಯಾಗಿದ್ದಾರೋ ಅಷ್ಟೇ ರಕ್ಷಣಾತ್ಮಕವಾಗಿಯೂ ಇದ್ದಾರೆ. ಪಕ್ಷದ ಅಧ್ಯಕ್ಷರು ಸಚಿವರ ಸಾಧನೆ ಅಳೆಯಲು ಹೊರಟಿದ್ದಾಗ ಸಿದ್ದರಾಮಯ್ಯ ಧೈರ್ಯ ಪ್ರದರ್ಶಿಸಲಿಲ್ಲ. ಅವರಿಗೆ ಏನೋ ಅಳುಕು. ಈ ಸರ್ಕಾರಕ್ಕೆ ಈಗ ಆರು ತಿಂಗಳು, ಆರು ತಿಂಗಳಲ್ಲಿ ಅವರ

ಸಾಧನೆಗಳನ್ನು ಅಳೆಯಬಹುದು; ಅಥವಾ ಅದು ತೀರಾ ಚಿಕ್ಕ ಸಮಯ ಎಂದು ಹೇಳಿ ಅಳತೆ ಮಾಡುವುದನ್ನು ತಪ್ಪಿಸಬಹುದು.

ಸಿದ್ದರಾಮಯ್ಯ ಒಂದು ದಿನ ಅಧಿಕಾರ ಬಿಡಬೇಕಾಗುತ್ತದೆ. ಆಗ ತಾನು ಏನು ಮಾಡಿದೆ ಎಂದು ಹೇಳಬೇಕಾಗುತ್ತದೆ. ಏನು ಮಾಡಲು ಬಯಸಿದ್ದೆ ಎಂದು ಅಲ್ಲ. ಅವರು ಬಯಸಿದ್ದನ್ನು ಮಾಡಬೇಕು ಎಂದರೆ ಪಕ್ಷವನ್ನು, ಸಚಿವರನ್ನು ಮತ್ತು ಶಾಸಕರನ್ನು ಜತೆಗೆ ತೆಗೆದುಕೊಂಡು ಹೋಗಬೇಕಾಗುತ್ತದೆ. ಈಗ ಅವರು ಹಾಗೆ ಹೊರಟಿಲ್ಲ. ಏಕೆಂದರೆ 'ದೇವರಾಜ ಅರಸು' ಆಗ ಹೊರಟ ನಾಯಕನ ಪರವಾಗಿ ಯಾರು ಮಾತನಾಡುತ್ತಿದ್ದಾರೆ?

**17-9-2013**

23

# ಸಮುದ್ರ ಮಥನದ ಅಮೃತಕ್ಕೆ

# ಇನ್ನೂ ಕಾಯಬೇಕು.

ಅದು ಪ್ರೀತಿಯೇ? ಭಾವುಕತೆಯೇ? ಉನ್ಮಾದವೇ? ಸಮೂಹ ಸನ್ನಿಯೇ? ಅಥವಾ 'ಬಾಡಿಗೆ ಬಂಟರ ಹುಚ್ಚು ಪ್ರದರ್ಶನವೇ?

ತಮಿಳುನಾಡಿನ ಅಧಿನಾಯಕಿ ಜಯಲಲಿತಾ ಅವರ ಜಾಮೀನು ಅರ್ಜಿ ವಿಚಾರಣೆ ಆಗುತ್ತಿದ್ದಾಗ, ಅವರಿಗೆ ಜಾಮೀನು ಸಿಕ್ಕಿತು ಎಂದು ವದಂತಿ ಹಬ್ಬಿದಾಗ, ಇಲ್ಲ; ಅದು ತಿರಸ್ಕೃತವಾಯಿತು ಎಂದು ನಿಜ ಸುದ್ದಿ ಬಂದಾಗ ವ್ಯಕ್ತವಾದ ತಮಿಳಿಗರ ಪ್ರತಿಕ್ರಿಯೆಗೆ ಏನು ಹೇಳಬೇಕು?

ಜಯಲಲಿತಾ ಅವರಿಗೆ ಶಿಕ್ಷೆಯಾದ ಮತ್ತು ಅವರು ಪರಪ್ಪನ ಅಗ್ರಹಾರದ ಜೈಲು ಪಾಲಾದ ಸುದ್ದಿ ಕೇಳಿ ಆತ್ಮಹತ್ಯೆ ಮಾಡಿಕೊಂಡವರೇ ಹದಿನಾರು ಮಂದಿ ಕೆಲವರು ಬೆಂಕಿ ಹಚ್ಚಿಕೊಂಡು ಸತ್ತರು; ಇನ್ನು ಕೆಲವರು ತಮಗೆ ತಿಳಿದ ಹಾಗೆ ಸಾವಿನ ಹಾದಿ ಕಂಡುಕೊಂಡರು. ಮತ್ತೆ ಕೆಲವರು ತಲೆ ಬೋಳಿಸಿಕೊಂಡರು. ಬರೀ ಗಂಡಸರು ಏಕೆ ತಲೆ ಬೋಳಿಸಿಕೊಳ್ಳಬೇಕು ಎಂದು ಹೆಂಗಸರೂ ಅದನ್ನೇ ಮಾಡಿದರು. ಎದೆ ಬಡಿದುಕೊಂಡು, ನೆಲ ಬಡಿದು ಅತ್ತವರ ಲೆಕ್ಕ ಇಟ್ಟವರು ಯಾರು?

ಜಯಲಲಿತಾ ಜೈಲು ಸೇರಿದ್ದು ಏಕೆ? ಅವರಿಗೆ ನೂರು ಕೋಟಿ ರೂಪಾಯಿಗಳ ದಂಡ ಹಾಕಿದಾದ್ದರೂ ಏಕೆ? ಜಯಲಲಿತಾ ಅವರ ಬಳಿ ಒಂದಲ್ಲ ಎರಡಲ್ಲ 16,000 ಸೀರೆಗಳು ಇದ್ದುವು. ದಿನಕ್ಕೆ ಒಂದು ಸೀರೆಯಂತೆ ಉಟ್ಟರೂ 16,000ನೆಯ ಸೀರೆಯ ಸರದಿ ಬರುವುದು ಯಾವಾಗ? ಎಷ್ಟು ವರ್ಷಗಳ ನಂತರ? ಸುಮಾರು 43 ವರ್ಷಗಳ ನಂತರ! ಒಬ್ಬ ಮನುಷ್ಯ ನೆಮ್ಮದಿಯಿಂದ ಬದುಕಲು ಏನು ಬೇಕು? ಎಷ್ಟು ಬೇಕು? ಇದು ಬರೀ ರಾಜಕೀಯ ನಾಯಕ-ನಾಯಕಿಯರ ತೀರದ ದಾಹವೇ? ಅಥವಾ ನಮ್ಮಲ್ಲೂ ಇಂಥದೇ ರಕ್ಕಸ ದಾಹ ಇದೆಯೇ?



ಹಾಗಾದರೆ ಭ್ರಷ್ಟಾಚಾರ ಈಗ ಒಂದು ವಿಷಯವೇ ಅಲ್ಲವೇ? ಅಲ್ಲ ಎಂದು ನಮ್ಮ ದೇವೇಗೌಡರು ಹೇಳಿ ದಶಕಗಳೇ ಕಳೆದಿವೆ. ಅವರಿಗೆ ಇರುವಷ್ಟು ರಾಜಕೀಯ ಅನುಭವ ಯಾರಿಗೆ ಇದೆ? ರಾಜಕಾರಣಿಗಳು ತಮಗೆ ಬೇಕಾದಷ್ಟು ದುಡ್ಡು ಮಾಡಿಕೊಳ್ಳಲಿ, ಅದರಲ್ಲಿ ಒಂದಿಷ್ಟು ನಮಗೂ ಕೊಡಲಿ ಎಂದು ಜನರು ಬಯಸುತ್ತಿದ್ದಾರೆಯೇ? ರಾಜಕಾರಣದಲ್ಲಿ ನೈತಿಕತೆ ಎಂಬುದೆಲ್ಲ ಮಧ್ಯಮ ವರ್ಗದ ಹುಸಿ ಹಂಬಲವೇ?

ತಮಿಳರೇ ಬೇರೆ. ಅವರಿಗೆ ನಮ್ಮೆಲ್ಲರಿಗಿಂತ ಅಭಿಮಾನ ಜಾಸ್ತಿ. 1965ರಷ್ಟು ಹಿಂದೆ ಅವರು ತಮ್ಮ ರಾಜ್ಯವನ್ನು 'ತಮಿಳುನಾಡು' ಎಂದು ಕರೆದುಕೊಂಡರು. ಮೊದಲು ಅದು ಮದ್ರಾಸ್ ಆಗಿತ್ತು. ಓಡಿಶಾ ಬಿಟ್ಟರೆ ದೇಶದಲ್ಲಿ ಬೇರೆ ಯಾವ ರಾಜ್ಯದ ಹೆಸರೂ ಹೀಗೆ ಭಾಷೆಯ ಜತೆಗೆ ಸೇರಿಕೊಂಡಿಲ್ಲ. ತಮಿಳಿಗರಿಗೆ ಅವರ ಭಾಷೆಯನ್ನು ಎಷ್ಟು ಪುರಾತನ ಕಾಲದ ವರೆಗೆ ಎಳೆದುಕೊಂಡು ಹೋದರೂ ಸಮಾಧಾನವಿಲ್ಲ. ಒಂಬತ್ತನೇ ಶತಮಾನದ 'ಶಿಲಪ್ಪದಿಕಾರಂ' ಕೃತಿಯನ್ನು ಒಂದು ಸಾವಿರ ವರ್ಷಗಳಷ್ಟು ಹಿಂದೆ ತೆಗೆದುಕೊಂಡು ಹೋಗಿ ಇತಿಹಾಸ ನಿರ್ಮಿಸಿದವರು ಅವರು. ಈಗಲೂ ಅದು ಒಂದನೇ ಶತಮಾನದ ಕೃತಿ ಎಂದೇ ಅವರು ಹೇಳುತ್ತಾರೆ! ಅಂದರೆ ಕನ್ನಡದ ಮೊದಲ ಲಭ್ಯ ಗ್ರಂಥ 'ಕವಿರಾಜಮಾರ್ಗ'ಕ್ಕಿಂತ ಒಂದು ಸಾವಿರ ವರ್ಷದಷ್ಟು ಹಿಂದಿನ ಸಾಹಿತ್ಯ ತಮ್ಮದು ಎಂಬುದು ತಮಿಳಿಗರ ಹೆಮ್ಮೆ. ಹಾಗೆಲ್ಲ ಹೇಳಿಕೊಂಡೇ ಅವರು ಇಡೀ ದೇಶದಲ್ಲಿ ಎರಡನೆಯವರಾಗಿ ತಮ್ಮ ಭಾಷೆಗೆ ಶಾಸ್ತ್ರೀಯ ಭಾಷೆಯ ಸ್ಥಾನಮಾನವನ್ನು ಪಡೆದುಕೊಂಡು ಬಂದರು.

ಅವರ ಇಂಥ ಹುಚ್ಚು ಹೆಮ್ಮೆಗಳನ್ನು ಅಲ್ಲಿಯೇ ಪ್ರಾಧ್ಯಾಪಕರಾಗಿ ಪಾಠ ಮಾಡಿ ಪ್ರಿನ್ಸಿಪಾಲರಾಗಿ ನಿವೃತ್ತರಾದ ಬಿ.ಜಿ.ಎಲ್.ಸ್ವಾಮಿ ಅವರಷ್ಟು ಲೇವಡಿ ಮಾಡಿದವರು ಬೇರೆ ಯಾರೂ ಇರಲಾರರು. ಸ್ವಾಮಿಗಳು ಡಿ.ವಿ.ಗುಂಡಪ್ಪನವರ ಏಕೈಕ ಪುತ್ರ ತಮಿಳುನಾಡಿನಿಂದ ಕರ್ನಾಟಕಕ್ಕೆ ಬಂದ ಮೇಲೆ ತಮಿಳು ತಲೆಗಳ ನಡುವೆ' (1979) ಎಂಬ ಪುಸ್ತಕವನ್ನು ಅವರು ಬರೆದರು. ತಮಿಳಿಗರ ಭಾಷೆ, ಇತಿಹಾಸ, ಸಂಸ್ಕೃತಿ ಎಲ್ಲದರ ಹುಚ್ಚು ಮತ್ತು ಆಧಾರ ರಹಿತ ಅಭಿಮಾನವನ್ನು ಅವರು ಆ ಪುಸ್ತಕದಲ್ಲಿ ಆಧಾರ ಸಹಿತ ನುಚ್ಚು ನೂರು ಮಾಡಿದ್ದರು.

ಅಭಿಮಾನ ಇರುವಲ್ಲಿ ಎಚ್ಚರ ಎಂಬುದು ಇರುವುದಿಲ್ಲ. ಇಂಥದಕ್ಕೆಲ್ಲ ತಮಿಳಿಗರು ತಲೆ ಕೆಡಿಸಿಕೊಂಡವರೇ ಅಲ್ಲ. ಅನೇಕರಿಗೆ ಗೊತ್ತಿರಲಿಕ್ಕಿಲ್ಲ: ಅತಿ ಹೆಚ್ಚು ಆತ್ಮಹತ್ಯೆಗಳು ಆಗುವುದು ತಮಿಳುನಾಡಿನಲ್ಲಿ. ಇದು ತೀರಾ ಈಚಿನ ಅಂಕಿ ಅಂಶಗಳಿಂದ ಸಿಗುವ ಮಾಹಿತಿ, ಅವರ ಅಭಿಮಾನವನ್ನು ಬಡಿದು ಎಬ್ಬಿಸುವಂಥ ಅನೇಕ ಜನಪ್ರಿಯ ನಾಯಕರೂ ಆ ನಾಡಿನಲ್ಲಿ ಇದ್ದರು. ರಾಜಾಜಿ, ಕಾಮರಾಜ್ ಅವರಂಥ ಸರಳ ಸಜ್ಜನಿಕೆಯ ವಿವೇಕಿಗಳು ಪೆರಿಯಾರ್ ಅವರಂಥ ಪ್ರಖರ ವಿಚಾರವಾದಿಗಳು, ಅಣ್ಣಾ ದೊರೈ ಅವರಂಥ ಅಪ್ರತಿಮ ವಾಗ್ಮಿಗಳು, ಎಂ.ಜಿ.ಆರ್ ಅವರಂಥ ಜನಾನುರಾಗಿಗಳು, ಕರುಣಾನಿಧಿ ಅವರಂಥ ಚಾಣಾಕ್ಷರು ಅವರನ್ನು ಮೀರಿಸುವ ಜಯಲಲಿತಾ ಅವರಂಥ ನಾಯಕಿಯರು ಆ ನಾಡಿನಲ್ಲಿ ಹುಟ್ಟಿದ್ದಾರೆ. ಒಂದಲ್ಲ ಒಂದು ಭಾವನಾತ್ಮಕ ವಿಷಯವನ್ನು ತೆಗೆದುಕೊಂಡು ಜನರನ್ನು ಅವರು ಬಡಿದೆಬ್ಬಿಸಿದ್ದಾರೆ. ಪೆರಿಯಾರ್ ಅವರು ಉಚ್ಚ ವರ್ಗದ ವಿರೋಧಿ ಚಳವಳಿ ಮಾಡಿದರೆ ಅಣ್ಣಾ ದೊರೈ ಹಿಂದಿ ವಿರೋಧಿ ಚಳವಳಿಯ ಮುಂಚೂಣಿಯಲ್ಲಿ ಇದ್ದರು. ಜತೆಗೆ ಅಣ್ಣಾ ದೊರೆ ಅವರು ಒಂದು



ರೂಪಾಯಿಗೆ ಒಂದು ಕೆ.ಜಿಯಂತೆ ಅಕ್ಕಿಯನ್ನು ಕೊಟ್ಟವರು. ಅವರೇ 'ಅನ್ಯಭಾಗ್ಯ' ಯೋಜನೆಯ ಹರಿಕಾರರು. ಎಂ.ಜಿ.ಆರ್ ಎಂಥ ಜನಪ್ರಿಯ ನಾಯಕ ಎಂದರೆ ಅವರ ಅಂತ್ಯಸಂಸ್ಕಾರದಲ್ಲಿ ಹತ್ತು ಲಕ್ಷ ಜನ ಭಾಗವಹಿಸಿದ್ದರು. ಚೆನ್ನೈನಲ್ಲಿ ಅಣ್ಣಾ ದೊರೈ ಮತ್ತು ಎಂ.ಜಿ.ಆರ್ ಅವರ ದೊಡ್ಡ ದೊಡ್ಡ ಸಮಾಧಿಗಳು ಇವೆ. ಅವರಿಗಿಂತ ಬಹಳ ದೊಡ್ಡ ಮುತ್ಸದ್ದಿಗಳಾಗಿದ್ದ ರಾಜಾಜಿ ಮತ್ತು ಕಾಮರಾಜ್ ಅವರಿಗೆ ಆ ಭಾಗ್ಯವಿಲ್ಲ. ನಿಜ ಜೀವನದ ಗಾತ್ರದ ಜೀವಗಳ ಪಾಡೇ ಹೀಗೆ.

ಅಣ್ಣಾದೊರೈ ನಿಧನದ ನಂತರ ಚಲನಚಿತ್ರದ ಜತೆಗೆ ಪ್ರತ್ಯಕ್ಷ ಅಥವಾ ಪರೋಕ್ಷ ನಂಟು ಇರುವವರೇ ತಮಿಳುನಾಡು ರಾಜ್ಯವನ್ನು ಆಳಿದ್ದಾರೆ. ಮುಖ್ಯಮಂತ್ರಿಯಾಗಿದ್ದ ಎಂ.ಜಿ.ಆರ್ ಅಸ್ವಸ್ಥರಾಗಿ ಆಸ್ಪತ್ರೆ ಸೇರಿ ಎಷ್ಟೋ ದಿನಗಳ ಕಾಲ ಅವರಿಗೆ ಉತ್ತರಾಧಿಕಾರಿಯನ್ನೇ ಹುಡುಕಿರಲಿಲ್ಲ. ಹುಡುಕುವ ಸಾಹಸವನ್ನು ಯಾರು ಮಾಡಲು ಸಾಧ್ಯ? ಎಂ.ಜಿ.ಆರ್ ಅಂತ್ಯ ಸಂಸ್ಕಾರದ ಸಮಯದಲ್ಲಿಯೇ ಅವರ ಉತ್ತರಾಧಿಕಾರಿ ತಾನು ಎಂಬ ಇಂಗಿತ ನೀಡಿದ ಜಯಲಲಿತಾ ಜೈಲಿನಲ್ಲಿ ಇದ್ದಾರಾದರೂ ಮುಖ್ಯಮಂತ್ರಿ ಕುರ್ಚಿಯ ಮೇಲೆ ಪನ್ನೀರ್ ಸೆಲ್ವನ್ ಕುಳಿತಿಲ್ಲ. ಇದು ಬರೀ ಆರಾಧನಾಭಾವವೇ ಅಥವಾ ಭಯವೇ?

ತಮಿಳುನಾಡಿನಲ್ಲಿ ಸಾಮೂಹಿಕ ನಾಯಕತ್ವವೇ ಇದ್ದಂತೆ ಇಲ್ಲ. ಅದು ಯಾವ ಪಕ್ಷವಾದರೂ ಇರಲಿ ಒಬ್ಬನೇ ನಾಯಕ ಅಥವಾ ನಾಯಕಿ. ಅವರ ಮುಂದೆ ಇನ್ನು ಯಾರೂ ಉಸಿರು ಎತ್ತುವ ಹಾಗಿಲ್ಲ. ಒಂದು ರೀತಿ ಸರ್ವಾಧಿಕಾರ. ಜಯಲಲಿತಾ ಅವರ ಮುಂದೆ ಯಾವ ಗಂಡಸು ತಾನೇ ನಿಂತುಕೊಳ್ಳಲು ಸಾಧ್ಯ? ಜನರಿಗೆ ತೆರೆಯ ಮೇಲಿನ ನಿಜ ಜೀವನದ ಗಾತ್ರಕ್ಕಿಂತ ಬಹು ದೊಡ್ಡ ಜೀವನಗಳ ಬಗೆಗೆ ಒಳಗೊಳಗೇ ಆಸೆ, ಹುಚ್ಚು. ಎಂ.ಜಿ.ಆರ್ ಮತ್ತು ಜಯಲಲಿತಾ ಆ ಹುಚ್ಚಿನ ಮೇಲೆಯೇ ಆಟ ಆಡಿದರು. ಕರುಣಾನಿಧಿ ತೆರೆಯ ಮೇಲೆ ಕಾಣಿಸಿಕೊಂಡವರು ಅಲ್ಲ. ಆದರೆ, ಇಂಥ ನಾಯಕ-ನಾಯಕಿಯರಿಗಾಗಿ ಚಿತ್ರಕಥೆ ಬರೆದವರು ಅವರು. ಅವರಿಗೂ ಜನರ ನಾಡಿ ಮಿಡಿತ ಗೊತ್ತು.

ತಮಿಳುನಾಡಿನ ರಾಜಕಾರಣಿಗಳು ಬರೀ ಸಿನಿಮಾ ನೆಚ್ಚಿಕೊಂಡವರು ಅಲ್ಲ. ಅವರು ಕಾಲಕ್ಕೆ ತಕ್ಕಂತೆ ಬದಲಾದರು. ಸಮೂಹ ಮಾಧ್ಯಮಗಳ ಮಹತ್ವವನ್ನು ಬಹುಬೇಗ ಅರಿತುಕೊಂಡರು. ತಮ್ಮದೇ ವೃತ್ತಪತ್ರಿಕೆಗಳನ್ನು ಸ್ಥಾಪಿಸಿದರು. ಟೀವಿ ಚಾನೆಲ್‌ಗಳನ್ನು ಆರಂಭಿಸಿದರು. ಅದರಲ್ಲಿ ತಮ್ಮ ಮುಖವನ್ನೇ ಮತ್ತೆ ಮತ್ತೆ ತೋರಿಸಿದರು. ಅಣ್ಣಾ ದೊರೆ ಒಂದು ರೂಪಾಯಿಗೆ ಒಂದು ಕೆ.ಜಿ ಅಕ್ಕಿ ಕೊಟ್ಟು ಹಾಕಿದ ಜನಪ್ರಿಯ ಯೋಜನೆಗಳ ಪರಂಪರೆಯನ್ನು ಎಲ್ಲ ನಾಯಕರೂ ಮುಂದುವರಿಸಿದರು. ಈಗ ಜನರ ಮನೆಯಲ್ಲಿ ಇರುವ ಎಲ್ಲ ವಸ್ತುಗಳೂ ಹೀಗೆಯೇ ಸರ್ಕಾರ ಕೊಟ್ಟವುಗಳೇ. ಬಡವರಿಗೆ ಇನ್ನೇನು ಬೇಕು? ಜಯಲಲಿತಾ ತಮಗೆ ಬದುಕಿನ ಭದ್ರತೆ ಕೊಟ್ಟಳು ಎಂದು ಅವರು ನಿಜವಾಗಿಯೂ ಭಾವಿಸಿದರೆ ಅದನ್ನು ತಪ್ಪು ಎನ್ನಲು ಆಗದು. ನೈತಿಕತೆಯ ದ್ವಂದ್ವ ಇದು.

ಹಾಗಾದರೆ ಒಬ್ಬ ಮುಖ್ಯಮಂತ್ರಿ ಜೈಲು ಸೇರುವುದಕ್ಕೂ ಆ ನಾಡಿನ ಪ್ರತಿಷ್ಠೆಗೆ ಕಳಂಕ ಬರುವುದಕ್ಕೂ ಸಂಬಂಧ ಇಲ್ಲ ಎನ್ನಲು ಆದೀತೇ? ತಮಿಳುನಾಡಿನ ವರ್ಚಸ್ಸಿಗೆ, ಅಭಿಮಾನಕ್ಕೆ

ಬಹಳ ದೊಡ್ಡ ಪೆಟ್ಟು ಬಿದಿದ್ದೆ. ಜಯಲಲಿತಾ ಅವರ ಭ್ರಷ್ಟಾಚಾರ ಕುರಿತು ವಿಚಾರಣೆ ಮಾಡಿದ ನ್ಯಾಯಾಧೀಶರು ಐತಿಹಾಸಿಕ ತೀರ್ಪು ನೀಡಿದ್ದಾರೆ. ಎಲ್ಲ ಭ್ರಷ್ಟ ನಾಯಕರ ನಿದ್ದೆಗೆಡಿಸುವಂಥ ತೀರ್ಪು ಅದು. ಬರೀ ನಾಲ್ಕು ವರ್ಷ ಜೈಲುವಾಸ ಮಾತ್ರವಲ್ಲ, ನೂರು ಕೋಟಿ ರೂಪಾಯಿ ದಂಡವನ್ನೂ ಅವರು ವಿಧಿಸಿದ್ದಾರೆ. ಅವರಿಗೆ ಜಾಮೀನು ನಿರಾಕರಿಸಿದ ಹೈಕೋರ್ಟ್ ನ್ಯಾಯಮೂರ್ತಿಗಳೂ ಅಷ್ಟೇ ಐತಿಹಾಸಿಕವಾದ ಮಾತುಗಳನ್ನು ತಮ್ಮ ತೀರ್ಪಿನಲ್ಲಿ ಆಡಿದ್ದಾರೆ. 'ಭ್ರಷ್ಟಾಚಾರ ಎಂಬುದು ಮಾನವ ಹಕ್ಕುಗಳ ಉಲ್ಲಂಘನೆ' ಎಂದು ಅವರು ಸಾರಿದರು. ಆದರೂ ಒಂದು ದಿನ ಜಯಲಲಿತಾ ಜೈಲಿನಿಂದ ಬಿಡುಗಡೆಯಾಗಿ ಬರಬಹುದು; ಆದರೆ, ಅವರು ಮತ್ತೆ ರಾಜಕೀಯಕ್ಕೆ ಬರುವುದು ಸದ್ಯದ ಭವಿಷ್ಯದಲ್ಲಿ ಬಹಳ ಕಷ್ಟ.*

ತಮಿಳುನಾಡಿನವರು ಭಾವುಕರು ಇರಬಹುದು. ಆದರೆ, ಅವರು ಆಯ್ಕೆಯನ್ನು ಮುಕ್ತವಾಗಿ ಇಟ್ಟುಕೊಂಡಿದ್ದಾರೆ. ಪ್ರತಿ ಐದು ವರ್ಷಕ್ಕೆ ಒಮ್ಮೆ ಅವರು ಅಧಿಕಾರವನ್ನು ಒಂದು ಪಕ್ಷದಿಂದ ಮತ್ತೊಂದು ಪಕ್ಷದ ಕೈಗೆ ಕೊಟ್ಟಿದ್ದಾರೆ. ಆದರೆ, ಅವರ ಆಯ್ಕೆ ಎರಡು ತಮಿಳು ಪಕ್ಷಗಳ ನಡುವೆಯೇ ಇದೆ. ಜಯಲಲಿತಾ ಅವರು ಈಗ ಜೈಲು ಸೇರಿದ್ದಾರೆ. ಅವರ ಪಕ್ಷದ ಕೈಯಲ್ಲಿ ಇನ್ನೂ ಎರಡು ವರ್ಷ ಅಧಿಕಾರ ಇರುತ್ತದೆ. ಅದು ಹೇಗೆ ಅಧಿಕಾರ ನಡೆಯುತ್ತದೆ ಎಂಬುದು ಬೇರೆ ವಿಚಾರ. ಅದರಿಂದ ರಾಜ್ಯಕ್ಕೆ ಒಳ್ಳೆಯದಾಗುತ್ತದೆಯೇ ಇಲ್ಲವೇ ಎಂಬುದು ಇನ್ನೂ ಬೇರೆ ವಿಚಾರ. ಹಾಗೆಂದು ತೆರೆಯ ಹಿಂದೆ ಕಾಯುತ್ತ ನಿಂತ ಇನ್ನೊಂದು ತಮಿಳು ಪಕ್ಷದ ನಾಯಕರೂ ಸಾಚಾ ಅಲ್ಲ. ಅವರಲ್ಲಿಯೂ ಜೈಲಿಗೆ ಹೋಗಿ ಬಂದವರು ಇದ್ದಾರೆ. ಮುಂದೆ ಹೋಗುವವರೂ ಇರಬಹುದು. ಕರ್ನಾಟಕದಲ್ಲಿ ಮುಖ್ಯಮಂತ್ರಿಯಾಗಿದ್ದವರು ಜೈಲಿಗೆ ಹೋಗಿ ಬಂದರು. ಬಿಹಾರದಲ್ಲಿ ಅದೇ ಹುದ್ದೆಯಲ್ಲಿ ಇದ್ದವರು ಜೈಲಿಗೆ ಹೋಗಿ ಬಂದರು. ಹರಿಯಾಣದಲ್ಲಿ ಅದೇ ಹುದ್ದೆಯಲ್ಲಿ ಇದ್ದವರೇ ಈಗಲೂ ಹೋಗಿ ಬಂದು ಮಾಡುತ್ತಿದ್ದಾರೆ! ಹೀಗೆ ಜೈಲಿಗೆ ಹೋದವರೆಲ್ಲ ಅವರವರ ರಾಜ್ಯಗಳಲ್ಲಿ ಜನಪ್ರಿಯ ನಾಯಕರೇ. ಈಗಲೂ ಅವರು ಸಕ್ರಿಯವಾಗಿ ಇರುವ ನಾಯಕರೇ, ಮತ್ತೆ ಅಧಿಕಾರಕ್ಕೆ ಬರಬೇಕು ಎನ್ನುವವರೇ...

ನ್ಯಾಯಪೀಠ ಮತ್ತು ರಾಜಕಾರಣದ ನಡುವೆ ಬಹುದೊಡ್ಡ ಸಂಘರ್ಷ ನಡೆಯುತ್ತ ಇರುವಂತೆ ಕಾಣುತ್ತಿದೆ. ನ್ಯಾಯಪೀಠ ರಾಜಕಾರಣವನ್ನು ಸ್ವಚ್ಛ ಮಾಡಬೇಕು ಎನ್ನುತ್ತಿದೆ. ಅದು ಒಂದು ವಿಷಯವೇ ಅಲ್ಲ ಎನ್ನುವಂತೆ ರಾಜಕಾರಣ ನಡೆದಿದೆ. ಈಗ ಆಗುತ್ತಿರುವುದೆಲ್ಲ ಸಮುದ್ರ ಮಥನದ ಆರಂಭದಲ್ಲಿ ಬಂದ ಹಾಲಾಹಲವೇ? ಕೊನೆಯಲ್ಲಿ ಅಮೃತ ಬಂದಿತೇ? ಯಾರಿಗೆ ಗೊತ್ತು?

*ಮತ್ತೆ ಬಹುಬೇಗ ಅವರು ಅಧಿಕಾರಕ್ಕೆ ಬಂದರು.

**12.10.2014**

# ಜೈಲಿಗೆ ಹೋದವರು ನಮ್ಮ ನಾಯಕರೇ

# ಅಥವಾ ಅವರನ್ನು ಅಲ್ಲಿಗೆ ಕಳಿಸಿದವರೇ?

ಕೋಡಿಮಠದ ಸ್ವಾಮಿಗಳು ಆಗಾಗ ಹೇಳುವ ಭವಿಷ್ಯವನ್ನು ನಂಬುವವರುನಂಬಬಹುದು. ಬಿಡುವವರು ಬಿಡಬಹುದು. ಆದರೆ, ಈ ಸಾರಿ ಅವರು ಹೇಳಿದ್ದು ನಿಜವಾಗಿದೆ: 'ನೋಡುತ್ತ ಇರಿ, ಸಾಲಾಗಿ ಗಣ್ಯರು ಜೈಲಿಗೆ ಹೋಗುತ್ತಾರೆ ಎಂದಿದ್ದರು ಸ್ವಾಮಿಗಳು. ಪ್ರಾಮಾಣಿಕ'ರು ಎಂದು ಹೆಸರಾಗಿದ್ದ ಒಬ್ಬ ಐಎಎಸ್ ಅಧಿಕಾರಿಣಿ ಜೈಲು ಕಂಡು ಬಂದರು. ಇಬ್ಬರು ಶಾಸಕರು ಜೈಲಿನ ಬಾಗಿಲನ್ನು ತಟ್ಟುತ್ತಿದ್ದಾರೆ. ಇನ್ನೊಬ್ಬರು ತಪ್ಪಿಸಿಕೊಂಡು ಎಲ್ಲಿಯೋ ಇದ್ದಾರೆ. ಇವರೆಲ್ಲರ ನಾಯಕರು ಎನ್ನುವಂಥ ಒಬ್ಬರು ಈಗಾಗಲೇ ಜೈಲಿನಲ್ಲಿ ಇದ್ದು ಎರಡು ವರ್ಷಗಳಾದುವು.

ನಮ್ಮ ಭೂತ ನಮ್ಮನ್ನು ಕಾಡುತ್ತದೆ, ಎದ್ದು ಬಂದು ಕಾಡುತ್ತದೆ. ಕೆಲವು ವರ್ಷಗಳ ಹಿಂದೆ ನನ್ನ ಪರಿಚಯದ ಶಿಕ್ಷಣ ತಜ್ಞರೊಬ್ಬರು ಗಣಿ ಮಾಲೀಕರೊಬ್ಬರ ಮನೆಗೆ ಹೋಗಿದ್ದರು. ಅವರಿಗೇನೋ ಒಂದು ಶಿಕ್ಷಣ ಸಂಸ್ಥೆ ತೆರೆಯಬೇಕಿತ್ತು. ಇವರು ಸಲಹೆ ಕೊಡಲು ಹೋಗಿದ್ದರು. ಅದು ಇದು ಮಾತು ಬಂತು. ತಾವು ಎಂಥ ಬಡವರಾಗಿದ್ದೆವು. ಕಬ್ಬಿಣದ ಅದಿರಿಗೆ ಹೇಗೆ ಒಮ್ಮೆಲೆ ಬೆಲೆ ಬಂತು. ಕೇವಲ ಹತ್ತು ವರ್ಷಗಳಲ್ಲಿ ತಾವೆಲ್ಲ ಹೇಗೆ ಸಾವಿರಾರು ಕೋಟಿ ರೂಪಾಯಿಗಳ ಒಡೆಯರಾದೆವು ಎಂದೆಲ್ಲ ಅವರು ಕೊಚ್ಚಿಕೊಂಡರು. ಒಂದು ಕಾಲದಲ್ಲಿ ಬಡವರಾಗಿದ್ದ ತಾವು ಇದನ್ನೆಲ್ಲ ಪ್ರಾಮಾಣಿಕವಾಗಿಯೇ ಗಳಿಸಿದೆವು. ಎಂಬ ಧಾಟಿ ಅವರ ಮಾತಿನಲ್ಲಿ ಇತ್ತು.

ನನ್ನ ಪರಿಚಯದ ಶಿಕ್ಷಣ ತಜ್ಞರು ಅವರ ಮನೆಯ ಒಳಗೆಲ್ಲ ಒಂದು ಸಾರಿ ಕಣ್ಣು ಹಾಯಿಸಿದರು. ಅಲ್ಲಿ ಕಸವರ ಎಂಬುದು ಕಾಲಕಸದಂತೆ ಆಗಿತ್ತು. ಕುರ್ಚಿಗಳಿಗೆ, ಮೇಜುಗಳಿಗೆ ಎಲ್ಲೆಂದರಲ್ಲಿ ಅದು ಮೆತ್ತಿಕೊಂಡಿತ್ತು. ತಾಟು ತಂಬಿಗೆ ಬಿಡಿ. ಎಲ್ಲ ಬಂಗಾರದ್ದೇ. ಎಲ್ಲ ನೋಡಿ ಅವರು ದೊಡ್ಡದಾಗಿ ಒಂದು ಉಸಿರು ಬಿಟ್ಟು ಹೇಳಿದರು :

'ನೋಡಿ, ನೀವು ಯಾರೇ ಆಗಲಿ ಎಷ್ಟೇ ಕಷ್ಟಪಟ್ಟರೂ, ಪ್ರಾಮಾಣಿಕರಾಗಿ ದುಡಿದರೆ ಇಷ್ಟು ದುಡ್ಡು ಗಳಿಸಲು ಆಗುವುದಿಲ್ಲ. ಇದರಿಂದ ನಿಮಗೆ ಒಳ್ಳೆಯದಾಗುವುದಿಲ್ಲ. ಈಗ ನೀವು ಅಧಿಕಾರದಲ್ಲಿ ಇದ್ದೀರಿ. ನಿಮ್ಮ ಮಕ್ಕಳು ಹೆಮ್ಮೆಯಿಂದ ಶಾಲೆಗೆ ಹೋಗುತ್ತಾರೆ. ನಾಳೆ ಅವರು ತಲೆ ತಗ್ಗಿಸಿಕೊಂಡು ಶಾಲೆಗೆ ಹೋಗಬೇಕಾದ ಸ್ಥಿತಿ ಬರಬಹುದು' ಎಂದರು.

ನಾನು ಕಳೆದ ಭಾನುವಾರ ಬಳ್ಳಾರಿಗೆ ಹೋಗಿದ್ದೆ. ನನ್ನ ಸಹೋದ್ಯೋಗಿಯ ಬೈಕ್ ಮೇಲೆ ಕುಳಿತು ಊರೆಲ್ಲ ಸುತ್ತು ಹಾಕಿದೆ. ಬೇಕೆಂದೇ ರೆಡ್ಡಿ ಸೋದರರ ಮನೆಗಳ ಬಳಿ, ಶ್ರೀರಾಮುಲು ಅವರ ಮನೆ ಹಾಗೂ ಪಕ್ಷದ ಕಚೇರಿ ಬಳಿ ಸುತ್ತು ಹಾಕಿದೆ. ಅವರೆಲ್ಲ ಎಕರೆಗಟ್ಟಲೆ ಮನೆ ಕಟ್ಟಿಕೊಂಡಿದ್ದಾರೆ. ಆದರೆ, ಅದರ ಒಳಗೆ ಬೆಳಗುವ ದೀಪ ಇಲ್ಲ. ಜನಾರ್ದನ ರೆಡ್ಡಿಯವರು ಜೈಲಿಗೆ ಹೋಗಿ ಎರಡು ವರ್ಷಗಳೇ ಆಗಿವೆ. ಯಾವಾಗ ಹೊರಗೆ ಬರುತ್ತಾರೆ. ಗೊತ್ತಿಲ್ಲ. ತಮ್ಮ ಜೈಲಿಗೆ ಹೋದ ಲಾಗಾಯ್ತಿನಿಂದ ಅಣ್ಣ ಕರುಣಾಕರ ರೆಡ್ಡಿ ಅಜ್ಞಾತ ವಾಸಕ್ಕೆ ಹೋದಂತೆ ಹೋಗಿದ್ದಾರೆ. ಅವರನ್ನು ಸಾರ್ವಜನಿಕವಾಗಿ ಕಂಡವರು ಕಡಿಮೆ. ಗೆಳೆಯ ಜೈಲಿಗೆ ಹೋದ ನಂತರ ಶ್ರೀರಾಮುಲು ಅವರ ಆರ್ಭಟವೂ ಕಡಿಮೆ ಆಗಿದೆ. ಅವರು ಇನ್ನೂ ಬಿಜೆಪಿಯಲ್ಲಿ ಇದ್ದಾಗ ಬಳ್ಳಾರಿಯ ಮುಖ್ಯರಸ್ತೆಯಲ್ಲಿ 'ಅಕ್ಷರಧಾಮ ದೇವಾಲಯ'ವನ್ನು ಮೀರಿಸುವಂಥ (ಹಾಗೆಂದು ಕಟ್ಟಡ ಉದ್ಘಾಟಿಸಲು ಬಂದಿದ್ದ ಎಲ್.ಕೆ.ಅಡ್ವಾಣಿ ಉದ್ಧರಿಸಿದ್ದರಂತೆ) ಹಲವು ಮಹಡಿಗಳ ಒಂದು ಕಟ್ಟಡವನ್ನು ಕಟ್ಟಿ ಅದನ್ನು ಪಕ್ಷದ ಕಚೇರಿಗೆ ಬಿಟ್ಟುಕೊಟ್ಟಿದ್ದರು. ಅಲ್ಲಿ ನೆಲಮಹಡಿಯಲ್ಲಿ ಪ್ರತಿನಿತ್ಯ ಕನಿಷ್ಠ ಐನೂರು ಜನರಿಗೆ ಊಟದ ಸಮಾರಾಧನೆ ಆಗುತ್ತಿತ್ತು. ಕಟ್ಟಡದ ಸುತ್ತ ಯಾರಾದರೂ ಒಂದು ಎರಡು ಗಾಲಿಯ ಗಾಡಿಯನ್ನೂ ನಿಲ್ಲಿಸಲು ಆಗುತ್ತಿರಲಿಲ್ಲ. ಕಾವಲುಗಾರರು ಬಂದು ಓಡಿಸಿ ಬಿಡುತ್ತಿದ್ದರು. ಈಗ ಅಂಥ ಭವ್ಯ ಕಟ್ಟಡದಲ್ಲಿ ನೊಣ ಹೊಡೆಯುವವರೂ ಯಾರೂ ಇಲ್ಲ. ಹೊರಗೆ ಮಂಕು ಕವಿದಿದೆ. ಒಳಗೆ ನಿರ್ಜನವಾಗಿದೆ.

ಎಲ್ಲ ವೈಭವಗಳಿಗೆ ಒಂದು ಕೊನೆ ಇರುತ್ತದೆ ಎಂದು ಅನಿಸುತ್ತದೆ. ರಾಜ ಮಹಾರಾಜರೇ ಅಳಿದು ಹೋದರು. ಉಪ್ಪರಿಗೆಗಳು ತಿಪ್ಪೆಗಳಾದುವು. ರೆಡ್ಡಿ ಸೋದರರು ಮತ್ತು ಅವರ ಬಂಧುಗಳು ತಾವು ಆಧುನಿಕ ರಾಜರು ಎಂದೇ ಅಂದುಕೊಂಡಿದ್ದರು. ಅವರು ಹಾಗೆ ರಾಜ ವೈಭೋಗ ಅನುಭವಿಸಲು ದುಡ್ಡು ಕಾಲಕಸದಂತೆ ಅವರ ಮನೆಯಲ್ಲಿ ಬಂದು ಬಿದ್ದಿತ್ತು. ಅದಕ್ಕೆ ಬೆವರಿನ ಘಮ ಇರಲೇ ಇಲ್ಲ. ಅದನ್ನು ಹೇಗೆ ಖರ್ಚು ಮಾಡಬೇಕು ಎಂದು ಅವರಿಗೆ ಗೊತ್ತಿರಲಿಲ್ಲ. ಅವರ ಮೇಲೆ ತೆಲುಗು ಸಿನಿಮಾಗಳ ಪ್ರಭಾವ ಹೆಚ್ಚು ಆಗಿತ್ತೋ ಅಥವಾ ಆಳಿದ ಮಹಾರಾಜ ಕೃಷ್ಣದೇವರಾಯನ ಪ್ರಭಾವ ಹೆಚ್ಚು ಆಗಿತ್ತೋ ಗೊತ್ತಿಲ್ಲ. ಆದರೆ, ಎರಡೂ ಛಾಯೆಗಳು ಮಾತ್ರ ಅವರ ಒಟ್ಟು ಜೀವನ ರೀತಿಯಲ್ಲಿ ಪೈಪೋಟಿಗೆ ಬಿದ್ದವರಂತೆ ಢಾಳವಾಗಿ ಕಾಣುತ್ತಿದ್ದುವು. ಅರ್ಧ ರಾತ್ರಿಯಲ್ಲಿ ಕೊಡೆ ಹಿಡಿದುಕೊಂಡು ಬಿಟ್ಟರು.

ಕಾನ್ಸ್ ಟೆಬಲ್ ಮಕ್ಕಳಾಗಿ ತಮ್ಮ ಕಣ್ಣ ಮುಂದೆಯೇ ಬೆಳೆದವರು ಇದ್ದಕ್ಕಿದ್ದಂತೆ ಭವ್ಯ ಕಪ್ಪು ಕಾರುಗಳಲ್ಲಿ, ಹಿಂದೆ ಮುಂದೆ ಹತ್ತಾರು ವಾಹನಗಳ ನಡುವೆ ಜಬರ್‌ದಸ್ತಾಗಿ

ಓಡಾಡುವುದನ್ನು ಕಂಡು ಜನರೂ ತೆರೆದ ಬಾಯಿ ತೆರೆದುಕೊಂಡು ನಿಂತರು. ನಡು ಊರಿನಲ್ಲಿ ಏಕರೆಗಟ್ಟಲೆ ಮನೆಗಳು ಬಂದುವು. ಅದರ ಪಕ್ಕದಲ್ಲಿ ಗಾಜಿನ ಮನೆ ಬಂತು. ಅದರ ಪಕ್ಕದಲ್ಲಿ ಹೆಲಿಪ್ಯಾಡ್ ಬಂತು. ಹೆಲಿಪ್ಯಾಡಿನಿಂದ ಊರ ಹೊರಗೆ ಹಾರಿ ಹೋದರೆ ಅಲ್ಲಿ ಅವರಿಗಾಗಿ ಸ್ವಂತ ವಿಮಾನ ಕಾದು ನಿಂತಿರುತ್ತಿತ್ತು. ತಾವೂ ಹೀಗೆಯೇ 'ಬದುಕಬೇಕು' ಎಂದು ಕನಸುವ ಜನರು ಈ ನಾಯಕರ ಬೆನ್ನು ಹತ್ತಿದರು. ಆಕಾಶದಲ್ಲಿ ಕಾಣುವ ಹೆಲಿಕಾಪ್ಟರ್‌ನ ನೆರಳು ನೋಡುತ್ತ ಓಡಲು ತೊಡಗಿದರು!

ಗಣಿ ಮಾಲೀಕರು ಬರೀ ಗಣಿಗಾರಿಕೆ ಮಾಡಿಕೊಂಡು ಎಷ್ಟು ಮೆರೆದಾಡಿದ್ದರೂ ಯಾರೂ ತಲೆ ಕೆಡಿಸಿಕೊಳ್ಳಬೇಕಿರಲಿಲ್ಲ. ಅವರು ಜೈಲಿಗೆ ಹೋದರೂ ನಾವು ತಲೆ ಕೆಡಿಸಿಕೊಳ್ಳುತ್ತ ಇರಲಿಲ್ಲ. ಆದರೆ, ಬಳ್ಳಾರಿ ಜಿಲ್ಲೆಯಲ್ಲಿ ಮೆರೆದಾಡಿದವರೆಲ್ಲ ನಮ್ಮ ಜನಪ್ರತಿನಿಧಿಗಳಾಗಿದ್ದರು ಮತ್ತು ಅವರ ಆದಾಯ ಮೂಲ ಏನು ಎಂದು ನಮಗೆ ಗೊತ್ತಿರಬೇಕಿತ್ತು. ಈಗಲೂ ಅವರಲ್ಲಿ ಕೆಲವರು ನಮ್ಮ ಜನಪ್ರತಿನಿಧಿಗಳಾಗಿದ್ದಾರೆ. ಅವರಲ್ಲಿ ಮೂವರು ಈಗ ಸಮಸ್ಯೆಯಲ್ಲಿ ಇದ್ದಾರೆ ಮತ್ತು ಅವರೆಲ್ಲ ಬಳ್ಳಾರಿ ಜಿಲ್ಲೆಯವರೇ ಆಗಿದ್ದಾರೆ. ಇನ್ನು ಇಬ್ಬರ ಹೆಸರುಗಳ ಸುತ್ತ ಅನುಮಾನದ ಹುತ್ತ ಕಟ್ಟಿಕೊಳ್ಳತೊಡಗಿದೆ.

ಬೆವರು ಸುರಿಸದೇ ಬಂದ ದುಡ್ಡು ಮತ್ತು ಅನಾಯಾಸವಾಗಿ ಬಂದ ಅಧಿಕಾರ ಅಹಂಕಾರವನ್ನು ಬೆಳೆಸುತ್ತದೆ. ಬಳ್ಳಾರಿ ಮತ್ತು ಸುತ್ತಮುತ್ತಲಿನ ರಾಜಕೀಯವನ್ನು ಈ ಅಹಂಕಾರ ಆಳುತ್ತಿತ್ತು. ಅವರು ಇಡೀ ಬಳ್ಳಾರಿ ಜಿಲ್ಲೆಯನ್ನು ತಮ್ಮ ಜಹಗೀರು ಎಂದು ತಿಳಿದುಕೊಂಡಿದ್ದರು. ವಿರೋಧ ಪಕ್ಷದ ನಾಯಕನಿಗೆ 'ನೀನು ಬಳ್ಳಾರಿಗೆ ಬಾ ನೋಡಿಕೊಳ್ಳುತ್ತೇನೆ' ಎಂದು ಅವರು ಸವಾಲು ಹಾಕುತ್ತಿದ್ದರು. ಹಾಗೆ ಹೇಳುವಾತ ಪಡ್ಡೆ ಹುಡುಗನಷ್ಟು ಚಿಕ್ಕವನಾಗಿದ್ದ. ಆಗಿನ ವಿರೋಧ ಪಕ್ಷದ ನಾಯಕ ಈಗ ಮುಖ್ಯಮಂತ್ರಿಯೇ ಆಗಿದ್ದಾರೆ. ಆ ಪಡ್ಡೆ ಹುಡುಗ ಈಗ ಜೈಲಿನ ಬಾಗಿಲ ಹತ್ತಿರ ಇದ್ದಾನೆ.

ವಿಧಾನಸಭೆಯ ವಿರೋಧ ಪಕ್ಷದ ನಾಯಕನಿಗೆ, ಸದನದಲ್ಲಿಯೇ ಹಾಗೆ ಹೇಳುವವರಿಗೆ ಜನರು ಖರೀದಿಯ ವಸ್ತುವಿನಂತೆ ಕಾಣುತ್ತಿದ್ದರು. ಜನರೂ ಹಾಗೆಯೇ ನಡೆದುಕೊಳ್ಳುತ್ತ ಇದ್ದರು. ಸಾಮೂಹಿಕ ಮದುವೆ ಮಾಡಿ ಜನರ ಕಲ್ಯಾಣ ಮಾಡಿದೆವು ಎಂದು ತೋರಿಸುತ್ತಿದ್ದ ಗಣಿ ಮಾಲೀಕರಿಗೆ ಅದೇನು ದೊಡ್ಡ ಸಂಗತಿಯಾಗಿರಲಿಲ್ಲ. ಅದು ಅವರಿಗೆ ಸಾಮಾಜಿಕ ಹೊಣೆಗಾರಿಕೆಯ ನಿಭಾವಣೆಯೂ ಆಗಿರಲಿಲ್ಲ. ಅಲ್ಲಿಯೂ ತಮ್ಮ ವೈಭವವನ್ನೇ ಪ್ರದರ್ಶಿಸುತ್ತಿದ್ದರು. ಆಂಧ್ರಪ್ರದೇಶದಿಂದ ಕರೆಸಿದ ಚೆಲುವೆಯರು ಗಣಿ ಮಾಲೀಕರು ಬರುವ ದಾರಿಯ ಆಚೆ ಈಚೆ ನಿಂತು ಅವರ ಹಾದಿಯಲ್ಲಿ ಹೂ ಚೆಲ್ಲುತ್ತಿದ್ದರು. ಎಲ್ಲ ಥೇಟ್ ಕೃಷ್ಣದೇವರಾಯನ ಓಡೋಲಗದ ಹಾಗೆಯೇ!

ಈಗ ಸಿಬಿಐ ಬೆನ್ನು ಹತ್ತಿರುವ ಒಬ್ಬ ಶಾಸಕ, ಆಜಾನುಬಾಹು ವ್ಯಕ್ತಿ, ಚುನಾವಣೆಯಲ್ಲಿ ಅವರು ಗೆದ್ದ ಕೂಡಲೇ ಅವರ ಊರಿನ ರಸ್ತೆಗಳಲೆಲ್ಲ ಆಳೆತ್ತರದ ಫ್ಲೆಕ್ಸ್‌ಗಳು, 'ಮಯೂರ' ಸಿನಿಮಾದಲ್ಲಿ ನಟ ರಾಜ್‌ಕುಮಾರ್ ಧರಿಸಿದ ವೇಷಭೂಷಣ. ಒರೆಯಲ್ಲಿ ನೇತಾಡುವ ಖಡ್ಗ.

ಮುಖ ಮಾತ್ರ ಶಾಸಕನದು. ನಿಜ, ಗಣಿ ಮಾಲೀಕರ ಮನಃಸ್ಥಿತಿ ಖಂಡಿತ ಯಾರಾದರೂ ಮನಶ್ಯಾಸ್ತ್ರಜ್ಞರು ಅಧ್ಯಯನ ಮಾಡುವಂಥದು!

ಮೊನ್ನೆ ವಿಧಾನಸಭೆ ಚುನಾವಣೆ ನಡೆಯುತ್ತಿದ್ದಾಗ ಒಂದು ಕ್ಷೇತ್ರದಲ್ಲಿ ಚುನಾವಣೆ ಪ್ರಚಾರ ನೋಡಲು ಹೋಗಿದ್ದೆವು. ಅವರು ಬಿಜೆಪಿ ಅಭ್ಯರ್ಥಿ, ಮುಸಲ್ಮಾನರ ಓಣಿಯಲ್ಲಿ ನಾವು ಸುತ್ತಾಡುತ್ತಿದ್ದೆವು. ಕಟ್ಟೆಯ ಮೇಲೆ ಕುಳಿತವರೆಲ್ಲ ಇವರೇ ಗೆಲ್ಲುತ್ತಾರೆ ಎಂದು ಹೇಳುತ್ತಿದ್ದರು. ಒಂದು ಮನೆಯಲ್ಲಿ ಬಂದು ಆ ಅಭ್ಯರ್ಥಿ ಕುಳಿತುಕೊಂಡರು. ಕಡು ಬಿಸಿಲು. ಬೆವರು ಸುರಿಯುತ್ತಿತ್ತು. ಅವರ ಹಿಂದೆ ಮುಂದೆ ನಿಂತ ಕೆಲವರು ಇವರ ಮುಖ ಒರೆಸುತ್ತಿದ್ದರು. ಕೆಲವರು ಅವರಿಗೆ ಗಾಳಿ ಹಾಕುತ್ತಿದ್ದರು. ಚುನಾವಣೆಯಲ್ಲಿ ಅವರು ಗೆದ್ದರು ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಇದು ಎಂಥ ಪ್ರೀತಿ? ಅಭ್ಯರ್ಥಿ ಬೆವರು ಸುರಿಸಲೇಬೇಕು. ಅದನ್ನೇಕೆ ಇವರು ಒರೆಸಬೇಕು?

ಹಾಗಾದರೆ ರಾಜಕಾರಣಿಗಳು ಚುನಾವಣೆಯಲ್ಲಿ ಕೊಡುವ ದುಡ್ಡಿಗಾಗಿ ಜನರು ಪ್ರೀತಿ ತೋರಿಸುತ್ತಾರೆಯೇ? ತಮ್ಮ ಊರಿನ ಅಭಿವೃದ್ಧಿಗೆ ಶ್ರಮಿಸುವ ನಾಯಕನಿಗೆ ಇಂಥ ಮರ್ಯಾದೆ ಸಿಗುವುದಿಲ್ಲವೇ? ರಾಜಕಾರಣಿಗಳು ಎಲ್ಲಿಂದ ಹಣ ತರುತ್ತಾರೆ ಎಂದು ಜನರು ಯೋಚನೆ ಮಾಡುವುದಿಲ್ಲವೇ? ನಮ್ಮ ಕ್ಷೇತ್ರದ ಪ್ರತಿನಿಧಿ ಒಂದು ದಿನ ಜೈಲು ಸೇರಿದರೆ ಅದು ನಮಗೆ ನಾಚಿಕೆಯ ಸಂಗತಿ ಅಲ್ಲವೇ? ಈಗ ಇವನು ಹೊರಗೆ ಇದ್ದಾನೆ ನಾಳೆ ಒಳಗೆ ಹೋಗಬಹುದು ಎಂಬ ಅಳುಕು ನಮಗೆ ಬೇಡವೇ? ನಾನು ಈಗ ಹೊರಗೆ ಇದ್ದೇನೆ. ನಾಳೆ ನಾನು ಒಳಗೆ ಹೋಗಬಹುದು ಎಂಬ ಹೆದರಿಕೆ ರಾಜಕಾರಣಿಗಳಿಗೆ ಬೇಡವೇ?

ಭಾರತದ ಕಾನೂನು ವ್ಯವಸ್ಥೆ ಹೆದರಿಕೆ ಹುಟ್ಟಿಸುವ ಹಾಗೆ ಇಲ್ಲ. ಅದು ನಿಧಾನವಾಗಿದೆ. ಆದರೆ, ನ್ಯಾಯದ ನಿಧಾನ ಹೆಜ್ಜೆಗಳನ್ನು ಚುರುಕು ಮಾಡುವ ಎಸ್.ಆರ್.ಹಿರೇಮಠರಂಥವರು ನಾವೆಲ್ಲ ಹಾಳಾಗಿ ಹೋಗಿದೆ ಎನ್ನುವ ವ್ಯವಸ್ಥೆಯ ಒಂದು ಭರವಸೆ, ಅವರು ಮತ್ತು ಕೋಡಿ ಸ್ವಾಮಿಗಳು ಹೇಳಿದ ಭವಿಷ್ಯದ ನಡುವೆ ಒಂದು ಪರೋಕ್ಷ ಕೊಂಡಿ ಇದೆ. ಕೋಡಿಮಠದ ಸ್ವಾಮಿಗಳು ಸಾಲಾಗಿ ಜೈಲಿಗೆ ಹೋಗುತ್ತಾರೆ ಎಂದು ಹೇಳಿದವರೆಲ್ಲ ಈಗ ಹೋಗಿಯಾಯಿತೇ? ಅಥವಾ ಇನ್ನೂ ಹೋಗುವವರು ಇದ್ದಾರೆಯೇ? ಹಿರೇಮಠರು ಹೇಳುವುದನ್ನು ನಂಬಬಹುದಾದರೆ ಇನ್ನೂ ಇರಬಹುದು ಎಂದು ಅನಿಸುತ್ತದೆ!

ಪ್ರಶ್ನೆ ಅದಲ್ಲ. ಹೀಗೆ ಜೈಲಿಗೆ ಹೋಗುವವರು ನಮ್ಮ ನಾಯಕರೇ ಅಥವಾ ಅವರನ್ನು ಜೈಲಿಗೆ ಕಳಿಸುವವರು ನಮ್ಮ ನಾಯಕರೇ? ನಮ್ಮ ಯೋಚನಾಕ್ರಮದಲ್ಲಿಯೇ ಏನೋ ಸಮಸ್ಯೆ ಇದ್ದಂತೆ ಇದೆ. ಹಿರೇಮಠರನ್ನು ಅಥವಾ ಅವರಂಥ ಹೋರಾಟಗಾರರನ್ನು ನಮ್ಮ ನಾಯಕರು ಎಂದು ನಾವು ಏಕೆ ಒಪ್ಪಿಕೊಳ್ಳುವುದಿಲ್ಲ?

29.9.2013

# ಬಿಟ್ಟಿ ಅಕ್ಕಿ ಕೊಟ್ಟು...

# ಸ್ವಾಭಿಮಾನ ಕಿತ್ತುಕೊಂಡು..

ನನಗೆ ಮೂಲ ಹುಡುಕಬೇಕಿತ್ತು. ಇದೆಲ್ಲ ಯಾವಾಗ ಶುರುವಾಯಿತು ಎಂದು ಪತ್ತೆ ಮಾಡಬೇಕಿತ್ತು. ರಾಜಕೀಯ ಪಕ್ಷಗಳ ಪ್ರಣಾಳಿಕೆಗಳನ್ನು ತಿರುವಿ ಹಾಕುತ್ತ ಹೋದೆ. ಸರಿಯಾಗಿ ಮೂವತ್ತು ವರ್ಷಗಳ ಹಿಂದೆ ಹೋಗಿ ನಿಂತುಕೊಂಡೆ. ಅದು 1983ರ ಚುನಾವಣೆ ಸಮಯ. ಗುಂಡುರಾವ್ ನೇತೃತ್ವದ ಸರ್ಕಾರದ 'ದುರಾಡಳಿತ'ದ ವಿರುದ್ಧ ಜನತಾ ಪಕ್ಷ ಸೆಡ್ಡು ಹೊಡೆದಿತ್ತು. ಜನತಾ ಪಕ್ಷಕ್ಕೆ ಕಾಂಗ್ರೆಸ್ ಪಕ್ಷದಿಂದ ಅಧಿಕಾರವನ್ನು ಕಿತ್ತುಕೊಳ್ಳಬೇಕಿತ್ತು. ಆದರೆ, ಸ್ಥಳೀಯ ಗುಂಡುರಾವ್ ಅವರಿಗಿಂತ ಕೇಂದ್ರದಲ್ಲಿನ ಇಂದಿರಾ ಗಾಂಧಿಯವರನ್ನು ಜನತಾ ಪಕ್ಷ ಎದುರಿಸಬೇಕಿತ್ತು. ಬಡವರ ಮೇಲೆ ಇಂದಿರಾ ಮಾಡಿದ್ದ ಮೋಡಿ ಜನತಾ ಪಕ್ಷದ ನಾಯಕರಿಗೆ ಗೊತ್ತಿತ್ತು. 'ಗರೀಬಿ ಹಠಾವೊ' ಎಂಬ ಒಂದೇ ಒಂದು ಘೋಷಣೆ ಹಾಕಿ ಇಂದಿರಾ ಇಡೀ ದೇಶದಲ್ಲಿ ಸಂಚಲನ ಸೃಷ್ಟಿಸಬಲ್ಲವರಾಗಿದ್ದರು. ಚುನಾವಣೆಯಲ್ಲಿ ವಿರೋಧಿಗಳನ್ನು ದೂಳಿಪಟ ಮಾಡಬಲ್ಲವರಾಗಿದ್ದರು. ಇಂದಿರಾ ಅವರ ಜನಪ್ರಿಯತೆ ಎದುರು ಬರೀ ಅಭಿವೃದ್ಧಿಯ, ದಕ್ಷ ಆಡಳಿತದ ಮಾತು ಜನ ಸಾಮಾನ್ಯರನ್ನು ತಲುಪಲಾರದು ಎಂದೂ ಜನತಾ ಪಕ್ಷಕ್ಕೆ ಗೊತ್ತಾಗಿತ್ತು. ಅದಕ್ಕೆ ಬಡವರ ವೋಟುಗಳು ಬೇಕಿದ್ದುವು. ಅದನ್ನು ಪಡೆಯುವುದು ಬಹುದೊಡ್ಡ ಸವಾಲು ಆಗಿತ್ತು.

ಆ ವರ್ಷ ಯಾರು ಜನತಾ ಪಕ್ಷದ ಚುನಾವಣೆ ಪ್ರಣಾಳಿಕೆ ಸಿದ್ಧಪಡಿಸಿದರು ಎಂಬ ಮಾಹಿತಿ ನನಗೆ ಸಿಗಲಿಲ್ಲ. ಆದರೆ ಅದರಲ್ಲಿ ಮೊದಲ ಕೆಲವು ಅಂಶಗಳಲ್ಲಿಯೇ ಎರಡು ರೂಪಾಯಿಗೆ ಒಂದು ಕಿಲೋ ಅಕ್ಕಿ ಕೊಡುವ ಮಾತು ಇದೆ. ಕಡು ಬಡವರಿಗೆ ಆಗ ಪ್ರತಿ ಕುಟುಂಬಕ್ಕೆ ಹತ್ತು ಕಿಲೋ ಅಕ್ಕಿ ಕೊಡುವ ಭರವಸೆ ಸಿಕ್ಕಿತ್ತು. ಚುನಾವಣೆಯಲ್ಲಿ ಗುಂಡುರಾವ್ ಸರ್ಕಾರ ಅಧಿಕಾರ ಕಳೆದುಕೊಂಡಿತೇನೋ ನಿಜ. ಆದರೆ, ಜನತಾ ಪಕ್ಷಕ್ಕೆ ಸಂಪೂರ್ಣ

ಜನಾದೇಶ ಸಿಗಲಿಲ್ಲ. 1985ರ ಮಧ್ಯಂತರ ಚುನಾವಣೆ ವರೆಗೆ ಅದು ಕಾಯಬೇಕಾಯಿತು. ಎರಡು ರೂಪಾಯಿಗೆ ಕಿಲೋ ಅಕ್ಕಿ ಆಗಿನಿಂದ ಈಗಿನ ವರೆಗೆ ಯಾವ ಪಕ್ಷದ ಪ್ರಣಾಳಿಕೆಯಿಂದಲೂ ತಪ್ಪಿಸಿಕೊಳ್ಳಲು ಆಗಿಲ್ಲ. ದರ ಅಷ್ಟೇ ಉಳಿದರೂ ಅಕ್ಕಿಯ ಪ್ರಮಾಣ ಹೆಚ್ಚು ಆಗುತ್ತ ಹೋಗಿದೆ. ಈ ಸಾರಿ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳೆರಡೂ ಒಂದು ರೂಪಾಯಿಗೆ 25 ಮತ್ತು 30 ಕಿಲೋ ಅಕ್ಕಿ ಕೊಡುವ ಮಾತು ಆಡಿವೆ. ಇನ್ನು ಮುಂದೆ ಉಳಿದಿರುವುದು ಉಚಿತ ಅಕ್ಕಿ ಕೊಡುವ ಮಾತು ಅಷ್ಟೆ. ಮುಂದಿನ ಚುನಾವಣೆಯಲ್ಲಿ ಅದನ್ನು ಯಾವ ಪಕ್ಷ ಮೊದಲು ಹೇಳುತ್ತದೆ ಎಂಬುದಷ್ಟೇ ಈಗ ಉಳಿದಿರುವ ಕುತೂಹಲ.

ಇದು ಬರೀ ಕರ್ನಾಟಕದ ಸಮಸ್ಯೆಯಲ್ಲ. ಪಕ್ಕದ ಆಂಧ್ರಪ್ರದೇಶದಲ್ಲಿ 80ರ ದಶಕದಲ್ಲಿ ಕಾಂಗ್ರೆಸ್ ಜನಪ್ರಿಯತೆ ವಿರುದ್ಧ ಸೆಡ್ಡು ಹೊಡೆದು ತೆಲುಗು ಆತ್ಮಾಭಿಮಾನದ ಕಹಳೆ ಮೊಳಗಿಸಿದ ಪ್ರಸಿದ್ಧ ನಟ ದಿ.ಎನ್.ಟಿ.ರಾಮರಾವ್ ಅವರೂ ಹೀಗೆಯೇ ಎರಡು ರೂಪಾಯಿಗೆ ಕಿಲೋ ಅಕ್ಕಿ ಕೊಡುವ ಭರವಸೆ ಕೊಡಬೇಕಾಯಿತು. ಅಕ್ಕಿಯ ಮೇಲಿನ ಆಸೆಗೋ, ರಾಮರಾವ್ ಮೇಲೆ ಜನರಿಗೆ ಇದ್ದ ಬಿದ್ದು ಸಾಯುವಂಥ ಪ್ರೀತಿಗೋ ಅವರನ್ನು ಅಧಿಕಾರಕ್ಕೆ ತಂದರು. ಮೊದಲ ಸಂಪುಟ ಸಭೆಯ ನಂತರ ಮುಖ್ಯ ಕಾರ್ಯದರ್ಶಿ ರಾಮರಾಯರನ್ನು ಕಂಡು ಎರಡು ರೂಪಾಯಿಗೆ ಕಿಲೋ ಅಕ್ಕಿ ಕೊಡಲು ಆಗದು ಎಂದರು. 'ಏಕೆ' ಎಂದರು ರಾಮರಾವ್, ಹಣವನ್ನು ಹೇಗೆ ಹೊಂದಿಸುವುದು ಎಂದರು ಮುಖ್ಯ ಕಾರ್ಯದರ್ಶಿ. ರಾಮರಾವ್ ಆ ಮುಖ್ಯ ಕಾರ್ಯದರ್ಶಿಯನ್ನು ಎತ್ತಂಗಡಿ ಮಾಡಿದರು. ಎರಡನೇ ಮುಖ್ಯ ಕಾರ್ಯದರ್ಶಿಯೂ ಅದೇ ಮಾತು ಹೇಳಿದರು. ಅವರನ್ನೂ ಎತ್ತಂಗಡಿ ಮಾಡಲಾಯಿತು. ಮೂರನೇ ಮುಖ್ಯ ಕಾರ್ಯದರ್ಶಿಗೂ ಎತ್ತಂಗಡಿ ಭಯವಿತ್ತೋ ಅಥವಾ ಅವರು 'ಸರ್ಕಾರದ ಬೊಕ್ಕಸದಲ್ಲಿ ನಮ್ಮಪ್ಪನದೇನು ಗಂಟಿಲ್ಲ' ಎಂದುಕೊಂಡೋ ರಾಮರಾವ್ ಅವರ ಮಾತಿಗೆ ತಲೆ ಆಡಿಸಿದರು. ಜನರಿಗೆ ಅಕ್ಕಿ ಪೂರೈಕೆ ಆಗತೊಡಗಿತು. ಅದು ಕರ್ನಾಟಕವೇ ಇರಲಿ, ಆಂಧ್ರವೇ ಇರಲಿ ಅಧಿಕಾರದಲ್ಲಿ ಇರುವವರು ತಾವು ಅಧಿಕಾರ ಹಿಡಿಯುವುದಕ್ಕಾಗಿ ಏನನ್ನು ಬೇಕಾದರೂ ಮಾಡುತ್ತಾರೆ ಮತ್ತು ಬೊಕ್ಕಸಕ್ಕೆ ತೂತು ಕೊರೆಯುತ್ತಾರೆ ಎಂಬುದು ಈ ಘಟನೆಯಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ. ಕರ್ನಾಟಕದಲ್ಲಿ ಈಗ ಪ್ರತಿ ವರ್ಷ 1,400 ಕೋಟಿ ರೂಪಾಯಿಗಳನ್ನು ಅಕ್ಕಿ ದರದ ಸಬ್ಸಿಡಿಗೆ ಸರ್ಕಾರ ಖರ್ಚು ಮಾಡಲಾಗುತ್ತಿದೆ.

ನಿಜ. ಸರ್ಕಾರದ ಮೇಲೆ, ಅದು ಬೇರೆ ಏನು ಮಾಡಲು ಆಗದೇ ಇದ್ದರೂ, ಜನರು ಉಪವಾಸ ಬಿದ್ದು ಸಾಯದಂತೆ ನೋಡಿಕೊಳ್ಳುವ ಹೊಣೆ ಇದೆ. ಅದು ಮೂಲಭೂತ ಹೊಣೆಗಾರಿಕೆ. ಆ ದೃಷ್ಟಿಯಿಂದ ಕಡಿಮೆ ದರದಲ್ಲಿ ಕಡು ಬಡವರಿಗೆ ಅಕ್ಕಿ ಕೊಡುವುದು ಸ್ವಾಗತಾರ್ಹ. ಆದರೆ, ಕೊಟ್ಟ ಅಕ್ಕಿಯನ್ನೆಲ್ಲ ಬಡವರು ಊಟ ಮಾಡುವುದಕ್ಕೆ ಬಳಸಿಕೊಂಡಿದ್ದಾರೆಯೇ ಎಂದು ಪ್ರಶ್ನೆ ಹಾಕಿದರೆ ಇಲ್ಲ ಎಂದೇ ಉತ್ತರ ಬರುತ್ತದೆ. ಅವರು ಯಾವುದಕ್ಕಾದರೂ ಬಳಸಿಕೊಂಡರೂ ತಪ್ಪಲ್ಲ ಎಂಬುದನ್ನೂ ಒಪ್ಪಿಕೊಳ್ಳಬಹುದು. ಆದರೆ, ಅವರಿಗೆ ತಲುಪಬೇಕಾದ ಅಕ್ಕಿ ಅವರಿಗೆ ತಲುಪಿದೆಯೇ ಎಂದರೆ ಬಹುತೇಕ ಕಡೆ ಇಲ್ಲ

ಎಂಬ ಉತ್ತರ ಸಿಗುತ್ತದೆ. ಈಗಲೂ ಅದೇ ಅಕ್ಕಿ ಅದೇ ಮಾರುಕಟ್ಟೆಯಲ್ಲಿ ಓಡಾಡಿ ಬೇರೆ ಬೇರೆ ರೂಪ ಪಡೆದು ಮರು ಮಾರಾಟ ಆಗುತ್ತದೆ. ಅದೆಲ್ಲ ರಗಳೆ ಏಕೆ ಎನ್ನುವವರು ಲೋಡುಗಟ್ಟಲೆ ಅಕ್ಕಿಯನ್ನು ಪಕ್ಕದ ರಾಜ್ಯಗಳಿಗೆ ರವಾನೆ ಮಾಡುತ್ತಿದ್ದಾರೆ. ಒಂದು ತಾಲ್ಲೂಕು ಕೇಂದ್ರದಿಂದ ಪ್ರತಿ ತಿಂಗಳು ಸರಿ ಸುಮಾರು ಹದಿನಾರು ಲೋಡು ಅಕ್ಕಿ ಪರ ರಾಜ್ಯಕ್ಕೆ ಹೋಗುತ್ತದೆ ಎಂದು ಲೆಕ್ಕ ಸಿಕ್ಕಿದೆ. ಅದರ ಲಾಭವನ್ನು ರಾಜಕಾರಣಿಗಳು, ಅವರ ಪರವಾಗಿ ಇರುವ ಗುತ್ತಿಗೆದಾರರು ಮತ್ತು ಅಧಿಕಾರಿಗಳು ಹಂಚಿಕೊಂಡಿದ್ದಾರೆ.

ಇದು ಎಲ್ಲ ಕಡೆಯೂ ಆಗುವ ಮಾತು. ಅಧಿಕಾರದಲ್ಲಿ ಇದ್ದವರು ಇಲ್ಲಿ ಹಣ ಸಿಕ್ಕರೂ ತಿನ್ನುತ್ತಾರೆ. ಅದು ಬಡವರದು, ಶ್ರೀಮಂತರದು ಎಂದು ಅವರೇನು ಭೇದ ಮಾಡುವುದಿಲ್ಲ. ಹೀಗಾಗಿ ಅದು ನನಗೆ ಹೆಚ್ಚು ಮುಖ್ಯವಲ್ಲ. ನನಗೆ ಹೆಚ್ಚು ಮುಖ್ಯ ಅನಿಸಿದ್ದು ನಮ್ಮ ಜನರ ಆಹಾರ ಪದ್ಧತಿ ಹಾಳಾಗಿ ಹೋಗಿದ್ದು, ಮತ್ತು ಸರ್ಕಾರ ಉಚಿತ ಅಕ್ಕಿ ಕೊಡಲು ಆರಂಭಿಸಿದ ನಂತರ ನಮ್ಮ ಗ್ರಾಮೀಣ ಅರ್ಥವ್ಯವಸ್ಥೆ ಏರು ಪೇರು ಆದುದು. ಕರ್ನಾಟಕದಲ್ಲಿ ಒಂದೊಂದು ಪ್ರದೇಶದಲ್ಲಿ ಒಂದೊಂದು ಆಹಾರ ಕ್ರಮ ಇತ್ತು. ಅದು ಆಯಾ ಪ್ರದೇಶಕ್ಕೆ, ಅವರ ಜೀವನ ಕ್ರಮಕ್ಕೆ ಅವರ ದುಡಿಮೆಗೆ ತಕ್ಕಂತೆ ಇತ್ತು. ಇಡೀ ಉತ್ತರ ಕರ್ನಾಟಕದಲ್ಲಿ ಜನರು ಬೆಳಿಗ್ಗೆ ಎದ್ದು ಸ್ನಾನ ಮಾಡಿ, ಶಿವನಿಗೆ ಒಂದು ನಮಸ್ಕಾರ ಹಾಕಿ ತಾಯಿ, ಹೆಂಡತಿ, ಅಕ್ಕ ಅಥವಾ ತಂಗಿ ಹಂಚಿನ ಮೇಲೆ ಬೇಯಿಸಿ ಕೊಟ್ಟ ಬಿಸಿ ಬಿಸಿ ರೊಟ್ಟಿ, ಪಲ್ಯ, ತರಕಾರಿ ತಿಂದು ತಮ್ಮ ತಮ್ಮ ಕೆಲಸಕ್ಕೆ ಹೋಗುತ್ತಿದ್ದರು. ತರಕಾರಿ ಹುಡುಕಲು ಅವರು ದೂರವೇನೂ ಹೋಗುತ್ತಿರಲಿಲ್ಲ. ತಮ್ಮ ಹೊಲದ ಬದುವಿನಲ್ಲಿ ಬೆಳೆಯುವ ಹಸಿರು ಹತ್ತರಕಿ ಕಿತ್ತುಕೊಂಡು ಬರುತ್ತಿದ್ದರು. ಮನೆ ಹತ್ತಿರದ ಗುಡ್ಡಗಳ ಕಲ್ಲುಗಳ ಸಂದಿಗಳಲ್ಲಿ ಅರಳುತ್ತಿದ್ದ ಕಲ್ಲುಸಬ್ಬಸಿಗೆ ಹುಡುಕಿಕೊಂಡು ಹೋಗುತ್ತಿದ್ದರು. ಹತ್ತರಕಿ, ಕಲ್ಲುಸಬ್ಬಸಿಗೆ ತಿಂದರೆ ಹೊಟ್ಟೆಯಲ್ಲಿದ್ದ ಹರಳುಗಳು ಕರಗುತ್ತವೆ ಎಂದು ನಂಬಿದ್ದರು. ಅದು ನಿಜವೂ ಆಗಿತ್ತು. ಮಧ್ಯಾಹ್ನ ಅದೇ ತಾಯಿ, ತಂಗಿ, ಅಕ್ಕ, ಹೆಂಡತಿ ಬುತ್ತಿ ಕಟ್ಟಿಕೊಂಡು ಹೊಲಕ್ಕೆ ಬರುವುದನ್ನು ಕಾಯುತ್ತಿದ್ದರು. ಬಿಸಿಲು, ಗಾಳಿ, ಮಳೆ ಎನ್ನದೆ ಹೊಲದಲ್ಲಿ ಮೈ ಮುರಿಯುವಂತೆ ಕೆಲಸ ಮಾಡಿ ಮರದ ನೆರಳಲ್ಲಿ ಕುಳಿತು ಊಟ ಮಾಡುತ್ತಿದ್ದರು. ಒಂದು ತಂಬಿಗೆ ನೀರನ್ನು ಗಟ ಗಟ ಕುಡಿದು ಒಂದು ಬತ್ತಿ ಸೇದಿ ಮತ್ತೆ ದುಡಿಯುತ್ತಿದ್ದರು. ಮೈಗಳ್ಳತನ ಮಾಡುವುದು ಅಪರಾಧ ಎಂದು ಹೊಲದಲ್ಲಿ ಕೆಲಸ ಮಾಡುವವರಿಗೆ ಗೊತ್ತಿತ್ತು. ಆಗ ಕಾಯಕವೇ ಕೈಲಾಸ ಎನಿಸಿತ್ತು. ಕೈ ಕೆಸರಾದರೆ ಬಾಯಿ ಮೊಸರು ಎಂದು ತಿಳಿದಿತ್ತು. ಅವರಿಗೆಲ್ಲ ಉಪ್ಪಿಟ್ಟು, ಅವಲಕ್ಕಿ, ದೋಸೆ, ಇಡ್ಲಿ ಗೊತ್ತೇ ಇರಲಿಲ್ಲ. ಮೈಯಲ್ಲಿ ಹುಷಾರು ಇಲ್ಲದ ಸಮಯದಲ್ಲಿ, ವೈದ್ಯರು ಹೇಳಿದರೆ ಮಾತ್ರ ಒಂದಿಷ್ಟು ಅನ್ನ ತಿನ್ನುತ್ತಿದ್ದರು. ದಕ್ಷಿಣ ಕರ್ನಾಟಕದಲ್ಲಿಯೂ ಎಲ್ಲ ಕಡೆ ಅನ್ನ ಮುಖ್ಯ ಆಹಾರ ಆಗಿರಲಿಲ್ಲ. ಅವರೂ ಮುದ್ದೆ ತಿನ್ನುತ್ತಿದ್ದರು. ಮೀನು-ಮಾಂಸ ತಿನ್ನುತ್ತಿದ್ದರು. ಹಳ್ಳಿಯ ಜನರು ಗಂಡಸಾದವನು ದುಡಿಯಬೇಕು ಎಂದು ಅಂದುಕೊಂಡಿದ್ದರು. ಅವನ ಜತೆಗೆ ಹೆಣ್ಣು ಮಗಳೂ ಹೆಗಲು ಕೊಡುತ್ತಿದ್ದಳು.

ಆಗ ರೊಟ್ಟಿಯನ್ನೇ ತಿನ್ನಲಿ, ಮುದ್ದೆಯನ್ನೇ ತಿನ್ನಲಿ ಅದನ್ನು ದುಡಿದು ತಿನ್ನಬೇಕಿತ್ತು. ಗಳಿಸಿ ತಿನ್ನಬೇಕಿತ್ತು. ಈಗ ಹಾಗಿಲ್ಲ. ದುಡಿಯಲಿ, ಬಿಡಲಿ ಅಕ್ಕಿ ಮನೆಗೆ ಬರುತ್ತದೆ. ಒಂದಾದ

ನಂತರ ಒಂದರಂತೆ ಬಂದ ಸರ್ಕಾರಗಳು ವಿಧವಾ ವೇತನ, ವೃದ್ಧಾಪ್ಯ ವೇತನ, ಸಂಧ್ಯಾ ಸುರಕ್ಷಾ, ಅಂಗವಿಕಲ ವೇತನ ಹೀಗೆ ಒಂದಲ್ಲ ಒಂದು ಯೋಜನೆ ಅಡಿಯಲ್ಲಿ ಒಂದು ಮನೆಗೆ ಕನಿಷ್ಠ ಒಂದು ಸಾವಿರ ರೂಪಾಯಿ ಸಿಗುವಂತೆ ನೋಡಿಕೊಂಡಿವೆ. ಊಟಕ್ಕೆ ಚಿಂತೆಯಿಲ್ಲ. ಮೇಲೆ ಒಂದು ಸಾವಿರ ರೂಪಾಯಿ ಕೈಗೆ ಬರುತ್ತದೆ ಎಂದರೆ ಯಾರು ದುಡಿಯುತ್ತಾರೆ? ಯಾರು ದುಡಿಯುತ್ತಾರೆ ಎಂದು ನಾನು ಕೇಳುತ್ತಿಲ್ಲ. ನೀವು ಕರ್ನಾಟಕದ ಯಾವುದೇ ಹಳ್ಳಿಗೆ ಹೋಗಿ, ಅಲ್ಲಿ ಕೂಲಿಗೆ ಕೆಲಸಗಾರರು ಸಿಗುತ್ತಾರೆಯೇ ಎಂದು ಕೇಳಿ. ನಿಮಗೆ ಉತ್ತರ ಸಿಗುತ್ತದೆ. ಊರಿನ ಮುಂದೆ ಟ್ರ್ಯಾಕ್ಟರ್ ಅನ್ನೋ ಅಥವಾ ಇನ್ನಾವುದೋ ಗಾಡಿಯನ್ನೋ ತಂದು ನಿಲ್ಲಿಸಿ ಮನೆ ಮನೆಗೆ ಹೋಗಿ ಕೆಲಸಗಾರರನ್ನು ಎಬ್ಬಿಸಿಕೊಂಡು ಬಂದು ಹೊಲಕ್ಕೆ ಕರೆದುಕೊಂಡು ಹೋಗಿ ಮತ್ತೆ ಮಧ್ಯಾಹ್ನ ನಾಲ್ಕು ಗಂಟೆಗೆ ಅದೇ ಗಾಡಿಯಲ್ಲಿ ತಂದು ಅವರನ್ನೆಲ್ಲ ಅವರ ಮನೆಗೆ ಇಳಿಸಬೇಕು. ನಿಜ. ಕೂಲಿ ಕೆಲಸಗಾರರನ್ನು ಹೀಗೆಯೇ ನಡೆಸಿಕೊಳ್ಳಬೇಕು. ಅವರಿಗೇನು ಗೌರವ ಇಲ್ಲವೇ ಎಂದು ಯಾರಾದರೂ ಕೇಳಬಹುದು. ಅಷ್ಟು ಗೌರವ ಕೊಟ್ಟು ಅವರನ್ನು ನಡೆಸಿಕೊಂಡ ನಂತರ ತನ್ನ ಕೈಯಲ್ಲಿ ಏನೂ ಉಳಿಯುತ್ತಿಲ್ಲ ಎಂದು ರೈತನೂ ಅದೇ ಕೂಲಿ ಕೆಲಸಕ್ಕೆ ಹೊರಟು ಬಿಟ್ಟಿದ್ದಾನೆ! ಹಳ್ಳಿಗಳಲ್ಲಿ ಕೃಷಿ ಎಷ್ಟು ಕಷ್ಟವಾಗಿದೆ ಎಂದು ಹೊಲದ ಮಾಲೀಕರನ್ನು ಕೇಳಿದರೆ ಹೇಳುತ್ತಾರೆ.

ಸರ್ಕಾರದ ಇಂಥ ಬಿಟ್ಟಿ ಯೋಜನೆಗಳು ಬಂದು ಗಂಡಸರು ಹಾಳಾಗಿ ಹೋದರು. ಅವರಿಗೆ ದುಡಿಯಬೇಕು ಎಂದೇ ಈಗ ಅನಿಸುತ್ತಿಲ್ಲ. ಆದರೆ, ಯಾರಾದರೂ ದುಡಿಯದೆ ಮನೆ ನಡೆಯುವುದಿಲ್ಲ. ಹೆಣ್ಣು ಮಗಳು ಆ ಹೊಣೆ ಹೊತ್ತುಕೊಂಡಿದ್ದಾಳೆ. ಒಂದೋ ಆಕೆ ಹೊಲದಲ್ಲಿ ದುಡಿಯಲು ಹೋಗುತ್ತಿದ್ದಾಳೆ. ಮಳೆ ಕೈ ಕೊಟ್ಟರೆ ಶಹರಕ್ಕೆ ಹೋಗಿ ಹೋಟೆಲುಗಳಲ್ಲಿ ತಟ್ಟೆ ತೊಳೆಯುತ್ತಿದ್ದಾಳೆ. ಗಂಡ ದಿನವೆಲ್ಲ ಎಲ್ಲೆಲ್ಲೋ ಅಲೆದಾಡಿ, ಬೀಡಿ ಸಿಗರೇಟು ಸೇದಿ, ಗುಟ್ಕಾ ತಿಂದು ಮತ್ತೆ ತಿರುಗಾಡಿ ರಾತ್ರಿ ಕುಡಿದು ಬಂದು ಬಿದ್ದರೆ ಹೆಣ್ಣು ಹೆಂಗಸು ದುಡಿದು ಬರುತ್ತಿದ್ದಾಳೆ. ಬರೀ ಗಂಡ ಮಾತ್ರವಲ್ಲ, ಮಗನೂ ಹೀಗೆಯೇ ಫಾಲ್ತೂ ತಿರುಗಾಡುವುದನ್ನು ಆಕೆ ಕಣ್ಣಾರೆ ನೋಡಿ ಏನೂ ಮಾಡದವಳಾಗಿದ್ದಾಳೆ. ನಮ್ಮ ಹಳ್ಳಿಯ ಜನರಲ್ಲಿ ಮೊದಲು ಇದ್ದ ಸಮುದಾಯ ಪ್ರಜ್ಞೆಯೇ ಈಗ ಹೊರಟು ಹೋಗಿದೆ. ಊರಿಗೆ ಒಳಿತು ಮಾಡಬೇಕು ಎಂಬ ಕಡೆಗೆ ಯಾರಿಗೂ ಗಮನ ಇದ್ದಂತೆ ಕಾಣುವುದಿಲ್ಲ. ಊರಿಗೆ ಯಾರಾದರೂ ಕಾರು ತೆಗೆದುಕೊಂಡು ಹೋದರೆ ಸಾಕು ಅದರ ಡಿಕ್ಕಿಯಲ್ಲಿ ಏನಿದೆ ಎಂದು ಹುಡುಕುವವರೇ ಎಲ್ಲ! ನಮ್ಮ ಹಳ್ಳಿಯ ರೈತ ಎಂಥ ಆತ್ಮ ಗೌರವವಿದ್ದ ಮನುಷ್ಯನಾಗಿದ್ದ! ದಾರಿಯಲ್ಲಿ ಒಂದು ರೂಪಾಯಿ ಸಿಕ್ಕರೆ ಸೀದಾ ಅದನ್ನು ತೆಗೆದುಕೊಂಡು ದೇವರ ಗುಡಿಗೆ ಹೋಗಿ ಕುಡಿಕೆಯಲ್ಲಿ ಹಾಕಿ ಬಿಡುತ್ತಿದ್ದ. ಪರರ ಹಣವನ್ನು ಮುಟ್ಟಬಾರದು ಎಂದು ಆತ ದೃಢ ವ್ರತವನ್ನೇ ಧರಿಸಿ ಬಿಟ್ಟಿದ್ದ. ಅದೇ ಮನುಷ್ಯ ಈಗ ಯಾರೋ ಕೊಡುವ ನೂರು ಇನ್ನೂರು ರೂಪಾಯಿಗೆ ಅಂಗಲಾಚುತ್ತಾನೆ. ಕೈ ಚಾಚುತ್ತಾನೆ.

ರಾಜ್ಯ ಆಳುವವರಿಗೆ ಇದೇ ಬೇಕಾಗಿತ್ತು. ಮೊದಲು ಅವರಿಗೆ ನಮ್ಮ ಆತ್ಮಗೌರವವನ್ನು ಕೊಲ್ಲಬೇಕಿತ್ತು. ಊರಿನ ಸಮುದಾಯ ಪ್ರಜ್ಞೆಯನ್ನು ನಾಶ ಮಾಡಬೇಕಿತ್ತು. ಸ್ವಾಭಿಮಾನವನ್ನು ಹಾಳು ಮಾಡಬೇಕಿತ್ತು. ಅದರಲ್ಲಿ ಅವರು ಈಗ ಯಶಸ್ವಿಯಾಗಿದ್ದಾರೆ. ನಮ್ಮ ಗ್ರಾಮಗಳು

ತೀರಾ ಈಚಿನ ವರೆಗೆ ಸ್ವಾವಲಂಬಿ ಆಗಿದ್ದುವು. ಕುಂಬಾರರು, ಕಂಬಾರರು, ನೇಕಾರರಂಥ ಕುಶಲಕರ್ಮಿಗಳು ಅಲ್ಲಿ ಜೀವನ ಮಾಡಲು ಸಾಧ್ಯವಿತ್ತು. ಈಗ ಯಾವ ಊರಿನಲ್ಲಿ ಕಂಬಾರರು, ಕುಂಬಾರರು, ನೇಕಾರರು ಸಿಗುತ್ತಾರೆ? ಅವರು ಹೆಚ್ಚಿನ ಹಣಕ್ಕಾಗಿ ನಗರಕ್ಕೆ ವಲಸೆ ಹೋಗಲಿಲ್ಲ. ಬದಲಿಗೆ ಅವರ ವೃತ್ತಿ ಕೌಶಲಗಳೇ ಅನಗತ್ಯ ಎನಿಸಿಬಿಟ್ಟಿತು. ಅನಗತ್ಯ ಎನಿಸಿದ್ದು ಯಾವುದೂ ಉಳಿಯುವುದಿಲ್ಲ. ಹೋಗಲಿ, ಜನರಿಗೆ ಶುದ್ಧ ಕುಡಿಯುವ ನೀರು, ಶೌಚಾಲಯ, ಚರಂಡಿ, ಒಳ್ಳೆಯ ರಸ್ತೆ, ದೀಪ ಬೇಕು ಎಂದೂ ಅನಿಸುತ್ತಿಲ್ಲ. ಯಾರೂ ಅದನ್ನು ಕೇಳುತ್ತಲೂ ಇಲ್ಲ. ರಾಜಕೀಯದಲ್ಲಿ ಇರುವವರು ಐದು ವರ್ಷಕ್ಕೆ ಒಮ್ಮೆ ಕೊಡುವ ಪುಡಿಗಾಸಿನ ಮೇಲೆ ಅವಲಂಬಿಸಿ ನಾವು ನಮ್ಮ ಜೀವನ ಕಟ್ಟಿಕೊಳ್ಳಲು ಆಗುತ್ತದೆಯೇ ಎಂಬ ಪ್ರಶ್ನೆಯೂ ಅವರ ತಲೆಯಲ್ಲಿ ಮೊಳೆಯುತ್ತಿಲ್ಲ. ಗ್ರಾಮೀಣ ಬದುಕು ತತ್ತರಿಸಿ ಹೋಗಿದೆ. ಕಳೆದ ವಾರವಷ್ಟೇ ನಾನು ಚಾಮರಾಜನಗರ ಜಿಲ್ಲೆಯಲ್ಲಿ ಒಂದು ಹಳ್ಳಿಗೆ ಹೋಗಿದ್ದೆ. ಬೆಳಿಗ್ಗೆ ಏಳು ಗಂಟೆಗೆ ಹೋದ ಕರೆಂಟು ಸಂಜೆ ಏಳು ಗಂಟೆಗೆ ಬಂತು. ಮತ್ತೆ ಎಂಟು ಗಂಟೆಗೆ ಹೋಯಿತು. ಮತ್ತೆ ಯಾವಾಗ ಬಂತು ಯಾವಾಗ ಹೋಯಿತು ಎಂದು ನಾನು ಲೆಕ್ಕ ಇಡಲು ಹೋಗಲಿಲ್ಲ. ದಿನವೂ ಹೀಗೆಯೇ ಎಂದರು ಅಲ್ಲಿನ ಜನ, ಯಾವ ಸುಖ ಎಂದು ಅವರು ಇದನ್ನು ಸಹಿಸಿಕೊಂಡಿದ್ದಾರೆ. ಹೇಳಿದೆನಲ್ಲ; ಸರ್ಕಾರದಲ್ಲಿ ಇದ್ದವರು ಜನರ ಅಭಿಮಾನವನ್ನೇ ಕಸಿದುಕೊಂಡು ಬಿಟ್ಟಿದ್ದಾರೆ.

ಮಾಧ್ಯಮದಲ್ಲಿ ಇರುವ ನಮಗೂ ಒಂದು ರೂಪಾಯಿಗೆ ಕಿಲೋ ಅಕ್ಕಿಯೇ ಏಕೆ ದೊಡ್ಡದು ಅನಿಸುತ್ತಿದೆ? ನೀರಾವರಿ, ರಸ್ತೆ, ವಿದ್ಯುತ್, ಆರೋಗ್ಯ, ನೈರ್ಮಲ್ಯ ಮುಖ್ಯ ಎಂದು ನಮಗೆ ಏಕೆ ಅನಿಸುತ್ತಿಲ್ಲ? ರಾಜಕಾರಣಿಗಳು ಮಾಧ್ಯಮದ ಹಾದಿಯನ್ನೂ ತಪ್ಪಿಸಿದ್ದಾರೆಯೇ? ಮಾಧ್ಯಮದಲ್ಲಿ ಇದ್ದವರಿಗೆ ಅಭಿವೃದ್ಧಿಯ ಅಜೆಂಡಾ ದೊಡ್ಡದು ಅನಿಸದೇ ಇರುವಾಗ ಹಳ್ಳಿಯಲ್ಲಿ ಇರುವವರಿಗೆ ಅದು ಹೇಗೆ ಮುಖ್ಯ ಅನಿಸುತ್ತದೆ? ಇದು ಒಂದು ವರ್ತುಲ ಇರಬಹುದೇ? ಆ ವರ್ತುಲ ಇನ್ನೂ ಪೂರ್ಣ ಆಗಿಲ್ಲವೇ? ಇನ್ನೂ ಎಷ್ಟು ದಿನ ಹೀಗೆಯೇ?...

28.04.2013

# ಬೊಕ್ಕಸ ಬರಿದು ಮಾಡುವ

# ಆಮಿಷಗಳಿಗೆ ಕೊನೆಯೇ ಇಲ್ಲವೇ?

ಇದು ತುಷ್ಟೀಕರಣದ ಕಾಲ, ಮತದಾರ ಪ್ರಭುವಿಗೆ ಇದ್ದಕ್ಕಿದ್ದಂತೆ ಬೆಲೆ ಬರುವ ಕಾಲ; ಐದು ವರ್ಷಗಳ ಕಾಲ ದೂರವಿದ್ದ ಜನಪ್ರತಿನಿಧಿಗಳು ಈಗ ಜನರ ನೆರೆಹೊರೆಯಲ್ಲಿ ಕಾಣಿಸಿಕೊಳ್ಳುವ ಕಾಲ. ಅಧಿಕಾರಕ್ಕೆ ಬರಬೇಕು ಎನ್ನುವವರು ಬಸ್ಸುಗಳಲ್ಲಿ, ಪಾರ್ಕುಗಳಲ್ಲಿ ಕಾಣಿಸಿಕೊಳ್ಳುವ ಕಾಲ! ಇಷ್ಟೇ ಆಗಿದ್ದರೆ ಯೋಚನೆ ಇರಲಿಲ್ಲ. ನಮಗೂ ಅದು ರೂಢಿಯಾಗಿತ್ತು. ಅವರಿಗೂ ರೂಢಿಯಾಗಿತ್ತು. ಆದರೆ, ಅವರು ಇಷ್ಟಕ್ಕೇ ಸುಮ್ಮನಾಗುವಂತೆ ಕಾಣುವುದಿಲ್ಲ. ಮತದಾರರನ್ನು ಸಂಪ್ರೀತಗೊಳಿಸಲು ಏನೆಲ್ಲ ಸಾಧ್ಯವೋ ಅದನ್ನೆಲ್ಲ ಮಾಡುವಂತೆ ಕಾಣುತ್ತಿದೆ. ಕಾಂಗ್ರೆಸ್ ನೇತೃತ್ವದ ಯುಪಿಎ ಕೂಟ ಇದಕ್ಕೆ ಮೊದಲ ಮಾದ- ರಿಯನ್ನು ಹಾಕಿಕೊಟ್ಟಿದೆ. ಕಳೆದ ತಿಂಗಳಷ್ಟೇ ಮಧ್ಯಾಂತರ ಮುಂಗಡಪತ್ರ ಮಂಡಿಸಿರುವ ಕೇಂದ್ರ ಹಣಕಾಸು ಸಚಿವ ಪಿ.ಚಿದಂಬರಂ ಮಧ್ಯಮ ವರ್ಗವನ್ನೇ ಮುಖ್ಯವಾಗಿ ದೃಷ್ಟಿಯಲ್ಲಿ ಇಟ್ಟುಕೊಂಡಿದ್ದರು. ಈ ವರ್ಗ ಮೋದಿಯ ಮೋಡಿಗೆ ಒಳಗಾದಂತೆ ಭಾಸವಾಗುತ್ತಿರುವ ಆತಂಕ ಕಾಂಗ್ರೆಸ್ ಪಕ್ಷವನ್ನು ಕಾಡುತ್ತಿರಬಹುದು. ಅಡುಗೆ ಅನಿಲ ಸಿಲಿಂಡರ್‌ಗಳ ಮಿತಿಯನ್ನು ಒಂಬತ್ತರಿಂದ ಹನ್ನೆರಡಕ್ಕೆ ಏರಿಸಿದ್ದರಲ್ಲಿ ಕೂಡ ಮುಖ್ಯವಾಗಿ ಮಧ್ಯಮ ವರ್ಗವನ್ನು ಓಲೈಸುವ ಉದ್ದೇಶವೇ ಇತ್ತು. ಈಗ ಮುಖ್ಯಮಂತ್ರಿ ಸಿದ್ದರಾಮಯ್ಯ ಎಲ್ಲ ಜಾತಿಗಳ ಮಠಗಳಿಗೆ 66 ಕೋಟಿ ರೂಪಾಯಿ ಅನುದಾನ ಬಿಡುಗಡೆ ಮಾಡಿದ್ದಾರೆ.

ನಮ್ಮ ದೇಶದ, ರಾಜ್ಯದ, ರಾಜಕೀಯ ಈಗ ಹೇಗಿದೆ ಎಂದರೆ ಆಡಳಿತ ಮಾಡುವ ಪಕ್ಷಗಳು ಮಾತ್ರ ಬದಲಾಗುತ್ತವೆ; ನಾಯಕರು ಬದಲಾಗುವುದಿಲ್ಲ. ಅವರ ರಾಜಕೀಯದ ಶೈಲಿಯೂ ಬದಲಾಗುವುದಿಲ್ಲ. ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾದ ಕೂಡಲೇ ಮಠ ಮಂದಿರಗಳಿಗೆ ಹೋಗಲಿಲ್ಲ, ಬದಲಿಗೆ ಸಾಹಿತಿಗಳ ಮನೆಗಳಿಗೆ ಹೋಗಿದ್ದರು. ಅದು ನಮಗೆಲ್ಲ ಒಂದು ದಿಟ್ಟ ಸಂಕೇತದಂತೆ ಕಾಣಿಸಿತ್ತು. ಈಗಲೂ ಅವರು ಮಠಗಳಿಗೆ ಹೋಗುವಂತೆ ಕಾಣುವುದಿಲ್ಲ. ಆದರೆ, ಅವರು ರಾಜಕೀಯ ಅನಿವಾರ್ಯಗಳ

ಬಂದಿಯಾಗಿದ್ದಾರೆ. ಹಿಂದಿನ ಬಿಜೆಪಿ ಸರ್ಕಾರ ಮಠಗಳನ್ನು ಓಲೈಸುವ ರಾಜಕಾರಣ ಮಾಡುತ್ತಿದ್ದಾಗ ಇದೇ ಸಿದ್ದರಾಮಯ್ಯ ವಿರೋಧ ಪಕ್ಷದ ನಾಯಕನ ಸ್ಥಾನದಲ್ಲಿ ನಿಂತು ಮಾತನಾಡಿದ್ದು ಇನ್ನೂ ಯಾರಿಗೂ ಮರೆತು ಹೋಗಿಲ್ಲ. ಈಗ ಸಿದ್ದರಾಮಯ್ಯನವರೂ ಬಿಜೆಪಿ ಸರ್ಕಾರ ಮಾಡಿದ್ದನ್ನೇ ಮಾಡುತ್ತಿದ್ದಾರೆ. 'ನಾವೇನು ಮಠಗಳಿಗೆ ವಿರೋಧವಾಗಿಲ್ಲ. ಅವುಗಳಿಗೆ ದೊಡ್ಡ ಪ್ರಮಾಣದಲ್ಲಿ ಹಣ ಕೊಡುತ್ತೇವೆ' ಎಂದು ಸಿದ್ದರಾಮಯ್ಯನವರ ಬಂಟನಂತೆಯೇ ಇರುವ ಸಮಾಜ ಕಲ್ಯಾಣ ಸಚಿವ ಎಚ್.ಆಂಜನೇಯ ಬಹಿರಂಗವಾಗಿಯೇ ಘೋಷಿಸುತ್ತಾರೆ. ಹಿಂದೆಯೇ ಸರ್ಕಾರದ ಆದೇಶವೂ ಹೊರಬೀಳುತ್ತದೆ. ಕೇಂದ್ರ ಚುನಾವಣೆ ಆಯೋಗದ ಪ್ರಕಟಣೆ ಹೊರಗೆ ಬಿದ್ದ ದಿನವೇ ಮಠಗಳಿಗೆ ಹಣ ಬಿಡುಗಡೆ ಮಾಡಿದ ಸುದ್ದಿಯೂ ಮಾಧ್ಯಮಗಳಲ್ಲಿ ಪ್ರಕಟವಾಗುತ್ತದೆ. ಇದೆಲ್ಲ ಕೇವಲ ಕಾಕತಾಳೀಯ ಇರಲಾರದು.

ಸಿದ್ದರಾಮಯ್ಯ ಸರ್ಕಾರದ ಆರ್ಥಿಕ ಸ್ಥಿತಿ ಬಹಳ ಭದ್ರವಾಗಿಯೇನೂ ಇಲ್ಲ. ಅವರೇನೋ ಎಂದಿನಂತೆ ಈ ಸಾರಿಯೂ ಉಳಿತಾಯ ಬಜೆಟ್ ಮಂಡಿಸಿದ್ದಾರೆ. ಅದರ ಹಿಂದೆಯೇ ಚಾಲ್ತಿ ಸಾಲಿನ 4,400 ಕೋಟಿ ರೂಪಾಯಿಗಳ ಪೂರಕ ಅಂದಾಜನ್ನೂ ಮಂಡಿಸಿದ್ದಾರೆ. ಅಂದರೆ ಕಳೆದ ವರ್ಷ 4,400 ಕೋಟಿ ರೂಪಾಯಿ ಹೆಚ್ಚು ಖರ್ಚು ಮಾಡಲಾಗಿದೆ ಎಂದು ಅರ್ಥ. ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಕೂಡಲೇ ಒಂದು ರೂಪಾಯಿಗೆ ಒಂದು ಕೆ.ಜಿ ಅಕ್ಕಿ ಕೊಡುವ ತೀರ್ಮಾನ ಪ್ರಕಟಿಸಿದಾಗ ಅಂದಾಜು ಮಾಡಿದ ಹೆಚ್ಚುವರಿ ಹೊರೆ 4,000 ಕೋಟಿ ರೂಪಾಯಿಗಳ ಸುತ್ತಮುತ್ತಲೇ ಇತ್ತು. ಆ ಕೊರತೆಯನ್ನು ಅವರಿಗೆ ತುಂಬಿಸಿಕೊಳ್ಳಲು ಆಗಲಿಲ್ಲ. ಈ ವರ್ಷ ಚುನಾವಣೆ ವರ್ಷ ಎಂದು ಅವರೂ ತಮ್ಮ ಬಜೆಟ್‌ನಲ್ಲಿ ಸಂಪನ್ಮೂಲ ಸಂಗ್ರಹಣೆಗೆ ಒತ್ತು ನೀಡಲಿಲ್ಲ. ಕೇಂದ್ರ ಹಣಕಾಸು ಸಚಿವ ಪಿ.ಚಿದಂಬರಂ ಅವರಂತೂ ಮುಂದಿನ ಹಣಕಾಸು ಸಚಿವರ ತಲೆಗೆ ಎಲ್ಲ ತಲೆನೋವನ್ನು ಕಟ್ಟಿಬಿಟ್ಟಿದ್ದಾರೆ. ಆದರೆ, ಸಿದ್ದರಾಮಯ್ಯ ಇನ್ನೂ ನಾಲ್ಕು ವರ್ಷ ಅಧಿಕಾರ ಮಾಡಬೇಕು. ಅವರು ಬರೀ ಮುಖ್ಯಮಂತ್ರಿ ಆಗಿ ಇರುವುದಿಲ್ಲ. ಹಣಕಾಸು ಸಚಿವರೂ ಆಗಿ ಇರುತ್ತಾರೆ.

ಪ್ರಧಾನಿ ಮನಮೋಹನ ಸಿಂಗ್ ಅವರು 1991ರಲ್ಲಿ ಆಗಿನ ಸರ್ಕಾರದಲ್ಲಿ ಹಣಕಾಸು ಸಚಿವರಾಗಿ ಆರ್ಥಿಕ ಸುಧಾರಣೆಗಳಿಗೆ ಚಾಲನೆ ನೀಡುವಾಗ, 'ಎಲ್ಲ ಸರ್ಕಾರಗಳು ಹಾಸಿಗೆ ಇದ್ದಷ್ಟು ಕಾಲು ಚಾಚಬೇಕು' ಎಂದು ಹೇಳಿದ್ದರು. ಇದನ್ನು ಅವರೇ ಹೇಳಬೇಕಾಗಿರಲಿಲ್ಲ. ನಮ್ಮ ಹಿರಿಯರು ಹೀಗೆಯೇ ಸಂಸಾರ ಮಾಡಿದ್ದರು. ತಮ್ಮ ಮಕ್ಕಳಿಗೆ ಅದೇ ಕಿವಿ ಮಾತು ಹೇಳಿದ್ದರು. ಸಿಂಗ್ ಅವರೂ ಹಾಗೆ ಹೇಳಲು ಒಂದು ಕಾರಣವಿತ್ತು. ಮುಖ್ಯವಾಗಿ ಅವರಿಗೆ ಅಂಕೆಯಿಲ್ಲದ ಸಹಾಯಧನಗಳ ಮೇಲೆ ನಿಯಂತ್ರಣ ಹಾಕಬೇಕಿತ್ತು. ಇದೀಗ ಎರಡು ಅವಧಿಗೆ ಸತತವಾಗಿ ಪ್ರಧಾನಿ ಹುದ್ದೆಯನ್ನು ಪೂರ್ಣಗೊಳಿಸಿರುವ ಸಿಂಗ್ ಅವರಿಗೆ ತಾವು ಅಂದುಕೊಂಡುದನ್ನು ಮಾಡಲು ಆಗಲಿಲ್ಲ. ವೋಟಿನ, ಅಧಿಕಾರದ ರಾಜಕೀಯ ನಿರ್ಮಿಸಿರುವ ಅನಿವಾರ್ಯ ಸ್ಥಿತಿಯಲ್ಲಿ ಅವರೂ ಬಂದಿಯಾದರು.

ಇದು ಒಂದು ಆಕ್ಟೋಪಸ್ ಹಿಡಿತ. ಯಾರೂ ಇದರ ಹಿಡಿತದಿಂದ ಹೊರಗೆ ಬರಲು ಸಿದ್ಧರಿಲ್ಲ. ಸಾಧ್ಯವೂ ಇಲ್ಲವೇನೋ? ಅಧಿಕಾರ ಹಿಡಿಯಬೇಕು ಎಂದರೆ ಮತದಾರರನ್ನು

ಹೇಗಾದರೂ ಮಾಡಿ ಸಂಪ್ರೀತಗೊಳಿಸಬೇಕು ಎಂದೇ ಎಲ್ಲರೂ ಅಂದುಕೊಂಡಂತೆ ಕಾಣುತ್ತದೆ. ಹಾಗಾದರೆ ಆಡಳಿತ ಎಂದರೆ ಏನು? ಒಂದು ಸರ್ಕಾರದ ಕೆಲಸ ಏನು? ಒಂದು ರಾಜಕೀಯ ಪಕ್ಷ ಅಧಿಕಾರಕ್ಕೆ ಬರಬೇಕು ಎಂದರೆ ಹೀಗೆ ಉಚಿತ ಕಾಣಿಕೆಗಳನ್ನು ಮಾತ್ರ ಕೊಡಬೇಕೇ? ಅವು ಟಿ.ವಿ, ಲ್ಯಾಪ್‌ಟಾಪ್, ಮೊಬೈಲ್, ಮಿಕ್ಸಿ, ಗ್ರೈಂಡರ್ ಹೀಗೆ ಮನೆಬಳಕೆಯ ವಸ್ತುಗಳೇ ಆಗಿರಬೇಕೇ? ತಮಿಳು ನಾಡಿನ ಮುಖ್ಯಮಂತ್ರಿ ಜಯಲಲಿತಾ ಅವರು ಹನ್ನೊಂದನೇ ತರಗತಿಯ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಕೊಡುತ್ತೇನೆ ಎಂಬ ಭರವಸೆ ಕೊಟ್ಟು ಅಧಿಕಾರ ಹಿಡಿದರು. ಅಧಿಕಾರಕ್ಕೆ ಬಂದ ಮೇಲೆ ಸಿದ್ದರಾಮಯ್ಯ ಅದೇ ಭರವಸೆ ಕೊಟ್ಟಿದ್ದಾರೆ. ತಾವಷ್ಟೇ ಅಧಿಕಾರಕ್ಕೆ ಬರುವುದಲ್ಲ, ತಮ್ಮ ಪಕ್ಷವನ್ನು ಕೇಂದ್ರದಲ್ಲಿ ಮತ್ತೆ ಅಧಿಕಾರಕ್ಕೆ ತರುವ ಹೊಣೆಗಾರಿಕೆಯೂ ಅವರ ಮೇಲೆಯೇ ಇದೆ. ಜಯಲಲಿತಾ ಅವರು ತಮ್ಮ ರಾಜಕೀಯ ಕಡುವೈರಿ ಎಂ.ಕರುಣಾನಿಧಿ ಬಣ್ಣದ ಟಿ.ವಿ ಕೊಟ್ಟು ಅಧಿಕಾರಕ್ಕೆ ಬಂದುದನ್ನು ನೋಡಿದ್ದರು. ಅದಕ್ಕಿಂತ ದುಬಾರಿಯಾದ ಲ್ಯಾಪ್‌ಟಾಪ್ ಕೊಡುವ ಭರವಸೆ ಕೊಟ್ಟು ಜಯಾ ಅಧಿಕಾರದ ಏಣಿ ಏರಿದರು. ಈಗ ಅವರಿಗೆ ದೆಹಲಿಯ ಗದ್ದುಗೆಯ ಮೇಲೆ ಕಣ್ಣು. ಎಲ್ಲರಿಗಿಂತ ಮುಂಚೆ ಅವರು ಮತ್ತೆ ಮತದಾರರ ಮುಂದೆ ಆಮಿಷಗಳ ಮೂಳೆಗಳನ್ನು ಹಿಡಿದಿದ್ದಾರೆ. ಆದಾಯ ತೆರಿಗೆ ಮಿತಿ ಐದು ಲಕ್ಷಕ್ಕೆ ಏರಿಸುವುದು, ಇತ್ಯಾದಿ... ಇತ್ಯಾದಿ...ತಮ್ಮ ಜನ್ಮ ದಿನವಾದ ಫೆಬ್ರುವರಿ 24ರಂದು ಹುಟ್ಟಿದ ಎಲ್ಲ ಹೆಣ್ಣು ಶಿಶುಗಳಿಗೆ ತಲಾ ಹತ್ತು ಸಾವಿರ ರೂಪಾಯಿಗಳ ಕೊಡುಗೆಯನ್ನೂ ಅವರು ಘೋಷಿಸಿದರು. ಇತ್ತ ತಮ್ಮ ರಾಜ್ಯದ ಮೂಲ ಸೌಕರ್ಯ ಮತ್ತು ಆಡಳಿತ ಸುಧಾರಣಾ ಕ್ರಮಗಳಿಗೆ 41,000 ಕೋಟಿ ರೂಪಾಯಿ ಕೊಡಬೇಕು ಎಂದು ಕೇಂದ್ರದ 14ನೇ ಹಣಕಾಸು ಆಯೋಗದ ಮುಂದೆ ಅಹವಾಲನ್ನೂ ಮಂಡಿಸಿದರು. ನಮ್ಮ ವರಮಾನದ ಮೂಲಗಳನ್ನು ಬತ್ತಿಸಿಕೊಂಡು ಕೇಂದ್ರದ ಮುಂದೆ ಬೊಗಸೆಯೊಡ್ಡಿದರೆ ಕೊಡಲು ಅದೇನು ತನ್ನ ಹಿತ್ತಲಲ್ಲಿ ಹಣದ ಮರಗಳನ್ನು ನೆಟ್ಟಿದೆಯೇ?

ಇದು ಒಂದು ದ್ವಂದ್ವ, ಇದು ಮೀರಲಾಗದ ದ್ವಂದ್ವ ಭಾರತದಂಥ ಬಡವರೇ ಹೆಚ್ಚು ಇರುವ ದೇಶದಲ್ಲಿ ಇಂಥ ಸಹಾಯಧನಗಳನ್ನು ಸಂಪೂರ್ಣ ನಿವಾರಣೆ ಮಾಡಲು ಆಗುವುದಿಲ್ಲ. ಸಿದ್ದರಾಮಯ್ಯನವರ 'ಅನ್ನ ಭಾಗ್ಯ' ಯೋಜನೆಯನ್ನು ಟೀಕಿಸುವವರ ಜತೆಗೆ ಸ್ವಾಗತಿಸುವವರೂ ಅಷ್ಟೇ ದೊಡ್ಡ ಸಂಖ್ಯೆಯಲ್ಲಿ ಇದ್ದಾರೆ. ಒಂದು ರೂಪಾಯಿಗೆ ಒಂದು ಕೆ.ಜಿ ಅಕ್ಕಿ ಕೊಡುವ ಸಿದ್ದರಾಮಯ್ಯನವರು ಅದೇ ಅಕ್ಕಿಯನ್ನು ಇಪ್ಪತ್ತು ಪಟ್ಟು ಹೆಚ್ಚು ಹಣ ಕೊಟ್ಟು ಲೆವಿ ಮೂಲಕ ಸಂಗ್ರಹಿಸುತ್ತಿದ್ದಾರೆ. ಮುಂದೆ ಬರುವ ಸರ್ಕಾರ 'ನಮಗೆ ಅಧಿಕಾರ ಕೊಟ್ಟರೆ ಎಲ್ಲ. ಬಡವರಿಗೆ ಉಚಿತವಾಗಿಯೇ ಇಪ್ಪತ್ತು ಕೆ.ಜಿ ಅಕ್ಕಿ ಕೊಡುತ್ತೇವೆ' ಎಂದು ಭರವಸೆ ಕೊಟ್ಟು ಬಿಡಬಹುದಲ್ಲ? ಅದು ನಮಗೆ ಇನ್ನೂ ಹೆಚ್ಚು ಕ್ರಾಂತಿಕಾರಿ ತೀರ್ಮಾನವಾಗಿ ಕಾಣಬಹುದಲ್ಲ? ಈಗ ನಾಲ್ಕು ಸಾವಿರ ಕೋಟಿ ಹೊರೆ ಬಿದಿದ್ದೆ. ಇನ್ನೊಂದು ಸಾವಿರ ಕೋಟಿ ಹೆಚ್ಚು ಆದರೆ ಆಗಲಿ ಬಿಡಿ ಎಂದು ಮುಂದೆ ಮುಖ್ಯಮಂತ್ರಿ ಆಗುವವರು ಹೇಳಿದರೆ ನಾವು ಅವರಿಗೆ ಏನು ಹೇಳುವುದು?

ಇಲ್ಲಿ ನಾವು ಒಂದು ಸೂಕ್ಷ್ಮವನ್ನು ಗಮನಿಸುತ್ತಿಲ್ಲ; ಅಥವಾ ಗಮನಿಸಿದರೂ ಅದನ್ನು ಒತ್ತಿ ಹೇಳುತ್ತಿಲ್ಲ. ಎಲ್ಲ ಸಹಾಯಧನಗಳ ಹೊರೆ ಅಂತಿಮವಾಗಿ ದೇಶದ ಮೇಲೆಯೇ ಬೀಳುತ್ತದೆ. ಪಕ್ಷ ಯಾವುದೇ ಇರಲಿ, ಅದು ಕೊಡುವ ಭರವಸೆಗಳನ್ನು ತನ್ನ ಮನೆಯಿಂದ ಹಣ ತಂದೇನೂ ಈಡೇರಿಸುವುದಿಲ್ಲ. ಕರುಣಾನಿಧಿಯವರು ಬಣ್ಣದ ಟಿ.ವಿಗಳನ್ನು ಸರ್ಕಾರದ ಬೊಕ್ಕಸದಿಂದ ಹಣ ತೆಗೆದೇ ಖರೀದಿಸಿ ಜನರಿಗೆ ಹಂಚುತ್ತಾರೆ. ಜಯಲಲಿತಾ ಅವರು ಲ್ಯಾಪ್‌ಟಾಪ್‌ಗಳನ್ನು ಅದೇ ಬೊಕ್ಕಸದಿಂದಲೇ ಖರೀದಿಸಿ ವಿತರಿಸುತ್ತಾರೆ. ಸಿದ್ದರಾಮಯ್ಯನವರು ಬಡವರಿಗೆ ಅಕ್ಕಿಯನ್ನೇ ಕೊಡಲಿ, ಮಠಗಳಿಗೆ ಹಣವನ್ನೇ ಕೊಡಲಿ ಈಗಾಗಲೇ ಕೊರತೆ ಎದುರಿಸುತ್ತಿರುವ ಬೊಕ್ಕಸದಿಂದಲೇ ಕೊಡಬೇಕು. ಜನರಿಗೂ ಇದು ಗೊತ್ತಿದ್ದಂತೆ ಕಾಣುತ್ತದೆ. 'ರಾಜಕಾರಣಿಗಳೇನು ತಮ್ಮ ಮನೆಯಿಂದ ಕೊಡುತ್ತಾರೆಯೇ? ಕೊಟ್ಟರೆ ಕೊಡಲಿ, ತೆಗೆದುಕೊಂಡು ಹೋದರಾಯಿತು' ಎಂದು ಬೊಗಸೆಯೊಡ್ಡಿ ಸಾಲಾಗಿ ನಿಂತುಕೊಳ್ಳುತ್ತಾರೆ.

ಸರ್ಕಾರ ಎಂದರೆ ಇಷ್ಟೇ ಅಲ್ಲವಲ್ಲ? ಒಂದು ರಾಜ್ಯಕ್ಕೆ ಒಳ್ಳೆಯ ರಸ್ತೆಗಳು ಬೇಕು. ಅಲ್ಲಿನ ಬಡ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಸಿಗಬೇಕು. ಬಡವರಿಗೆ ಒಳ್ಳೆಯ ಆರೋಗ್ಯ ಸೇವೆ ದೊರಕಬೇಕು. ಅಲ್ಲಿನ ರೈತರ ಹೊಲಗದ್ದೆಗಳಿಗೆ ನೀರಾವರಿ ಸೌಕರ್ಯ ಕಲ್ಪಿಸಬೇಕು. ಕನಿಷ್ಠ ಹನ್ನೆರಡು ಗಂಟೆ ಕಾಲ ಹಳ್ಳಿಗಳಲ್ಲಿ ಗುಣಮಟ್ಟದ ವಿದ್ಯುತ್ ಇರಬೇಕು. ಶುದ್ಧವಾದ ಕುಡಿಯುವ ನೀರು ಸಿಗಬೇಕು. ಬಾಕಿಯದೆಲ್ಲ ಹೋಗಲಿ, ನಮ್ಮ ಎಲ್ಲ ಹಳ್ಳಿಗಳಲ್ಲಿ ಶುದ್ಧವಾದ ಕುಡಿಯುವ ನೀರಾದರೂ ಸಿಗುತ್ತಿದೆಯೇ? ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಲ್ಲಿ ಅದನ್ನು ಪೂರೈಸಲು ಸರ್ಕಾರ ಸಮರ್ಥವಾಯಿತೇ? ಗ್ರಾಮೀಣಾಭಿವೃದ್ಧಿ ಸಚಿವ ಎಚ್.ಕೆ.ಪಾಟೀಲರನ್ನು ಕೇಳಿ, ಉತ್ತರ ಹೇಳುತ್ತಾರೆ!

ಹಾಗಾದರೆ ರಾಜಕಾರಣಿಗಳು ನಮಗೆ ಮೋಸ ಮಾಡುತ್ತಿದ್ದಾರೆಯೇ? ಸರ್ಕಾರದ ಬೊಕ್ಕಸದಿಂದ ಮೊಗೆದು ಮೊಗೆದು ತೆಗೆದು ನಮ್ಮ ಬೊಗಸೆಗಳನ್ನು ಮಾತ್ರ ತುಂಬುವವರು ಮತ್ತೇನು ಮಾಡುತ್ತಿದ್ದಾರೆ? ಅವರು ವ್ಯಾಪಾರಿಗಳಾಗಿದ್ದಾರೆ. ನಮ್ಮನ್ನು ಗ್ರಾಹಕರು ಎಂದು ಅಂದುಕೊಂಡಿದ್ದಾರೆ. ಆದರೆ, ಇದರ ಆಚೆ ಸರ್ಕಾರ ಮತ್ತು ಜನರ ನಡುವೆ ಒಂದು ಸಂಬಂಧ ಇದೆ. ಒಂದು ಉದ್ದೇಶ ಎಂದು ಇದೆ. ಐದು ವರ್ಷಗಳ ಅವಧಿಗೆ ಚುನಾಯಿತರಾದ ಜನಪ್ರತಿನಿಧಿಗಳಿಗೆ ಅಕ್ಕಿ ಕೊಡುವುದು, ಬಣ್ಣದ ಟಿ.ವಿ ಕೊಡುವುದು, ಲ್ಯಾಪ್‌ಟಾಪ್ ಕೊಡುವುದು ಮಾತ್ರ ಹೊಣೆಗಾರಿಕೆಯಲ್ಲ. ಒಟ್ಟು ನಾಡನ್ನು ಸಂಪದ್ಭರಿತ ಮಾಡುವ ಕನಸನ್ನು ಅವರು ಕಾಣಬೇಕು. ಒಂದು ನಾಡು ಶ್ರೀಮಂತವಾದರೆ ಮಾತ್ರ ಅಲ್ಲಿನ ಜನರೂ ಶ್ರೀಮಂತರಾಗುತ್ತಾರೆ. ರಾಜಕೀಯ ನಾಯಕರಿಗೆ ಶ್ರೀಮಂತ ನಾಡು ಕಾಣುತ್ತಿಲ್ಲ. ಅದನ್ನು ನಿರ್ಮಿಸಬಹುದಾದ ಸಂಸತ್ತು ಕಾಣುತ್ತಿಲ್ಲ. ಶಾಸನ ಸಭೆಗಳು ಕಾಣುತ್ತಿಲ್ಲ. ಅಧಿಕಾರದ ಕುರ್ಚಿಯೊಂದೇ ಕಾಣುತ್ತಿದೆ. 'ಬಲಿಷ್ಠ ಭಾರತ'ವನ್ನು ನಿರ್ಮಿಸಲು ಹೊರಟಿರುವ ರಾಜಕೀಯ ಪಕ್ಷ ಮತ್ತು ಅದರ ನಾಯಕರು ನಮ್ಮ ಮುಂದೆ ಇನ್ನೇನೇನು ಬಿಸಾಡಲು ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆಯೋ ಯಾರಿಗೆ ಗೊತ್ತು?

09.03.2014

# ಗೆಳೆಯರನ್ನು ಉಚ್ಚಾಟಿಸಿ

# ಕೇಜ್ರಿವಾಲ್ ಗೆದ್ದರೇ... ಅಥವಾ...?

ಇದೆಲ್ಲ ಇಷ್ಟು ಬೇಗನೇ ಆರಂಭವಾಗುತ್ತದೆ ಎಂದು ಯಾರೂ ಅಂದುಕೊಂಡಿರಲಿಲ್ಲ. ಪಕ್ಷ ಅಸ್ತಿತ್ವಕ್ಕೆ ಬಂದು ಎರಡು ವರ್ಷಗಳೂ ಆಗಿಲ್ಲ. ದೆಹಲಿಯಲ್ಲಿ ಅಧಿಕಾರಕ್ಕೆ ಬಂದು ಒಂದು ತಿಂಗಳೂ ಆಗಿಲ್ಲ. ಆಗಲೇ ಇಬ್ಬರು ಸ್ಥಾಪಕ ಸದಸ್ಯರು ಪಕ್ಷದ ಪ್ರಮುಖ ನೀತಿ ನಿರ್ಧಾರದ ವೇದಿಕೆಯಿಂದ ವಜಾ ಆಗಿದ್ದಾರೆ. ಅವರೇನು ಸಾಮಾನ್ಯರಲ್ಲ. ಒಬ್ಬರು ದೇಶದ ಅಗ್ರಮಾನ್ಯ ರಾಜಕೀಯ ವಿಶ್ಲೇಷಕರು, ಇನ್ನೊಬ್ಬರು ಅಗ್ರಮಾನ್ಯ ನ್ಯಾಯವಾದಿ : ಒಬ್ಬರು ಯೋಗೇಂದ್ರ ಯಾದವ್, ಇನ್ನೊಬ್ಬರು ಪ್ರಶಾಂತ್ ಭೂಷಣ್, ಅವರೇನು ಎಲ್ಲ ಸ್ಥಾಪಿತ ರಾಜಕೀಯ ಪಕ್ಷಗಳಲ್ಲಿನ ಹಾಗೆ ಅಧಿಕಾರಕ್ಕೆ ಕಚ್ಚಾಡುವವರು ಅಲ್ಲ, ಮುಖ್ಯಮಂತ್ರಿಯೋ, ಉಪಮುಖ್ಯಮಂತ್ರಿಯೋ ಆಗಬೇಕು ಎಂದುಕೊಂಡವರೂ ಅಲ್ಲ.

ಎಎಪಿ ಇತರ ಎಲ್ಲ ರಾಜಕೀಯ ಪಕ್ಷಗಳ ಹಾಗೆ ಅಲ್ಲ. ನಮ್ಮ ದೇಶದಲ್ಲಿ ಅದು ಒಂದು ಅತ್ಯಂತ ಅಪರೂಪ ಎನ್ನುವಂಥ ಪ್ರಯೋಗ. ಆ ಪ್ರಯೋಗಕ್ಕೆ ಸಿಕ್ಕ ಜನಮನ್ನಣೆಯೂ ಅಪರೂಪ ಎನ್ನುವಂಥದು. ಎದುರಾಳಿಗಳನ್ನೆಲ್ಲ ದೂಳಿಪಟ ಮಾಡಿದ ಜನಮನ್ನಣೆ ಅದು. ಅಂಥ ಮನ್ನಣೆಯನ್ನು ಉಳಿಸಿಕೊಳ್ಳುವುದು ಹೇಗೆ, ವಿಸ್ತರಿಸುವುದು ಹೇಗೆ ಎಂಬುದು ಅವರ ಕಾಳಜಿ. ಅವರು ಎತ್ತಿದ ಆಕ್ಷೇಪಗಳು ಸಂಪೂರ್ಣವಾಗಿ ತಾತ್ವಿಕವಾದುವು ಮತ್ತು ಪಕ್ಷದ ಘೋಷಿತ ಸಿದ್ಧಾಂತಕ್ಕೆ ಪೂರಕವಾದುವು. ಪ್ರಶಾಂತ್ ಭೂಷಣ್ ಕೇಳಿದ್ದು : ಪಕ್ಷ ದೆಹಲಿ ಗದ್ದುಗೆ ಏರಿ ತಿಂಗಳಾಗುತ್ತ ಬಂತು. ಈಗಲೂ ಪಕ್ಷದ ವೆಬ್‌ಸೈಟ್‌ನಲ್ಲಿ ಚುನಾವಣೆ ವೆಚ್ಚಕ್ಕೆ ಎಷ್ಟು ದೇಣಿಗೆ ಬಂತು ಎಂಬ ವಿವರ ಇದೆಯೇ ಹೊರತು ಎಷ್ಟು ಹಣ ಯಾವುದಕ್ಕೆ ಖರ್ಚಾಯಿತು ಎಂಬ ವಿವರ ಇಲ್ಲ. ಚುನಾವಣೆ ಸಮಯದಲ್ಲಿ ಪಕ್ಷಕ್ಕೆ ಬಂದ ಎರಡು ಕೋಟಿ ದೇಣಿಗೆಯ ಮೂಲ ಸಂಶಯಾಸ್ಪದವಾದುದು. ಉತ್ತರದಾಯಿಯಾದ, ಪಾರದರ್ಶಕವಾದ ಮತ್ತು ಪಾಲುಗೊಳ್ಳುವಿಕೆಯಿರುವ ಒಂದು ಪಕ್ಷ ನಡೆದುಕೊಳ್ಳುವ ರೀತಿ ಇದಲ್ಲ. ಆಂತರಿಕ ಪ್ರಜಾಸತ್ತೆ ಇರುತ್ತದೆ ಎಂದು ಹೇಳಿಕೊಂಡ ಒಂದು

ಪಕ್ಷ ಈಗ ಹೈಕಮಾಂಡ್ ಸಂಸ್ಕೃತಿ ಇರುವ ಇತರ ಪಕ್ಷಗಳ ಹಾಗೆಯೇ ನಡೆದುಕೊಳ್ಳುತ್ತಿದೆ. ಒಬ್ಬ ವ್ಯಕ್ತಿಯ ಮಾತೇ ನಡೆಯುತ್ತಿದೆ. ಪಕ್ಷದ ರಾಜಕೀಯ ವ್ಯವಹಾರಗಳ ಸಮಿತಿ (ಪಿಎಸಿ) ಮತ್ತು ರಾಷ್ಟ್ರೀಯ ಕಾರ್ಯಕಾರಿಣಿ (ಎನ್.ಸಿ)ಯ ನಿರ್ಣಯಗಳನ್ನು ವೆಬ್‌ಸೈಟ್‌ನಲ್ಲಿ ಹಾಕುವುದು ದೂರ ಉಳಿಯಿತು, ಒಂದು ಪುಸ್ತಕದಲ್ಲಿಯೂ ಬರೆದು ಇಡುತ್ತಿಲ್ಲ. ದೆಹಲಿ ವಿಧಾನಸಭೆ ಚುನಾವಣೆಯಲ್ಲಿ ಎಎಪಿ ಅಭ್ಯರ್ಥಿಗಳ ಆಯ್ಕೆ ಸಮರ್ಪಕ ಎನ್ನುವಂತೆ ಇರಲಿಲ್ಲ. ಕೆಲವರು ನೇರವಾಗಿ ಹೆಂಡ ಹಂಚಿದರು, ಇನ್ನು ಕೆಲವರು ಹೆಂಡ ಹಂಚಿ ಮತ ಪಡೆಯುವುದು ತಪ್ಪೇನೂ ಅಲ್ಲ ಎಂದರು. ಇದನ್ನೆಲ್ಲ ಕೇಳ್ತಿವಾಲ್ ನೋಡಿಯೂ ನೋಡದಂತೆ ಸುಮ್ಮನೇ ಇದ್ದಾರೆ. ಇತ್ಯಾದಿ ಇತ್ಯಾದಿ... ಯೋಗೇಂದ್ರ ಯಾದವ್ ಕೂಡ ಹೆಚ್ಚ ಕಡಿಮೆ ಇದೇ ಮಾತನ್ನು ಹೇಳಿದ್ದಾರೆ. ಐದು ಪುಟಗಳ ಸುದೀರ್ಘ ಪತ್ರವನ್ನು ಅವರೂ ಕೇಜ್ರಿವಾಲ್ ಅವರಿಗೆ ಬರೆದಿದ್ದರು.

ನ್ಯಾಯವಾಗಿ ನೋಡಿದರೆ ಯಾದವ್ ಮತ್ತು ಪ್ರಶಾಂತ್ ಅವರನ್ನು ಕರೆಸಿ ಕೇಜ್ರಿವಾಲ್ ಮಾತನಾಡಬೇಕಿತ್ತು. ಆರಂಭದಲ್ಲಿ ಇತರ ಅನೇಕ ಸಮಾನಮನಸ್ಕರ ಜತೆಗೆ ತಾವು ಮೂರೂ ಜನ ಸೇರಿಕೊಂಡು ಕನಸಿದ, ಕಟ್ಟಿದ ಒಂದು ಪಕ್ಷ ಮತ್ತು ಅದರ ಸರ್ಕಾರ ಎಲ್ಲಿ ದಾರಿ ತಪ್ಪುತ್ತಿದೆ ಎಂದು ಚರ್ಚಿಸಬೇಕಿತ್ತು. ಆದರೆ, ಕೆಲವೇ ದಿನಗಳಲ್ಲಿ ಆ ಮೂರೂ ಜನರ ದಾರಿಗಳು ಎಷ್ಟು ಬೇರೆ ಬೇರೆ ಆಗಿವೆ ಎಂದರೆ ಅವು ಮತ್ತೆ ಎಲ್ಲಿಯಾದರೂ ಕೂಡಿಯಾವೇ ಎಂಬ ಅನುಮಾನ ಬರುತ್ತಿದೆ. ಇತರ ರಾಜಕೀಯ ಪಕ್ಷಗಳ ಹಾಗೆಯೇ ಅಲ್ಲಿ ಕೆಸರೆರಚಾಟ ನಡೆದಿದೆ. ಕೇಜ್ರಿವಾಲ್ ಅವರದು ಏಕವ್ಯಕ್ತಿ ಆಡಳಿತ ಆಗುತ್ತಿದೆ ಎಂಬ ಪ್ರಶಾಂತ್ ಭೂಷಣ್ ಟೀಕೆಗೆ ಕೇಜ್ರಿವಾಲ್ ಬೆಂಬಲಿಗನೊಬ್ಬ ಪ್ರಶಾಂತ್ ಭೂಷಣ್ ಅವರು ತಮ್ಮ ತಂದೆ, ತಾವು ಮತ್ತು ತಮ್ಮ ಸೋದರಿಯನ್ನು ಒಳಗೊಂಡ ಮೂವರು ಸದಸ್ಯರ ಕುಟುಂಬದ ಹಿಡಿತಕ್ಕೆ ಪಕ್ಷವನ್ನು ತೆಗೆದುಕೊಳ್ಳಲು ಹೊರಟಿದ್ದಾರೆ ಎಂದು ಪ್ರತ್ಯಾರೋಪ ಮಾಡಿದ.

ಪ್ರಶಾಂತ್ ಭೂಷಣ್ ಅವರ ತಂದೆ ಮತ್ತು ಪ್ರಖ್ಯಾತ ವಕೀಲ ಶಾಂತಿ ಭೂಷಣ್ ಆರಂಭದಲ್ಲಿ ಪಕ್ಷಕ್ಕೆ ಒಂದು ಕೋಟಿ ರೂಪಾಯಿ ದೇಣಿಗೆ ಕೊಟ್ಟವರು. ಅವರಿಗೆ ಅಥವಾ ಅವರ ಕುಟುಂಬದವರಿಗೆ ಪಕ್ಷ ದಾರಿ ತಪ್ಪಿತು ಎಂದು ಅನಿಸಿದರೆ ಟೀಕೆ ಮಾಡಲು ಎಲ್ಲ ನೈತಿಕತೆ ಇರುತ್ತದೆ. ಏಕೆಂದರೆ ಈಗ ಎಲ್ಲರ ಕಣ್ಣು ಕುಕ್ಕುವ ಹಾಗೆ ಎದ್ದು ನಿಂತಿರುವ ಎಎಪಿಯ ಮಹಲನ್ನು ಅವರು ಒಂದೊಂದೇ ಇಟ್ಟಿಗೆ ಇಟ್ಟು ಕಟ್ಟಿದವರು. ಈಗ ಕೇಜ್ರಿವಾಲ್ ಪರ ಭಟ್ಟಂಗಿತನ ಮಾಡುವವರು ಬಿಡಿಗಾಸನ್ನೂ ಕೊಟ್ಟಿರದೇ ಇರಬಹುದು.

ಕೇಜ್ರಿವಾಲ್ ದಂತಗೋಪುರದಲ್ಲಿ ಹೋಗಿ ಕುಳಿತುಬಿಟ್ಟಿದ್ದಾರೆ ಎಂದು ಪ್ರಶಾಂತ್ ಮತ್ತು ಯಾದವ್ ಅವರಿಗೆ ಅನಿಸತೊಡಗಿದೆ. ಈ ಇಬ್ಬರು ಎತ್ತಿದ ಪ್ರಶ್ನೆಗಳಿಗೆ ಸಿಕ್ಕ ಉತ್ತರ ಅವರನ್ನು ಪಿಎಸಿಯಿಂದಲೇ ಹೊರಗೆ ಹಾಕುವ ತೀರ್ಮಾನ. ಮತ್ತು ಇದು ರಹಸ್ಯವಾಗಿಯೇನೂ ಇರಲಿಲ್ಲ. ಸಮಿತಿಯ ಸಭೆ ಸೇರುವುದಕ್ಕಿಂತ ಕೆಲವು ದಿನ ಮುಂಚೆಯೇ ಆ ಇಂಗಿತ ಸಿಕ್ಕಿತ್ತು. ಒಂದು ಸಮಾಧಾನ ಏನು ಎಂದರೆ ಪಕ್ಷದಲ್ಲಿ ಇನ್ನೂ ಪ್ರಜಾಪ್ರಭುತ್ವ

ಉಳಿದುಕೊಂಡಿರುವುದು. ಏಕೆಂದರೆ ಹನ್ನೊಂದು ಮಂದಿ ಯಾದವ್ ಮತ್ತು ಭೂಷಣ್ ಅವರ ಉಚ್ಚಾಟನೆ ಪರವಾಗಿ ಮತ ಹಾಕಿದ್ದರೂ ಅವರ ಪರವಾಗಿ ಎಂಟು ಜನ ನಿಂತಿದ್ದಾರೆ.



ಆದರೆ ಕೇಜ್ರಿವಾಲ್ ಅವರು ತಮಗೆ ಏನು ಬೇಕೋ ಅದನ್ನು ಸಮಿತಿಯಿಂದ ಮಾಡಿಸಿಕೊಂಡಿದ್ದಾರೆ. ಪಿಎಸಿಯ ಮಹತ್ವದ ಸಭೆಯಿಂದ ಹೊರಗೆ ಉಳಿದ ಕೇಜ್ರವಾಲ್ ಇಂಥ ಆಂತರಿಕ ಕಿತ್ತಾಟಗಳಿಂದ ತಾವು ಬಹಳ ಎತ್ತರದವರು ಎಂದು ತೋರಿಸಿಕೊಂಡರು. ಆದರೆ, ಅವರಿಬ್ಬರನ್ನು ತೆಗೆಯದೇ ಇದ್ದರೆ ತಾವು ಪಕ್ಷದ ರಾಷ್ಟ್ರೀಯ ಸಂಚಾಲಕ ಹುದ್ದೆಯಲ್ಲಿ ಮುಂದುವರಿಯುವುದಿಲ್ಲ ಎಂಬ ಇಂಗಿತವನ್ನೂ ನೀಡಿದರು. ಅವರ ಹಟವೇ ಗೆದ್ದಿತು. ಆದರೆ, ಅದರಿಂದ ಪಕ್ಷಕ್ಕೆ ಒಳ್ಳೆಯದಾಗುತ್ತದೆಯೇ?

ನಮ್ಮ ದೇಶದ ರಾಜಕೀಯ ಇಷ್ಟು ವರ್ಷಗಳ ಕಾಲ, ಬಹುಪಾಲು ಅಧಿಕಾರದ ಆಸೆಯ ಭಿನ್ನಮತವನ್ನೇ ನೋಡಿಕೊಂಡು ಬಂದಿದೆ. ಪರಸ್ಪರರ ಕಾಲು ಎಳೆಯುವ ಉದ್ದೇಶದ ಭಿನ್ನಮತ ಅದು; ಅದು ನಕರಾತ್ಮಕವಾದುದು. ಅದರಿಂದ ಪಕ್ಷಕ್ಕೂ ಒಳ್ಳೆಯದಾಗುವುದಿಲ್ಲ, ಸರ್ಕಾರಕ್ಕೂ ಒಳ್ಳೆಯದಾಗುವುದಿಲ್ಲ. ಪಕ್ಷದಲ್ಲಿ ಪಂಗಡಗಳು ಹುಟ್ಟಿಕೊಂಡರೆ ಸರ್ಕಾರಕ್ಕೆ ಇರಬೇಕಾದ ಆಡಳಿತದ ಏಕಾಗ್ರತೆ ಹೊರಟು ಹೋಗುತ್ತದೆ. ಒಂದು ಕಡೆ ಭಿನ್ನಮತ ಹುಟ್ಟಿಕೊಂಡರೆ ಇನ್ನೊಂದು ಕಡೆ ಓಲೈಕೆ ಆರಂಭವಾಗುತ್ತದೆ. ಆಮಿಷಗಳು ಶುರುವಿಟ್ಟುಕೊಳ್ಳುತ್ತವೆ. ಕರ್ನಾಟಕದಲ್ಲಿ 'ಜಿ' ಕೆಟಗರಿ ನಿವೇಶನದ ವಿವಾದ ಏಕೆ ತಾರ್ಕಿಕ ಅಂತ್ಯ ಕಾಣುವುದಿಲ್ಲ ಎಂದರೆ ಅಂಥ ನಿವೇಶನಗಳ ಬಹುತೇಕ ಫಲಾನುಭವಿಗಳು ಶಾಸಕರು ಮತ್ತು ಸಂಸದರೇ ಆಗಿರುತ್ತಾರೆ. ಎಲ್ಲ ಪಕ್ಷಗಳ ಸರ್ಕಾರಗಳು ಅವರನ್ನು ಓಲೈಸಲು ಇಂಥ ಬೆಲೆಬಾಳುವ ನಿವೇಶನಗಳನ್ನು ಆಮಿಷದ ರೂಪದಲ್ಲಿ ಕೊಟ್ಟಿರುತ್ತವೆ.

ಕೇಜ್ರಿವಾಲ್ ಕೂಡ ಇಂಥದನ್ನೇ ಮಾಡಬೇಕಾಗುತ್ತದೆ ಎಂದು ಹೇಳಲು ನಾನೇನು ಹೊರಟಿಲ್ಲ. ಯಾದವ್ ಅವರು ಹೇಳಿದ ಹಾಗೆಯೇ ಕೇಜಿವಾಲ್ ಒಬ್ಬ ಅಪ್ಪಟ ಪ್ರಾಮಾಣಿಕ ವ್ಯಕ್ತಿಯೇ ಆಗಿರಬಹುದು. ಆದರೆ, ಅವರು ಈಗಲೇ ರಾಜಿ ಮಾಡಿಕೊಳ್ಳಲು ಆರಂಭಿಸಿದ್ದಾರೆಯೇ ಎಂಬ ಪ್ರಶ್ನೆಯನ್ನು ಭೂಷಣ್ ಮತ್ತು ಯಾದವ್ ಎತ್ತಿದ್ದಾರೆ. ಒಂದು ಸಾರಿ ಭಿನ್ನಮತವನ್ನು ತಣಿಸುವ' ಅಥವಾ 'ಬಗ್ಗುಬಡಿಯುವ ರೀತಿಯನ್ನು ಅಧಿಕಾರದಲ್ಲಿ ಇದ್ದವರು ಕಲಿತುಕೊಂಡರೆ ಅವರ ಮುಂದೆ ಪ್ರಶ್ನೆಗಳು ಎದ್ದು ನಿಲ್ಲುವುದು ಕಡಿಮೆ ಆಗುತ್ತ ಹೋಗುತ್ತದೆ. ಪಕ್ಷದ ಪ್ರಮುಖ ವೇದಿಕೆಯಿಂದಲೇ ಹೊರಗೆ ಹಾಕಿಸಿಕೊಂಡಿರುವ ಯಾದವ್ ಮತ್ತು ಭೂಷಣ್ ಅವರಿಗೆ ಇನ್ನು ಮುಂದೆ ಯಾವ ಹೊಣೆ ಸಿಗುತ್ತದೆ ಎಂದು ಗೊತ್ತಿಲ್ಲ. ಬದಲಿಗೆ, ಅವರು ಕಡೆಗಣಿತವಾಗುತ್ತ ಹೋಗುತ್ತಾರೆ, ಒಂದು ದಿನ ಅವರು ನಮ್ಮ ನಿಮ್ಮ ಹಾಗೆ ದೂರ ನಿಂತು ನೋಡುವ ಮೌನಿಗಳು ಆಗುತ್ತಾರೆ ಎಂದೂ ಅನಿಸುತ್ತದೆ.

ಹಾಗೆಂದು ಕೇಜ್ರಿವಾಲ್ ಗೆದ್ದಂತೆ ಆಗುತ್ತದೆಯೇ? ಈಗ ಅವರು ಇಡೀ ಜಗತ್ತಿಗೆ ಎಎಪಿ ತಾನು ಹೇಳಿದಂತೆ ನಡೆಯುವ ಒಂದು ಪಕ್ಷ ಎಂದು ತೋರಿಸಿಕೊಟ್ಟಿದ್ದಾರೆ. ಪ್ರಶಾಂತ್ ಭೂಷಣ್ ಭಯ ನಿಜವೇ ಆಗಿದೆ. ಸಾವಿರಾರು ಜನಸಾಮಾನ್ಯರ ಆಶೋತ್ತರಗಳ ಈಡೇರಿಕೆಗಾಗಿ ಹುಟ್ಟಿಕೊಂಡಿರುವ ಎಎಪಿ ಏಕವ್ಯಕ್ತಿ ಕೇಂದ್ರಿತ ಅಥವಾ ಇನ್ನೊಂದು ರೀತಿಯಲ್ಲಿ ಹೈಕಮಾಂಡ್ ಅಧೀನ ಪಕ್ಷವಾದರೆ ಅದು ಕೂಡ ಈಗ ಇರುವ ಸ್ಥಾಪಿತ ರಾಜಕೀಯ ಪಕ್ಷಗಳಲ್ಲಿ ಒಂದು ಎನಿಸುತ್ತದೆ. ಅವುಗಳ ಜಾಡ್ಯಗಳು ಇದಕ್ಕೂ ಅಂಟಿಕೊಳ್ಳುತ್ತವೆ. ಅಧಿಕಾರ ನಮ್ಮನ್ನು ಭ್ರಷ್ಟರನ್ನಾಗಿ ಮಾಡುತ್ತದೆ. ಪರಮಾಧಿಕಾರ ನಮ್ಮನ್ನು



ಪರಮ ಭ್ರಷ್ಟರನ್ನಾಗಿ ಮಾಡುತ್ತದೆ ಎಂಬ ಮಾತು ನಿಜ ಆಗುತ್ತದೆ. ದೆಹಲಿ ಓಣಿಗಳಲ್ಲಿನ ಬಡವರು ಕಂಡ ಹೊಸ ರಾಜಕೀಯ ಸಂಸ್ಕೃತಿಯ ಕನಸಿಗೆ ಭಂಗ ಬರುತ್ತದೆ. ಭೂಷಣ್ ಮತ್ತು ಯಾದವ್ ಅವರ ದೃಷ್ಟಿ ಇರುವುದು ಓಣಿಗಳಲ್ಲಿ ಇರುವ ಸಾಮಾನ್ಯರ ಕಡೆಗೆ. ಕೇಜ್ರಿವಾಲ್ ಅವರೂ ಆ ಸಾಮಾನ್ಯ ಜನರ ಕಡೆಗಿನ ಲಕ್ಷವನ್ನು ಈಗಾಗಲೇ ಕಳೆದುಕೊಂಡಿದ್ದಾರೆ ಎಂದು ಹೇಳುವುದು ಒಂದಿಷ್ಟು ಕಠೋರ ಎನಿಸಬಹುದು. ಆದರೆ, ಅವರು ಈ ಇಬ್ಬರು ಎತ್ತಿದ ಪ್ರಶ್ನೆಗಳಿಗೆ ಉತ್ತರ ಕೊಡುವ ಜವಾಬ್ದಾರಿಯಿಂದ ನುಣುಚಿಕೊಂಡಿದ್ದಾರೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳಬಹುದು ಎನ್ನುವುದಾದರೆ ಹಾಗೆ ಪ್ರಶ್ನೆ ಕೇಳುವ ಬಾಯಿಯನ್ನೇ ಮುಚ್ಚಿದ್ದಾರೆ.

ರಾಜಕಾರಣದಲ್ಲಿ ರಾಜಿ ಮಾಡಿಕೊಳ್ಳುವುದು ಏಕೆ? ಅದು ಭ್ರಷ್ಟರಾಗುವ ಮೊದಲ ಹೆಜ್ಜೆಯೇ? ಎಎಪಿಗೆ ಬಂದ ಎರಡು ಕೋಟಿ ದೇಣಿಗೆ ಉಳಿದ ರಾಜಕೀಯ ಪಕ್ಷಗಳ ದೇಣಿಗೆಯ ಪ್ರಮಾಣಕ್ಕೆ ಹೋಲಿಸಿದರೆ ಏನೇನೂ ಅಲ್ಲದೇ ಇರಬಹುದು. ಆದರೆ, ಅದರ ಮೂಲ ಸಂಶಯಾಸ್ಪದವಾಗಿರುವುದು ಪಕ್ಷದಲ್ಲಿನ ಈಗಿನ ಎಲ್ಲ ಅಸಮಾಧಾನಕ್ಕೆ ಕಾರಣವಾಗಿದೆ. ಆದರೆ, ಕೇಜ್ರಿವಾಲ್ ಮತ್ತು ಅವರ ಜತೆಗೆ ಇರುವವರಿಗೆ ಅದು ಅಂಥ ದೊಡ್ಡ ಸಂಗತಿಯಾಗಿ ಕಾಣದೇ ಇರುವುದು ರಾಜಕೀಯದಲ್ಲಿ ಭ್ರಷ್ಟಾಚಾರ ನೀಗಬೇಕು ಎನ್ನುವವರನ್ನು ದಿಗ್ಭ್ರಮೆಗೊಳಿಸಿದೆ. ಪ್ರಶಾಂತ್ ಭೂಷಣ್, ಕಾಶ್ಮೀರದಲ್ಲಿ ಜನಮತ ಗಣನೆ ನಡೆಯಬೇಕು ಎಂದು ಹೇಳಿ ಹಲ್ಲೆಗೆ ಒಳಗಾದರೂ ಹೆದರದ ಕಡು ಎಡಪಂಥೀಯ. ಅವರ ಈ ನಿಲುವನ್ನು ಒಪ್ಪದೇ ಇರಬಹುದು. ಆದರೆ, ಅವರ ಪ್ರಾಮಾಣಿಕತೆಯನ್ನು ಪ್ರಶ್ನಿಸುವುದು ಕಷ್ಟ, ಸುಪ್ರೀಂ ಕೋರ್ಟಿನ ಆಗಿನ ಮುಖ್ಯ ನ್ಯಾಯಮೂರ್ತಿ ಭ್ರಷ್ಟರು ಎಂದು ಐದು ವರ್ಷಗಳ ಹಿಂದೆಯೇ ಹೇಳಿ ನ್ಯಾಯಾಲಯ ನಿಂದನೆ ಪ್ರಕರಣ ಎದುರಿಸಿದವರು. ಸಾರ್ವಜನಿಕ ಜೀವನದ ವಿವಿಧ ರಂಗಗಳಲ್ಲಿ ಪ್ರಾಮಾಣಿಕತೆ ಎಷ್ಟು ಮುಖ್ಯ ಎಂದು ಉದ್ದಕ್ಕೂ ಅವರು ಪ್ರತಿಪಾದಿಸಿದವರು. ಹೀಗೆ ಹೋರಾಟ ಮಾಡುವವರ ಮುಖಕ್ಕೆ ಮಸಿ

ಹಚ್ಚುವವರು ಇದ್ದೇ ಇರುತ್ತಾರೆ. ಪ್ರಶಾಂತ್ ಮುಖಕ್ಕೂ  ಮಸಿ ಹಚ್ಚುವ ಪ್ರಯತ್ನ ನಡೆದಿವೆ. ಆದರೆ, ಅವು ಯಶ ಕಂಡಿಲ್ಲ. ಅವೆಲ್ಲ ಹೊರಗಿನವರು ಮಾಡಿದ್ದು, ಈಗ ಒಳಗಿನವರೂ ಅದನ್ನೇ ಮಾಡುತ್ತಿರುವಂತಿದೆ. ಪ್ರಶಾಂತ್ ಭೂಷಣ್ ತಮ್ಮ ಕುಟುಂಬದ ಹಿಡಿತಕ್ಕೆ ಪಕ್ಷವನ್ನು ತೆಗೆದುಕೊಳ್ಳಲು ಹೊರಟಿದ್ದಾರೆ ಎಂಬುದು ಅಂಥ ಒಂದು ಆರೋಪ ಆಗಿರಬಹುದು. ಮುಂದೆ ಇಂಥ ಆರೋಪಗಳು ಇನ್ನೂ ಹೆಚ್ಚು ಕೇಳಿ ಬರಬಹುದು. ಎಎಪಿ  ಕ್ರಮಿಸಬೇಕಾದ ದಾರಿ ತುಂಬ ದೂರ ಇದೆ. ಅದು ನಮ್ಮ ಊರಿಗೆ ಬರಬೇಕು, ತಮ್ಮ ಊರಿಗೆ ಬರಬೇಕು ಎಂದು ಆಶಿಸುವ ಮಂದಿ ಬಹಳ ಇದ್ದಾರೆ. ಪರ್ಯಾಯ ರಾಜಕೀಯದ ದುರಂತ ಏನು ಎಂದರೆ ಅದು ನಿಡುಗಾಲ ಇರುವಂಥದಲ್ಲ, ಹೀಗೆ ಬಂದು ಹಾಗೆ ಹೋಗುವಂಥದು ಎಂದೇ ಇದುವರೆಗೆ ಅನಿಸಿದೆ. ಎಎಪಿಯೂ ಹಾಗೆ ಆಗಬಾರದು ಅಷ್ಟೇ.

08.03.2015



# ಅಧಿಕಾರ ಬಂದಾಗ ಅರಿಯದವರು...

ಅದು 1978ರ ಆಸುಪಾಸಿನ ಕಾಲ. ಕೇಂದ್ರದಲ್ಲಿ ಮೊದಲ ಬಾರಿಗೆ ಅಧಿಕಾರಕ್ಕೆ ಬಂದಿದ್ದ ಜನತಾ ಸರ್ಕಾರ ಬಿದ್ದು ಹೋಗಿತ್ತು. ಪ್ರಸಿದ್ಧ ವ್ಯಂಗ್ಯ ಚಿತ್ರಕಾರ ಆರ್.ಕೆ.ಲಕ್ಷ್ಮಣ್ ಅವರು ಆಗ ತಾವು ಕೆಲಸ ಮಾಡುತ್ತಿದ್ದ ಪತ್ರಿಕೆಯಲ್ಲಿ ಒಂದು ವ್ಯಂಗ್ಯ ಚಿತ್ರ ಪ್ರಕಟಿಸಿದ್ದರು. 1977ರ ಚುನಾವಣೆಯಲ್ಲಿ ರಾಯ್‌ಬರೇಲಿ ಕ್ಷೇತ್ರದಲ್ಲಿ ಇಂದಿರಾ ಗಾಂಧಿಯವರನ್ನು ಸೋಲಿಸಿ ಲೋಕಸಭೆಗೆ ಆಯ್ಕೆಯಾಗಿದ್ದ  ರಾಜ್‌ನಾರಾಯಣ್, ಟೂತ್‌ಪೇಸ್ಟಿನ ಟ್ಯೂಬಿನಿಂದ ಹೊರಗೆ ಬಿದ್ದಿದ್ದ ಪೇಸ್ಟ್ ಅನ್ನು ಮತ್ತೆ ಅದರ ಒಳಗೆ ತುಂಬುವ ದುಸ್ಸಾಹಸದಲ್ಲಿ ತೊಡಗಿದ್ದ ಚಿತ್ರ ಅದು. ರಾಜ್‌ನಾರಾಯಣ್ ಒಬ್ಬ ಸಮಾಜವಾದಿ  ಆಗಿದ್ದರು ಮತ್ತು ಅವರು ರಾಮಮನೋಹರ ಲೋಹಿಯಾ ಅವರ ಕಟ್ಟಾ ಅನುಯಾಯಿ ಆಗಿದ್ದರು.

1975ರಲ್ಲಿ ಆಗಿನ ಪ್ರಧಾನಿ ಇಂದಿರಾ ಗಾಂಧಿಯವರು ದೇಶದ ಮೇಲೆ ಆಂತರಿಕ ತುರ್ತುಸ್ಥಿತಿ ಹೇರಿದ್ದರು. ಜಯಪ್ರಕಾಶ್ ನಾರಾಯಣ್, ಅಟಲ್ ಬಿಹಾರಿ ವಾಜಪೇಯಿ, ಎಲ್.ಕೆ.ಅಡ್ವಾಣಿ, ಎಚ್.ಡಿ.ದೇವೇಗೌಡ,  ರಾಮಕೃಷ್ಣ ಹೆಗಡೆ ಹೀಗೆ ದೇಶದ ಎಲ್ಲ ಪ್ರಮುಖ ರಾಜಕೀಯ ನಾಯಕರನ್ನು ಆಂತರಿಕ ಭದ್ರತಾ  ಕಾಯ್ದೆ (ಮೀಸಾ)ಯಡಿ ಜೈಲಿಗೆ

ಅಟ್ಟಿದ್ದರು. ಪತ್ರಿಕೆಗಳಲ್ಲಿ ಸರ್ಕಾರದ ವಿರುದ್ಧ ಏನನ್ನೂ ಬರೆಯುವಂತೆ ಇರಲಿಲ್ಲ. ಪ್ರಜಾಸತ್ತಾತ್ಮಕ ಬುನಾದಿಯ ಭಾರತ ದೇಶದ ಇತಿಹಾಸದಲ್ಲಿ ಅದು ಒಂದು ಕರಾಳ ಅಧ್ಯಾಯ.

ಜಯಪ್ರಕಾಶ್ ನಾರಾಯಣ್ ಅವರು ಇಂದಿರಾ ಸರ್ಕಾರದ ಭ್ರಷ್ಟಾಚಾರದ ವಿರುದ್ಧ ಜನಾಂದೋಲನ ಹಮ್ಮಿಕೊಂಡಿದ್ದರು. ಕಿಂದರಜೋಗಿಯಂತೆ ಮುಂದೆ ಮುಂದೆ ಹೊರಟಿದ್ದ ಜೆ.ಪಿ ಹಿಂದೆ ಇಡೀ ಭಾರತ ಹೊರಟಂತೆ ಕಾಣುತ್ತಿತ್ತು. ಸ್ವಭಾವತಃ ಸರ್ವಾಧಿಕಾರಿಯಾಗಿದ್ದ ಇಂದಿರಾ ತಮ್ಮ ಅಧಿಕಾರಕ್ಕೆ ಅಪಾಯ ಎಂದುಕೊಂಡು ತುರ್ತುಸ್ಥಿತಿ ಘೋಷಿಸಿದ್ದರು. 18 ತಿಂಗಳ ನಂತರ ಆಂತರಿಕ ಮತ್ತು ಬಾಹ್ಯ ಒತ್ತಡಗಳನ್ನು ತಡೆದುಕೊಳ್ಳಲು ಆಗದೇ 1977ರಲ್ಲಿ ಅವರು ಲೋಕಸಭೆಗೆ ಚುನಾವಣೆ ಘೋಷಿಸಿದರು.

ವರ್ಷದ ಮೇ ತಿಂಗಳಲ್ಲಿ ಸಂಸ್ಥಾ ಕಾಂಗ್ರೆಸ್, ಜನಸಂಘ, ಭಾರತೀಯ ಲೋಕದಳ ಮತ್ತು ಸಮಾಜವಾದಿ ಪಕ್ಷಗಳು ವಿಲೀನಗೊಂಡು ಜನತಾ ಪಕ್ಷ ಅಸ್ತಿತ್ವಕ್ಕೆ ಬಂತು. ನೇಗಿಲು ಹೊತ್ತ ರೈತ ಅದರ ಚಿಹ್ನೆಯಾಗಿತ್ತು. ಚುನಾವಣೆಗೆ ಮುನ್ನ ಜನತಾ



ಪಕ್ಷ ಪ್ರಕಟಿಸಿದ ಪ್ರಣಾಳಿಕೆಯಲ್ಲಿ ಪ್ರಜಾಸತ್ತೆಯ ಮುಖ್ಯ ಆಶಯವಾದ ವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆಗೆ ಮೊದಲ ಆದ್ಯತೆ ಕೊಡಲಾಗಿತ್ತು: 'ಸ್ವಾತಂತ್ರ್ಯವನ್ನು ಯಾವುದೇ ಲೌಕಿಕ ಸೌಲಭ್ಯಗಳೊಂದಿಗೆ ಹೋಲಿಕೆ ಮಾಡುವಂತಿಲ್ಲ' ಎಂದು ಅದರಲ್ಲಿ ಪ್ರಸ್ತಾಪಿಸಲಾಗಿತ್ತು. “ಎಲ್ಲ ಜನಪ್ರಿಯ ಘೋಷಣೆಗಳಿಗಿಂತ, ಸುಖ ಸವಲತ್ತುಗಳಿಗಿಂತ ತುರ್ತುಸ್ಥಿತಿಯಲ್ಲಿ ಹರ- ಣಗೊಂಡಿದ್ದ ಅಭಿವ್ಯಕ್ತಿ ಮತ್ತು ವ್ಯಕ್ತಿ ಸ್ವಾತಂತ್ರ್ಯವನ್ನು ಮತ್ತೆ ಜನರಿಗೆ ಕೊಡುವುದು” ಜನತಾ ಪಕ್ಷದ ಪ್ರಣಾಳಿಕೆಯ ಪ್ರಥಮ ಆದ್ಯತೆಯಾಗಿತ್ತು. ತುರ್ತುಸ್ಥಿತಿಯಲ್ಲಿ ಏನೆಲ್ಲ ದೌರ್ಜನ್ಯವಾಗಿತ್ತು ಎಂದರೆ ಜನರು ಮುಕ್ತವಾಗಲು ಬಯಸಿದ್ದರು. ಕಟ್ಟಿಹೋಗಿದ್ದ ಉಸಿರನ್ನು ನಿಡಿದಾಗಿ ಬಿಟ್ಟವರಂತೆ ಅವರು ಜನತಾ ಪಕ್ಷವನ್ನು ಅಧಿಕಾರಕ್ಕೆ ತಂದರು. ಕಾಂಗ್ರೆಸ್ಸಿನ ಅತಿರಥ ಮಹಾರಥರೆಲ್ಲ ಸೋತು ಹೋದರು. ಅಧಿಕಾರದ ಪ್ರಮಾಣವಚನ ಸ್ವೀಕಾರಕ್ಕಿಂತ ಮುಂಚೆ ಜನತಾ ಪಕ್ಷದ ಮುಂಚೂಣಿ ನಾಯಕರೆಲ್ಲ ದೆಹಲಿಯ ರಾಜಘಾಟ್‌ನ ಮಹಾತ್ಮ ಗಾಂಧಿ ಸಮಾಧಿ ಎದುರು ನಿಂತು ಪ್ರಮಾಣ ಮಾಡಿದರು.

ಆದರೆ, ಕೆಲವೇ ದಿನಗಳಲ್ಲಿ ಜನರ ನಿರೀಕ್ಷೆಗಳೆಲ್ಲ ಸಾಬೂನು ಗುಳ್ಳೆಗಳ ಹಾಗೆ ಒಡೆದು ಹೋದುವು. ಅಧಿಕಾರಕ್ಕೆ ಬಂದ ಕೂಡಲೇ ಜನತಾ ಸರ್ಕಾರದ ಅಧ್ವರ್ಯುಗಳಿಗೆ ನೆತ್ತಿಯ ಮೇಲೆ ಕಣ್ಣು ಬಂದುವು. ರಾಜ್ಯಗಳಲ್ಲಿ ಅಧಿಕಾರದಲ್ಲಿ ಇದ್ದ ಎಲ್ಲ ಕಾಂಗ್ರೆಸ್ ಸರ್ಕಾರಗಳನ್ನು ವಜಾ ಮಾಡಿದರು. ಇಂದಿರಾ ಅವರನ್ನು ಜೈಲಿಗೆ ಹಾಕಿದರು. ತಮ್ಮೊಳಗೆ ತಾವು ಕಿತ್ತಾಡತೊಡಗಿದರು. ಪ್ರಧಾನಿ ಮೊರಾರ್ಜಿ ದೇಸಾಯಿಯವರು ಜಯಪ್ರಕಾಶ್ ನಾರಾಯಣ್ ಅವರನ್ನೇ ಮರೆತುಬಿಟ್ಟರು. ಜನತಾ ಸರ್ಕಾರದ ಆಡಳಿತದಿಂದ ಬೇಸತ್ತಿರುವ ಜೆ.ಪಿಯವರನ್ನು ಕಂಡು ಸಮಾಧಾನ ಮಾಡಿ ಎಂದು ಹೇಳಿದ ಯಾರಿಗೋ ಮೊರಾರ್ಜಿಯವರು, ಅವರೇನು ಮಹಾತ್ಮ ಗಾಂಧಿಯೇ?' ಎಂದು ಮರುಪ್ರಶ್ನೆ ಹಾಕಿದರು. ಜನತಾ ಸರ್ಕಾರದಲ್ಲಿನ ದುರಂಧರರಿಗೆ ಯಾವುದಕ್ಕೆ ಅಲ್ಲದಿದ್ದರೂ ದುರಹಂಕಾರಕ್ಕೇನೂ ಕೊರತೆಯಿರಲಿಲ್ಲ!

ಜನರು ತಮ್ಮನ್ನು ಏಕೆ ಚುನಾಯಿಸಿದ್ದಾರೆ ಎಂಬುದೇ ಅವರಿಗೆ ಮರೆತು ಹೋಯಿತು. ಮೊರಾರ್ಜಿಯವರನ್ನು ಕೆಳಕ್ಕೆ ಇಳಿಸಿ ತಾನು ಯಾವಾಗ ಪ್ರಧಾನಿಯಾದೇನು ಎಂದು ಚರಣ್ ಸಿಂಗ್ ಕನಸು ಕಾಣುತ್ತಿದ್ದರು. ಒಂದು ದಿನ ಅದೂ ಆಯಿತು. ಅಧಿಕಾರವಂಚಿತವಾಗಿದ್ದ ಕಾಂಗ್ರೆಸ್ ಹೊಂಚು ಹಾಕಿ ಕಾಯುತ್ತ ಇತ್ತು. ಚರಣ್‌ಸಿಂಗ್ ಅವರನ್ನು ಪ್ರಧಾನಿ ಮಾಡುವುದರಲ್ಲಿ ದೇವಿಲಾಲ್ ಜತೆಗೆ ರಾಜ್‌ನಾರಾಯಣ್ ಅವರ ಕೈವಾಡವೂ ಇತ್ತು. ಮೇಲಾಗಿ ಅವರಿಗೆ ಇಂದಿರಾ ಆಶೀರ್ವಾದ ಇತ್ತು! ಚರಣ್ ಸಿಂಗ್ ಲೋಕಸಭೆಯನ್ನು ಪ್ರವೇಶ ಮಾಡದೇ ಪ್ರಧಾನಿ ಹುದ್ದೆ ಕಳೆದುಕೊಂಡರು. ಮುಂದೆ 1980ರ ದಶಕದಲ್ಲಿ ಮತ್ತೆ ಇತಿಹಾಸ ಮರುಕಳಿಸಿತು. ವಿ.ಪಿ.ಸಿಂಗ್ ಅವರ ಕಾಲು ಎಳೆದು ಯಂಗ್ ಟರ್ಕ್ ಖ್ಯಾತಿಯ ಚಂದ್ರಶೇಖರ್ ಪ್ರಧಾನಿಯಾದರು. ಅವರ ಸರ್ಕಾರ 40 ದಿನವೂ ಬಾಳಲಿಲ್ಲ. ಆಗಲೂ ಅವರಿಗೆ ಕಾಂಗ್ರೆಸ್ ಬೆಂಬಲ ನೀಡಿತ್ತು! ಇತಿಹಾಸದಲ್ಲಿ ತಾವು ಮಾಜಿ ಪ್ರಧಾನಿ ಎಂದು ಅನಿಸಿಕೊಳ್ಳುವುದು ಮಾತ್ರ ಚರಣ್‌ಸಿಂಗ್ ಅವರಿಗೆ ಬೇಕಿತ್ತು. ಚಂದ್ರಶೇಖರ್ ಅವರಿಗೂ ಅದೇ ಬೇಕಿತ್ತು. ಇವರೆಲ್ಲ ಸಣ್ಣಪುಟ್ಟ ನಾಯಕರೇನೂ ಅಲ್ಲ. ಹೋರಾಟಗಾರರೂ,

ತತ್ವನಿಷ್ಠರೂ ಆದವರು. ಅವರೇ ಹೀಗೆ ಕುಬ್ಬರ ಹಾಗೆ ಆಸೆಬುರುಕರ ಹಾಗೆ ನಡೆದುಕೊಂಡು ಜನತಾ ಪಕ್ಷ ಎಂಬ ಒಂದು ಪ್ರಯೋಗ ನಾಶವಾಗಲು ಕಾರಣರಾದರು. ಜನರಿಗೆ ದ್ರೋಹವಾಯಿತು. ದೇಶವನ್ನು ಕಾಂಗ್ರೆಸ್ಸಿನ ಏಕಪಕ್ಷದ ಆಡಳಿತದಿಂದ ಮುಕ್ತಗೊಳಿಸಲು ಬಯಸಿದವರಿಗೆಲ್ಲ ನಿರಾಶೆಯಾಯಿತು.

'ಜನತಾ ಪಕ್ಷದಲ್ಲಿ ಘಟಾನುಘಟಿ ನಾಯಕರು, ಅದ್ಭುತ ಸಂಸದೀಯ ಪಟುಗಳು, ದಕ್ಷ ಆಡಳಿತಗಾರರು ಇದ್ದರೂ ಅವರಿಗೆ ದೀರ್ಘ ಕಾಲ ಆಡಳಿತ ಮಾಡುವ ಕಲೆ ಗೊತ್ತಿಲ್ಲ. ಮೂಲತಃ ಅವರದು ಕಚ್ಚಾಡುವ ಸ್ವಭಾವ. ಹಾಗೂ ಅಧಿಕಾರ ಕಳೆದು ಹೋಗುವ ವರೆಗೆ ಅವರು ಕಚ್ಚಾಡುತ್ತಲೇ ಇರುತ್ತಾರೆ' ಎಂದು ಜನರಿಗೆ ಖಚಿತವಾಯಿತು. ಅಧಿಕಾರ ಕಳೆದುಕೊಂಡರೂ ಅವರಿಗೆ ಪಶ್ಚಾತ್ತಾಪವೇನೂ ಆದಂತೆ ಕಾಣುತ್ತಿರಲಿಲ್ಲ. ಏಕೆಂದರೆ ಮತ್ತೆ ಅಧಿಕಾರಕ್ಕೆ ಬಂದರೆ ಮತ್ತೆ ಜಗಳವಾಡುವುದೇ ಅವರಿಗೆ ಅಂಟಿದ ರೋಗವಾಗಿತ್ತು.

ಕೇಂದ್ರದ ಮಾತು ಬಿಡಿ : 1983ರಲ್ಲಿ ರಾಜ್ಯದಲ್ಲಿ ಮೊದಲ ಜನತಾ ಸರ್ಕಾರ ಅಧಿಕಾರಕ್ಕೆ ಬಂದಾಗಲೂ ಅದೇ ಆಯಿತು. 1994ರಲ್ಲಿ ಮತ್ತೆ ಅಧಿಕಾರಕ್ಕೆ ಬಂದಾಗಲೂ ಅದೇ ಜಗಳ, 1996ರಲ್ಲಿ ಎಚ್.ಡಿ.ದೇವೇಗೌಡರು ಪ್ರಧಾನಿಯಾದಾಗಲೂ ಪರಸ್ಪರ ವೈರ ಸಾಧಿಸುವುದು ನಿಲಲಿಲ್ಲ. ಅಸೂಯಾಪರರೂ, ಮತ್ಸರವುಳ್ಳವರೂ ಆದ ಜನತಾ ಪರಿವಾರದ ನಾಯಕರು ಒಬ್ಬರ ಕಾಲು ಒಬ್ಬರು ಎಳೆದು ಇಬ್ಬರೂ ಕೆಳಕ್ಕೆ ಬಿದ್ದ ಮೇಲೆಯೇ 'ಆಹಾ' ಎಂದು ನೆಮ್ಮದಿ ಪಡುವವರು.

ಇದನ್ನೆಲ್ಲ ಬರೆಯಲು ಕಾರಣ ಇದೆ : ಉಳಿದ ಪಳಿದ ಜನತಾ ಪರಿವಾರದ ನಾಯಕರು ದೆಹಲಿಯಲ್ಲಿ ಸಭೆ ಸೇರಿ ಮತ್ತೆ ಒಂದುಗೂಡುವ ಮಾತು ಆಡುತ್ತಿದ್ದಾರೆ. ಪರಿವಾರದ ಪಕ್ಷಗಳನ್ನು ಒಂದುಗೂಡಿಸುವ ಮತ್ತು ಅದರ ವಿಧಿ ವಿಧಾನಗಳನ್ನು ರೂಪಿಸುವ ಹೊಣೆಯನ್ನು ಸಮಾಜವಾದಿ ಪಕ್ಷದ ಅಧ್ಯಕ್ಷ ಮುಲಾಯಂ ಸಿಂಗ್ ಅವರಿಗೆ ವಹಿಸಲಾಗಿದೆ. ಬಿಹಾರದಲ್ಲಿ ಈಗಾಗಲೇ ಜೆ.ಡಿ (ಯು) ಮತ್ತು ಆರ್.ಜೆ.ಡಿಗಳು ಒಂದಾಗಿ ಚುನಾವಣೆ ಎದುರಿಸಲು ನಿರ್ಧರಿಸಿವೆ. ಬಿಜು ಜನತಾದಳದ ಮುಖ್ಯಸ್ಥರೂ ಆದ ಒಡಿಶಾ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಈ ವಿಲೀನ ಪ್ರಕ್ರಿಯೆಯಿಂದ ಹೊರಗೆ ಉಳಿದಿದ್ದಾರೆ. 'ಕಾಂಗ್ರೆಸ್ ಮತ್ತು ಬಿಜೆಪಿಗಳನ್ನು ಸಮಾನ ದೂರದಲ್ಲಿ ಇಟ್ಟು ರಾಜಕಾರಣ ಮಾಡಬೇಕಿರುವ ಜನತಾ ಪರಿವಾರಕ್ಕೆ ಈಗ ಮತ್ತೆ ಒಂದುಗೂಡುವ ಬಯಕೆ, ನೆಲೆ ಕಳೆದುಕೊಂಡಿರುವ ಕಾಂಗ್ರೆಸ್ ಬದಲಿಗೆ ಪರ್ಯಾಯವಾಗುವ ಆಸೆ.

ಜನತಾ ಪರಿವಾರದ ನಾಯಕರ ಸಮಸ್ಯೆ ಎಂದರೆ ಅವರು ಒಂದಲ್ಲ ಒಂದು ದೊಡ್ಡ ಜಾತಿಗೆ ಸೀಮಿತವಾದ ನಾಯಕರು. ಅದರ ಜತೆಗೆ ಒಂದೋ ಎರಡೋ ಜಾತಿಗಳನ್ನು ಸೇರಿಸಿಕೊಂಡು ಅಧಿಕಾರ ಹಿಡಿಯುವ ಸೂತ್ರ ಕಂಡುಕೊಂಡವರು. ಇದು ಉತ್ತರಪ್ರದೇಶಕ್ಕೂ ಅನ್ವಯಿಸುವ ಮಾತು, ಬಿಹಾರಕ್ಕೂ ಅನ್ವಯಿಸುವ ಮಾತು. ಕರ್ನಾಟಕದ ಜೆ.ಡಿ (ಎಸ್)ಗೂ ಅದೇ ಮಾತು ಅನ್ವಯಿಸುತ್ತದೆ. ಅವರ ಇನ್ನೊಂದು ದೌರ್ಬಲ್ಯ ಕುಟುಂಬದಲ್ಲಿಯೇ ಅಧಿಕಾರದ ಸೂತ್ರಗಳನ್ನು ಇಟ್ಟುಕೊಂಡಿರುವುದು. ಇದು ಮೂಲತಃ

ಕಾಂಗ್ರೆಸ್ಸಿನ ರೋಗ ಕೂಡ. ಅಥವಾ ಆ ಪಕ್ಷದಿಂದಲೇ ಸಾಂಸರ್ಗಿಕವಾಗಿ ಜನತಾ ಪರಿವಾರಕ್ಕೂ ಅಂಟಿದ ರೋಗ, ಜನರು ಇದನ್ನೆಲ್ಲ ಗಮನಿಸುವುದಿಲ್ಲ ಎಂದು ಯಾರೂ ಅಂದುಕೊಳ್ಳಬಾರದು. ಹೊಸ ಪೀಳಿಗೆಯ ಮತದಾರರು ನಿತ್ಯ ಮತದಾರರ ಪಟ್ಟಿಗೆ ಸೇರಿಕೊಳ್ಳುವಾಗ ತಮ್ಮ ಆಶೋತ್ತರಗಳನ್ನು ಯಾರು ಈಡೇರಿಸುತ್ತಾರೆ ಎಂಬುದನ್ನು ನೋಡುತ್ತಾರೆಯೇ ಹೊರತು ಹಳೆಯ ಹಳವಂಡಗಳು ಅವರಿಗೆ ಬೇಕಿಲ್ಲ.

ಇದನ್ನು ವಿಪರ್ಯಾಸ ಎನ್ನಬೇಕೋ ಅಥವಾ ಆ ಪಕ್ಷದ ಹಣೆಬರಹ ಎನ್ನಬೇಕೋ ಗೊತ್ತಿಲ್ಲ. ಅಲ್ಲಿ ದೇವೇಗೌಡರು ಉಳಿದ ಜನತಾ ಪರಿವಾರದ ನಾಯಕರ ಜತೆಗೆ ಸೇರಿಕೊಂಡು ಹರಿದು ಹಂಚಿ ಹೋಗಿರುವ ಪಕ್ಷಗಳನ್ನು ದೇಶ ಮಟ್ಟದಲ್ಲಿ ಮತ್ತೆ ಒಂದುಗೂಡಿಸುವ ಮಾತುಕತೆ ನಡೆಸುತ್ತಿರುವಾಗಲೇ ಇತ್ತ ಬೆಂಗಳೂರಿನಲ್ಲಿ ಜೆ.ಡಿ (ಎಸ್) ಶಾಸಕಾಂಗ ಸಭೆ ಸೇರಿತ್ತು. ಪಕ್ಷದ ನಲವತ್ತು ಮಂದಿ ಶಾಸಕರ ಪೈಕಿ ಇಪ್ಪತ್ತು ಮಂದಿ ಸಭೆಗೆ ಬಂದಿರಲಿಲ್ಲ. ರಾಜ್ಯದ ಜೆ.ಡಿ (ಸ್)ನಲ್ಲಿ ಎಲ್ಲವೂ ಸರಿ ಇಲ್ಲ. ಇದೆ ಎಂದು ದೇವೇಗೌಡರಾಗಲೀ, ಕುಮಾರಸ್ವಾಮಿಯವರಾಗಲೀ ಎದೆ ಮುಟ್ಟಿಕೊಂಡು ಹೇಳಲು ಆಗುತ್ತದೆಯೇ? ಬಿಜೆಪಿ ದುರಾಡಳಿತದಿಂದ ಬೇಸತ್ತಿದ್ದ ರಾಜ್ಯದ ಜನರು ಕಳೆದ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಮಾತ್ರ ಅಧಿಕಾರಕ್ಕೆ ತಂದಿರಲಿಲ್ಲ. ಜೆ.ಡಿ (ಎಸ್)ಗೆ ಅಧಿಕೃತ ವಿರೋಧ ಪಕ್ಷದ ಸ್ಥಾನಮಾನ ಸಿಗುವ ಹಾಗೆ ಶೇಕಡಾವಾರು ಮತಗಳನ್ನು ಹೆಚ್ಚಿನ ಪ್ರಮಾಣದಲ್ಲಿಯೂ ಹಾಕಿದ್ದರು. ಆದರೆ, ಈಗ ಆಯ್ಕೆಯಾಗಿರುವ ನಲವತ್ತು ಶಾಸಕರಲ್ಲಿ ಕೆಲವರು ಬಿಜೆಪಿ ಬಾಗಿಲು ಬಡಿಯುತ್ತಿದ್ದಾರೆ, ಇನ್ನು ಕೆಲವರು ಕಾಂಗ್ರೆಸ್ ಬಾಗಿಲು ಬಡಿಯುತ್ತಿದ್ದಾರೆ. ವಿರೋಧ ಪಕ್ಷದಲ್ಲಿ ಇದ್ದುಕೊಂಡು ಕೆಲಸ ಮಾಡುವುದು ಸಾಧ್ಯವೇ ಇಲ್ಲ, ಇದ್ದರೆ ಆಡಳಿತ ಪಕ್ಷದಲ್ಲಿಯೇ ಇರಬೇಕು, ಗೆದ್ದರೆ ಮಂತ್ರಿಯೇ ಆಗಬೇಕು ಎನ್ನುವವರ ಕಾಲ ಇದು. 1977ರಲ್ಲಿ ಹುಟ್ಟಿದ ಜನತಾ ಪಕ್ಷದಲ್ಲಿ ಇದ್ದವರ ಮಕ್ಕಳು ಈಗ ಮುನ್ನೆಲೆಗೆ ಬಂದಿದ್ದಾರೆ. 77ರಲ್ಲಿ ತುರ್ತು ಸ್ಥಿತಿಯ ಅಗ್ನಿದಿವ್ಯದಲ್ಲಿ ಅಧಿಕಾರಕ್ಕೆ ಬಂದ ಜನತಾ ಪರಿವಾರದವರೇ ಕೇವಲ ಮೂವತ್ತು ತಿಂಗಳಲ್ಲಿ ಗಂಟು ಮೂಟೆ ಕಟ್ಟಿಕೊಂಡು ಮನೆಗೆ ಹೋದರು. ಅವರ ಮೇಲೆ ನಮಗೆ ನಂಬಿಕೆಯೇ ಇಲ್ಲ. ಏಕೆಂದರೆ ಅವರು ಮತ್ತೆ ಮತ್ತೆ ನಮ್ಮ ಕನಸುಗಳನ್ನು ಭಗ್ನ ಮಾಡಿದ್ದಾರೆ. ಈಗ ಮತ್ತೆ ಒಂದುಗೂಡುವ ಮಾತು ಆಡುತ್ತಿದ್ದಾರೆ. ಅದು ಟ್ಯೂಬಿನಿಂದ ಹೊರಗೆ ಬಿದ್ದ ಪೇಸ್ಟ್ ಅನ್ನು ಮತ್ತೆ ತುಂಬುವ ಯತ್ನವೇ? ಹಾಗೆಯೇ ಅನಿಸುತ್ತದೆ.

07.12.2014

# ಇಲ್ಲಿ ಯಾರು ಯಾರನ್ನು

# ಸೋಲಿಸುತ್ತಿದ್ದಾರೆ? ಮತ್ತು ಏಕೆ?

ನಲವತ್ತು ವರ್ಷ ಅವರು ಶಿಕ್ಷಕರಾಗಿಯೇ ಕೆಲಸ ಮಾಡಿದರು. ಕಾಲೇಜಿನಲ್ಲಿ ಕಲಿಸಿದರು. ನಂತರ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಪಾಠ ಹೇಳಿದ್ದರು! ವಿಶ್ವವಿದ್ಯಾಲಯಗಳಲ್ಲಿ ಉಪನ್ಯಾಸ ನೀಡಿದ್ದರು. ಸ್ವದೇಶದ ಪ್ರತಿಷ್ಠಿತ ಆಡಳಿತ ಸಂಸ್ಥೆಗಳಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿದ್ದರು. ವಿದೇಶದ ಶಿಕ್ಷಣ ಸಂಸ್ಥೆಗಳಿಗೂ ಭೇಟಿ ನೀಡಿ ಪಾಠ ಮಾಡಿದ್ದರು. ಜೀವನದಲ್ಲಿ ಒಂದು ಸಾರಿಯೂ ಚುನಾವಣೆಗೆ ನಿಂತಿರಲಿಲ್ಲ. ಈ ಸಲವೂ ಅವರೇ ಮುಂದಾಗಿ ನಿಂತವರಲ್ಲ. ದೇಶದ ಉನ್ನತ ನ್ಯಾಯಾಂಗ ವ್ಯವಸ್ಥೆಯಲ್ಲಿ ದುಡಿದ ಇಬ್ಬರು ಅವರಿಗೆ ನಿಲಲ್ಲು ಪುಸಲಾಯಿಸಿದ್ದರು. ಉನ್ನತ ಹುದ್ದೆಗೆ ಏರಿದ ಒಬ್ಬ ವಿಜ್ಞಾನಿಯೂ ಅವರ ಬೆಂಬಲಕ್ಕೆ ನಿಂತಿದ್ದರು. 'ಇದು ನಮ್ಮ ಕ್ಷೇತ್ರವಲ್ಲ ಎಂದು ನಾವು ಹಿಂಜರಿದರೆ ಯಾರು ಗೆಲ್ಲಬಾರದೋ ಅವರು ಗೆಲ್ಲುತ್ತಾರೆ. ಹೊರಗೆ ನಿಂತು ಮಾತನಾಡುವುದು ಸುಲಭ. ಮತದಾರರಿಗೆ ಒಂದು ಅವಕಾಶ ಕೊಟ್ಟು ನೋಡಬೇಕು. ನೀವು ಸ್ಪರ್ಧೆ ಮಾಡಿದರೆ ಸಾಕು ಇಂಥ ಒಂದು ವಿಚಾರವೊಂದು ಗೆದ್ದಂತೆ. ನೀವು ಗೆದ್ದರೆ ಮತದಾರರು ಗೆದ್ದಂತೆ' ಎಂದು ಅವರೆಲ್ಲ ಇವರಿಗೆ ಹೇಳಿದ್ದರು.

ಚುನಾವಣೆ ಫಲಿತಾಂಶ ಬಂದ ನಂತರ ಅವರು ನಮ್ಮ ಪತ್ರಿಕೆಯಲ್ಲಿ ಒಂದು ಪ್ರಕಟಣೆ ಕೊಟ್ಟರು : 'ನನ್ನಲ್ಲಿ ಅರ್ಹತೆ ಕಾಣದೆ ಮತ ನೀಡದ ಶಿಕ್ಷಕರಿಗೆ ನನ್ನ ಕೃತಜ್ಞತೆಗಳು' ಎಂದು. ಶಿಕ್ಷಕರಿಗೆ ಏನು ಬೇಕಿತ್ತು? ಒಬ್ಬ ಶಿಕ್ಷಕ ತಮ್ಮನ್ನು ಪ್ರತಿನಿಧಿಸುವುದು ಬೇಕಿರಲಿಲ್ಲವೇ? ಅಥವಾ ಬೇರೆ ಯಾರಾದರೂ ತಮ್ಮನ್ನು ಪ್ರತಿನಿಧಿಸಬಹುದು ಎಂದು ಅವರು ಅಂದುಕೊಂಡರೇ? ಬೆಂಗಳೂರು ಶಿಕ್ಷಕರ ಕ್ಷೇತ್ರದಿಂದ ವಿಧಾನ ಪರಿಷತ್ತಿಗೆ ನಡೆದ ಚುನಾವಣೆಯಲ್ಲಿ ಡಾ.ಗುರುರಾಜ ಕರಜಗಿ ಅವರು ಸೋಲುತ್ತಾರೆ ಎಂದು ನಮಗೆಲ್ಲ ಗೊತ್ತಿತ್ತು. ಅವರಿಗೂ ಗೊತ್ತಿತ್ತು. ಈಗಿನ ಚುನಾವಣೆ ನಡೆಯುವ ವಿಧಾನ ಸಂಭಾವಿತ ಜನರಿಗೆ ಹೇಳಿ ಮಾಡಿಸಿದ್ದಲ್ಲ. ಈಗ ಚುನಾವಣೆಯಲ್ಲಿ ಗೆಲಲ್ಲು ಬರೀ ಮತದಾರರನ್ನು ಸಂಪರ್ಕಿಸಿದರೆ ಸಾಲುವುದಿಲ್ಲ. ಎಲ್ಲರಿಗಲ್ಲದಿದ್ದರೂ ಬಹುಪಾಲು ಮಂದಿಗೆ ಕಾಣಿಕೆ ಕೊಡಬೇಕು, ಊಟ ಹಾಕಿಸಬೇಕು, ಬಾಡೂಟ ಹಾಕಿಸಿದರೆ ಇನ್ನೂ ಒಳ್ಳೆಯದು. ಬಾಡೂಟ ಜತೆಗೆ

ಸುರಾಪಾನವೂ ಇದ್ದರೆ ಪರಮಾಯಿಷಿ, ಗೆದ್ದ ಮೇಲೆ ಮೆರವಣಿಗೆ ಆಗಬೇಕು. ಪಟಾಕಿ ಹಾರಿಸಬೇಕು, ಗುಲಾಲು ಹಾರಾಡಬೇಕು. ಇಷ್ಟೆಲ್ಲ ಮಾಡಿ ಗೆದ್ದು ಹೋದವರು ನಮ್ಮ ಬಗ್ಗೆ ಧ್ವನಿ ಎತ್ತಬೇಕು ಎಂದು ಅಪೇಕ್ಷಿಸುವುದೇ ತಪ್ಪಾಗುತ್ತದೆ. ಅವರ ಮೇಲಿನ ಹಕ್ಕನ್ನೇ ನಾವು ಕಳೆದುಕೊಂಡು ಬಿಡುತ್ತೇವೆ.

ಎಲ್ಲ ಮತದಾರರೂ ಇದನ್ನೆಲ್ಲ ಇಷ್ಟ ಪಡುತ್ತಾರೆ ಎಂದು ಅಲ್ಲ. ಅವರಿಗೆ ಚುನಾವಣೆ ಪ್ರಕ್ರಿಯೆ ಬಗೆಗೇ ಬೇಸರ ಇರುತ್ತದೆ. ಚುನಾವಣೆ ದಿನ ರಜೆ ಬಂದು, ಮುಂದೆ ಎರಡು ದಿನ ರಜೆ ಇದ್ದರೆ, ಚುನಾವಣೆ ದಿನವೇ ಅವರು ಊರು ಬಿಟ್ಟು ಮಜಾ ಮಾಡಲು ಹೋಗಿ ಬಿಡುತ್ತಾರೆ. ಅಲ್ಲಿ ಎಲ್ಲೋ ತಂಪು ಜಾಗದಲ್ಲಿ ಕುಳಿತು ದೇಶದ ದುಃಸ್ಥಿತಿ ಬಗ್ಗೆ ಆಡಿಕೊಳ್ಳುತ್ತಾರೆ. ಈಗಲೂ ಹಾಗೆಯೇ ಆಯಿತು. ಶುಕ್ರವಾರ ಚುನಾವಣೆ ಇತ್ತು. ಅದು ವಾರಾಂತ್ಯ ಎರಡು ದಿನ ರಜೆ ಇರುವವರ ಮೋಜಿಗೆ ಹೇಳಿ ಮಾಡಿಸಿದಂತೆಯೇ ಇತ್ತು!

ಕರಜಗಿ ಅವರು ಸೋಲುವುದು ನಿರೀಕ್ಷಿತವೇ ಇತ್ತು. ಆದರೆ, ಅವರಿಗೆ ಅಷ್ಟು ಕಡಿಮೆ ಮತಗಳು ಬರಬಾರದಿತ್ತು. ಅವರು ಕನಿಷ್ಠ ಇಪ್ಪತ್ತು ಸಾವಿರ ಶಿಕ್ಷಕರನ್ನು ಖುದ್ದಾಗಿ ಸಂಪರ್ಕ ಮಾಡಿದ್ದರು. ಎಂಟು ನೂರು ಶಾಲೆಗಳಿಗೆ ಭೇಟಿ ಕೊಟ್ಟಿದ್ದರು. ಎಂಜಿನಿಯರಿಂಗ್‌ನಂಥ ಉನ್ನತ ಶಿಕ್ಷಣ ಸಂಸ್ಥೆಗಳ ಶಿಕ್ಷಕರನ್ನು ಭೇಟಿ ಮಾಡಿ ಮತದಾರರಾಗಿ ನೋಂದಾಯಿಸಿಕೊಳ್ಳಲು ಕೋರಿಕೊಂಡಿದ್ದರು. ಅವರು ಸಂಪರ್ಕ ಮಾಡಿದ ಮತದಾರರಲ್ಲಿ ಅರ್ಧದಷ್ಟು ಮಂದಿ ಬಂದು ಮತ ಹಾಕಿದ್ದರೂ ಕರಜಗಿ ದೊಡ್ಡ ಅಂತರದಿಂದ ಗೆಲ್ಲಬೇಕಿತ್ತು. ಹಾಗೆ ಆಗಲಿಲ್ಲ. ಎಂದಿನಂತೆ ಬೆಂಗಳೂರಿನಲ್ಲಿ ಶಿಕ್ಷಕರು ಮತಗಟ್ಟೆಗೆ ಬರಲಿಲ್ಲ. ಗ್ರಾಮಾಂತರ ಪ್ರದೇಶದ ಶಿಕ್ಷಕರೇ ಸ್ವಂತ ಆಸಕ್ತಿಯಿಂದಲೋ, ಒತ್ತಾಯಕ್ಕೋ, ಆಮಿಷಕ್ಕೂ ಬಂದು ಮತ ಹಾಕಿದರು. ಒಟ್ಟು ಮತದಾನದ ಪ್ರಮಾಣ ಶೇಕಡಾ 60ರಷ್ಟೂ ಆಗಲಿಲ್ಲ. ಬೆಂಗಳೂರಿನ ಹೃದಯಭಾಗವಾದ ಕೃಷ್ಣರಾಜ ವೃತ್ತದಲ್ಲಿನ ಯುವಿಸಿಇ ಕಾಲೇಜಿನ ಮತಗಟ್ಟೆಗೂ ಮತದಾರರು ಬರಲಿಲ್ಲ. ಉಳಿದ ಕಡೆ ಕೇಳುವುದೇ ಬೇಡ.

ಬೆಂಗಳೂರು ಶಿಕ್ಷಕ ಮತಕ್ಷೇತ್ರದಲ್ಲಿ 1.35 ಲಕ್ಷ ಶಿಕ್ಷಕರು ಇದ್ದಾರೆ. ಅವರಲ್ಲಿ ನೋಂದಾಯಿತ ಮತದಾರರು ಕೇವಲ 37,000 ಮಾತ್ರ. ಮತ ಹಾಕಿದವರು 16,000 ಮಂದಿ, ಎಂಟು ಸಾವಿರ ಮತ ಗಳಿಸಿದವರು ಗೆದ್ದು ಬಿಟ್ಟರು. ನಮ್ಮ ಚುನಾವಣೆ ವ್ಯವಸ್ಥೆಯ ವಿಪರ್ಯಾಸ ಇದು. ಆಮಿಷಗಳು ವಿಜೃಂಭಿಸುವ ಚುನಾವಣಾ ವ್ಯವಸ್ಥೆಯಲ್ಲಿ ಮತದಾರರು ಕಡಿಮೆ ಇದ್ದಷ್ಟೂ ಒಳ್ಳೆಯದು. ಹೊಸ ಮತದಾರರು ಸೇರಿಕೊಳ್ಳುವುದೂ ಬೇಡ; ಅವರನ್ನು ಒಲಿಸಿಕೊಳ್ಳುವ ಕಷ್ಟವೂ ಬೇಡ. ಶಿಕ್ಷಕರ, ಪದವೀಧರರ ಕ್ಷೇತ್ರಗಳಲ್ಲಿ ಕೆಲವರೇ ಹೇಗೆ ಸತತವಾಗಿ ಗೆಲ್ಲುತ್ತಾರೆ ಎಂಬುದರ ಗುಟ್ಟು ಇದು!

ಎರಡು ವರ್ಷಗಳ ಹಿಂದೆ ಬೆಂಗಳೂರು ಪದವೀಧರರ ಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸಿದ್ದ ನಾಸಾದಲ್ಲಿ ಕೆಲಸ ಮಾಡುವ, ಐಐಎಂಬಿಯಲ್ಲಿ ಪಾಠ ಮಾಡುವ ಅಶ್ವಿನ್ ಮಹೇಶ್ ಅವರಿಗೂ ಹೀಗೆಯೇ ಆಗಿತ್ತು. ಮತದಾರರನ್ನು ನೋಂದಾಯಿಸಲು ಅವರ ಲೋಕಸತ್ತಾ ಪಕ್ಷ ದೊಡ್ಡ ಆಂದೋಲನವನ್ನೇ ಮಾಡಿತ್ತು. ತಾವು ಏಕೆ ಗೆಲ್ಲಬೇಕು ಎಂದು

ಅಶ್ವಿನ್ ಮತದಾರರಿಗೆ ಹಲವು ವಿಧದಿಂದ ಮನವರಿಕೆ ಮಾಡಿಕೊಟ್ಟಿದ್ದರು. ರಾಜಕೀಯದಲ್ಲಿ ಬದಲಾವಣೆ ಬಯಸುವ, ಭ್ರಷ್ಟಾಚಾರವನ್ನು ನಿರ್ಮೂಲನ ಮಾಡುವ ಉದ್ದೇಶದ ಅಣ್ಣಾ ಹಜಾರೆ ನೇತೃತ್ವದ ಆಂದೋಲನ ಆಗ ಉಗ್ರವಾಗಿ ನಡೆಯುತ್ತಿತ್ತು. ಯುವಜನರಲ್ಲಿ ಜಾಗೃತಿ ಎದ್ದು ಕಾಣುತ್ತಿತ್ತು. ಆದರೆ, ಅಶ್ವಿನ್ ಮಹೇಶ್ ಗೆಲಲಿಲ್ಲ. ಅವರ ಬದಲು ಒಬ್ಬ ವೃತ್ತಿ ರಾಜ- ಕಾರಣಿಯೇ ಆ ಚುನಾವಣೆಯಲ್ಲಿಯೂ ಗೆದ್ದರು. ರಾಜಕಾರಣಕ್ಕೆ ಇವರೆಲ್ಲ ಬರಬಾರದು ಎಂದು ಮತದಾರರು ಬಯಸುತ್ತಾರೆಯೇ? ನಿಮ್ಮ ಕ್ಷೇತ್ರಕ್ಕೆ ನೀವು ಸೀಮಿತವಾಗಿಯೇ ಇರಿ' ಎಂದು ಹೇಳುತ್ತಿದ್ದಾರೆಯೇ? ಹಾಗಾದರೆ ರಾಜಕಾರಣಕ್ಕೆ ವಿವಿಧ ಕ್ಷೇತ್ರಗಳ ಪರಿಣತರು, ತಜ್ಞರು ಬರುವುದು ಬೇಡವೇ? ಶಿವರಾಮ ಕಾರಂತರು 1980 ರ ದಶಕದಲ್ಲಿ ಕಾರವಾರ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿದ್ದರು. ಅವರಿಗಿಂತ ಮುಂಚೆಯೇ 1970ರ ದಶಕದಲ್ಲಿ ಗೋಪಾಲಕೃಷ್ಣ ಅಡಿಗರು ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಿದ್ದರು. ಇಬ್ಬರೂ ಗೆಲಲಿಲ್ಲ. ಅವು ಎರಡೂ ಯಾರು ಬೇಕಾದರೂ ನಿಂತು ಗೆಲ್ಲಬಹುದಾದ 'ಮುಕ್ತ' ಕ್ಷೇತ್ರಗಳು, ಶಿಕ್ಷಕ ಮತ್ತು ಪದವೀಧರ ಕ್ಷೇತ್ರಗಳು ಹಾಗೆ ಅಲ್ಲ. ಅಲ್ಲಿಯೂ ವೃತ್ತಿಪರ ರಾಜ- ಕಾರಣಿಗಳೇ ನಿಂತು ಗೆಲ್ಲಬೇಕು ಎನ್ನುವುದಾದರೆ ರಾಜಕೀಯ ವ್ಯವಸ್ಥೆಯಲ್ಲಿ ಬದಲಾವಣೆ ಬಯಸಬಾರದು. ಆಗ ಯಥಾಸ್ಥಿತಿಯೇ ಮುಂದುವರಿಯುತ್ತದೆ. ಚುನಾವಣೆಗೆ ಕೋಟಿಗಟ್ಟಲೆ ಹಣ ಖರ್ಚಾಗುತ್ತದೆ. ಕೋಟಿಗಟ್ಟಲೆ ಹಣ ಇರುವವರು ಮಾತ್ರ ಚುನಾವಣೆಗೆ ಸ್ಪರ್ಧಿಸಬಹುದು ಎಂಬ ಭಾವನೆ ಬೆಳೆಯುತ್ತ ಹೋಗುತ್ತದೆ. ಅಶ್ವಿನ್ ಮಹೇಶ್ ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸುತ್ತಾರೋ ಇಲ್ಲವೋ ಗೊತ್ತಿಲ್ಲ. ಆದರೆ, ಡಾ.ಕರಜಗಿ ಅವರು ನಿಲ್ಲುವುದಿಲ್ಲ. ಕರಜಗಿ ಅವರಂಥವರೂ ನಿಲಲ್ಲು ಹಿಂದೇಟು ಹಾಕುತ್ತಾರೆ. ಆಗ ಯಾರನ್ನು ದೂರುವುದು?

ಲೋಕಸಭೆಗೂ ರಾಜ್ಯಸಭೆಗೂ ವ್ಯತ್ಯಾಸವಿದೆ. ವಿಧಾನಸಭೆಗೂ ವಿಧಾನ ಪರಿಷತ್ತಿಗೂ ವ್ಯತ್ಯಾಸವಿದೆ. ಲೋಕಸಭೆಯಲ್ಲಿ ಇದ್ದಷ್ಟು ಸದಸ್ಯರು ರಾಜ್ಯಸಭೆಯಲ್ಲಿ ಇರುವುದಿಲ್ಲ. ಹಾಗೆಯೇ ವಿಧಾನಸಭೆಯಲ್ಲಿ ಇದ್ದಷ್ಟು ಸದಸ್ಯರು ಪರಿಷತ್ತಿನಲ್ಲಿ ಇರುವುದಿಲ್ಲ. ಆ ಎರಡೂ ಸದನಗಳು ಚಿಕ್ಕವು ಆಗಿರುವುದಕ್ಕೆ ಒಂದು ಉದ್ದೇಶ ಇದೆ. ಅವುಗಳಿಗೆ ಮೇಲ್ಮನೆ ಎಂದೂ ಹೆಸರು. ಮೇಲ್ಮನೆ ಒಂದು ಪುನರ್ ಪರಿಶೀಲನೆಯ ಮನೆ. ಕೆಳಮನೆ ಅಂದರೆ ವಿಧಾನಸಭೆಯಲ್ಲಿ ಆಗುವ ಶಾಸನಗಳನ್ನು ಮೇಲ್ಮನೆ ತನ್ನ ಅನುಭವದ, ವಿವಿಧ ಕ್ಷೇತ್ರಗಳ ಪರಿಣತಿಯ ಸಾಣೆಯಲ್ಲಿ ಒರೆಗಿಟ್ಟು ನೋಡುತ್ತದೆ. ಆಗಬೇಕಾದ ತಿದ್ದುಪಡಿಯನ್ನು ಸೂಚಿಸುತ್ತದೆ. ಅದೇ ಕಾರಣಕ್ಕಾಗಿಯೇ ಅಲ್ಲಿ ವಿವಿಧ ಕ್ಷೇತ್ರಗಳ ಗಣ್ಯರು ವಿಧಾನಸಭೆಯಿಂದ, ಸ್ಥಳೀಯ ಸಂಸ್ಥೆಗಳಿಂದ, ಶಿಕ್ಷಕರ, ಪದವೀಧರರ ಕ್ಷೇತ್ರಗಳಿಂದ ಆಯ್ಕೆಯಾಗಿ ಬರುತ್ತಾರೆ. ಚುನಾವಣೆಗೆ ನಿಂತು ಆಯ್ಕೆಯಾಗಿ ಬರಲು ಸಾಧ್ಯವೇ ಇಲ್ಲ ಎನ್ನುವಂಥ ಒಂದು ವರ್ಗವೂ ಇದೆ. ಅವರನ್ನು ಸರ್ಕಾರ ನಾಮಕರಣ ಮಾಡುತ್ತದೆ. ಇದೆಲ್ಲ ಸರಿಯಾದ ಅರ್ಥದಲ್ಲಿ ಜಾ- ರಿಯಾದರೆ ಮೇಲ್ಮನೆ ಒಂದು ಪರಿಣತ, ತಜ್ಞ ಮನೆ ಎನಿಸುತ್ತದೆ. ಕೆಳಮನೆಯ ಕಲಾಪಗಳನ್ನು ಆಗ ಅಲ್ಲಿ ಪ್ರತಿಫಲನ ಮಾಡಲು ಸಾಧ್ಯವಾಗುತ್ತದೆ. ಪ್ರಜಾಪ್ರಭುತ್ವ ಒಂದು ಅಪರಿಪೂರ್ಣ

ವ್ಯವಸ್ಥೆ, ಅಲ್ಲಿ ಶಿಕ್ಷಕರನ್ನು ಶಿಕ್ಷಕರೇ ಪ್ರತಿನಿಧಿಸಬೇಕು ಎಂದು ಇಲ್ಲ. ಸ್ಥಳೀಯ ಸಂಸ್ಥೆಗಳನ್ನು ಅಲ್ಲಿ ಒಂದು ದಿನವೂ ಕೆಲಸ ಮಾಡದವರೂ ಪ್ರತಿನಿಧಿಸಬಹುದು. ಈಗ ಮೇಲ್ಮನೆಯ ಸದಸ್ಯರ ಪಟ್ಟಿಯನ್ನು ಮುಂದೆ ಇಟ್ಟುಕೊಂಡು ಕುಳಿತರೆ ಅಲ್ಲಿ ಬರೀ ಕೋಟ್ಯಧೀಶರೇ ಹೆಚ್ಚು ಇರುವುದು ಕೇವಲ ಆಕಸ್ಮಿಕ ಆಗಿರಲಾರದು.

ಅದು ಕೇವಲ ತೋರಿಕೆಗೇ ಇರಲಿ, ಲೋಕಸಭೆಗೆ, ವಿಧಾನಸಭೆಗೆ ನಡೆಯುವ ನೇರ ಚುನಾವಣೆಗೆ ಮಾಡುವ ವೆಚ್ಚಕ್ಕೆ ಒಂದು ಮಿತಿ ಎಂದು ಇದೆ. ಮೇಲ್ಮನೆ ಚುನಾವಣೆಗೆ ಆ ಮಿತಿಯೇ ಇಲ್ಲ. ಲೋಕಸಭೆ, ವಿಧಾನಸಭೆ ಚುನಾವಣೆಗೆ ನೂರಾರು ಹಳ್ಳಿ ಸುತ್ತಬೇಕು. ಲಕ್ಷಗಟ್ಟಲೆ ಮತದಾರರನ್ನು ಸಂಪರ್ಕಿಸಬೇಕು. ಕೋಟಿಗಟ್ಟಲೆ ಹಣ ಸುರಿಯಬೇಕು. ಆದರೂ ಐದು ವರ್ಷದ ಅವಧಿ ಕಾಯಂ ಎಂದು ಹೇಳಲು ಆಗುವುದಿಲ್ಲ. ಏನೋ ಆಗಿ ನಡುವೆಯೇ ಚುನಾವಣೆ ಬಂದು ಬಿಡಬಹುದು. ಆದರೆ, ರಾಜ್ಯಸಭೆ ಅಥವಾ ವಿಧಾನಪರಿಷತ್ತಿಗೆ ಒಂದು ಸಾರಿ ಆಯ್ಕೆಯಾಗಿ ಹೋದರೆ ಆರು ವರ್ಷ ನಿರಾತಂಕ, ಪ್ರಳಯ ಆದರೆ ಮಾತ್ರ ಚಿಂತೆ!

ಎರಡೂ ಮನೆಗಳಿಗೆ ಮುಂದಿನ ಬಾಗಿಲಿಗಿಂತ ಹಿಂದಿನ ಬಾಗಿಲೇ ದೊಡ್ಡದು. ಆ ಬಾಗಿಲ ಮೂಲಕವೇ ವೃತ್ತಿ ರಾಜಕಾರಣಿಗಳು ಎಲ್ಲವನ್ನೂ ತಮ್ಮ ಕಬಂಧಬಾಹುಗಳಿಂದ ಕಬಳಿಸುವಂತೆ, ಆಕ್ರಮಿಸುವಂತೆ ಕಾಣುತ್ತಿದೆ. ಅವರ ಬಳಿ ಹೇಗೋ ಸಂಗ್ರಹಿಸಿದ ದುಡ್ಡು ಇದೆ. ಅದನ್ನು ಅವರು ಬೇಕಾಬಿಟ್ಟಿ ಚೆಲಲ್ಲು ಸಿದ್ಧರಿದ್ದಾರೆ. ಅವರು ಕೇವಲ ಮತದಾರರನ್ನು, ಶಿಕ್ಷಕರನ್ನು, ಪದವೀಧರರನ್ನು ಮಾತ್ರವಲ್ಲ ಯಾರು ಬೇಕಾದವರನ್ನೂ ಖರೀದಿಸಬಲ್ಲರು. ಖರ್ಚು ಮಾಡಿದ ದುಡ್ಡೆಲ್ಲ ವಾಪಸು ಬರದಿದ್ದರೂ ಅವರಿಗೆ ಚಿಂತೆಯಿಲ್ಲ. ಈ ಅಧಿಕಾರ ಕೊಡುವ 'ಹಕ್ಕು' ಮತ್ತು 'ಮರ್ಯಾದೆ' ಅವರಿಗೆ ಬೇಕು. ಎರಡು ವರ್ಷಗಳ ಹಿಂದೆ ವಿಧಾನಸಭೆಯಿಂದ ಪರಿಷತ್ತಿನ ಹನ್ನೊಂದು ಸೀಟುಗಳಿಗೆ ನಡೆದ ಚುನಾವಣೆಯಲ್ಲಿ ಇಬ್ಬರು ಉದ್ಯಮಿಗಳು ಅತಿ ಹೆಚ್ಚು ಮತ ಪಡೆದು ಗೆದ್ದರು. ಅವರಲ್ಲಿ ಒಬ್ಬರು ಪಕ್ಷೇತರರು. ಅವರ ಗೆಲುವಿನಿಂದಾಗಿ ಒಂದು ರಾಜಕೀಯ ಪಕ್ಷದ ಅಧಿಕೃತ ಅಭ್ಯರ್ಥಿಯೇ ಸೋತು ಬಿಟ್ಟರು. ಇಷ್ಟಾದರೂ, ವಿಧಾನಸಭೆ ಸದಸ್ಯರು ಆ ಇಬ್ಬರು ಶ್ರೀಮಂತ ಅಭ್ಯರ್ಥಿಗಳ ಗುಣ ಮಾತ್ರ ನೋಡಿ ಮತ ಹಾಕಿದರು ಎಂದು ನಾವು ನಂಬಬೇಕು! ಎರಡು ವರ್ಷಗಳ ಅಂತರದಲ್ಲಿ ಈಗ ಮತ್ತೆ ವಿಧಾನಸಭೆಯಿಂದ ಪರಿಷತ್ತಿಗೆ ಚುನಾವಣೆ ನಡೆದಿದೆ. ಈಗಲೂ ಹಾಗೆಯೇ ಆಗಿದೆ. ಈ ಸಾರಿ ಅವಿರೋಧ ಚುನಾವಣೆ ಆಗಿ ಬಿಟ್ಟಿದೆ. ಈಗಲೂ ಶ್ರೀಮಂತರು ನುಸುಳಿಕೊಂಡಿದ್ದಾರೆ. ಈ ಸಾರಿ ಪರಿಷತ್ತಿಗೆ ನಾಮಕರಣವೂ ಆಗಿದೆ. ಸಂವಿಧಾನದ ಆಶಯವನ್ನು ಎತ್ತಿ ಹಿಡಿಯುತ್ತೇವೆ ಎಂದು ಪ್ರಮಾಣ ವಚನ ಸ್ವೀಕರಿಸಿದವರೇ ಅದನ್ನು ಯಾವ ಎಗ್ಗ ಇಲ್ಲದೆ ಉಲ್ಲಂಘಿಸಿದ್ದಾರೆ. ರಾಜ್ಯದಲ್ಲಿ ಸಂವಿಧಾನದ ಆಡಳಿತವನ್ನು ನೋಡಿಕೊಳ್ಳಬೇಕಾದ ರಾಜ್ಯಪಾಲರೇ ಆ 'ಭಂಗ'ಕ್ಕೆ ತಮ್ಮ ಸಮ್ಮತಿಯ ಮುದ್ರೆ ಒತ್ತಿದ್ದಾರೆ. ಹಾಗಾದರೆ ವ್ಯವಸ್ಥೆಯನ್ನು ಯಾರು ಸುಧಾರಿಸಬೇಕು? ಹೇಗೆ ಸುಧಾರಿಸಬೇಕು? ಇಲ್ಲಿ ಯಾರು ಯಾರನ್ನು ಮತ್ತು ಏನನ್ನು ಸೋಲಿಸುತ್ತಿದ್ದಾರೆ? ಮತ್ತು ಏಕೆ?

29.06.2014

# ಅತಿದೊಡ್ಡ ಪ್ರಜಾತಂತ್ರವನ್ನು ಅತಿ ಶ್ರೇಷ್ಠ ಪ್ರಜಾತಂತ್ರ ಮಾಡುವ ದಾರಿಯಲ್ಲಿ..

ಪುಸ್ತಕಗಳೇ ಹಾಗೆ. ಕೆಲವು ವಿವಾದ ಹುಟ್ಟು ಹಾಕುವುದಕ್ಕೆ ಬರೆದಂತೆ ಇರುತ್ತವೆ. ಅವು ತಮ್ಮ ಸೀಮಿತ ಉದ್ದೇಶದಲ್ಲಿ ಸಫಲವೂ ಆಗುತ್ತವೆ. ಪುಸ್ತಕ ಇನ್ನೂ ಮಾರುಕಟ್ಟೆಗೆ ಬರುವುದಕ್ಕಿಂತ ಮುಂಚೆಯೇ ಅವು ಸುದ್ದಿ ಮಾಡುತ್ತವೆ, ಕಿಡಿ ಹೊತ್ತಿಸುತ್ತವೆ, ಇರಿಸು ಮುರಿಸು ಮಾಡುತ್ತವೆ. ಸಹಜವಾಗಿ ಜನರ ಕುತೂಹಲವನ್ನೂ ಕೆರಳಿಸುತ್ತವೆ. ಇದು 'ಮಾರಾಟ'ದ ಕಾಲ. ಸರಕನ್ನು ಮಾರಬೇಕು ಎನ್ನುವವರು ಇಂಥ ಆವರಣವನ್ನೆಲ್ಲ ಸೃಷ್ಟಿ ಮಾಡುತ್ತಾರೆ. ಇನ್ನು ಕೆಲವು ಪುಸ್ತಕಗಳು ಹಾಗೆ ಇರುವುದಿಲ್ಲ. ತಣ್ಣಗೆ ಇರುತ್ತವೆ. ಆದರೆ, ಓದುತ್ತ ಹೋದಂತೆ ನಮ್ಮ ತಿಳಿವನ್ನು ವಿಸ್ತರಿಸುತ್ತವೆ, ಅರಿವನ್ನು ಹಿಗ್ಗಿಸುತ್ತವೆ. ಸುದ್ದಿ ಮಾಡುವ ಪುಸ್ತಕಗಳಿಗೆ ದೂರದೃಷ್ಟಿ ಇರುತ್ತದೆಯೋ ಇಲ್ಲವೋ ತಿಳಿಯದು. ಆದರೆ, ಎರಡನೇ ಮಾದರಿ ಪುಸ್ತಕಗಳಿಗೆ ನಾಡಿನ ಹಿತ ಮುಖ್ಯವಾಗಿರುತ್ತದೆ; ಜನರ ಒಳಿತು ಪ್ರಧಾನವಾಗಿರುತ್ತದೆ.

ಯುಪಿಎ ಸರ್ಕಾರದ ಮೊದಲ ಅವಧಿಯಲ್ಲಿ ಪ್ರಧಾನಿ ಮನಮೋಹನಸಿಂಗ್ ಅವರಿಗೆ ಮಾಧ್ಯಮ ಸಲಹೆಗಾರರಾಗಿದ್ದ ಸಂಜಯ ಬಾರು ಅವರ ಪುಸ್ತಕ ಮೊದಲ ಮಾದರಿಯದು. ಬಾರು ಕದನ ಕುತೂಹಲಿ, ಸ್ವಕೇಂದ್ರಿತ ಮನುಷ್ಯ ಅವರ ಪುಸ್ತಕವನ್ನು ಮನಮೋಹನಸಿಂಗ್ ಅವರ ಎರಡನೇ ಅವಧಿಯಲ್ಲಿ ಮಾಧ್ಯಮ ಸಲಹೆಗಾರರಾಗಿದ್ದ ಹರೀಶ್ ಖರೆ ಚಿಂದಿ ಚಿಂದಿ ಮಾಡುವ ರೀತಿಯಲ್ಲಿ ವಿಮರ್ಶೆ ಮಾಡಿದ್ದಾರೆ. ಬಾರುಗೆ ತನ್ನ ಮಿತಿಯೇ ಗೊತ್ತಿರಲಿಲ್ಲ ಎಂದು ಟೀಕಿಸಿದ್ದಾರೆ. ಇವೆಲ್ಲ ಕೇವಲ ವೃತ್ತಿ ಮಾತ್ಸರ್ಯದ ಮಾತು ಇರಲಾರವು. ಸಂಜಯ ಬಾರು ಪುಸ್ತಕದ ಬಗ್ಗೆ ಈಗಾಗಲೇ ಬೇಕಾದಷ್ಟು ಚರ್ಚೆ ಆಗಿದೆ. ಆದರೆ, ಕಳೆದ ವಾರವಷ್ಟೇ ಬೆಂಗಳೂರಿನಲ್ಲಿ ದೇಶದ ನಿವೃತ್ತ ಮುಖ್ಯ ಚುನಾವಣಾ ಆಯುಕ್ತ ಎಸ್.ವೈ.ಖುರೇಷಿ ಅವರ ಪುಸ್ತಕವೂ ಬಿಡುಗಡೆ ಆಗಿದೆ.

ಮನಸ್ಸು ಮಾಡಿದ್ದರೆ ಬೇಕಾದಷ್ಟು ಇದ್ದ ಸುದ್ದಿ ಮಾಡುವ ಸರಕನ್ನು ಖುರೇಷಿ ಅವರೂ ತಮ್ಮ ಪುಸ್ತಕದಲ್ಲಿ ಬಳಸಿಕೊಳ್ಳಬಹುದಿತ್ತು. ಪುಸ್ತಕ ಬಿಡುಗಡೆ ಆಗುವುದಕ್ಕಿಂತ ಮುಂಚೆ ಕೊಂಚ ಕೊಂಚ ಮಾಧ್ಯಮಗಳಿಗೆ ಬಿಡುಗಡೆ ಮಾಡಿ ಇಡೀ ದೇಶದ ಗಮನವನ್ನು ತಮ್ಮ ಕಡೆಗೆ ಮತ್ತು ತಮ್ಮ ಪುಸ್ತಕದ ಕಡೆಗೆ ಅವರು ಸೆಳೆಯಬಹುದಿತ್ತು. ಅವರಿಗೆ ಆ ಉದ್ದೇಶ ಇರಲಿಲ್ಲ. ತಮ್ಮ ಬಳಿ ಇರುವ 'ಸ್ಫೋಟಕ ಮಾಹಿತಿ'ಯನ್ನು ತಾವು ಬಳಸಿಕೊಂಡಿಲ್ಲ ಎಂದು ಖುರೇಷಿ ತಮ್ಮ ಮೊದಲ ಮಾತಿನಲ್ಲಿಯೇ ಹೇಳಿಬಿಟ್ಟಿದ್ದಾರೆ!

ಖುರೇಷಿ ಅವರು ಈ ದೇಶ ಕಂಡ ಅತ್ಯುತ್ತಮ ಚುನಾವಣಾ ಆಯುಕ್ತರಲ್ಲಿ ಒಬ್ಬರು. ನಿವೃತ್ತಿ ಆಗುವುದಕ್ಕಿಂತ ಮುಂಚೆ ಚುನಾವಣೆ ಪದ್ಧತಿಯಲ್ಲಿ ಏನೇನು ಸುಧಾರಣೆ ತರಬಹುದೋ ಅದನ್ನೆಲ್ಲ ತಂದವರು. ಯಾವ ಅಂಕೆಯೂ ಇಲ್ಲದಂತೆ ವರ್ತಿಸುವ ರಾಜಕಾರಣಿಗಳ ಅಹಂಕಾರದ ವರ್ತನೆಗೆ ಮೂಗುದಾರ ಹಾಕಿದವರು. ಉತ್ತರ ಪ್ರದೇಶದ ವಿಧಾನಸಭೆ ಚುನಾವಣೆಯಲ್ಲಿ ಬಾಯಿಗೆ ಬಂದಂತೆ ಗಳಹುತ್ತಿದ್ದ ಸಚಿವ ಸಲ್ಮಾನ್ ಖುರ್ಷಿದ್ ಅವರಿಗೆ ಛೀಮಾರಿ ಹಾಕಿ ಅವರು ಕ್ಷಮೆ ಕೇಳುವಂತೆ ಮಾಡಿದವರು. ಅದಕ್ಕಿಂತ ಹೆಚ್ಚಾಗಿ ಮತದಾರರು ಮತಗಟ್ಟೆಗಳಿಗೆ ದಾಖಲೆ ಸಂಖ್ಯೆಯಲ್ಲಿ ಬರುವಂತೆ ಮತ್ತು ಮತದಾನ ಹಿಂಸೆಯಿಲ್ಲದಂತೆ ನಡೆಸಿದವರು.

ಚುನಾವಣೆ ಆಯೋಗದಲ್ಲಿನ ತಮ್ಮ ಸುದೀರ್ಘ ಸೇವಾವಧಿಯ ಅನುಭವಗಳನ್ನು ಆಧರಿಸಿ 'An Undocumented Wonder The Making of the Great Indian Election' Dow 434 ಪುಟಗಳ ಸಾಕಷ್ಟು ದೊಡ್ಡ ಪುಸ್ತಕ ಬರೆದಿರುವ ಖುರೇಷಿ ಅವರ ಉದ್ದೇಶ, ಜಗತ್ತಿನ ಅತಿ ದೊಡ್ಡ ಪ್ರಜಾಸತ್ತೆಯನ್ನು ಇನ್ನಷ್ಟು ಅರ್ಥಪೂರ್ಣ ಮಾಡುವುದು. ಹಿಂಸಾಚಾರವಿಲ್ಲದ, ದೊಡ್ಡ ಸಂಖ್ಯೆಯಲ್ಲಿ ಪಾಲುಗೊಳ್ಳುವ ಚುನಾವಣೆಯಿಂದ ದೇಶದಲ್ಲಿ ಬದಲಾವಣೆಯನ್ನು ತರುವುದು. ಆ ದಾರಿಯಲ್ಲಿ ಇರುವ ಅಡಚಣೆಗಳನ್ನು ಗುರುತಿಸುವುದು ಮತ್ತು ನಿವಾರಿಸುವುದು ಹೇಗೆ ಎಂದು ಪಟ್ಟಿ ಮಾಡುವುದು. ಅನುಭವ ಎನ್ನುವುದು ದೊಡ್ಡದು. ಅನುಭವ ಕಲಿಸುವ ಪಾಠ ಇನ್ನೂ ದೊಡ್ಡದು. ಖುರೇಷಿ ಅವರ ಪುಸ್ತಕದಲ್ಲಿ ಅದು ಹೆಜ್ಜೆ ಹೆಜ್ಜೆಗೂ ಗೊತ್ತಾಗುತ್ತದೆ.

1952ರಲ್ಲಿ ನಡೆದ ಮೊದಲ ಸಾರ್ವತ್ರಿಕ ಚುನಾವಣೆಯಿಂದ ಈಗ ನಡೆಯುತ್ತಿರುವ ಹದಿನಾರನೇ ಲೋಕಸಭೆ ಚುನಾವಣೆವರೆಗೆ ದೇಶದ ನದಿಗಳಲ್ಲಿ ಸಾಕಷ್ಟು ನೀರು ಹರಿದು ಹೋಗಿದೆ. ಸ್ವಾತಂತ್ರ್ಯ ಬರುವುದಕ್ಕಿಂತ 25ವರ್ಷಗಳಷ್ಟು ಮುಂಚೆಯೇ, ನಮಗೆಲ್ಲ ಚೆನ್ನಾಗಿ ಗೊತ್ತಿರಬೇಕು, ಸ್ವರಾಜ್ ಒಮ್ಮಿಂದೊಮ್ಮೆಲೆ ಅಥವಾ ಬಹುಕಾಲದವರೆಗೆ ನಮಗೆ ಒಳ್ಳೆಯ ಸರ್ಕಾರವನ್ನಾಗಲಿ, ಜನರಿಗೆ ಸಂತೋಷವನ್ನಾಗಲೀ ತರುವುದಿಲ್ಲ. ಚುನಾವಣೆಗಳು ಮತ್ತು ಅವು ಹುಟ್ಟಿ ಹಾಕುವ ಭ್ರಷ್ಟಾಚಾರ, ಅನ್ಯಾಯ, ಸಂಪತ್ತಿನ ಅಧಿಕಾರ ಮತ್ತು ದುರಾಚಾರ, ಆಡಳಿತದಲ್ಲಿನ ಭ್ರಷ್ಟಾಚಾರ ಸ್ವಾತಂತ್ರ್ಯ ಬಂದ ಕೂಡಲೇ ಜನರ ಬದುಕನ್ನು ನರಕ ಮಾಡುತ್ತವೆ' ಎಂದು ರಾಜಾಜಿ ಭವಿಷ್ಯ ನುಡಿದಿದ್ದರು. ದ್ರಷ್ಟಾರನಂಥ ರಾಜಾಜಿ ಅವರ ಮಾತುಗಳನ್ನು ಖುರೇಷಿ ಅವರ ಪುಸ್ತಕಕ್ಕೆ ಬರೆದಿರುವ ಮುನ್ನುಡಿಯಲ್ಲಿ ಗೋಪಾಲಕೃಷ್ಣ ಗಾಂಧಿ ಉಲ್ಲೇಖಿಸಿದ್ದಾರೆ.

ರಾಜಾಜಿ ಅವರಿಗೆ ನಾವು ಎಂಥ ಜನ ಎಂದು ಸ್ವಾತಂತ್ರ್ಯ ಹೋರಾಟದ ಅವಧಿಯಲ್ಲಿಯೇ ಗೊತ್ತಿತ್ತು ಎಂದು ಕಾಣುತ್ತದೆ ಈಗಲೂ ಅವರ ಮಾತು ನಿಜ. ಚುನಾವಣೆಗಳೇ ಈಗಲೂ ಈ ದೇಶಕ್ಕೆ ಶಾಪ ಮತ್ತು ವರ. ಶಾಪ ಏಕೆ ಎಂದರೆ ಅಲ್ಲಿ ಕಪ್ಪು ಹಣ ನಿರ್ಲಜ್ಜವಾಗಿ ಬಳಕೆಯಾಗುತ್ತದೆ. ಮತ್ತು ಹೀಗೆ ಖರ್ಚು ಮಾಡಿದ ಹಣವನ್ನು ಗಳಿಸಲು ಚುನಾವಣೆ ನಂತರ ಸಿಗುವ ಅಧಿಕಾರ ಬಳಕೆಯಾಗುತ್ತದೆ. ಜನರು ಚುನಾವಣೆಗೆ ನಿಲ್ಲಲು ಮತ್ತು ಗೆಲ್ಲಲು ಏಕೆ 'ಸಾಯುತ್ತಾರೆ' ಎಂದರೆ ಚುನಾವಣೆ ನಂತರ ಅವರಿಗೆ ಸಿಗುವ ನಿರಂಕುಶ ಎನ್ನುವಂಥ ಅಧಿಕಾರ ಮತ್ತು ಅದು ತರುವ 'ಮದ', ಜನರ ಸೇವೆ ಎನ್ನುವುದೆಲ್ಲ ಅವರು ನಮ್ಮ ಮುಖಕ್ಕೆ ಸವರುವ ಮಂಕುಬೂದಿ. ಇದು ಶಾಪದ ಕಥೆಯಾಯಿತು. ವರ ಏಕೆ ಎಂದರೆ ಆಮ್ ಆದಿಯಂಥ ಧನಬಲ, ತೋಳ್ಬಲ ಏನೇನೂ ಇಲ್ಲದ ಒಂದು ಪಕ್ಷ ಇಲ್ಲಿ ಅಧಿಕಾರಕ್ಕೆ ಬಂದು ಬಿಡಬಹುದು!

ಎಲ್ಲ ಅರೆಕೊರೆಗಳ ನಡುವೆ ಭಾರತದ ಪ್ರಜಾತಂತ್ರದಲ್ಲಿ ಅನೇಕ ವಿಸ್ಮಯಗಳು ಘಟಿಸಿವೆ. ಮನೆ ಮನೆಗೆ ವೃತ್ತಪತ್ರಿಕೆ ಹಂಚುತ್ತಿದ್ದ ಅಬ್ದುಲ್ ಕಲಾಂ ಅವರಂಥ ಸರಳ ವ್ಯಕ್ತಿ ದೇಶದ ರಾಷ್ಟ್ರಪತಿ ಆದರು. ಕಡುಬಡತನದಲ್ಲಿ ಬೀದಿ ದೀಪಗಳ ಅಡಿ ಓದಿದ ಮನಮೋಹನಸಿಂಗ್ ಪ್ರಧಾನಿ ಆದರು. ಇಂಥ ಸಾಧ್ಯತೆಗಳನ್ನು ನಮ್ಮ ಸಂವಿಧಾನವೇ ನಮಗೆ ಕೊಟ್ಟಿದೆ.

ನಮ್ಮ ದೇಶದಲ್ಲಿ 1950ರಲ್ಲಿಯೇ 21 ವರ್ಷ ಆದ ಎಲ್ಲ ನಾಗರಿಕರಿಗೆ ಮತದಾನದ ಹಕ್ಕನ್ನು ಕೊಡಲಾಯಿತು. ಅಲ್ಲಿ ಗಂಡು ಹೆಣ್ಣು ಎಂದು ತರತಮ ಮಾಡಲಿಲ್ಲ. ಸರಿಯಾಗಿ 38 ವರ್ಷಗಳ ನಂತರ 1988ರಲ್ಲಿ ಈ ಹಕ್ಕು18 ವರ್ಷ ಮೀರಿದ ಎಲ್ಲರಿಗೂ ಸಿಕ್ಕಿತು. ಆಶ್ಚರ್ಯ ಎಂದರೆ ಅಮೆರಿಕ ದೇಶಕ್ಕೆ ಹೆಣ್ಣು ಮಕ್ಕಳಿಗೆ ಇಂಥ ಹಕ್ಕು ಕೊಡಲು 144 ವರ್ಷಗಳು ಹಿಡಿದುವು. ಆಧುನಿಕ ಜಗತ್ತಿನ ಪ್ರಜಾತಂತ್ರದ ತವರು ಎನಿಸಿದ ಬ್ರಿಟನ್‌ಗೆ ನೂರು ವರ್ಷಗಳೇ ಬೇಕಾದುವು!

ಮತದಾನದ ಹಕ್ಕೇನೋ ಸಿಕ್ಕಿತು. ಆದರೆ, ಉತ್ತಮ, ದಕ್ಷ, ಭ್ರಷ್ಟಾಚಾರ ರಹಿತ ಸ್ವಯಮಾಡಳಿತದ ಕನಸು ನನಸಾಗಲಿಲ್ಲ. ಚುನಾವಣೆಯ ಮುಖ್ಯ ಉದ್ದೇಶವೇ ದಕ್ಷ ಆಡಳಿತಗಾರರನ್ನು, ಸ್ವಚ್ಛ ಜನಪ್ರತಿನಿಧಿಗಳನ್ನು ಆಯ್ಕೆ ಮಾಡುವುದು. ಆದರೆ, ನಮ್ಮ ಸರ್ಕಾರಗಳು ನಮ್ಮ ಇಚ್ಛೆಯನ್ನು, ಆಶಯವನ್ನು ಪ್ರತಿನಿಧಿಸುವುದಿಲ್ಲ. ನಾವು ಚುನಾಯಿಸಿದ ಸರ್ಕಾರವೇ ಪರಮ ಭ್ರಷ್ಟ ಎಂದು ನಮಗೆ ಏಕೆ ಅನಿಸುತ್ತದೆ? ಚುನಾಯಿತ ಪ್ರತಿನಿಧಿಗಳು, ಆಡಳಿತ ಮಾಡುವ ಸರ್ಕಾರಗಳು ಜನರ ನಿತ್ಯದ ಜೀವನವನ್ನು ಜಂಜಡ ಮುಕ್ತಗೊಳಿಸಬೇಕು. ಕನಿಷ್ಠ ಸವಲತ್ತುಗಳು ನಮ್ಮ ಊರಿನಲ್ಲಿಯೇ ಸಿಗುವಂತೆ ಆಗಬೇಕು. ರಸ್ತೆ, ಆಸ್ಪತ್ರೆ, ಶಿಕ್ಷಣದಂಥ ಮೂಲಸೌಕರ್ಯಗಳಲ್ಲಿ ಕೊರತೆ ಇರಬಾರದು. ಜನರ ಕುಂದು ಕೊರತೆಗಳಿಗೆ ಅಧಿಕಾರಿಗಳು ಓಗೊಡುವಂತೆ ಆಗಬೇಕು. ಹೆಣ್ಣು ಗಂಡಿನ ನಡುವೆ ಭಿನ್ನಭೇದ ಇರಬಾರದು. ಎಲ್ಲ ಸಮುದಾಯಗಳು ಶಾಂತಿಯಿಂದ, ಜಗಳವಿಲ್ಲದೆ ಬದುಕುವಂತೆ ಆಗಬೇಕು. ಅಂಗವಿಕಲರು, ಜನಾಂಗೀಯ ಅಲ್ಪಸಂಖ್ಯಾತರು ಭೀತಿಯಿಲ್ಲದೇ ಬದುಕಲು ಸಾಧ್ಯವಾಗಬೇಕು. ಆದರೆ, ನಾವು ಚುನಾಯಿಸಿದ ಸರ್ಕಾರಗಳು ಇದನ್ನೆಲ್ಲ ಮಾಡುತ್ತವೆಯೇ?

ಚುನಾವಣೆ ನಡೆಯುವಾಗಲೇ ಅವರು ದಿಕ್ಕು ತಪ್ಪುತ್ತಾರೆ. ಅಥವಾ ನಮ್ಮ ದಿಕ್ಕು ತಪ್ಪಿಸುತ್ತಾರೆ. ನಮ್ಮ ಬದುಕನ್ನು ಉತ್ತಮಗೊಳಿಸುವ ಒಂದು ಮಾತೂ ನಮಗೆ ಕೇಳಿಬರುವುದಿಲ್ಲ. ಯಾರು ತಮ್ಮ ಹೆಂಡತಿಯನ್ನು ಏಕೆ ಬಿಟ್ಟರು, ಯಾರು ಇನ್ನೊಬ್ಬರ ಹೆಂಡತಿಯನ್ನು ಏಕೆ ಹಾರಿಸಿಕೊಂಡು ಹೋದರು ಎಂಬುದೆಲ್ಲ ರಾಷ್ಟ್ರೀಯ ಚರ್ಚೆ ಎನಿಸುವ ದುರಂತ ಸನ್ನಿವೇಶದಲ್ಲಿ ಭಾರತದ ಪ್ರಜಾತಂತ್ರ ಇದೆ. ರಾಜಕೀಯ ನಾಯಕರು ಬೇಕೆಂದೇ ಹೀಗೆಲ್ಲ ಮಾಡುತ್ತಿರಬಹುದು ಎಂದು ಅನಿಸುತ್ತದೆ. ಚುನಾವಣೆ ನಂತರ ಅಧಿಕಾರ ಹಿಡಿದ ಮೇಲೂ ಇಂಥದೇ ಚಿಲ್ಲರೆ ಸಂಗತಿಗಳ ಚರ್ಚೆ ಮಾಡುತ್ತ ಜನರ ಗಮನ ಬೇರೆ ಕಡೆ ಸೆಳೆದು ತಾವು ಹಾಯಾಗಿ ಇದ್ದು ಬಿಡಬೇಕು ಎಂದು ಅವರು ಅಂದುಕೊಂಡಿರಬಹುದು.

ಪ್ರಜಾತಂತ್ರ ಎಂದರೆ ಪಾಲುಗೊಳ್ಳುವಿಕೆ, ಉತ್ತರದಾಯಿತ್ವ ಮತ್ತು ಕಾನೂನಿನ ಆಡಳಿತ. ಆಡಳಿತ ಎಂದರೆ ಅಭಿವೃದ್ಧಿಯ ಫಲಗಳನ್ನು ಜನರಿಗೆ ತಲುಪಿಸುವುದು. ದಕ್ಷ ಆಡಳಿತ, ಕಾನೂನಿನ ಆಡಳಿತ, ನಿರೀಕ್ಷೆಗೆ ತಕ್ಕ ಆಡಳಿತ ಇಲ್ಲದೇ ಇದ್ದರೆ ಸರ್ಕಾರಗಳು ಎಷ್ಟೇ ಅನುದಾನ ಬಿಡುಗಡೆ ಮಾಡಿದರೂ, ಉಚಿತ ಕೊಡುಗೆಗಳನ್ನು ನೀಡಿದರೂ ನಿರೀಕ್ಷಿತ ಅಭಿವೃದ್ಧಿಯನ್ನು ಸಾಧಿಸುವುದು ಸಾಧ್ಯವಾಗದು. ಜನರೂ ಸುಖವಾಗಿ ಬಾಳಲಾರರು.

ಅಧಿಕಾರದ ಉದ್ದೇಶವೇ ಮರೆತು ಹೋದಾಗ ಇಂಥ ಸನ್ನಿವೇಶ ಸೃಷ್ಟಿಯಾಗುತ್ತದೆ. ರಾಜ್ಯದ ಲೋಕೋಪಯೋಗಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಮುಕ್ಕಾಲು ಕೋಟಿ ಖರ್ಚು ಮಾಡಿ ತಮ್ಮ ಮನೆ ದುರಸ್ತಿ ಮಾಡಿಸಿಕೊಂಡಾಗ ಹೀಗೆಯೇ ಅನಿಸಿತು; ಸಮಾಜ ಕಲ್ಯಾಣ ಸಚಿವ ಎಚ್.ಆಂಜನೇಯ ತಮ್ಮ ಕಚೇರಿ ಕೊಠಡಿಯ ಗೋಡೆ ಒಡೆಸಿ ವಿಸ್ತರಿಸಿಕೊಂಡಾಗಲೂ ಹೀಗೆಯೇ ಅನಿಸಿತು. ನಾನು ಇಬ್ಬರನ್ನೂ ಬಲ್ಲೆ. ಇಬ್ಬರೂ ಕಷ್ಟಪಟ್ಟು ಮೇಲೆ ಬಂದವರು. ಇಬ್ಬರಿಗೂ ಆಡಳಿತ ಮಾಡಲು ಇದೆಲ್ಲ ಬೇಡ ಎಂದು ಹೊಳೆಯಬೇಕಿತ್ತು. ಮತ್ತು ದೂರದ ತಮ್ಮ ಊರಿನಲ್ಲಿ ತಮ್ಮ ಜನರು ಹೇಗೆ ಇದ್ದಾರೆ ಎಂಬುದು ಅವರಿಗೆ ನೆನಪು ಇರಬೇಕಿತ್ತು.

ರಾಜಕೀಯ ಪಕ್ಷಗಳಿಗೆ, ಮುಖಂಡರಿಗೆ ತಮ್ಮನ್ನು ಬೆಳೆಸಿದ ಸಿದ್ಧಾಂತಗಳು, ಸಾಮಾಜಿಕ ಚಳವಳಿಗಳು ಅಧಿಕಾರ ಹಿಡಿದ ಕೂಡಲೇ ಮರೆತು ಹೋಗುತ್ತವೆ. ಅವರ ಮೇಲೆ ಆಸೆ ಇಟ್ಟುಕೊಂಡ ಜನರಿಗೆ ನಿಧಾನವಾಗಿ ಭ್ರಮ ನಿರಸನ ಆಗುತ್ತ ಹೋಗುತ್ತದೆ. ಚುನಾವಣೆಯಲ್ಲಿ ಗೆದ್ದ ಅಭ್ಯರ್ಥಿಗಳ ಆಸ್ತಿ ಇದ್ದಕ್ಕಿದ್ದಂತೆ ಇಮ್ಮಡಿ, ಮುಮ್ಮಡಿ ಆಗುತ್ತ ಹೋಗುತ್ತದೆ. ಅವರು ಸಚಿವರು ಆದರಂತೂ ಇದು ಎಷ್ಟು ಪಟ್ಟು ಹೆಚ್ಚುತ್ತದೆ ಎಂದು ತಿಳಿಯಲು ಮತ್ತೆ ಚುನಾವಣೆಯೇ ಬರಬೇಕು. ಆಗ ಅವರು ಘೋಷಿಸಿದ ಆಸ್ತಿಯಲ್ಲಿಯೇ ಅದು ಬಹಿರಂಗವಾಗಬೇಕು. ಅದರಲ್ಲಿಯೂ ಎಷ್ಟು ಬಿಳಿ, ಎಷ್ಟು ಕಪ್ಪು ಎಂದು ಹೇಳುವುದು ಕಷ್ಟ.

ಭಾರತ, ಪಾಕಿಸ್ತಾನ, ಬಾಂಗ್ಲಾದೇಶ, ಶ್ರೀಲಂಕಾ ದೇಶಗಳೆಲ್ಲ ಸೇರಿದ ಇಡೀ ಉಪಖಂಡವೇ ಭ್ರಷ್ಟಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿ ಇರುವುದಕ್ಕೆ ಏನು ಹೇಳೋಣ? ಆಡಳಿತದಲ್ಲಿಯೇ ಭ್ರಷ್ಟರು ಸೇರಿರುವುದೇ ಇದಕ್ಕೆ ಕಾರಣವಲ್ಲದೆ ಮತ್ತೇನು ಇರಲು ಸಾಧ್ಯ? ಅಧಿಕಾರಕ್ಕೆ ಬಂದು ಧನವಂತರು ಆದವರ ಕಥೆ ಇದು. ಖುನಿ ಮಾಡಿ, ಗಲಭೆ ಮಾಡಿ, ಅತ್ಯಾಚಾರ ಅನಾಚಾರ ಮಾಡಿ ಅಧಿಕಾರಕ್ಕೆ ಬಂದವರ ಕಥೆಗಳಿಗೇನೂ ಕೊರತೆಯಿಲ್ಲ!

2009ರಲ್ಲಿ ಲೋಕಸಭೆಗೆ ಸ್ಪರ್ಧಿಸಿದ್ದ ರಾಷ್ಟ್ರೀಯ ಪಕ್ಷಗಳ ಅಭ್ಯರ್ಥಿಗಳಲ್ಲಿ ಶೇಕಡಾ 60ರಷ್ಟು ಮಂದಿಯ ವಿರುದ್ಧ ಕೊಲೆ, ಅಪಹರಣ, ದರೋಡೆಯಂಥ ಮೊಕದ್ದಮೆಗಳು ಇದ್ದುವು!

ಆದರೂ ಭಾರತದ ಜನರು ಪ್ರಜಾತಂತ್ರ ವ್ಯವಸ್ಥೆಯಲ್ಲಿ ವಿಶ್ವಾಸ ಕಳೆದುಕೊಂಡಿಲ್ಲ. ಅವರು ಹಲವು ಬಾರಿ ದೆಹಲಿಯ ಜಂತರ್ ಮಂತರ್, ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದ ಕಡೆ ಸಾವಿರ ಸಾವಿರ ಸಂಖ್ಯೆಯಲ್ಲಿ ಹರಿದು ಬಂದು ತಮ್ಮನ್ನು ಕಾಡುವ ದುರಾಡಳಿತದ ವಿರುದ್ಧ ಪ್ರತಿಭಟಿಸಿರಬಹುದು. ಆದರೆ, ಜಂತರ್ ಮಂತರ್ ಎಂದರೆ ಲೋಕಸಭೆ ಅಲ್ಲ, ವಿಧಾನಸಭೆ ಅಲ್ಲ ಎಂದು ಅವರಿಗೆ ಗೊತ್ತಿದೆ. ಅವರು ಮತ್ತೆ ಮತ್ತೆ ಒಳ್ಳೆಯ ಸರ್ಕಾರ ಬರಬೇಕು ಎಂದು ಮತ್ತೆ ಮತ್ತೆ ಮತಗಟ್ಟೆಗೆ ಹೋಗಿದ್ದಾರೆ.

ಈ ಸಾರಿಯೂ ಇನ್ನು ಎರಡು ಹಂತದ ಮತದಾನ ಇರುವಾಗಲೇ ದಾಖಲೆ ಪ್ರಮಾಣದಲ್ಲಿ ಅವರು ಮತಗಟ್ಟೆಗೆ ಬಂದಿದ್ದಾರೆ. ಫಲಿತಾಂಶ ಬಂದ ಮೇಲೆ ಅವರು ಏನನ್ನು ಬಯಸಿದ್ದರು ಎಂಬುದು ಗೊತ್ತಾಗಬಹುದು. 'ಪ್ರಜಾತಂತ್ರದ ಶ್ರೇಯ ಏನು ಎಂದರೆ ಒಬ್ಬ ಪುಟ್ಟ ಮನುಷ್ಯ, ಪುಟ್ಟ ಪುಟ್ಟದಾಗಿ ಹೆಜ್ಜೆ ಹಾಕುತ್ತ ಮತಗಟ್ಟೆಗೆ ಹೋಗುವುದು, ಒಂದು ಪುಟ್ಟ ಕಾಗದದ ಮೇಲೆ ತನ್ನ ಕೈಯಲ್ಲಿನ ಪುಟ್ಟ ಪೆನ್ಸಿಲ್ಲಿನಿಂದ ಪುಟ್ಟ ಗುರುತು ಹಾಕಿ ಹೊರಗೆ ಬರುವುದು' ಎಂದು ಚರ್ಚಿಲ್ ಹೇಳಿದ್ದನ್ನು ಎಸ್.ವೈ.ಖುರೇಷಿ ತಮ್ಮ ಪುಸ್ತಕದಲ್ಲಿ ಉಲ್ಲೇಖಿಸಿದ್ದಾರೆ. ದೆಹಲಿಯಲ್ಲಿ ಆಮ್ ಆದ್ಮ ಪಕ್ಷವನ್ನು ಅಧಿಕಾರದ ಹತ್ತಿರಕ್ಕೆ ತಂದವರು ಇಂಥ ಪುಟ್ಟ ಮನುಷ್ಯರು.

ಪ್ರಜಾತಂತ್ರದ ದುರಂತ ಎಂದರೆ, ಆಮ್ ಆಯ್ಕೆಯ ದುರಂಧರರ ಹಾಗೆ ಜನಪ್ರತಿನಿಧಿಗಳು ಮತ್ತೆ ಮತ್ತೆ ಮತದಾರರಿಗೆ ನಿರಾಶೆ ಮಾಡುತ್ತಾರೆ. ನಮ್ಮ ಹಣೆಬರಹ ಎಂದರೆ ನಾವು ಮತ್ತೆ ಮತ್ತೆ ಮತಗಟ್ಟೆಗೇ ಹೋಗಬೇಕು. ಅಲ್ಲಿನ ಯಂತ್ರದ ಒಂದು ಬಟನ್ನಿನ ಮೇಲೆ ಬೆರಳು ಒತ್ತಬೇಕು. ನಮ್ಮ ನಿರೀಕ್ಷೆಯ ಸರ್ಕಾರ ಈಗಲೂ ಅಧಿಕಾರಕ್ಕೆ ಬರುತ್ತದೆಯೋ ಇಲ್ಲವೋ ಗೊತ್ತಿಲ್ಲ. ಆದರೆ, ಜಗತ್ತಿನ ಅತಿದೊಡ್ಡ ಪ್ರಜಾತಂತ್ರ ಅತಿ ಶ್ರೇಷ್ಠ ಪ್ರಜಾತಂತ್ರ ಎನಿಸುವ ಹಾಗೆ ಮಾಡಬೇಕಾಗಿದೆ. ಅದನ್ನು ಆಗುಮಾಡಿಸುವ ಒಂದೇ ದಾರಿ ಎಂದರೆ ಚುನಾವಣೆ, ಕಡುಭ್ರಷ್ಟ, ಅದಕ್ಷ ಎನಿಸಿದ ಆಡಳಿತ ಯಂತ್ರವನ್ನೇ ಇಟ್ಟುಕೊಂಡು ಯಶಸ್ವಿ ಚುನಾವಣೆ ನಡೆಸಿದ ಚುನಾವಣೆ ಆಯೋಗದಲ್ಲಿ ಶೇಷನ್ ಅವರಂಥವರು, ಖುರೇಷಿ ಅವರಂಥವರು ನೇತಾರರಾಗಿ ಇದ್ದರು ಎಂಬುದೇ ಒಂದು ಹೆಮ್ಮೆಯ ಸಂಗತಿ.

`An Undocumented ...'ಪುಸ್ತಕದ ಮುನ್ನುಡಿಯಲ್ಲಿ ಗೋಪಾಲಕೃಷ್ಣ ಗಾಂಧಿಯವರು, 'ಬರೀ ಚುನಾವಣೆ ರಾಜಕೀಯದಲ್ಲಿ ಮಾತ್ರವಲ್ಲ ಈ ದೇಶ ಶ್ರೇಷ್ಠ ಪ್ರಜಾತಂತ್ರವಾಗಬೇಕು ಎಂದು ಬಯಸುವ ಎಲ್ಲರೂ ಓದಬೇಕಾದ ಪುಸ್ತಕವಿದು' ಎಂದು ಶಿಫಾರಸು ಮಾಡಿದ್ದಾರೆ. ಅವರ ಮಾತು ಅಕ್ಷರಶಃ ನಿಜ ಮಾಡುವಂಥ ಪುಸ್ತಕವನ್ನು ಖುರೇಷಿ ಬರೆದಿದ್ದಾರೆ.

**4-5-2014**

# ನಮ್ಮ ಶಾಸಕರಿಗೆ

# ಒಂದಿಷ್ಟಾದರೂ ಲಜ್ಜೆ ಬೇಡವೇ?

ಪ್ರತಿ ಐದು ವರ್ಷಕ್ಕೊಮ್ಮೆ ನಮ್ಮ ಜನಪ್ರತಿನಿಧಿಗಳು ಹೀಗೆ ಮಾಡುತ್ತಾರೆ. ಯಾರಿಗೂ ಹೇಳದೇ ಕೇಳದೆ ತಮ್ಮ ಸಂಬಳವನ್ನು ತಾವೇ ಹೆಚ್ಚು ಮಾಡಿಕೊಳ್ಳುತ್ತಾರೆ. ಅದಕ್ಕೆ ಒಂದು ಲೆಕ್ಕ, ವಿಧಾನ ಮುಂತಾಗಿ ಏನಾದರೂ ಕ್ರಮ ಇದೆಯೇ ಎಂದು ಗೊತ್ತಾಗುವುದಿಲ್ಲ. ಅದನ್ನಾದರೂ ಎಲ್ಲರಿಗೂ ಮೊದಲೇ ಗೊತ್ತಾಗುವಂತೆ ಮಾಡುತ್ತಾರೆಯೇ, ಅದೂ ಇಲ್ಲ. ಅಧಿವೇಶನ ಮುಗಿಯುವ ದಿನ ಕದ್ದೂ ಮುಚ್ಚಿ ವೇತನಶ್ರೇಣಿ ಹೆಚ್ಚಳದ ಮಸೂದೆ ಮಂಡಿಸುತ್ತಾರೆ. ಎಲ್ಲರೂ ಒಕ್ಕೊರಲ ಧ್ವನಿಮತದಿಂದ ಅದನ್ನು ಪಾಸು ಮಾಡುತ್ತಾರೆ. ಜನರ ಕಣ್ಣಲ್ಲಿ ಮಣ್ಣು ಹಾಕುವುದಕ್ಕಾದರೂ ಒಬ್ಬರೂ ಅದರ ವಿರುದ್ಧ ಮಾತನಾಡುವುದಿಲ್ಲ. ಕದ್ದು ಮುಚ್ಚಿ ಮಸೂದೆ ಮಂಡಿಸಿದ ಹಾಗೆಯೇ ಗಪ್ ಚುಪ್ ಆಗಿ ಅದನ್ನು ಅಂಗೀಕರಿಸಿಯೂ ಬಿಡುತ್ತಾರೆ. ತಮಗೆ ತಾವೇ ಹೀಗೆ ಸಂಬಳ ಹೆಚ್ಚು ಮಾಡಿಕೊಳ್ಳುವುದು ಎಲ್ಲಿಯಾದರೂ ಉಂಟೇ? ಸರ್ಕಾರದ ಸಿಬ್ಬಂದಿಗಾದರೆ ವೇತನ ಆಯೋಗ ಎಂದು ನೇಮಕ ಆಗುತ್ತದೆ. ಅದು ಐದಾರು ವರ್ಷ ವಿಚಾರಣೆ ಮಾಡುತ್ತದೆ, ಕಲಾಪ ನಡೆಸುತ್ತದೆ. ಆಮೇಲೆ ತನ್ನ ಶಿಫಾರಸು ಕೊಡುತ್ತದೆ. ನಂತರ ಅದು ಹಣಕಾಸು ಇಲಾಖೆಗೆ ಹೋಗುತ್ತದೆ. ಅಲ್ಲಿ ಅಳೆದು ಸುರಿದು ಅದನ್ನು ಜಾರಿಮಾಡಲು ಒಪ್ಪುತ್ತಾರೆ. ಶಾಸಕರ ಮತ್ತು ಸಂಸದರ ವೇತನ ಶ್ರೇಣಿ ಹೆಚ್ಚಳಕ್ಕೆ ಇಂಥ ಯಾವ ಕ್ರಮವೂ ಪಾಲನೆ ಆಗುವುದಿಲ್ಲ. ಹಾಗೆಂದು ಅವರೆಲ್ಲ ಬಡವರೇ? ಕೇವಲ ಸರ್ಕಾರ ಕೊಡುವ ಸಂಬಳದ ಮೇಲೆ ಅವರು ಅವಲಂಬಿತರೇ? ಅವರಿಗೆ ಬೇರೆ ಯಾವ ದಂಧೆಗಳೂ (ಉತ್ತರ ಕರ್ನಾಟಕದಲ್ಲಿ ದಂಧೆ ಎಂದರೆ ವ್ಯಾಪಾರ ವಹಿವಾಟು ಎಂದು ಅರ್ಥ) ಇಲ್ಲವೇ? ಇಲ್ಲ ಎಂದು ಯಾರು ಹೇಳುತ್ತಾರೆ?

ಈ ಸಾರಿಯ ವಿಧಾನಸಭೆಗೆ ಆಯ್ಕೆಯಾಗಿರುವ ಕಾಂಗ್ರೆಸ್ಸಿನ 123 ಶಾಸಕರ ಪೈಕಿ 112 ಮಂದಿ ಕೋಟ್ಯಧಿಪತಿಗಳು. ಅವರೇ ಘೋಷಿಸಿಕೊಂಡ ಹಾಗೆ ಅವರ ಸರಾಸರಿ ಆದಾಯ 31 ಕೋಟಿ ರೂಪಾಯಿ, ಬಿಜೆಪಿಯ 40 ಮಂದಿ ಶಾಸಕರ ಸರಾಸರಿ ಆದಾಯ 37 ಕೋಟಿ

ರೂಪಾಯಿಯಾದರೆ ಜೆ.ಡಿ (ಎಸ್)ನವರದು 36 ಕೋಟಿ ರೂಪಾಯಿ. ಇಷ್ಟು ದೊಡ್ಡ ವಾರ್ಷಿಕ ಆದಾಯ ಇರುವ ವ್ಯಕ್ತಿಗೆ ಸರ್ಕಾರ ಕೊಡುವ ಸಂಬಳ ಅಗತ್ಯವೇ? ಉಚಿತವಾಗಿ ಕೊಡುವುದಾದರೆ ಯಾರು ಬೇಡ ಎನ್ನುತ್ತಾರೆ?

ಎಲ್ಲ ಶಾಸಕರಿಗೂ ಒಂದಲ್ಲ ಒಂದು ದಂಧೆ ಇದೆ ಎನ್ನುವುದಕ್ಕೆ ಮತ್ತು ಅದು ಐದು ವರ್ಷಕ್ಕೆ ಒಮ್ಮೆ ವೇಗವಾಗಿ ಬೆಳೆಯುತ್ತಿದೆ ಎನ್ನುವುದಕ್ಕೆ ಕಳೆದ ವಿಧಾನಸಭೆಯಲ್ಲಿ ಇದ್ದ 92 ಮಂದಿ ಈ ವಿಧಾನಸಭೆಗೂ ಪುನರಾಯ್ಕೆಯಾಗಿದ್ದಾರೆ. 2008ರಲ್ಲಿ ಆಯ್ಕೆಯಾಗಿದ್ದ ಇವರ ವಾರ್ಷಿಕ ಸರಾಸರಿ ಆದಾಯ 17.53 ಕೋಟಿ ರೂಪಾಯಿ ಇದುದ್ದು 2013ರ ಚುನಾವಣೆಗೆ ಅವರು ಸ್ಪರ್ಧಿಸುವಾಗ 30.15 ಕೋಟಿ ರೂಪಾಯಿಗೆ ಏರಿತ್ತು. ಇದು ಶೇಕಡ 72ರಷ್ಟು ಏರಿಕೆ, ಅಂದರೆ ಅವರು ಎಲ್ಲರೂ ಒಳ್ಳೆಯ ಮತ್ತು ಲಾಭ ತರುವ ದಂಧೆಯಲ್ಲಿಯೇ ಇದ್ದಾರೆ ಎಂದು ಅರ್ಥ ಬರುತ್ತದೆ.

ಯಾವುದೇ ಒಂದು ಕೆಲಸಕ್ಕೆ ವೇತನ ಇರಬೇಕು ನಿಜ. ಆದರೆ, ನಮ್ಮ ಶಾಸಕರಿಗೆ ನಿರ್ದಿಷ್ಟವಾದ ಯಾವ ಕೆಲಸ ಇದೆ? ಅವರು ಎಲ್ಲರೂ ಅಧಿವೇಶನದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆಯೇ? ತಮ್ಮ ತಮ್ಮ ಕ್ಷೇತ್ರಗಳ ಅಭಿವೃದ್ಧಿ ಕೆಲಸವನ್ನು ಸರಿಯಾಗಿ ನಿಭಾಯಿಸುತ್ತಾರೆಯೇ? ಶಾಸನಸಭೆಗಳಲ್ಲಿ ಮಸೂದೆಗಳನ್ನು ಪಾಸು ಮಾಡುವಾಗ ಗಮನವಿಟ್ಟು ಮತ್ತು ಅಭ್ಯಾಸ ಮಾಡಿಕೊಂಡು ಬಂದು ಚರ್ಚೆಯಲ್ಲಿ ಭಾಗವಹಿಸುತ್ತಾರೆಯೇ? ಮಾತೆತ್ತಿದರೆ ಧರಣಿ, ದುಂಡಾವರ್ತನೆ ಮಾಡುವ ಶಾಸಕರಿಗೆ ಏನು ಶಿಕ್ಷೆಯಿದೆ? ಅಥವಾ ಸುಮ್ಮನೆ ಅಧಿವೇಶನಕ್ಕೆ ಬಂದು ಬಾಯಿಯನ್ನೇ ತೆಗೆಯದೇ ಎದ್ದು ಹೋಗುವ ಶಾಸಕರ ವಿರುದ್ಧ ಏನಾದರೂ ಕ್ರಮ ತೆಗೆದುಕೊಂಡ ನಿದರ್ಶನ ಇದೆಯೇ? ಮಾತನಾಡಿದರೂ ಸಂಬಳ ಬರುತ್ತದೆ. ಮಾತನಾಡದೇ ಇದ್ದರೂ ಬರುತ್ತದೆ. ಕೆಲಸ ಮಾಡಿದರೂ ಬರುತ್ತದೆ ಇಲ್ಲದಿದ್ದರೂ ಬರುತ್ತದೆ ಎಂದರೆ ಏನರ್ಥ? ಶಾಸಕರು ತಮ್ಮ ಕೆಲಸವನ್ನು ಒರೆಗೆ ಹಚ್ಚಲು ಒಂದು ವ್ಯವಸ್ಥೆಯನ್ನು ಏರ್ಪಾಟು ಮಾಡಿಕೊಂಡಿಲ್ಲ. ಅವರು ಯಾರಿಗೆ ಉತ್ತರದಾಯಿ ಎಂದೂ ನಮಗೆ ತಿಳಿಯದು. ಹೋಗಲಿ, ವೇತನ ಹೆಚ್ಚಳಕ್ಕೆ ಒಂದು ಮಾನದಂಡವಾದರೂ ಇದೆಯೇ? ಎಲ್ಲಿಯಾದರೂ ಯಾರ ಸಂಬಳವಾದರೂ ದುಪ್ಪಟ್ಟು ಹೆಚ್ಚಳವಾದ ಅಥವಾ ಹೆಚ್ಚಿಸಿಕೊಂಡ ಉದಾಹರಣೆ ಇದೆಯೇ? ಬರೀ ವೇತನ ಮಾತ್ರ ಹೆಚ್ಚಳ ಆಗಿದೆಯೇ ಎಂದರೆ ಅದರ ಜತೆಗೆ ಕುಳಿತುಕೊಳ್ಳಲು, ನಿಂತುಕೊಳ್ಳಲು, ಮಲಗಲು (ವಾಸ್ತವ್ಯ) ತೆಗೆದುಕೊಳ್ಳುವ ಭತ್ಯೆಯನ್ನೂ ಹೆಚ್ಚು ಮಾಡಿಕೊಂಡಿದ್ದಾರೆ. ಮನೆ ಬಾಡಿಗೆ, ಮನೆ ನಿರ್ವಹಣೆ, ಹೊರ ರಾಜ್ಯ ಪ್ರಯಾಣ, ಒಳ ರಾಜ್ಯ ಪ್ರಯಾಣ, ಸ್ಥಳೀಯ ಸಾರಿಗೆ ಭತ್ಯೆ, ಕ್ಷೇತ್ರ ಪ್ರಯಾಣ ಭತ್ಯೆ, ಚುನಾವಣೆ ಕ್ಷೇತ್ರ ಭತ್ಯೆ, ಅಂಚೆ ವೆಚ್ಚ, ದೂರವಾಣಿ, ಕಚೇರಿ ನಿರ್ವಹಣೆ, ಆಪ್ತ ಸಿಬ್ಬಂದಿ ಪಗಾರ, ಹೊಯ್ ನಯ್, ಒಂದೇ ಎರಡೇ, ಎಲ್ಲದಕ್ಕೂ ಪ್ರತ್ಯೇಕ ಭತ್ಯೆಗಳು!

ಐದು ವರ್ಷಗಳ ಹಿಂದೆ ಸಂಸದರೂ ಹೀಗೆಯೇ ಹೇಳದೆ ಕೇಳದೆ ತಮ್ಮ ವೇತನ ಹೆಚ್ಚು ಮಾಡಿಕೊಂಡಿದ್ದರು. ನಮ್ಮ ಶಾಸಕರು ದುಪ್ಪಟ್ಟು ಹೆಚ್ಚು ಮಾಡಿಕೊಂಡರೆ ಅವರು ಮೊದಲೇ ಮೂರುಪಟ್ಟು ಹೆಚ್ಚಳ ಮಾಡಿಕೊಂಡಿದ್ದರು!

2004ರ ಲೋಕಸಭೆ ಚುನಾವಣೆಯಲ್ಲಿ ಗೆದ್ದು 2009ರ ಚುನಾವಣೆಯಲ್ಲಿ ಮತ್ತೆ ಕಣಕ್ಕೆ ಇಳಿದ ಸಂಸದರ ಆದಾಯ ಮೂನ್ನೂರು ಪಟ್ಟು ಹೆಚ್ಚಳವಾಗಿತ್ತು. ಆದರೂ ಅವರು ತಮ್ಮ ವೇತನವನ್ನು ಹೆಚ್ಚು ಮಾಡಿಕೊಂಡರು. ಅದು ದೇಶದ ತಲಾವಾರು ಆದಾಯಕ್ಕಿಂತ ಶೇಕಡ 68ರಷ್ಟು ಹೆಚ್ಚು. ಜತೆಗೆ ಸಂಸದರು ರೈಲಿನ ಪ್ರಥಮ ದರ್ಜೆ ಬೋಗಿಯಲ್ಲಿ ಎಷ್ಟು ಸಾರಿ ಬೇಕಾದರೂ ಮುಗಸೆಟ್ಟೆ ಪ್ರಯಾಣ ಮಾಡಬಹುದು. ನವದೆಹಲಿಗೆ ವರ್ಷದಲ್ಲಿ 34 ಬಾರಿ ವಿಮಾನದಲ್ಲಿ ಮುಗಸೆಟ್ಟೆ ಹಾರಿ ಬರಬಹುದು. ಅವರಿಗೆ ದೆಹಲಿಯಲ್ಲಿ ವಾಸಕ್ಕೆ ಉಚಿತ ಮನೆ, ಟೆಲಿಫೋನು, ಪೆಟ್ರೋಲು, ಕರೆಂಟು, ನೀರು ಒಂದೇ ಎರಡೇ... ಅವರಿಗೆ ಸರ್ಕಾರ ನಮ್ಮ ತೆರಿಗೆ ಹಣದಲ್ಲಿ ಏನೆಲ್ಲ ಅನುಕೂಲ ಮಾಡಿಕೊಡುತ್ತದೆ. ಏಕೆಂದರೆ ಅವರನ್ನು ನಾವು ನಮ್ಮ ಕೆಲಸ ಮಾಡಲು ದೆಹಲಿಗೆ ಆರಿಸಿ ಕಳುಹಿಸಿ ತಪ್ಪು ಮಾಡಿದ್ದೇವಲ್ಲ?

ನಮ್ಮ ಸಂಸದರ ಮತ್ತು ಶಾಸಕರ ವಾರ್ಷಿಕ ಆದಾಯ ಎಷ್ಟು ಪಟ್ಟು ಹೆಚ್ಚಾಗಿದೆ ಎಂದು ನಾವು ನೋಡಿದೆವು. ಆದರೆ, ಅಮೆರಿಕೆಯ ಕಾಂಗ್ರೆಸ್ ಸದಸ್ಯರು ತಾವು ಪಡೆಯುವ ವೇತನಕ್ಕಿಂತ ಶೇಕಡ 15ಕ್ಕಿಂತ ಹೆಚ್ಚು ಹೊರಗಿನ ಆದಾಯವನ್ನು ಹೊಂದುವಂತೆ ಇಲ್ಲ. ಸ್ವಿಡರ್ಲೆಂಡಿನವರು ನಮ್ಮ ದೇಶದ ಕಾಳಸಂತೆಕೋರರ ಎಷ್ಟೇ ಕಪ್ಪು ಹಣ ಇಟ್ಟು ಕೊಂಡಿರಬಹುದು. ಆದರೆ, ಅಲ್ಲಿನ ಸಂಸದರು ಪ್ರಾಮಾಣಿಕರು. ಅವರಿಗೆ ಯಾವುದೇ ವೇತನ ಇಲ್ಲ. ಬೇರೆ ಎಲೆಲ್ಲಿಯೋ ಕೆಲಸ ಮಾಡುವ ಅವರಿಗೆ ಅಧಿವೇಶನ ನಡೆಯುವಾಗ ಅಧಿಕೃತ ರಜೆ ಮಾತ್ರ ಸಿಗುತ್ತದೆ. ನಮ್ಮ ಸಂಸದರಿಗೆ ಅದು ಯಾವುದೂ ಮಾದರಿ ಎಂದು ಅನಿಸುವುದಿಲ್ಲ. 2010ರಲ್ಲಿ ಲೋಕಸಭೆಯಲ್ಲಿ ವೇತನ ಹೆಚ್ಚಳ ಮಸೂದೆ ಅಂಗೀಕಾರ ಆಗುವಾಗ ಸಮಾಜವಾದಿಗಳಾದ ಲಾಲೂ ಪ್ರಸಾದ ಮತ್ತು ಮುಲಾಯಂ ಅವರು ಕನಿಷ್ಠ 500 ಪಟ್ಟು ವೇತನ ಹೆಚ್ಚಳ ಆಗಬೇಕು ಎಂದು ಕೇಳಿದ್ದರು. ಭಾರತೀಯ ಆಡಳಿತ ಸೇವೆಯ ಸಿಬ್ಬಂದಿ ಪಡೆಯುವ 80,000 ರೂಪಾಯಿ ವೇತನಕ್ಕಿಂತ ತಮ್ಮ ವೇತನ ಕನಿಷ್ಠ ಒಂದು ರೂಪಾಯಿಯಾದರೂ ಹೆಚ್ಚು ಇರಬೇಕು ಎಂದೂ ಅವರು ಆಗ್ರಹಿಸಿದ್ದರು. ಸರ್ಕಾರಿ ನೌಕರರಿಗೆ ಕನಿಷ್ಠ 30 ವರ್ಷ ಕೆಲಸ ಮಾಡಿದ ನಂತರ ಪಿಂಚಣಿ ಸಿಗುತ್ತದೆ. ನಮ್ಮ ಶಾಸಕರು ಮತ್ತು ಸಂಸದರು ಹಾಗಲ್ಲ. ಅವರು ಗರಿಷ್ಠ ಐದು ವರ್ಷ ಮಾಡಿದ ಕೆಲಸಕ್ಕೆ ಪಿಂಚಣಿ ಸಿಗಬೇಕು. ಈ ಸಾರಿ ಕರ್ನಾಟಕದ ಮಾಜಿ ಶಾಸಕರಿಗೆ ದೊರೆತ ಪಿಂಚಣಿಯ ಮೊತ್ತ  40,000.ರೂಪಾಯಿ

“ಹೀಗೆ ನಾವು ನಾವೇ ವೇತನ ಹೆಚ್ಚಳ ಮಾಡಿಕೊಳ್ಳುವುದು ನಮಗೆ ಭೂಷಣ ಅನಿಸುವುದಿಲ್ಲ' ಎಂದು ವಿಧಾನಸಭೆಯಲ್ಲಿ ಒಬ್ಬರನ್ನು ಬಿಟ್ಟು ಯಾರೂ ಹೇಳಲಿಲ್ಲ. 'ದೇಶ ಸೇವೆಗೆ ಕಟಿಬದ್ಧವಾದ ಪಕ್ಷ' ಎಂದು ತಮ್ಮ ಪಕ್ಷವನ್ನು ತಾವೇ ಕರೆದುಕೊಳ್ಳುವ ಬಿಜೆಪಿಯವರು ಮೇಕೆ ನುಂಗಿದ ಹೆಬ್ಬಾವಿನ ಹಾಗೆ ಬೇರೆ ಎತ್ತಲೋ ನೋಡುತ್ತ ಸುಮ್ಮನೆ ಕುಳಿತು ಬಿಟ್ಟಿದ್ದರು. ಸರ್ವೋದಯ ಪಕ್ಷದಿಂದ ಆರಿಸಿ ಬಂದಿರುವ, ರೈತ ನಾಯಕರಾಗಿರುವ ಕೆ.ಎಸ್.ಪುಟ್ಟಣ್ಣಯ್ಯನವರಾದರೂ ಬಾಯಿ ಬಿಡುತ್ತಾರೆ ಎಂದುಕೊಂಡರೆ ಅವರೂ ಬಿಜೆಪಿಯವರ ಹಾಗೆಯೇ

'ಈ ಹೆಚ್ಚಳ ಅನೈತಿಕ. ನನಗೆ ಬೇಡ' ಎಂದು ಅವರು ಅಂದಿದ್ದರೆ ಅವರ ಪಕ್ಷದ ಅಧ್ಯಕ್ಷ ದೇವನೂರ ಮಹದೇವ ಅವರಿಗೆ ಒಂದಿಷ್ಟು ಸಮಾಧಾನ ಆಗುತ್ತಿತ್ತೋ ಏನೋ?

ಒಂದು ಕಾಲ ಇತ್ತು : ಆಗಿನ್ನೂ ಸ್ವಾತಂತ್ರ್ಯ ಬಂದು ಆರೇಳು ವರ್ಷ ಅಷ್ಟೇ ಆಗಿತ್ತು. ಆಗಿನ ಪ್ರಧಾನಿ ನೆಹರೂ 'ದುಂದುಕೋರ' ಎಂದು ವಿರೋಧ ಪಕ್ಷದಲ್ಲಿ ಇದ್ದ ಸಮಾಜವಾದಿ ರಾಮ ಮನೋಹರ ಲೋಹಿಯಾ ಅವರಿಗೆ ಅನಿಸತೊಡಗಿತು. ಅವರು ನೆಹರೂ ಅವರ ಖರ್ಚು ವೆಚ್ಚಗಳನ್ನು ಪ್ರಶ್ನಿಸತೊಡಗಿದರು. ಸಂಸದರ ವೇತನ ಮತ್ತು ಭತ್ಯೆಗಳ ರೂಪದಲ್ಲಿನ ದ್ವಿಮುಖ ಲಾಭದ ಬಗೆಗೆ ಮಾತನಾಡತೊಡಗಿದರು. ಇದು ಸಾರ್ವಜನಿಕ ಹಣವನ್ನು 'ಭೋಗಿಸುವುದು' ಎಂದು ದುಃಖಿಸಿದರು. ಒಂದು ಕಡೆ ಹವಾನಿಯಂತ್ರಣದ ವಿಲಾಸ ಇನ್ನೊಂದು ಕಡೆ ಎಂಜಲೆಲೆಗಳು ಹಾಗೂ ಗಟಾರದ ಗಬ್ಬು ವಾಸನೆಯುಳ್ಳ ಜಗತ್ತು ನಮ್ಮದು ಎಂದು ವೈಭೋಗ ಮತ್ತು ಬಡತನದ ನಡುವಿನ ಅಂತರವನ್ನು ಎತ್ತಿ ತೋರಿಸಿದರು. ನಮ್ಮ ಪ್ರಧಾನಿ ಒಂದು ದಿನಕ್ಕೆ 25,000 ರೂಪಾಯಿ ಖರ್ಚು ಮಾಡುತ್ತಿದ್ದಾರೆ ಎಂದು ಅವರು ಆಗ ಹೇಳಿದ ಮಾತು ಈಗಲೂ ಒಂದು ಅದ್ಭುತ ವಾಗ್ವಾದವಾಗಿ ಉಳಿದುಕೊಂಡಿದೆ. ಆದರೆ, ಈಗ ಇಂಥ ಪ್ರಶ್ನೆಗಳನ್ನು ಎತ್ತುವವರು ಯಾರು ಇದ್ದಾರೆ? ಲೋಹಿಯಾವಾದಿಗಳು ಎನ್ನುವವರು ಈಗ ಎಲ್ಲಿ ಇದ್ದಾರೆ? ಅವರು ಆಗಲೇ ಕಾಂಗ್ರೆಸ್ಸಿನಲ್ಲಿ ಲೀನವಾಗಿ ದಶಕಗಳೇ ಕಳೆದು ಹೋಗಿವೆ, ಅದು ನಿರಂತರವಾಗಿ ಮುಂದುವರಿಯುತ್ತಲೇ ಇದೆ. ಕಾಂಗ್ರೆಸ್ಸಿನಿಂದ ಹೊರಗೆ ಇರುವ ಲಾಲೂ ಮತ್ತು ಮುಲಾಯಂ ಅವರಂಥ ಸಮಾಜವಾದಿಗಳು ನಕಲಿಶಾಮರಂತೆ ಕಾಣಿಸುತ್ತಾರೆ. ಹಾಗಾದರೆ ನಮ್ಮ ಶಾಸಕರಿಗೆ ಒಂದಿಷ್ಟು ಲಜ್ಜೆ ಬರುವಂತೆ ಮಾಡುವವರು ಯಾರು?

ಅವರನ್ನು ಹುಡುಕಿಕೊಂಡು ನಾವು ಎಲ್ಲಿಯೂ ಹೋಗಬೇಕಿಲ್ಲ. ಪಶ್ಚಿಮ ಬಂಗಾಲದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಎಷ್ಟೇ ತಲೆಕೆಟ್ಟವರಂತೆ ವರ್ತಿಸುತ್ತ ಇರಬಹುದು. ಆದರೆ, ಅವರ ತಿಂಗಳ ಸಂಬಳ ಈಗಲೂ ಎಂಟು ಸಾವಿರ ರೂಪಾಯಿ ಮಾತ್ರ. ನಮ್ಮ ಮುಖ್ಯಮಂತ್ರಿಗಳ ಸಂಬಳ 50,000 ರೂಪಾಯಿ. ನಮ್ಮ ಮುಖ್ಯಮಂತ್ರಿಗಳ ಇತರ ಭತ್ಯೆಗಳಿಗೆ ಯಾವ ಮಿತಿಯೂ ಇಲ್ಲ. ಪಶ್ಚಿಮ ಬಂಗಾಲದ ಶಾಸಕರ ವೇತನ 12,000 ರೂಪಾಯಿ ಮಾತ್ರ. ಇಲ್ಲಿನ ಶಾಸಕರ ವೇತನ 25,000 ರೂಪಾಯಿ. ಅಲ್ಲಿನ ಶಾಸಕರೂ ನಮ್ಮಲ್ಲಿನ ಶಾಸಕರ ಹಾಗೆಯೇ ಮನುಷ್ಯರು. 'ನೋಡಿ, ಎಲ್ಲ ಕಡೆ ಶಾಸಕರ ವೇತನ ಎಷ್ಟು ಹೆಚ್ಚಳ ಆಗುತ್ತಿದೆ. ನಮಗೂ ಮಾಡಿ' ಎಂದು ಅವರು ಕೇಳಿದರು. ಅಲ್ಲಿನ ಹಣಕಾಸು ಸಚಿವ ಅಸೀಂ ದಾಸಗುಪ್ತ, 'ಸಾಧ್ಯವೇ ಇಲ್ಲ' ಎಂದರು. ಅವರ ಲಜ್ಜೆಯನ್ನು ನಮ್ಮವರಲ್ಲಿ ಮೂಡಿಸುವುದು ಹೇಗೆ?

05.04.2015

# ಲಾಟರಿ ಹೊಡೆಯುವುದು ಎಂದರೆ

# ಇದೇ ಇರಬೇಕು!

ಒಬ್ಬ ಸಂಸದ ಏನು ಮಾಡಬೇಕು? ಹತ್ತು ಹದಿನೈದು ಲಕ್ಷ ಮತದಾರರು ಇರುವ ಒಂದು ದೊಡ್ಡ ಕ್ಷೇತ್ರದ ಅಗತ್ಯಗಳನ್ನು ನೋಡಿಕೊಳ್ಳುವುದು ಅವರ ಕೆಲಸವೇ ಅಥವಾ ಪಂಚಾಯ್ತಿಗಳು ಮತ್ತು ಪೌರಸಂಸ್ಥೆಗಳು ಮಾಡಬೇಕಾದ ಕೆಲಸವನ್ನು ಅವರೂ ಮಾಡಬೇಕೇ? ಈ ಪ್ರಶ್ನೆ ಹೊಸದಲ್ಲ, ಆದರೆ, ಈಗ ಅದು ನಮ್ಮ ಮುಂದೆ ಮತ್ತೆ ಎದ್ದು ನಿಂತಿದೆ. ಸಂಸದರಿಗೆ ಪ್ರತಿವರ್ಷ ನೀಡುವ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯನ್ನು ಈಗ ಐದು ಕೋಟಿ ರೂಪಾಯಿಗಳಿಂದ ಒಂದೇ ಸಾರಿ 25 ಕೋಟಿ ರೂಪಾಯಿಗಳಿಗೆ ಏರಿಸಲು ಕೇಂದ್ರ ಸರ್ಕಾರ ಚಿಂತನೆ ನಡೆಸಿದೆ. ಅದಕ್ಕೆ ಬೇಕಾದಷ್ಟು ಲಾಬಿಯನ್ನು ಸಂಸದರೂ ಮಾಡಿದ್ದಾರೆ. ಎರಡು ಕೋಟಿ ರೂಪಾಯಿ ಇದ್ದ ಅನುದಾನವನ್ನು ಐದು ಕೋಟಿ ರೂಪಾಯಿಗಳಿಗೆ ಏರಿಸಿ ಇನ್ನೂ ಈಗಷ್ಟೇ ಮೂರು ವರ್ಷಗಳಾಗಿವೆ. ಇದನ್ನು ಹತ್ತು ಕೋಟಿ ರೂಪಾಯಿಗಳಿಗೆ ಏರಿಸಬೇಕು ಎಂಬ ಬೇಡಿಕೆಯನ್ನು ಯುಪಿಎ ಸರ್ಕಾರ ತಿರಸ್ಕರಿಸಿತ್ತು.

ಪಿ.ವಿ.ನರಸಿಂಹರಾಯರು ಪ್ರಧಾನಿ ಆಗಿದ್ದಾಗ 93-94ನೇ ಇಸವಿಯಲ್ಲಿ ಆರಂಭವಾದ ಈ ಯೋಜನೆಯಡಿ ಆಗಿನ ಮೊತ್ತ ಕೇವಲ ಐದು ಲಕ್ಷ ರೂಪಾಯಿ ಆಗಿತ್ತು. ಇದನ್ನು ಸೋಜಿಗ ಎನ್ನಬೇಕೋ ಅಥವಾ ವಿಪರ್ಯಾಸ ಎನ್ನಬೇಕೋ ಗೊತ್ತಿಲ್ಲ. ನರಸಿಂಹರಾಯರು ಅದೇ ವರ್ಷ, ಪಂಚಾಯ್ತಿ ಮತ್ತು ಪೌರಸಂಸ್ಥೆಗಳಿಗೆ ಹೆಚ್ಚಿನ ಅಧಿಕಾರ ಕೊಡುವ ಸಂವಿಧಾನದ 73 ಮತ್ತು 74ನೇ ಪರಿಚ್ಛೇದಗಳಿಗೆ ತಿದ್ದುಪಡಿ ತಂದು ಕೇವಲ ಎರಡು ವಾರಗಳಲ್ಲಿ ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿ (ಎಂಪಿಲ್ಯಾಡ್) ಯೋಜನೆಯನ್ನೂ ಅನುಷ್ಠಾನಕ್ಕೆ ತಂದರು. ಅಂದರೆ ತಳಮಟ್ಟದಲ್ಲಿ ಪಂಚಾಯ್ತಿಗಳು ಮತ್ತು ಪೌರಸಂಸ್ಥೆಗಳು ಮಾಡುವ ಕೆಲಸವನ್ನೇ ಸಂಸದರು ಎಂಪಿಲ್ಯಾಡ್ ಅಡಿಯಲ್ಲಿ ಮಾಡುವಂತೆ ಆಯಿತು. ನರಸಿಂಹರಾಯರು ಈ ಯೋಜನೆ ಜಾರಿಗೆ ತರಲು ಒಂದು ಕಾರಣವಿತ್ತು : ಸಂವಿಧಾನದ ಪರಿಚ್ಛೇದಗಳಿಗೆ ಒಪ್ಪಿಗೆ ಕೊಡಬೇಕಿದ್ದ ಸಂಸದರು ಒಬ್ಬ ಪಂಚಾಯ್ತಿ ಅಥವಾ ಪುರಸಭೆ ಸದಸ್ಯರಿಗೆ ಇರುವ ಹಣಕಾಸು ಹಂಚಿಕೆ ಅಧಿಕಾರವೂ ನಮಗೆ ಇಲ್ಲ ಎಂದು ಗೋಳಾಡಿದ್ದರು.

ದೆಹಲಿಯಲ್ಲಿನ ಸಂಸತ್ತಿಗೆ ಆಯ್ಕೆಯಾಗಿ ಹೋಗುವ ಸಂಸದರು ಕೇವಲ ತಮ್ಮ ಕ್ಷೇತ್ರಕ್ಕೆ ಅಲ್ಲ, ಇಡೀ ರಾಜ್ಯಕ್ಕೆ, ದೇಶಕ್ಕೆ ಅನ್ವಯವಾಗುವಂಥ ಯೋಜನೆಗಳನ್ನು ರೂಪಿಸುವ ಪ್ರಭಾವಿ ನೀತಿ ನಿರೂಪಕರು, ಶಾಸನಕರ್ತರು ತಾವು ಎಂಬುದನ್ನು ಮರೆತಿದ್ದರು. ಈಗ ಅಂಥ ತಿಳಿವಳಿಕೆ ಇರುವ ಸಂಸದರು ಯಾರಾದರೂ ಇದ್ದಾರೆಯೇ ಎಂದು ದೀಪ ಹಚ್ಚಿಕೊಂಡು ಹುಡುಕಬೇಕಾಗುತ್ತದೆ. ಬಹುತೇಕ ಎಲ್ಲರೂ ಚಿಲ್ಲರೆ ಕೆಲಸದಲ್ಲಿಯೇ ನಿರತರಾಗಿರುತ್ತಾರೆ.

ಸರ್ಕಾರಗಳು ಎಂಥ ಎಡವಟ್ಟು ಕೆಲಸ ಮಾಡುತ್ತವೆ ಎಂದರೆ ಈಗ ಹಳ್ಳಿಗಾಡಿನ ಸಮಸ್ಯೆಗಳನ್ನು ನಿವಾರಿಸಬೇಕಾದ ಪಂಚಾಯ್ತಿ ಮತ್ತು ಪೌರಸಂಸ್ಥೆಗಳು ಅನುದಾನ ಇಲ್ಲದೆ ಸೊರಗುತ್ತಿವೆ. ಆದರೆ, ಸಂಸದರಿಗೆ ಪ್ರತಿವರ್ಷ ನಿಗದಿಯಾದ ಮೊತ್ತ ನಿರಂತರವಾಗಿ ಹರಿದು ಬರುತ್ತದೆ. ವಾಸ್ತವವಾಗಿ ಸರ್ಕಾರ ಯಾರನ್ನು ಬಲಪಡಿಸಬೇಕಿತ್ತು? ಯಾರನ್ನು ಸಂತೋಷವಾಗಿ ಇಡಬೇಕಿತ್ತು? ಈಗ ಒಂದು ವೇಳೆ ಸಂಸದರ ನಿಧಿ 25 ಕೋಟಿ ರೂಪಾಯಿಗೆ ಏರಿದರೆ ಪಂಚಾಯ್ತಿಗಳು ಏಕೆ ಅನೇಕ ಪೌರಸಂಸ್ಥೆಗಳ ವಾರ್ಷಿಕ ಆದಾಯಕ್ಕಿಂತ ಒಬ್ಬ ಸಂಸದರಿಗೆ ಸಿಗುವ ಈ ಮೊತ್ತವೇ ಹೆಚ್ಚು ಆಗುತ್ತದೆ. ಹಾಗಿದ್ದರೆ ಸಂವಿಧಾನಕ್ಕೆ ತಿದ್ದುಪಡಿ ತರುವ ಅಗತ್ಯವಾದರೂ ಏನಿತ್ತು? ಎಂಪಿಲ್ಯಾಡ್ ಯೋಜನೆ ಆರಂಭವಾದಾಗಲೇ ಈ ಪ್ರಶ್ನೆ ಕೇಳಿಬಂದಿತ್ತು. ಇದನ್ನು ಸಂಸದರು ಹೊರತುಪಡಿಸಿ ಬೇರೆ ಯಾರಾದರೂ ಮೆಚ್ಚಿದ್ದೇ ಇಲ್ಲ. ಪ್ರಸಾರ ಭಾರತಿಯ ಈಗಿನ ಅಧ್ಯಕ್ಷ ಎ.ಸೂರ್ಯಪ್ರಕಾಶ್ ಅವರು Public money Private agendaಎಂಬ ಪುಸ್ತಕವನ್ನೇ ಬರೆದಿದ್ದರು. ಈ ಯೋಜನೆ ಭ್ರಷ್ಟಾಚಾರದ ಗಂಗೋತ್ರಿ ಎಂದು ಅವರೂ ಸೇರಿದಂತೆ ಮಾಧ್ಯಮದವರು, ಯೋಜಕರು, ಆಡಳಿತ ವಿಕೇಂದ್ರೀಕರಣ ಆಗಬೇಕು ಎನ್ನುವವರು, ಬಣ್ಣಿಸಿದ್ದರು. ಸಂಸದರು ಯೋಜನೆಯ ಮಾರ್ಗದರ್ಶಿ ಸೂತ್ರಗಳನ್ನು ಪಾಲಿಸದೇ ಬೇಕಾಬಿಟ್ಟಿಯಾಗಿ ಹಣವನ್ನು ಹಂಚಿಕೆ ಮಾಡುತ್ತಾರೆ, ತಮಗೆ ಬೇಕಾದ ಗುತ್ತಿಗೆದಾರರ ಮೂಲಕವೇ ಕೆಲಸ ಮಾಡಿಸುತ್ತಾರೆ, ಹಾಗೆ ಮಾಡಬಾರದು ಎಂಬ ನಿಯಮವಿದ್ದಾಗಲೂ, ಅದರಲ್ಲಿ ಶೇಕಡಾವಾರು ಲಂಚ ಕೀಳುತ್ತಾರೆ, ಕೆಲಸ ಮಾಡಿದ ಅಥವಾ ಮಾಡಿದ್ದೇನೆ ಎಂದು ದಾಖಲೆ ತಂದುಕೊಡುವ ಗುತ್ತಿಗೆದಾರರಿಗೆ ಹಣ ಬಿಡುಗಡೆ ಮಾಡುವಂತೆ ಜಿಲ್ಲಾಧಿಕಾರಿ ಮೇಲೆ ಒತ್ತಡ ಹೇರುತ್ತಾರೆ, ಈ ಯೋಜನೆಯಿಂದ ನಿಜವಾಗಿ ಏನು 'ಆಸ್ತಿ' ಸೃಷ್ಟಿಯಾಗಿದೆ ಎಂದು ನೋಡಲು ಹೋದರೆ ಅಲ್ಲಿ ಎಂಥದ್ದೂ ಇರುವುದಿಲ್ಲ' ಎಂದು ಎಲ್ಲರೂ ಆಕ್ಷೇಪಿಸಿದ್ದರು. ಅದೆಲ್ಲ ನಿಜ ಎಂದು ಯೋಜನಾ ಆಯೋಗ ಮತ್ತು ಮಹಾಲೇಖಪಾಲರಿಂದ ನಡೆದ ಅಧ್ಯಯನಗಳು ಕಂಡುಕೊಂಡಿದ್ದುವು. ಬಹುತೇಕ ಕಡೆಗಳಲ್ಲಿ ಸಂಸದರು ತಮ್ಮದೇ ಹಿತಾಸಕ್ತಿ ಇರುವ ಟ್ರಸ್ಟ್‌ಗಳು ಮತ್ತು ಸೊಸೈಟಿಗಳಲ್ಲಿ ಹಣ ತೊಡಗಿಸಿದ್ದರು. ಸಿಕ್ಕಿಂನಲ್ಲಿ ಒಬ್ಬ ಸಂಸದರ ಮನೆಯ ಆವರಣ ಗೋಡೆಯನ್ನು ಸಮುದ್ರ ಕೊರೆತ ತಡೆಯುವ ಗೋಡೆಗೆ ಖರ್ಚು ಮಾಡಿದ ಹಣದಲ್ಲಿ ನಿರ್ಮಿಸಲಾಗಿತ್ತು! ನಿಧಿಯನ್ನು ಬಿಡುಗಡೆ ಮಾಡಲು ಸಂಸದರು ಲಂಚ ತೆಗೆದುಕೊಳ್ಳುವುದನ್ನು ಮಾರುವೇಷದ ಕಾರ್ಯಾಚರಣೆಗಳು ಪತ್ತೆ ಮಾಡಿದ್ದುವು.

ಈ ಯೋಜನೆಯ ಅನುಷ್ಠಾನದಲ್ಲಿನ ಮುಖ್ಯ ತೊಡಕು ಏನಾಗಿತ್ತು ಎಂದರೆ ಇದರ ಅಡಿಯ ಕೈಗೆತ್ತಿಕೊಳ್ಳುವ ಯೋಜನೆಗಳ ಪ್ರಗತಿಯನ್ನು ಪರಿಶೀಲಿಸಲು ಜಿಲ್ಲಾ ಆಡಳಿತಕ್ಕೆ ವ್ಯವಧಾನವೇ ಇರಲಿಲ್ಲ. ಒಂದು ಅಧ್ಯಯನದ ಪ್ರಕಾರ 103 ಜಿಲ್ಲಾಧಿಕಾರಿಗಳು ಕೇವಲ ಶೇ 10ರಷ್ಟು ಕೆಲಸಗಳ ಕಾಮಗಾರಿ ನಡೆಯುವ ಸ್ಥಳಕ್ಕೆ ಖುದ್ದಾಗಿ ಹೋಗಿ ನೋಡಿದ್ದರು. ಅನೇಕ ಜಿಲ್ಲಾಧಿಕಾರಿಗಳಿಗೆ ವಿಡಿಯೊ ಸಂವಾದದ ಮೂಲಕ ಈ ಕೆಲಸಗಳ ಪ್ರಗತಿ ಪರಿಶೀಲಿಸಲು ಸಾಧ್ಯ ಎಂದು ತಿಳಿದಿರಲಿಲ್ಲ. 117 ಸಂಸದರ ಪೈಕಿ 84 ಮಂದಿ ಸಂಸದರಿಗೂ ಈ ಸಂಗತಿ ಗೊತ್ತಿರಲಿಲ್ಲ. ಉತ್ತರ ಪ್ರದೇಶದ ಮೊರದಾಬಾದ್ ಜಿಲ್ಲೆಗೆ ಒಬ್ಬರಲ್ಲ, ಇಬ್ಬರಲ್ಲ ಹತ್ತು ಮಂದಿ ಸಂಸದರು ತಮ್ಮ ನಿಧಿಯಿಂದ ಹಣ ಬಿಡುಗಡೆ ಮಾಡಿದ್ದರು.

ಎರಡನೇ ಆಡಳಿತ ಸುಧಾರಣಾ ಆಯೋಗ ಆಡಳಿತದಲ್ಲಿ ನೈತಿಕತೆ' ಕುರಿತ ತನ್ನ ವರದಿಯಲ್ಲಿ ಎಂಪಿಲ್ಯಾಡ್ ಯೋಜನೆ ಸಂವಿಧಾನ ವಿಂಗಡಿಸಿರುವ ಅಧಿಕಾರ ತತ್ವಕ್ಕೆ ವಿರುದ್ಧವಾದುದು ಎಂದು ಹೇಳಿತ್ತು ಮತ್ತು ಈ ಯೋಜನೆಯನ್ನು ರದ್ದುಪಡಿಸಬೇಕು ಎಂದು ಶಿಫಾರಸು ಮಾಡಿತ್ತು. ವೀರಪ್ಪ ಮೊಯಿಲಿ ಅವರು ಈ ಆಯೋಗದ ಮುಖ್ಯಸ್ಥರಾಗಿದ್ದರು. ಇಂಥ ಆಕ್ಷೇಪಗಳು, ಸಲಹೆಗಳು ಒಂದಾದ ಮೇಲೆ ಒಂದು ಬರುತ್ತಿರುವಾಗಲೇ ಹಲವರು ಇಡೀ ಯೋಜನೆಯ ಸಂವಿಧಾನಬದ್ಧತೆಯನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟಿನ ಮೊರೆ ಹೊಕ್ಕರು. 'ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಮತ್ತು ಸ್ಥಳೀಯ ಆಡಳಿತ ಸಂಸ್ಥೆಗಳಿಗೆ ವಿಂಗಡಿಸಿ, ಸಂವಿಧಾನ ನಿಗದಿ ಮಾಡಿರುವ ಜವಾಬ್ದಾರಿಯನ್ನು ಈ ಯೋಜನೆ ಉಲ್ಲಂಘಿಸುತ್ತದೆ; ಈ ಯೋಜನೆಯಡಿಯಲ್ಲಿ ಸಂಸದರು ನೇರವಾಗಿ ಕಾರ್ಯಾಂಗದ ಕೆಲಸ ಮಾಡುತ್ತಾರೆ ಮತ್ತು ಅವರು ಸ್ಥಳೀಯ ಸಂಸ್ಥೆಗಳು ಮಾಡಬೇಕಾದ ಕೆಲಸದಲ್ಲಿ ಹಸ್ತಕ್ಷೇಪ ಮಾಡಿದಂತೆ ಆಗುತ್ತದೆ' ಎಂದು ಎಲ್ಲರೂ ವಾದಿಸಿದ್ದರು. ಮತ್ತೆ ಅದೇ ಸೋಜಿಗ, ಸುಪ್ರೀಂ ಕೋರ್ಟು ಅರ್ಜಿದಾರರ ವಾದವನ್ನು ತಳ್ಳಿ ಹಾಕಿತು. 'ಇದು ಸಂವಿಧಾನದ ಆಶಯಕ್ಕೆ ವಿರುದ್ಧವಾದುದು ಅಲ್ಲ' ಎಂದಿತು.

ಸುಪ್ರೀಂ ಕೋರ್ಟು ಹಾಗೆ ಹೇಳಿದ ನಂತರವೂ ಬಿಹಾರದ ಮುಖ್ಯಮಂತ್ರಿ ನಿತಿಶ್‌ಕುಮಾರ್ ಅವರು ತಾವು ಎರಡನೇ ಸಾರಿ ಮುಖ್ಯಮಂತ್ರಿಯಾಗಿ ಜನಾದೇಶ ಪಡೆಯುತ್ತಿದ್ದಂತೆಯೇ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯನ್ನು (ಎಂಎಲ್‌ಎಲ್ಯಾಡ್) ರದ್ದು ಮಾಡಿದರು. 'ನಾವು ಪ್ರಾಮಾಣಿಕತೆಯ ಪಾಠವನ್ನು ಮೊದಲು ನಮ್ಮ ಮನೆಯಿಂದಲೇ ಆರಂಭಿಸಬೇಕು. ಈ ನಿಧಿ ಶಾಸಕರನ್ನು ಅಪ್ರಾಮಾಣಿಕಗೊಳಿಸುತ್ತದೆ' ಎಂದು ನಿತಿಶ್ ಹೇಳಿದ್ದರು. ಹಾಗೆ ನೋಡಿದರೆ 1984ರಷ್ಟು ಹಿಂದೆ ಈ ಯೋಜನೆಯನ್ನು ಬಿಹಾರದಲ್ಲಿ ಜಾರಿಗೆ ತರಲಾಗಿತ್ತು. ಉಳಿದ ಎಲ್ಲ ರಾಜ್ಯಗಳಲ್ಲಿ ಕೇಂದ್ರದಲ್ಲಿ ಅದು ಜಾರಿಗೆ ಬಂದ 93- 94ರ ನಂತರ ಅನುಷ್ಠಾನಕ್ಕೆ ಬಂದಿತ್ತು. ಸಂವಿಧಾನದ ಪರಾಮರ್ಶೆಗೆ 2002ರಲ್ಲಿ ರಚನೆಯಾಗಿದ್ದ ನಿವೃತ್ತ ಮುಖ್ಯ ನ್ಯಾಯಮೂರ್ತಿ ಎಂ.ಎನ್.ವೆಂಕಟಾಚಲಯ್ಯ ನೇತೃತ್ವದ ಸಮಿತಿ ಕೂಡ ಎಂಪಿಲ್ಯಾಡ್ ಯೋಜನೆಯ ರದ್ದತಿಯ ಪರವಾಗಿ ಇತ್ತು, ಏಕೆಂದರೆ, 'ಇದು ಸಂವಿಧಾನ ವಿಂಗಡಿಸಿರುವ ಹೊಣೆಗಾರಿಕೆಯನ್ನು ಉಲ್ಲಂಘಿಸುತ್ತದೆ' ಎಂದು ಅದು ಅಭಿಪ್ರಾಯಪಟ್ಟಿತ್ತು. ಆದರೆ, ಹಣ ಹಂಚುವ ಪಾಳೆಗಾರಿಕೆ ಅಧಿಕಾರವನ್ನು ಯಾರು

ಬಿಟ್ಟುಕೊಡುತ್ತಾರೆ? ಸಂಸದರು ಮತ್ತು ಶಾಸಕರು ಸಂತೋಷವಾಗಿ ಇರಲಿ ಎಂದು ಆಡಳಿತ ಮಾಡುವವರೂ ಬಯಸುತ್ತಾರೆ. ಅದು ನೈತಿಕವೇ, ಅನೈತಿಕವೇ, ಸಂವಿಧಾನದ ಅನುಸಾರವೇ ಅಥವಾ ಬಾಹಿರವೇ ಎಂದು ಯಾರು ವಿಚಾರ ಮಾಡುತ್ತಾರೆ? ಕನಿಷ್ಠ ಪಕ್ಷ ಯಾವ ಮೂಲದಿಂದ ಈ ಹಣ ಬಿಡುಗಡೆಯಾಗುತ್ತದೆ ಎಂಬ ಯೋಚನೆಯಾದರೂ ಸರ್ಕಾರಗಳಿಗೆ ಇರಬೇಕು. ಏಕೆಂದರೆ ಎಲ್ಲ ಹಣವೂ ಒಂದೇ ಬೊಕ್ಕಸದಿಂದ ಬರಬೇಕು. ಆ ಬೊಕ್ಕಸವನ್ನು ಒಂದು ಉದ್ದೇಶಕ್ಕೆ ಬರಿದು ಮಾಡಿ ಇನ್ನೊಂದು ಉದ್ದೇಶಕ್ಕೆ ಕೊಡುವುದರಲ್ಲಿ ಏನು ಅರ್ಥ ಇರುತ್ತದೆ? ಹಾಗೆ ಇಲ್ಲದೇ ಇದ್ದರೆ ಸ್ವಚ್ಛ ಭಾರತ ಅಭಿಯಾನಕ್ಕೆ ಸಂಸದರು ತಮ್ಮ ನಿಧಿಯಿಂದ ಹಣ ಬಿಡುಗಡೆ ಮಾಡಬೇಕು ಎಂದು ಪ್ರಧಾನಿ ಕೇಳುತ್ತಿರಲಿಲ್ಲ. ರೈಲ್ವೆ ಸಚಿವ ಸುರೇಶಪ್ರಭು ಬೆಂಗಳೂರಿನ ಸಂಸದರೊಬ್ಬರ ಉದಾಹರಣೆ ಕೊಟ್ಟು 'ರೈಲ್ವೆ ಕೆಲಸಗಳಿಗೆ ಹಣ ಬಿಡುಗಡೆ ಮಾಡಬೇಕು' ಎಂದು ಸಂಸದರನ್ನು ಯಾಚಿಸುತ್ತಿರಲಿಲ್ಲ. ಅಂದರೆ ಕೇಂದ್ರದ ಬೊಕ್ಕಸದಲ್ಲಿ ಹಣ ಇಲ್ಲ ಅಥವಾ ಕಡಿಮೆ ಇದೆ ಎಂದೇ ಅರ್ಥ ಅಲ್ಲವೇ? ಹೀಗೆ ಸಿಕ್ಕ ಸಿಕ್ಕವರು ಸಿಕ್ಕ ಸಿಕ್ಕ ಕೆಲಸಕ್ಕೆ ಹಣ ಕೇಳುತ್ತಿರುವುದರಿಂದಲೇ ಮಹಾರಾಷ್ಟ್ರದ ಸಂಸದೆ, ಶರದ್ ಪವಾರ್ ಮಗಳು ಸುಪ್ರಿಯಾ ಸುಳೆ, 'ಈ ಯೋಜನೆ ಏಕೆ ಬೇಕು, ಅದನ್ನು ರದ್ದು ಮಾಡುವುದೇ ಲೇಸು' ಎಂದು ಹೇಳಿದ್ದಾರೆ!

ಮತ್ತೆ ಸೋಜಿಗ ನೋಡಿ : ಪಂಚಾಯ್ತಿಯಿಂದ ಹಿಡಿದು ಕೇಂದ್ರ ಸರ್ಕಾರದವರೆಗೆ ಎಲ್ಲ ಕಾಮಗಾರಿಗಳ ಅನುಷ್ಠಾನಕ್ಕೂ ಒಂದು ಯೋಜನೆ ಎಂದು ಇರುತ್ತದೆ. ಅದಕ್ಕೆ ಇಂತಿಷ್ಟು ಎಂದು ಅನುದಾನವೂ ನಿಗದಿಯಾಗಿರುತ್ತದೆ. ಸಂಸದರ ಅಥವಾ ಶಾಸಕರ ಪ್ರದೇಶಾಭಿವೃದ್ಧಿ ನಿಧಿಯ ಬಳಕೆಗೆ ಯಾವ ಯೋಜನೆ ಇದೆ? ಅವರು ಯಾವ ಯೋಜನೆಗೂ ಒಳಪಡದ ಕೆಲಸಕ್ಕೆ ಹಣ ಬಿಡುಗಡೆ ಮಾಡುತ್ತಾರೆ ಎಂದು ನಾವು ಭಾವಿಸಬೇಕೇ? ಅದು ಹೌದಾದರೆ ನಾವು ಪಂಚಾಯ್ತಿ ಮಟ್ಟದಿಂದ ಕೇಂದ್ರದ ಮಟ್ಟದವರೆಗೆ ಎಂಥ ಯೋಜನೆ ರೂಪಿಸುತ್ತಿದ್ದೇವೆ? ಅವೆಲ್ಲ ಆದ್ಯತೆಯ ಕೆಲಸಗಳು ಅಲ್ಲವೇ? ಅವುಗಳನ್ನು ಮೀರಿದ, ಸಂಸದರಿಗೆ ಮಾತ್ರ ಕಾಣುವ ಕೆಲಸಗಳು ಇರುತ್ತವೆಯೇ?

ಕೇವಲ ಮತದಾರರನ್ನು ಓಲೈಸುವ ಉದ್ದೇಶದ, ಸಂಸದರ ಪ್ರದೇಶಾಭಿವೃದ್ಧಿ ನಿಧಿಯಂಥ ರಾಜಕೀಯವಾಗಿ ತಪ್ಪಾದ, ನೈತಿಕವಾಗಿ ಅನುಚಿತವಾದ, ಆಡಳಿತಾತ್ಮಕವಾಗಿ ನಿರ್ವಹಿಸಲು ಆಗದ ಯಾವುದಾದರೂ ಇನ್ನೊಂದು ಯೋಜನೆ ಇರುವುದು ನನಗೆ ಗೊತ್ತಿಲ್ಲ. ಅದನ್ನು ರದ್ದು ಮಾಡುವುದೇ ಲೇಸು. ಎಲ್ಲ ಸಂಸದರು ಭ್ರಷ್ಟರು ಎಂದು ನಾನು ಹೇಳಲಾರೆ. ಆದರೆ, ಯಾವೊಬ್ಬ ಸಂಸದರೂ ಭ್ರಷ್ಟರು ಎಂದು ಅನಿಸಿಕೊಳ್ಳಬಾರದು ಎಂಬುದು ನನ್ನ ಉದ್ದೇಶ' ಎಂದು ಲೋಕಸಭೆಯ ಮಾಜಿ ಸಭಾಧ್ಯಕ್ಷ ಸೋಮನಾಥ ಚಟರ್ಜಿ ಹೇಳಿದ್ದರು. ಈಗ ಕೇಂದ್ರ ಸರ್ಕಾರ ಈ ನಿಧಿಯನ್ನು ಒಂದೇ ಸಾರಿ ಐದು ಕೋಟಿ ರೂಪಾಯಿಗಳಿಂದ 25 ಕೋಟಿ ರೂಪಾಯಿಗೆ ಏರಿಸಲು ಹೊರಟಿದೆ. ಲಾಟರಿ ಹೊಡೆಯುವುದು ಎಂದರೆ ಇದೇ ಇರಬೇಕು! ಮತ್ತೆ ಇನ್ನೇನು ಹೇಳುವುದು?

# ಒಳ್ಳೆಯ ಮಾದರಿ ಹಾಕುವುದು

# ಅಸಾಧ್ಯವೇನೂ ಅಲ್ಲ

1978 -79ನೇ ಸಾಲು ಇರಬೇಕು. ಬೆಳಗಾವಿಯ ಸರ್ಕಿಟ್ ಹೌಸ್‌ನಲ್ಲಿ ಸರ್ಕಾರಿ ಕಾಲೇಜುಗಳ ಉಪನ್ಯಾಸಕರ ಹುದ್ದೆಗೆ ಸಂದರ್ಶನ ಇತ್ತು. ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ಸಂದರ್ಶನ ನಡೆಸುತ್ತಿತ್ತು. ನನಗಿಂತ ಮುಂಚೆ ಸಂದರ್ಶನಕ್ಕೆ ಹೋಗಿ ಬಂದ ಒಬ್ಬ ಅಭ್ಯರ್ಥಿ ಮುಖದಲ್ಲಿ ಒಂದಿಷ್ಟೂ ಕಳೆಯಿರಲಿಲ್ಲ. 'ಬೇಕಾಬಿಟ್ಟಿ ಪ್ರಶ್ನೆ ಕೇಳಿದರು. ಸಂದರ್ಶನ ಮಾಡುವವರ ಕೈಯಲ್ಲಿ ಪೆನ್ನು ಇರಲಿಲ್ಲ, ಪೆನ್ಸಿಲ್ ಇತ್ತು. ಎಲ್ಲಾ ಮೊದಲೇ ತೀರ್ಮಾನ ಆಗಿಹೋಗಿದೆ. ಕಾಟಾಚಾರಕ್ಕೆ ಸಂದರ್ಶನ ಮಾಡುತ್ತಿದ್ದಾರೆ' ಎಂದು ಆತ ಹೇಳಿದ. ಸಂದರ್ಶನಕ್ಕೆ ಹಾಜರಾಗುವುದು, ಅವರು ಕೇಳಿದ ಬೇಕಾಬಿಟ್ಟಿ ಪ್ರಶ್ನೆಗೆ ಉತ್ತರ ಕೊಡುವುದೆಲ್ಲ ನನಗೆ ವ್ಯರ್ಥ ಎನಿಸಿತು. 'ನಾನು ಸಂದರ್ಶನಕ್ಕೆ ಹಾಜರಾಗುವುದಿಲ್ಲ' ಎಂದು ಅಲ್ಲಿ ಸೇರಿದ್ದ ಗೆಳೆಯರಿಗೆ ಹೇಳಿ ಊರಿಗೆ ಹೊರಟು ಹೋದೆ. ನಂತರ ನಾನು ಯಾವುದೇ ಸರ್ಕಾರಿ ನೌಕರಿಗೆ ಅರ್ಜಿ ಹಾಕಲಿಲ್ಲ. ಸಂದರ್ಶನಕ್ಕೆ ಹಾಜರಾಗಲಿಲ್ಲ. ತೀರಾ ಈಚೆಗೆ ನಡೆದ ಕೆಪಿಎಸ್‌ಸಿಯ ಒಂದು ಸಂದರ್ಶನಕ್ಕೆ ವಿಷಯ ಪರಿಣತರಾಗಿ ಹೋಗಿದ್ದ ನನ್ನ ಸ್ನೇಹಿತನ ಹೆಂಡತಿಯ ಕೈಗೆ ಪೆನ್ಸಿಲ್ ಅನ್ನೇ ಕೊಡಲಾಗಿತ್ತು. ಇನ್ನೊಬ್ಬ ಸ್ನೇಹಿತ ಅಧಿಕಾರಿ ಕೈಗೆ ಅದನ್ನೂ ಕೊಟ್ಟಿರಲಿಲ್ಲ! ಪೆನ್ಸಿಲ್‌ನಿಂದ ಹಾಕಿದ ಅಂಕಗಳನ್ನು ಬದಲಿಸಬಹುದು, ಪೆನ್ನಿನಿಂದ ಬರೆದುದನ್ನು ಅಳಿಸುವುದು ಸುಲಭವಲ್ಲ. ನಂತರದ ವರ್ಷಗಳಲ್ಲಿ ನಾನು ಇಬ್ಬರು ಕೆಪಿಎಸ್ ಅಧ್ಯಕ್ಷರನ್ನು ಅವರ ಕೊಠಡಿಯಲ್ಲಿಯೇ ಕಂಡಿದ್ದೆ. ಅವರ ಮೇಜಿನ ಮೇಲೆ ಪೆನ್ಸಿಲ್ ಇತ್ತೇ ಹೊರತು ಪೆನ್ನು ಇರಲಿಲ್ಲ!

ನಾನು ಸಂದರ್ಶನಕ್ಕೆ ಹಾಜರಾದುದು ನಿವೃತ್ತ ಪೊಲೀಸ್ ಅಧಿಕಾರಿ ಎಂ.ಎಲ್.ಚಂದ್ರಶೇಖರ್ ಅವರು ಕೆಪಿಎಸ್ಸಿ ಅಧ್ಯಕ್ಷರಾಗಿದ್ದಾಗಿನ ಕಥೆ. ಅವರು ಅತ್ಯಂತ ದಕ್ಷ, ಪ್ರಾಮಾಣಿಕ ಮತ್ತು ಕಟ್ಟುನಿಟ್ಟಿನ ಅಧಿಕಾರಿ ಆಗಿದ್ದವರು. ಅವರ ಆ ಎಲ್ಲ ಗುಣಗಳನ್ನು

ನೋಡಿಯೇ ಅವರನ್ನು ಆಯೋಗದ ಅಧ್ಯಕ್ಷರಾಗಿ ಆಗಿನ ಮುಖ್ಯಮಂತ್ರಿ ದೇವರಾಜ ಅರಸು ನೇಮಕ ಮಾಡಿದ್ದರು. ಆಗಿನ ಅಧ್ಯಕ್ಷರನ್ನು, ಸದಸ್ಯರನ್ನು ನೇಮಕ ಮಾಡುವಾಗ ಈಗಿನ ಹಾಗೆ ಜಾತಿಯನ್ನೂ, ಸಂಬಂಧವನ್ನೂ ನೋಡುತ್ತಿರಲಿಲ್ಲ. ಅವರನ್ನು ಹೋಗಿ ಭೇಟಿ ಮಾಡುವುದು ಅಷ್ಟು ಸುಲಭವೂ ಆಗಿರಲಿಲ್ಲ. ಆಯೋಗದ ಕಚೇರಿಗೆ ಹೋಗಬೇಕಾದರೆ ನ್ಯಾಯಾಲಯಕ್ಕೆ ಹೋಗುವಾಗ ಇರುವ ಭಯ  ಭೀತಿಯೇ ಇರುತ್ತಿತ್ತು. ಆದರೆ, ಕೊಳೆಯುವಿಕೆ ಶುರುವಾಗಿತ್ತು ಎಂದು ಅನಿಸುತ್ತದೆ. ಏಕೆಂದರೆ 1975-79ರ ಅವಧಿಯ ತಡವಾಗಿ ಮಂಡಿಸಿದ ಕೆಪಿಎಸ್ಸಿ ವರದಿ ಕುರಿತು 1983ರಲ್ಲಿ ವಿಧಾನಮಂಡಲ ಅಧಿವೇಶನದಲ್ಲಿ ಚರ್ಚೆ ನಡೆದಿತ್ತು ವಿಧಾನಪರಿಷತ್ತಿನಲ್ಲಿ ನಡೆದ ಚರ್ಚೆಯಲ್ಲಿ ಜನತಾ ಪಕ್ಷದ ಜಿ.ಪುಟ್ಟಸ್ವಾಮಿಗೌಡರು ಮತ್ತು ಕಾಂಗ್ರೆಸ್ ಪಕ್ಷದ ಕೆ.ಎನ್.ನಾಗೇಗೌಡರು ಭಾಗವಹಿಸಿ ಆಯೋಗದ ಕಾರ್ಯವೈಖರಿ ಕುರಿತು ಒಳ್ಳೆಯ ಮಾತುಗಳನ್ನೇನೂ ಆಡಿರಲಿಲ್ಲ. ಪುಟ್ಟಸ್ವಾಮಿಗೌಡರು ಆಯೋಗವನ್ನು 'ಭ್ರಷ್ಟಾಚಾರದ ಪ್ರತಿರೂಪ' ಎಂದು ಕರೆದರೆ ನಾಗೇಗೌಡರು, 'ಇಂಥ ಭ್ರಷ್ಟ ನೇಮಕಾತಿ ಆಯೋಗವನ್ನು ಇಟ್ಟುಕೊಳ್ಳುವುದಕ್ಕಿಂತ ಅದನ್ನು ಮುಚ್ಚುವುದೇ ಒಳ್ಳೆಯದು'  ಎಂದಿದ್ದರು. ಈಗ ಪುಟ್ಟಸ್ವಾಮಿಗೌಡರೂ ಬದುಕಿಲ್ಲ. ನಾಗೇಗೌಡರೂ ಜೀವಂತ ಇಲ್ಲ. ಇಬ್ಬರೂ ಇದ್ದಿದ್ದರೆ ಆಯೋಗ ಈಗ ತಲುಪಿರುವ ಸ್ಥಿತಿಯನ್ನು ನೋಡಿ ಏನು ಅಂದುಕೊಳ್ಳುತ್ತಿದ್ದರೋ ಗೊತ್ತಿಲ್ಲ.  1983ರ ನಂತರ ಆಯೋಗದ ಕಾರ್ಯವೈಖರಿ ಕುರಿತು ಸದನದಲ್ಲಿ ಚರ್ಚೆ ನಡೆದುದು ನನಗೆ ನೆನಪು  ಇಲ್ಲ.

ಏಕೆ ಹೀಗೆ ಆಯಿತು? ಪ್ರಶ್ನೆ ಬಹಳ ಕಠಿಣವಾದುದೇನೂ ಅಲ್ಲ. ಅದಕ್ಕೆ ಉತ್ತರವೂ ಕಠಿಣವಾಗಿಲ್ಲ. ಹೊರಗಿನ ರಾಜಕೀಯ ವ್ಯವಸ್ಥೆಯಲ್ಲಿ ಆಗಿರುವ ಪತನವೇ ಆಯೋಗದಲ್ಲಿಯೂ ಆಯಿತು. ಮುಖ್ಯಮಂತ್ರಿಗೆ ಅಥವಾ ಆಡಳಿತ ಪಕ್ಷಕ್ಕೆ ಆಯೋಗವು ಎಷ್ಟು ಮುಖ್ಯ ಸಂಸ್ಥೆ ಎಂದು ತಿಳಿಯುತ್ತ  ಹೋಯಿತು. ತಮ್ಮವರು ಒಬ್ಬರು ಅಲ್ಲಿ ಇರಲಿ ಎಂದು ಅನಿಸತೊಡಗಿತು. ಸಾಧ್ಯವಾದಷ್ಟು ತಮ್ಮ ಜಾತಿಯವರೇ ಇರಲಿ ಎಂದೂ ಅನಿಸಿತು. ಅದಕ್ಕೆ ಕಾರಣ ಸ್ಪಷ್ಟವಾಗಿತ್ತು. ತಮ್ಮವರು ಅಲ್ಲಿ ಇದ್ದರೆ ತಮಗೆ ಬೇಕಾದವರನ್ನು ನೇಮಕ ಮಾಡಬಹುದು ಎಂದು ಸರ್ಕಾರದಲ್ಲಿ ಇದ್ದವರಿಗೆ ಗೊತ್ತಾಗತೊಡಗಿತು. ಸರಿ, ಪಕ್ಷದ ಸದಸ್ಯರನ್ನು, ಕಾರ್ಯಕರ್ತರನ್ನು, ಇನ್ನೂ ಸೇವಾವಧಿ ಇರುವ ಅಧಿಕಾರಿಗಳನ್ನು, ತಮ್ಮ ಸೇವೆ ಮಾಡಿದ ಅಧಿಕಾರಿಗಳನ್ನು ಎಲ್ಲ ಪಕ್ಷಗಳು ನೇಮಕ ಮಾಡಿದುವು. ಕೆಲವರು ವರ್ತಕರನ್ನು ನೇಮಿಸಿದರು! ಹೀಗೆ ಸದಸ್ಯರಾಗಿ, ಅಧ್ಯಕ್ಷರಾಗಿ ನೇಮಕ ಆದವರು ಸುಲಭವಾಗಿ ಸರ್ಕಾರದ ಮರ್ಜಿಗೆ ಬೀಳತೊಡಗಿದರು. ಮುಖ್ಯಮಂತ್ರಿ ಮಂತ್ರಿ, ಆಡಳಿತ ಪಕ್ಷ ಮತ್ತು ಸರ್ಕಾರದಲ್ಲಿ ಪ್ರಭಾವಿ ಆಗಿದ್ದವರು ಹೇಳಿದಂತೆ ನೇಮಕ ಆಗತೊಡಗಿತು. ಶಿಫಾರಸಿನ ಜತೆಗೆ  ಕಾಂಚಾಣವೂ ಹರಿದಾಡಿತು. ಯಾರಾರನ್ನೋ ತಲುಪಿತು. ಮೊದಲು ಕಾರ್ಯಾಂಗ ಒಂದು ಸ್ವತಂತ್ರ  ಸಂಸ್ಥೆ ಆಗಿತ್ತು. ಮುಖ್ಯಮಂತ್ರಿಗೆ, ಮಂತ್ರಿಗಳಿಗೆ, 'ಇದು ಸರಿಯಾದ ನಿರ್ಧಾರವಲ್ಲ' ಎಂದು ಹೇಳುವಂಥ ಧೈರ್ಯ ಅಧಿಕಾರಿಗಳಿಗೆ ಇರುತ್ತಿತ್ತು. ಆದರೆ, ಒಂದು ಹಂತದಲ್ಲಿ ಇಂಥ ಸ್ವತಂತ್ರ ಅಧಿಕಾರಿಗಳಿಗಿಂತ ಎಲ್ಲ ಕಡೆ ತಮ್ಮ ಮಾತು

ಕೇಳಿಕೊಂಡು ಬಿದ್ದಿರುವ, ತಮ್ಮದೇ ಜಾತಿಯ ಅಧಿಕಾರಿಗಳು ಇದ್ದರೆ ಆಡಳಿತ ಮಾಡುವುದು ಸುಲಭ ಎಂದು ರಾಜಕಾರಣಿಗಳಿಗೆ ಅನಿಸಿತು. ಆ ವೇಳೆಗೆ ರಾಜಕೀಯದ ವ್ಯಾಖ್ಯೆಯೂ ಬದಲಾಗಿತ್ತು. ಈಚಿನ ವರ್ಷಗಳಲ್ಲಿ ಆಯ್ಕೆಯಾದ ಅಧಿಕಾರಿಗಳ ಜಾತಿ ನೋಡಿದರೆ ಮುಂದಿನ ವರ್ಷಗಳಲ್ಲಿ ಯಾರೇ ಮುಖ್ಯಮಂತ್ರಿ ಆಗಿದ್ದರೂ ಕರ್ನಾಟಕದ ಆಡಳಿತ ಯಾರ ಕೈಯಲ್ಲಿ ಇರುತ್ತದೆ ಎಂದು ಊಹಿಸುವುದು ಕಷ್ಟವೇನೂ ಅಲ್ಲ.

ಇದನ್ನು ಸರಿಪಡಿಸುವುದು ಸುಲಭ ಇತ್ತು. ದೇಶದಲ್ಲಿ ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್) ಹೇಗೆ ಕೆಲಸ ಮಾಡುತ್ತದೆ ಎಂದು ಎಲ್ಲರಿಗೂ ಗೊತ್ತಿತ್ತು. ಆದರೆ, ಒಳ್ಳೆಯ ಮಾದರಿಗಳನ್ನು ಹಾಕುವುದು ಯಾರಿಗೂ ಬೇಕಾಗಿರಲಿಲ್ಲ. ಯಾವ ಪಕ್ಷಕ್ಕೂ ಬೇಕಾಗಿರಲಿಲ್ಲ. ಕಾಂಗ್ರೆಸ್, ಜನತಾದಳ ಮತ್ತು ಬಿಜೆಪಿಯ ಮೂರೂ ಸರ್ಕಾರಗಳ ಅವಧಿಯಲ್ಲಿ ಆಯೋಗದ ಕಾರ್ಯವೈಖರಿ ಒಂದೇ ತೆರನಾಗಿದೆ. ಈ ಮೂರೂ ಸರ್ಕಾರಗಳ ಅವಧಿಯಲ್ಲಿ ಸದಸ್ಯರ ನೇಮಕವೂ ಒಂದೇ ತೆರನಾಗಿದೆ. ಯಾರಿಗೂ ಆಯೋಗವನ್ನು ಸರಿ ಮಾಡಬೇಕು ಎಂದು ಅನಿಸಲಿಲ್ಲ. ಅಂದರೆ ಈಗ ಆಯೋಗಕ್ಕೆ ಆಗಿರುವ ಗತಿಯಲ್ಲಿ ಎಲ್ಲರ ಸಮಪಾಲು ಇದೆ ಎಂದೇ ಅರ್ಥ. ಯಾವುದಾದರೂ ಒಂದು ಸರ್ಕಾರಕ್ಕೆ ಇದನ್ನು ಸರಿಮಾಡಬೇಕು ಎಂದು ಅನಿಸಿದ್ದರೆ ಮೊದಲನೆಯ ಹೆಜ್ಜೆಯಾಗಿ ಸದಸ್ಯರ ನೇಮಕದ ವಿಧಾನವನ್ನು ಬದಲಿಸಬಹುದಿತ್ತು, ಆಯೋಗದ ಸದಸ್ಯರಿಗೆ ಹೈಕೋರ್ಟ್ ನ್ಯಾಯಮೂರ್ತಿಯ ಸ್ಥಾನಮಾನ ಇದೆ. ಹೈಕೋರ್ಟ್ ನ್ಯಾಯಮೂರ್ತಿಗಳ ನೇಮಕದ ವಿಧಾನವನ್ನೇ ಇಲ್ಲಿಯೂ ಬಳಸಿದ್ದರೆ ಸಾಕಿತ್ತು. ಬರೀ ರಾಜಕೀಯ ಮತ್ತು ಆಡಳಿತ ಕ್ಷೇತ್ರದಿಂದ ಸದಸ್ಯರ ನೇಮಕ ಮಾಡುವ ಬದಲು ಇನ್ನಿತರ ಕ್ಷೇತ್ರಗಳ ಪ್ರತಿನಿಧಿಗಳನ್ನೂ ನೇಮಿಸಬಹುದಿತ್ತು. ಎರಡನೇ ಸುಧಾರಣೆಯ ಹೆಜ್ಜೆಯಾಗಿ ಯುಪಿಎಸ್‌ಸಿಯಲ್ಲಿ ಇರುವ ಹಾಗೆ ಲಿಖಿತ ಪರೀಕ್ಷೆಯ ಅಂಕಗಳನ್ನು ರಹಸ್ಯವಾಗಿ ಇಡಲು ಕ್ರಮ ತೆಗೆದುಕೊಳ್ಳಬೇಕಿತ್ತು. ಕೆಳಹಂತದ ನ್ಯಾಯಾಧೀಶರ ನೇಮಕದಲ್ಲಿಯೂ ಇದೇ ವಿಧಾನವನ್ನು ಅನುಸರಿಸಲಾಗುತ್ತಿದೆ. ಆಗ ವ್ಯವಹಾರ ಕುದುರಿಸಲು ಅವಕಾಶವೇ ಇರುವುದಿಲ್ಲ. ಮೂರನೇ ಹೆಜ್ಜೆಯಾಗಿ ಮೌಖಿಕ ಪರೀಕ್ಷೆಯ ಅಂಕಗಳನ್ನು 200ರ ಬದಲು 50ಕ್ಕೆ ಇಳಿಸಬೇಕಿತ್ತು. ಸಂದರ್ಶನಕ್ಕೆ ಹಾಜರಾದರೂ ಸಾಕು ಗರಿಷ್ಠ 50 ಅಂಕಗಳಲ್ಲಿ ಇಂತಿಷ್ಟು ಅಂಕಗಳು ಅಭ್ಯರ್ಥಿಗೆ ಸಿಗುತ್ತವೆ ಎಂದು ಪ್ರಕಟ ಮಾಡಬೇಕಿತ್ತು. ಹೀಗೆಲ್ಲ ಮಾಡಿದ್ದರೆ ಆಯೋಗದ ಅಧ್ಯಕ್ಷರಾಗಿ ಕೆಲಸ ಮಾಡಿದವರು ಜೈಲಿಗೆ ಹೋಗಬೇಕಿರಲಿಲ್ಲ ಮತ್ತು ನಿರೀಕ್ಷಣಾ ಜಾಮೀನಿಗೆ ಅರ್ಜಿ ಹಾಕಿಕೊಳ್ಳಬೇಕಿರಲಿಲ್ಲ. ಅದಕ್ಕಿಂತ ಮುಖ್ಯವಾಗಿ ರಾಜ್ಯದ ಆಡಳಿತ ಹಳಿ ತಪ್ಪುತ್ತಿರಲಿಲ್ಲ, ಜಾತೀಯತೆ ತಾಂಡವ ಆಡುತ್ತಿರಲಿಲ್ಲ, ಭ್ರಷ್ಟಾಚಾರ ಮೇರೆ ಮೀರುತ್ತಿರಲಿಲ್ಲ.

ಒಂದು ಭ್ರಷ್ಟ ವ್ಯವಸ್ಥೆ ಪ್ರಾಮಾಣಿಕ ಅಧಿಕಾರಿಗಳನ್ನು ಹುಟ್ಟು ಹಾಕುವುದು ಕಷ್ಟ ಅರವತ್ತು ಎಪ್ಪತ್ತು ಲಕ್ಷ ರೂಪಾಯಿ ಕೊಟ್ಟು ಸಹಾಯಕ ಕಮಿಷನರ್, ಡಿವೈಎಸ್‌ಪಿ ಅಥವಾ ಇನ್ನಾವುದೋ ಉನ್ನತ ಹುದ್ದೆಯ ಒಬ್ಬ ಅಧಿಕಾರಿ ಪ್ರಾಮಾಣಿಕನಾಗಿ ಉಳಿಯಬೇಕು ಎಂದು ಬಯಸುವುದು ಇನ್ನೂ ಕಷ್ಟ. ಆತ ತನ್ನನ್ನು ನೇಮಕ ಮಾಡಿದ ಸಂಸ್ಥೆಯ ಸದಸ್ಯರಿಗೆ ಲಂಚ

ಕೊಡುವ ಮೂಲಕ ತಾನು ಅಪ್ರಾಮಾಣಿಕನಾಗಲು ಪರವಾನಿಗೆಯನ್ನೂ ಪಡೆದುಕೊಂಡಿರುತ್ತಾನೆ. ಉನ್ನತ ಅಧಿಕಾರಿಗಳೇ ಲಂಚ ತೆಗೆದುಕೊಳ್ಳುವಾಗ ಕೆಳಗಿನ ಅಧಿಕಾರಿಗಳು ಮತ್ತು ಸಿಬ್ಬಂದಿ ಪ್ರಾಮಾಣಿಕರಾಗಿ ಇರಬೇಕು ಎಂದು ಬಯಸುವುದು ಹಾಸ್ಯಾಸ್ಪದವಾಗುತ್ತದೆ. ಲಂಚ ಹೋಗುವುದು ಯಾವಾಗಲೂ ಕೆಳಗಿನಿಂದಲೇ! ಮೇಲಿನಿಂದ ಕೆಳಗೆ ಬರುವುದಿಲ್ಲ! ಮೊದಲು ಭ್ರಷ್ಟಾಚಾರ ತಪ್ಪು ಎಂದು ಅನಿಸುತ್ತಿತ್ತು. ಅದು ಒಂದು ವಾಸ್ತವ ಎಂದು ಒಪ್ಪಿಕೊಂಡು ದಶಕಗಳೇ ಆಗಿವೆ. ಈಗ ಜನರಿಗೆ ಹಣ ಕೊಟ್ಟು ಕೆಲಸ ಮಾಡಿಸಿಕೊಳ್ಳುವುದೇ ರೂಢಿಯಾಗಿದೆ. 'ಕಾಂಚಾಣದಿಂದ ಕಾರ್ಯಸಿದ್ಧಿ' ಎಂದು ಅವರಿಗೆ ಗೊತ್ತಾಗಿದೆ! ಹಣ ಕೊಟ್ಟು ಕೆಲಸ ಮಾಡಿಸಿಕೊಳ್ಳುವಾಗ ಬರೀ ಸಕ್ರಮ ಕೆಲಸಗಳು ಮಾತ್ರವಲ್ಲ ಅಕ್ರಮ ಕೆಲಸಗಳನ್ನೂ ಮಾಡಿಸಿಕೊಳ್ಳುತ್ತೇವೆ. ಅಲ್ಲಿಗೆ ಇಡೀ ಆಡಳಿತ ವ್ಯವಸ್ಥೆ ಭ್ರಷ್ಟವಾಗುತ್ತದೆ, ಕುಸಿದು ಬೀಳುತ್ತದೆ. ಜನ ವಿರೋಧಿ ಆಗುತ್ತದೆ ಮತ್ತು ಅಲ್ಲಿ ಹಿಂಸೆ ಸೇರಿಕೊಳ್ಳುತ್ತದೆ.

ಈಗ ಅದೇ ಆಗಿದೆ. ಈಗ ಕೆಪಿಎಸ್ಸಿ ಮತ್ತೆ ಸುದ್ದಿಯಲ್ಲಿ ಇದೆ. ಮುಖ್ಯಮಂತ್ರಿಗಳು 'ಬೇಡ' ಎಂಬ ಒತ್ತಡದ ನಡುವೆಯೂ ಆಯೋಗದ ಅಕ್ರಮಗಳನ್ನು ಸಿಐಡಿ ತನಿಖೆಗೆ ಒಪ್ಪಿಸಿದ್ದಾರೆ. ಹಿಂದಿನ ಒಂದು ಅವಧಿಯ ಹಗರಣಗಳು ಈಗಾಗಲೇ ಸಿಐಡಿ ತನಿಖೆಗೆ ಒಳಪಟ್ಟಿವೆ. ಆಗ ಏನೇನಾಗಿದೆ ಎಂಬುದೆಲ್ಲ ಈಗ ರಹಸ್ಯವಾಗಿ ಉಳಿದಿಲ್ಲ. ಈಗ ನಡೆದಿರುವುದೂ ಅದಕ್ಕಿಂತ ಭಿನ್ನವಾಗಿ ಇರಲು ಸಾಧ್ಯವಿಲ್ಲ. ನಾನೇನು ಸಿನಿಕನಲ್ಲ. ಆದರೆ, ಇದು ಒಂದು ತಾರ್ಕಿಕ ಅಂತ್ಯ ಕಾಣಬಹುದೇ? ಹಾಗೆಂದು ನನಗೆ ಅನಿಸುವುದಿಲ್ಲ. ಇದರಲ್ಲಿ ಬರೀ ಆಯೋಗದ ತಪ್ಪು ಇಲ್ಲ. ಆಯೋಗದ ಅಧ್ಯಕ್ಷರಿಂದ, ಸದಸ್ಯರಿಂದ ತಪ್ಪು ಮಾಡಿಸಿದವರ ತಪ್ಪು ಇದೆ. ತಮ್ಮನ್ನು ನೇಮಕ ಮಾಡಿದ 'ಯಜಮಾನ'ರ ಕೋರಿಕೆಯನ್ನು ತಳ್ಳಿ ಹಾಕುವಂಥ ಧೈರ್ಯವನ್ನು ಸದಸ್ಯರು, ಅಧ್ಯಕ್ಷರು ತೋರಿಸಿಲ್ಲ. ಆಯೋಗ ಮತ್ತು ರಾಜಕಾರಣಿಗಳ ನಡುವಿನ ಅಪವಿತ್ರ ಸಂಬಂಧವನ್ನು ವಿರೋಧ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಮಾತ್ರ ಒಪ್ಪಿಕೊಂಡಿದ್ದಾರೆ. ಉಳಿದ ಯಾವ ನಾಯಕರೂ ಒಪ್ಪಿಕೊಂಡಿಲ್ಲ. ಈಚೆಗೆ ನಡೆದ 360ಕ್ಕಿಂತ ಹೆಚ್ಚು ಕೆಎಎಸ್ ಅಧಿಕಾರಿಗಳ ನೇಮಕದಲ್ಲಿ ಕೆಲವಕ್ಕಾದರೂ ಯಾವ ಯಾವ ರಾಜಕೀಯ ಮುಖಂಡರು ಶಿಫಾರಸು ಮಾಡಿದ್ದಾರೆ ಎಂಬ ದಾಖಲೆ ಆಯೋಗದ ಬಳಿ ಇದ್ದೇ ಇರಬೇಕು. ಆಯೋಗದ ಬಳಿ ಇರದೇ ಇದ್ದರೂ ಸದಸ್ಯರ ಖಾಸಗಿ ಡೈರಿಯಲ್ಲಿಯಂತೂ ಇದ್ದೇ ಇರುತ್ತದೆ. ಈಗ ಸರ್ಕಾರದ ಉನ್ನತ ಹುದ್ದೆಯಲ್ಲಿ ಇರುವವರು ಅಂಥ ಶಿಫಾರಸು ಮಾಡಿಲ್ಲವೇ? ಸಿಐಡಿ ಪೊಲೀಸರು ಎಲ್ಲಿಯವರೆಗೆ ಹೋಗಲು ಸಾಧ್ಯ? ಒಂದು ಹಂತದ ವರೆಗೆ ಮಾತ್ರ ಅಲ್ಲವೇ? ಹಾಗಾದರೆ ಮುಂದೆ ಏನಾಗುತ್ತದೆ? ಯಾವ ಸರ್ಕಾರವೂ, ಯಾವ ಪಕ್ಷವೂ ಆಯೋಗವನ್ನು ಶುದ್ಧಿಕರಿಸಬೇಕು ಎಂದು ಪ್ರಯತ್ನ ಮಾಡಿಲ್ಲವಾದ್ದರಿಂದ ಸತ್ಯ ಯಾರಿಗೂ ಬೇಕಾಗಿಲ್ಲ. ಸಿ.ಐ.ಡಿ ತನಿಖಾ ವರದಿ ಬಂದ ನಂತರ ಏನಾಗುತ್ತದೆ ಎಂದು ಊಹಿಸುವುದು ಅಷ್ಟು ಕಷ್ಟ ಎಂದು ನನಗಂತೂ ಅನಿಸಿಲ್ಲ. ಆದರೆ, ಹಿಂದೆ ಆಗಿರುವ ತಪ್ಪನ್ನು ಸರಿಪಡಿಸುವುದು ಒಂದು ಹಂತದ ಶುದ್ಧೀಕರಣ. ಮುಂದೆ ಆಗುವ ತಪ್ಪನ್ನು ತಡೆಯುವುದು

ಒಳ್ಳೆಯ ಮಾದರಿ ಹಾಕುವುದು ಅಸಾಧ್ಯವೇನೂ ಅಲ್ಲ

ಎರಡನೇ ಹಂತದ ಶುದ್ಧೀಕರಣ. ಅದು ದೊಡ್ಡದು ಮತ್ತು ಅದಕ್ಕೆ ಪ್ರಬಲ ರಾಜಕೀಯ ಇಚ್ಛಾಶಕ್ತಿ  ಇರಬೇಕು. ಅಂಥ ಇಚ್ಛಾಶಕ್ತಿಯಿದ್ದರೆ ಕೇಂದ್ರ ಲೋಕ ಸೇವಾ ಆಯೋಗದ ಮಾದರಿಯ ಒಂದು ನೇಮಕಾತಿ ಆಯೋಗವನ್ನು ಕರ್ನಾಟಕದಲ್ಲಿಯೂ ಅಸ್ತಿತ್ವಕ್ಕೆ ತರಬಹುದು. ಭ್ರಷ್ಟ ಮಾರ್ಗದಿಂದ ನೌಕರಿ ಹಿಡಿಯಬೇಕು ಎನ್ನುವ ಕೆಲವರನ್ನು ಬಿಟ್ಟು ಎಲ್ಲ ಜಾತಿಗಳ ಪ್ರಾಮಾಣಿಕ, ಅರ್ಹ ಅಭ್ಯರ್ಥಿಗಳಿಗೂ ಅಂಥ ಆಯೋಗವೇ ಬೇಕು. ಏಕೆಂದರೆ ವಾಮಮಾರ್ಗದಲ್ಲಿ ಹೋಗುವ, ನೌಕರಿ ಪಡೆಯುವ ಶಕ್ತಿ ಎಷ್ಟು ಜನರಿಗೆ ಇದೆ? ಆ ಕನಸು ನನಸಾದೀತೇ? ಮುಖ್ಯಮಂತ್ರಿ ಸಿದ್ದರಾಮಯ್ಯ ಅದನ್ನು ಮಾಡಿಯಾರೇ? ಒಳ್ಳೆಯ ಮಾದರಿ ಹಾಕುವುದು ಸುಲಭವೇನೂ ಅಲ್ಲ. ಆದರೆ, ಅದು ಅಸಾಧ್ಯವಲ್ಲ!

28.07.2013

# ಅರ್ಧ ಜನಸಂಖ್ಯೆಯನ್ನು

# ನಡೆಸಿಕೊಳ್ಳುವ ರೀತಿಯೇ ಇದು?

ಇದು ಸಾಮಾಜಿಕ ಸಮಸ್ಯೆಯೇ? ಮನಸ್ಥಿತಿಯ ಸಮಸ್ಯೆಯೇ? ಇದರ ಬೇರು ನಮ್ಮ ಧರ್ಮಗಳಲ್ಲಿಯೇ ಇದೆಯೇ? ಅಥವಾ ಇದು ಎಲ್ಲವೂ ನಿಜವೇ? ಎಷ್ಟು ಮಂದಿಗೆ ನೆನಪಿದೆಯೋ ಗೊತ್ತಿಲ್ಲ ಶಾಸಕಾಂಗದಲ್ಲಿ ಮಹಿಳೆಯರಿಗೆ ಮೀಸಲಾತಿ ಕೊಡುವ ಕುರಿತು ಸಂಸತ್ತಿನಲ್ಲಿ ಚರ್ಚೆ ನಡೆದಿತ್ತು. ಜನತಾದಳ (ಯು) ಅಧ್ಯಕ್ಷ ಶರದ್ ಯಾದವ್, 'ಹೆಣ್ಣು ಮಕ್ಕಳಿಗೆ ಸಂಸದೀಯ ವ್ಯವಸ್ಥೆಯಲ್ಲಿ ಮೀಸಲಾತಿ ಕೊಟ್ಟರೆ ಸದನದಲ್ಲಿ ಬರೀ ಬಾಲ್ ಕಟ (ಕೂದಲು ಕತ್ತರಿಸಿಕೊಂಡ) ಹೆಣ್ಣು ಮಕ್ಕಳೇ ತುಂಬಿರುತ್ತಾರೆ' ಎಂದು ಮುತ್ತು ಉದುರಿಸಿದ್ದರು. ಅದೇ ಮಾತನ್ನು ಆಡದಿದ್ದರೂ ಸಮಾಜವಾದಿ ಪಕ್ಷದ ಮುಲಾಯಂ ಮತ್ತು ಆರ್.ಜೆ.ಡಿ ಪಕ್ಷದ ಲಾಲು ಪ್ರಸಾದ್ ಕೂಡ ಅದೇ ನಿಲುವಿನವರಾಗಿದ್ದರು. ಈಗಲೂ ಆಗಿದ್ದಾರೆ. ಇವರೆಲ್ಲ ಹೆಣ್ಣು ಮಕ್ಕಳಿಗೆ ಹೆಚ್ಚಿನ ಸ್ಥಾನ ಮಾನ ಕೊಡಬೇಕು ಎಂದು ವಾದಿಸಿದ ರಾಮ ಮನೋಹರ ಲೋಹಿಯಾ ಸಿದ್ಧಾಂತದ ಅನುಯಾಯಿಗಳು! ಅವರೇ ಹೆಣ್ಣು ಮಕ್ಕಳಿಗೆ ಸಂಸದೀಯ ವ್ಯವಸ್ಥೆಯಲ್ಲಿ ಮೀಸಲಾತಿ ಕೊಡಬೇಕು ಎಂಬ ಮಸೂದೆಯನ್ನು ನಖಶಿಖಾಂತ ವಿರೋಧಿಸುವವರು. ಲೋಹಿಯಾ ಅನುಯಾಯಿಗಳ ಕಥೆಯೇ ಹೀಗಾದರೆ ಉಳಿದವರ ಪಾಡೇನು? ಕರ್ನಾಟಕದಲ್ಲಿ ಮತ್ತೆ ಚುನಾವಣೆ ಬಂದಿದೆ. ಒಂದು ಸಾರಿ ಎಲ್ಲ ಪಕ್ಷಗಳ ಅಭ್ಯರ್ಥಿಗಳ ಪಟ್ಟಿ ಹಿಡಿದುಕೊಂಡು ನೋಡಿ, ಕಾಂಗ್ರೆಸ್ ಅತಿ ಹೆಚ್ಚು ಮಂದಿ ಮಹಿಳೆಯರಿಗೆ ಟಿಕೆಟ್ ಕೊಟ್ಟಿದೆ. ಆದರೂ ಅವರ ಸಂಖ್ಯೆ ಒಂದು ಡಜನ್ ಅನ್ನೂ ಮೀರಿಲ್ಲ. ಬಿಜೆಪಿ ಮತ್ತು ಜೆ.ಡಿ (ಎಸ್) ಪಕ್ಷಗಳ ಮಹಿಳಾ ಅಭ್ಯರ್ಥಿಗಳ ಸಂಖ್ಯೆ ಎರಡಂಕಿಯನ್ನೂ ತಲುಪಿಲ್ಲ. ಜನಸಂಖ್ಯೆಯಲ್ಲಿ ಅರ್ಧದಷ್ಟು ಇರುವವರನ್ನು ನಡೆಸಿಕೊಳ್ಳುವ ರೀತಿಯೇ ಇದು? ಇನ್ನೂ ಎಷ್ಟು ದಿನ ನಾವು ಹೀಗೆಯೇ ಅವರನ್ನು ನಡೆಸಿಕೊಳ್ಳುತ್ತೇವೆ? ಇದು ಹೊಸದೇನೂ ಅಲ್ಲ.

ಹೆಣ್ಣು ಮಕ್ಕಳ ವಿಚಾರದಲ್ಲಿ ಒಟ್ಟು ಭಾರತದ ಸ್ಥಿತಿಯೇ ಹೀಗೆ ಇದೆ. ನಾವು ಪಕ್ಕದ ಪಾಕಿಸ್ತಾನ, ಬಾಂಗ್ಲಾದೇಶ, ನೇಪಾಳಗಳಿಗಿಂತ ಕಡೆ, ಹೆಣ್ಣು ಮಕ್ಕಳಿಗೆ ಸ್ಥಾನ ಮಾನ ಕೊಡುವ ವಿಚಾರದಲ್ಲಿ ವಿಶ್ವದಲ್ಲಿ ನಾವು 165ನೇ ಸ್ಥಾನದಲ್ಲಿ ಇದ್ದೇವೆ. ಹೆಣ್ಣು ಮಕ್ಕಳಿಗೆ ಅತ್ಯಂತ ಅಪಾಯಕಾರಿಯಾದ ನಾಲ್ಕನೇ ದೇಶ ಎಂದೂ ಭಾರತ ಹೆಸರು ಗಳಿಸಿದೆ! ಐದು ವರ್ಷದ ಹಸುಗೂಸುಗಳ ಮೇಲೂ ಅತ್ಯಾಚಾರ ಮಾಡುವ ನಾವು ಮನುಷ್ಯರಾಗಿರಲು ಸಾಧ್ಯವಿಲ್ಲ; ರಾಕ್ಷಸರೇ ಆಗಿರಬೇಕು. ಆಫ್ರಿಕಾದ ರವಾಂಡಾ ದೇಶದಲ್ಲಿ ಶೇ 56.7 ರಷ್ಟು ಸೀಟುಗಳಲ್ಲಿ ಮಹಿಳೆಯರು ಗೆದ್ದಿದ್ದರೆ, ಅದೇ ಖಂಡದ ಮೊಜಾಂಬಿಕ್‌ನಲ್ಲಿ ಈ ಸಂಖ್ಯೆ ಶೇ 34.8ನ್ನು ಮೀರಿದೆ. ದಕ್ಷಿಣ ಆಫ್ರಿಕಾದಲ್ಲಿ ಇದು ಶೇ 44.5ರಷ್ಟು ಇದೆ. ಕತ್ತಲ ಖಂಡದ ಈ ದೇಶಗಳೇ ಮುಕ್ಕೋಟಿ ದೇವತೆಗಳು ಇರುವ ನಮ್ಮ ದೇಶಕ್ಕಿಂತ ವಾಸಿ ಎನಿಸುವುದಿಲ್ಲವೇ?

ಕರ್ನಾಟಕದಲ್ಲಿ ಈಗ 14ನೇ ವಿಧಾನಸಭೆಗೆ ಚುನಾವಣೆ ಆಗುತ್ತಿದೆ. ಇಷ್ಟು ದೀರ್ಘ ಅವಧಿಯಲ್ಲಿ ಎರಡು ಸಾರಿ ಮಾತ್ರ ವಿಧಾನಸಭೆಯಲ್ಲಿ ಸದಸ್ಯೆಯರ ಸಂಖ್ಯೆ ಎರಡಂಕಿ ಮುಟ್ಟಿತ್ತು. 1962ರಷ್ಟು ಹಿಂದೆ 18 ಮಂದಿ ಮಹಿಳೆಯರು ವಿಧಾನಸಭೆಗೆ ಗೆದ್ದು ಬಂದಿದ್ದರು. ನಂತರ 1989ರಲ್ಲಿ ಹತ್ತು ಮಂದಿ ಗೆದ್ದಿದ್ದರು. ಉಳಿದ ಅವಧಿಯಲ್ಲಿ ಈ ಸಂಖ್ಯೆ ಆರೆಂಟು ಮಾತ್ರ ಕಳೆದ ವಿಧಾನಸಭೆಯಲ್ಲಿಯೂ ಆರು ಮಂದಿ ಮಾತ್ರ ಸದಸ್ಯೆಯರು ಇದ್ದರು. ಈ ಸಾರಿಯೂ ಟಿಕೆಟ್ ಸಿಕ್ಕವರಲ್ಲಿ ಎಷ್ಟು ಮಂದಿ ಗೆದ್ದು ಬರುತ್ತಾರೆ ಎಂದು ಹೇಳುವುದು ಕಷ್ಟ. ಆದರೆ, ಅದು ಒಂದಂಕಿಯನ್ನು ಮೀರುವುದು ಸುಲಭವಲ್ಲ. ಇದು ಸಾಮಾಜಿಕ ಸಮಸ್ಯೆ. ಎಲ್ಲ ಪಕ್ಷಗಳಿಗೆ ಗೆಲ್ಲುವುದು ಮುಖ್ಯ. ಅವರಿಗೆ ಸರ್ಕಾರ ಮಾಡಬೇಕು. ಸಮಾಜ ಸುಧಾರಣೆ ಅಲ್ಲ. ಸರ್ಕಾರ ಮಾಡಲು ಸಾಧ್ಯವಾದರೆ ತಾನೇ ಸಮಾಜ ಸುಧಾರಣೆ ಮಾಡುವುದು?! ಹೆಣ್ಣು ಮಕ್ಕಳಿಗೆ ಸ್ಥಾನಮಾನ ಸಿಗಬೇಕು ಎಂಬ ನಿಜವಾದ ಕಾಳಜಿ ಇರುವ ಸೋನಿಯಾ ಗಾಂಧಿಯವರ ಕಾಂಗ್ರೆಸ್ ಪಕ್ಷದಲ್ಲಿಯೇ ಅಳೆದು ಸುರಿದೂ ಹನ್ನೊಂದು ಮಹಿಳೆಯರಿಗೆ ಟಿಕೆಟ್ ಕೊಟ್ಟಿದ್ದಾರೆ. ಉಳಿದ ಪಕ್ಷಗಳ ಹೈಕಮಾಂಡಿನಲ್ಲಿ ಹೆಣ್ಣು ಮಕ್ಕಳಿಗೆ ಟಿಕೆಟ್ ಕೊಡಿ ಎನ್ನುವವರು ಯಾರೂ ಇಲ್ಲ.

ಎಲ್ಲ ಪಕ್ಷಗಳಿಗೂ ಗೆಲ್ಲುವ ತವಕ. ಹೆಣ್ಣು ಮಕ್ಕಳಿಗೆ ಗೆಲ್ಲುವ ಸಾಮರ್ಥ್ಯ ಕಡಿಮೆ ಎಂಬುದು ಅವರ ನಂಬಿಕೆ ಅಥವಾ ಅನುಭವ. ಇಂಥ ನಂಬಿಕೆ ಸಮಾಜದಲ್ಲಿನ ಸ್ಥಿತಿಗತಿಗಳ ಹಿನ್ನೆಲೆಯಿಂದ ಮೂಡಿ ಬಂದಿರಬಹುದು. ಅದೇ ನಂತರ 'ಅನುಭವ'ವೂ ಆಗಿರಬಹುದು. ಒಂದು ಕ್ಷೇತ್ರದಲ್ಲಿ ಒಂದು ಪಕ್ಷ ಹೆಣ್ಣು ಮಗಳಿಗೆ ಟಿಕೆಟ್ ಕೊಟ್ಟರೆ ಮತ್ತೊಂದು ಪಕ್ಷ ಪುರುಷನಿಗೆ ಟಿಕೆಟ್ ಕೊಟ್ಟರೆ ಹೆಣ್ಣು ಮಗಳಿಗೆ ಟಿಕೆಟ್ ಕೊಟ್ಟ ಪಕ್ಷಕ್ಕೆ ತನ್ನ ಅಭ್ಯರ್ಥಿ ಸೋತು ಬಿಡಬಹುದು ಎಂಬ ಭಯ. ಚುನಾವಣೆ ವ್ಯವಸ್ಥೆ ಎಂಬುದು ತೀರಾ ಕಲುಷಿತವಾಗಿರುವ ಈಗಿನ ಸಾಮಾಜಿಕ ಪರಿಸರದಲ್ಲಿ ಇದು ನಿಜವೂ ಇರಬಹುದು. ಪುರುಷ ಅಭ್ಯರ್ಥಿಯ ಹತ್ತಿರ ಹಣ ಮತ್ತು ಹೆಂಡ ಕೇಳಿದ ಹಾಗೆ ಮಹಿಳಾ ಅಭ್ಯರ್ಥಿ ಹತ್ತಿರ ಕೇಳಲು ಗಂಡಸರಿಗೆ ನಾಚಿಕೆ ಆಗಬಹುದು. ಗೆದ್ದ ನಂತರ ಪುರುಷ ಅಭ್ಯರ್ಥಿ ಹತ್ತಿರ ನಿಕಟ ಸಂಪರ್ಕ ಸಾಧ್ಯ, ಮಹಿಳಾ ಅಭ್ಯರ್ಥಿ ಹತ್ತಿರ ಕಷ್ಟ ಎಂದೂ ಮತದಾರರಿಗೆ ಅನಿಸುತ್ತಿರಬಹುದು. ಇವೆಲ್ಲ ಸಾಮಾನ್ಯ ಗ್ರಹಿಕೆಗಳು, ನಿಜ ಇರಬಹುದು. ಇಲ್ಲದೇ ಇರಬಹುದು. ವಿಧಾನಸಭೆ ಅಥವಾ

ಲೋಕಸಭೆಗೆ ಇನ್ನೂ ಮಹಿಳಾ ಮೀಸಲಾತಿ ಜಾರಿಯಾಗಿಲ್ಲವಾದ ಕಾರಣ ಎಲ್ಲ ಪಕ್ಷಗಳೂ ಒಂದು ಕ್ಷೇತ್ರದಲ್ಲಿ ಮಹಿಳೆಯರನ್ನೇ ಕಣಕ್ಕೆ ಇಳಿಸುತ್ತಿಲ್ಲ. ಮಹಿಳೆಗಿಂತ ಪುರುಷನ ಗೆಲ್ಲುವ ಸಾಮರ್ಥ್ಯ ಹೆಚ್ಚು ಎಂಬ ನಂಬಿಕೆಯ ಪಕ್ಷಗಳು ಹೆಣ್ಣು ಮಕ್ಕಳಿಗೆ ಟಿಕೆಟ್ ಕೊಡುವಾಗ ಆಕೆಯ ವಿರುದ್ಧ ಪುರುಷ ಅಭ್ಯರ್ಥಿ ಹಾಕಿದರೆ ಏನು ಮಾಡುವುದು ಎಂಬ ಅಳುಕಿನಲ್ಲಿಯೇ ಟಿಕೆಟ್ ಕೊಡುತ್ತವೆ. ಈಗ ಆಗಿರುವುದೂ ಅದೇ. ಎಲ್ಲಿ ತಪ್ಪಿಸುವುದು ಸಾಧ್ಯವೇ ಇಲ್ಲವೋ ಅಲ್ಲಿ ಮಾತ್ರ ಮಹಿಳೆಯರಿಗೆ ಟಿಕೆಟ್ ಸಿಕ್ಕಂತೆ ಕಾಣುತ್ತದೆ. ಕೆಲವರು ತಪ್ಪಿಸಿಯೂ ಬಿಟ್ಟಿದ್ದಾರೆ. ಕಾರಣಗಳು ಏನೇ ಇರಬಹುದು : ಕಲ್ಪನಾ ಸಿದ್ದರಾಜು ಅದಕ್ಕೆ ಒಂದು ಉದಾಹರಣೆ.

ಕರ್ನಾಟಕದಲ್ಲಿ ಒಬ್ಬ ಹೆಣ್ಣು ಮಗಳು ಇದುವರೆಗೆ ಮುಖ್ಯಮಂತ್ರಿ ಆಗಿಲ್ಲ. ಸದ್ಯೋಭವಿಷ್ಯದಲ್ಲಿ ಆಗುವ ಲಕ್ಷಣಗಳೂ ಇಲ್ಲ. ನಮ್ಮ ಪಕ್ಷದ ಕೇರಳ ರಾಜ್ಯದಲ್ಲಿ ಹೆಣ್ಣು ಮಗಳು ಮುಖ್ಯಮಂತ್ರಿ ಆಗದೇ ಇದ್ದರೂ ಅದು ಮಾತೃಪ್ರಧಾನ ಸಮಾಜ. ಆದರೆ, ಅಲ್ಲಿಯೂ ಎರಡು ವರ್ಷಗಳ ಹಿಂದೆ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಗೆದ್ದ ಹೆಣ್ಣುಮಕ್ಕಳ ಸಂಖ್ಯೆ ಏಳು ಮಾತ್ರ. ಅದಕ್ಕಿಂತ ಹಿಂದಿನ ವಿಧಾನಸಭೆಯಲ್ಲಿಯೂ ಅಲ್ಲಿ ಅಷ್ಟೇ ಸಂಖ್ಯೆಯ ಸದಸ್ಯೆಯರು ಇದ್ದರು. ತಮಿಳುನಾಡಿನಲ್ಲಿ ಜಯಲಲಿತಾ ಅವರಂಥ ಅತ್ಯಂತ ದಿಟ್ಟ ಸಮರ್ಥ ಮಹಿಳೆ ಮುಖ್ಯಮಂತ್ರಿ ಆಗಿದ್ದಾರೆ. ಅದು ಕರ್ನಾಟಕಕ್ಕಿಂತ ದೊಡ್ಡ ರಾಜ್ಯ. ಅಲ್ಲಿಯ ಸದಸ್ಯೆಯರ ಸಂಖ್ಯೆಯೂ ಒಂದು ಡಜನ್‌ಗಿಂತ ಎರಡು ಹೆಚ್ಚು ಅಷ್ಟೇ! ಇನ್ನೊಬ್ಬ ಅಷ್ಟೇ ದಿಟ್ಟ ಮಹಿಳೆ ಮುಖ್ಯಮಂತ್ರಿ ಆಗಿರುವ ಪಶ್ಚಿಮ ಬಂಗಾಳದಲ್ಲಿ ಸದಸ್ಯೆಯರ ಸಂಖ್ಯೆ 37. ಇದು ಕಳೆದ ವಿಧಾನಸಭೆಗಿಂತ ಎರಡೇ ಹೆಚ್ಚು. ತಮಿಳುನಾಡು ಮತ್ತು ಪಶ್ಚಿಮ ಬಂಗಾಳದಲ್ಲಿ ಜಯಾ ಮತ್ತು ಮಮತಾ ಅವರಿಗೆ ತಾವೇ ಮುಖ್ಯಮಂತ್ರಿ ಅಭ್ಯರ್ಥಿ ಎಂದು ಗೊತ್ತಿತ್ತು. ಅವರೂ ಐವತ್ತು ಮಂದಿ ಮಹಿಳೆಯರನ್ನು ಗೆಲ್ಲಿಸಿಕೊಂಡು ಬರಲಿಲ್ಲ. ಎಷ್ಟು ಮಂದಿ ಮಹಿಳೆಯರಿಗೆ ಟಿಕೆಟ್ ಕೊಟ್ಟರೋ ಏನೋ? ಹೇಗಿದ್ದರೂ ಗೆದ್ದ ಗಂಡಸರು ತಮಗೆ ಸಾಷ್ಟಾಂಗ ನಮಸ್ಕಾರ ಹಾಕುವಾಗ ಹೆಂಗಸರು ಏಕೆ ಬೇಕು ಎಂದು ಅವರು ಅಂದುಕೊಂಡರೋ ಏನೋ? ಇದು ಎಂಥ ಮನಸ್ಥಿತಿ? ಇಂದಿರಾ ಗಾಂಧಿ ಅವರ ಸಂಪುಟದಲ್ಲಿ ಆಕೆ ಒಬ್ಬರೇ ಗಂಡಸರು ಎಂಬ ಹುಡುಗಾಟಿಕೆಯ ಮಾತನ್ನು ನಾವು ಕೇಳಿದ್ದೆವು. ಸೋನಿಯಾ ಗಾಂಧಿಯವರು ಪ್ರಧಾನಿ ಆಗಿರದೇ ಇದ್ದರೂ ಅವರ ಪಕ್ಷದಲ್ಲಿ ಅವರೊಬ್ಬರೇ ಗಂಡಸರು ಎಂದು ಮತ್ತೆ ಅದೇ ಹುಡುಗಾಟಿಕೆಯ ಮಾತನ್ನು ಹೇಳಬಹುದು. ಜಯಾ ಹಾಗೂ ಮಮತಾ ಅವರೇನೂ ಕಡಿಮೆಯಿಲ್ಲ. ದೆಹಲಿ ಮುಖ್ಯಮಂತ್ರಿ ಶಿಲಾ ದೀಕ್ಷಿತ್ ಅವರ ಪ್ರಭಾವವೂ ಕಡಿಮೆಯಲ್ಲ. ಒಂದು ಸಾರಿ ಗೆದ್ದು ಉನ್ನತ ಹುದ್ದೆ ಹಿಡಿದ ಹೆಣ್ಣು ಮಗಳಿಗೆ ಪುರುಷ ಸಾಷ್ಟಾಂಗ ಹಾಕುವಷ್ಟು ಮಣಿದು ಬಿಡುತ್ತಾನೆ. ಆದರೆ, ಮೇಲೆ ಬರಬೇಕು ಎನ್ನುವ ಹೆಣ್ಣು ಮಗಳನ್ನು ಆತನೇ ತಲೆ ಮೊಟಕಿ ಕೆಳಗೆ ತಳ್ಳುತ್ತಾನೆ!

ಮೂಲತಃ ಗಂಡಸರದು ಪಾಳೆಗಾರನ ಮನಸ್ಥಿತಿ. ಆತ ಹೆಣ್ಣನ್ನು ಆಸ್ತಿ ಎಂದೇ ಭಾವಿಸುತ್ತಾನೆ. ಹಳ್ಳಿಗಾಡಿನ ಹೆಣ್ಣು ಮಕ್ಕಳ ಸ್ಥಿತಿ ನೋಡಿದರೆ ಸಾಕು ಇದು ಅರ್ಥವಾಗುತ್ತದೆ. ಹಾಗೆಂದು ಪೇಟೆಯಲ್ಲಿ ಇದೇನು ಬಹಳ ಉತ್ತಮವಾಗಿಲ್ಲ. ಆಕೆಯನ್ನು ಹುಟ್ಟಿದಾಗಿನಿಂದ

ಬೆಳೆಸುವ ಸ್ಥಿತಿಯಲ್ಲಿಯೇ ತಾರತಮ್ಯ ಇದೆ. ಹುಟ್ಟಡಗಿಸುವುದರಲ್ಲಿಯೂ ಅದೇ ತಾರತಮ್ಯ ಇದೆ. ಹಳ್ಳಿಯಲ್ಲಿ ಆಕೆ ಕೂಲಿ ಕೆಲಸ ಮಾಡಿಕೊಂಡೇ ಬದುಕು ಸಾಗಿಸಬೇಕು. ಬೆಳಿಗೆ ಎದ್ದು ಕಾಡಿಗೆ ಹೋಗಿ ಉರುವಲು ತಂದು ಒಲೆ ಉರಿಸಬೇಕು. ಅಡುಗೆ ಮಾಡಿ ಬಡಿಸಬೇಕು. ಪುರುಷನದು ಹೊರಗಿನ ಜಗತ್ತು. ಹೆಣ್ಣಿಗೆ ಅಡುಗೆ ಮನೆಯೇ ಜಗತ್ತು. ಪಾಳೆಗಾರ ಪುರುಷ ಹೆಣ್ಣನ್ನು ನೋಡುವ ಇನ್ನೊಂದು ದೃಷ್ಟಿ ಆಕೆ ಒಂದು ಭೋಗದ ವಸ್ತು ಎಂದು. ಇದನ್ನು ಒಪ್ಪಿಕೊಳ್ಳುವಂಥ ಒಂದು ಅಸಹಾಯಕ ಮನಸ್ಥಿತಿಯನ್ನೇ ನಾವು ಹೆಣ್ಣು ಶಿಶುವಿನಲ್ಲಿ ಹುಟ್ಟಿ ಹಾಕಿಬಿಟ್ಟಿದ್ದೇವೆ. ಇದನ್ನೆಲ್ಲ ಮೀರಿ ಆ ಮಗು ಬೆಳೆದು ನಿಲ್ಲುವುದು ಒಂದು ದೊಡ್ಡ ಸಾಹಸ. ಆಕೆಯ ಜೀವನದಲ್ಲಿ ಒಂದು ದೊಡ್ಡ ಇತಿಹಾಸ.

ಪಂಚಾಯತ್ ರಾಜ್ ಆಡಳಿತ ವ್ಯವಸ್ಥೆಯಲ್ಲಿ ಅರ್ಧದಷ್ಟು ಸೀಟುಗಳನ್ನು ಹೆಣ್ಣು ಮಕ್ಕಳಿಗೆ ಮೀಸಲು ಇಟ್ಟುದು ಇಂಥ ಒಂದು ಐತಿಹಾಸಿಕ ತೀರ್ಮಾನ. ಅದಕ್ಕೆ ಅನುಸಾರವಾಗಿ ಈಗ ಅರ್ಧದಷ್ಟು ಸೀಟುಗಳಲ್ಲಿ ಹೆಣ್ಣು ಮಕ್ಕಳು ಗೆದ್ದು ಬರುತ್ತಿದ್ದರೂ ಬಹುತೇಕ ಕಡೆಗಳಲ್ಲಿ ಅವರೇ ನಿರ್ಣಯ ತೆಗೆದುಕೊಳ್ಳುವಂಥ ಸ್ಥಿತಿಯಲ್ಲಿ ಈಗಲೂ ಇಲ್ಲ. ಅದಕ್ಕೆ ಅವರು ಇನ್ನೂ ತಮ್ಮ ಅಧಿಕಾರವನ್ನು ಸಮರ್ಥಿಸಿಕೊಳ್ಳುವಷ್ಟು 'ಸಾಮಾಜಿಕ'ವಾಗಿ ಬೆಳೆಯದೇ ಇರುವುದು ಕಾರಣ ಆಗಿರಬಹುದು. ಎಲ್ಲಿಯೋ ಕೆಲವರು ಅಂಥ ಸ್ವತಂತ್ರ ಮನಸ್ಥಿತಿಯ ಹೆಣ್ಣು ಮಕ್ಕಳು ಸಿಗಬಹುದು. ಅದಕ್ಕೆ ಅವರ ಶೈಕ್ಷಣಿಕ ಮಟ್ಟ, ಕುಟುಂಬದ ಹಿನ್ನೆಲೆ ಇತ್ಯಾದಿ ಕಾರಣ ಆಗಿರಬಹುದು. ಅದೆಲ್ಲ 'ಅಪವಾದ ಎನ್ನುವಂಥ ಸ್ಥಿತಿಯೇ ಈಗಲೂ ಇದೆ.

ಆದರೂ ಎಲ್ಲ ಕೊರತೆಗಳ ನಡುವೆ ಇದು ಒಂದು ಬೆಳೆಯಬೇಕಾದ, ಉಳಿಯಬೇಕಾದ ಪ್ರಕ್ರಿಯೆ. ಪಂಚಾಯತ್ ಸಂಸ್ಥೆಗಳಲ್ಲಿ ಅರ್ಧದಷ್ಟು ಹೆಣ್ಣು ಮಕ್ಕಳು ಗೆದ್ದು ಬಂದು ಒಟ್ಟು ಆಡಳಿತ ವ್ಯವಸ್ಥೆಯ ಶುಚಿತ್ವಕ್ಕೆ, ದಕ್ಷತೆಗೆ ಒಂದಿಷ್ಟು ಕೊಡುಗೆ ಕೊಡಬಹುದಾದರೆ ಅದು ಸಂಸತ್ತಿನಲ್ಲಿ, ಶಾಸಕಾಂಗದಲ್ಲಿಯೂ ಸಾಧ್ಯವಾಗಬೇಕು. ಹೆಣ್ಣು ಮಕ್ಕಳಿಗೆ ಶೇ 33 ರಷ್ಟು ಮೀಸಲಾತಿ ಕೊಡುವ ಸಂವಿಧಾನದ 84 ನೇ ತಿದ್ದುಪಡಿ ಮಸೂದೆ 19 ವರ್ಷಗಳಿಂದ ನನೆಗುದಿಗೆ ಬಿದ್ದಿದ್ದರೆ ಅದಕ್ಕೆ ರಾಜಕೀಯದಲ್ಲಿ ಶುಚಿತ್ವ ಮತ್ತು ದಕ್ಷತೆ ಬರುವುದು ಬೇಡ ಎಂಬ ಮನಸ್ಥಿತಿಯೂ ಕಾರಣ ಆಗಿರಬಹುದೇ? ಅಥವಾ ಹಾಗೆಂದು ಅರ್ಥ ಮಾಡಿಕೊಳ್ಳಬಹುದೇ? ಬಿಜೆಪಿ ಸರ್ಕಾರದಲ್ಲಿ ಇಂಧನ ಸಚಿವೆಯಾಗಿದ್ದ ಶೋಭಾ ಕರಂದ್ಲಾಜೆ ಸಂಪುಟ ಸಭೆಯಲ್ಲಿ ತಮ್ಮ ಖಾತೆ ಬಿಟ್ಟು ಮತ್ತೊಂದು ಖಾತೆಯ ವಿಷಯಗಳ ಬಗ್ಗೆ ಚರ್ಚೆ ಮಾಡಿದರೆ ಅದನ್ನು ಅಧಿಕ ಪ್ರಸಂಗ ಎಂದು ಭಾವಿಸಲಾಗುತ್ತಿತ್ತಂತೆ. ಇದೂ ಒಂದು ಮನಸ್ಥಿತಿ. ಹೆಣ್ಣು ಮಕ್ಕಳಿಗೆ ಏನು ಗೊತ್ತಿರುತ್ತದೆ ಎಂದು ಸಂಶಯಿಸುವ ಮನಸ್ಥಿತಿ ಇದು. ಗೊತ್ತಿದೆ ಎಂದು ಅವರು ತೋರಿಸಲು ಹೋದರೆ ಅದನ್ನು ಅಧಿಕ ಪ್ರಸಂಗ ಎಂದು ಹಣೆಪಟ್ಟಿ ಹಚ್ಚಿಬಿಟ್ಟು ಅವರನ್ನು ಅಧೈರ್ಯಗೊಳಿಸಿ ಬಿಟ್ಟರೆ ಆಯಿತಲ್ಲ? ಹೆಣ್ಣು ಮಗು ಇನ್ನೂ ಎಂಥ ಎಷ್ಟು ಅಡೆತಡೆಗಳನ್ನು ದಾಟಿ ಮುಂದೆ ಬರಬೇಕು? ನಮ್ಮದು ಅರ್ಧನಾರೀಶ್ವರ ಕಲ್ಪನೆಯ ದೇಶ ಅಲ್ಲವೇ? ಎಂಥ ವಿಪರ್ಯಾಸ?

21.04.2013

# ಭಾಷೆ–ಮಾಧ್ಯಮ ಮುಂತಾಗಿ

# ಕನ್ನಡ ಪ್ರೇಮ:

# ಭ್ರಮೆ ಮತ್ತು ವಾಸ್ತವ

ಮತ್ತೆ ಅದೇ ಪ್ರಶ್ನೆ, ಈ ಸಾರಿಯ ಮಡಿಕೇರಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ನಾ.ಡಿಸೋಜ ಅವರೂ ಅದೇ ಪ್ರಶ್ನೆ ಎತ್ತಿದ್ದಾರೆ. 'ಕನ್ನಡ ಉಳಿದೀತೆ' ಎಂಬ ಪ್ರಶ್ನೆ ಅದು. ನಾರ್ಬರ್ಟ್್ರ ಡಿಸೋಜ ಸಜ್ಜನ ಸಾಹಿತಿ, ಅವರು ಯಾರನ್ನಾದರೂ ಎಂದಾದರೂ ನೋಯಿಸಿದ್ದನ್ನು ಕಾಣೆ. ಕನ್ನಡ ಭಾಷೆಯ ಕಾರಣಕ್ಕಾಗಿಯೇ ಸಮ್ಮೇಳನದ ಕೊನೆಯ ದಿನ ಅವರು 'ಆಸೆಬುರುಕ ಸಾಹಿತಿಗಳನ್ನೂ ತರಾಟೆಗೆ ತೆಗೆದುಕೊಂಡಿದ್ದಾರೆ! ಸಾತ್ವಿಕರ ಸಿಟ್ಟಿಗೆ ಅರ್ಥ ಮತ್ತು ಮೌಲ್ಯ ಎರಡೂ ಜಾಸ್ತಿ. ಕನ್ನಡದ ಪರವಾಗಿ ಹೀಗೆ ಧ್ವನಿ ಎತ್ತಿದ ಮೊದಲಿಗರೂ ಅವರೇನಲ್ಲ. ಬಹುಶಃ ಕೊನೆಯವರೂ ಆಗಿರಲಾರರು. ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆದಾಗಲೆಲ್ಲ ಕನ್ನಡ ಭಾಷೆ ಉಳಿಸಬೇಕು ಎಂಬ ಕೂಗು ಹಿಂದೆಯೂ ಕೇಳಿ ಬರುತ್ತಿತ್ತು. ಮುಂದೆಯೂ ಕೇಳಿ ಬರುತ್ತದೆ. ಬಹುಶಃ ಅದಕ್ಕೆ ಕೊನೆ ಇರಲಾರದು.

ದೇಶಕ್ಕೆ ಸ್ವಾತಂತ್ರ್ಯ ಬರುವುದಕ್ಕಿಂತ ಮುಂಚೆಯೇ 1941ರಲ್ಲಿ ಎ.ಆರ್.ಕೃಷ್ಣಶಾಸ್ತ್ರಿಗಳು ಹೈದರಾಬಾದಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿ ಕನ್ನಡ ಭಾಷೆ ಎದುರಿಸುವ ಆತಂಕಗಳನ್ನು ಕುರಿತು ಆಡಿದ ಮಾತುಗಳನ್ನು ಯಾರೂ ಮರೆತಿರಲಾರರು. ಶಾಸ್ತ್ರಿಗಳು ಹೇಳಿದ್ದರು: 'ನಮ್ಮ ದೇಶದಲ್ಲಿ ಬೌದ್ಧ ಧರ್ಮ ಖಿಲವಾಗಿ ಹೋದಂತೆ, ನಷ್ಟವಾಗಿ ಹೋದಂತೆ ಸಂಸ್ಕೃತವೂ ಆಗಿ ಹೋಗುವುದಾದರೆ, ಅದು ಹೊರದೇಶಗಳಲ್ಲಿ ಬದುಕಿರುತ್ತದೆ. ಬಾಳುತ್ತಿರುತ್ತದೆ. ಆದರೆ, ಕನ್ನಡ? ಕನ್ನಡಿಗರೇ, ನಿಮ್ಮ ಕನ್ನಡವನ್ನು ಇಂಡಿಯ ದೇಶದ ದಕ್ಷಿಣ ಭಾಗದಲ್ಲಿ ಒಂದು ಅಂಗೈ ಅಗಲ ಬಿಟ್ಟರೆ ಮತ್ತೆಲ್ಲಿಯೂ ನೋಡಲಾರಿರಿ. ನೀವು ಅದನ್ನು ಅಲಕ್ಷ ಮಾಡಿದರೆ ಮಿಕ್ಕ ಯಾವ ದೇಶದ ಯಾವ ಜನರೂ ಅದನ್ನು ಎತ್ತಿ ಹಿಡಿಯಲಾರರು. ಅದು ಹೋದರೆ ಹೋಗಲಿ ಎನ್ನುವ ಹಾಗಿದ್ದರೆ, ಈ ಕಡೆ ಬಂಗಾಲ ಕೊಲ್ಲಿ ಇದೆ. ಆ ಕಡೆ ಅರಬ್ಬಿ ಸಮುದ್ರ ಇದೆ; ಗುಡಿಸಿ ಹಾಕಿಬಿಡಿ. ಇತರ ಭಾಷೆಗಳು ಒತ್ತಿಕೊಂಡು ಬರಲಿ, ಆಕ್ರಮಿಸಿಕೊಳ್ಳಲಿ!"

ಅವರು ಒಬ್ಬ ದೊಡ್ಡ ಸಂಸ್ಕೃತ ವಿದ್ವಾಂಸರಾಗಿದ್ದರು. ಆದರೂ ಆ ಭಾಷೆ ಖಿಲವಾಗಿ, ನಷ್ಟವಾಗಿ ಹೋಗುವುದಾದರೆ ಹೋಗಲಿ' ಎನ್ನಲು ಅವರಿಗೆ ಅಳುಕೇನೂ ಇರಲಿಲ್ಲ. ಆದರೆ, ಕನ್ನಡ ಭಾಷೆ ಬಗೆಗಿನ ಅವರ ಅಳುಕು ನಿಜವಾಗಿದೆ. ಕನ್ನಡಿಗರಿಗೇ ಕನ್ನಡ ಭಾಷೆ ಬೇಕಾಗಿದೆ ಎಂದು ಅನಿಸುವುದಿಲ್ಲ. ಇತ್ತ ಬಂಗಾಲ ಕೊಲ್ಲಿಗೆ, ಅತ್ತ ಅರಬ್ಬಿ ಸಮುದ್ರಕ್ಕೆ ಕನ್ನಡವನ್ನು ನಾವು ತಳ್ಳುವ ಕಾಲ ಬಹಳ ದೂರವೇನೂ ಇಲ್ಲ. ಅಥವಾ ಅದೇ ನಿಧಾನವಾಗಿ ಸರಿದು ಹೋಗಿ ಬಿಡಬಹುದು.

ಶಾಸ್ತ್ರಿಗಳ ಮಾತು ಗಮನಿಸಿದರೆ ನಮಗೆ ಆಗಲೇ ಇಂಗ್ಲಿಷ್‌ನ ಮೋಹ ಅಮರಿಕೊಳ್ಳತೊಡಗಿತ್ತು. ಕೃಷ್ಣಶಾಸ್ತ್ರಿಗಳಷ್ಟೇ ಹಿರಿಯರಾದ ವಿ.ಸೀತಾರಾಮಯ್ಯನವರೂ 'ದೊಡ್ಡ ಬೆಳಕಿನ ಮೋಹದಿಂದ, ಕಾಣುವ ತಮ್ಮ ಕಣ್ಣನ್ನು ಕುರುಡು ಮಾಡಿಕೊಂಡವರ ಬಗ್ಗೆ ಮರುಕ ಪಟ್ಟಿದ್ದರು. ದೊಡ್ಡ ಬೆಳಕಿನ ಮೋಹ ಎಂದರೆ ಇಂಗ್ಲಿಷ್ ಮೋಹ ಎಂದು ನಾವು ಓದಿಕೊಳ್ಳಬೇಕು! ತಮಗೆ 1965ರಲ್ಲಿ ಆಗಿನ ಮೈಸೂರು ಸರ್ಕಾರ 'ರಾಷ್ಟ್ರಕವಿ' ಪ್ರಶಸ್ತಿ ಕೊಟ್ಟಾಗ ಕುವೆಂಪು ಮಾಡಿದ ಭಾಷಣವೂ ಕನ್ನಡಿಗರ ಇಂಗ್ಲಿಷ್ ಮೋಹದ ಕುರಿತೇ ಇತ್ತು. ಆಗ ಅವರು ಹೇಳಿದ್ದರು: 'ಇಂಗ್ಲಿಷ್ ಭಾಷೆ ಬಲಾತ್ಕಾರದ ಸ್ಥಾನದಿಂದ ಐಚ್ಛಿಕ ಸ್ಥಾನಕ್ಕೆ ನಿಯಂತ್ರಣಗೊಳ್ಳದೇ ಇದ್ದರೆ, ಇಂಗ್ಲಿಷ್ ಶಿಕ್ಷಣ ತೊಲಗಿ ಪ್ರಾದೇಶಿಕ ಭಾಷೆಗೆ ಆ ಸ್ಥಾನ ಲಭಿಸದೇ ಇದ್ದರೆ ನಮ್ಮ ದೇಶ ಹತ್ತೇ ವರ್ಷಗಳಲ್ಲಿ ಸಾಧಿಸಬೇಕಾದುದನ್ನು ಇನ್ನೊಂದು ನೂರು ವರ್ಷ ಸಾಧಿಸಲಾರದೇ ನಿತ್ಯ ರೋಗಿಯಂತಿರಬೇಕಾಗುತ್ತದೆ... ನಮ್ಮ ಕಾರ್ಖಾನೆಗಳನ್ನೆಲ್ಲ ನಿಲ್ಲಿಸಿ, ಅಣೆಕಟ್ಟುಗಳನ್ನು ತಡೆಹಿಡಿದು, ಪ್ರಯೋಗ ಶಾಲೆ ಸಂಶೋಧನಾಗಾರಗಳನ್ನೆಲ್ಲ ವಜಾ ಮಾಡಿ ಹಲವು ಪಂಚ ವಾರ್ಷಿಕ ಯೋಜನೆಗಳ ಹಣವನ್ನೆಲ್ಲ ಇಂಗ್ಲಿಷ್ ಸ್ಟಾಂಡರ್ಡ್ ಅನ್ನು ಉತ್ತಮಗೊಳಿಸುವುದಕ್ಕಾಗಿಯೇ ವೆಚ್ಚ ಮಾಡಿದರೂ, ಇನ್ನೂ ನೂರು ವರ್ಷಗಳ ಅನಂತರವೂ ನಮ್ಮ ಮಕ್ಕಳ ಇಂಗ್ಲಿಷ್‌ನ ಜ್ಞಾನ ಈಗಿರುವುದಕ್ಕಿಂತ ಮೇಲಕ್ಕೇರುವುದಿಲ್ಲ...'

ಆದರೆ, ನಾವು ಇಂಥ ಯಾವ ದ್ರಷ್ಟಾರರ ಮಾತನ್ನೂ ಕೇಳುವ ಸ್ಥಿತಿಯಲ್ಲಿ ಇಲ್ಲ. ಕನ್ನಡ ಭಾಷೆ ಮತ್ತು ಕನ್ನಡ ಮಾಧ್ಯಮದ ಬಗ್ಗೆ ನಮಗೆ ಕೀಳರಿಮೆ ಇದೆ. ಇಂಗ್ಲಿಷ್ ಭಾಷೆ ಮತ್ತು ಮಾಧ್ಯಮದ ಬಗ್ಗೆ ನಮಗೆ ಎಲ್ಲಿಲ್ಲದ ಒಲವು ಇದೆ. ಇದು ಶಿಕ್ಷಿತ ವರ್ಗದ ಮಾತು ಮಾತ್ರವಲ್ಲ. ಮನೆಗೆ ಕೆಲಸಕ್ಕೆ ಬರುವ ಹಳ್ಳಿಯ ಹೆಣ್ಣು ಮಗಳಿಗೂ, ತರಕಾರಿ ತರುವ ಗಂಡು ಮಗನಿಗೂ ಅದೇ ಭ್ರಮೆ; ಕಣ್ಣ ಪೊರೆ.

ನಾನು ಬಿ.ಎ ಓದಿದ್ದು 1970ರ ದಶಕದಲ್ಲಿ. ಕುವೆಂಪು ಅವರ 'ಕನ್ನಡಕ್ಕಾಗಿ ಕೈ ಎತ್ತು...' ಓದಿ 'ಉಗ್ರ' ಕನ್ನಡ ಅಭಿಮಾನ ಬೆಳೆಸಿಕೊಂಡವನು. ನಮ್ಮ ಕನ್ನಡ ಪ್ರೇಮವನ್ನು ಜವರೇಗೌಡರು, ಹಾ.ಮಾ.ನಾಯಕರು ಮೊರೆದವರು; ಪೋಷಿಸಿದವರು. ಇಂಗ್ಲಿಷ್ ಅನ್ನು ಒಂದು ಮಾಧ್ಯಮವಾಗಿ ಕಲಿಯುವುದಕ್ಕೂ ಭಾಷೆಯಾಗಿ ಕಲಿಯುವುದಕ್ಕೂ ಇರುವ ವ್ಯತ್ಯಾಸವನ್ನು ಜವರೇಗೌಡರು ಮತ್ತು ನಾಯಕರಷ್ಟು ಬಿಡಿಸಿ ಹೇಳಿದವರು ಬೇರೆ ಯಾರೂ ಇರಲಾರರು. ಕನ್ನಡ ಮಾಧ್ಯಮದಲ್ಲಿಯೇ ಓದಬೇಕು ಎಂದು ನಾನೂ ಹಟ ಹಿಡಿದೆ. ಆಗಲೇ

ಕನ್ನಡದಲ್ಲಿ ಸಹಿ ಮಾಡಲೂ ಶುರು ಮಾಡಿದೆ. ನನ್ನ ವಾರಿಗೆಯವರೆಲ್ಲ ಹಾಗೆಯೇ. ಅವರೆಲ್ಲ ಕನ್ನಡದಲ್ಲಿಯೇ ಸಹಿ ಮಾಡುವುದನ್ನು ರೂಢಿ ಮಾಡಿಕೊಂಡರು. ಕನ್ನಡದ ಪ್ರೇಮ ನಮಗೆ ಒಂದು ವ್ರತವಾಗಿತ್ತು. ಒಂದು ದೀಕ್ಷೆಯಾಗಿತ್ತು. ಬಿ.ಎ ಓದುವಾಗ ಮಾನವಿಕ ವಿಷಯಗಳನ್ನೂ ನಾನು ಕನ್ನಡ ಮಾಧ್ಯಮದಲ್ಲಿಯೇ ಓದಿದೆ; ಪರೀಕ್ಷೆಯನ್ನು ಬರೆದೆ. ಆದರೆ, ಇಂಗ್ಲಿಷ್ ಮಾಧ್ಯಮದಲ್ಲಿ ಬರೆಯುತ್ತಿದ್ದ ನನ್ನ ಸಹಪಾಠಿಗಳಿಗಿಂತ ಕನ್ನಡ ಮಾಧ್ಯಮದಲ್ಲಿ ಬರೆದ ನನಗೆ ಕಡಿಮೆ ಅಂಕಗಳು ಬರುತ್ತಿದ್ದುವು. ಹಾಗಾದರೆ, ಜವರೇಗೌಡರು, ನಾಯಕರು ಹೇಳುವುದು ಸರಿಯಲ್ಲವೇ ಎಂದು ಯೋಚನೆ ಶುರುವಾಯಿತು. ಕನ್ನಡ ಮಾಧ್ಯಮದಲ್ಲಿ ಓದಿದರೆ ಬೇಗ ಅರ್ಥವಾಗುತ್ತದೆ ಮತ್ತು ಹೆಚ್ಚು ಅರ್ಥವಾಗುತ್ತದೆ. ಅರ್ಥವಾದುದನ್ನು ಬರೆಯಲೂ ಸುಲಭವಾಗುತ್ತದೆ ಎಂದು ಅವರು ಸರಿಯಾಗಿಯೇ ಹೇಳಿದ್ದರು.

ಆದರೆ, ಇಲ್ಲಿ ವ್ಯತ್ಯಾಸವಾಗಿತ್ತು. ಇಂಗ್ಲಿಷ್ ಮಾಧ್ಯಮದಲ್ಲಿ ಬರೆದವರಿಗೆ ಹೆಚ್ಚು ಅಂಕಗಳು ಸಿಗುತ್ತಿದ್ದುವು. ಅವರೆಲ್ಲರ ಇಂಗ್ಲಿಷ್ ಹೇಗೆ ಇತ್ತು ಎಂದು ನನಗೆ ಗೊತ್ತಿತ್ತು. ಅಂದರೆ ಮೌಲ್ಯಮಾಪಕರು ಕನ್ನಡ ಮಾಧ್ಯಮದಲ್ಲಿ ಬರೆದ ಉತ್ತರ ಪತ್ರಿಕೆಗಳಿಗೆ ಹೆಚ್ಚು ಅಂಕಗಳನ್ನು ಕೊಡುತ್ತಿರಲಿಲ್ಲ. ವಿ.ಸೀ ಅವರ ಮಾತಿನಲ್ಲಿ ಹೇಳುವುದಾದರೆ 'ಪ್ರದೇಶ ಭಾಷೆಯಲ್ಲಿ ಬರೆಯುವವರು ಪತಿತರು' ಎಂಬ ಭಾವನೆ ನಮ್ಮ ಮೌಲ್ಯಮಾಪಕರಿಗೆ ಇತ್ತೇನೋ? ನನಗೆ ಅವಮಾನ ಆದಂತೆ ಆಯಿತು. ವಾಚಕರ ವಾಣಿಗೆ ಪತ್ರ ಬರೆದೆ. ಕರ್ನಾಟಕ ವಿಶ್ವವಿದ್ಯಾಲಯದ ಆಗಿನ ಕುಲಪತಿಗಳಾದ ಡಾ.ಆರ್.ಸಿ.ಹಿರೇಮಠ ಅವರಿಗೂ ಕನ್ನಡ ಮಾಧ್ಯಮದಲ್ಲಿ ಓದುವ ವಿದ್ಯಾರ್ಥಿಗಳಿಗೆ ಆಗುತ್ತಿರುವ ಅನ್ಯಾಯದ ಕುರಿತು ಪತ್ರ ಬರೆದೆ. ಅವರು ನನಗೆ ಏನೋ ಸಮಾಧಾನ ಹೇಳಿ ಉತ್ತರ ಬರೆದರು. ಪರಿಸ್ಥಿತಿ ಬದಲಾಗಲಿಲ್ಲ; ನನ್ನ ಹಟವೂ ಕಡಿಮೆ ಆಗಲಿಲ್ಲ. ಕನ್ನಡದಲ್ಲಿಯೇ ಸ್ನಾತಕೋತ್ತರ ಪದವಿಯನ್ನೂ ತೆಗೆದುಕೊಂಡೆ. ಅಲ್ಲಿಯೂ ಕನ್ನಡ ಎಂ.ಎ ಮಾಡುವವರಿಗೆ ಕಡಿಮೆ ಅಂಕಗಳೇ ಬರುತ್ತಿದ್ದುವು. ಪ್ರಥಮ ದರ್ಜೆಯಲ್ಲಿ ಪಾಸಾಗುವುದು ಎಂದರೇ ದೊಡ್ಡ ಸಾಧನೆ ಮಾಡಿದಂತೆ, ಪದವಿ ಮುಗಿಸಿ ಹೊರಗೆ ಬಂದ ನಂತರ ನೌಕರಿ ಹಿಡಿಯುವುದು ನಮಗೆ ಕಷ್ಟವಾಗುತ್ತಿತ್ತು. ಏಕೆಂದರೆ ಬೇರೆ ವಿಷಯಗಳಲ್ಲಿ ಪದವಿ ಮಾಡಿದವರಿಗೆ ಹೆಚ್ಚು ಅಂಕಗಳು ಸಿಗುತ್ತಿದ್ದುವು. ಬಹುಶಃ ತಮ್ಮ ಗುರುಗಳು ಕೊಟ್ಟ ಕಡಿಮೆ ಅಂಕಗಳ ಸೇಡನ್ನು ನಮ್ಮ ಗುರುಗಳು ನಮ್ಮ ಮೇಲೆ ತೀರಿಸಿಕೊಳ್ಳುತ್ತಿದ್ದರೋ ಏನೋ!

ನನಗಿಂತ ಎರಡು ವರ್ಷ ಮುಂಚೆಯೇ ಕನ್ನಡದಲ್ಲಿ ಸ್ನಾತಕೋತ್ತರ ಪದವಿ ಪಡೆದವರು ನೌಕರಿ ಸಿಗದೇ ಆಗಲೇ ರಾಜ್ಯ ಲೋಕಸೇವಾ ಆಯೋಗದ ಕಚೇರಿ ಎದುರು ಬೂಟು ಪಾಲಿಷ್ ಮಾಡಿದ್ದರು. ನಮಗೇನೂ ಭಾರಿ ದೊಡ್ಡ ಆಸೆಗಳು ಇರಲಿಲ್ಲ. ಯಾವುದಾದರೂ ಒಂದು ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕ ಆದರೆ ಸಾಕು ಎಂದುಕೊಂಡಿದ್ದೆವು. ಆಸೆ ಈಡೇರಲಿಲ್ಲ. ಮತ್ತೆ ಅವಮಾನ ಆದಂತೆ ಆಯಿತು. ಕೇವಲ ಪ್ರೀತಿಯಿಂದ, ಅಭಿಮಾನದಿಂದ ನಾವು ಕನ್ನಡದ ಕೈ ಹಿಡಿದೆವು. ಆದರೆ, ಅದು ನಮ್ಮ ಕೈ

ಬಿಡುತ್ತಿದೆ ಎಂದು ಭಯವಾಯಿತು. ನನ್ನ ಅನೇಕ ವಾರಿಗೆಯವರಿಗೂ ಇದೇ ಅನುಭವವಾಯಿತು. ದೇವರ ದಯದಿಂದ ನಾವೆಲ್ಲ ಪ್ರಜಾವಾಣಿ ಸೇರಿಕೊಂಡೆವು. ಆದರೆ, ಆಗಾಗಲೇ ನಾನು ಎಂ.ಎ ಮಾಡಿ ನಾಲ್ಕು ವರ್ಷ ಆಗಿತ್ತು. ದೇವರ ದಯ ಇಲ್ಲದ ನನ್ನ ಅನೇಕ ಸಹಪಾಠಿಗಳು ಏನಾಗಿ ಹೋದರೋ ಗೊತ್ತಾಗಲಿಲ್ಲ! ಈಗಲಂತೂ ಕನ್ನಡ ಎಂ.ಎ ಓದಿದವರ ಸ್ಥಿತಿ ಇನ್ನೂ ಕೆಟ್ಟದಾಗಿದೆ. ಆದರೆ, ವ್ಯತ್ಯಾಸವೇನು ಎಂದರೆ ನಾವು ಕನ್ನಡ ಸಾಹಿತ್ಯವನ್ನು ಚೆನ್ನಾಗಿ ಓದಿಕೊಂಡಿದ್ದರೂ ನಮಗೆ ಅಂಕ ಕೊಡುತ್ತಿರಲಿಲ್ಲ. ಈಗ ಮಾಸ್ತಿ ಎಂದರೆ ಏನು ಎಂದು ಕೇಳುವವರಿಗೆ ಶೇಕಡಾ 70-80 ಅಂಕಗಳು ಸಿಗುತ್ತವೆ! ಕನ್ನಡ ಎಂ.ಎ ಓದಿದವರಿಗೆ ಆಗಲೂ ಅನ್ಯಾಯ ಆಯಿತು. ಈಗಿನದಂತೂ ತೀರಾ ಅನ್ಯಾಯ!

ನನ್ನ ಮಕ್ಕಳನ್ನು ಶಾಲೆಗೆ ಸೇರಿಸುವ ವೇಳೆಗೆ ನನಗೆ ಕನ್ನಡ ಮಾಧ್ಯಮದ ಶಿಕ್ಷಣದಲ್ಲಿ ನಂಬಿಕೆ ಹೋಗಿರಲಿಲ್ಲ. ಈಗಲೂ ಹೋಗಿಲ್ಲ. ಆದರೆ, ಸೀದಾ ಹೋಗಿ ಅವರನ್ನು ಇಂಗ್ಲಿಷ್ ಮಾಧ್ಯಮ ಶಾಲೆಗೆ  ಹಾಕಿ ಬಂದೆ. 'ನಾನು ಕನ್ನಡ ಓದಿ ಪಡಿಪಾಟಲು ಪಟ್ಟುದು ಸಾಕು, ನೀವು ಬೇರೆ ಏನನ್ನಾದರೂ ಓದಿ'  ಎಂದು ಅವರ ಪಾಡಿಗೆ ಅವರನ್ನು ಬಿಟ್ಟು ಬಿಟ್ಟೆ. ನನ್ನ ವಾರಿಗೆಯ ಯಾರೂ ತಮ್ಮ ಮಕ್ಕಳನ್ನು  ಕನ್ನಡ ಎಂ.ಎಗೆ ಹಾಕಲಿಲ್ಲ ಎಂದು ನನಗೆ ಚೆನ್ನಾಗಿ ಗೊತ್ತಿದೆ. ಅವರ ಮಕ್ಕಳು ಕನ್ನಡ ಮಾಧ್ಯಮದಲ್ಲಿ ಕಲಿಯಲಿಲ್ಲ ಎಂದೂ ಗೊತ್ತಿದೆ. ಆದರೆ, ನಾವು ಬಿಡಿ ಕನ್ನಡದ ಲೇಖಕರು ಮಾಡಿದ  ತಪ್ಪು ಏನು ಎಂದರೆ ಅವರಲ್ಲಿಯೂ ಬಹುತೇಕರು ತಮ್ಮ ಮಕ್ಕಳನ್ನು ಆಂಗ್ಲ ಮಾಧ್ಯಮ ಶಾಲೆಗೇ ಹಾಕಿದರು. ಆದರೆ, ಅವರು ಅದನ್ನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳಲಿಲ್ಲ. ಜನರಿಗೆ ಕನ್ನಡ ಅನ್ನದ ಭಾಷೆ ಎಂದು ಅನಿಸಲಿಲ್ಲ ಎಂದು ಹೇಳಲು ಇಷ್ಟೆಲ್ಲ ಹೇಳಿದೆ. ಕನ್ನಡವನ್ನು ಹಟದಿಂದ ಓದಿದ ನಮಗೇ ಅದು ಅನ್ನದ ಭಾಷೆ ಎಂದು ಅನಿಸದೇ ಇದ್ದರೆ ಮನೆ ಕೆಲಸಕ್ಕೆ ಬರುವ ಹೆಂಗಸಿಗೆ, ತರಕಾರಿ  ಮಾರುವ ಗಂಡಸಿಗೆ ಏಕೆ ಅನಿಸಬೇಕು? ಅಭಿಮಾನ ಎಂದರೆ ಏನು? ಅದು ಹೇಗೆ ಬರುತ್ತದೆ? ಏಕೆ  ಬರುತ್ತದೆ? ಇವೆಲ್ಲ ಸುಲಭದ ಪ್ರಶ್ನೆಗಳು ಎಂದು ನಾನು ಅಂದುಕೊಂಡಿಲ್ಲ.

ಹೌದು, ಒಂದು ಭಾಷೆಯ ಮೇಲೆ ಸುಮ್ಮನೆ ಅಭಿಮಾನ ಬಂದು ಬಿಡುವುದಿಲ್ಲ. ಎಲ್ಲ ಕಡೆಯಿಂದ ಪರಭಾಷಾ ದಾಳಿ ಅನುಭವಿಸಿರುವ ಕರ್ನಾಟಕದಲ್ಲಿ ಕನ್ನಡ ಭಾಷೆಯ ಸ್ಥಿತಿ ಇನ್ನೂ ಶೋಚನೀಯವಾಗಿದೆ. ಕೆಲವು ವರ್ಷಗಳ ಹಿಂದೆ ಚೆನ್ನೈ ವಿಮಾನ ನಿಲ್ದಾಣದಲ್ಲಿ ಕಾಯುತ್ತ ಕುಳಿತಿದ್ದೆ.  ನನ್ನ ಹಿಂದಿನ ಸೀಟಿನಲ್ಲಿ ತಾಯಿ, ಮಗಳು ಮತ್ತು ಮೊಮ್ಮಗಳು ಕುಳಿತು ತಮ್ಮ ತಮ್ಮೊಳಗೆ  ಮಾತನಾಡಿಕೊಳ್ಳುತ್ತಿದ್ದರು. ಅವರು ಮೂವರೂ ತಮಿಳು ಭಾಷೆಯಲ್ಲಿಯೇ ಮಾತನಾಡುತ್ತಿದ್ದರು.  ಮತ್ತು ಅವರು ಮುಸ್ಲಿಮರಾಗಿದ್ದರು. ಕೇರಳದಲ್ಲಿಯೂ ಹೀಗೆಯೇ ಅಲ್ಲಿನ ಪ್ರಾದೇಶಿಕ ಭಾಷೆ ಎಲ್ಲರ ಮನೆ ಮಾತಿನ ಭಾಷೆಯೂ ಆಗಿದೆ. ಇದು ಅನ್ನದ ಭಾಷೆಯನ್ನು ಮೀರಿದ ಆತ್ಮದ ಭಾಷೆಯ ಅಭಿಮಾನ.

ಆದರೆ, ಕರ್ನಾಟಕದಲ್ಲಿ ಕನ್ನಡಕ್ಕೆ ಆ ಸ್ಥಾನ ಇಲ್ಲ. ಸಿಗುವಂತೆಯೂ ಕಾಣುವುದಿಲ್ಲ. ಸುಮ್ಮನೆ  ಸರ್ಕಾರಗಳು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಎಂದೆಲ್ಲ ಮಾಡಿದರೆ ಅದರಿಂದ ಕನ್ನಡಕ್ಕೆ ಮೂರು ಕಾಸಿನ ಪ್ರಯೋಜನ ಆಗುವುದಿಲ್ಲ. ಕರ್ನಾಟಕ ರಕ್ಷಣಾ ವೇದಿಕೆಯಂಥ

ಸಂಘಟನೆಗಳನ್ನು ಕಟ್ಟಿಕೊಂಡು ಹೋರಾಡುವವರಿಂದಲೂ ಕನ್ನಡಕ್ಕೆ ಏನಾದರೂ ಪ್ರಯೋಜನ ಆಗುತ್ತದೆ ಎಂದು ನನಗೆ ಯಾವತ್ತೂ ಅನಿಸಿಲ್ಲ. ಹಾಗಾದರೆ ಕನ್ನಡ ಉಳಿಯುತ್ತದೆಯೇ?

ಪ್ರೊ.ಜಿ.ವೆಂಕಟಸುಬ್ಬಯ್ಯ ಅವರಂಥ ಭಾಷಾ ವಿಜ್ಞಾನಿಗಳು ಭರವಸೆ ಕೊಡುವ ಹಾಗೆ ಕನ್ನಡ ಭಾಷೆ ಇನ್ನೂ ಸಾವಿರಾರು ವರ್ಷ ಸಾಯದೇ ಉಳಿಯಬಹುದು. ಅದಕ್ಕೆ ಭಾಷೆಗೆ ಇರುವ ಸಹಸ್ರಮಾನಗಳ ಶಕ್ತಿ ಕಾರಣವೇ? ಕನ್ನಡಿಗರ ಅಲ್ಪ ಸ್ವಲ್ಪ ಅಭಿಮಾನ ಕಾರಣವೇ? ಮತ್ತೆ ಅದೇ ಪ್ರಶ್ನೆ. ಬರೀ ಸಾಹಿತ್ಯ ಸಮ್ಮೇಳನಕ್ಕೆ ಮಾತ್ರ ಭಾಷೆಯ ಪ್ರಶ್ನೆ ಸೀಮಿತವೇ? ಉತ್ತರ ಯಾರ ಬಳಿ ಇದೆ?

12-1-2014

# ಕಲಿಕೆ ಮಾಧ್ಯಮ :

# ಈಗ ಯಾರನ್ನು ದೂರೋಣ?...

ಇದು ಈಗ ಗೋಡೆ ಮೇಲಿನ ಬರಹ, ಮಂಗಳವಾರದಿಂದ ಮೂರು ದಿನಗಳ ಕಾಲ ಸತಗ ಕೆಲ ಮನೆ ಕಂತು ಸುಮಂಗಳವಾರದಿಂದ ಮಧು ದಿನಗಳ ಕಾಲ ವಿಚಾರಣೆಯ ತೀರ್ಪು ಇನ್ನೂ ಹೊರ ಬಿದ್ದಿಲ್ಲ. ಆದರೆ, ಪೀಠದ ಐವರು ನ್ಯಾಯಮೂರ್ತಿಗಳು ರಾಜ್ಯ ಸರ್ಕಾರದ ಮಾತೃಭಾಷೆ ಪರ ವಾದವನ್ನು ಹೆಜ್ಜೆ ಹೆಜ್ಜೆಗೆ ತಡೆದು ನಿಲ್ಲಿಸಿ ಕೇಳಿದ ಪ್ರಶ್ನೆಗಳನ್ನು ನೋಡಿದರೆ ತೀರ್ಪು ಹೇಗೆ ಬರುತ್ತದೆ ಎಂದು ಊಹಿಸುವುದು ಕಷ್ಟವೇನೂ ಅಲ್ಲ. ಸಂವಿಧಾನ ಪೀಠ ವಿಚಾರಣೆಯ ಒಂದು ಹಂತದಲ್ಲಿ ನಿಮ್ಮ ಶಾಲೆಗಳು ಹೇಗೆ ಇವೆ ಎಂದು ನಿಮಗೆ ಗೊತ್ತಿದೆಯೇನು' ಎಂದು ರಾಜ್ಯದ ಅಡ್ವಕೇಟ್ ಜನರಲ್ ಅವರನ್ನು ಕೇಳಿದ ಪ್ರಶ್ನೆ ಬಹಳ ಮುಖ್ಯವಾದುದು.

ನಮ್ಮ ಸರ್ಕಾರಿ ಶಾಲೆಗಳು ಘೋರವಾಗಿವೆ. ವರ್ಗ ತಾರತಮ್ಯಕ್ಕೆ ಹೇಳಿ ಮಾಡಿಸಿದಂತೆ ಇವೆ. ನಲವತ್ತು-ನಲವತ್ತೈದು ವರ್ಷಗಳ ಹಿಂದೆ ನಾವು ಓದಿದ ಕನ್ನಡ ಶಾಲೆಗಳಿಗೂ ಈಗಿನ ಕನ್ನಡ ಶಾಲೆಗಳಿಗೂ ಬಹಳ ವ್ಯತ್ಯಾಸ ಇದೆ ಎಂದೇನೂ ಅನಿಸುತ್ತಿಲ್ಲ. ಮಧ್ಯಾಹ್ನ ತರಗತಿಗೆ ಬಿಡುವು ಬಿಟ್ಟ ಕೂಡಲೇ ಓಡಿ ಬಯಲಿಗೆ ಬಂದು ನಾವು ಹಗುರವಾಗುತ್ತಿದ್ದಂತೆಯೇ ಈಗಲೂ ಕನ್ನಡದ ಮಕ್ಕಳು ಹಗುರ ಆಗುತ್ತವೆ. ಹುಡುಗಿಯರ ಪಾಡು ಹೇಗೋ ಏನೋ? ಶಾಲೆಗಳ ಕೊಠಡಿ, ಆಟದ ಮೈದಾನ, ಪೀಠೋಪಕರಣ, ಪಾಠೋಪಕರಣ, ಕುಡಿಯುವ ನೀರು, ಶೌಚಸ್ಥಳ ಯಾವುದರಲ್ಲಿಯೂ ಸರ್ಕಾರಿ ಶಾಲೆಗಳು ಖಾಸಗಿ ಶಾಲೆಗಳ ಜತೆಗೆ ಪೈಪೋಟಿ ಮಾಡುವಂತೆಯೇ ಇಲ್ಲ. ಇಲ್ಲಿ ಬಡವರು ಮಾತ್ರ ಓದಲು ಸಾಧ್ಯ ಎಂದು ಸರ್ಕಾರವೇ ಹೇಳುವಂತೆ ಕಾಣುತ್ತದೆ. ಕಳೆದ ಇಪ್ಪತ್ತು ಮೂವತ್ತು ವರ್ಷಗಳಲ್ಲಿ ಬರೀ ಬೆಂಗಳೂರು,

ಮೈಸೂರು, ಮಂಗಳೂರಿನಂಥ ದೊಡ್ಡ ಊರುಗಳಿಗೆ ಮಾತ್ರ ಸೀಮಿತವಾಗಿದ್ದ ಆಂಗ್ಲ ಮಾಧ್ಯಮ ಶಾಲೆಗಳು ಈಗ ತಾಲ್ಲೂಕು ಬಿಡಿ, ಸಣ್ಣ ಪುಟ್ಟ ಹೋಬಳಿಗಳಿಗೂ ದಾಳಿ ಇಟ್ಟುದಕ್ಕೆ ಯಾರನ್ನು ಹೊಣೆ ಮಾಡೋಣ? ಇಂಗ್ಲಿಷ್ ಭಾಷೆ ನಮ್ಮ ಒಳಗೆ ಎಷ್ಟು ಆಳವಾಗಿ ಇಳಿದು ಬಿಟ್ಟಿದೆ ಎಂದರೆ ಅದು ನಮ್ಮನ್ನೇ ಆಳತೊಡಗಿದೆ; ನಾವು ಅದರ ದಾಸರಾಗಿದ್ದೇವೆ. ನಮ್ಮ ಎಲ್ಲ ಸಮಸ್ಯೆಗಳಿಗೆ ಆ ಭಾಷೆಯನ್ನು ಕಲಿಯುವುದು ಅಲ್ಲ, ಆ ಭಾಷೆಯಲ್ಲಿಯೇ ಕಲಿಯುವುದು ಪರಿಹಾರ ಎಂದು ನಮ್ಮೆಲ್ಲ ಪಾಲಕರು ಅಂದುಕೊಂಡು ಬಿಟ್ಟಿದ್ದಾರೆ. ಅವರ ಅನಿಸಿಕೆ ಎಷ್ಟು ಭದ್ರವಾಗಿ ಬೇರೂರಿಬಿಟ್ಟಿದೆ ಎಂದರೆ ಎರಡು ಅಕ್ಷರ ಇಂಗ್ಲಿಷ್‌ನಲ್ಲಿ ಮಾತನಾಡಿಬಿಟ್ಟರೆ ನಮ್ಮ ಮಕ್ಕಳು ಅಮೆರಿಕೆಗೇ ಹೋಗಿ ಬಿಡುತ್ತಾರೆ ಎಂದು ನಾವೆಲ್ಲ ಅಂದುಕೊಳ್ಳುತ್ತಿದ್ದೇವೆ. ಒಂದು ಕಡೆ ಅತ್ಯಂತ ಕೆಟ್ಟ ಸ್ಥಿತಿಯಲ್ಲಿ ಇರುವ ಸರ್ಕಾರಿ ಮಾತೃಭಾಷಾ ಮಾಧ್ಯಮ ಶಾಲೆಗಳು, ನೆಲದ ಮೇಲೆ ಕುಳಿತುಕೊಳ್ಳುವ, ಹರಕಲು, ಮಾಸಿದ ಅಂಗಿ ತೊಡುವ, ಸಿಂಬಳ ಸುರಿಸುವ ಮಕ್ಕಳು, ಇನ್ನೊಂದು ಕಡೆ ರಂಗು ರಂಗಿನ ಬಣ್ಣ ಬಳಿದ ಕಟ್ಟಡಗಳು, ಠಾಕು ಠೀಕು ಎನಿಸುವ ಪೀಠೋಪಕರಣಗಳು, ಠಸ್‌ಪುಸ್ ಎಂದು ಇಂಗ್ಲಿಷ್‌ನಲ್ಲಿ ಮಾತನಾಡುವ ಶಿಕ್ಷಕರು, ಸೊಗಸಾದ ಸಮವಸ್ತ್ರ, ಹೂಸು, ಟೈ ತೊಟ್ಟ ಮಕ್ಕಳು, ಅಂದವಾಗಿ ಮುದ್ರಿತವಾದ ಪಠ್ಯಪುಸ್ತಕಗಳು...ಎರಡರಲ್ಲಿ ಯಾವುದು ಆಕರ್ಷಕ ಎಂದು ಹೇಳುವುದು ಕಷ್ಟವೇನೂ ಅಲ್ಲ.

ಒಂದರಿಂದ ನಾಲ್ಕನೇ ತರಗತಿ ವರೆಗೆ ಕನ್ನಡ ಮಾಧ್ಯಮದ ಶಾಲೆಗಳನ್ನು ಆರಂಭಿಸುತ್ತೇವೆ ಎಂದು ಸರ್ಕಾರದಿಂದ ಅನುಮತಿ ಪಡೆದ ಖಾಸಗಿ ಶಿಕ್ಷಣ ಸಂಸ್ಥೆಗಳು ಬಹಿರಂಗವಾಗಿಯೇ ಒಂದರಿಂದ ನಾಲ್ಕನೇ ತರಗತಿ ವರೆಗೂ ಆಂಗ್ಲ ಮಾಧ್ಯಮದಲ್ಲಿಯೇ ಶಾಲೆಗಳನ್ನು ರಾಜಾರೋಷವಾಗಿಯೇ ನಡೆಸಿದುವು. ನಾವೂ ನಮ್ಮ ಮಕ್ಕಳನ್ನು ಅಂಥ ಶಾಲೆಗಳಿಗೆ ಕಳಿಸಿದೆವು. ಇಂಗ್ಲಿಷ್ ಮಾಧ್ಯಮದಲ್ಲಿ ಮಕ್ಕಳಿಗೆ ಕಲಿಸಬೇಕು ಎಂದು 'ನಮ್ಮ ಮಾತೃಭಾಷೆ ಇಂಗ್ಲಿಷ್' ಎಂದು ಈ ಶಾಲೆಗಳಿಗೆ ಬರೆದುಕೊಟ್ಟೂ ಬಿಟ್ಟೆವು. ಏಕೆಂದರೆ ನಮ್ಮ ಮಕ್ಕಳು ಇಂಗ್ಲಿಷ್ ಮಾಧ್ಯಮದಲ್ಲಿ ಓದುವುದು ನಮಗೆ ಬೇಕಿತ್ತು. ಜತೆಗೆ ಸರ್ಕಾರಿ ಶಾಲೆಗಳ ಬಡ ಮಕ್ಕಳಿಂದ ನಮ್ಮ ಮಕ್ಕಳನ್ನು ದೂರವೂ ಇಡಬೇಕಿತ್ತು. ಈಗ ಸುಪ್ರೀಂ ಕೋರ್ಟಿನ ಮುಂದೆ ಅಪರಾಧಿ ಸ್ಥಾನದಲ್ಲಿ ನಿಂತಿರುವ, ಮಾತೃಭಾಷೆ ಶಿಕ್ಷಣವನ್ನು ಸಮರ್ಥಿಸಿಕೊಳ್ಳುತ್ತಿರುವ ಸರ್ಕಾರ ಇಂಥ ಒಂದು ಅಸಮಾನ ಸಮಾಜ ತನ್ನ ಕಣ್ಣ ಮುಂದೆಯೇ ನಿರ್ಮಾಣ ಆಗುತ್ತಿದುದ್ದನ್ನು ಗಮನಿಸಬೇಕಿತ್ತು. ಸರ್ವರಿಗೂ ಸಮಾನ ಶಿಕ್ಷಣ ಸಿಗಬೇಕು ಎಂದು ಈಗ ವಾದ ಮಂಡಿಸುತ್ತಿರುವ ಸಾಹಿತಿಗಳೂ ಅದನ್ನು ಗಮನಿಸಬೇಕಿತ್ತು. ಯಾರೂ ಗಮನಿಸಲಿಲ್ಲ. ಗಮನಿಸಿದರೂ ಈಗಿನ ಹಾಗೆ ಧ್ವನಿ ಎತ್ತಲಿಲ್ಲ. ಎಲ್ಲರೂ ಕನ್ನಡ ಅಥವಾ ಮಾತೃಭಾಷೆ ಶಿಕ್ಷಣದ ಮಹತ್ವದ ಬಗ್ಗೆ ಆಗ ಮಾತನಾಡಿದರು, ಆದರೆ, ಕನ್ನಡ ಮಾಧ್ಯಮದಲ್ಲಿ ಕಲಿಸುವ ಸರ್ಕಾರಿ ಶಾಲೆಗಳಿಗೂ ಇಂಗ್ಲಿಷ್ ಮಾಧ್ಯಮದಲ್ಲಿ ಕಲಿಸುವ ಖಾಸಗಿ ಶಾಲೆಗಳಿಗೂ ಹೆಚ್ಚುತ್ತಿರುವ ಭೌತಿಕ ಅಂತರ ಅವರ ಕಣ್ಣಿಗೆ ಕಾಣಲಿಲ್ಲ. ವಿದ್ಯಾವಂತರಿಗೆ, ಅಧಿಕಾರಿಗಳಿಗೆ ಮತ್ತು ರಾಜಕೀಯ ಮುಂದಾಳುಗಳಿಗೆ ಹೇಗೂ ಈ ಅಂತರ ಕಾಣುತ್ತಲೇ ಇರಲಿಲ್ಲ. ಕೆಲವು ವರ್ಷಗಳ ಹಿಂದೆ ಪಶ್ಚಿಮ ಬಂಗಾಳದ ಒಬ್ಬ ಐಎಎಸ್ ಅಧಿಕಾರಿ ಶಿಕ್ಷಣ ಇಲಾಖೆಯ ಕಾರ್ಯದರ್ಶಿಯಾಗಿದ್ದರು.

ನಮ್ಮ ಹಳ್ಳಿಗಾಡಿನ ಮಕ್ಕಳು ಈ ವಸತಿ ಶಾಲೆಗಳಲ್ಲಿ, ಇಂಗ್ಲಿಷ್ ಮಾಧ್ಯಮದಲ್ಲಿ ಓದುತ್ತಿವೆ. ಸರ್ಕಾರಿ ಶಾಲೆಗಳಿಗೆ ದಿಕ್ಕಿಲ್ಲದ, ದೆಸೆಯಿಲ್ಲದ ಮಕ್ಕಳು ಮಾತ್ರ ಬರುತ್ತಿವೆ. ನಾವು ಎಂಥ ಅಸಮಾನ ಸಮಾಜವನ್ನು ನಿರ್ಮಾಣ ಮಾಡಿದ್ದೇವೆ ಎಂದರೆ ಸರ್ಕಾರಿ ಶಾಲೆಗಳನ್ನು ಹೋಗಿ ಒಂದು ಸಾರಿ ನೋಡಿದರೆ ಸಾಕು ಗೊತ್ತಾಗುತ್ತದೆ.

ವಿಪರ್ಯಾಸ ಎಂದರೆ ಸರ್ಕಾರಿ ಶಾಲೆಗಳಲ್ಲಿಯೇ ಹೆಚ್ಚು ಪ್ರತಿಭಾವಂತ ಶಿಕ್ಷಕರು ಇದ್ದಾರೆ. ಅವರು ಅರ್ಹತಾ ಪರೀಕ್ಷೆಗಳಲ್ಲಿ ಹೆಚ್ಚು ಅಂಕಗಳನ್ನು ಪಡೆದು, ಶಿಕ್ಷಕರ ಶಿಕ್ಷಣದ ತರಬೇತಿ ಪಡೆದು ಕೌನ್ಸೆಲಿಂಗ್‌ಗೆ ಹಾಜರಾಗಿ ಸರ್ಕಾರಿ ಶಾಲೆಗಳಲ್ಲಿ ನೌಕರಿ ಹಿಡಿದಿದ್ದಾರೆ. ಆದರೆ, ಅವರು ಕೂಡ ತಮ್ಮ ಮಕ್ಕಳನ್ನು ತಮ್ಮದೇ ಊರಿನ ಖಾಸಗಿ ಶಾಲೆಗಳಿಗೇ ಕಳಿಸುತ್ತಾರೆ. ನಾನು ರಾಜ್ಯದ ಬೇರೆ ಬೇರೆ ಕಡೆಯ ಇಂಗ್ಲಿಷ್ ಮಾಧ್ಯಮದ ಶಾಲೆಗಳಿಗೆ ಕಳೆದ ಕೆಲವು ತಿಂಗಳಲ್ಲಿ ಭೇಟಿ ನೀಡಿದ್ದೆ. ಅವೆಲ್ಲ ವಸತಿ ಶಾಲೆಗಳು, ಅಲ್ಲಿ ಓದುವ ಮಕ್ಕಳ ಇಂಗ್ಲಿಷ್ ಹೇಗಿದೆ ಎಂದರೆ ಅವರು ಕನ್ನಡದಲ್ಲಿ ಮಾತನಾಡುತ್ತಾರೆಯೇ ಅಥವಾ ಇಂಗ್ಲಿಷ್‌ನಲ್ಲಿ ಮಾತನಾಡುತ್ತಾರೆಯೇ ಎಂದು ಗೊತ್ತೇ ಆಗುವುದಿಲ್ಲ. ಆ ಮಕ್ಕಳಿಗೆ ಕಲಿಸುವ ಶಿಕ್ಷಕರಿಗೂ ಒಳ್ಳೆಯ ಇಂಗ್ಲಿಷ್ ಭಾಷೆ ಬರುವುದಿಲ್ಲ. ಅವರೂ ಅತ್ತ ಕನ್ನಡವೂ ಅಲ್ಲದ, ಇತ್ತ ಇಂಗ್ಲಿಷ್ ಅಲ್ಲದ ಭಾಷೆಯಲ್ಲಿ ಮಾತನಾಡುತ್ತಾರೆ. ಆದರೂ ಅಂಥ ಶಾಲೆಗಳಿಗೆ ನಮ್ಮ ಮಕ್ಕಳು ಹೋಗುತ್ತಾರೆ. ಅವರು ಆಡುವ ಹಸಿಬಿಸಿ ಇಂಗ್ಲಿಷ್ ಕೇಳಿ ನಾವು ಪಾಲಕರು ಆಗಸ ಮೂರೇ ಗೇಣು ಎನ್ನುವಂತೆ ಬೀಗುತ್ತೇವೆ. ಒಂದು ಭಾಷೆ ನಮ್ಮ ಅಸ್ಮಿತೆಯನ್ನು, ಆತ್ಮಗೌರವವನ್ನು ಹೇಗೆ ಹೊಸಕಿ ಹಾಕಿ ಬಿಡಬಹುದು ಎಂದು ನೋಡಿದರೆ ಅಚ್ಚರಿಯಾಗುತ್ತದೆ. ನಾವೆಲ್ಲ ನಂಬಿದ್ದು ಮಾತೃಭಾಷಾ ಮಾಧ್ಯಮದಲ್ಲಿ ಕನಿಷ್ಠ ಪ್ರಾಥಮಿಕ ಶಿಕ್ಷಣವನ್ನಾದರೂ ಪೂರೈಸಬೇಕು, ಐದನೇ ತರಗತಿಯಿಂದ ಇಂಗ್ಲಿಷ್ ಅನ್ನು ಒಂದು ಭಾಷೆಯಾಗಿ ಕಲಿಯಬೇಕು ಮತ್ತು ಹೈಸ್ಕೂಲು ಮಟ್ಟದಿಂದ ಇಂಗ್ಲಿಷ್ ಮಾಧ್ಯಮದಲ್ಲಿ ಕಲಿಯಬೇಕು ಎನ್ನುವುದರಲ್ಲಿ. ನಾವು ಕಲಿತುದು ಹಾಗೆಯೇ. ನಮಗೆ ಕನ್ನಡದ ಜತೆಗೆ ಪ್ರೌಢಶಾಲಾ ಮಟ್ಟದಲ್ಲಿ ಇಂಗ್ಲಿಷ್ ಅನ್ನು ಕೂಡ ಚೆನ್ನಾಗಿ ಹೇಳಿಕೊಡುವ ಶಿಕ್ಷಕರು ಇದ್ದರು. ಈಗ ಕನ್ನಡವೇ ತುಟ್ಟಿಯಾಗಿರುವ ಕಾಲ! ಅಧ್ಯಾಪಕ ವೃತ್ತಿಗೆ, ಮಾಧ್ಯಮ ಕ್ಷೇತ್ರಕ್ಕೆ ಈಗ ಬರುತ್ತಿರುವ ಬಹುತೇಕ ಹುಡುಗ-ಹುಡುಗಿಯರಿಗೆ ಕನ್ನಡವೇ ಚೆನ್ನಾಗಿ ಬರುವುದಿಲ್ಲ. ಇಂಗ್ಲಿಷ್ ಅಂತೂ ದೂರವೇ ಉಳಿಯಿತು. ಅವರು ಕನ್ನಡವನ್ನೇ ಚೆನ್ನಾಗಿ ಕಲಿಯದೇ ಇರುವಾಗ ಇಂಗ್ಲಿಷ್ ಅನ್ನು ಹೇಗೆ ಚೆನ್ನಾಗಿ ಕಲಿಯಲು ಸಾಧ್ಯ? ಕಲಿಕೆ ಮಾಧ್ಯಮ ಮತ್ತು ಭಾಷಾ ಕಲಿಕೆ ನಡುವೆ ಮೊದಲಿನಿಂದಲೂ ನಾವು ಗೋಜಲು ಮಾಡಿಕೊಂಡುದರಿಂದ ಆಗಿರುವ ಸಮಸ್ಯೆ ಇದು. ಇಂಗ್ಲಿಷ್ ಅನ್ನು ಒಂದು ಭಾಷೆಯಾಗಿ ಕಲಿಯಲು ಯಾವಾಗಲೂ ಯಾರದೂ ವಿರೋಧ ಇರಲಿಲ್ಲ. ಆದರೆ, ಇಂಗ್ಲಿಷ್ ಅನ್ನು ಕಲಿಕೆ ಮಾಧ್ಯಮವಾಗಿ ಪರಿಗಣಿಸುವ ಬಗ್ಗೆ ಸಮಸ್ಯೆ ಇತ್ತು. ನಮ್ಮ ಹಿರಿಯ ಸಾಹಿತಿಗಳು, ಶಿಕ್ಷಣ ತಜ್ಞರು ಇದನ್ನು ನಮ್ಮ ಜನರಿಗೆ ಮನವರಿಕೆ ಮಾಡಿಕೊಡಲು ಸಫಲರಾಗಲಿಲ್ಲ. ಕನ್ನಡ ಮಾಧ್ಯಮ ಶಾಲೆಗಳಲ್ಲಿ ಬರು ಬರುತ್ತ ಕನ್ನಡ ಕಲಿಸುವ ಶಿಕ್ಷಕರೇ ಇಲ್ಲದಂತೆ ಆಯಿತು. ಒಬ್ಬ ಶಿಕ್ಷಕರೇ ಎಲ್ಲವನ್ನೂ ಹೇಳಿಕೊಡುವಂತೆ ಆಯಿತು. ಪ್ರತ್ಯೇಕ ಭಾಷಾ ಶಿಕ್ಷಕರಂತೂ ಪ್ರೌಢಶಾಲೆ ಮಟ್ಟದ ವರೆಗೆ ಇರಲೇ ಇಲ್ಲ. ಇಂಥ

ಶಾಲೆಗಳು ಮಕ್ಕಳನ್ನು ಮತ್ತು ಪಾಲಕರನ್ನು ಆಕರ್ಷಿಸುವುದು ಸಾಧ್ಯವಿರಲಿಲ್ಲ. ಮಾತೃಭಾಷೆ ಶಿಕ್ಷಣಕ್ಕೆ ಕುತ್ತು ಬಂದಿರುವ ಈ ಸಮಯದಲ್ಲಿ ಸರ್ಕಾರ ಮತ್ತು ಸಾಹಿತಿಗಳು ಹಾಕುತ್ತಿರುವ 'ಕನ್ನಡ' 'ಕನ್ನಡ' ಎನ್ನುವ ಕೂಗು ಅಪ್ರಾಮಾಣಿಕವಾದುದು ಎಂದರೆ ತೀರಾ ಕಟುವಾದ ಮಾತು ಆದೀತು. ಆದರೆ, ತೀರಾ ತಡವಾಯಿತು ಎಂಬುದಂತೂ ಸತ್ಯ. ಸಂವಿಧಾನ ಪೀಠ, ರಾಜ್ಯದ ಅಡ್ವಕೇಟ್ ಜನರಲ್ ಅವರಿಗೆ, ನಿಮ್ಮ ಮಕ್ಕಳನ್ನು ಯಾವ ಮಾಧ್ಯಮದಲ್ಲಿ ಓದಿಸಿದ್ದೀರಿ' ಎಂದು ಕೇಳಿದೆ. ಅಡ್ವಕೇಟ್ ಜನರಲ್ ಅವರೇನೋ ತಾವು ಕನ್ನಡ ಮಾಧ್ಯಮದಲ್ಲಿಯೇ ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಿದ್ದಾಗಿ ಉತ್ತರಿಸಿದ್ದಾರೆ. ಆದರೆ, ನಮ್ಮ ಎಷ್ಟು ಜನ ಸಾಹಿತಿಗಳ ಮಕ್ಕಳು ಕನ್ನಡ ಮಾಧ್ಯಮದ ಶಾಲೆಗಳಲ್ಲಿ ಓದಿದ್ದಾರೆ? ಅವರೆಲ್ಲ ತಮ್ಮ ಮಕ್ಕಳನ್ನು ಕನ್ನಡ ಮಾಧ್ಯಮದಲ್ಲಿಯೇ ಓದಿಸಿದ್ದೇವೆ ಎಂದು ಸುಪ್ರೀಂ ಕೋರ್ಟಿನ ಮುಂದೆ ಪ್ರಮಾಣ ಪತ್ರ ಸಲ್ಲಿಸಲು ಸಿದ್ಧರಿದ್ದಾರೆಯೇ?

ಒಂದು ಅಸಮಾನ ಶಿಕ್ಷಣ ವ್ಯವಸ್ಥೆಯನ್ನು ಹುಟ್ಟಿ ಹಾಕಿ ಬಹುದೂರ ಬಂದ ಮೇಲೆ ಹಿಂದೆ ಹೋಗಲು ಸಾಧ್ಯವಿಲ್ಲ ಎನ್ನುವಂಥ ಒಂದು ಕಾಲಘಟ್ಟದಲ್ಲಿ, 'ಒಳ್ಳೆಯ ಶಾಲೆಗಳಿಗೆ ಮಕ್ಕಳನ್ನು ಕಳಿಸುವುದು, ಅವರಿಗೆ ಬೇಕಾದ ಮಾಧ್ಯಮದಲ್ಲಿ ಕಲಿಸುವುದು ಪಾಲಕರ ಹಕ್ಕು' ಎಂದು ಸುಪ್ರೀಂ ಕೋರ್ಟ್ ಭಾವಿಸಿದರೆ ನಾವು ಯಾರನ್ನು ದೂರಬೇಕು?

16.02.2014

# ಅನಂತಮೂರ್ತಿ:

# ಒಂದಿಷ್ಟು ನೆನಪುಗಳು...

ಇದಾಗಿ ಕನಿಷ್ಠ ಮೂವತ್ತೈದು ವರ್ಷಗಳೇ ಕಳೆದು ಹೋಗಿರಬಹುದು. ಬಿ.ಸಿ.ದೇಸಾಯಿಯವರ ಕಥೆಯೊಂದನ್ನು 'ರುಜುವಾತು' ಪತ್ರಿಕೆಗೆ ಕಳುಹಿಸಿ ಕೊಟ್ಟಿದ್ದೆ. ಅದಕ್ಕಿಂತ ಮುಂಚೆ ಅವರ ಕೆಲವು ಕಥೆಗಳು 'ಶೂದ್ರ'ದಲ್ಲಿ ಪ್ರಕಟವಾಗಿದ್ದುವು. ದೇಸಾಯಿ ಕುರಿತು ಒಂದಿಷ್ಟು ಮಾಹಿತಿ ಬೇಕು ಎಂದು 'ರುಜುವಾತು' ಸಂಪಾದಕೀಯ ಬಳಗದಿಂದ ನನಗೆ ಒಂದು ಪತ್ರ ಬಂತು. ನಾನು ಉತ್ತರ ಕೊಟ್ಟೆ. ಪತ್ರಿಕೆಯ ಸಂಪಾದಕರಾಗಿದ್ದ ಯು.ಆರ್.ಅನಂತಮೂರ್ತಿ ಆ ಪತ್ರವನ್ನು ಓದಿದ್ದರು. ಪತ್ರದ ಬರವಣಿಗೆ ಅವರ ಇಷ್ಟವಾಗಿತ್ತು ಎಂದು ಈಗ ನನ್ನ ಜತೆ ಮುನಿಸಿಕೊಂಡಿರುವ ನನ್ನ ಮಾಜಿ ಸಹೋದ್ಯೋಗಿ ಮತ್ತು ಲೇಖಕ ಕೆಲವು ವರ್ಷಗಳ ನಂತರ ನನಗೆ ಹೇಳಿದ್ದರು. ಅದುವರೆಗೆ ನಾನು ಮೂರ್ತಿಯವರನ್ನು ಭೇಟಿ ಮಾಡಿರಲಿಲ್ಲ. ಮಾತೂ ಆಡಿರಲಿಲ್ಲ. ಆದರೆ, 'ರುಜುವಾತು' ದಿನದ ಆ ನೆನಪು ಅವರ ಮನಸ್ಸಿನಲ್ಲಿ ಉಳಿದು ಬಿಟ್ಟಿತ್ತು. ಆನಂತರ ಸಿಕ್ಕಾಗಲೆಲ್ಲ, ನಿಮ್ಮ ಪರಿಚಯ 'ರುಜುವಾತು' ದಿನಗಳದ್ದು' ಎಂದು ಅವರೇ ನೆನಪಿಸುತ್ತಿದ್ದರು. ಅವರ ನೆನಪೇ ಹಾಗೆ. ಎಂದೂ ಏನನ್ನೂ ಮರೆಯುತ್ತಿರಲಿಲ್ಲ.

ಕೆಲವು ವರ್ಷಗಳಾದ ಮೇಲೆ ಅವರೂ ನಾನೂ ಒಂದು ಅಪಾಯದಲ್ಲಿ ಸಿಲುಕಿದ್ದೆವು. ನಾನು 'ಪ್ರಜಾವಾಣಿ' ಸೇರಿದ ಹೊಸದು. ಜನಪ್ರಿಯ ನಟನೊಬ್ಬನ ವಿರುದ್ಧದ ಪ್ರತಿಭಟನೆಯೊಂದು ಕಬ್ಬನ್ ಉದ್ಯಾನದಲ್ಲಿ ನಡೆಯುತ್ತಿತ್ತು. ವೇದಿಕೆಯ ಮೇಲೆ ಬಂದು ಅನಂತಮೂರ್ತಿ ಮಾತನಾಡಲು ಆರಂಭಿಸಿದರು. ಭಾಷಣಕಾರರ ಮಾತು ಕೇಳಿ ವರದಿ ಮಾಡಲು ನಾನು ಮತ್ತು ನನ್ನ ಕೆಲವರು ಪತ್ರಕರ್ತ ಮಿತ್ರರೂ ವೇದಿಕೆಯ ಮೇಲೆಯೇ ನಿಂತಿದ್ದೆವು. ನಾನು ಅನಂತಮೂರ್ತಿಯವರ ತೀರಾ ಹತ್ತಿರದಲ್ಲಿ ನಿಂತಿದ್ದೆ. ಅಭಿಮಾನಿಗಳು ಕಲ್ಲು ಬೀಸತೊಡಗಿದರು. ದೊಡ್ಡ ಚೂಪು ಕಲ್ಲೊಂದು ಅನಂತಮೂರ್ತಿಯವರ ಕಡೆಗೇ ಹಾರಿ ಬಂತು. ಆ ಕಲ್ಲು ತಾಕಿದ್ದರೆ ತಲೆ ಚೂರು ಚೂರಾಗಿ ಒಡೆದು ಹೋಗುತ್ತಿತ್ತು. ಸಭೆ ಅರ್ಧಕ್ಕೇ ನಿಂತು ಹೋಯಿತು. ಎಲ್ಲರೂ ಚದರಿದೆವು. ಅನಂತಮೂರ್ತಿಯವರಿಗೆ, 'ನಿಮಗೆ

ಹೆಂಡತಿ ಮಕ್ಕಳು ಇದ್ದಾರೆ ಎಂದು ಗೊತ್ತಿರಬೇಕು. ಹೀಗೆಲ್ಲ ನೀವು ಪ್ರಾಣಾಪಾಯದ ಸಂದರ್ಭಕ್ಕೆ ಒಡ್ಡಿಕೊಳ್ಳಬಾರದು' ಎಂದೇನೋ ಪತ್ರ ಬರೆದಿದ್ದೆ. ಅದಕ್ಕೂ ಮೂರ್ತಿ ಪ್ರೀತಿಯಿಂದ ಉತ್ತರ ಕೊಟ್ಟಿದ್ದರು. ಅವರು ಅನೇಕ ಸಾರಿ ಪ್ರವಾಹದ ವಿರುದ್ಧ ಈಜಲು ಬಯಸುತ್ತಿದ್ದರು. ಕೆಲವರಿಗೆ ಅದು ಪ್ರಚಾರಕ್ಕಾಗಿ ಎಂದು ಅನಿಸುತ್ತಿತ್ತು.

ತೊಂಬತ್ತರ ದಶಕದಲ್ಲಿ ನನ್ನ ಸಹೋದ್ಯೋಗಿಯೊಬ್ಬರು ದೆಹಲಿ ವರದಿಗಾರರಾಗಿದ್ದಾಗ ಅನಂತಮೂರ್ತಿಯವರು ರಾಜ್ಯಸಭೆ ಪ್ರವೇಶಿಸಲು ಪ್ರಯತ್ನ ಮಾಡುತ್ತಿದ್ದಾರೆ ಎಂದು ಸುದ್ದಿ ಕಳುಹಿಸಿದ್ದರು. ಮೂರ್ತಿಗಳಿಗೆ ಅದು ಇಷ್ಟವಾಗಿರಲಿಲ್ಲ. ಅವರು ಪ್ರಯತ್ನ ಮಾಡುತ್ತಿದ್ದರೋ, ಇಲ್ಲವೋ? ಆದರೆ, ಅವರ ಹೆಸರು ಗಾಳಿಯಲ್ಲಿ ಇತ್ತು. ಆ ಮಾಹಿತಿ ಆಧರಿಸಿ ಅವರು ವರದಿ ಮಾಡಿದ್ದರು. ಮೂರ್ತಿಯವರು ತಮ್ಮ ಅಸಮಾಧಾನವನ್ನು ನನ್ನ ಇನ್ನೊಬ್ಬ ಸಹೋದ್ಯೋಗಿ ಮುಂದೆ ತೋಡಿಕೊಂಡಿದ್ದರು : 'ನೀವು 'ಪ್ರಜಾವಾಣಿ'ಯಲ್ಲಿ ಇರುವವರು ಸರಿಯಿಲ್ಲ. ಏನೇನೋ ಬರೀತೀರಿ. ನೀವು ನರಕಕ್ಕೆ ಹೋಗುತ್ತೀರಿ,' ಎಂದು ಮಾಧ್ಯಮದಲ್ಲಿ ಕೆಲಸ ಮಾಡುವ ನಮಗೆಲ್ಲ ಇಂಥ ಶಾಪಗಳು ಸಹಜ! ಅನಂತಮೂರ್ತಿಯವರಿಗೆ ಈಚೆಗೆ ಮತ್ತೆ ನಮ್ಮ ಬಗ್ಗೆ ಬೇಸರವಾದಂತೆ ಇತ್ತು. ಅವರು 'ಬಸವ ಪ್ರಶಸ್ತಿ' ಸ್ವೀಕರಿಸಿದ ನಂತರ ಎಂ.ಎಂ.ಕಲಬುರ್ಗಿಯವರು ವಾಚಕರವಾಣಿಗೆ ಒಂದು ಪತ್ರ ಬರೆದರು. ಪ್ರಶಸ್ತಿ ಪ್ರಕಟವಾದಾಗಲೇ ಒಂದು ಪತ್ರ ಬಂದಿತ್ತು. ಅದು ತಾತ್ವಿಕ ನೆಲೆಗಿಂತ ಹೆಚ್ಚಾಗಿ ವೈಯಕ್ತಿಕ ನೆಲೆಯದು ಎಂಬ ಕಾರಣಕ್ಕಾಗಿ ಪ್ರಕಟವಾಗಿರಲಿಲ್ಲ. ಕಲಬುರ್ಗಿಯವರ ಪತ್ರ ಪ್ರಕಟವಾದ ಕೂಡಲೇ ಅನಂತಮೂರ್ತಿಯವರ ವಿರುದ್ಧ ಇದ್ದವರು ಎದ್ದು ಕುಳಿತರು. ಪರವಾಗಿ ಇದ್ದವರೂ ಬರೆದರು. ಸವಾಲು ಜವಾಬೂ ನಡೆದುವು! ವಿವಾದ ತೀವ್ರಸ್ವರೂಪ ಪಡೆದುಕೊಂಡಿತು. ಅನಂತಮೂರ್ತಿ ಒಂದು ಸಾಲಿನ ಹೇಳಿಕೆಯನ್ನು ನಮ್ಮ ಕಚೇರಿಗೆ ಕಳುಹಿಸಿಕೊಟ್ಟಿದ್ದರು. ಆದರೆ, ಅದು ನಮ್ಮ ಕೈ ಸೇರಿರಲಿಲ್ಲ. ಅವರು ನನಗೆ ಕರೆ ಮಾಡಿದರು. ತಮಗೆ ಆಗದವರು ಯಾರೋ ತಮ್ಮ ಪತ್ರವನ್ನು ಗಾಯಬ್ ಮಾಡಿದ್ದಾರೆ ಎಂದು ಅವರಿಗೆ ಅನುಮಾನ ಆಗಿತ್ತು. ಹಾಗೆ ಇರಲಾರದು ಸರ್ ಎಂದು ನಾನು ಎಷ್ಟು ಹೇಳಿದರೂ ಅವರಿಗೆ ಮನವರಿಕೆ ಆಗಲಿಲ್ಲ. ನಿಮ್ಮ ಹೇಳಿಕೆಯನ್ನು ನಾನೇ ಬರೆದುಕೊಳ್ಳುತ್ತೇನೆ ಹೇಳಿ, ಅಥವಾ ಯಾರನ್ನಾದರೂ ಕಳುಹಿಸುವೆ' ಎಂದರೆ ಅವರು ಒಪ್ಪಲಿಲ್ಲ. ಕಲಬುರ್ಗಿಯವರು ಬರೆದ ಎರಡನೇ ಪತ್ರದಿಂದ ಅವರಿಗೆ ನೋವಾಗಿತ್ತು. 'ನಾನು ಅಷ್ಟು ವರ್ಷ ಇಂಗ್ಲಿಷ್ ಪಾಠ ಮಾಡಿದ್ದೇನೆ. ಕನಿಷ್ಠ ಪಕ್ಷ ನಾನು ಅಷ್ಟು ಕೆಟ್ಟ ಇಂಗ್ಲಿಷ್‌ನಲ್ಲಿ (Basava is a nonsense philosopher) ಮಾತನಾಡಲಾರೆ ಎಂದಾದರೂ ಸಹ ಲೇಖಕರಾದ ಕಲಬುರ್ಗಿ ಅರ್ಥ ಮಾಡಿಕೊಳ್ಳಬೇಕಿತ್ತು. ಹೋಗಲಿ ಬಿಡಿ, ನನಗೆ ಪ್ರಶಸ್ತಿ ಜತೆಗೆ ಬರುವ ಹಣ ಮುಖ್ಯವಾಗಿತ್ತು, ನನ್ನ ಚಿಕಿತ್ಸೆಗಾಗಿ, ನಿಮಗೆ ಗೊತ್ತೇ? ಯೇಟ್ಸ್‌ಗೆ ನೊಬೆಲ್ ಪ್ರಶಸ್ತಿ ಬಂದಾಗ ಆತನೂ ಆರ್ಥಿಕ ಸಂಕಷ್ಟದಲ್ಲಿ ಇದ್ದ. 'ನಿಮಗೆ ನೊಬೆಲ್ ಪ್ರಶಸ್ತಿ ಬಂದಿದೆ' ಎಂದು ಯಾರೋ ಆತನಿಗೆ ಹೇಳಿದಾಗ ಅದರ ಜತೆಗೆ ಎಷ್ಟು ಹಣ ಕೊಡುತ್ತಾರೆ' ಎಂದು ಆತ ಕೇಳಿದ್ದ...' ಅನಂತಮೂರ್ತಿಯವರಿಗೆ ಬೇಸರವಾಗಿತ್ತು. ಹೀಗೆಲ್ಲ ಹೇಳುವಾಗ ನೋವೂ ಆಗಿರಬೇಕು.

ಆದರೆ, `I have nothing against you' ಎಂದು ಮಾತು ಮುಗಿಸಿದ್ದರು. ಈ ಪತ್ರ ವ್ಯವಹಾರವನ್ನು ಅನಂತಮೂರ್ತಿಯವರಿಗೆ ಅನುಕೂಲಕರವಾಗಿಯೇ ಮುಗಿಸಲಾಯಿತು ಎಂಬ ಅಭಿಪ್ರಾಯ ಬಂತು. ಅದಕ್ಕಿಂತ ಮುಂಚೆಯೇ ಕಲಬುರ್ಗಿಯವರು 'ಇನ್ನು ಸಾಕು ಮುಗಿಸಿ' ಎಂದು ನಮಗೆ ಹೇಳಿದ್ದರು. ಮತ್ತೆ ಅದೇ ಸಮಸ್ಯೆ : ಮಾಧ್ಯಮದಲ್ಲಿ ಕೆಲಸ ಮಾಡುವವರ ಕಷ್ಟ ಒಂದು ಎರಡಲ್ಲ. ನಮಗೆ ಯಾರನ್ನೂ ಸಮಾಧಾನ ಮಾಡಲು ಆಗುವುದಿಲ್ಲ. ಆ ವೇಳೆಯಲ್ಲಿ ಚಂದ್ರಶೇಖರ ಪಾಟೀಲರು ನನ್ನ ಜತೆಗೆ ಮಾತನಾಡಿದ್ದರು. 'ನೋಡಿ, ಕೇಂದ್ರದಲ್ಲಿ ಮೋದಿ ಸರ್ಕಾರ ಬರದೇ ಇದಿದ್ದರೆ ಯಾರೂ ಅನಂತಮೂರ್ತಿಯವರನ್ನು ತಡವುತ್ತಿರಲಿಲ್ಲ. ಈಗ ಅನಂತಮೂರ್ತಿ ದುರ್ಬಲರಾಗಿದ್ದಾರೆ. ಎಲ್ಲರೂ ಅವರನ್ನು ಬಡಿಯುತ್ತಿದ್ದಾರೆ' ಎಂದರು. ಹೀಗೂ ಇರಬಹುದು ಎಂದು ನನಗೆ ಅನಿಸಿರಲಿಲ್ಲ. ಆದರೆ, ಪಾಟೀಲರು ಹೇಳಿದ ಹಾಗೆಯೇ ಅನಂತಮೂರ್ತಿಯವರ ವಿರುದ್ಧ ಅನೇಕ ಬಗೆಯ ಮಾನಸಿಕ ದಾಳಿ ನಡೆಯಿತು. ಅದು ಅವರು ಸಾಯುವ ವರೆಗೂ ನಿಲಲಿಲ್ಲ. ಸತ್ತ ನಂತರವೂ ಮುಂದುವರಿಯಿತು. ಒಬ್ಬ ಲೇಖಕ ಹೀಗೆ ದ್ವೇಷಕ್ಕೆ ಈಡಾದುದು ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಇದೇ ಮೊದಲು ಎಂದು ಅನಿಸುತ್ತದೆ.

ಅನಂತಮೂರ್ತಿಯವರು ವಾರದಲ್ಲಿ ಮೂರು ದಿನಗಳ ಡಯಲಿಸಿಸ್‌ನಿಂದ ನುಗ್ಗಾಗಿ ಹೋಗಿದ್ದರು. ಆದರೆ, ಅವರು ಎದೆಗುಂದಿರಲಿಲ್ಲ. ಹೊಸ್ತಿಲಿನ ಬಳಿ ಬಂದು ನಿಂತಿದ್ದ ಸಾವನ್ನು ಅದು ಅನೇಕ ವರ್ಷ ಅಲ್ಲಿಯೇ ನಿಂತು ಕಾಯುವಂತೆ ಅವರು ಮಾಡಿದ್ದರು. ಕಳೆದ ಅಕ್ಟೋಬರ್‌ನಲ್ಲಿ ಅವರು ಹೆಗ್ಗೋಡಿನ ಸಂಸ್ಕೃತಿ ಶಿಬಿರಕ್ಕೆ ಬಂದಿದ್ದರು. 'ಮುಂದಿನ ಸಾರಿ ನಾನು ಬದುಕಿ ಇರುತ್ತೇನೋ ಇಲ್ಲವೋ ಇದೊಂದು ಸಾರಿ ಹೋಗಿ ಬಂದು ಬಿಡುತ್ತೇನೆ' ಎಂದು ಅಲ್ಲಿಗೆ ಬಂದಿದ್ದ ಅನಂತಮೂರ್ತಿ ನಮ್ಮ ಜತೆಗೆ ಮೂರು ದಿನ ಇದ್ದರು. ಮೊದಲ ದಿನ ಅವರು ಎಷ್ಟು ಹೊತ್ತು ಮಾತನಾಡಿದರು ಎಂದರೆ ಅವರನ್ನು ನೋಡಿ ನಮಗೇ ಆಯಾಸ ಆಗತೊಡಗಿತ್ತು. ಅವರು ಹಾಗೆ ಮಾತನಾಡುವುದು ಕೂಡ ಸಾವನ್ನು ತಡೆಯುವ ಒಂದು ವಿಧಾನದಂತೆ ಇತ್ತು. ಅವರು ಊಟಕ್ಕೆ ಕುಳಿತಾಗ ಅವರ ಬಳಿ ಹೋಗಿ, *ನೀವು ಇಷ್ಟು ಆಯಾಸ ಮಾಡಿಕೊಳ್ಳಬಾರದು' ಎಂದೆ. ದಣಿವಿನಿಂದ ಅವರ ಮುಖ ಕೆಂಪಾಗಿತ್ತು. ನನ್ನ ಕೈ ಹಿಡಿದು 'ಹೇಗಿದ್ದೀರಿ' ಎಂದರು. “ನಿಮ್ಮ ಆತ್ಮಕತೆ 'ಸುರಗಿ' ಓದುತ್ತಿರುವೆ. ಸೃಜನಕ್ರಿಯೆಯ ಬಗ್ಗೆ ಎಷ್ಟು ಅದ್ಭುತವಾಗಿ ಬರೆದಿದ್ದೀರಿ' ಎಂದೆ. 'ಪೂರ್ತಿ ಓದಿದ ಮೇಲೆ ನಿಮ್ಮ ಅಭಿಪ್ರಾಯ ಬರೆದು ತಿಳಿಸಿ, `I value your opinion a lot ಎಂದರು. 'ಸುರಗಿ' ಪೂರ್ತಿ ಓದಿದೆ. ಆಲಸ್ಯದಿಂದಲೋ, ಕೆಲಸ ಒತ್ತಡದಲ್ಲೋ ಏನೋ ಕಾರಣವಾಗಿ ಅವರಿಗೆ ಪತ್ರ ಬರೆಯಲಿಲ್ಲ. ಅನಂತಮೂರ್ತಿ ತಾವು ಓದಿದ್ದಕ್ಕೆಲ್ಲ ದೂರವಾಣಿ ಕರೆ ಮಾಡಿ ಪ್ರತಿಕ್ರಿಯೆ ಕೊಡುತ್ತಿದ್ದರಂತೆ. ನನ್ನ ಒಂದು ಅಂಕಣಕ್ಕೂ ಅವರು ಹಾಗೆಯೇ ಪ್ರತಿಕ್ರಿಯೆ ಕೊಟ್ಟಿದ್ದರು. ನಾನು ಫೋನ್ ತೆಗೆದುಕೊಳ್ಳದೇ ಇದುದ್ದರಿಂದ ನನಗೆ ಮೆಸೇಜ್ ಹಾಕಿದ್ದರು. ಅವರ ಮಿಸ್ ಕಾಲ್ ನೋಡಿ ಮತ್ತೆ ಅವರಿಗೆ ಕರೆ ಮಾಡಿದ್ದೆ. ಎಷ್ಟೋ ಹೊತ್ತು ಮಾತನಾಡಿದ್ದರು. ಅದೇ ದಿನ, ನಮ್ಮ ಪತ್ರಿಕೆಯಲ್ಲಿಯೇ ಇನ್ನೊಬ್ಬ ಅಂಕಣಕಾರರು, 'ನವರು

ಹಳೆಗನ್ನಡ ಓದಲಿಲ್ಲ' ಎಂದು ಬರೆದಿದ್ದರು. 'ನೋಡಿ ಆತ ಬರೆದುದು ಸರಿಯಲ್ಲ' ಎಂದೂ ಅನಂತಮೂರ್ತಿ ಸೇರಿಸಿದ್ದರು.

ಅನಂತಮೂರ್ತಿಯವರು 'ಅವಸ್ಥೆ' ಕಾದಂಬರಿ ಬರೆಯುವುದಕ್ಕಿಂತ ಮುಂಚೆ ಪಿ.ಲಂಕೇಶ್ 'ಮುಸ್ಸಂಜೆ ಕಥಾಪ್ರಸಂಗ' ಕಾದಂಬರಿ ಬರೆದಿದ್ದರು. ಅದರಲ್ಲಿ ಅನಂತಮೂರ್ತಿ ದಂಪತಿಯನ್ನು ಗೇಲಿ ಮಾಡುವಂಥ ಎರಡು ಪಾತ್ರಗಳನ್ನು ಸೃಷ್ಟಿಸಿದ್ದರು. 'ಅವಸ್ಥೆ' ಕಾದಂಬರಿಯನ್ನು ಲಂಕೇಶ್ ಅವರಿಗೆ ಕಳುಹಿಸಿದ್ದ ಮೂರ್ತಿ 'ನೀವು ಓದಬೇಕು' ಎಂದು ಲಂಕೇಶ್ ಅವರನ್ನು ಕೋರಿಕೊಂಡಿದ್ದರು. ಇದಕ್ಕೆ ಪ್ರತಿಕ್ರಿಯೆಯಾಗಿ ಲಂಕೇಶ್ ಅವರು 'ಶೂದ್ರ'ದಲ್ಲಿ ಒಂದು ಲೇಖನ ಬರೆದಿದ್ದರು. ಇದು ಇನ್ನೂ 'ಲಂಕೇಶ್ ಪತ್ರಿಕೆ' ಆರಂಭವಾಗುವುದಕ್ಕಿಂತ ಮುಂಚಿನ ಮಾತು. ಲಂಕೇಶರಿಗೆ 'ಅವಸ್ಥೆ' ತುಂಬ ಇಷ್ಟವಾಗಿತ್ತು. ಎಷ್ಟು ಇಷ್ಟವಾಗಿತ್ತು ಎಂದರೆ 'ಮುಸ್ಸಂಜೆಯ ಕೆಲವು ಪುಟಗಳನ್ನು (ಬಹುಶಃ ಮೂರ್ತಿಯವರನ್ನು ಗೇಲಿ ಮಾಡಿದ ಪುಟಗಳು) ಹರಿದು ಹಾಕಿದೆ' ಎಂದು 'ಶೂದ್ರ'ದಲ್ಲಿ ಬರೆದ ಲೇಖನದಲ್ಲಿ ಹೇಳಿಕೊಂಡಿದ್ದರು. 'ವಾ ರಿಗೆಯ ಲೇಖಕರನ್ನು ಓದಬೇಕಾದದು ನಮ್ಮ ಜವಾಬ್ದಾರಿ ನೀವು ಅಷ್ಟು ಅಳುಕಿನಿಂದ ನಿಮ್ಮ ಕಾದಂಬರಿಯನ್ನು ಓದಿ ಎಂದು ಬರೆಯಬೇಕಾಗಿರಲಿಲ್ಲ' ಎಂದೂ ಮೂರ್ತಿಯವರನ್ನು ಉದ್ದೇಶಿಸಿ ಲಂಕೇಶ್ ಬರೆದಿದ್ದರು. ನೆನಪುಗಳೇ ಹೀಗೆ. ಒಂದಕ್ಕೊಂದು ಸಂಬಂಧ ಇರುತ್ತವೆ, ಇರುವುದಿಲ್ಲ. ಅನಂತಮೂರ್ತಿ ಅಷ್ಟು ಹೇಳಿದ ಮೇಲೂ 'ಸುರಗಿ' ಕುರಿತು ನನಗೆ ಅನಿಸಿದ್ದನ್ನು ಬರೆಯಲಿಲ್ಲವಲ್ಲ ಎಂಬ ಅಳುಕು ಉಳಿದೇ ಬಿಟ್ಟಿದೆ. ಈಗ ಬರೆಯಬೇಕು ಎಂದು ಅನಿಸಿದರೂ ಯಾರಿಗೆ ಬರೆಯಬೇಕು?

31.08.2014

# ವಿಜ್ಞಾನದ ಗೆಲುವನ್ನು ನಾವು ಸಂಭ್ರಮಿಸುವುದಿಲ್ಲ... ಏಕೆ?

ಅದು ಅಂಥಿಂಥ ಬುಧವಾರವಲ್ಲ. ಮೂನ್ನೂರು ದಿನಗಳ ನಿರೀಕ್ಷೆಯ ನಂತರ ಅಂಥ ಒಂದು ದಿನ ಬಂದಿತ್ತು. ಆ ದಿನ ನಾವು ಅಂದುಕೊಂಡಂತೆಯೇ ಇರುತ್ತದೆ ಎಂದು ಯಾರೂ ಅಂದುಕೊಂಡಿರಲಿಲ್ಲ. 60 ಕೋಟಿ ಕಿಲೋ ಮೀಟರ್ ಹೇಗೆ ಹೇಗೊ ಸುತ್ತು ಬಳಸಿ ಕ್ರಮಿಸಿದ ಒಂದು ನೌಕೆ ಎಲ್ಲಿಗೆ ಹೋಗಿ ತಲುಪಬೇಕಿತ್ತೋ ಅಲ್ಲಿಗೆ ಹೋಗಿ ತಲುಪುತ್ತದೆ ಎಂದುಕೊಂಡವರು ಬಹಳ ಜನ ಇರಲಿಲ್ಲ.

ಏಕೆಂದರೆ ಅದು ಒಂದು ರೀತಿಯಲ್ಲಿ ನಮ್ಮ ಕೈಯಲ್ಲಿಯೇ ಇತ್ತು ಅಥವಾ ಇರಲಿಲ್ಲ. ದೇವರು ಇದ್ದಾನೋ ಇಲ್ಲವೋ ಗೊತ್ತಿಲ್ಲ. ಆದರೆ, ಅದೃಷ್ಟ ಎಂಬುದು ಒಂದು ಇರುವಂತೆ ಕಾಣುತ್ತದೆ. ಭಾರತದ ವಿಜ್ಞಾನಿಗಳಿಗೆ ಆ ಅದೃಷ್ಟ ಇತ್ತು. ಅವರು ಗುರಿ ಸಾಧಿಸಿ ಬಿಟ್ಟರು. ಬರೀ ಗುರಿ ಸಾಧಿಸಲಿಲ್ಲ, ಇತಿಹಾಸವನ್ನೇ ನಿರ್ಮಿಸಿದರು. ಭಾರತೀಯರು ಸಾಮಾನ್ಯವಾಗಿ ಸೋತ ಮನಸ್ಥಿತಿಯ ಜನರು. ಅದಕ್ಕೆ ಕಾರಣಗಳು ಬೇಕಾದಷ್ಟು ಇರಬಹುದು. ಮುಖ್ಯವಾಗಿ ನಮ್ಮನ್ನು ನಿರಂತರವಾಗಿ ಸೋಲಿಸುತ್ತಿರುವವರು ರಾಜಕಾರಣಿಗಳು.

ನಾವು ಅವರ ಮೇಲೆ ಎಷ್ಟು ಆಸೆಯಿಟ್ಟು ಆರಿಸಿ ಕಳಿಸಿದರೂ ಅವರು ಪ್ರತಿ ಸಾರಿ ನಮ್ಮನ್ನು ನಿರಾಸೆಗೊಳಿಸುತ್ತಾರೆ. ಬಹುಶಃ ನಮ್ಮ ಸೋತ ಮನಸ್ಥಿತಿಗೆ ಅವರೇ ಮುಖ್ಯ ಕಾರಣ ಆಗಿರಬಹುದು. ಆದರೆ, ನಮ್ಮ ಬಾಹ್ಯಾಕಾಶ ಸಂಸ್ಥೆಯ ವಿಜ್ಞಾನಿಗಳು ಇತಿಹಾಸ ಇರುವವರೆಗೆ ನೆನಪು ಉಳಿಯುವಂಥ ಒಂದು ಗೆಲುವನ್ನು ಈ ದೇಶಕ್ಕೆ ತಂದುಕೊಟ್ಟರು. ಆದರೆ, ನಾವು ಅವರಿಗೆ ಏನು ವಾಪಸು ಕೊಟ್ಟೆವು?

ಬಾಹ್ಯಾಕಾಶ ಕ್ಷೇತ್ರದಲ್ಲಿ ಇತಿಹಾಸ ನಿರ್ಮಾಣ ಆಗುವುದಕ್ಕೆ ಸಾಕ್ಷಿಯಾಗಲು ಖುದ್ದು ಪ್ರಧಾನಿ ನರೇಂದ್ರ ಮೋದಿಯವರೇ ಬಂದಿದ್ದರು. ಅವರು ಅದೃಷ್ಟವಂತ, ನೌಕೆಯನ್ನು ಹಾರಿಬಿಟ್ಟುದು ಯುಪಿಎ ಕಾಲದಲ್ಲಿ, ಅದು ಹೋಗಿ ತಲುಪಿದ್ದು ಬಿಜೆಪಿ ಕಾಲದಲ್ಲಿ. ಅದೃಷ್ಟ ಎಂದರೆ ಇದೇ ಅಲ್ಲವೇ? ಯುಪಿಎ ಆಡಳಿತ ಈ ದೇಶವನ್ನು ಎಷ್ಟು ಸೋಲಿಸಿಬಿಟ್ಟಿತ್ತು ಎಂದರೆ ಅವರದೇ

ಆಡಳಿತ ಇದ್ದಿದ್ದರೆ ನೌಕೆ ಹೋಗಿ ಮಂಗಳನ ಕಕ್ಷೆಯನ್ನು ತಲುಪುತ್ತಿತ್ತೋ ಇಲ್ಲವೋ ಗೊತ್ತಿಲ್ಲ. ಮೋದಿ ಜಾಣ. ಅವರು ಸರಿಯಾದ ವೇಳೆಯಲ್ಲಿ ಸರಿಯಾದ ಜಾಗದಲ್ಲಿ ಇರುವ ವ್ಯಕ್ತಿ. ಅವರಿಗೆ ಎಲ್ಲಿ ಹೇಗೆ ಇರಬೇಕು ಎಂದೂ ಗೊತ್ತು.

ಅವರೇ ಅಷ್ಟು ಯೋಚನೆ ಮಾಡುತ್ತಾರೋ ಬಳಗವೇ ಅವರ ಜತೆಗೆ ಇದೆಯೋ ಅಥವಾ ಅಷ್ಟು ಯೋಚನೆ ಮಾಡುವ ತಿಳಿಯದು. ಅವರು ಬರೀ ಜಾಣ ಮಾತ್ರವಲ್ಲ ನಿಗೂಢ ವ್ಯಕ್ತಿ ಕೂಡ. ಇಸ್ರೋ ಬಾಗಿಲ ಮುಂದೆ ಬಂದು ಇಳಿಯುವವರೆಗೆ ಮೋದಿ ಯಾವ ಜಾಕೀಟು ಹಾಕಿಕೊಂಡಿರುತ್ತಾರೆ ಎಂದು ಯಾರಿಗೆ ಗೊತ್ತಿತ್ತು? ಸಂದರ್ಭದ ಜತೆಗೆ ಹೇಗೆ ಕೊಂಡಿ ಸಾಧಿಸಬೇಕು ಎಂದು ಅವರಿಗೆ ಗೊತ್ತಿರುವಷ್ಟು ಮತ್ತೆ ಯಾರಿಗೂ ಗೊತ್ತಿರುವಂತೆ ಕಾಣುವುದಿಲ್ಲ. ಅವರ ಜತೆಗೆ ಸಾಲು ಸಾಲು ಗಣ್ಯರು ಬಾಲ್ಕನಿಯಲ್ಲಿ ಕುಳಿತಿದ್ದರು. ಒಬ್ಬರಿಗೂ ಅದು ಹೊಳೆದಿರಲಿಲ್ಲವಲ್ಲ? ಮೋದಿಯವರು ಅಂಗಾರಕನ ಬಣ್ಣದ ಓವರ್‌ಕೋಟನ್ನೇ ಹಾಕಿಕೊಂಡು ಬಂದಿದ್ದರು.

ಮತ್ತೆ, ಸಂದರ್ಭಕ್ಕೆ ತಕ್ಕಂತೆ ಹೇಗೆ ಮಾತನಾಡಬೇಕು ಎಂದು ಅವರಿಗೆ ಗೊತ್ತಿರುವಷ್ಟು ಯಾರಿಗೂ ಗೊತ್ತಿರುವಂತೆ ಕಾಣುವುದಿಲ್ಲ. ಅವರು ಬರೀ ಜಾಣ ಮತ್ತು ನಿಗೂಢ ವ್ಯಕ್ತಿ ಮಾತ್ರವಲ್ಲ. ಅದ್ಭುತ ಮಾತುಗಾರ ಕೂಡ. ಇಡೀ ಜಗತ್ತೇ ತಮ್ಮನ್ನು ನೋಡುತ್ತಿದೆ ಎಂದು ಅವರಿಗೆ ಮೊದಲೇ ಗೊತ್ತಿದ್ದಂತೆ ಇತ್ತು. ಎಷ್ಟು ಇಂಗ್ಲಿಷ್ ಮಾತನಾಡಬೇಕೋ ಅಷ್ಟು ಇಂಗ್ಲಿಷ್ ಅನ್ನು ತಪ್ಪಿಲ್ಲದೆ, ತಡವರಿಸದೇ ಮಾತನಾಡಿದರು. ಅವರು ತುಂಬ 'ಮನೆಗೆಲಸ' ಮಾಡುತ್ತಾರೆ ಎಂಬುದರಲ್ಲಿ ಅನುಮಾನವೇನೂ ಬೇಡ.

ಚಪ್ಪಾಳೆ ತಟ್ಟುತ್ತ ಪೋಡಿಯಂ ಬಳಿ ಬಂದ ಪ್ರಧಾನಿ ಏನು ಹೇಳಿದರು ಎಂದು ಈಗ ಜಗತ್ತಿಗೆಲ್ಲ ಗೊತ್ತಿದೆ. ಜತೆಗೆ 'ಕ್ರಿಕೆಟ್‌ನಲ್ಲಿ ಕಪ್ಪು ಗೆದ್ದರೆ ಬೀದಿ ಬೀದಿಯಲ್ಲಿ ಮೆರವಣಿಗೆ, ಸಂಭ್ರಮ ಆಚರಿಸುವ ನಾವು ಬಾಹ್ಯಾಕಾಶದಲ್ಲಿ ಇಸ್ರೋ ನಿರ್ಮಿಸಿದ ಹೊಸ ಇತಿಹಾಸವನ್ನೂ ಸಂಭ್ರಮಿಸಬೇಕು' ಎಂದು ಅವರು ಕರೆ ಕೊಟ್ಟರು. ನಾವು ಹಾಗೆ ಮಾಡಿದೆವೆಯೇ? ಏಕೆ ಮಾಡಲಿಲ್ಲ? ಇಡೀ ದೇಶದ ಜನರು ರಸ್ತೆಗೆ ಬರಬೇಕಿತ್ತು. ಲಾಡೂಪೇಡೆ ಹಂಚಬೇಕಿತ್ತು. ಪರಸ್ಪರರನ್ನು ತಬ್ಬಿಕೊಳ್ಳಬೇಕಿತ್ತು. ಕಂಬ ಕಂಬಗಳ ಮೇಲೆ ಇಸ್ರೋ ವಿಜ್ಞಾನಿಗಳ ಫ್ಲೆಕ್ಸ್ ಕಟ್ಟಬೇಕಿತ್ತು. ಅದಕ್ಕೆ ಹಾಲಿನ ಅಭಿಷೇಕ ಮಾಡಬೇಕಿತ್ತು.

ಮಚ್ಚು, ಲಾಂಗು ಹಿಡಿದ ಸಿನಿಮಾ ನಾಯಕರ ಚಿತ್ರಗಳಿಗೆ ನಮ್ಮ ಹುಡುಗರು ಹೀಗೆ ಮಾಡುತ್ತಾರೆ ಅಲ್ಲವೇ? ವಿಜ್ಞಾನಿಗಳ ಗೆಲುವನ್ನು, ವಿಜ್ಞಾನದ ಗೆಲುವನ್ನು ನಾವು ಹೀಗೆಯೇ ಏಕೆ ಸಂಭ್ರಮಿಸುವುದಿಲ್ಲ? ಸಚಿನ್ ತೆಂಡೂಲ್ಕರ್ ಅವರಿಗೆ ಕೇಂದ್ರ ಸರ್ಕಾರ ಭಾರತ ರತ್ನ ಕೊಡಬೇಕಿತ್ತು. ಕೊಡಬೇಕು ಎಂದು ಬರೀ ಕ್ರೀಡಾಲೋಕದವರು ಮಾತ್ರವಲ್ಲ ಹಾದಿಯಲ್ಲಿ ಹೋಗುವವರು, ಬರುವವರೂ ಅದೇ ಮಾತು ಹೇಳಿದ್ದರು. ಆದರೆ, ಸರ್ಕಾರಕ್ಕೆ ಅಳುಕು; ಬರೀ ಸಚಿನ್‌ಗೆ ಕೊಟ್ಟರೆ ತಪ್ಪು ಮಾದರಿ ಹಾಕಿದಂತೆ ಆದೀತೇ ಎಂದು. ಸರ್ಕಾರದ ಕಚೇರಿಯಲ್ಲಿ ದೂಳು ತಿನ್ನುತ್ತ ಒಂದು ಕಡತ ಕುಳಿತಿತ್ತು.

ಅದು ದೇಶದ ಪ್ರಖ್ಯಾತ ವಿಜ್ಞಾನಿ, ಕನ್ನಡಿಗ ಸಿ.ಎನ್.ಆರ್.ರಾವ್ ಅವರಿಗೆ ಭಾರತ ರತ್ನ ಕೊಡುವ ಪ್ರಸ್ತಾಪ. ಇಬ್ಬರಿಗೂ ಸೇರಿ ಭಾರತ ರತ್ನ ಕೊಟ್ಟುದು ಈಗ ಇತಿಹಾಸ. ಆದರೆ, ಮಾಧ್ಯಮದವರು ಆಗ ಹೇಗೆ ನಡೆದುಕೊಂಡರು? ನಮ್ಮದೂ ಸೇರಿ ಒಂದೋ ಎರಡೋ ಪತ್ರಿಕೆಗಳನ್ನು ಬಿಟ್ಟು ಉಳಿದವರೆಲ್ಲ ಸಚಿನ್ ತೆಂಡೂಲ್ಕರ್ ಮತ್ತು ಸಿ.ಎನ್.ಆರ್.ರಾವ್ ಅವರಿಗೆ ಭಾರತ ರತ್ನ ಪ್ರಶಸ್ತಿ ಎಂದು ಸುದ್ದಿ ಬರೆದುವು. ಇನ್ನು ಕೆಲವರು ಸಿ.ಎನ್.ಆರ್ ರಾವ್ ಅವರಿಗೂ ಭಾರತ ರತ್ನ ಎಂದು ಬರೆದುವು? He too ran ಎನ್ನುವಂತೆ ಯಾರ ಹೆಸರು ಮೊದಲು ಇರಬೇಕಿತ್ತು? ರಾವ್ ಮತ್ತು ತೆಂಡೂಲ್ಕರ್ ನಡುವೆ ಇರುವ ಭೇದವನ್ನು ನಾವು ಗಮನಿಸಲೇ ಇಲ್ಲ.

ಕನಿಷ್ಠ ಮನುಷ್ಯ ಕುಲಕ್ಕೆ ಯಾರಿಂದ ಏನು ಲಾಭ ಎಂದು ನಾವು ಯೋಚಿಸಿದ್ದರೂ ಉತ್ತರ ಸಿಗುತ್ತಿತ್ತು. ರಾವ್ ಅವರನ್ನು ಮಾಧ್ಯಮ ಹಾಗೆ ಕಡೆಗಣಿಸಲು ಅಥವಾ ಎರಡನೆಯವರನ್ನಾಗಿ ಪರಿಗಣಿಸಲು ಕಾರಣ ಇದೆ. ಅವರು ಸಚಿನ್ ತೆಂಡೂಲ್ಕರ್ ಹಾಗೆ ಯಾವ ಉಪಭೋಗದ ವಸ್ತುವಿಗೂ ರೂಪದರ್ಶಿ ಆಗಲಾರರು, ರಾಯಭಾರಿಯೂ ಆಗಲಾರರು. ಮಾಧ್ಯಮಕ್ಕೆ ರೂಪದರ್ಶಿಗಳು ಬೇಕು. ಉಪಭೋಗ ಸಂಸ್ಕೃತಿಯ ರಾಯಭಾರಿಗಳು ಬೇಕು. ಜನರಿಗೂ ಅದೇ ಬೇಕು. ನಮ್ಮ ನಿಲುವುಗಳನ್ನು ಮಾರುಕಟ್ಟೆ ನಿಯಂತ್ರಿಸುತ್ತದೆ. ವಿಜ್ಞಾನ, ಮಾರುಕಟ್ಟೆಗೆ ಬೇಕಾದ ಸಂಗತಿ ಅಲ್ಲವೇ ಅಲ್ಲ.

ಕ್ರಿಕೆಟ್ ಅನ್ನು ಬಿಟ್ಟು ಮಾರುಕಟ್ಟೆ ಇರಲು ಸಾಧ್ಯವೇ ಇಲ್ಲ. ಕ್ರಿಕೆಟ್ ಆಟದ ಪ್ರಸಾರದ ನಡುವೆ ಎಷ್ಟೊಂದು ಜಾಹೀರಾತು? ಮಂಗಳಯಾನದ ಪ್ರಸಾರದ ನಡುವೆ ಹೋಗಲಿ, ಮೊದಲು ಅಥವಾ ಕೊನೆಯಲ್ಲಿಯಾದರೂ ಜಾಹೀರಾತುಗಳು ಇದ್ದುವೇ? ಇರಲಿಲ್ಲ. ಆದರೆ, ಮತ್ತೆ ಮಾರುಕಟ್ಟೆ ಜಾಣತನ ತೋರಿತು. ಅದು ಯಾವಾಗಲೂ ಗೆಲುವಿನ ಹಿಂದೆಯೇ ಇರುತ್ತದೆ. ಮರುದಿನದ ಬಹುತೇಕ ಪತ್ರಿಕೆಗಳಲ್ಲಿ ಜಾಕೀಟು ಜಾಹೀರಾತು ಇತ್ತು! ನಾವು ನಮ್ಮ ಮಕ್ಕಳನ್ನು ವಿಜ್ಞಾನ ಕಲಿಯಲು ಏಕೆ ಕಳಿಸುವುದಿಲ್ಲ ಎಂಬುದಕ್ಕೆ ಇಲ್ಲಿಯೇ ಉತ್ತರ ಇದೆ. ವಿಜ್ಞಾನ ತರಗತಿಗಳು ಭಣಗುಟ್ಟತೊಡಗಿ ಮೂರು ದಶಕಗಳೇ ಕಳೆದು ಹೋಗಿವೆ.

ಪದವಿ ಪೂರ್ವ ತರಗತಿ ಮುಗಿದ ಕೂಡಲೇ 'ಕೆನೆ' ಎನ್ನುವಂಥ ವಿದ್ಯಾರ್ಥಿಗಳೆಲ್ಲ ಒಂದೋ ಎಂಜಿನಿಯರಿಂಗ್ ಕಡೆಗೆ ಇಲ್ಲವೇ ವೈದ್ಯಕೀಯದ ಕಡೆಗೆ ಹೋಗಿ ಬಿಡುತ್ತಾರೆ. ಎರಡೂ ಕಡೆ ಸಲ್ಲದವರು ವಾಣಿಜ್ಯ ಪದವಿ ಕಡೆಗೆ ಹೋಗುತ್ತಾರೆ. ಅಳಿದುಳಿದ ಪೀಕು ವಿಜ್ಞಾನಕ್ಕೋ, ಕಲೆ ಕಡೆಗೋ ಬರುತ್ತದೆ. ಕೆಳ ಮಧ್ಯಮ ವರ್ಗ ಬಿಡಿ, ಮಧ್ಯಮ ಮತ್ತು ಮೇಲು ಮಧ್ಯಮ ವರ್ಗಕ್ಕೂ ದೊಡ್ಡ ಕನಸುಗಳೇನೂ ಇಲ್ಲ. ಮಗ ಎಲ್ಲಿಯೋ ಒಂದು ಕಂಪೆನಿಯಲ್ಲಿ ಸಾಫ್ಟ್‌ವೇರ್ ಕೂಲಿಯಾಗಿ ಕೆಲಸಕ್ಕೆ ಸೇರಲಿ. ತಾನು ತರಲಾಗದ ಸಂಬಳವನ್ನು ತರಲಿ, ತಾನು ಹೋಗಲು ಆಗದ ವಿದೇಶಕ್ಕೆ ಹೋಗಿ ಡಾಲರ್ ತರಲಿ, ಅದರಲ್ಲಿ ತಾನು ಕಟ್ಟಲಾಗದ ಒಂದು ಮನೆ, ಕೊಳ್ಳಲಾಗದ ಒಂದು ಕಾರು ಕೊಂಡು ತಣ್ಣಗೆ ಇರೋಣ ಎಂಬ ಕನಸು ಬಿಟ್ಟು ಅವರಿಗೆ ಬೇರೆ ಏನು ಕನಸು ಇದೆ? ಮೂವತ್ತೈದು ನಲವತ್ತು ವರ್ಷಗಳ ಹಿಂದೆ ಸಾಹಿತ್ಯ ಪಾಹಿತ್ಯ ಎಂದೆಲ್ಲ ತಲೆಕೆಡಿಸಿಕೊಂಡಿದ್ದ ನನ್ನ ತಲೆಮಾರಿನವರು ಮಾತ್ರವಲ್ಲ ನಮ್ಮ ಗುರುಗಳಾಗಿದ್ದವರೂ

ಹಾಗೇ ಮಾಡಿದರು. ಕನ್ನಡ ಮೇಷ್ಟ್ರು ಆಗಿದ್ದವರ ಯಾರ ಮಕ್ಕಳೂ ಈಗ ಅದೇ ಹುದ್ದೆಯಲ್ಲಿ ಇಲ್ಲ. ಇಂಗ್ಲಿಷ್ ಮೇಷ್ಟ್ರು ಆಗಿದ್ದವರದೂ ಬೇರೆ ಕಥೆಯಲ್ಲ. ಎಲ್ಲ ಒಂದೋ ಎಂಜಿನಿಯರ್ ಆಗಿದ್ದಾರೆ, ಇಲ್ಲವೇ ವೈದ್ಯರಾಗಿದ್ದಾರೆ.

ಭಾಷೆ ಅನ್ನ ಕೊಡುವುದಿಲ್ಲ ಎಂದು ನಮಗೆ ಗೊತ್ತಾಗುವ ವೇಳೆಗೆ ವಿಜ್ಞಾನ ಅನ್ನ ಕೊಡುವುದಿಲ್ಲ ಎಂದೂ ಗೊತ್ತಾಗಿತ್ತು. ಇದರಲ್ಲಿ ಬರೀ ನಮ್ಮ ತಪ್ಪು ಮಾತ್ರ ಇತ್ತೇ? ಸರ್ಕಾರ ವಿಜ್ಞಾನಕ್ಕೆ ಏನು ಮಾಡಿತ್ತು? ಈ ದೇಶದಲ್ಲಿ ಅಖಿಲ ಭಾರತ ಮಟ್ಟದ ಒಂದೇ ಒಂದು ವಿಜ್ಞಾನ ಸಂಸ್ಥೆ ಇದೆ. ಅದೂ ಬೆಂಗಳೂರಿನಲ್ಲಿ ಇದೆ. ಅದು ಸ್ಥಾಪನೆ ಆದುದು 1909ರ ಮೇ 27ರಂದು. ಈಗ ಅದು ಭಾರತೀಯ ವಿಜ್ಞಾನ ಸಂಸ್ಥೆ ಎಂದು ಜಗತ್ತಿನಲ್ಲಿಯೇ ಹೆಸರುವಾಸಿ. ಇಂಥ ಸಂಸ್ಥೆಯೊಂದರ ಕನಸು ಕಂಡವರು ಜೆಮ್ ಷೆಡ್‌ಜಿ ಟಾಟಾ,

ಅವರ ನಿಧನದ ಐದು ವರ್ಷಗಳ ನಂತರ ಅದು ಅಸ್ತಿತ್ವಕ್ಕೆ ಬಂತು. ಅದರ ಸ್ಥಾಪನೆಗೆ ಏನೆಲ್ಲ ಬೇಕೋ ಅದನ್ನೆಲ್ಲ ಅವರೇ ಮಾಡಿದ್ದರು. ನಂತರ ದೇಶದಲ್ಲಿ ಎಂಜಿನಿಯರ್‌ಗಳನ್ನು ಸೃಷ್ಟಿಸಲು ಐಐಟಿಗಳು ಬಂದುವು. ಆದರೆ, ವಿಜ್ಞಾನಿಗಳನ್ನು ಹುಟ್ಟಿ ಹಾಕುವ ಐಐಎಸ್ಸಿಗಳು ಬರಲಿಲ್ಲ. ಏನಾದರೂ ಕಾರಣ ಇರಬಹುದೇ? ಅಥವಾ ಕೇವಲ ಕಾಕತಾಳೀಯ ಆಗಿರಬಹುದೇ? ಆಗಿರಲಾರದು. ವಿಜ್ಞಾನದ ಕುರಿತ ತಾತ್ಸಾರದ ಬಗೆಗೆ ಸಿ.ಎನ್.ಆರ್ ರಾವ್ ಅವರಷ್ಟು ಬಾರಿ ಯಾರು ಹೇಳಿದ್ದಾರೆ?

ಸರ್ಕಾರದ ಇಂಥ ತಾತ್ಸಾರದ ನಡುವೆಯೂ ದೇಶದಲ್ಲಿ ದೊಡ್ಡ ಸಂಖ್ಯೆಯಲ್ಲಿ ವಿಜ್ಞಾನಿಗಳು ಇದ್ದಾರೆ. ಅವರಲ್ಲಿ ಬಹುಪಾಲು 70ರ ಗಡಿ ದಾಟಿದವರು. ಅವರೆಲ್ಲ ಸ್ವಂತ ಆಸಕ್ತಿಯಿಂದ ವಿಜ್ಞಾನ ಓದಿದವರು. ಸುಮ್ಮನೆ ಮನೆಯಲ್ಲಿ ಸೂಕ್ಷ್ಮದರ್ಶಕದ ಮುಂದೆ ಕುಳಿತು ಅಧ್ಯಯನ ಮಾಡಿದವರು. ಆದರೆ, ಸರ್ಕಾರ ಅವರ ಸಾಧನೆಯನ್ನು ಹೇಗೆ ಗುರುತಿಸಿದೆ? ಜಯಾ ಬಚ್ಚನ್ ಅವರನ್ನು ರಾಜ್ಯಸಭೆಗೆ ಆರಿಸಿ ಕಳಿಸುವ ಪಕ್ಷಗಳು, ರೇಖಾ ಮತ್ತು ಸಚಿನ್ ತೆಂಡೂಲ್ಕರ್ ಅವರನ್ನು ರಾಜ್ಯಸಭೆಗೆ ನಾಮಕರಣ ಮಾಡುವ ಸರ್ಕಾರಗಳು ವಿಜ್ಞಾನಿಗಳಿಗೆ ಏನು ಮಾಡಿವೆ? ನಮ್ಮ ಯು.ಆರ್.ರಾವ್ ಅವರನ್ನು ವಿಧಾನ ಪರಿಷತ್ತಿಗೆ ನಾಮಕರಣ ಮಾಡಬೇಕು ಎಂದು ನಮಗೆ ಅನಿಸುವುದೇ ಇಲ್ಲವಲ್ಲ? ಅವರು ಒಪ್ಪುತ್ತಿದ್ದರೋ ಇಲ್ಲವೋ ಎಂಬುದು ಬೇರೆ ಮಾತು. ಸಾಹಿತಿಗಳಿಗೆ ಕೊಡುವಷ್ಟು ಗೌರವವನ್ನೂ ನಾವು ವಿಜ್ಞಾನಿಗಳಿಗೆ ಕೊಡುವುದಿಲ್ಲ ಎಂದು ಅನಿಸುತ್ತದೆ. ಇದನ್ನು ಹೆಚ್ಚು ಲಂಬಿಸುವುದು ಅನಗತ್ಯ

ಕ್ರಿಕೆಟ್ ಸಂಭ್ರಮಿಸುವವರು ವಿಜ್ಞಾನವನ್ನೂ ಸಂಭ್ರಮಿಸಬೇಕು ಎಂದ ಪ್ರಧಾನಿಯವರಾದರೂ ಏನು ಮಾಡಿದರು? ಅವರೂ ಬರಿಗೈಲೇ ಬಂದಿದ್ದರು. ಮಂಗಳನ ಕಕ್ಷೆಗೆ ನೌಕೆ ಕಳುಹಿಸಿದ ವಿಜ್ಞಾನಿಗಳ ತಂಡಕ್ಕೆ ಬಹುಮಾನ ಘೋಷಿಸುವುದು ಬೇಡವೇ? ಕಳ್ಳರನ್ನು ಹಿಡಿದ ಪೊಲೀಸರಿಗೇ ಬಹುಮಾನ ಕೊಡುವುದಾದರೆ ಅಂಥ ದೊಡ್ಡ ಸಾಧನೆ ಮಾಡಿದ ವಿಜ್ಞಾನಿಗಳಿಗೆ ಪ್ರಧಾನಿ ಕೊಟ್ಟ ಬಹುಮಾನ ಏನು? ಬರೀ ಬೆನ್ನು ತಟ್ಟಿದರೆ ಸಾಕೇ?

2011ರಲ್ಲಿ ಕ್ರಿಕೆಟ್ ವಿಶ್ವಕಪ್ ಗೆದ್ದಿದ್ದ ಭಾರತದ ತಂಡಕ್ಕೆ ಆಗಿನ ನಮ್ಮ ಮುಖ್ಯಮಂತ್ರಿ ತಲಾ ಒಂದು ಬಿಡಿಎ ಸೈಟು ಕೊಡುವುದಾಗಿ ಘೋಷಿಸಿದ್ದರು.

ಮಂಗಳನಿಗೆ ಮೊದಲ ಯತ್ನದಲ್ಲಿಯೇ ನೌಕೆ ಕಳುಹಿಸಿದ ವಿಜ್ಞಾನಿಗಳ ಸಾಧನೆ ಅದಕ್ಕಿಂತ ಕಡಿಮೆಯೇ? ಪ್ರಧಾನಿಯೇ ಬರಿಗೈಲಿ ಬಂದಿರುವಾಗ ಮುಖ್ಯಮಂತ್ರಿ ಸಿದ್ದರಾಮಯ್ಯ ಇನ್ನೇನು ಮಾಡುತ್ತಾರೆ? ರಾಜಕಾರಣಿಗಳಿಗೆ ಜನರು ಬೇಕು. ಜನರು ಕ್ರಿಕೆಟ್ ಹಿಂದೆ ಇದ್ದಾರೆ; ವಿಜ್ಞಾನಿಗಳ ಹಿಂದೆ ಇಲ್ಲ ಎಂದು ಅವರಿಗೇನು ತಿಳಿಯದೇ? ಬುಧವಾರ ಕಳೆದು ಇಂದಿಗೆ ನಾಲ್ಕು ದಿನ ಆಯಿತು. ಕೇರಳ ಸರ್ಕಾರ, ಇಸ್ರೋ ವಿಜ್ಞಾನಿಗಳಿಗೆ ಔತಣ ಕೂಟ ಏರ್ಪಡಿಸುವ ಘೋಷಣೆ ಮಾಡಿದ್ದನ್ನು ಬಿಟ್ಟರೆ ಬೇರೆ ಯಾರೂ ಬಾಯಿ ಬಿಟ್ಟಿಲ್ಲ. ಇಸ್ರೋ ಮುಖ್ಯಸ್ಥ ಕೆ.ರಾಧಾಕೃಷ್ಣನ್ ಅವರು ಕೇರಳದವರು ಎಂಬ ಋಣವನ್ನು ಆ ರಾಜ್ಯ ಸರ್ಕಾರ ಇಟ್ಟುಕೊಂಡಂತೆ ಕಾಣುತ್ತದೆ.

ಉಳಿದವರಿಗೆ ವಿಜ್ಞಾನದ ಜತೆಗೆ ಯಾವ ಋಣ ಇದೆ?

28-9-2014

# ನೀವೆಲ್ಲ ಸರ್ವಜ್ಞರೇ ಎಂದ

# ಆ ಹೆಣ್ಣುಮಗಳಿಗೆ ಏನು ಉತ್ತರ ಕೊಡಲಿ?

ಅವರು ಸಣ್ಣಗೆ ಅಳುತ್ತಿದ್ದಂತಿತ್ತು. ಮಾತು ನಿಂತು ನಿಂತು ಬರುತ್ತಿತ್ತು. ದನಿ ಮೆದುವಾಗಿದ್ದರೂ ಆಳದಲ್ಲಿ ಸಿಟ್ಟು ಇದ್ದಂತೆ ಇತ್ತು. ಆಕ್ರೋಶ ಇತ್ತು. ಹತಾಶೆ ಇತ್ತು. ಅವರಿಗೆ ಅವಮಾನ ಆದಂತಿತ್ತು. ಅದಕ್ಕೆ ಏನು ಪರಿಹಾರ ಎಂದು ಝುಂಕಿಸಿ ಕೇಳುವ ದಾಷಿಕ ಇದ್ದಂತಿತ್ತು. ಆದರೆ, ತಮ್ಮ ಹೆಸರು, ಊರು ಬರೆಯಬಾರದು ಎಂದು ಅವರು ಷರತ್ತು ಹಾಕಿದರು. ಅದಕ್ಕೆ ಕಾರಣವನ್ನೂ ಕೊಟ್ಟರು. ಇದು ನನ್ನ ಕಥೆ ಎಂದು ಮಾತ್ರ ನೀವು ತಿಳಿಯಬೇಡಿ. ಇಂಥ ಬೇಕಾದಷ್ಟು ಕಥೆಗಳು ರಾಜ್ಯದ ಮೂಲೆ ಮೂಲೆಯಲ್ಲಿ ನಡೆದಿರಬಹುದು ಎಂದರು. ನಾನು ಹೇಳಿದ್ದನ್ನು ನನ್ನ ಮಾತುಗಳಲ್ಲಿಯೇ ಇಟ್ಟು ಬಿಡಿ. ನಿಮ್ಮದನ್ನು ಏನೂ ಸೇರಿಸಬೇಡಿ ಎಂದೂ ತಾಕೀತು ಮಾಡಿದರು! :

"ನಾನು ಊರಿನ ಹೈಸ್ಕೂಲಿನಲ್ಲಿ ಕೆಲಕಾಲ ಮುಖ್ಯೋಪಾಧ್ಯಾಯಿನಿ ಆಗಿದ್ದ ಸಮಯ ಅದು. ಇದಾಗಿ ಬಹಳ ದಿನಗಳೇನೂ ಆಗಿಲ್ಲ. ಒಂದು ದಿನ ಊರಿನ ಒಬ್ಬ ಪತ್ರಕರ್ತ ನನ್ನ ಬಳಿ ಬಂದ. ಶಾಲೆಯ ಆವರಣದಲ್ಲಿ ಬೆಳೆದ ಕಸ ಕಡ್ಡಿ ತೆಗೆಸುವ ಕೆಲಸ ತನಗೆ ಕೊಡಿಸಬೇಕು ಎಂದ. ಅದನ್ನೇಕೆ ಅವನು ಮಾಡಬೇಕು ಎಂದು ಗೊತ್ತಾಗಲಿಲ್ಲ! ಅದಕ್ಕೆ ಹಣವನ್ನೂ ಕೇಳಿದ. ನಾನು ಒಪ್ಪಲಿಲ್ಲ. ಎರಡು ದಿನ ಬಿಟ್ಟು ನಮ್ಮ ಶಾಲೆಗೆ ಒಂದು ಆರ್‌ಟಿಐ ಅರ್ಜಿ ಬಂತು. ಅದರಲ್ಲಿ ನಾನು ಉತ್ತರ ಕೊಡಲಾಗದ ಪ್ರಶ್ನೆಗಳನ್ನೂ ಅದೇ ಪತ್ರಕರ್ತ ಕೇಳಿದ್ದ. ಶಾಲೆಯ ಮುಖ್ಯಸ್ಥರ ಜತೆ ಚರ್ಚೆ ಮಾಡಿದೆ. ವಕೀಲರ ಜತೆಗೂ ಚರ್ಚೆ ಮಾಡಿದೆ. ಅವರು ಉತ್ತರ ಕೊಡಬೇಕಿಲ್ಲ ಎಂದರು. ವಕೀಲರ ಮೂಲಕವೇ ಉತ್ತರ ಕೊಟ್ಟೆ.

“ಮರುದಿನ ರಾಜ್ಯ ಮಟ್ಟದ ಟಿ.ವಿ ವಾಹಿನಿಯ ವರದಿಗಾರನ ಜತೆಗೆ ಈ ಪತ್ರಕರ್ತ ನನ್ನ ಕೊಠಡಿಗೆ ನುಗ್ಗಿದ. ಮುಖಕ್ಕೆ ಕ್ಯಾಮೆರಾ ಹಿಡಿದು 'ಅದೇಕೆ ಹೀಗೆ, 'ಇದೇಕೇ ಹಾಗೆ' ಎಂದೆಲ್ಲ ಪ್ರಶ್ನೆ ಕೇಳಿದ. ಅದಕ್ಕೆಲ್ಲ ಉತ್ತರ ಕೊಟ್ಟೆ, ಸುದ್ದಿ ಪ್ರಕಟವಾದಾಗ ನನ್ನ ಮುಖ ಮಾತ್ರ ಕಾಣುತ್ತಿತ್ತು. ನಾನು ಹೇಳಿದ್ದು ಒಂದೂ ವರದಿಯಾಗಲಿಲ್ಲ. ಪತ್ರಕರ್ತ ತನಗೆ ಬೇಕಾದ ಹಾಗೆ ಸುದ್ದಿಯನ್ನು ಪ್ರಸಾರ ಮಾಡಿದ್ದ. ವಿಚಿತ್ರ ಎಂದರೆ, ನಮ್ಮ ಊರಿನ ಪತ್ರಕರ್ತ ತಿಂಗಳಿಗೆ ಒಂದು ಪತ್ರಿಕೆ ತರುತ್ತಾನೆ. ಅವನಿಗೆ ತನ್ನ ಹೆಸರನ್ನೂ ಸರಿಯಾಗಿ ಬರೆಯಲು ಬರುತ್ತದೆಯೋ ಇಲ್ಲವೋ ಗೊತ್ತಿಲ್ಲ. ಆತನಿಗೆ ಒಳ್ಳೆಯ ಮನೆ ಇದೆ, ಕಾರು ಇದೆ. ಹತ್ತು ಬೆರಳಿಗೂ ಉಂಗುರಗಳು ಇವೆ. ಆತ ತನ್ನ ಪತ್ರಿಕೆಯಲ್ಲಿ, ನಮ್ಮ ಶಾಲೆ ಬಗ್ಗೆ ಏನಾದರೂ ಲೋಪಗಳು ಇದ್ದರೆ ಬರೆಯಬಹುದಿತ್ತು. ಆದರೆ, ಅವನ ಜತೆಗೆ ರಾಜ್ಯ ಮಟ್ಟದ ಟಿ.ವಿ ವಾಹಿನಿಯ ವರದಿಗಾರನಿಗೆ ಏನು ಕೆಲಸ? ಅವನೇಕೆ ಬಂದ? ಹೀಗೆ ನೀವು ಜತೆಯಾಗಿ ಸುದ್ದಿ ಮಾಡುತ್ತೀರಾ? ಹಾಗೆ ಮಾಡುವುದಿಲ್ಲ ಎಂದು ನಾನು ಅಂದುಕೊಂಡಿದ್ದೆ!

“ಅವರು ಜತೆಯಾಗಿ ಆದರೂ ಬರಲಿ, ಒಬ್ಬಂಟಿಯಾಗಿಯಾದರೂ ಬರಲಿ. ಏನಾದರೂ ಪ್ರಶ್ನೆ ಕೇಳಲಿ, ನಾನು ಮುಚ್ಚಿ ಇಡುವಂಥದು ಏನೂ ಇರಲಿಲ್ಲ. ಆದರೆ, ನನ್ನ ಕೊಠಡಿಗೆ ಬರುವುದಕ್ಕಿಂತ ಮುಂಚೆ ನನ್ನ ಅನುಮತಿ ಕೇಳುವುದು ಬೇಡವೇ? ಹಾಗೆಯೇ ನುಗ್ಗಿ ಬಿಡಬಹುದೇ? ನನಗೆ ಪ್ರಶ್ನೆ ಕೇಳಿ ಅದಕ್ಕೆ ಉತ್ತರವನ್ನೂ ತೆಗೆದುಕೊಂಡ ಮೇಲೆ ಅದನ್ನು ಪ್ರಸಾರ ಮಾಡುವುದು ಬೇಡವೇ? ಬರೆಯುವುದು ಬೇಡವೇ? ನನ್ನ ಪುಣ್ಯ ಶಾಲೆಯ ಆಡಳಿತ ಮಂಡಳಿ, ಸಹ ಶಿಕ್ಷಕರು ನನ್ನ ಬೆನ್ನಿಗೆ ನಿಂತರು. ಇಲ್ಲದಿದ್ದರೆ ಊರಿನಲ್ಲಿ ನನ್ನ ಕಥೆ ಏನು? ಈಗ ನಾನು ಯಾರಿಗೆ ದೂರು ಕೊಡಲಿ? ಕೊಟ್ಟರೆ ಪರಿಹಾರ ಸಿಗುತ್ತದೆಯೇ? ಅದೇ ಪತ್ರಕರ್ತ ನಮ್ಮದೇ ಊರಿನ ಕಾಲೇಜಿನ ಒಬ್ಬ ಹುಡುಗ, ಒಬ್ಬ ಹುಡುಗಿ ಎಲ್ಲಿಯೋ ಮೂಲೆಯಲ್ಲಿ ನಿಂತರೆ ಮೊಬೈಲಿನಲ್ಲಿ ಅದನ್ನು ಚಿತ್ರೀಕರಣ ಮಾಡಿಕೊಳ್ಳುತ್ತಾನೆ. ಕಥೆ ಕಟ್ಟಿ ತನ್ನ ಪತ್ರಿಕೆಯಲ್ಲಿ ಬರೆಯುತ್ತೇನೆ ಎಂದು ಅವರಿಬ್ಬರ ತಂದೆ ತಾಯಿಗೆ ಹೆದರಿಸುತ್ತಾನೆ. ಅವರಿಂದ ದುಡ್ಡು ಕೀಳುತ್ತಾನೆ. ತನ್ನ ವಾಹನದ ಮೇಲೆ 'ಪ್ರೆಸ್' ಎಂದು ಹಾಕಿಕೊಂಡು ತಿರುಗುವ ಅವನಿಗೆ ಯಾವ ಕಾಯ್ದೆಯೂ ಅನ್ವಯಿಸುವುದಿಲ್ಲವೇ? ನಾವು ಸರ್ಕಾರಿ ನೌಕರರು. ತಪ್ಪು ಮಾಡಿದರೆ ನಮ್ಮನ್ನು ನೌಕರಿಯಿಂದ ಅಮಾನತು ಮಾಡುತ್ತಾರೆ. ತಪ್ಪು ಸಾಬೀತಾದರೆ ವಜಾ ಮಾಡುತ್ತಾರೆ. ಅದೆಲ್ಲ ತಡ ಆಗಬಹುದು. ಆದರೆ, ಸಾಕ್ಷ್ಯ ಇದ್ದರೆ ಶಿಕ್ಷೆ ತಪ್ಪಿದ್ದಲ್ಲ. ನೀವು ಪತ್ರಕರ್ತರು ತಪ್ಪು ಮಾಡಿದರೆ ನಿಮಗೆ ಯಾವ ಶಿಕ್ಷೆ? ಸರ್ಕಾರಿ ನೌಕರರು ಭ್ರಷ್ಟಾಚಾರ ಮಾಡಿ ಸಿಕ್ಕಿಬಿದ್ದರೆ ದೊಡ್ಡದಾಗಿ ಫೋಟೊ ಹಾಕಿ ಸುದ್ದಿ ಮಾಡುತ್ತೀರಿ. ಪತ್ರಕರ್ತರು ಭ್ರಷ್ಟಾಚಾರ ಮಾಡಿದರೆ? ನಾವು ಎಲ್ಲಿ ಬರೆಯೋಣ?

“ನಮ್ಮ ಊರಿನ ಆಸ್ಪತ್ರೆಯಲ್ಲಿ ಒಬ್ಬ ರೋಗಿಗೆ ಏನಾದರೂ ಆಗಿ ಸತ್ತರೆ ಪತ್ರಕರ್ತರು ಆಸ್ಪತ್ರೆಗೆ ಹೋಗುತ್ತಾರೆ. ಆ ರೋಗಿ ಏಕೆ ಸತ್ತ ಎಂದು ವೈದ್ಯರನ್ನು ಕೇಳುತ್ತಾರೆ. ಆಸ್ಪತ್ರೆಯ ಸಿಬ್ಬಂದಿ ಏನೇ ಹೇಳಲಿ, ನಿಮ್ಮ ನಿರ್ಲಕ್ಷ್ಯದಿಂದಲೇ ಆತ ಸತ್ತ ಎಂದು ಸುದ್ದಿ ಮಾಡುತ್ತೇವೆ ಎಂದು ಹೆದರಿಸುತ್ತಾರೆ. ಸತ್ತ ರೋಗಿಯ ಕಡೆಯವರು ಬಡವರಾಗಿದ್ದರೆ ಅವರಿಗೆ ಸಿಗುವ

ದುಡ್ಡಿನಲ್ಲಿ ಒಂದಿಷ್ಟು ಪಾಲು ಕೊಡಿಸುವ ಆಸೆ ಹುಟ್ಟಿಸುತ್ತಾರೆ. ಸುದ್ದಿಗಾರರು ಕ್ಯಾಮೆರಾ ಹಿಡಿದುಕೊಂಡು ಬಂದೇ ಬಿಡುತ್ತಾರೆ. ಯಾವ ಸುದ್ದಿ ವಾಹಿನಿ, ಯಾವ ಪೇಪರು, ಏನು ಕಥೆ ಒಂದೂ ಗೊತ್ತಾಗುವುದಿಲ್ಲ. ಆಸ್ಪತ್ರೆಯ ಮುಖ್ಯಸ್ಥರು ಮರ್ಯಾದೆಗೆ ಹೆದರಬೇಕೇ? ಇನ್ನು ಮುಂದೆ ರೋಗಿಗಳು ತಮ್ಮ ಆಸ್ಪತ್ರೆಗೆ ಬರುವುದಿಲ್ಲ ಎಂದು ಅಂಜಬೇಕೇ?

"ನೀವು ಸಮಾಜದಲ್ಲಿನ ಅಂಕುಡೊಂಕು ತಿದ್ದುವವರು ಎಂದು ನಾನು ಅಂದುಕೊಂಡಿದ್ದೆ. ಯಾವುದೋ ಊರಿನ ಯಾವುದೋ ಪುಡಿ ಪತ್ರಕರ್ತ ಹೀಗೆ ಮಾಡಿದರೂ ರಾಜ್ಯ ಮಟ್ಟದಲ್ಲಿ ನಿಮ್ಮ ಮಾನ ಹೋಗುತ್ತದೆ ಎಂದು ಅಂದುಕೊಂಡವಳು ನಾನು. ನನಗೆ ಆದ ಅವಮಾನ ದೊಡ್ಡದು ಎಂದು ನಿಮಗೇನೂ ಅನಿಸಲಿಕ್ಕಿಲ್ಲ. ನೀವು ಇಂಥ ಕಥೆಗಳನ್ನು ನಿತ್ಯ ನೂರು ಕೇಳುತ್ತ ಇರಬಹುದು. ಅಥವಾ ಕಿವುಡಾಗಿರಬಹುದು. ನನಗೇನೋ ನಿಮ್ಮ ಮುಂದೆ ಹೇಳಬೇಕು ಎಂದು ಅನಿಸಿತು; ಹೇಳಿದೆ. ಆದರೆ, ನನ್ನ ಹಾಗೆ ಅವಮಾನ ಅನುಭವಿಸಿದವರು ಏನು ಮಾಡಬೇಕು? ಇದಕ್ಕೆ ಏನಾದರೂ ಪರಿಹಾರ ಇದೆ ಎಂದು ಅಥವಾ ಇರಬೇಕು ಎಂದು ನಿಮಗೆ ಅನಿಸುವುದಿಲ್ಲವೇ? ನಿಮ್ಮ ವೃತ್ತಿಯ ಸಂಘ ಸಂಸ್ಥೆಗಳು ಇರಬೇಕಲ್ಲ? ಪತ್ರಿಕಾ ದಿನಾಚರಣೆ ಸಂದರ್ಭದಲಾದರೂ ಈ ಕುರಿತು ಚರ್ಚೆ ನಡೆಯುತ್ತದೆಯೇ? ನಡೆದಂತೆ ನನಗಂತೂ ಅನಿಸಿಲ್ಲ. ಯಾವ ಪತ್ರಿಕೆಯಲ್ಲಿಯೂ ಅದನ್ನು ಓದಿದ ನೆನಪು ನನಗೆ ಇಲ್ಲ. ನಿಮ್ಮ ವೃತ್ತಿ ಎಷ್ಟು ಕಷ್ಟದ್ದು, ಅದನ್ನು ಮಾಡುತ್ತ ಎಷ್ಟು ಜನ ಸತ್ತರು ಎಂದು ಬರೆದುಕೊಂಡ ಲೇಖನಗಳನ್ನು ಓದಿದ್ದೇನೆ. ಹಾಗೆ ಸತ್ತವರಿಗೆ ನನ್ನ ಎರಡು ಹನಿ ಕಣ್ಣೀರು ಇರಲಿ. ನಮ್ಮ ಊರಿನಲ್ಲಿ ಇರುವಂಥ ಪತ್ರಕರ್ತರ ಸಂಖ್ಯೆ ಕಡಿಮೆ ಏನೂ ಇಲ್ಲವಲ್ಲ? ಅವರ ಬಗ್ಗೆ ಏನು ಮಾಡುವುದು?

"ಪತ್ರಕರ್ತರಿಗೆ ಒಂದಿಷ್ಟು ಕನಿಷ್ಠ ವಿದ್ಯಾರ್ಹತೆ ಬೇಕು ಎಂದು ನಿಮಗೆ ಅನಿಸುವುದಿಲ್ಲವೇ? ಯಾರು ಬೇಕಾದರೂ ಪತ್ರಕರ್ತರು ಆಗಬಹುದೇ? ಬರೆಯಲು ಬರಲಿ, ಬಿಡಲಿ; ಅವರೂ ಪತ್ರಕರ್ತರು ಆಗಬಹುದೇ? ಮೊನ್ನೆ ಕೇಂದ್ರದ ವಾರ್ತಾ ಸಚಿವ ಮನೀಷ್ ತಿವಾರಿ ಪತ್ರಿಕಾ ಸಂಸ್ಥೆಗಳು ಒಂದು ಪ್ರವೇಶ ಪರೀಕ್ಷೆ ಇಟ್ಟು ಪತ್ರಕರ್ತರನ್ನು ನೇಮಕ ಮಾಡಿ- ಕೊಳ್ಳಬೇಕು ಎಂದರು. ಪತ್ರಕರ್ತರಿಗೆ ಸನ್ನದು ಇರಬೇಕು ಎಂದೂ ಹೇಳಿದರು. ಅದನ್ನು ನೀವೆಲ್ಲ ಏಕೆ ವಿರೋಧ ಮಾಡಿದಿರಿ? ಹಿಂದೆ ಪತ್ರಿಕಾ ಮಂಡಳಿ ಅಧ್ಯಕ್ಷ ಮಾರ್ಕಂಡೇಯ ಕಟ್ಜು ಅವರು, ಪತ್ರಕರ್ತರಿಗೆ ಕನಿಷ್ಠ ವಿದ್ಯಾರ್ಹತೆ ಇರಬೇಕು ಎಂದಾಗಲೂ ನೀವೆಲ್ಲ ವಿರೋಧ ಮಾಡಿದ್ದೀರಿ. ನೀವೆಲ್ಲ ನಿಮ್ಮನ್ನು ಏನು ಅಂದುಕೊಂಡಿದ್ದೀರಿ? ಸರ್ವಜ್ಞರು ಎಂದೇ? ಬ್ರಹ್ಮರು ಎಂದೇ? ಅಥವಾ ಸರಸ್ವತಿಯರು ಎಂದೇ?

"ಯಾವ ಕೆಲಸಕ್ಕೆ ವಿದ್ಯಾರ್ಹತೆ ಬೇಡ? ಶಿಕ್ಷಕರಿಗೆ ವಿದ್ಯಾರ್ಹತೆ ಬೇಡವೇ? ವಕೀಲರಿಗೆ ಬೇಡವೇ? ವೈದ್ಯರಿಗೆ ಬೇಡವೇ? ಅವರೆಲ್ಲರಿಗಿಂತ ನಿಮ್ಮದು ಹೆಚ್ಚಿನ ಜವಾಬ್ದಾರಿ. ಹಾಗೆಂದು ನೀವೇ ಅಂದುಕೊಂಡಿದ್ದೀರಿ! ನೀವು ಸಮಾಜದ ಲೋಪಗಳನ್ನು ತಿದ್ದುವ ಶಿಕ್ಷಕರು, ಒಳ್ಳೆಯದರ ಪರ ವಾದಿಸುವ ವಕೀಲರು ಮತ್ತು ಕೆಟ್ಟದ್ದನ್ನು ನಿವಾರಿಸಬೇಕು ಎನ್ನುವ ವೈದ್ಯರು. ನಿಮಗೇ ಕನಿಷ್ಠ ವಿದ್ಯಾರ್ಹತೆ ಬೇಡ ಎಂದರೆ ಆ ಎಲ್ಲರ ಕೆಲಸ ಹೇಗೆ

ಮಾಡುತ್ತೀರಿ? ವಕೀಲರು ಕೆಟ್ಟದಾಗಿ ನಡೆದುಕೊಂಡರೆ ಅವರ ಸನ್ನದು ರದ್ದಾಗುತ್ತದೆ. ವೈದ್ಯರಿಗೂ ಅಂಥದೇ ಶಿಕ್ಷೆ ಇದೆ. ನೀವು ತಪ್ಪು ಮಾಡುವುದೇ ಇಲ್ಲ ಎಂದು ನಿಮ್ಮ ಅಭಿಪ್ರಾಯವೇ? ಅದು ಹೇಗೆ ಸಾಧ್ಯ? ಪತ್ರಕರ್ತರು ಟೀಕೆಗೆ ಅಷ್ಟೇಕೆ ಹೆದರುತ್ತಾರೆ? ಇಡೀ ಜಗತ್ತನ್ನೇ ಟೀಕಿಸುವ ನಿಮ್ಮನ್ನು ಯಾರೂ ಏಕೆ ಟೀಕೆ ಮಾಡಬಾರದು? ನಿಮ್ಮ ಕೈಯಲ್ಲಿ ಪೆನ್ನು ಇದೆ. ಪೇಪರು ಇದೆ. ನಮ್ಮ ಕೈಯಲ್ಲಿ ಏನು ಇದೆ? ನಿಮ್ಮನ್ನು ನ್ಯಾಯವಾಗಿಯೇ ಬೈದು ಬರೆದರೆ ನೀವು ಪ್ರಕಟಿಸುತ್ತೀರಾ? ಎಷ್ಟು ಮಂದಿ ಪ್ರಕಟಿಸುತ್ತಾರೆ? ನನ್ನ ಕೊಠಡಿಗೆ ನುಗ್ಗಿ ನನ್ನ ಮುಖಕ್ಕೆ ಕ್ಯಾಮೆರಾ ಹಿಡಿದು ಬಾಯಿಗೆ ಬಂದಂತೆ ಪ್ರಶ್ನೆ ಕೇಳಿ ನಾನು ಕೊಟ್ಟ ಉತ್ತರವನ್ನು ಪ್ರಸಾರ ಮಾಡದ ವರದಿಗಾರರ ವಿರುದ್ಧ ನಾನು ಯಾವ ಕ್ರಮ ತೆಗೆದುಕೊಳ್ಳಲು ಸಾಧ್ಯ? ನನಗೆ ಎಂಥ ಅವಮಾನ ಆಗಿದೆ ಎಂದು ನಾನು ನಿಮಗೆ ಹೇಗೆ ಹೇಳಲಿ? ನಿಮಗೆ ಇದೆಲ್ಲ ಅರ್ಥ ಆಗುತ್ತದೆಯೇ? ಉದ್ಯಮದಲ್ಲಿ ಹೀಗೆಲ್ಲ ಆಗುವುದು ನಿಮ್ಮ ಪತ್ರಕರ್ತರ ಸಂಘಗಳಿಗೆ ಗೊತ್ತಿಲ್ಲವೇ? ಒಬ್ಬನ ಮೇಲಾದರೂ ಸಂಘ ಕ್ರಮ ತೆಗೆದುಕೊಂಡಿದೆಯೇ? ಯಾವ ವೃತ್ತಿಯೂ ನಿಮ್ಮಷ್ಟು ರಕ್ಷಣಾತ್ಮಕ ಎಂದು ನನಗೆ ಅನಿಸಿಲ್ಲ. ನಿಮಗೆ ಒಂದಿಷ್ಟು ವಿದ್ಯಾರ್ಹತೆ, ಒಂದಿಷ್ಟು ಸನ್ನಡತೆ ಇರಬೇಕು ಎಂದ ಕೂಡಲೇ ಅದನ್ನು ಪತ್ರಿಕಾ ಸ್ವಾತಂತ್ರ್ಯಕ್ಕೆ ಲಗಾಮು ಎಂದು ಏಕೆ ಅಂದುಕೊಳ್ಳುತ್ತೀರಿ?"..

ದೀರ್ಘ ಮೌನದ ನಂತರ ಅವರು ಫೋನ್ ಸಂಪರ್ಕ ಕಡಿದು ಹಾಕಿದರು. ಅವರಿಗೆ ನಿಜವಾಗಿಯೂ ತುಂಬ ಅವಮಾನ ಆಗಿದ್ದಂತೆ ಅನಿಸಿತು. ಅವರ ಮಾತಿನಲ್ಲಿ ಮತ್ತೆ ಮತ್ತೆ ಅದು ಧ್ವನಿಸುತ್ತಿತ್ತು. ಅವರು ಹೇಳುವುದರಲ್ಲಿ ಒಂದಿಷ್ಟೂ ಸುಳ್ಳು ಇರಲಿಲ್ಲ. ನಡು ನಡುವೆ ನಾನು ಏನಾದರೂ ಹೇಳಲು ಹೋದರೆ, 'ಸುಮ್ಮನೆ ಕೇಳಿಸಿಕೊಳ್ಳಿ' ಎಂದು ಗದರಿದರು. ಒಂದು ಸಾರಿ ಅವರಿಗೆ ಎಲ್ಲವನ್ನೂ ಹೇಳಿ ಬಿಡಬೇಕು ಎಂದು ಅನಿಸಿರಬೇಕು. ನಾನೂ ಏನೂ ಮಾತನಾಡದೆ ಸುಮ್ಮನೆ ಕೇಳಿಸಿಕೊಂಡೆ. ಅವರಿಗೆ ಹೇಗೆ ಸಮಾಧಾನ ಹೇಳಬೇಕು ಎಂದು ನನಗೆ ಗೊತ್ತಿರಲಿಲ್ಲ. ಅವರು ಕೇಳಿದ ಪ್ರಶ್ನೆಗಳಿಗೆ ಲೆಕ್ಕವಿರಲಿಲ್ಲ. ಆ ಹೆಣ್ಣು ಮಗಳು ಬಿಡಿ. ಅವರು ನನಗೆ ಏನೋ ಹೇಳಿದರು. ನಾನು ಏನೋ ಬರೆದೆ, ಮನೀಷ್ ತಿವಾರಿ, ಮಾರ್ಕಂಡೇಯ ಕಟ್ಜು ಅವರು ಹೇಳುವುದನ್ನು ಹೀಗೆಯೇ ಅಲಕ್ಷಿಸಿ ಬಿಡಬಹುದೇ? ಅವರೂ ನಮ್ಮ ವೃತ್ತಿಯ ಮುಂದೆ ಪ್ರಶ್ನೆಗಳನ್ನು ಇಡುತ್ತಿದ್ದಾರೆ. ಅವರಿಗೆ ಈಗ ಕೊಟ್ಟ ಹಾಗೆಯೇ ಎಷ್ಟು ದಿನ ಉತ್ತರ ಕೊಡುವುದು? ನಾವು ಅಷ್ಟು ಪ್ರಶ್ನಾತೀತರೇ? ನನಗಂತೂ ಅರ್ಥ ಆಗುತ್ತಿಲ್ಲ.

01.09.2013

# ಪತ್ರಿಕೋದ್ಯಮಕ್ಕೆ ಇದು ಕೊನೆಯ ಅವಕಾಶವೇ?

ಪತ್ರಿಕೋದ್ಯಮ ಕಷ್ಟದಲ್ಲಿ ಇದೆಯೇ? ಅದು ಎಷ್ಟು ಕಷ್ಟದಲ್ಲಿ ಇದೆ ಎಂದರೆ ಅದನ್ನು ಸುಧಾರಿಸಲು ಇದು ಕೊನೆಯ ಅವಕಾಶವೇ? ಪತ್ರಿಕಾ ಕ್ಷೇತ್ರದಲ್ಲಿ ದುಡಿಯುವವರ ಬಗ್ಗೆ ಜನರಿಗೆ ಅನುಮಾನಗಳು ಶುರುವಾಗಿವೆಯೇ? ಅವರನ್ನೂ ಭ್ರಷ್ಟರ ಪಟ್ಟಿಯಲ್ಲಿ ಜನರು ಸೇರಿಸಿ ಬಿಟ್ಟಿದ್ದಾರೆಯೇ? ಪತ್ರಿಕೋದ್ಯಮ ವಿಶ್ವಾಸದ ಬಿಕ್ಕಟ್ಟನ್ನು ಎದುರಿಸುತ್ತಿದೆಯೇ?..

ನನ್ನ ಪ್ರೀತಿಯ ಪತ್ರಕರ್ತ ವಿನೋದ್ ಮೆಹ್ತಾ, 'ಎಡಿಟರ್ ಅನ್‌ಪ್ಲಗ್' ಎಂದು ಮತ್ತೆ ಒಂದು ಪುಸ್ತಕ ಬರೆದಿದ್ದಾರೆ. ಕಳೆದ ತಿಂಗಳ ಕೊನೆಯಲ್ಲಿ ಅದು ಬಿಡುಗಡೆಯಾಗಿದೆ. 2011ರಲ್ಲಿ ಅವರು ತಮ್ಮ ಆತ್ಮಚರಿತ್ರೆ 'ಲಖನೌ ಬಾಯ್' ಬಿಡುಗಡೆ ಮಾಡಿದ್ದರು. ಹೊಸ ಪುಸ್ತಕವನ್ನೂ ಪೆಂಗ್ವಿನ್‌ನವರೇ ಪ್ರಕಟ ಮಾಡಿದ್ದಾರೆ. ಕಳೆದ ವರ್ಷದ ಕೊನೆಯಿಂದ ಈ ವರ್ಷದ ಆರಂಭದವರೆಗೆ ಒಂದೇ ಪಟ್ಟಿಗೆ ಓದಿದ ಈ ಪುಸ್ತಕ ನಾನು ಈಚೆಗೆ ಓದಿದ ಅತ್ಯುತ್ತಮ ಪುಸ್ತಕ. ಮಾಧ್ಯಮದಲ್ಲಿ ಇರುವವರು, ಮಾಧ್ಯಮದಲ್ಲಿ ಏನೇನು ಆಗುತ್ತಿದೆ ಎಂದು ಆಸಕ್ತಿ ಇರುವವರು ಓದಲೇಬೇಕಾದ ಪುಸ್ತಕ ಕೂಡ.

ಅವರ ಮೊದಲ ಪುಸ್ತಕದಲ್ಲಿ ಆತ್ಮಚರಿತ್ರೆಯ ಅಂಶಗಳು ಹೆಚ್ಚಿಗೆ ಇದ್ದುವು. ಅದಕ್ಕೆ ಪೂರಕವಾಗಿರುವ ಎರಡನೇ ಮತ್ತು ಅವರೇ ಹೇಳಿದ ಹಾಗೆ ಕೊನೆಯದಾಗಿರುವ ಈ ಪುಸ್ತಕದಲ್ಲಿ ಆತ್ಮಚರಿತ್ರೆಯ ಅಂಶಗಳು ಹೆಚ್ಚಿಗೆ ಇಲ್ಲ. ಅವು ಅಲ್ಲಲ್ಲಿ ಇಣುಕಿದರೂ ಒಟ್ಟಾರೆಯಾಗಿ ಪತ್ರಿಕೋದ್ಯಮದ ಏರುಪೇರು ಕುರಿತ ಪುಸ್ತಕ ಇದು. ತನ್ನ ಸುವರ್ಣ ಕಾಲದಿಂದ ಸುಧಾರಿಸಿಕೊಳ್ಳಲು ಕೊನೆಯ ಅವಕಾಶ ಎನ್ನುವ ಹಂತಕ್ಕೆ ಬಂದು ನಿಂತಿರುವ ಉದ್ಯಮದ ಚಕ್ರಗತಿಯನ್ನೂ ಈ ಪುಸ್ತಕ ಗುರುತಿಸುತ್ತದೆ.

Drinking in the Last Chance Saloon' ಎಂಬ ಅಧ್ಯಾಯದಲ್ಲಿ ಅದನ್ನೇ ಅವರು ದೀರ್ಘವಾಗಿ ಚರ್ಚಿಸಿದ್ದಾರೆ. ಬಹುಶಃ ಪುಸ್ತಕದ ಅತ್ಯುತ್ತಮ ಎನ್ನಬಹುದಾದ ಅಧ್ಯಾಯ ಕೂಡ ಅದೇ ಆಗಿದೆ. ಎರಡನೇ ಅತ್ಯುತ್ತಮ ಅಧ್ಯಾಯ ನೀರಾ ರಾಡಿಯಾ ಕುರಿತಾದುದು. ಎರಡಕ್ಕೂ ಒಂದು ಅಂತರ್‌ಸಂಬಂಧವೂ ಇದೆ! ಪತ್ರಿಕೋದ್ಯಮದ ಸುವರ್ಣ ಕಾಲ ಎಂದು ಯಾವ ಕಾಲಘಟ್ಟಕ್ಕೆ ಕರೆಯಬೇಕು? ಅದು ಅರವತ್ತು ಮತ್ತು ಎಪ್ಪತ್ತನೇ ದಶಕದಲ್ಲಿಯೇ ಮುಗಿದು ಹೋಯಿತೇ? ಆಗೆಲ್ಲ ಎಂಥೆಂಥ ಪತ್ರಕರ್ತರು ಇದ್ದರು!

ಶ್ಯಾಮಲಾಲ್, ಗಿರಿಲಾಲ್ ಜೈನ್, ಎನ್.ಜೆ.ನಾನ್‌ಪೊರಿಯಾ, ಖುದ್ವಂತ್‌ಸಿಂಗ್, ಫ್ರಾಂಕ್ ಮೊರೇಸ್, ಎಸ್.ಮುಳಗಾಂವಕರ್, ಜಾರ್ಜ್ ವರ್ಗೀಸ್... ಒಬ್ಬರೇ ಇಬ್ಬರೇ? ಎಲ್ಲರೂ ದೊಡ್ಡವರು. ಗಿರಿಲಾಲ್ ಜೈನ್ ಅವರಂತೂ ತಾವು ಪ್ರಧಾನಿಗೆ ಮತ್ತು ಇನ್ನೊಬ್ಬರಿಗೆ ಮಾತ್ರ ಬರೆಯುತ್ತೇನೆ ಎಂದುಕೊಂಡಿದ್ದರು! ಆದರೆ, ಇನ್ನೊಬ್ಬರು ಯಾರು ಎಂದು ಅವರಿಗೆ ಗೊತ್ತಿರಲಿಲ್ಲ! ಅವರೆಲ್ಲ ಪತ್ರಿಕೆಯಲ್ಲಿ ಸಂಪಾದಕೀಯ ಪುಟವೇ ಶ್ರೇಷ್ಠ ಪಟ ಎಂದುಕೊಂಡವರು.

ಆಗಿನ ಕಾಲದಲ್ಲಿ ಪತ್ರಿಕೆಗಳಲ್ಲಿ ಒಂದು ವಿನ್ಯಾಸ ಎಂದು ಇರುತ್ತಿರಲಿಲ್ಲ. ಮೊದಲನೇ ಪುಟದಲ್ಲಿ ಕನಿಷ್ಠ ನೂರು ಸುದ್ದಿಗಳು ಇರುತ್ತಿದ್ದುವು. ಆಗಿನ ಪ್ರಧಾನಿಯೋ, ಮುಖ್ಯಮಂತ್ರಿಯೋ ಏನು ಹೇಳಿದರೂ ಅದೇ ಮರುದಿನದ ಮುಖ್ಯ ಸುದ್ದಿ ಎಂದು ಅನಿಸುತ್ತಿತ್ತು. ಅವರೆಲ್ಲ ಒಂದು ರೀತಿಯಲ್ಲಿ ದಂತಗೋಪುರದಲ್ಲಿ ಇದ್ದ ಸಂಪಾದಕರು. ಹಾಗೆ ನೋಡಿದರೆ ಅವರ ಪೈಕಿ ಖುದ್ವಂತ್ ಸಿಂಗ್ ಒಬ್ಬರೇ ಒಂದಿಷ್ಟು ಹುಲುಮಾನವರ ಜತೆ ಮಾತನಾಡಬಹುದಾದಂಥ ವ್ಯಕ್ತಿಯಾಗಿದ್ದರು. ಉಳಿದ ಎಲ್ಲರಿಗಿಂತ ಅವರಿಗೆ ನೆಲದ ಜತೆಗೆ, ಮಣ್ಣಿನ ಜತೆಗೆ ಹೆಚ್ಚು ಸಂಪರ್ಕ ಇತ್ತು. ಪೋಲಿ ಮಾತುಗಳನ್ನು ಆಡಿ, ಬರೆದು ಸಿಂಗ್ ಕಾಲ ಕಳೆಯುತ್ತಿದ್ದರು.

ಹಳೆಯ ಕಾಲದ ಸಂಪಾದಕರ ಬಗ್ಗೆ, ಅವರು ತಮ್ಮ ಸುತ್ತಲೇ ಸುತ್ತಿಕೊಂಡ ಪ್ರಭಾವಳಿಯ ಬಗ್ಗೆ ಏನೇ ಹೇಳಿದರೂ ಅವರಿಗೆ ರಾಜಕೀಯ ಆಕಾಂಕ್ಷೆಗಳು ಇರಲಿಲ್ಲ. ಹಣ ಅವರಿಗೆ ಮುಖ್ಯ ಎನಿಸಿರಲಿಲ್ಲ. ಅವರು ರಾಜ್ಯಸಭೆಗೋ, ವಿಧಾನ ಪರಿಷತ್ತಿಗೋ ಅಥವಾ ಇನ್ನಾವುದೋ ಸರ್ಕಾರದ ಹುದ್ದೆಗೆ ಹೋಗಲು ಆಸೆಪಟ್ಟವರು ಅಲ್ಲ. ಅವರು ಏನಿದ್ದರೂ ತಾವು ಕೆಲಸ ಮಾಡುವ ರಾಜ್ಯದ ಅಥವಾ ರಾಷ್ಟ್ರದ ಪತ್ರಿಕೆಯನ್ನು ಸಂಪಾದನೆ ಮಾಡುವುದೇ ದೊಡ್ಡ ಕೆಲಸ, ಗೌರವ ಎಂದು ಅಂದುಕೊಂಡವರು.

ದೇಶದ ಮೊದಲ ಪ್ರಧಾನಿ ಜವಹರಲಾಲ್ ನೆಹರೂ ಹೇಳಿದ ಹಾಗೆ, ಜನರ ಕಣ್ಣೀರು ಒರೆಸುವುದೇ ತಮ್ಮದೂ ಕೈಂಕರ್ಯ ಎಂದುಕೊಂಡವರು. ಈಗಿನ ಸಂಪಾದಕರ ಹಾಗೆ ಜಾಹೀರಾತುದಾರರ ಜತೆಗೆ ಪಂಚತಾರಾ ಹೋಟೆಲ್‌ಗೆ ಹೋಗಿ ಸಭೆ ಮಾಡಬೇಕು ಎಂದು ಅವರಿಗೇನಾದರೂ ಅವರ ಮಾಲೀಕರು ಹೇಳಿದ್ದರೆ ಬಹುಶಃ ಅವರು ರಾಜೀನಾಮೆ ಕೊಟ್ಟು ಹೊರಟುಬಿಡುತ್ತಿದ್ದರು.

ಈಗ ಕಾಲ ಬದಲಾಗಿದೆ. ಸಂಪಾದಕೀಯ ಪುಟವನ್ನು ಓದುವವರು ಕಡಿಮೆ.

ಮುಖಪುಟ ರೂಪಿಸಲು ನಮ್ಮೊಳಗೇ ಭಾರಿ ಪೈಪೋಟಿ ನಡೆದಿದೆ. ಅದಕ್ಕೇ ನಾವು ಚಿತ್ರ ವಿಚಿತ್ರ ಶೀರ್ಷಿಕೆ ಕೊಡುತ್ತಿದ್ದೇವೆ. ಪತ್ರಿಕೆಗಳ ಸಂಖ್ಯೆ ಬೆಳೆದಿದೆ. ಸಂಖ್ಯೆಯನ್ನು ಬೆಳೆಸಲು ಏನೇನು ಮಾಡಬೇಕೋ, ಮಾಡಬಾರದೋ ಅದನ್ನೂ ಮಾಡುತ್ತಿದ್ದೇವೆ. ಮೆಪ್ತಾ ಅವರು ತಮ್ಮ ಪುಸ್ತಕದಲ್ಲಿ ಈಗಿನ ಸ್ಪರ್ಧೆಯನ್ನು 'ಹುಚ್ಚುತನದ್ದು' ಎಂದು ಕರೆದಿದ್ದಾರೆ. ಎಪ್ಪತ್ತರ ದಶಕದಲ್ಲಿ 12,000 ಇದ್ದ ಪತ್ರಿಕೆಗಳ ಸಂಖ್ಯೆ ಈಗ ಪ್ರಾದೇಶಿಕ ಪತ್ರಿಕೆಗಳ ಸಂಖ್ಯೆಯನ್ನೂ ಸೇರಿಸಿದರೆ 80,000ಕ್ಕೆ ಏರಿದೆ. 33 ಕೋಟಿ ಪತ್ರಿಕೆಗಳು ಮಾರಾಟ ಆಗುತ್ತಿವೆ. ಒಂದು

ಪತ್ರಿಕೆಯ ಯಶಸ್ಸಿನಲ್ಲಿ ಸಂಪಾದಕನ ಪಾತ್ರ ದೊಡ್ಡದು. ಅದು ಸೋತರೆ ಅವನ ಕತ್ತು ಕಳಚಿ ಬೀಳುತ್ತದೆ. ಗೆದ್ದರೆ ಮಾರುಕಟ್ಟೆ ವಿಭಾಗಕ್ಕೆ ತುರಾಯಿ ಸಿಗುತ್ತದೆ!

ಎಪ್ಪತ್ತರ ದಶಕದ ಸಂಪಾದಕ ತನ್ನನ್ನೇ ತಾನು ವೃತ್ತಿಗೆ ಸಮರ್ಪಿಸಿಕೊಂಡಿದ್ದ. ಆತ ತುಂಬ ಓದಿಕೊಂಡವನಾಗಿದ್ದ, ಅನುಭವಿಯಾಗಿದ್ದ. ಆದರೆ, ಆತ ಈಗಿನ ಕಾಲದ ಸಂಪಾದಕನ ಹಾಗೆ 'ಆಲ್ ರೌಂಡರ್' ಆಗಿರಲಿಲ್ಲ. ಈಗಿನ ಸಂಪಾದಕ ಬ್ಯಾಟಿಂಗು, ಬೌಲಿಂಗು, ಫೀಲ್ಡಿಂಗು ತಿಳಿದವನು ಮಾತ್ರ ಆಗಿದ್ದರೆ ಸಾಲದು. ಅಗತ್ಯ ಬಿದ್ದರೆ 12ನೇ ಆಟಗಾರನ ಹಾಗೆ 'ಡ್ರಿಂಕ್ಸ್' ಅನ್ನೂ ತಂದು ಕೊಡಬೇಕು' ಎಂದು ಮೆಹ್ರಾ ಆತನ ಅಥವಾ ಆಕೆಯ ಕಷ್ಟಗಳನ್ನು ಗುರುತಿಸಿದ್ದಾರೆ.

ಸಂಪಾದಕ ಎದುರಿಸುವ ಕಷ್ಟಕ್ಕೂ ಉದ್ಯಮ ಎದುರಿಸುತ್ತಿರುವ ಕಷ್ಟಕ್ಕೂ ಸಂಬಂಧ ಇದೆಯೆ? ಉದ್ಯಮ ಶ್ರೀಮಂತ ಆಗುತ್ತ ಹೊರಟಿರಬಹುದು, ಆದರೆ ಅದು ಜನರ ವಿಶ್ವಾಸದ ವಿಚಾರದಲ್ಲಿ ಬಡವಾಗುತ್ತ ಹೊರಟಿದೆಯೇ? ಮೆಸ್ತಾ ತಾವು ಸಂಪಾದಿಸುತ್ತಿದ್ದ 'ಔಟ್‌ಲುಕ್' ವಾರಪತ್ರಿಕೆಯಲ್ಲಿ ಹತ್ತು ವರ್ಷಗಳ ಹಿಂದೆ ನಡೆಸಿದ ಸಮೀಕ್ಷೆಯೊಂದನ್ನು ಪ್ರಸ್ತಾಪಿಸಿದ್ದಾರೆ. ಯಾವ ಯಾವ ವೃತ್ತಿಗೆ ಸಮಾಜದಲ್ಲಿ ಎಷ್ಟೆಷ್ಟು ಗೌರವ ಇದೆ ಎಂದು ಅರ್ಥಮಾಡಿಕೊಳ್ಳುವ ಸಮೀಕ್ಷೆ ಅದು.

ಎಂದಿನಂತೆ ರಾಜಕಾರಣಿಗಳು ಭ್ರಷ್ಟರ ಪಟ್ಟಿಯಲ್ಲಿ ಮೊದಲಿನ ಸ್ಥಾನದಲ್ಲಿ ಇದ್ದರು. ಜನರಿಗೆ ಅವರ ಬಗ್ಗೆ ಯಾವ ಗೌರವವೂ ಇರಲಿಲ್ಲ. ವೈದ್ಯರು, ಶಿಕ್ಷಕರು, ವಿಜ್ಞಾನಿಗಳು, ಸ್ವಯಂ ಸೇವಾ ಸಂಸ್ಥೆ ನಡೆಸುವವರಿಗೆ ಉನ್ನತ ಗೌರವದ ಸ್ಥಾನ ಇತ್ತು. ಪತ್ರಕರ್ತರ ಬಗೆಗೂ ಅಂಥ ಕೆಟ್ಟ ಅಭಿಪ್ರಾಯವೇನೂ ಇರಲಿಲ್ಲ. ಈಚೆಗೆ 'ಇಂಡಿಯಾ ಟುಡೆ' ನಡೆಸಿದ ಅದೇ ಬಗೆಯ ಸಮೀಕ್ಷೆಯಲ್ಲಿ ಪತ್ರಕರ್ತರೂ ಭ್ರಷ್ಟರ ಪಟ್ಟಿಯಲ್ಲಿ ಮೇಲಿನ ಮೂರು ನಾಲ್ಕು ಸ್ಥಾನಗಳಲ್ಲಿಯೇ ಇದ್ದಾರೆ.

ಏಕೆ ಹೀಗಾಯಿತು? ಉನ್ನತ ಆದರ್ಶಗಳನ್ನು ಇಟ್ಟುಕೊಂಡು, ಸಮಾಜವನ್ನು ಬದಲಿಸಬೇಕು. ಎಂಬ ಉಮೇದಿನಿಂದ ಬಂದ ಹೊಸ ಕಾಲದ ಹುಡುಗ ಹುಡುಗಿಯರಿಗೆ ತೋಟಗಳಲ್ಲಿ ಬಂಗಲೆಗಳನ್ನು ಕಟ್ಟಿಸಿಕೊಂಡ, ದುಬಾರಿ ಕಾರುಗಳಲ್ಲಿ ಸಂಚರಿಸುವ ಪ್ರಧಾನ ಸಂಪಾದಕರು ಒಳ್ಳೆಯ ಮಾದರಿಗಳನ್ನು ಹಾಕಿಕೊಟ್ಟಿಲ್ಲ ಎಂದು ಮೆಸ್ತಾ ವಿಷಾದಿಸಿದ್ದಾರೆ. ಸಮಸ್ಯೆ ಏನಾಗಿದೆ ಎಂದರೆ ನಮ್ಮ ವರ್ತನೆಗಳು ಸಾರ್ವಜನಿಕ ಬದುಕಿನಲ್ಲಿ ವಿಮರ್ಶೆಗೆ ಒಳಪಡಬೇಕು ಎಂದು ನಾವು ಬಯಸಿಲ್ಲ.

ಪತ್ರಕರ್ತರೂ ರಾಜಕಾರಣಿಗಳ ಹಾಗೆ ಪ್ರತಿ ವರ್ಷ ತಮ್ಮ ಆಸ್ತಿಪಾಸ್ತಿ ಘೋಷಿಸಬೇಕು ಎಂದು ನಮ್ಮವರಲ್ಲಿಯೇ ಯಾರಾದರೂ ಹೇಳಿದರೆ ಆತನಿಗೆ 'ಹರಿಶ್ಚಂದ್ರ' ಎಂದು ಹಂಗಿಸಿದ್ದೇವೆ. ಬೇರೆ ಯಾರಾದರೂ ಹೇಳಿದರೆ ಪತ್ರಿಕಾ ಸ್ವಾತಂತ್ರಕ್ಕೆ ಧಕ್ಕೆ ಎಂದು ಹುಯಿಲು ಎಬ್ಬಿಸಿದ್ದೇವೆ. ದೂರ ಸಂಪರ್ಕ ತರಂಗಾಂತರ ಹಂಚಿಕೆಗೆ ಸಂಬಂಧಿಸಿದಂತೆ ಲಾಬಿ ಮಾಡಿ ಸಿಕ್ಕಿ ಬಿದ್ದ ನೀರಾ ರಾಡಿಯಾ ಟೇಪುಗಳನ್ನು ಬಹಿರಂಗ ಪಡಿಸಿ ಕಷ್ಟದಲ್ಲಿ ಸಿಲುಕಿದ

ವಿನೋದ್ ಮೆಸ್ತಾ ಒಟ್ಟು ಪತ್ರಿಕೋದ್ಯಮದಲ್ಲಿ ಅದು ಒಂದು 'ಪ್ರಮುಖ ಕಾಲಘಟ್ಟ' ಎಂದು ಗುರುತಿಸಿದ್ದಾರೆ. ಪತ್ರಕರ್ತರನ್ನು ನೀರಾ ಬೆತ್ತಲು ಮಾಡಿಬಿಟ್ಟರು.



ಬೆತ್ತಲಾದವರಲ್ಲಿ ಪತ್ರಕರ್ತೆಯರೂ ಇದ್ದರು! ಎಲ್ಲಿಂದಲೋ ಬಂದ ಈ ಚೆಲುವೆ ಎಲ್ಲ ಸಂಸ್ಥೆಗಳ ದೌರ್ಬಲ್ಯವನ್ನು ತೆರೆದು ಇಟ್ಟರು. ಯಾರಿಗೂ ಲಂಚ ಕೊಡದವರು, ಏನನ್ನೂ ಅಕ್ರಮ ಮಾಡದವರು ಎಂಬ ಪ್ರಖ್ಯಾತಿಯ ಉದ್ಯಮಿಗಳ ಅಚ್ಚ ಬಿಳಿ ಅಂಗಿಯ ಮೇಲೂ ಕಪ್ಪು ಕಲೆಗಳು ಇವೆ ಎಂದು ತೋರಿಸಿಕೊಟ್ಟರು. ಎಪ್ಪತ್ತರ ದಶಕದಲ್ಲಿ ಯಾವ ಪತ್ರಕರ್ತರ ಕೊಠಡಿಗೆ ಹೋಗಲು ಹೆದರಿಕೆ ಆಗುತ್ತಿತ್ತೋ ಈಗ ಅವರೂ ನಮ್ಮ ಹಾಗೆಯೇ ಆಮಿಷಗಳಿಗೆ ಬಲಿಯಾಗುವವರು ಮತ್ತು ಮನುಷ್ಯರು ಎಂದು ಅವರನ್ನು 'ಬಲಿ' ಹಾಕಬೇಕು ಎಂದು ಕಾಯುವವರಿಗೆ ಗೊತ್ತಾಯಿತು.

ತನ್ನ ಅನುಕೂಲಕ್ಕೆ ಪತ್ರಿಕೆಯನ್ನು ಬಳಸಿಕೊಳ್ಳಬಹುದು, ಅದರಿಂದ ತಾನೂ ಅನುಕೂಲ ಪಡೆಯಬಹುದು, ತನಗೆ ಅನುಕೂಲ ಮಾಡಿಕೊಟ್ಟವನಿಗೂ ಒಂದಿಷ್ಟು ಅನುಕೂಲ ಮಾಡಿಕೊಡಬಹುದು ಎಂದು ಅವರಿಗೆಲ್ಲ ಗೊತ್ತಾಯಿತು. ಮೊದಲು ಚಿಟಿಕೆ ಉಪ್ಪಿನ ಜತೆಗೆ ಪತ್ರಿಕೆ ಓದುತ್ತಿದ್ದ ಜನರು ಈಗ ಪಕ್ಕದಲ್ಲಿ ಒಂದು ಬಕೆಟ್ ಉಪ್ಪು ಇಟ್ಟುಕೊಂಡು ಪತ್ರಿಕೆ ಓದುವಂತೆ ಆಯಿತು. ಟೀವಿ ಜಗತ್ತಿನದು ಇನ್ನೊಂದು ಕಥೆ.

ಪತ್ರಕರ್ತರಿಗೆ ಸಾಮಾನ್ಯವಾಗಿ ತಲೆಯ ಮೇಲೆ ಎರಡು ಮೂರು ಕೊಂಬುಗಳು ಇರುತ್ತವೆ; ಟೀವಿ ಪತ್ರಕರ್ತರಿಗೆ ತಲೆ ತುಂಬ ಬರೀ ಕೊಂಬುಗಳು! ಅವರನ್ನು ಹಿಡಿದು ನಿಲ್ಲಿಸಿ ಮಾತನಾಡುವುದೇ ಕಷ್ಟ. ಅವರೆಲ್ಲ ಬೇರೆ ಲೋಕದಿಂದ ಬಂದವರ ಹಾಗೆ ಕಾಣಿಸುತ್ತಾರೆ! ಇಡೀ ದೇಶವೇ ತಮ್ಮ ಮಾತನ್ನು ಕೇಳುತ್ತದೆ ಎನ್ನುವ ಹಾಗೆ ಬೋಧಿಸುತ್ತಾರೆ. ಐದು ವರ್ಷಗಳ ಹಿಂದೆ ನೀರಾ ರಾಡಿಯಾ ಟೇಪುಗಳನ್ನು ಬಹಿರಂಗ ಮಾಡಿದವರು ವಿನೋದ್ ಮೆಹ್ರಾ. ಯಾವ ಪತ್ರಿಕೆಯಲ್ಲಿಯೂ ಬಹುಕಾಲ ಉಳಿಯದ ಮೆಹ್ರಾ, ರಹೇಜಾ ಒಡೆತನದ 'ಔಟ್‌ಲುಕ್' ಪತ್ರಿಕೆಯಲ್ಲಿ 17 ವರ್ಷ ನಿರಂತರವಾಗಿ ಕೆಲಸ ಮಾಡಿದ್ದು ಉಳಿದವರಿಗೆ ಮಾತ್ರವಲ್ಲ ಸ್ವತಃ ಅವರಿಗೂ ಅಚ್ಚರಿ. ಆದರೆ, ಅದೇ ಟೇಪು, ಮೆಹ್ರಾ ಅವರ ಸಂಪಾದಕತ್ವಕ್ಕೂ ಸಂಚಕಾರ ತಂದಿತು.

ಇದನ್ನು ಮೆಹ್ರಾ, ತಮ್ಮ ಹೊಸ ಪುಸ್ತಕ ಬಿಡುಗಡೆ ಆಗುವುದಕ್ಕಿಂತ ಮುಂಚೆ 'ಸ್ಕ್ರೂಲ್' ಆನ್‌ಲೈನ್ ಸುದ್ದಿ ಸಂಸ್ಥೆಗೆ ಕೊಟ್ಟ ಸಂದರ್ಶನದಲ್ಲಿ ಒಪ್ಪಿಕೊಂಡಿದ್ದರು. ಪತ್ರಿಕೆಗಳ ಸತ್ಯ ಪ್ರತಿಪಾದನೆಯ ಕೆಲಸದಲ್ಲಿ ಜಾಹೀರಾತು ಹಿತಾಸಕ್ತಿ ಹೇಗೆ ಅಡ್ಡಿಯಾಗುತ್ತದೆ ಎಂಬುದಕ್ಕೆ ರಾಡಿಯಾ ಟೇಪು ಪ್ರಕರಣ ಒಂದು ಬಹುದೊಡ್ಡ ನಿದರ್ಶನವೇ? ಇಲ್ಲ

ಎಂದು ಹೇಳುವುದು ಬಹಳ ಕಷ್ಟ ಈ ಟೇಪ ಬಹಿರಂಗ ಮಾಡುವ ಮೂಲಕ ಉದ್ಯಮದಲ್ಲಿ ಮತ್ತು ವೃತ್ತಿಯಲ್ಲಿ ಬಹುದೊಡ್ಡ ಸಂಚಲನ ಮೂಡಿಸಿದ್ದ ಮೆಹ್ರಾ ಕೂಡ ಈಗ 'ಕಿಚ್ಚು ಇಲ್ಲದ ಸಂಪಾದಕ!' (Editor Unplugged!).

ಸಂಪಾದಕನಲ್ಲಿ ಕಿಚ್ಚು ಇರಬೇಕು. ಕೆಚ್ಚ ಇರಬೇಕು. ಏಕೆಂದರೆ ರಾಜಕಾರಣ ಮತ್ತು ಪತ್ರಿಕೆಗಳ ನಡುವೆ ಸಂಬಂಧ ಸುಮಧುರ ಆಗುತ್ತ ಹೋದಷ್ಟೂ ಜನರ ಕಷ್ಟಗಳು ಹೆಚ್ಚಾಗುತ್ತ ಹೋಗುತ್ತವೆ. ಜನರಿಗೆ ಪತ್ರಿಕೆಗಳ ಮೇಲಿನ ನಂಬಿಕೆ ಕಡಿಮೆ ಆಗುತ್ತ ಹೋಗುತ್ತದೆ. ಪತ್ರಿಕೆಗಳ ಬಗೆಗೆ ಜನರಿಗೆ ಈಗ ಆಕ್ಷೇಪ ಇದ್ದರೆ ಅವರು ಯಾರ ಬಳಿಯೂ ಹೋಗುವಂತೆ ಇಲ್ಲ.



ದೂರುವಂತೆ ಇಲ್ಲ. ಪತ್ರಿಕಾ ಮಂಡಳಿಗೆ ಮಾರ್ಕಂಡೇಯ ಕಟ್ಜು ಅವರಂಥ ಖಡಕ್ ನಿವೃತ್ತ ನ್ಯಾಯಮೂರ್ತಿಗಳು ಅಧ್ಯಕ್ಷರಾದರೂ ದಾರಿ ತಪ್ಪಿದ ಒಂದು ಪತ್ರಿಕೆಯನ್ನೂ ಅವರು ಸರಿದಾರಿಗೆ ತರಲು ಆಗಲಿಲ್ಲ.

ಹಾಗಾದರೆ, ಮಾಧ್ಯಮದವರನ್ನೇ ಒಳಗೊಂಡ ಒಂದು ಸಂಸ್ಥೆಯನ್ನು ಏಕೆ ಸ್ಥಾಪಿಸಬಾರದು ಎಂದು ಮೆಸ್ತಾ ಪ್ರಶ್ನಿಸಿದ್ದಾರೆ. ನಾವು ನಾವೇ ಸೇರಿಕೊಂಡು ಒಂದು ಸಂಸ್ಥೆಯನ್ನು ಹುಟ್ಟುಹಾಕಬೇಕು. ತಪ್ಪು ಮಾಡಿದ ಮಾಧ್ಯಮದವರನ್ನು ಅವರೇ ಕರೆದು ವಿಚಾರಿಸಬೇಕು. ಅವರೇ ಶಿಕ್ಷೆ ಕೊಡಬೇಕು. ಇಲ್ಲವಾದರೆ ಕಾಲ ಮಿಂಚಿ ಹೋಗಿಬಿಡಬಹುದು ಎಂದು ಅವರು ಎಚ್ಚರಿಸಿದ್ದಾರೆ. ಆದರೆ, ಬೆಕ್ಕಿಗೆ ಗಂಟೆ ಕಟ್ಟುವವರು ಯಾರು?

4-1-2015

# ಬೆಳಗೊಳ ಸಮ್ಮೇಳನದ ಬೆಳಕಿನಲ್ಲಿ...

ಜನರನ್ನು ಅರ್ಥ ಮಾಡಿಕೊಳ್ಳುವುದು ಕಷ್ಟ. ಅವರ ವರ್ತನೆಗೆ ಒಂದು ಉದ್ದೇಶ ಎಂದು ಇರುತ್ತದೆಯೇ? ಹೇಳುವುದು ಕಠಿಣ. ಬೆಳಗಾವಿಯಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನದಲ್ಲೂ ನನಗೆ ಈ ಪ್ರಶ್ನೆ ಕಾಡಿತ್ತು. ಸಾವಿರಾರು ಮಂದಿ ಗುಂಪು ಗುಂಪಾಗಿ ವಿಶ್ವ ಕನ್ನಡ ಸಮ್ಮೇಳನ ನಡೆದ ಕ್ರೀಡಾಂಗಣಕ್ಕೆ ಹೋಗುವುದನ್ನು ಅಲ್ಲಿಂದ ಕೆಳಗೆ ಮತ್ತೆ ನಡೆದುಕೊಂಡು ಬರುವುದನ್ನು ನೋಡಿ ಅವರಿಗೆಲ್ಲ ಒಂದು ಉದ್ದೇಶ ಇದೆಯೇ ಎಂದು ಅನಿಸಿತ್ತು.

ಮೊನ್ನೆ ಶ್ರವಣಬೆಳಗೊಳದಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿಯೂ ಜನ ಅದೇ ರೀತಿ ಸಾವಿರಾರು ಸಂಖ್ಯೆಯಲ್ಲಿ ಗುಂಪು ಗುಂಪಾಗಿ ಮೇಲಿನಿಂದ ಕೆಳಕ್ಕೆ, ಕೆಳಗಿನಿಂದ ಮೇಲಕ್ಕೆ ನಡೆದು ಹೋಗುತ್ತಿದ್ದರು. ಅವರೆಲ್ಲ ಸಾಹಿತ್ಯ ಸಮ್ಮೇಳನಕ್ಕೆ ಏಕೆ ಬರುತ್ತಾರೆ? ಅವರಲ್ಲಿ ಅಕ್ಷರಸ್ಥರು ಎಷ್ಟು ಮಂದಿಯೋ? ನೋಡಿದರೆ ಸುತ್ತಮುತ್ತಲಿನ ಹಳ್ಳಿಯಿಂದ ಬಂದವರಂತೆ ಕಾಣುತ್ತಿದ್ದರು. ಅವರೆಲ್ಲ ಉಚಿತವಾಗಿ ಸಿಗುವ ಊಟಕ್ಕೆ ಬಂದರೇ? ಅಲ್ಲೇನು ಭರ್ಜರಿ ಬಾಡೂಟವೂ ಇರಲಿಲ್ಲ. ಆದರೂ ಜನರು ದೊಡ್ಡ ಸಂಖ್ಯೆಯಲ್ಲಿ ಬಂದಿದ್ದರು.

ಒಂದಿಷ್ಟು ಮಂದಿ ಸಭಾಂಗಣದಲ್ಲಿ ಇದ್ದರು. ಇನ್ನೊಂದಿಷ್ಟು ಮಂದಿ ಪುಸ್ತಕ ಮಳಿಗೆಯಲ್ಲಿ ಇದ್ದರು. ಇನ್ನಷ್ಟು ಮಂದಿ ಬೆಟ್ಟ ಹತ್ತುತ್ತಿದ್ದರು, ಮತ್ತಷ್ಟು ಮಂದಿ ಫಲಪುಷ್ಪ ಪ್ರದರ್ಶನ ಮಳಿಗೆಗೆ ನುಗ್ಗುತ್ತಿದ್ದರು. ಸಾಹಿತ್ಯ ಸಮ್ಮೇಳನ ಎಂದರೆ ಅಲ್ಲಿ ಮನಸ್ಸು ಹಗುರವಾಗುವಂಥದು ಏನಾದರೂ ಇರುತ್ತದೆಯೇ? ಜನರಿಗೆ ಸಾಹಿತ್ಯದ ಜತೆಗೆ ರಂಜನೆಯೂ ಬೇಕಾಗಿದೆಯೇ? ವೇದಿಕೆಯ ಭಾಷಣಗಳಿಗಿಂತ ಹಾಡುಗಳಿಗೆ, ಕುಣಿತಗಳಿಗೆ ಜನರು ಹೆಚ್ಚು ಸೇರುತ್ತಿದ್ದುದು ಅದಕ್ಕೆ ನಿದರ್ಶನ ಇರಬಹುದೇ? ಮೂರನೇ ದಿನ ರಾತ್ರಿ ರಂಗಾಯಣದ ಜನ್ನಿ ಮತ್ತು ಗೆಳೆಯರು ಸೇರಿಕೊಂಡು 'ಜನಪದ ಜಗತ್ತು' ಗೀತಗಾಯನ ಪ್ರಸ್ತುತ ಪಡಿಸಿದಾಗ ಜನರು ಹುಚ್ಚೆದ್ದು ಕುಣಿದುದನ್ನು ಹೇಗೆ ಅರ್ಥೈಸುವುದು? ದೂರದ

ಅಟ್ಲಾಂಟಾದಲ್ಲಿ ನಡೆದ 'ಅಕ್ಕ' ಸಮ್ಮೇಳನದಲ್ಲಿ ರಘು ಹಾಡಿಗೂ ಹೀಗೆಯೇ ಮಂದಿ ಕುಣಿದಿದ್ದರು.

ಶ್ರವಣಬೆಳಗೊಳ ಸಮ್ಮೇಳನ ಇತಿಹಾಸ ಬರೆಯಿತು. ಕೇವಲ 45 ದಿನಗಳಲ್ಲಿ ಈ ಸಮ್ಮೇಳನಕ್ಕೆ ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಆದರೂ, ಎಲ್ಲ ಕಡೆ ಕೋಲಾಹಲಕ್ಕೆ ಕಾರಣವಾಗುವ ಊಟ-ಉಪಚಾರಕ್ಕೆ, ವಸತಿಗೆ ಇಲ್ಲಿ ತೊಂದರೆ ಆಗಲಿಲ್ಲ. ಅಲ್ಲಿಗೆ ಸಮ್ಮೇಳನ ಮುಕ್ಕಾಲು ಪಾಲು ಗೆದ್ದಂತೆಯೇ ಆಗಿತ್ತು. ಇಂಥ ಸಮ್ಮೇಳನದ ಯಶಸ್ಸಿಗೆ ಯಾರೋ ಒಬ್ಬರು ಕಾರಣರಾಗಿರುವುದಿಲ್ಲ. ಅನೇಕ ಜನರು ಹಗಲು ರಾತ್ರಿ ದುಡಿದಾಗ ಯಶ ಸಿಗುತ್ತದೆ.

ಆದರೆ, ಸಣ್ಣ ಪುಟ್ಟ ವಿವರಗಳ ಕಡೆಗೂ ಗಮನ ಕೊಡುವ ಒಬ್ಬ ನಾಯಕ ಅಲ್ಲಿ ಬೇಕಾಗುತ್ತದೆ. ಆ ಕೆಲಸವನ್ನು ಚಾರುಕೀರ್ತಿ ಭಟ್ಟಾರಕ ಸ್ವಾಮಿಗಳು ಅತ್ಯಂತ ಸಮರ್ಥವಾಗಿ ನಿರ್ವಹಿಸಿದರು. ಅವರಿಗೆ ಲಕ್ಷಾಂತರ ಜನ ಭಾಗವಹಿಸುವ ಮೂರು ಮಹಾಮಸ್ತಕಾಭಿಷೇಕಗಳನ್ನು ಮಾಡಿದ ಅನುಭವ ಇತ್ತು. ತಾವು ಒಬ್ಬ ಕನ್ನಡದ ಸೇವಕ ಎನ್ನುವಂತೆ ಅವರು ದುಡಿದರು. ಅವರು ಯಾವಾಗಲೂ ತಮಗಿಂತ ಎತ್ತರದ ಸ್ಥಾನವನ್ನು ಸರಸ್ವತಿ ಪುತ್ರರಿಗೆ ಕೊಟ್ಟವರು. ಅವರ ನೇತೃತ್ವದಲ್ಲಿ ಸಮ್ಮೇಳನ ಸೋಲುವುದು ಸಾಧ್ಯ ಇರಲಿಲ್ಲ.

ಸಮ್ಮೇಳನದ ಇನ್ನೊಂದು ಬಗೆಯ ಯಶಸ್ಸಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಪುಂಡಲೀಕ ಹಾಲಂಬಿಯವರೇ ಮುನ್ನುಡಿ ಬರೆದು ಬಿಟ್ಟಿದ್ದರು. ಅವರು ದಲಿತರೊಬ್ಬರನ್ನು ಈ ಸಾರಿ ಸಮ್ಮೇಳನದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡುತ್ತೇವೆ ಎಂದು ಹೇಳಿದ್ದು ಒಂದಿಷ್ಟು 'ಸರ್ವಾಧಿಕಾರಿ' ನಿಲುವು ಎಂದೆನಿಸಿದರೂ ಪರಿಷತ್ತಿನ ಇಷ್ಟು ವರ್ಷಗಳ ಇತಿಹಾಸದಲ್ಲಿ ಒಬ್ಬ ದಲಿತ ಸಾಹಿತಿಯೂ ಅಧ್ಯಕ್ಷ ಸ್ಥಾನದಲ್ಲಿ ಕುಳಿತುಕೊಳ್ಳಲು ಆಗಲಿಲ್ಲ ಎಂಬುದೇ ನಮ್ಮಲ್ಲಿನ ಸಂವೇದನೆಯ ಕೊರತೆಯನ್ನು ತೋರಿಸುತ್ತದೆ.

ಸಿದ್ದಲಿಂಗಯ್ಯನವರು ಸಮ್ಮೇಳನದ ಅಧ್ಯಕ್ಷರಾದುದು ಉಳಿದವರಿಗೆ ಏನು ಅನಿಸಿತ್ತೋ ತಿಳಿಯದು! ಆದರೆ, ದುರ್ಬಲ ವರ್ಗದವರಿಗೆ ಎಷ್ಟು ಸಂತೋಷವಾಗಿತ್ತು ಎಂಬುದು ಹೆಜ್ಜೆ ಹೆಜ್ಜೆಗೂ ಗೊತ್ತಾಗುತ್ತಿತ್ತು. ಅಪ್ಪಗೆರೆ ತಿಮ್ಮರಾಜು, 'ಚೆಲ್ಲಿದರು ಮಲ್ಲಿಗೆಯಾ...' ಹಾಡು ಆರಂಭಿಸುವುದಕ್ಕಿಂತ ಮುಂಚೆ, "ಸಿದ್ದಲಿಂಗಯ್ಯನವರು ಅಧ್ಯಕ್ಷರಾದುದು ಮತ್ತು ನಮ್ಮಂಥವರು ಇಂಥ ವೇದಿಕೆಯಿಂದ ಹಾಡುತ್ತಿರುವುದು, ಇದೆಲ್ಲ ಒಂದು ಇತಿಹಾಸ...' ಎಂದು ಹೇಳಿದಾಗ ಅವರಿಗಾದ ಸಂಭ್ರಮ ಗೊತ್ತಾಗುತ್ತಿತ್ತು. ಅವರು ಹಾಡು ಹೇಳುತ್ತ ವೇದಿಕೆಯ ತುಂಬ ಕುಣಿದುದೂ ಅದೇ ಖುಷಿಯನ್ನು ಎತ್ತಿ ತೋರಿಸುತ್ತಿತ್ತು. ನಾಲ್ಕು ದಿನವೂ ಎಲ್ಲ ಕೆಲಸ ಬದಿಗೊತ್ತಿ ವೇದಿಕೆಯ ಮುಂದೆಯೇ ಕುಳಿತಿದ್ದ ಲೋಕೋಪಯೋಗಿ ಸಚಿವ ಮಹದೇವಪ್ಪ ಅವರಲ್ಲಿಯೂ ಅದೇ ಉಮೇದು ಕಾಣುತ್ತಿತ್ತು.

ಇವೆಲ್ಲ ನಮ್ಮ ಒಳಗೆ ಅದುಮಿ ಕುಳಿತಿದ್ದ ಆಕಾಂಕ್ಷೆಗಳು ಚಿಮ್ಮಿಕೊಂಡು ಹೊರಗೆ ಬರುವ ಗಳಿಗೆಗಳು ಎಂದು ಅನಿಸುತ್ತದೆ. ಹಾಲಂಬಿ ಸ್ವತಃ ಸಾಹಿತಿಯಲ್ಲ. ಕನ್ನಡ ಸಾಹಿತ್ಯದ ಒಬ್ಬ ವಿದ್ಯಾರ್ಥಿ ಮಾತ್ರ, ಅವರು ಅಧ್ಯಕ್ಷರಾಗಿದ್ದಾಗ ದಲಿತರೊಬ್ಬರಿಗೆ ಮೊದಲ ಬಾರಿ

ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನ ಸಿಕ್ಕಿತು ಎಂದು ಚರಿತ್ರೆಯಲ್ಲಿ ಅವರ ಹೆಸರು ಸೇರಿ ಹೋಯಿತು. ಕಾಲ ಎಂಬುದು ಹಾಗೆಯೇ. ಅದು ಯಾರ ಕೈಯಿಂದಲಾದರೂ ತನಗೆ ಏನು ಬೇಕೋ ಆ ಕೆಲಸವನ್ನು ಮಾಡಿಸುತ್ತದೆ. ಅದರ ಚಲನೆಯ ಜಾಡು ಹಿಡಿಯುವುದು ಕಷ್ಟ.

ಈ ಕಾಲಘಟ್ಟದಲ್ಲಿ ಕನ್ನಡದ ಭವಿಷ್ಯದ ಜಾಡು ಹಿಡಿಯುವುದೂ ಕಷ್ಟಕರವೇ ಆಗಿದೆ. ಸಮ್ಮೇಳನದ ಅಧ್ಯಕ್ಷ ಸಿದ್ಧಲಿಂಗಯ್ಯನವರೇನೋ ಪ್ರಾಥಮಿಕ ಶಿಕ್ಷಣವನ್ನು ರಾಷ್ಟ್ರೀಕರಣ ಮಾಡಬೇಕು ಎಂದಿದ್ದಾರೆ. ಸಮ್ಮೇಳನದಲ್ಲಿ ಕೈಗೊಂಡಿರುವ ಏಕೈಕ ನಿರ್ಣಯದಲ್ಲಿಯೂ ಅದೇ ಧಾಟಿಯ ಆಗ್ರಹ ಇದೆ. ಆದರೆ, ದಲಿತರು, ಹಿಂದುಳಿದವರಿಗೆ ಇದು ನಿಜವಾಗಿಯೂ ಇಷ್ಟವೇ? ಅವರಿಗೆ ಇಂಗ್ಲಿಷ್ ಶಿಕ್ಷಣ ಬೇಕಾಗಿದೆ ಎಂಬುದು ರಹಸ್ಯವೇನೂ ಅಲ್ಲವಲ್ಲ? ಇಂಗ್ಲಿಷ್ ಕಲಿತ ಎಲ್ಲ 'ಬ್ರಾಹ್ಮಣ'ರು ತಮ್ಮನ್ನು ಕನ್ನಡದ 'ಶೂದ್ರತನ'ದ ಬಂಧನದಲ್ಲಿ ಸಿಲುಕಿಸಿ ಶೋಷಿಸುತ್ತಿದ್ದಾರೆ ಎಂದು ಅವರಿಗೆ ಅನಿಸಿ ಬಹಳ ದಿನಗಳೇ ಆಯಿತು. ಅದನ್ನು ಅವರು ಬಹಿರಂಗವಾಗಿ ಹೇಳಿಯೂ ಬಹಳ ದಿನಗಳಾದುವು. ಕನ್ನಡ ಯಾರಿಗೂ ಪ್ರಾಮಾಣಿಕವಾಗಿ ಬೇಕಾಗಿಲ್ಲ. ಕನ್ನಡ ಪ್ರೇಮ ಎಂಬುದೂ ವೇದಿಕೆಯ ತೋರಿಕೆಯಾಗಿದೆ. ಅದು ಸಾಹಿತ್ಯ ಸಮ್ಮೇಳನದಂಥ ವೇದಿಕೆಗಳ ಕಾಯಂ ವಿಷಯವಾಗಿದೆ; ಒಂದು ಸೋಗು ಆಗಿದೆ.

ನಮ್ಮ ಮಕ್ಕಳಿಗೆಲ್ಲ ಕನ್ನಡದ ಸಂಸ್ಕಾರವೇ ಇಲ್ಲ. ಮಕ್ಕಳಾಗಿದ್ದಾಗ ಅವರ ಕಿವಿಯ ಮೇಲೆ ಜೋಗುಳದ ಹಾಡು ಬಿದ್ದಿಲ್ಲ; ಊಟ ಮಾಡುವಾಗ ಮುದ್ದು ಮಾಡುವ ಹಾಡು ಕೇಳಿಲ್ಲ. ಇದೆಲ್ಲ ಆಗಿ ಮೂವತ್ತು, ನಲವತ್ತು ವರ್ಷಗಳೇ ಕಳೆದು ಹೋಗಿರಬಹುದು. ದೇಹದ ಸೊಬಗು ಹಾಳಾಗುತ್ತದೆ ಎಂದು ಕೂಸಿಗೆ ಎದೆಯ ಹಾಲು ಕುಡಿಸುವುದನ್ನು ಬಿಟ್ಟ ತಾಯಂದಿರೇ ಮಗುವಿಗೆ ಉಣಬಡಿಸುವಾಗ, ಮಲಗಿಸುವಾಗ ಹಾಡು ಹೇಳುವುದನ್ನೂ ಬಿಟ್ಟರು. ಬಾಯಿ ತೆಗೆದು ರಾಗವಾಗಿ ಹಾಡುವುದು ಅವರಿಗೆ "ಅಸಹ್ಯ' ಎಂದು ಅನಿಸತೊಡಗಿತು.

ಅದೇ ಮಕ್ಕಳು ಈಗ ದೊಡ್ಡವರು ಆಗಿದ್ದಾರೆ. ಅವರು ಯಾರೂ ಇಂಥ ಸಮ್ಮೇಳನಗಳಲ್ಲಿ ಕಾಣುವುದಿಲ್ಲ. ಈಗ ಅವರ ಮಕ್ಕಳು ಶಾಲೆಗೆ ಹೋಗುವ ವಯಸ್ಸಿನವರು. ಅವರು ತಮ್ಮ ಮಕ್ಕಳನ್ನು ಏಕೆ ಕನ್ನಡ ಶಾಲೆಗಳಿಗೆ ಕಳುಹಿಸುತ್ತಾರೆ? ಈಗ ಬರೀ ಇಂಗ್ಲಿಷ್ ಮಾಧ್ಯಮ ಶಾಲೆಗಳು ಅಲ್ಲ, ಅಂತರರಾಷ್ಟ್ರೀಯ ಇಂಗ್ಲಿಷ್ ಮಾಧ್ಯಮ ಶಾಲೆಗಳು ತಲೆ ಎತ್ತಿವೆ. ಹಳ್ಳಿ ಹಳ್ಳಿಗಳಲ್ಲಿ ಇಂಥ ಶಾಲೆಗಳು ಎದ್ದು ನಿಂತಿವೆ. ಇಂಥ ಶಾಲೆಗಳನ್ನು ನಮ್ಮ ರಾಜಕಾರಣಿಗಳೇ ತಮ್ಮ ತಮ್ಮ ಊರುಗಳ ಹೊರಗೆ ಭವ್ಯವಾಗಿ ಕಟ್ಟಿದ್ದಾರೆ. ಅವು ಅವರಿಗೆ ಚೀಲಗಟ್ಟಲೆ ಹಣ ತರುವ ತಾಣಗಳಾಗಿವೆ. ಅಲ್ಲಿ ಓದುವ ತಮ್ಮ ಮಕ್ಕಳೂ ಬೊಗಸೆಗಟ್ಟಲೆ ಹಣ ತರುತ್ತಾರೆ ಎಂದು ತಂದೆ ತಾಯಿಯರೂ ಅಂದುಕೊಂಡಿದ್ದಾರೆ. ನಾವು ಕನ್ನಡವನ್ನು ಬಿಟ್ಟು ಬಹಳ ದೂರ ಬಂದಿದ್ದೇವೆ. ವಾಪಸು ಹೋಗುವುದು ಅಷ್ಟು ಸುಲಭವೇ? ಪ್ರಾಮಾಣಿಕವಲ್ಲದ ಯಾವ ಕೆಲಸಕ್ಕೂ ಜಯ ಸಿಗುವುದಿಲ್ಲ.

ವ್ಯವಸ್ಥೆಯೇ ಹಾಗೆ, ಅದು ನಮ್ಮನ್ನು ಆಳವಾಗಿ ಒಳಗೆ ತೆಗೆದುಕೊಂಡು ಹೋಗಿ ಬಿಡುತ್ತದೆ. ಸಮ್ಮೇಳನದ ಅಧ್ಯಕ್ಷರು ವ್ಯವಸ್ಥೆಯ ಒಳಗೇ ಇದ್ದುಕೊಂಡು ಪ್ರತಿಭಟಿಸುವ ಮಾತು

ಆಡಿದ್ದಾರೆ. ವ್ಯವಸ್ಥೆಯ ಒಳಗೆ ಇದ್ದುಕೊಂಡು ಪ್ರತಿಭಟಿಸುವುದು ಎಂದರೆ ಒಂದಿಷ್ಟು ರಾಜಿ ಮಾಡಿಕೊಳ್ಳುವುದು ಮತ್ತೆ ಒಂದಿಷ್ಟು ಪ್ರತಿಭಟಿಸುವುದು ಎಂದೂ ಅರ್ಥೈಸಬಹುದು. ಮೂವತ್ತಾರು ವರ್ಷಗಳ ಹಿಂದಿನ ಮಾತು: ಬೆಂಗಳೂರಿನ ದೇವಾಂಗ ಸಭಾಂಗಣದಲ್ಲಿ ಬಂಡಾಯ ಸಾಹಿತ್ಯ ಸಂಘಟನೆ ಹುಟ್ಟಿಕೊಂಡಿತು. ಅಲ್ಲಿ ಭಾಗವಹಿಸಿದವರೆಲ್ಲ ವ್ಯವಸ್ಥೆಯ ಪ್ರತೀಕವಾದ ಸಾಹಿತ್ಯ ಪರಿಷತ್ತಿನ ವೇದಿಕೆ ಹತ್ತುವುದಿಲ್ಲ' ಎಂದು ಶಪಥ ಮಾಡಿದರು.

ಕಾಲ ಕಳೆದಂತೆ ಶಪಥ ಸಡಿಲವಾಗುತ್ತ ಹೋಯಿತು. ವ್ಯವಸ್ಥೆಯ ಆಕರ್ಷಣೆಯೇ ಹಾಗೆ, ಒಬ್ಬೊಬ್ಬರೇ ಪರಿಷತ್ತಿನ ವೇದಿಕೆ ಏರಿದರು. ಅದಕ್ಕೆ ಏನೇನೋ ಕಾರಣಗಳನ್ನು ಕೊಟ್ಟರು. 'ವ್ಯವಸ್ಥೆಯ ಒಳಗೆ ಹೋಗಿ ಅದನ್ನು ಸ್ಫೋಟಿಸುತ್ತೇವೆ' ಎಂದು ಕೆಲವರು ಗೆಳೆಯರು ನನಗೆ ಹೇಳಿದರು! ವ್ಯವಸ್ಥೆಯನ್ನು ಸ್ಫೋಟಿಸುವುದು ಅಷ್ಟು ಸುಲಭ ಅಲ್ಲ ಎಂದು ಎಲ್ಲವನ್ನೂ ಅನುಮಾನಿಸುವ' ನನ್ನಂಥವರಿಗೆ ಗೊತ್ತಿತ್ತು. ಆದರೆ, ಬಂಡಾಯದ ಗೆಳೆಯರಿಗೆ ಗೊತ್ತಿರಲಿಲ್ಲ ಎಂದು ಹೇಗೆ ಹೇಳುವುದು? ಬಂಡಾಯ ಕರಗಿ ಹೋಯಿತು. ಪರಿಷತ್ತು ಉಳಿಯಿತು. ಅಂದರೆ ವ್ಯವಸ್ಥೆ ಉಳಿಯಿತು, ಪ್ರತಿಭಟನೆ ಕಾವು ಕಳೆದುಕೊಂಡಿತು ಎಂದು ಅರ್ಥ ಮಾಡಿಕೊಳ್ಳಬಹುದೇ? ಅಥವಾ ಎಲ್ಲ ಪ್ರತಿಭಟನೆಗಳು ಹೀಗೆಯೇ ತಮ್ಮ ಕಾವು ಕಳೆದುಕೊಳ್ಳುತ್ತವೆ, ವ್ಯವಸ್ಥೆ ಅದನ್ನು ನುಂಗಿ ನೊಣೆಯುತ್ತದೆ ಎಂದು ಅರ್ಥೈಸಬೇಕೇ?

ಪರಿಷತ್ತಿನ ಸಾರ್ವಭೌಮತ್ವವನ್ನು ರಾಜಕೀಯ ವ್ಯವಸ್ಥೆಯ ಹಿಡಿತದಿಂದ ಬಿಡುಗಡೆ ಮಾಡಬೇಕು ಎಂದು ಈ ಸಾರಿಯ ಸಮ್ಮೇಳನದಲ್ಲಿ ಭಾಗವಹಿಸಿದ ನನಗೆ ಮತ್ತೆ ತೀವ್ರವಾಗಿ ಅನಿಸಿತು. ರಾಜಕಾರಣಿಗಳು ಸಮ್ಮೇಳನವನ್ನು ಎಷ್ಟು ಸದರವಾಗಿ ತೆಗೆದುಕೊಂಡು ಬಿಟ್ಟಿದ್ದಾರೆ ಎಂದರೆ ಅವರು ಬಂದಾಗ ಅವರಿಗೆ ವೇದಿಕೆ ಬಿಟ್ಟುಕೊಡಬೇಕು ಎಂದು ಅವರು ಅಂದುಕೊಂಡಂತೆ ಕಾಣುತ್ತದೆ. ತಾವು ಬೇಕಾದಾಗ ಬಂದು ಎಷ್ಟು ಹೊತ್ತಾದರೂ ಮಾತನಾಡಬಹುದು ಎಂದು ಅವರು ಅಧಿಕಾರ ಸ್ಥಾಪಿಸಲು ಬಯಸುತ್ತಿದ್ದಾರೆ.

ಬೇರೆ ಬೇರೆ ದಿನಗಳಲ್ಲಿ ನಿಗದಿಯಾದ ಕಾರ್ಯಕ್ರಮಕ್ಕೆ ಗೈರು ಹಾಜರಾಗಿ ತಮಗೆ ಬೇಕೆಂದಾಗ ಬಂದು ಬೇಕಾದಾಗ ಮಾತನಾಡಲು ಅವರಿಗೆ ಯಾವ ಅಧಿಕಾರ? ಪರಿಷತ್ತು ತಮ್ಮ ಮರ್ಜಿಯಲ್ಲಿ ಇದೆ ಎಂದು ಅವರಿಗೆ ಅನಿಸಿದೆ. ರಾಜಕಾರಣಿಗಳು ಇಲ್ಲದೇ ಸಮ್ಮೇಳನ ಯಶಸ್ವಿಯಾಗದು ಎಂದು ಪರಿಷತ್ತಿಗಿಂತ ರಾಜಕಾರಣಿಗಳೇ ಗಟ್ಟಿಯಾಗಿ ನಂಬಿದಂತಿದೆ. ರಾಜಕಾರಣಿಗಳು ಸಮ್ಮೇಳನಕ್ಕೆ ಬರಲಿ. ಇಡೀ ದಿನ ಮುಂದಿನ ಸೀಟಿನಲ್ಲಿ ಕುಳಿತು ಭಾಷಣ ಕೇಳಲಿ, ಹಾಡು ಕೇಳಲಿ, ಸಾಮಾನ್ಯರ ಹಾಗೆ ಜನರ ಜತೆ ಬೆರೆಯಲಿ, ಮನಸ್ಸು ಹಗುರ ಮಾಡಿಕೊಳ್ಳಲಿ. ಆ ವಿನಯವನ್ನು ಅವರು ಬೆಳೆಸಿಕೊಳ್ಳಲಿ. ಅವರ ಭಾಷಣಗಳನ್ನು ಇಷ್ಟು ವರ್ಷ ಕೇಳಿದ್ದೇವಲ್ಲ, ಅವರಿಗೆ ಹೇಳಲು ಹೊಸದು ಏನಿದೆ? ಅವರು ಇದನ್ನು ಏಕೆ ಅರ್ಥ ಮಾಡಿಕೊಳ್ಳುವುದಿಲ್ಲ?

8-2-2015

# ವಿನೋದ್ ಮೆಹ್ರಾ: ಮಾಧ್ಯಮಕ್ಕೆ ಕಲಿಸಿದ ಪಾಠ ಒಂದೇ ಎರಡೇ?

ನಮಗೆ ಗೊತ್ತಿರುವುದಿಲ್ಲ ಸಾವು ನಮ್ಮ ಬಾಗಿಲಿಗೆ ಬಂದು 'ಟಿಕ್' 'ಟಿಕ್' ಎಂದು ಬಡಿಯುತ್ತ ನಿಂತಿದೆ ಎಂದು. ಆದರೆ, ಅದು ಹೇಗೋ ಸೂಚನೆ ಕೊಡುತ್ತ ಇರುವಂತೆ ಕಾಣುತ್ತದೆ. ವಿನೋದ್ ಮೆಹ್ರಾ ತಮ್ಮ ಕೊನೆಯ ಪುಸ್ತಕ 'ಎಡಿಟರ್ ಅನ್‌ಪ್ಲಗ್ ಬರೆಯುವಾಗ ಏನು ಅಂದುಕೊಂಡಿದ್ದರೋ ಏನೋ? ಅವರಿಗೆ ಬರೀ ವೃತ್ತಿ ಜೀವನದಿಂದ ನಿವೃತ್ತಿ ಬೇಕು ಎಂದು ಅನಿಸಿತ್ತೋ ಅಥವಾ ಬದುಕೇ ಮುಗಿಯುತ್ತ ಬಂತು. ಎಂದುಕೊಂಡಿದ್ದರೋ? ಅವರು ಈ ಪುಸ್ತಕದ ಮೊದಲ ಅಧ್ಯಾಯಕ್ಕೆ Walking into the Sunset' ಎಂದು ಹೆಸರು ಕೊಟ್ಟಿದ್ದರು. ಅದನ್ನು ಹೇಗೂ ಅರ್ಥ ಮಾಡಿಕೊಳ್ಳಬಹುದು. ಕಳೆದ ಮೂರು ವರ್ಷಗಳಿಂದ ಅವರು ಹೆಚ್ಚ ಕಡಿಮೆ ಆಲಂಕಾರಿಕ ಸಂಪಾದಕರಾಗಿ ಕೆಲಸ ಮಾಡುತ್ತಿದ್ದರು. ಅವರ ಒಟ್ಟು ವೃತ್ತಿ ಜೀವನ ನೋಡಿದರೆ ಎಲ್ಲಿಯೂ ಅವರು ಬಹುಕಾಲ ಇರಲಿಲ್ಲ. ಏನೋ ಒಂದು ಆಗಿ ಆ ಹುದ್ದೆ ತೊರೆದು ಹೊರ ನಡೆಯುತ್ತಿದ್ದರು. ಅವರೇ ಸ್ಥಾಪಿಸಿದ 'ಔಟ್‌ಲುಕ್' ಪತ್ರಿಕೆಯ ಒಡೆಯರಿಗೆ ಮೆಹ್ರಾ ಬಗ್ಗೆ ಬಹಳ ಸಹನೆ, ಪ್ರೀತಿ ಮತ್ತು ಗೌರವ, ಸಂಪೂರ್ಣ 17 ವರ್ಷ ಕಾಲ ಅವರನ್ನು ಸಹಿಸಿದರು! ಅವರು ಏನು ಬರೆದರೂ ಅವರ ಹುದ್ದೆಯಿಂದ ಕದಲಿಸಲಿಲ್ಲ. ಕೊನೆಗೆ ಅವರಿಗೂ 'ಸಹನೆ' ಕಳೆದು ಹೋಯಿತು. ಮೆಹ್ರಾ ಅವರನ್ನು ಒಂದು ರೀತಿಯ 'ಸಲಹೆಗಾರನ ನಿರಪಾಯಕಾರಿ ಪಟ್ಟದಲ್ಲಿ ಕೂಡ್ರಿಸಿದರು. ಅದಕ್ಕೆ ಕಾರಣವಿತ್ತು: ವಿನೋದ್ ಮೆಹ್ರಾ ಜೇನುಗೂಡಿಗೆ ಕೈ ಇಕ್ಕಿದ್ದರು.

ಅವರು ನೀರಾ ರಾಡಿಯಾ ಟೇಪುಗಳನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟ ಮಾಡಿ ತಮ್ಮ ಮಾಲೀಕರನ್ನು ಇಕ್ಕಟ್ಟಿಗೆ ಸಿಲುಕಿಸಿದರು. ಅವರಿಗೆ ಮೆಹ್ರಾ ಬಿಸಿ ತುಪ್ಪವಾದರು. ನುಂಗುವಂತೆಯೂ ಇರಲಿಲ್ಲ, ಉಗುಳುವಂತೆಯೂ ಇರಲಿಲ್ಲ. ಮೊದಲೇ ಕಷ್ಟದಲ್ಲಿ ಇರುವ ವಾರಪತ್ರಿಕೆಯ ಮಾಲೀಕರು ಜಾಹೀರಾತು ಲೋಕಕ್ಕೆ 'ಸಂದೇಶ'ವನ್ನು ಕೊಡಲೇಬೇಕಿತ್ತು. ಮೆಸ್ತಾ ಅವರನ್ನು ಸಕ್ರಿಯ ಸಂಪಾದಕ ಹುದ್ದೆಯಿಂದ ತೆಗೆಯುವುದೇ ಆ ಸಂದೇಶ' ಆಗಿತ್ತು. ಅದನ್ನು ಅವರು ಮಾಡಿದರು.

ರಾಡಿಯಾ ಟೇಪುಗಳನ್ನು ಬಹಿರಂಗಗೊಳಿಸಿದ್ದು ಮೆಪ್ತಾ ವೃತ್ತಿ ಜೀವನದ ಶಿಖರ ಗಳಿಗೆಗಳಲ್ಲಿ ಒಂದು. ಅಥವಾ ಅದುವೇ ಏಕೈಕ ಶಿಖರ ಗಳಿಗೆ ಎಂದರೂ ನಡೆದೀತು. ರಾಜ- ಕಾರಣಿಗಳು, ಉದ್ಯಮಿಗಳು, ಅಧಿಕಾರಶಾಹಿಗಳು, ಅಧಿಕಾರದ ತಲೆಹಿಡುಕರು ಮತ್ತು ಪತ್ರಕರ್ತರ ನಡುವಿನ ಅನೈತಿಕ ಸಂಬಂಧಕ್ಕೆ ರಾಡಿಯಾ ಟೇಪುಗಳು ನಿರಾಕರಿಸಲಾಗದ ನಿಜನುಡಿಯಂತೆ ಇದ್ದುವು. ಆ ಟೇಪಿನಲ್ಲಿ ಎಷ್ಟು ಜನ ಬೆತ್ತಲಾದರು! ಆದರೆ, ವಿಚಿತ್ರ ನೋಡಿ ಹಲವು ಸಾವಿರ ಪ್ರಸಾರ ಇರುವ ಒಂದು ವಾರಪತ್ರಿಕೆಯಲ್ಲಿ ಈ ಸುದ್ದಿ ಸೋರಿಕೆಯಾಯಿತು. ಅಂದರೆ, ಲಕ್ಷಾಂತರ ಪ್ರಸಾರ ಇರುವ ದೊಡ್ಡ ದೊಡ್ಡ ಇಂಗ್ಲಿಷ್ ಪತ್ರಿಕೆಗಳಿಗೆ ಈ ಟೇಪುಗಳು ಸಿಗಲು ಸಾಧ್ಯ ಇರಲಿಲ್ಲವೇ? ಅಥವಾ ಅಲ್ಲಿ ಪ್ರವೇಶ ಸಿಗದೇ ಅವು 'ಔಟ್ ುಕ್' ದಾರಿ ಹಿಡಿದುವೇ? ಈ ರಹಸ್ಯ ತಿಳಿದವರು ಬಹಳ ಮಂದಿ ಇರಲಾರರು.

ಪತ್ರಿಕೋದ್ಯಮದ ಈಗಿನ ಅನೇಕ ಸಮಸ್ಯೆಗಳಿಗೂ ರಾಡಿಯಾ ಟೇಪುಗಳಿಗೂ ನೇರ ಸಂಬಂಧ ಇದೆ. ಪತ್ರಕರ್ತರು ಮತ್ತು ಕರ್ತೆಯರು ಎಷ್ಟು ಕೆಳಕ್ಕೆ ಇಳಿಯಬಹುದು, ಅಧಿಕಾರದ ತಲೆಹಿಡುಕರ ಕೈಯ ದಾಳವಾಗಿ ಹೇಗೆ ಕುಣಿಯಬಹುದು ಎಂಬುದನ್ನು ಹೇಳುತ್ತಲೇ ಅದಕ್ಕೆ ಅಡ್ಡಿ ಮಾಡಿದರೆ ಏನು ಪರಿಣಾಮ ಆಗಬಹುದು ಎಂಬುದನ್ನೂ ಅದು ಹೇಳಿತು. ಅನೇಕರನ್ನು ಬೆತ್ತಲು ಮಾಡಿ ಜಗತ್ತಿಗೆ ತೋರಿಸುವ ಜಾಹೀರಾತು ಲೋಕ ತಾನು ಬೆತ್ತಲಾದುದನ್ನು ಒಪ್ಪಿಕೊಳ್ಳಲು ಸಿದ್ಧ ಇರಲಿಲ್ಲ. ತಾವು ಬೆತ್ತಲು ಮಾಡಿದ ಉದ್ಯಮಿಗಳ ಬಾಗಿಲಿಗೇ ಹೋಗಿ ಸಂಧಾನ ಮಾಡಲು ಮೆಹ್ರಾ ಹೆಣಗಿದ್ದು, ದಿವ್ಯ ತಾತ್ಸಾರಕ್ಕೆ ಸಿಲುಕಿ ಅವಮಾನಿತರಾದುದು ಅವರ ಕೊನೆಯ ಪುಸ್ತಕದಲ್ಲಿ ಇರುವ ದಾರುಣ ಅಧ್ಯಾಯ.

ಮೆಹ್ರಾ ಬದುಕಿನ ಕೊನೆಯ ದಿನಗಳಲ್ಲಿ ಕಲಿತ ಪಾಠಗಳು ಕಠೋರವಾಗಿದ್ದುವು. ಅಧಿಕಾರದ ಬಾಲಂಗೋಚಿ ಆಗಬೇಕು ಎಂದು ಹಾತೊರೆಯುವವರು ಮತ್ತು ಅದಕ್ಕೆ ತಕ್ಕಂತೆ ಬರೆಯುವವರು, ನಡೆದುಕೊಳ್ಳುವವರು, ಉದ್ದೇಶದ ಪತ್ರಿಕೋದ್ಯಮ ಮಾಡುವವರು ಎಲ್ಲ ಕಡೆಯೂ ಇರುವಾಗ ಮೆಸ್ತಾ ಅಂಥವರಿಗೆ ಕಷ್ಟವಾಗುವುದು ಸಹಜ. ಅವರು ಬಿಜೆಪಿಯ ಕಡು ವಿರೋಧಿಯಾಗಿದ್ದರು. ತಮ್ಮನ್ನೇ ತಾವು 'ಸುಳ್ಳು ಜಾತ್ಯತೀತವಾದಿ' ಎಂದು ಕರೆದುಕೊಂಡರು. ಅದೇ ಕಾರಣಕ್ಕಾಗಿ ಅವರನ್ನು ಸೋನಿಯಾ ಚಮಚಾ ಎಂದು ಬಹಳ ಮಂದಿ ಕರೆದರು. ಆದರೂ, ಯುಪಿಎ ಎರಡು ಅವಧಿಗೆ ಆಡಳಿತ ಮಾಡಿದರೂ, ಮೆತ್ತಾಗೆ ಒಂದು ಪದ್ಮ ಪ್ರಶಸ್ತಿ ಬರಲಿಲ್ಲ. ರಾಜ್ಯಸಭೆಗೆ ಅವರ ನಾಮಕರಣ ಆಗಲಿಲ್ಲ. ಸೋಜಿಗ ಎಂದರೆ ಅವರ ಕೈ ಕೆಳಗೆ ಕೆಲಸ ಮಾಡಿದವರು ಅಂಥ ಪ್ರಶಸ್ತಿಗಳನ್ನು ಗಿಟ್ಟಿಸಿಕೊಂಡು ಬಿಟ್ಟರು. ಅವರಿಗೆ ಗೊತ್ತಿದ್ದುದು ಮೆಹಾಗೆ ಗೊತ್ತಿರಲಿಲ್ಲ! ಗೊತ್ತಿದ್ದರೂ ಅವರು ಆ ದಾರಿಯಲ್ಲಿ ಹೋಗುವುದು ಸಾಧ್ಯ ಇರಲಿಲ್ಲ. ಆದರೆ, ಮೆಹ್ರಾ ನಿಧನರಾದಾಗ ಆರ್ಣಬ್ ಗೋಸ್ವಾಮಿ ತಮ್ಮ ಲೇಖನವನ್ನು, “ವಿನೋದ್ ಮೆಸ್ತಾ ಒಬ್ಬ ಅಪ್ರತಿಮ ಪ್ರಾಮಾಣಿಕ' ಎಂದು ಆರಂಭಿಸಿದರು. ಅದು ಎಲ್ಲ ಪ್ರಶಸ್ತಿಗಳಿಗಿಂತ, ಸ್ಥಾನಮಾನಗಳಿಗಿಂತ ದೊಡ್ಡ ಗೌರವವಾಗಿತ್ತು. ಮೆಸ್ತಾ ಎಲ್ಲ ಅರ್ಥದಲ್ಲಿ ಪ್ರಾಮಾಣಿಕರಾಗಿದ್ದರು. ಅವರು ತಮ್ಮ ವೃತ್ತಿ ಬದುಕಿನಲ್ಲಿ ಯಾರ ಜತೆಗೂ, ಯಾವುದರ ಜತೆಗೂ ರಾಜಿ ಮಾಡಿಕೊಂಡಂತೆ ಕಾಣಲಿಲ್ಲ.

ಅವರು ಒಂದು ಸಾಧಾರಣ ಕುಟುಂಬದಲ್ಲಿ ಹುಟ್ಟಿದ್ದರು. ಅದೂ ದೂರದ ಪಾಕಿಸ್ತಾನದಲ್ಲಿ. ತಂದೆ ಪಾಕಿಸ್ತಾನದವರು, ತಾಯಿ ಆಫ್ಘಾನಿಸ್ತಾನದವರು. ಮೆಹ್ರಾ ಹುಟ್ಟಿದ್ದು ರಾವಲ್ಪಿಂಡಿಯಲ್ಲಿ, ದೇಶ ವಿಭಜನೆ ಸಮಯದಲ್ಲಿ ಅವರ ಕುಟುಂಬ ಲಖನೌಗೆ ವಲಸೆ ಬಂತು. ವಿನೋದ್ ಓದಿದ್ದು ಅದೇ ಊರಿನ ಲಾ ಮಾರ್ಟಿನೇ ಕಾಲೇಜಿನಲ್ಲಿ. ಅವರಿಗೆ ಓದಿನಲ್ಲಿ ಆಸಕ್ತಿಯೇ ಇರಲಿಲ್ಲ. ಬಿ.ಎ ಪಾಸಾಗಿದ್ದು ಮೂರನೇ ದರ್ಜೆಯಲ್ಲಿ, ತಪ್ಪಿಲ್ಲದೇ ಇಂಗ್ಲಿಷ್ ಬರೆಯಲು ಅವರಿಗೆ ಆಗ ಬರುತ್ತಿರಲಿಲ್ಲ. ಪದವಿ ಮುಗಿಸಿದರೂ ಬೇರೆ ಏನೇನೂ ಓದಿರಲಿಲ್ಲ. ಪತ್ರಿಕೋದ್ಯಮಕ್ಕೆ ಈಗ ಬರುವ ಹುಡುಗ ಹುಡುಗಿಯರಿಗೆ ಮೆಹ್ರಾ ಬಹಳ ದೊಡ್ಡ

ಮಾದರಿ ಎಂದು ನನಗೆ ಯಾವಾಗಲೂ ಅನಿಸಿದೆ. ಈಗಿನ ಬಹುತೇಕ ಹುಡುಗ ಹುಡು- ಗಿಯರಿಗೆ ಇಂಗ್ಲಿಷ್ ಬಹಳ ಕಷ್ಟ ನೆಟ್ಟಗೆ ಒಂದು ಸಾಲು ಮಾತನಾಡಲು ಬರುವುದಿಲ್ಲ. ಬರೆಯಲು ಬರುವುದಿಲ್ಲ. ಆ ಅವಮಾನ ಅವರನ್ನು ನಿತ್ಯ ಕೊಲ್ಲುತ್ತ ಇರುತ್ತದೆ. ಇಂಗ್ಲಿಷ್ ಬಿಡಿ, ಕನ್ನಡವೂ ಅವರಿಗೆ ಕಷ್ಟ ಕೊಡುತ್ತಿದೆ. ಆದರೆ, ಸ್ವಲ್ಪ ಶ್ರಮ ಪಟ್ಟರೆ ಯಾವುದೂ ಕಷ್ಟವಲ್ಲ ಎಂಬುದಕ್ಕೆ ಮತ್ತೆ ಮೆಹ್ರಾ ಅವರೇ ನಿದರ್ಶನ.

ಬಿ.ಎ ಓದಿದ ನಂತರ ಎಂಟು ವರ್ಷಗಳ ಕಾಲ ಅವರು ಪತ್ರಿಕೆ ಓದಿರಲಿಲ್ಲ, ಟೀವಿ ನೋಡಿರಲಿಲ್ಲ. ಲೈಬ್ರರಿಗಳ ಕಡೆ ಮುಖ ಹಾಕಿರಲಿಲ್ಲ. ತಾನೇನು ಮಹಾ, ಅಮೆರಿಕದ ಅಧ್ಯಕ್ಷರೇ ಆಗಿದ್ದ ಕೆನಡಿ ಅವರಿಗೂ ಕಾಗುಣಿತದ ಸಮಸ್ಯೆ ಇತ್ತು ಎಂದು ಸಮಾಧಾನ ಮಾಡಿ- ಕೊಂಡಿದ್ದವರು ಎಷ್ಟು ಚೆನ್ನಾಗಿ ಬರೆಯಲು ಕಲಿತರು! ಎಷ್ಟು ಚೆನ್ನಾಗಿ ಓದಿದರು! ನಮ್ಮ ಹುಡುಗ ಹುಡುಗಿಯರು ಕಷ್ಟಪಟ್ಟು ಉಪ ಸಂಪಾದಕನ ಹುದ್ದೆ ಹಿಡಿದರೆ, ಮೆಹ್ರಾ ಆರಂಭದಿಂದಲೇ ಸಂಪಾದಕ ಆದರು. ಅನೇಕ ಪ್ರಯೋಗ ಮಾಡಿದರು.

ಅವರಿಗೆ ಯಾರ ಬಗೆಗೂ ಗೌರವ ಇರಲಿಲ್ಲ. ಏಕೆಂದರೆ ಯಾರೂ ಪರಿಪೂರ್ಣರು ಎಂದು ಅವರಿಗೆ ಅನಿಸಿರಲಿಲ್ಲ. ಯಾರೂ ಪರಿಪೂರ್ಣರಲ್ಲ ಎಂದು ಅವರಿಗೆ ತಿಳಿಸಿದವರು ಪ್ರಖ್ಯಾತ ಲೇಖಕ ಡಾಂ ಮೊರೇಸ್, ಲಂಡನ್ನಿಗೆ ಹೋಗಿ ಆಗಿನ ಪ್ರಧಾನಿ ನೆಹರೂ ಅವರನ್ನು ಹಿಗ್ಗಾಮುಗ್ಗಾ ಟೀಕಿಸಿ ಅವರು ದೊಡ್ಡ ಸುದ್ದಿಯಾಗಿದ್ದರು. ಮೆಹ್ರಾಗೆ ಅದು ಒಂದು ಪಾಠ ಕಲಿಸಿತು. ಎಲ್ಲರನ್ನೂ ಪ್ರಶ್ನಿಸು ಎಂದು. ತಮ್ಮನ್ನು ಪ್ರಶ್ನಿಸುವುದನ್ನೂ ಅವರು ಇಷ್ಟಪಡುತ್ತಿದ್ದರು. ತಮ್ಮ ಮತ್ತು ಪತ್ರಿಕೆಯ ನಿಲುವನ್ನು ಟೀಕಿಸಿದ ಪತ್ರಗಳನ್ನು ಅವರು ಪ್ರಕಟಿಸಿದರು. ಬಹುಶಃ ಹಾಗೆ ಮಾಡಿದ ಮೊದಲ ಸಂಪಾದಕ ಅವರು. ಎಲ್ಲರನ್ನು ಟೀಕಿಸುವ ಅಥವಾ ಟೀಕಿಸುವ ಅಧಿಕಾರ ತನಗೆ ಇದೆ ಎಂದು ತಿಳಿದುಕೊಂಡ ಪತ್ರಕರ್ತರನ್ನು ಟೀಕಿಸುವ ಅಧಿಕಾರ ಓದುಗರಿಗೆ ಇದೆ ಎಂದು ನಮ್ಮನ್ನು ನಂಬಿಸಿದವರು ಅವರು. ಅವರ ಪತ್ರಿಕೆಯ ಅತ್ಯಂತ ಆಸಕ್ತಿಕರ ವಿಭಾಗ ಎಂದರೆ ಓದುಗರ ಪತ್ರಗಳದೇ ಆಗಿತ್ತು ಎಂಬುದು ಪತ್ರಿಕೋದ್ಯಮದಲ್ಲಿ ವಿರಳ ವಿದ್ಯಮಾನ.

ಎಲ್ಲರನ್ನು ಅಗೌರವದಿಂದ ಕಂಡ, ಎಲ್ಲರನ್ನು ಟೀಕಿಸಿದ, ಅಷ್ಟೇನು ಯಶಸ್ವಿ ಮತ್ತು ಪ್ರಮುಖವಲ್ಲದ ಪತ್ರಿಕೆಗಳ ಸಂಪಾದಕರಾಗಿ ಕೆಲಸ ಮಾಡಿದ ಮೆಸ್ತಾ ಸಾವು ಬಹಳ ದೊಡ್ಡ ಸುದ್ದಿಯಾಯಿತು. ಅವರ ಅಂತ್ಯಸಂಸ್ಕಾರದಲ್ಲಿ ಕಾಂಗ್ರೆಸ್ಸಿನವರ ಜತೆಗೆ ಬಿಜೆಪಿಯವರೂ

ಭಾಗವಹಿ ಸಿದರು. 'ಔಟ್‌ಲುಕ್' ಪತ್ರಿಕೆಯಲ್ಲಿ ಯಾವಾಗಲೂ ಬರೆಯುತ್ತಿದ್ದ ಪ್ರಸಿದ್ಧ ಲೇಖಕಿ ಅರುಂಧತಿ ರಾಯ್ ಒಂದು ಮಾತು ಹೇಳುತ್ತಿದ್ದರು : ಎಲ್ಲರ ಕಪಾಟಿನಿಂದ ತಲೆಬುರುಡೆಗಳನ್ನು ಎಳೆದು ತೆಗೆಯುವ ಪತ್ರಕರ್ತನ ಕಪಾಟಿನಲ್ಲಿ ಯಾವ ತಲೆಬುರುಡೆಗಳೂ ಇರಬಾರದು ಎಂದು. ಮೆಪ್ತಾ ಅವರ ಕಪಾಟಿನಲ್ಲಿ ತಲೆಬುರುಡೆಗಳು ಇರಲಿಲ್ಲವೇ? ಅವರ ಕುರಿತು ಅವರ ಸಮಕಾಲೀನರಿಗೆ ಇದ್ದ ಅಸೂಯೆ ಮತ್ತು ನಮ್ಮಂಥ ಮಧ್ಯವಯಸ್ಕರು ಅವರ ಕುರಿತು ಹೊಂದಿದ್ದ ಪ್ರೀತಿ ನೋಡಿದರೆ ಇರಲಾರವು ಎಂದು ಅನಿಸುತ್ತದೆ. ಸಾವಿನ ಮನೆ ಪ್ರವೇಶಿಸಿದ ಒಬ್ಬ ಪತ್ರಕರ್ತನ ಕುರಿತು ಇದಕ್ಕಿಂತ ಹೆಚ್ಚಿಗೆ ಏನು ಒಳ್ಳೆಯದನ್ನು ಹೇಳಲು ಸಾಧ್ಯ?

15-3-2015

# ...ಫಲಕ ನೆಟ್ಟು ಮರಾಠಿ

# ಉಳಿಸಲು ಸಾಧ್ಯವಿಲ್ಲ!

ಇದು ಬರೀ ರಾಜಕೀಯ. ಅಲ್ಲಿ ಮರಾಠಿ ಪ್ರೇಮವೂ ಇಲ್ಲ; ಅಸ್ಮಿತೆಯ ಪ್ರಶ್ನೆಯೂ ಇಲ್ಲ. ಇದು ತಮ್ಮ ಅಸ್ಮಿತೆಯ ಪ್ರಶ್ನೆ ಎಂದು ಮರಾಠಿಗರು ರಾಜ್ಯಗಳ ಪುನರ್ ವಿಂಗಡಣೆಯಾದ ಲಾಗಾಯ್ತಿನಿಂದಲೂ ಹೇಳಿಕೊಂಡು ಬಂದಿದ್ದಾರೆ. ಅದನ್ನಾದರೂ ಎಲ್ಲ ಮರಾಠಿಗರೂ ಹೇಳುತ್ತಿದ್ದಾರೆಯೇ? ರಾಜ್ಯಗಳ ರಚನೆಯಾಗಿ ತಲೆಮಾರುಗಳೇ ಕಳೆದು ಹೋಗಿವೆ. ಎಲ್ಲರಿಗೂ ದೈನಿಕದ ಚಿಂತೆ. ಅನ್ನ ನೀರಿನ ಚಿಂತೆ. ಭಾಷೆಯನ್ನು, ಅಸ್ಮಿತೆಯನ್ನು ಇಟ್ಟುಕೊಂಡು ಯಾರೂ ವರ್ಷಗಟ್ಟಲೆ ಚಳವಳಿ ಮಾಡಲು ಸಾಧ್ಯವಿಲ್ಲ. ಅದನ್ನೆಲ್ಲ ಮಾಡುವವರು ರಾಜಕಾರಣಿಗಳು, ಅವರಿಗೆ ಜನರ ಭಾವನೆಗಳ ಜತೆ ಚೆಲ್ಲಾಡುತ್ತಲೇ ಇರಬೇಕು ಎಂದು ಅನಿಸುತ್ತ ಇರುತ್ತದೆ. ಚುನಾವಣೆ ಹತ್ತಿರ ಬರುವಾಗ ಅದು ಇನ್ನೂ ಹೆಚ್ಚಾಗುತ್ತದೆ.

ಬೆಳಗಾವಿ ಜಿಲ್ಲೆಯಲ್ಲಿ ಚುನಾವಣೆ ಹತ್ತಿರ ಬಂದಾಗಲೆಲ್ಲ ಕೆಲವರು ಧುರೀಣರಲ್ಲಿ ಮರಾಠಿ ಪ್ರೇಮ 'ಉಜ್ವಲ'ವಾಗಿ ಬೆಳಗುತ್ತದೆ. ಚುನಾವಣೆ ಮುಗಿದ ಕೂಡಲೇ ಅದು ಆರಿ ಹೋಗುತ್ತದೆ. ಇದು ಬೆಳಗಾವಿ ಮಂದಿಗೆ ರೂಢಿಯಾಗಿದೆ. ಅವರು ಈ ಕಳ್ಳಾಟ ಕಂಡು ಒಳಗೊಳಗೇ ನಗುತ್ತ ಇರುತ್ತಾರೆ. ನವೆಂಬರ್ 1ರ ಕಾಳಾದಿನ್ ಆಚರಣೆ, (ಗಡಿ ಹೋರಾಟಕ್ಕಾಗಿ ಬಲಿ ಕೊಟ್ಟವರ ನೆನಪಿನಲ್ಲಿ ನಡೆಯುವ ಜನವರಿ 17ರ ಹುತಾತ್ಮ ದಿನಾಚರಣೆಗಳೆಲ್ಲ ವಿಧ್ಯುಕ್ತ ಕ್ರಿಯೆಯಂತೆ ಅಲ್ಲಿ ನಡೆಯುತ್ತವೆ.

ಮೊದಲು 'ಹುತಾತ್ಮ ಚೌಕಿನಲ್ಲಿ ನಡೆಯುತ್ತಿದ್ದ ಸಾರ್ವಜನಿಕ ಸಭೆಗಳಲ್ಲಿ ಸಾವಿರಗಟ್ಟಲೆ ಜನ ಸೇರುತ್ತಿದ್ದರು. ಈಗ ಹತ್ತು ಮಂದಿ ಇದ್ದರೆ ಹೆಚ್ಚು. ಬೆಳಗಾವಿಯಲ್ಲಿ ವಾಸವಾಗಿರುವ ಮರಾಠಿ ಮಂದಿಗೆ ಅಲ್ಲಿನ ಕನ್ನಡಿಗರ ಜತೆ ಎಂದಿನಿಂದಲೂ ಸಹಬಾಳ್ವೆ ಇದೆ. ಏಕೆಂದರೆ ಅವರು ವ್ಯಾಪಾರಸ್ಥರು, ಉದ್ಯಮಿಗಳು. ಸ್ಥಳೀಯರ ಜತೆ ಕಾದಾಡಿಕೊಂಡು ವ್ಯಾಪಾರ ವಹಿವಾಟು ಮಾಡಲು ಆಗುವುದಿಲ್ಲ ಎಂದು ಅವರಿಗೆ ಗೊತ್ತು. ಮರಾಠಿಗರದು ಏನಿದ್ದರೂ ಕರ್ನಾಟಕ ಸರ್ಕಾರದ ಜತೆಗೆ ಜಗಳ. ಹಾಗೆಂದು ಬಣ್ಣಿಸುತ್ತಿರುವುವು ಕೂಡ ಮರಾಠಿ ಪತ್ರಿಕೆಗಳು, ಅವರಿಗೂ ಅದು ವ್ಯಾಪಾರ!

ಈಗ ಮತ್ತೆ ಬೆಳಗಾವಿ ಸುದ್ದಿಯಲ್ಲಿ ಇದೆ. ಆ ನಗರದ ವಡಗಾಂವಿ ಹೊರವಲಯದ ಯಳ್ಳೂರು ಗ್ರಾಮದ ಪ್ರವೇಶದಲ್ಲಿಯೇ ಒಂದು ಗುರುತು ಫಲಕ ಇತ್ತು. ಅದರ ಮೇಲೆ 'ಯಳ್ಳೂರು-ಮಹಾರಾಷ್ಟ್ರ ರಾಜ್ಯ' ಎಂದು ಬರೆಯಲಾಗಿತ್ತು. ಮಹಾಜನ್ ವರದಿ ಪ್ರಕಾರ ಯಳ್ಳೂರು ಮಹಾರಾಷ್ಟ್ರಕ್ಕೆ ಸೇರಬೇಕು ನಿಜ. ಮಹಾಜನ್ ವರದಿ ಜಾರಿಯಾಗುವವರೆಗೆ ಯಳ್ಳೂರಿನ ಮಂದಿಗೆ ಇಷ್ಟ ಇರಲಿ, ಇಲ್ಲದೇ ಇರಲಿ ಅವರು ಕರ್ನಾಟಕದಲ್ಲಿಯೇ ಇರಬೇಕು. ಆ ಊರಿನಲ್ಲಿ ಒಂದಿಷ್ಟು ಪುಂಡು ಪೋಕರಿಗಳು ಇದ್ದಾರೆ. ಅವರ ಹಿಂದೆ ಹಿತಾಸಕ್ತ ರಾಜಕಾರಣಿಗಳೂ ಇದ್ದಾರೆ. ಅವರ ಚಿತಾವಣೆಯಿಂದಾಗಿಯೇ ಆ ಫಲಕ ನಿನ್ನೆ ಮೊನ್ನೆವರೆಗೆ ಇತ್ತು. ಭೀಮಪ್ಪ ಗಡಾದ ಎಂಬುವರು ರಾಜ್ಯ ಹೈಕೋರ್ಟಿನಲ್ಲಿ ಸಾರ್ವಜನಿಕ ಹಿತಾಸಕ್ತಿಯ ಮೊಕದ್ದಮೆ ಹೂಡದೇ ಇದ್ದರೆ ಇನ್ನೂ ಎಷ್ಟು ವರ್ಷ ಅದು ಅಲ್ಲಿಯೇ ಹಾಗೆಯೇ ಇರುತ್ತಿತ್ತೋ ಗೊತ್ತಿಲ್ಲ.

ಆ ಫಲಕ ಅಲ್ಲಿ ಬರುವುದಕ್ಕೂ ಒಂದು ದೊಡ್ಡ ಇತಿಹಾಸ ಇದೆ. ಅದು 1986ನೇ ಇಸವಿ. ಮಹಾರಾಷ್ಟ್ರದ ಹಿರಿಯ ಮುಖಂಡ ಶರದ್ ಪವಾರ್ ಅವರಿಗೆ ಆ ರಾಜ್ಯದ ಮುಖ್ಯಮಂತ್ರಿ ಆಗಬೇಕಿತ್ತು. ಅವರಿಗೆ ಜನರ ಮನಸ್ಸನ್ನು ಮುಟ್ಟಲು ಒಂದು ವಿಷಯ ಬೇಕಿತ್ತು. ಅವರು, ಬೆಳಗಾವಿಗೆ ಬಂದು 'ಸೀಮಾ ಲಡಾಯಿ' ಶುರು ಮಾಡುತ್ತೇನೆ' ಎಂದು ಪ್ರಕಟ ಮಾಡಿದರು. ಆಗ ರಾಜ್ಯದಲ್ಲಿ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿ 'ಶರದ್ ಪವಾರ್ ಹೇಗೆ ಬೆಳಗಾವಿ ಪ್ರವೇಶ ಮಾಡುತ್ತಾರೆ ನಾವೂ ನೋಡುತ್ತೇವೆ' ಎಂದು ಹೆಗಡೆಯವರು ಬೆಳಗಾವಿಯ ನಾಲ್ಕೂ ಗಡಿಗಳಲ್ಲಿ ನಾಕಾಬಂದಿ ಹಾಕಿದರು. ಪೊಲೀಸರು ಭದ್ರ ಕಾವಲು ನಿಂತರು.

ಆದರೆ, ಜೂನ್ ಒಂದನೇ ತಾರೀಖು ಪವಾರ್ ಅವರು ತಾವು ಪ್ರಕಟಿಸಿದ ಹಾಗೆಯೇ ನಡುಬೆಳಗಾವಿಯಲ್ಲಿ ಪ್ರತ್ಯಕ್ಷರಾದರು. ಅವರನ್ನು ಬಂಧಿಸಿ ಘಟಪ್ರಭಾ ನದಿ ತಟದಲ್ಲಿನ ಹುನ್ನೂರು ಪ್ರವಾಸಿ ಮಂದಿರಕ್ಕೆ ಕರೆದುಕೊಂಡು ಹೋಗಿ ರಾಜಾತಿಥ್ಯ ಕೊಟ್ಟು ಮುಂಬೈಗೆ ಕಳುಹಿಸಿಕೊಡಲಾಯಿತು. ಪವಾರ್ ಗೆದ್ದಿದ್ದರು. ಮುಂದೆ ಅವರು ಕೆಲವೇ ದಿನಗಳಲ್ಲಿ ಮಹಾರಾಷ್ಟ್ರದ ಮುಖ್ಯಮಂತ್ರಿಯಾದರು! ಮುಂದೆ ತೊಂಬತ್ತರ ದಶಕದಲ್ಲಿ ಅವರು ಲೋಕಸಭೆಗೆ ಆರಿಸಿ ಹೋಗಿ ಕೇಂದ್ರದಲ್ಲಿ ರಕ್ಷಣಾ ಸಚಿವರಾಗಿ ಮತ್ತೆ ಬೆಳಗಾವಿಗೆ ಬಂದರು. ಮರಾಠಿ ಪತ್ರಕರ್ತರು ಅವರ ಮುಂದೆ ಮತ್ತೆ ಬೆಳಗಾವಿ ಗಡಿ ವಿವಾದದ ಪ್ರಶ್ನೆ ಎತ್ತಿದರು. ಜಾಣ ಪವಾರ್, ಕೇಳುವುದಾದರೆ ದೇಶದ ಗಡಿ ಕುರಿತು ಪ್ರಶ್ನೆ ಕೇಳಿ ಎಂದು ನುಣುಚಿಕೊಂಡರು.

ಅದೇ 86ರ ಜೂನ್ 5ನೇ ತಾರೀಖು ಆಗ ಶಿವಸೇನೆಯಲ್ಲಿ ಇದ್ದ ನಂತರ ಪವಾರ್ ಜತೆಗೆ ಸೇರಿದ ಛಗನ್ ಭುಜಬಲ್ ಬೆಳಗಾವಿಯಲ್ಲಿ ದಾಂಧಲೆ ಮಾಡಿದರು. ಸಾವಿರಾರು ಶಿವಸೇನೆ ಕಾರ್ಯಕರ್ತರು ಕಲ್ಲು ತೂರಾಡಿದರು. ಬೆಳಗಾವಿ ನಗರಕ್ಕೆ ನೀರು ಪೂರೈಸುವ ರಕ್ಕಸಕೊಪ್ಪ ಜಲಾಶಯದಿಂದ ಬರುವ ಕೊಳವೆಗಳನ್ನು ಒಡೆಯಲಾಯಿತು. ಜಲಾಶಯಕ್ಕೆ ವಿಷ ಬೆರೆಸಲಾಯಿತು. ಛಗನ್ ಭುಜಬಲ್ ನೇತೃತ್ವದ ಚಳವಳಿಯನ್ನು ರಾಜ್ಯ ಸರ್ಕಾರ

ಬಗ್ಗು ಬಡಿಯಿತು. ಲಾಠಿ ಪ್ರಹಾರ, ಗೋಲಿಬಾರು ಎಲ್ಲ ಆಯಿತು. ಆದರೆ, ಶರದ್ ಪವಾರ್ ಅದು ಹೇಗೆ ಒಳಗೆ ನುಸುಳಿ ಬಂದರು ಎಂಬುದು ಯಕ್ಷಪ್ರಶ್ನೆಯಾಗಿಯೇ ಉಳಿಯಿತು. ಪವಾರ್ ಅವರನ್ನು ಒಳಗೆ ಕರೆದುಕೊಂಡೇ ನಂತರ ನಾಕಾಬಂದಿ ಮಾಡಲಾಯಿತು ಎಂಬುದು ಆಗ ಇದ್ದ ಸುದ್ದಿ. ಹೆಗಡೆಯವರು ಪವಾರ್ ಅವರ ರಾಜಕೀಯ ಪುನರುಜ್ಜಿವನಕ್ಕೆ ಪರೋಕ್ಷವಾಗಿ ಸಹಕರಿಸಿದ್ದರು!

ಯಳ್ಳೂರಿನ ಫಲಕ ಆಗ ಹುಟ್ಟಿಕೊಂಡುದು. 1996ರಲ್ಲಿ ಹೆಗಡೆಯವರು ಲೋಕಶಕ್ತಿ ಪಕ್ಷದ ಸಂಘಟನೆಗೆಂದು ಬೆಳಗಾವಿಗೆ ಬಂದಿದ್ದರು. ಅದೇ ಪಕ್ಷದಲ್ಲಿ ಇದ್ದ ಕನ್ನಡ ಚಳವಳಿಗಾರ ಅಶೋಕ ಚಂದರಗಿ, ಯಳ್ಳೂರಿನ ಫಲಕದ ಪ್ರಸ್ತಾಪ ಮಾಡಿದ್ದರು. ಅದಕ್ಕೆ ಹೆಗಡೆಯವರು, 'ಯಳ್ಳೂರು ಅಮೆರಿಕದಲ್ಲಿ ಇದೆ ಎಂದು ಫಲಕ ಹಾಕಿಕೊಂಡರೆ ಅದೇನು ಅಮೆರಿಕಕ್ಕೆ ಹೋಗುತ್ತದೆಯೇ' ಎಂದು ಉತ್ತರಿಸಿದ್ದರು.

ಇಂಥದಕ್ಕೆಲ್ಲ ತಲೆ ಕೆಡಿಸಿಕೊಳ್ಳಬಾರದು ಎಂಬುದು ಅವರ ಉಪೇಕ್ಷೆಗೆ ಕಾರಣವಾಗಿರಬಹುದು. ಆದರೆ, ಗಡಿರೇಖೆಗಳು ಆಯಾ ಪ್ರದೇಶದ ಸಾರ್ವಭೌಮತೆಯ ಸಂಕೇತಗಳು. ಅದನ್ನು ಹೇಗೆ ಉಲ್ಲಂಘಿಸಲು ಸಾಧ್ಯ? ಯಳ್ಳೂರಿನ ಮಂದಿ ಉಲ್ಲಂಘಿಸಿ ದಕ್ಕಿಸಿಕೊಂಡರು. ಅವರ ಮತಗಳ ಹಂಗಿನಲ್ಲಿ ಇದ್ದ ರಾಜಕಾರಣಿಗಳೂ ಅದನ್ನು ಉಪೇಕ್ಷಿಸಿಕೊಂಡೇ ಬಂದರು. ಬೆಳಗಾವಿಯ ಜಿಲ್ಲೆಯ ಒಬ್ಬ ಪ್ರಮುಖ ಕನ್ನಡದ ರಾಜ- ಕಾರಣಿಯ ಪತ್ನಿ, ಕೆಲವು ವರ್ಷಗಳ ಹಿಂದೆ ಯಳ್ಳೂರಿನಲ್ಲಿ ಸಾಹಿತ್ಯ ಸಮ್ಮೇಳನ ನಡೆದಾಗ ಆ ಫಲಕಕ್ಕೆ ಮಾಲೆ ಹಾಕಿ ಆರತಿ ಎತ್ತಿ ಬಂದಿದ್ದರು. ರಾಜಕಾರಣಿಗಳು ಮತಕ್ಕಾಗಿ ಯಾವ ರಾ- ಜಿಗೂ ಸಿದ್ಧರಾಗಿರುತ್ತಾರೆ. ಯಳ್ಳೂರು ಗಲಾಟೆ ವಿಚಾರದಲ್ಲಿ ಬೆಳಗಾವಿಯ ಸಂಸದರ ಮೌನ ನಿಗೂಢವಾಗಿಯೇ ಇದೆ. ಅವರ ಗೆಲುವಿಗೆ ಮರಾಠಿ ಮತಗಳು ಬೇಕೇ ಬೇಕು!

ಮಹಾರಾಷ್ಟ್ರ ರಾಜ್ಯದಲ್ಲಿ ವಿಧಾನಸಭೆಗೆ ಇನ್ನೇನು ಚುನಾವಣೆ ನಡೆಯಬೇಕು. ಶಿವಸೇನೆಯ ಮುಖಂಡರಿಗೆ ಈಗ ಅಧಿಕಾರದ ಗದ್ದುಗೆಯ ಮೇಲೆ ಕಣ್ಣು. ಕಳೆದು ಹೋಗಬಹುದಾದ ಅಧಿಕಾರ ಹಿಡಿದುಕೊಳ್ಳಬೇಕು ಎಂದು ಕಾಂಗ್ರೆಸ್ ಮುಖಂಡರಿಗೂ ಆಸೆ. ಈಗ ಅವರಿಗೆಲ್ಲ ಇದ್ದಕ್ಕಿದ್ದಂತೆ ಬೆಳಗಾವಿಯಲ್ಲಿನ ಮರಾಠಿಗರ ಅಸ್ಮಿತೆ ನೆನಪಾಗಿದೆ. ಕನ್ನಡಿಗರು ಭಯೋತ್ಪಾದಕರು ಎಂದು ಅನಿಸತೊಡಗಿದೆ.

ಸೊಲ್ಲಾಪುರ, ಜತ್ತ, ಅಕ್ಕಲಕೋಟೆಗಳೆಲ್ಲ ಕನ್ನಡದ ಪ್ರದೇಶಗಳು. ಸೊಲ್ಲಾಪುರದ ಸಿದ್ದರಾಮನ ಗುಡಿಯ ಮುಂದೆ, ಸಾಂಗಲಿಯ ಗಣೇಶನ ಗುಡಿಯ ಮುಂದೆ ಈಗಲೂ ಕನ್ನಡದ ಫಲಕಗಳು ಇವೆ. ಹಾಗೆಂದು ಅವು ಕರ್ನಾಟಕಕ್ಕೆ ಸೇರಿವೆ ಎಂದು ನಾವು ಅಲ್ಲಿ ಫಲಕ ಹಾಕಿದರೆ ಮಹಾರಾಷ್ಟ್ರ ಸರ್ಕಾರ ಸುಮ್ಮನೆ ಇರುತ್ತದೆಯೇ? ಇಷ್ಟಾಗಿ ಬೆಳಗಾವಿಯ ಜಿಲ್ಲಾಡಳಿತ, ರಾಜ್ಯ ಹೈಕೋರ್ಟಿನ ಆದೇಶದ ಅನುಸಾರ ಯಳ್ಳೂರಿನ ಫಲಕವನ್ನು ಕಿತ್ತು ಹಾಕಿದೆ. ಮರಾಠಿ ನಾಯಕರಿಗೆ ಹೈಕೋರ್ಟಿನ ಆದೇಶವೂ ಭಯೋತ್ಪಾದನೆಯಂತೆ ಕಾಣುತ್ತದೆಯೇ?

ಮಹಾರಾಷ್ಟ್ರದ ನಾಯಕರೇ ಇರಲಿ, ಬೆಳಗಾವಿಯಲ್ಲಿನ ಮಹಾರಾಷ್ಟ್ರ ಏಕೀಕರಣ ಸಮಿತಿಯ ನಾಯಕರೇ ಇರಲಿ. ಅವರು ಕೇವಲ ಅಸ್ಮಿತೆಯ ಮಾತು ಮಾತ್ರ ಆಡುತ್ತಿದ್ದಾರೆ.

ಅವರಿಗೆ ಬೆಳಗಾವಿ ಅಭಿವೃದ್ಧಿ ಆಗುವುದು ಬೇಡ. 2006ರಲ್ಲಿ ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಆಗಿದ್ದಾಗ ಬೆಳಗಾವಿಯ ದೆಸೆಯೇ ಬದಲಾಯಿತು. ಆಗ ಹಣಕಾಸು ಖಾತೆಯನ್ನು ನೋಡಿಕೊಳ್ಳುತ್ತಿದ್ದ ಯಡಿಯೂರಪ್ಪನವರೂ ಬೆಳಗಾವಿ ಅಭಿವೃದ್ಧಿಗೆ ಸಾಕಷ್ಟು ಹಣ ಬಿಡುಗಡೆ ಮಾಡಿದರು.

90ರ ದಶಕದಲ್ಲಿ ಇದ್ದ ಬೆಳಗಾವಿಗೂ ಈಗ ಇರುವ ಬೆಳಗಾವಿಗೂ ಯಾವ ಸಂಬಂಧವೂ ಇಲ್ಲ. ಅಲ್ಲಿನ ಅಭಿವೃದ್ಧಿ ಅಷ್ಟು ಕಣ್ಣು ಕುಕ್ಕುತ್ತದೆ. ಅದೇ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿಯೇ ಬೆಳಗಾವಿಯಲ್ಲಿ ವಿಧಾನ ಮಂಡಲದ ಅಧಿವೇಶನ ನಡೆಯಿತು. ಅದುವರೆಗೆ ಬೆಳಗಾವಿಯ ಕನಸನ್ನಾದರೂ ಕಾಣುತ್ತಿದ್ದ ಮಹಾರಾಷಿಗರಿಗೆ ಅದು ಕೇವಲ ಕನಸು ಎಂದು ಗೊತ್ತಾಯಿತು. ಮತ್ತೆ 2011ರಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನದಲ್ಲಿ ಮರಾಠಿಗರೇ ಸಂಭ್ರಮದಿಂದ ಭಾಗವಹಿಸಿದ್ದರು. ನಮ್ಮ ಊರಿನಲ್ಲಿ ಹುಟ್ಟಿದರೂ ಮುಂಬೈ ಹುಡುಗಿಯೇ ಆಗಿರುವ ಐಶ್ವರ್ಯ ಕೈ ಬೆಳಗಾವಿಗೆ ಬಂದು ಸಮ್ಮೇಳನದಲ್ಲಿ ಭಾಗವಹಿಸಿ ಮಿಂಚಿ ಹೋದರು.

ಬೆಳಗಾವಿ ಹೀಗೆ ಮಿಂಚುವುದು ಮಹಾರಾಷ್ಟ್ರಕ್ಕೆ ಬೇಕಿರಲಿಲ್ಲ. ಗಡಿ ಚಳವಳಿಯಲ್ಲಿ ಭಾಗವಹಿಸಿದವರಿಗೆ ಈಗ ಐವತ್ತರ ಗಡಿ ದಾಟಿ ಹೋಗಿದೆ. ಈಗಿನ ಯುವಕರಿಗೆ, ಅವರು ಯಾವ ಭಾಷಿಕರೇ ಇರಲಿ, ಭಾಷೆ ಒಂದು ಭಾವನಾತ್ಮಕ ಸಂಗತಿಯಲ್ಲ. ಅವರು ಎಲ್ಲಿಯಾದರೂ ಇರುತ್ತಾರೆ. ಸುಖವಾಗಿ ಇರಲು ಬಯಸುತ್ತಾರೆ. ತಮ್ಮ ಭಾಷೆಯ ನಾಯಕರು ನಕಾರಾತ್ಮಕ ರಾಜಕೀಯ ಮಾಡುತ್ತಿದ್ದಾರೆ ಎಂದು ಈ ಯುವಕ ಯುವತಿಯರಿಗೆ ಅರ್ಥವಾಗುವುದಿಲ್ಲವೇ? ಬೆಳಗಾವಿಯಿಂದ ಹಿಂದೆ ಐವರು ಎಂಇಎಸ್ ಶಾಸಕರು ಆರಿಸಿ ಹೋಗುತ್ತಿದ್ದರು. ನಡುವೆ ಅದು ಸೊನ್ನೆಗೆ ಇಳಿದಿತ್ತು. ಈಗ ಮತ್ತೆ ಇಬ್ಬರು ಆರಿಸಿ ಬಂದಿದ್ದಾರೆ.

ಆದರೆ, ಕರ್ನಾಟಕದ ವಿಧಾನಮಂಡಲದ ಕಲಾಪದ ಇತಿಹಾಸವನ್ನು ಯಾರಾದರೂ ತೆಗೆದು ನೋಡಬಹುದು: ಒಂದೇ ಒಂದು ಬಾರಿಯೂ ಎಂಇಎಸ್ ಶಾಸಕರು ತಮ್ಮ ಕ್ಷೇತ್ರದ ರಸ್ತೆಯ ಬಗ್ಗೆ, ಒಳಚರಂಡಿಯ ಬಗ್ಗೆ, ಕುಡಿಯುವ ನೀರಿನ ಬಗ್ಗೆ, ಕಸದ ಬಗ್ಗೆ ಮಾತನಾಡಿಲ್ಲ. ವಿಧಾನಸಭೆಯ ಮೊದಲ ಅಧಿವೇಶನಕ್ಕೆ ಕೇಸರಿ ಪಟಗಾ ಸುತ್ತಿಕೊಂಡು ಬರುವುದು, 'ಬೆಳಗಾವಿ, ಖಾನಾಪುರ, ನಿಪ್ಪಾಣಿ, ಕಾರವಾರ, ಔರಾದ್ ಮಹಾರಾಷ್ಟ್ರಾಲಾ ಝಾಲಾಚ ಪಾಹಿಜೇ' ಎಂದು ಕೂಗಿ ಸಭಾತ್ಯಾಗ ಮಾಡುವುದು ಅವರು ಇದುವರೆಗೆ ಮಾಡಿಕೊಂಡು ಬಂದ ದಂಧೆ. ಅದು ದಂಧೆ ಏಕೆಂದರೆ ಆ ಮೂಲಕವೇ ತಾವು ಆರಿಸಿ ಬರುವುದು ಎಂದು ಅವರು ನಂಬಿದ್ದಾರೆ. ಅವರಿಗೆ ಅಭಿವೃದ್ಧಿಯ ಮಾತೇ ಬೇಡ, ಬೆಳಗಾವಿಯಲ್ಲಿ ಇರುವ ಕನ್ನಡ ಶಾಲೆಗಳ ಸ್ಥಿತಿಗತಿಯನ್ನು ಯಾರಾದರೂ ಒಂದು ಸಾರಿ ಬಂದು ನೋಡಬೇಕು.

ತೀರಾ ಈಚಿನವರೆಗೆ ಬೆಳಗಾವಿ ಹೊರವಲಯದ ಕಂಗ್ರಾಳಿಖುರ್ದ ಗ್ರಾಮದಲ್ಲಿ ಕನ್ನಡದ ಮಕ್ಕಳು ಬಯಲಲ್ಲಿ ಕುಳಿತು ಓದಿದರೆ ಮರಾಠಿ ಮಕ್ಕಳು ಕಟ್ಟಡದ ಒಳಗೆ ಕುಳಿತು ನೆರಳಿನಲ್ಲಿ ಓದುತ್ತಿದ್ದರು. ಏಕೆಂದರೆ ಬೆಳಗಾವಿ ಮಹಾನಗರ ಪಾಲಿಕೆಯ ಆಡಳಿತವೂ ಮರಾಠಿಗರ ಕೈಯಲ್ಲಿಯೇ ಇತ್ತು. ಈಗಲೂ ಇದೆ. ಅವರು ಕನ್ನಡದ

ಮಕ್ಕಳನ್ನು ತಮ್ಮ ಮಕ್ಕಳ ಹಾಗೆ ನೋಡಿಕೊಳ್ಳಲಿಲ್ಲ. ಬೆಳಗಾವಿ ಊರಿನಲ್ಲಿಯೇ ಇರುವ ಕನ್ನಡದ ಶಾಲೆಗಳ ಸ್ಥಿತಿ ಹೀಗೆ



ಇರುವಾಗ ಕರ್ನಾಟಕಕ್ಕೆ ಹೊಂದಿಕೊಂಡ ಮಹಾರಾಷ್ಟ್ರದ ಗಡಿಯಲ್ಲಿನ ಕನ್ನಡ ಶಾಲೆಗಳ ಸ್ಥಿತಿ ಹೇಗೆ ಇರಬೇಡ? ಅವುಗಳ ಸ್ಥಿತಿ ಸುಧಾರಿಸಬೇಕು ಎಂದು ಕೇಳಿದರೆ ನಾವು ಜಗಳಗಂಟರು ಎಂದು ಅನಿಸುತ್ತದೆ. ಕನ್ನಡಿಗರ ದೌರ್ಭಾಗ್ಯ ಇದು.

ಕನ್ನಡಿಗರು ಮಾಡುವ ತಪ್ಪು ಎಂದರೆ ಚಳವಳಿ ನಡೆದಾಗಲೆಲ್ಲ ಬ್ಯಾಂಕ್ ಆಫ್ ಮಹಾರಾಷ್ಟ್ರದ ಶಾಖೆಗಳಿಗೆ ಕಲ್ಲು ತೂರುವುದು. ಬ್ಯಾಂಕ್ ಆಫ್ ಮಹಾರಾಷ್ಟ್ರ ಭಾರತದ ಬ್ಯಾಂಕು, ಬ್ಯಾಂಕ್ ಆಫ್ ಮೈಸೂರು ಕೂಡ ಭಾರತದ ಬ್ಯಾಂಕು. ಅವು ಆಯಾ ರಾಜ್ಯಕ್ಕೆ ಸೇರಿದುವು ಅಲ್ಲ; ಇಡೀ ದೇಶದ ಆಸ್ತಿಗಳು ಅವು. ಕಲ್ಲು ತೂರಿ ಕನ್ನಡ ಉಳಿಸಲು ಸಾಧ್ಯವಿಲ್ಲ. ಫಲಕ ನೆಟ್ಟು ಮರಾಠಿ ಉಳಿಸಲೂ ಸಾಧ್ಯವಿಲ್ಲ.

3-8-2014

# ಮಾಧ್ಯಮ ಎಂಬುದು

# ಕತ್ತರಿಸುವ ಗರಗಸ!

ಇದು ಅಧಿಕಾರದಲ್ಲಿ ಇರುವ ಎಲ್ಲರ ಸಮಸ್ಯೆ. ಅವರಿಗೆ ಪ್ರಶ್ನೆಗಳು ಬೇಡ. ಅವರು ವಿರೋಧ ಪಕ್ಷದಲ್ಲಿ ಇರುವ ವರೆಗೆ ಮಾಧ್ಯಮಗಳು ಜತೆಯಲ್ಲಿಯೇ ಇರಬೇಕು ಎಂದು ಬಯಸುತ್ತಾರೆ. ತಾವು ಅಧಿಕಾರಕ್ಕೆ ಏರಲು ಅದನ್ನು ಏಣಿಯಂತೆ ಬಳಸಿಕೊಳ್ಳುತ್ತಾರೆ. ವಿಧಾನಮಂಡಲದಲ್ಲಿ ವಿರೋಧ ಪಕ್ಷಗಳ ಪಕ್ಕದಲ್ಲಿಯೇ ಮಾಧ್ಯಮಗಳಿಗೂ ಆಸನದ ವ್ಯವಸ್ಥೆ ಇದೆ. ವಿರೋಧ ಪಕ್ಷದ ಮುಖಂಡರು ಸಭಾಧ್ಯಕ್ಷರ ಮುಖ ನೋಡಿ ಮಾತನಾಡುವುದಕ್ಕಿಂತ ಮಾಧ್ಯಮಗಳ ಮುಖ ನೋಡಿ ಮಾತನಾಡುವುದೇ ಹೆಚ್ಚು! ಒಂದು ಸಾರಿ ಈ ಕಡೆ ಇದ್ದವರು ಆ ಕಡೆ ಅಧಿಕಾರಕ್ಕೆ ಹೋದ ಕೂಡಲೇ ಮಾಧ್ಯಮಗಳು ಕಾಣದಂತೆ ಆಗುತ್ತವೆ. ವಿರೋಧ ಪಕ್ಷದಲ್ಲಿ ಇದ್ದಾಗ ಹೆಗಲ ಮೇಲೆ ಕೈ ಹಾಕಿ ಮಾತನಾಡಿಸಬೇಕು ಎನಿಸುತ್ತಿದ್ದ ಮಾಧ್ಯಮದವರೇ ಈಗ ಬೇಡ ಅನಿಸುತ್ತದೆ. ಮಾಧ್ಯಮಕ್ಕೆ ಇದು ರೂಢಿಯಾಗಿದೆ. ಅದು ರಾಜಕಾರಣಿಗಳ ಇಂಥ ವೇಷ ಬದಲಾವಣೆಯನ್ನು ಅನೇಕ ವರ್ಷಗಳಿಂದ ನೋಡಿಕೊಂಡು ಬಂದಿದೆ. ತನ್ನ ಹೆಗಲ ಮೇಲೆ ಕೈ ಹಾಕಿ ಮಾತನಾಡಿಸುವ ರಾಜಕಾರಣಿಗಳ ಬಗ್ಗೆ ಅದು ತಲೆಕೆಡಿಸಿಕೊಳ್ಳುವುದಿಲ್ಲ. ಅದು, ವಿಧಾನಸೌಧದ ಹೊರಗೆ ಇರುವ ಜನರ ಕಡೆಗೆ ದೃಷ್ಟಿ ಹಾಯಿಸಿರುತ್ತದೆ. ಅವರ ಸಾಕ್ಷಿಪ್ರಜ್ಞೆಯಂತೆ ಕೆಲಸ ಮಾಡುತ್ತ ಇರುತ್ತದೆ.

ಪ್ರಶ್ನೆ ಕೇಳುವುದು ಅದರ ಕೆಲಸ. ಅದು ಆಡಳಿತ ಪಕ್ಷಕ್ಕೂ ಪ್ರಶ್ನೆ ಕೇಳುತ್ತದೆ. ವಿರೋಧ ಪಕ್ಷಕ್ಕೂ ಕೇಳುತ್ತದೆ. ಆಡಳಿತ ಪಕ್ಷಕ್ಕೆ ಹೆಚ್ಚು ಪ್ರಶ್ನೆ ಕೇಳುತ್ತದೆ. ಏಕೆಂದರೆ ಅದು ಆಡಳಿತಕ್ಕೆ ಬಂದಿರುವುದೇ ಜನರ ಕೆಲಸ ಮಾಡಲು. ಅದು ಹೊಣೆಗಾರ ಪಕ್ಷ; ಎಲ್ಲದಕ್ಕೂ ಉತ್ತರ ಕೊಡಬೇಕಾದ ಪಕ್ಷ, ಜನರ ಕೆಲಸ ಮಾಡುವುದರಲ್ಲಿ ಆದ ಲೋಪವನ್ನು ಮಾಧ್ಯಮವೇ ಕೇಳಬೇಕು. ಮತ್ತೆ ಮತ್ತೆ ಹೀಗೆ ಪ್ರಶ್ನೆ ಕೇಳಿದಾಗ ಅಧಿಕಾರದಲ್ಲಿ ಇದ್ದವರಿಗೆ 'ಮಾಧ್ಯಮಗಳಿಗೆ ಬೇರೆ ಕೆಲಸ ಇಲ್ಲವೇ? ಬೇರೆ ಸುದ್ದಿ ಇಲ್ಲವೇ' ಎಂದು ಅನಿಸುತ್ತದೆ. ಮಾಧ್ಯಮಗಳಿಗೆ ಬೇರೆ

ಸುದ್ದಿಗಳೂ ಇರುತ್ತವೆ. ಬರೀ ಒಂದೇ ಸುದ್ದಿಯನ್ನು ನೆಚ್ಚಿಕೊಂಡು ಪತ್ರಿಕೆ ಮಾಡಲು, ಟೀವಿ ಚಾನೆಲ್ ನಡೆಸಲು ಆಗುತ್ತದೆಯೇ? ಮುಖ್ಯವಾದ ಒಂದು ಸುದ್ದಿ ಎಂದು ಇರುತ್ತದೆ. ಅದು ಹೆಚ್ಚು ಚರ್ಚೆಯಲ್ಲಿ ಇರುವ ಸುದ್ದಿ, ಅದು ಹೆಚ್ಚು ಜನರು ಓದುವ, ನೋಡುವ ಸುದ್ದಿಯಾಗಿರುತ್ತದೆ. ಅದು ಸರ್ಕಾರದ ವೈಫಲ್ಯ ಕುರಿತುದು ಆಗಿದ್ದರೆ ಆಡಳಿತ ಮಾಡುವವರಿಗೆ ಕಿರಿ ಕಿರಿ ಆಗುತ್ತದೆ. ಅವರಿಗೆ ತಾವು ಎಷ್ಟೆಲ್ಲ ಘನವಾದ ಕೆಲಸ ಮಾಡುತ್ತಿದ್ದೇವೆ, ಆದರೆ ಅದು ಮಾಧ್ಯಮದಲ್ಲಿ ಸರಿಯಾಗಿ ಬಿತ್ತರಗೊಳ್ಳುತ್ತಿಲ್ಲ ಎಂದು ಅನಿಸುತ್ತ ಇರುತ್ತದೆ. ಮಾಧ್ಯಮ ಸದಾ ನಕಾರಾತ್ಮಕವಾಗಿರುತ್ತದೆ ಎಂದು ಅವರಿಗೆ ಗಾಢವಾಗಿ ಅನಿಸತೊಡಗುತ್ತದೆ. ನಿಜ, ಮಾಧ್ಯಮ ಬಹುತೇಕ ಸಾರಿ ನಕಾರಾತ್ಮಕವಾಗಿಯೇ ಇರುತ್ತದೆ. ಸರ್ಕಾರದ ನಕಾರಾತ್ಮಕ ಕೆಲಸಗಳನ್ನು, ವೈಫಲ್ಯಗಳನ್ನು ಜನರ ಮುಂದೆ ಬಿಂಬಿಸುವುದೂ ಆಡಳಿತ ಮಾಡುವವರಿಗೆ 'ನಕಾರಾತ್ಮಕ' ಎಂದು ಅನಿಸಬಹುದು. ಆದರೆ, ಏನು ಮಾಡುವುದು?

ಮಾಧ್ಯಮ ಎಂಬುದು ಒಂದು ಇಲ್ಲದೇ ಇದ್ದರೆ ಏನಾಗಬಹುದಿತ್ತು ಎಂದು ಗಾಬರಿಯಾಗುತ್ತದೆ. ಸರ್ಕಾರ ಆಡಿದ್ದೇ ಆಟವಾಗುತ್ತಿತ್ತು. 1975ರ ಜೂನ್ 25, ಅಂಥದೇ ಒಂದು ವಿದ್ಯಮಾನಕ್ಕೆ ಸಾಕ್ಷಿಯಾಗಿತ್ತು. ಆಗ ದೇಶದಲ್ಲಿ ತುರ್ತುಸ್ಥಿತಿ ಘೋಷಣೆಯಾಗಿತ್ತು. ರಾಜಕಾರಣಿಗಳಿಗೆ ಜನರ ಬಗೆಗೆ ಆಳವಾದ ಕಾಳಜಿಯೇ ಇರುವುದಿಲ್ಲವೇನೋ? ಅವರು ಎಲ್ಲವನ್ನೂ ರಾಜಕೀಯ ದೃಷ್ಟಿಯಿಂದಲೇ ನೋಡುತ್ತಾರೋ ಏನೋ? ಒಂದು ಘೋರ ಅತ್ಯಾಚಾರ ಪ್ರಕರಣ ನಡೆದ ಕೂಡಲೇ ಸರ್ಕಾರ ಆಕ್ರಮಣಕಾರಿಯಾಗಿ ಕೆಲಸ ಮಾಡುವ ಬದಲು ರಕ್ಷಣಾತ್ಮಕವಾಗಿ ಕೆಲಸ ಮಾಡಲು ತೊಡಗುತ್ತದೆ. ರೈತರ ಮೇಲೆ ಗೋಲಿಬಾರ್ ಆದಾಗಲೂ ಹೀಗೆಯೇ ಆಗುತ್ತದೆ. ಸರ್ಕಾರವೇ ಆಕ್ರಮಣಕಾರಿಯಾಗಿ, ಸಕ್ರಿಯವಾಗಿ ಕೆಲಸ ಮಾಡಿಬಿಟ್ಟರೆ ವಿರೋಧ ಪಕ್ಷಗಳಿಗೆ ದೂರಲು ಏನೂ ಇರುವುದಿಲ್ಲ. ಮಾಧ್ಯಮಗಳಿಗೂ ಬಹುಶಃ ಕೇಳಲು ಪ್ರಶ್ನೆಗಳು ಇರುವುದಿಲ್ಲ. ಎಲ್ಲರೂ ಬಯಸುವುದು ಆರೋಪಿಗಳ ವಿರುದ್ಧ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು ಎಂದು. ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ, ಆದರೆ ಒತ್ತಡ ನಿಭಾಯಿಸಲು ಕ್ರಮ ತೆಗೆದುಕೊಳ್ಳುತ್ತದೆ ಎಂದು ಭಾಸವಾಗುತ್ತದೆ. ಬೆಂಗಳೂರಿನ ಅತ್ಯಾಚಾರ ಪ್ರಕರಣದಲ್ಲಿ ಕರ್ತವ್ಯಲೋಪ ಮಾಡಿದ ಪೊಲೀಸ್ ಇನ್ಸ್ಪೆಕ್ಟರ್ ಅವರನ್ನು ಬಂಧನ ಮಾಡಲೇಬೇಕಿದ್ದರೆ ಮೊದಲೇ ಮಾಡಬೇಕಿತ್ತಲ್ಲ? ಆತ ತಲೆಮರೆಸಿಕೊಂಡ ಎಂದೆಲ್ಲ ಅನಿಸಿದ ಮೇಲೆ ಏಕೆ ಬಂಧಿಸಲಾಯಿತು? ಶಾಲೆಯ ಅಧ್ಯಕ್ಷರನ್ನು ಬಂಧಿಸಲೇಬೇಕು ಎಂದು ಗೊತ್ತಿದ್ದರೆ ಅವರು ದಮನ್ ದೀವ್‌ಗೆ 'ಪರಾರಿ ಆಗುವ ವರೆಗೆ ಏಕೆ ಕಾಯಬೇಕಿತ್ತು? ಅವರಿಬ್ಬರೂ ಬಂಧನಕ್ಕೆ ಒಳಗಾಗುವಂಥ ತಪ್ಪು ಮಾಡಿದ್ದರೆ ಅವರನ್ನು ತಕ್ಷಣ ಏಕೆ ಬಿಡುಗಡೆ ಮಾಡಬೇಕಿತ್ತು? ಒಂದೆರಡು ದಿನ ಕೊಳೆಸಬಹುದಿತ್ತಲ್ಲ? ಸರ್ಕಾರ ರಾಜಕೀಯ ಮಾಡುತ್ತದೆ ಎಂದು ಅನಿಸುವುದು ಹೀಗೆಲ್ಲ ಆದಾಗ, ಸರ್ಕಾರ ಸಕ್ರಿಯವಾಗಿ ಕೆಲಸ ಮಾಡುವ ಬದಲು ಕಣ್ಣೊರೆಸುವ ಕೆಲಸ ಮಾಡುತ್ತದೆ ಎಂದು ಅನೇಕ ಸಾರಿ ಅನಿಸುತ್ತದೆ. ಬೆಂಗಳೂರು ಪೊಲೀಸ್ ಕಮಿಷನ ವರ್ಗ ಕೂಡ ಅಂಥದೇ ಒಂದು ಕ್ರಮವಾಗಿರಬಹುದು. ಗೃಹ ಸಚಿವರ ರಾಜೀನಾಮೆ ಕೇಳಿದರೆ ಪೊಲೀಸ್ ಕಮಿಷನರ್ ವರ್ಗದ ಮೂಲಕ ಒತ್ತಡದಿಂದ

ಪಾರಾಗಲು ಸರ್ಕಾರ ಪ್ರಯತ್ನ ಮಾಡುತ್ತದೆ. ಯಾರಿಗೋ ಬೀಳಬೇಕಾದ ಏಟು ಇನ್ನಾರಿಗೋ ಬೀಳುತ್ತದೆ. ಸರ್ಕಾರ ಹೊಣೆ ಹೊರಲು ಹಿಂಜರಿಯುತ್ತಿದೆ ಎಂದು ಅನಿಸತೊಡಗುತ್ತದೆ, ಅಥವಾ ಪ್ರಾಮಾಣಿಕವಾಗಿ ಸಮಸ್ಯೆಯನ್ನು ನಿಭಾಯಿಸುತ್ತಿಲ್ಲ ಎಂದು ಅನಿಸುತ್ತದೆ.

ವಿರೋಧ ಪಕ್ಷವೂ ರಾಜಕೀಯ ಮಾಡುತ್ತದೆ. ಈ ಪ್ರಕರಣದ ಆರೋಪಿಗಳನ್ನು ನೋಡಿದರೆ ಸರ್ಕಾರ 'ಉತ್ತರ ಕೊಟ್ಟ' ನಂತರವೂ ಬಿಜೆಪಿ ಮತ್ತು ಅದರ ಅಂಗಸಂಸ್ಥೆಗಳು ಅಷ್ಟೇಕೆ ರಾದ್ಧಾಂತ, ಪ್ರತಿಭಟನೆ ಮಾಡುತ್ತವೆ ಎಂದು ಗೊತ್ತಾಗುತ್ತದೆ. ಜೆ.ಡಿ (ಎಸ್) ಮೌನಕ್ಕೂ ಇದೇ ಕಾರಣ ಇರಬಹುದು. ಹೀಗೆ ಎಲ್ಲ ರಾಜಕೀಯ ಪಕ್ಷಗಳು ಬರೀ ರಾಜಕೀಯ ಮಾಡುತ್ತಿವೆ ಎಂದು ಅನಿಸಿದಾಗ ಮಾಧ್ಯಮ ಮತ್ತೆ ಮತ್ತೆ ಪ್ರಶ್ನೆ ಕೇಳುತ್ತದೆ.

ನಮ್ಮ ರಾಜಕೀಯ ನಾಯಕರ ಸಮಸ್ಯೆ ಏನು ಎಂದರೆ ಅವರು ಕ್ರಿಯಾಶೀಲರಾಗಿರುವ ಬದಲು ಪ್ರತಿಕ್ರಿಯಾಶೂರರು ಆಗಿರುವುದು. ಎದುರಿಗೆ ಬಂದ ಒಂದು ವಿದ್ಯಮಾನಕ್ಕೆ ಅವರು ಪ್ರತಿಕ್ರಿಯಿಸುತ್ತ ಹೋಗುತ್ತಾರೆ. ಕ್ರಿಯೆ ಮಾಡುವುದು ಕಷ್ಟ. ಪ್ರತಿಕ್ರಿಯೆ ಕೊಡುವುದು ಸುಲಭ. ಅವರು ಹೀಗೆ ಕೇವಲ ಪ್ರತಿಕ್ರಿಯಾಶೂರರು ಆಗಿರುವುದಕ್ಕೆ ನಾವು ಮಾಧ್ಯಮದವರೂ ಕಾರಣರಾಗಿರಬಹುದು. ನಮಗೂ ಸಿದ್ಧತೆ ಸಾಲದು. ಯಾರು ಎದುರಿಗೆ ಕಂಡರೂ ಅವರ ಮುಂದೆ ಮೈಕನ್ನೋ, ಪೆನ್ನನ್ನೋ ಹಿಡಿದು ಏನಾದರೂ ಕೇಳುವ ನಾವು ಕೇವಲ ಪ್ರತಿಕ್ರಿಯೆಗೆ ಮಾತ್ರ ಅರ್ಹರು ಎಂದು ರಾಜಕಾರಣಿಗಳಿಗೆ ತೋರುತ್ತಿರಬಹುದು. ಒಂದು ದಿನ ಒಬ್ಬ ರಾಜಕಾರಣಿ ಹತ್ತು ಕಡೆ ಹೋದರೆ ಹತ್ತು ಕಡೆಯೂ ಅವರಿಗೆ ಒಂದೇ ಪ್ರಶ್ನೆ ಎದುರಾಗುವುದರಿಂದ ಆತನಿಗೆ ಕಿರಿಕಿರಿ ಆಗುತ್ತ ಇರಬಹುದು. ನಿಮಗೆ ಬೇರೆ ಕೆಲಸ  ಇಲ್ಲವೇ' ಎಂದು ಆತ ಅದಕ್ಕೇ ಕೇಳುತ್ತ ಇರಬಹುದು.

ಆದರೆ, ಸಮಸ್ಯೆ ಇಷ್ಟು ಸುಲಭ ಇರುವಂತೆ ಕಾಣುವುದಿಲ್ಲ. ಆಡಳಿತದಲ್ಲಿ ಇರುವ ಎಲ್ಲರಿಗೂ ಮಾಧ್ಯಮ ಕಿರಿಕಿರಿ, ಕರೆಕರೆ ಎಂದು ಅನಿಸತೊಡಗುತ್ತದೆ. ಇದು ಬರೀ ನಮ್ಮ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಮಸ್ಯೆಯೇ? ಉತ್ತರ ಪ್ರದೇಶದ ಮುಖ್ಯಮಂತ್ರಿ ಅಖಿಲೇಶ್ ಸಿಂಗ್ ಯಾದವ್ ಅವರಿಗೂ ಹಾಗೆಯೇ ಅನಿಸಿತು. 'ನೀವು ಗೂಗಲ್ ಮಾಡಿ ನೋಡಿ ಬೆಂಗಳೂರಿನಲ್ಲಿ ಎಷ್ಟು ಅತ್ಯಾಚಾರ ಆಗಿವೆ ಎಂದು ನಿಮಗೆ ಗೊತ್ತಾಗುತ್ತದೆ, ಅದನ್ನೇಕೆ ಬರೆಯುವುದಿಲ್ಲ' ಎಂದು ಅವರು ಮಾಧ್ಯಮದವರನ್ನು ತರಾಟೆಗೆ ತೆಗೆದುಕೊಂಡಿದ್ದರು. ಆದರೆ, ಬೆಂಗಳೂರಿನಲ್ಲಿ ಅತ್ಯಾಚಾರ ಆಗುವುದು ಬದಾಯೂಂ ಅತ್ಯಾಚಾರಕ್ಕೆ ಉತ್ತರವೇ, ಪರಿಹಾರವೇ ಅಥವಾ ಸಮರ್ಥನೆಯೇ? ಅವರಿಗೆ ಹೇಗೆ ತಿಳಿಸಿಕೊಡುವುದು? ಅತ್ಯಾಚಾರ ಎಲ್ಲಿ ನಡೆದರೂ ಅದು ಅಸಹಾಯಕ ಹೆಣ್ಣು ಮಗಳ ಮೇಲೆಯೇ ನಡೆದಿರುತ್ತದೆ, ಅದು ಖಂಡನಾರ್ಹ ಎಂದೂ ಅವರಿಗೆ ಅನಿಸುವುದಿಲ್ಲ. ಅಂದರೆ, ಇದು ಮುಖ್ಯವಾಗಿ ಒಂದು ಮಾನವೀಯ ಸಮಸ್ಯೆ ಎಂದು ತೋರುವುದಿಲ್ಲ. ಆಡಳಿತದಲ್ಲಿ ಇರುವವರು ಮರೆಗಳನ್ನು ಹುಡುಕುವುದು ಹೀಗೆ, ಅವರಿಗೆ ತಮ್ಮ ವೈಫಲ್ಯ ಮುಚ್ಚಿಕೊಳ್ಳಲು ಇನ್ನೊಂದು ಕಡೆ ನಡೆದ ಅದೇ ಅಪರಾಧ ನೆಪವಾಗುತ್ತದೆ. ಅಥವಾ ಇದು ಅಧಿಕಾರದ ಉದ್ಧಟತನವೇ? ಅಥವಾ ಉಲಕೋಚಿತನವೇ?

ಅಧಿಕಾರಕ್ಕೆ ಬಂದವರು ಎಲ್ಲವನ್ನೂ ಸಂಭಾಳಿಸಲು ಕಲಿಯುತ್ತಾರೆ. ಅವರು ಮಾಧ್ಯಮವನ್ನೂ ಸಂಭಾಳಿಸಬಹುದು ಎಂದು ಅಂದುಕೊಳ್ಳುತ್ತಾರೆ. ಮಾಧ್ಯಮವನ್ನು ಮತ್ತು ಮಾಧ್ಯಮದವರನ್ನು ಹಂಗಿನಲ್ಲಿ ಸಿಲುಕಿಸಲೂ ಪ್ರಯತ್ನ ಮಾಡುತ್ತಾರೆ. ಅಧಿಕಾರದಲ್ಲಿ ಇದ್ದವರಿಗೆ ಮಾಧ್ಯಮ ತನ್ನ ಹಂಗಿನಲ್ಲಿ ಇದೆ ಎಂಬ ವಿಚಿತ್ರ ಅಹಂಕಾರ ಇರುತ್ತದೆ. ಸರ್ಕಾರದ ಹಂಗಿನಲ್ಲಿ ಸಿಲುಕಲು ಪತಂಗದಂತೆ ಹಾತೊರೆಯುವ ಹಲಕೆಲ ಮಾಧ್ಯಮದವರ ಗುಣವೂ ಆಡಳಿತದಲ್ಲಿ ಇದ್ದವರ ಅಹಂಕಾರಕ್ಕೆ ಪುಟ ಕೊಡುತ್ತಿರಬಹುದು.

ಆದರೆ, ತತ್ವವಾಗಿ ಇದು ಅಪವಾದವೇ ಹೊರತು ನಿಯಮವಲ್ಲ. 'ವಾಷಿಂಗ್ಟನ್ ಪೋಸ್ಟ್' ಪತ್ರಿಕೆಯ ಮಾಜಿ ಪ್ರಧಾನ ಸಂಪಾದಕ ಬೆನ್ ಬ್ರಾಡ್ಲಿ ಒಂದು ಮಾತು ಹೇಳಿದ್ದರು : 'ಮಾಧ್ಯಮ ಮತ್ತು ಸರ್ಕಾರದ ನಡುವಿನ ಸಂಬಂಧ ಸದಾ ಸಂಘರ್ಷದ್ದು ಆಗಿರದೇ ಇರಬಹುದು. ಆದರೆ, ಅದು ಖಂಡಿತ ಇರುಸುಮುರಿಸಿನದ್ದೇ ಆಗಿರುತ್ತದೆ. ಯಾವ ವರದಿಗಾರ್ತಿಯೂ ಸರ್ಕಾರದ ಜತೆಗಿನ ಸಂಬಂಧ ಮಧುರವಾಗಿರುತ್ತದೆ, ಹಾರ್ದಿಕವಾಗಿರುತ್ತದೆ ಎಂದು ಹೇಳಲಾರಳು. ಒಂದು ವೇಳೆ ಆಕೆ ಹಾಗೆ ಹೇಳಿದರೆ ಆಕೆ ಸುಳ್ಳು ಹೇಳುತ್ತಿದ್ದಾಳೆ ಎಂದೇ ಅರ್ಥ; ಅಥವಾ ಸರ್ಕಾರ ಆಕೆಯನ್ನು ಚೆನ್ನಾಗಿ ನೋಡಿಕೊಳ್ಳುತ್ತಿದೆ ಎಂದು ನಾವು ಭಾವಿಸಬಹುದು! ಸರ್ಕಾರ ನಮ್ಮನ್ನು ಚೆನ್ನಾಗಿ ನೋಡಿ-ಕೊಳ್ಳಬೇಕಿಲ್ಲ. ಅದು ನಮ್ಮ ದಾರಿಗೆ ಅಡ್ಡಬರದೇ ಇದ್ದರೆ ಸಾಕು.

ಸರ್ಕಾರ ನಮ್ಮ ದಾರಿಗೆ ಅಡ್ಡ ಬರಬಾರದು ಎಂದರೆ ನಮಗೆ ಪ್ರಶ್ನೆ ಕೇಳಲು ಅವಕಾಶ ಇರಬೇಕು. ನಾವು ಸರ್ಕಾರಕ್ಕೆ ನಿತ್ಯ ಅನನುಕೂಲಕಾರಿಯಾದ ಪ್ರಶ್ನೆಯನ್ನೇ ಕೇಳುವವರು. ಅವರು ಇಂಥ ಪ್ರಶ್ನೆಗಳನ್ನು ತಾಳ್ಮೆಯಿಂದ ಎದುರಿಸಲು ಕಲಿಯಬೇಕು. ಜಾಣ್ಮೆಯಿಂದ ಉತ್ತರ ಕೊಡಲು ರೂಢಿ ಮಾಡಿಕೊಳ್ಳಬೇಕು. ಅನಿರೀಕ್ಷಿತವಾಗಿ ಬರುವ ಪ್ರಶ್ನೆಗಳನ್ನು ಎದುರಿಸಲು ಅವರು ಇನ್ನೂ ಹೆಚ್ಚು ಮನೆಗೆಲಸ' ಮಾಡಬೇಕು. ಅದಕ್ಕಿಂತ ಶ್ರೇಷ್ಠವಾದ ಕೆಲಸ ಎಂದರೆ ನಮಗೆ ಪ್ರಶ್ನೆ ಕೇಳಲು ಅವಕಾಶವೇ ಇರದಂತೆ ಅವರು ಕೆಲಸ ಮಾಡಬೇಕು! ಅದನ್ನು ಬಿಟ್ಟು ಆಡಳಿತದಲ್ಲಿ ಇದ್ದವರು ಮಾಧ್ಯಮಗಳು ತಮ್ಮ ಪುಂಗಿ ಊದಬೇಕು ಎಂದು ಬಯಸುವುದು ಅವರ ಸ್ವಭಾವಕ್ಕೆ ಸಹಜವಾಗಿಯೇ ಇರಬಹುದು. ಆದರೆ, ಒಂದು ಸಾರಿ ಆಡಳಿತದ ಪುಂಗಿ ಊದಲು ಮಾಧ್ಯಮ ಶುರು ಮಾಡಿದರೆ ಅದು ತನ್ನ ಅಸ್ತಿತ್ವ ಕಳೆದುಕೊಳ್ಳುತ್ತದೆ. ಅದರ ಸುತ್ತ ಅನುಮಾನಗಳು ಹುತ್ತಕಟ್ಟುತ್ತವೆ. ಸರ್ಕಾರಕ್ಕೂ ಅದರಿಂದ ಒಳ್ಳೆಯದು ಆಗುವುದಿಲ್ಲ; ಜನರಿಗೆ ಮೊದಲೇ ಒಳ್ಳೆಯದು ಆಗುವುದಿಲ್ಲ. ಅಂದರೆ, ಹೋಗುವಾಗಲೂ, ಬರುವಾಗಲೂ ಕತ್ತರಿಸುವ ಗರಗಸದಂತೆಯೇ ಮಾಧ್ಯಮ ಕೆಲಸ ಮಾಡಬೇಕು. ಸರ್ಕಾರ ಮತ್ತು ಮಾಧ್ಯಮದ ನಡುವಿನ 'ಮಧುಚಂದ್ರ' ಎಂಬುದು ಯಾವಾಗಲೂ ಬಹಳ ಕಡಿಮೆ ಅವಧಿಯದು. ಅದು ಎಲ್ಲ 'ಮಧುಚಂದ್ರ'ಗಳಿಗೂ ಅನ್ವಯಿಸುವ ಮಾತು!

27.06.2014

# ಚೌಕಟ್ಟುಗಳನ್ನು ಒಡೆದರು

# ಮತು ವಿಸ್ತರಿಸಿದರು

ವ್ಯತ್ಯಾಸ ಸ್ಪಷ್ಟವಾಗಿತ್ತು. ಏಕೆಂದರೆ ಅದು ಭಿನ್ನವಾಗಿತ್ತು. ಅದು ಚಿಕ್ಕದಾಗಿತ್ತು. "ಚಿಕ್ಕದಾಗಿತ್ತು ಎಂಬ ಕಾರಣಕ್ಕಾಗಿಯೇ ಅಲ್ಲಿ ಸಂವಾದಕ್ಕೆ ಅವಕಾಶ ಇತ್ತು. ಕನ್ನಡದ ಬಹುಮುಖ್ಯ ಹಿರಿ-ಕಿರಿ ತಲೆಗಳೆಲ್ಲ ಅಲ್ಲಿ ಒಂದೇ ಕಡೆ ಸೇರಿದ್ದುವು. ಅವರ ಮಾತು, ನಡೆ ನುಡಿ, ಭಾವ ಭಂಗಿ, ಅದಕ್ಕಾಗಿ ಹಾತೊರೆಯುವ ತರುಣ ಪೀಳಿಗೆ... ಸಂಭ್ರಮ ಎಂದರೆ ಇನ್ನೇನು? ಕಳೆದ ವಾರ ಧಾರವಾಡದಲ್ಲಿ ನಡೆದ ಸಾಹಿತ್ಯ ಸಂಭ್ರಮ, ಕನ್ನಡದ ಇಂದಿನ ಸಂದರ್ಭದ ಅನೇಕ ಪ್ರಶ್ನೆಗಳಿಗೆ ಉತ್ತರಗಳ ಹುಡುಕಾಟ ಎನ್ನುವಂತೆ ಇತ್ತು.

ಎಲ್ಲ ಪ್ರಶ್ನೆಗಳಿಗೆ ಒಮ್ಮೆಲೇ ಉತ್ತರಗಳು ಸಿಕ್ಕು ಬಿಡುವುದಿಲ್ಲ. ಒಮ್ಮೊಮ್ಮೆ ಉತ್ತರ ಹುಡುಕಲು ನಮಗೆ ವ್ಯವಧಾನವೂ ಇರುವುದಿಲ್ಲ. ಹೀಗೆ ಅನೇಕ ಹಿರಿಯ ಮತ್ತು ಕಿರಿಯ ತಲೆಗಳು ಒಂದು ಕಡೆ ಕೂಡುವುದೇ ಒಂದು ದೊಡ್ಡ ಸಮಸ್ಯೆ ಎನ್ನುವಂಥ ಕಾಲ ಇದು. ಅನಂತಮೂರ್ತಿ ಮತ್ತು ಭೈರಪ್ಪ ಕೈ ಕುಲುಕುವಾಗ ತೆಗೆದ ಛಾಯಾಚಿತ್ರ, ಈ ಶತಮಾನದ ಚಿತ್ರ ಎಂದು ಅನೇಕ ಗೆಳೆಯರು ನನಗೆ ಬಣ್ಣಿಸಿದರು. ಹಾಗೆಂದು ಮೂರ್ತಿ ಮತ್ತು ಭೈರಪ್ಪ ವೈರಿಗಳೇ? ಖಂಡಿತ ಅಲ್ಲ. ಆದರೆ, ಅವರು ಒಂದು ಕಡೆ ಕೂಡುವುದೇ ಇಲ್ಲಿ ಸಂವಾದ ಸಾಧ್ಯವಿದೆ ಎಂಬುದರ ಸಂಕೇತ.

ಅಂಥ ಅನೇಕ ವಿರುದ್ಧ ಧ್ರುವಗಳನ್ನು ಗಿರಡ್ಡಿ ಗೋವಿಂದರಾಜ ಮತ್ತು ಅವರ ಗೆಳೆಯರು ಕಳೆದ ವಾರ ನಡೆದ ಧಾರವಾಡ ಸಾಹಿತ್ಯ ಸಂಭ್ರಮದಲ್ಲಿ ಒಂದು ಕಡೆ ಕೂಡಿಸುವ ಕೆಲಸಮಾಡಿದರು. ಇನ್ನು ಕೆಲವರು ಹೊರಗೆ ಉಳಿದಿರಬಹುದು. ಅವರಿಗೆ ಅನುಮಾನಗಳೂ ಇರಬಹುದು. ಅದೆಲ್ಲ ಮುಂದಿನ ದಿನಗಳಲ್ಲಿ ತಿಳಿಯಾಗಬಹುದು. ಅಥವಾ ಆಗದೆ ಇರಬಹುದು. ಎಲ್ಲಿಯ ವರೆಗೆ ಅಲ್ಲಿ ಚರ್ಚೆಗೆ ಅವಕಾಶ ಇರುತ್ತದೆಯೋ ಅಲ್ಲಿಯ ವರೆಗೆ ಯಾವ ವೇದಿಕೆಯನ್ನೂ ಯಾರೂ ಬಹಿಷ್ಕರಿಸಬಾರದು ಎನ್ನುವವ ನಾನು. ಪರಿಷತ್ತನ್ನು ಬಹಿಷ್ಕರಿಸಿದವರು ಮತ್ತೆ ಅದರ ವೇದಿಕೆ ಮೇಲೆ ಬಂದುದನ್ನು ನೋಡಿ ಈ ಮಾತು ಹೇಳುತ್ತಿರುವೆ.

ಈ ಸಾರಿಯ ಧಾರವಾಡ ಸಾಹಿತ್ಯ ಸಂಭ್ರಮವೂ ಕಳೆದ ಸಾರಿಯ ಮಾದರಿಯಲ್ಲಿಯೇ ಇತ್ತು. ಗೋಷ್ಠಿಗಳ ಸ್ವರೂಪದಲ್ಲಿಯೂ ಬದಲಾವಣೆ ಇರಲಿಲ್ಲ. ಆದರೆ, ಅಲ್ಲಿ ವಿಷಯ ವೈವಿಧ್ಯವಿತ್ತು. ಅವುಗಳನ್ನು ರೂಪಿಸುವಲ್ಲಿ ಶ್ರಮ ಕಾಣುತ್ತಿತ್ತು, ಚಿಂತನಶೀಲತೆ ಕಾಣುತ್ತಿತ್ತು. ಒಂದೆರಡು ಗೋಷ್ಠಿ ಬಿಟ್ಟರೆ ಸಮಯದ ಪರಿಪಾಲನೆ ಕಟ್ಟು ನಿಟ್ಟು ಎನ್ನುವಂತೆ ಇತ್ತು. ಇದೆಲ್ಲ ಮಾಡುವುದು ಸುಲಭವಲ್ಲ. ಮೂರು ತಿಂಗಳಿಂದ ಧಾರವಾಡದ ಗೆಳೆಯರೆಲ್ಲ ಒಂದು ಕಡೆ ಕುಳಿತು ಯೋಚಿಸಿ, ಚಿಂತಿಸಿ 'ಸಂಭ್ರಮ'ವನ್ನು ರೂಪಿಸಿದ್ದರು.

1970ರ ದಶಕದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ಮುಖ್ಯಸ್ಥರಾಗಿ ಜಿ.ಎಸ್. ಶಿವರುದ್ರಪ್ಪನವರು ಇದ್ದಾಗ ನಡೆದ ವಿಚಾರ ಸಂಕಿರಣಗಳನ್ನು ಬಿಟ್ಟರೆ ಮತ್ತೆ ಅಂಥ ಗೋಷ್ಠಿಗಳು ನಡೆಯಬೇಕಾದರೆ ನಲವತ್ತು ವರ್ಷಗಳೇ ಬೇಕಾಯಿತು. ಜಿಎಸ್ಎಸ್ ಅವರು ಬಹುತೇಕ ಸಾಹಿತ್ಯ ಕೇಂದ್ರಿತವಾಗಿ ವಿಚಾರ ಸಂಕಿರಣಗಳನ್ನು ನಡೆಸಿದ್ದರು. ಆದರೆ, ಧಾರವಾಡ ಸಾಹಿತ್ಯ ಸಂಭ್ರಮ ಅದನ್ನೂ ದಾಟಿ ಒಂದು ಹೆಜ್ಜೆ ಮುಂದೆ ಹೋಗಿ ಅಭಿವ್ಯಕ್ತಿ ಸ್ವಾತಂತ್ರ್ಯದ ಬಿಕ್ಕಟ್ಟುಗಳಂಥ ಗೋಷ್ಠಿಗಳನ್ನೂ ಏರ್ಪಡಿಸಿತು. ಕಾಲ ಕಾಲಕ್ಕೆ ತಕ್ಕಂತೆ ಬದಲಾವಣೆಗಳು ಆಗುವುದು ಸಹಜ. ಆಗಬೇಕಾದುದು ಅಗತ್ಯ ಕೂಡ.

ತಾಜಾ ಆಗಿರುವುದೆಲ್ಲ ಚೆನ್ನಾಗಿ ಇರುತ್ತದೆ. ಏಕೆಂದರೆ ಅದು ತಾಜಾ ಆಗಿರುತ್ತದೆ. ಧಾರವಾಡ ಸಾಹಿತ್ಯ ಸಂಭ್ರಮ ಅಂಥ ಒಂದು ತಾಜಾ ಪರಿಕಲ್ಪನೆ. ಗಿರಡ್ಡಿಯವರು ಮತ್ತು ಅವರ ಗೆಳೆಯರು ಜೈಪುರ ಸಾಹಿತ್ಯ ಉತ್ಸವದ ಮಾದರಿಯಲ್ಲಿ ಇದನ್ನು ರೂಪಿಸಿದ್ದಾರೆ ಎಂದುಕೊಂಡರೂ ಅದಕ್ಕೂ ಇದಕ್ಕೂ ಅರ್ಥಾತ್ ಸಂಬಂಧವೇ ಇಲ್ಲ. ಅದು ಒಂದು ರೀತಿಯಲ್ಲಿ ಕಾರ್ಪೋರೇಟ್ ಮಾದರಿಯ ಸಾಹಿತ್ಯ ಸಂತೆ. ಅದು ನಮ್ಮ ನೆಲದ ಸಂವೇದನೆಗಳಿಗೆ ಎಷ್ಟು ಹತ್ತಿರ ಅಥವಾ ಎಷ್ಟು ದೂರ ಎಂದು ಹೇಳುವುದು ಕಷ್ಟ. ಧಾರವಾಡ ಸಾಹಿತ್ಯ ಸಂಭ್ರಮದ ಮಾದರಿಯಲ್ಲಿ ಬೇರೆ ಎಲ್ಲಿಯಾದರೂ ಇಂಥ ಉತ್ಸವಗಳು ನಡೆಯುತ್ತವೆಯೋ ಇಲ್ಲವೋ ನಾನು ಕಾಣೆ, ಗಿರಡ್ಡಿಯವರಿಗೂ ಗೊತ್ತಿದ್ದಂತೆ ಇರಲಿಲ್ಲ. ಈ ಸಂಭ್ರಮದ ಮಾದರಿ ಎಷ್ಟು ಉಜ್ವಲವಾಗಿದೆ ಮತ್ತು ಸ್ವೋಪಜ್ಞವಾಗಿದೆ ಎಂದರೆ ಯಾರಾದರೂ ಅದನ್ನು ತದ್ವತ್ತಾಗಿ ಎತ್ತಿಕೊಂಡು ಹೋಗಿ ಅನುಸರಿಸುವಂತೆ ಇದೆ. ಮುಂದಿನ ಸಂಭ್ರಮಗಳಲ್ಲಿ ಪರಭಾಷೆಯ ಲೇಖಕರನ್ನು ಒಳಗೊಳ್ಳುವುದು ಸಾಧ್ಯವಾದರೆ ಧಾರವಾಡದ ಮಾದರಿಯ ವಿಸ್ತರಣೆಗೆ ಬಾಗಿಲುಗಳೂ ತೆರೆದುಕೊಳ್ಳಬಹುದು.

ಸಂಭ್ರಮದ ಯಶಸ್ಸು ಅನೇಕ ಪ್ರಶ್ನೆಗಳನ್ನೂ ನಾಡಿನ ಮುಂದೆ ಎಸೆದಿದೆ. ಅಲ್ಲಿ ಒಂದಿಪ್ಪತ್ತು ಲಕ್ಷ ರೂಪಾಯಿ ಖರ್ಚಾಗಿದೆ. ಆದರೆ, ಇಪ್ಪತ್ತು ಲಕ್ಷ ಕೊಡುತ್ತೇವೆ ಎಂದರೆ ಯಾರಾದರೂ ಇಂಥ ಒಂದು ಕಾರ್ಯಕ್ರಮ ರೂಪಿಸಲು ಸಾಧ್ಯವಿದೆಯೇ? ನಮ್ಮ ರಾಜ್ಯದಲ್ಲಿ ಎಷ್ಟು ವಿಶ್ವವಿದ್ಯಾಲಯಗಳು ಇಲ್ಲ? ಎಷ್ಟೆಲ್ಲ ಕನ್ನಡ ವಿಭಾಗಗಳು ಇಲ್ಲ? ಅವರಿಗೆ ಇದೇ ಮಾದರಿಯಲ್ಲಿ ಅಥವಾ ಅದಕ್ಕೂ ಭಿನ್ನ ರೀತಿಯಲ್ಲಿ ಚರ್ಚೆ, ಸಂವಾದ, ಸಂಕಿರಣ ಏರ್ಪಡಿಸಲು ಏಕೆ ಆಗುವುದಿಲ್ಲ. ಸಾಹಿತ್ಯ ಪರಿಷತ್ತಿನ ಗೋಷ್ಠಿಗಳು ಏಕೆ ಪೇಲವ ಅನಿಸುತ್ತವೆ? ಅಕಾಡೆಮಿಗಳನ್ನು ಹಿಂದಿನ ಮತ್ತು ಈಗಿನ ಸರ್ಕಾರಗಳು ಮರೆತೇ ಬಿಟ್ಟಿರುವುದರಿಂದ ಅಲ್ಲಿ ಇಂಥದನ್ನೆಲ್ಲ ನಿರೀಕ್ಷಿಸುವುದೇ ಸಾಧ್ಯವಿಲ್ಲ. ಅಕಾಡೆಮಿಗಳು ಅಸ್ತಿತ್ವಕ್ಕೆ

ಬಂದರೂ ಎಲ್ಲ ವಿಚಾರ ಸಂಕಿರಣಗಳ ಉದ್ಘಾಟನೆಗೆ ಮತ್ತು ಸಮಾರೋಪಕ್ಕೆ ಎದೆ ಸೀಳಿದರೆ ಮೂರು ಅಕ್ಷರಗಳು ಇಲ್ಲದ ಮಂತ್ರಿಗಳು ಮತ್ತು ಶಾಸಕರು ಬರಲೇಬೇಕಾಗಿರುವುದರಿಂದ ನೈಜ ಆಸಕ್ತರು ಅಂಥ ಗೋಷ್ಠಿಗಳಿಂದ ಬಹುದೂರ ಓಡಿ ಹೋಗುತ್ತಾರೆ. ಸಾಹಿತ್ಯ ಪರಿಷತ್ತಿಗೂ ಅದೇ ಸಮಸ್ಯೆ. ಕೋಟಿಗಟ್ಟಲೆ ಖರ್ಚು ಮಾಡಿ ನಡೆಸುವ ಸಾಹಿತ್ಯ ಸಮ್ಮೇಳನಗಳಿಗೆ ಸಾವಿರಗಟ್ಟಲೆ ಜನರು ಬರುತ್ತಾರೆ. ಆದರೆ, ಅಲ್ಲಿ ನಡೆಯುವ ಚರ್ಚೆ, ಗೋಷ್ಠಿಗಳ ಮಟ್ಟ ದಿನದಿಂದ ದಿನಕ್ಕೆ ಕಳಪೆ ಆಗುತ್ತಿದೆ; ಅವು ಏಕಮುಖ ಅನಿಸುತ್ತಿವೆ. ಏಕೆಂದರೆ ಪರಿಷತ್ತಿನ ಪದಾಧಿಕಾರಿಗಳು, ಸ್ಥಳೀಯ ಸಂಘಟಕರು ನೂರೆಂಟು ಜನರನ್ನು ಸಮಾಧಾನ ಮಾಡಬೇಕು. ಭಿಡೆಯಲ್ಲಿ ಸಿಲುಕಿದ ಸಾಹಿತ್ಯದ ಸಮಸ್ಯೆ ಅದು.

ವಿಶ್ವವಿದ್ಯಾಲಯಗಳ ಸಮಸ್ಯೆ ಇನ್ನೊಂದು ಬಗೆಯದು. ತಲೆಮಾರುಗಳು ಗತಿಸಿದಂತೆ ಅಲ್ಲಿ ವಿದ್ವತ್ತಿಗೆ ಮಂಕು ಕವಿಯುತ್ತಿದೆ. ಪ್ರತಿಭೆ ಕಡಿಮೆ ಆಗುತ್ತಿದೆ. ಸಂಬಳ ಸವಲತ್ತುಗಳು ಹೆಚ್ಚಿದಂತೆ ಕೋಳಿ ಜಗಳಗಳೂ ಹೆಚ್ಚುತ್ತಿವೆ; 'ಹೊತ್ತುಕೊಂಡು ಮಾಡಬೇಕು ಎನ್ನುವವರ ಸಂಖ್ಯೆ ಕಡಿಮೆ ಆಗುತ್ತಿದೆ. ಇದೆಲ್ಲದರ ನಡುವೆ ಅವರಿಗೆ ಸೃಜನಶೀಲರಾಗಲು ವ್ಯವಧಾನವೇ ಸಿಗುತ್ತಿಲ್ಲ. ನಾನು ಹೀಗೆಲ್ಲ ಬರೆಯುವುದು 'ಜಾತೀಯ'ವಾಗಿ ಕಾಣಬಹುದು ಎಂಬ ಅಳುಕು ಕೂಡ ನನಗೆ ಇದೆ. ಆದರೆ, ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳು ಸೊರಗುತ್ತಿವೆ ಎಂಬುದರಲ್ಲಿ ಈಗ ಅನುಮಾನವೇನೂ ಉಳಿದಂತೆ ಕಾಣುವುದಿಲ್ಲ. ಧಾರವಾಡದ ಸಾಹಿತ್ಯ ಸಂಭ್ರಮದ ಸಭಾಂಗಣಕ್ಕೆ ಪ್ರವೇಶ ಸಿಗದೇ ಹೊರಗೆ ಕಾದು ಕುಳಿತಿದ್ದ ಅನೇಕ ಹುಡುಗರು, ಹುಡುಗಿಯರನ್ನು ನಾನು ಮಾತನಾಡಿಸಿದೆ. ಅವರಿಗೆ ಆಸಕ್ತಿಯ ಕೊರತೆಯೇನೂ ಇದ್ದಂತೆ ಅನಿಸಲಿಲ್ಲ. ಸಭಾಂಗಣದ ಹಿಂದಿನ ಅರ್ಧ ಭಾಗದಲ್ಲಿ ಕೂಡ ಪ್ರವೇಶ ಗಿಟ್ಟಿಸಿದ ತರುಣ ತರುಣಿಯರೇ ತುಂಬಿಕೊಂಡಿದ್ದರು. ಹಾಗಾದರೆ, ಅವರು ಹಸಿದಿದ್ದಾರೆ. ಆದರೆ, ಅವರಿಗೆ ಏನು ಕೊಡಬೇಕು ಎಂದು ನಮಗೆ ಗೊತ್ತಾಗುತ್ತಿಲ್ಲ ಎಂದು ಅನಿಸುತ್ತದೆ. ಸಾಹಿತ್ಯ ಪರಿಷತ್ತಿನ ಸಮ್ಮೇಳನಗಳಲ್ಲಿ, ವಿಶ್ವವಿದ್ಯಾಲಯಗಳ ಕೊಠಡಿಗಳಲ್ಲಿ ಸಿಗದೇ ಇರುವುದನ್ನು ಅವರು ಇಲ್ಲಿ ಹುಡುಕುತ್ತಿರಬಹುದೇ? ಹೌದು ಎಂದು ಅನಿಸುತ್ತದೆ.

ಹೊಸ ಆಲೋಚನೆಗಳು ಬೇಗ ಹಳತಾಗಿ ಬಿಡುವ ಕಾಲ ಇದು. ಧಾರವಾಡ ಸಾಹಿತ್ಯ ಸಂಭ್ರಮಕ್ಕೂ ಅಂಥ ಒಂದು ಅಳುಕು ಇದ್ದಂತೆ ಕಾಣುತ್ತದೆ. ಪ್ರತಿ ವರ್ಷ ಇಷ್ಟೆಲ್ಲ ಜನ ಹಿರಿಯ ಲೇಖಕರು, ಚಿಂತಕರನ್ನು ಒಂದು ಕಡೆ ಸೇರಿಸುವುದು ಕಷ್ಟ, ಹೊಸ ಹೊಸ ವಿಷಯಗಳನ್ನು ಹುಡುಕಿ ಗೋಷ್ಠಿಗಳನ್ನು ರೂಪಿಸುವುದು ಇನ್ನೂ ಕಷ್ಟ. ಕೆಲವು ವರ್ಷಗಳು ಕಳೆದ ನಂತರ ಅದೇ ಲೇಖಕರು, ಅದೇ ವಿಚಾರ ಎಂದು ಅನಿಸತೊಡಗುವ ಭಯ ಕೂಡ ಇರುತ್ತದೆ. ಮೊದಲ ಅಥವಾ ಎರಡನೇ ತಲೆಮಾರನ್ನು ಬಿಟ್ಟು ಹೊಸಬರನ್ನು ತಂದ ಕೂಡಲೇ ಅದು ಎಳಸು ಎಂದು ತೋರಿಬಿಡುವ ಸಂಭವವೂ ಇರುತ್ತದೆ. ಜತೆಗೆ ಧಾರವಾಡದಲ್ಲಿಯೇ ಈ ಸಂಭ್ರಮವನ್ನು ಮಾಡಬೇಕೇ? ಪ್ರತಿವರ್ಷ ಇದನ್ನು ಮಾಡಬೇಕೇ? ಸರ್ಕಾರದ ನೆರವನ್ನು ತೆಗೆದುಕೊಳ್ಳಬೇಕೇ? ಅಥವಾ ಖಾಸಗಿಯವರ ನೆರವಿಗೆ ಮೊರೆ ಹೋಗಬೇಕೇ? ಇಂಥ ಪ್ರಶ್ನೆಗಳೂ ಈ ಸಾರಿಯ ಸಂಭ್ರಮದಲ್ಲಿ ಆಗೀಗ ಕೇಳಿ ಬಂದುವು.

ಕಾಲವೇ ಇಂಥ ಪ್ರಶ್ನೆಗಳಿಗೆಲ್ಲ ಉತ್ತರಗಳನ್ನು ಕಂಡುಕೊಳ್ಳುತ್ತದೆ. ಸಂಭ್ರಮವನ್ನು ರೂಪಿಸುವ ಕಣವಿಯವರು, ಕಲ್ಬುರ್ಗಿಯವರು, ಗಿರಡ್ಡಿಯವರು, ರಮಾಕಾಂತ ಮತ್ತು ಸಮೀರ ಜೋಶಿಯವರು ಮತ್ತು ಕಾಖಂಡಕಿಯವರು ಉತ್ತರಗಳನ್ನು. ಹುಡುಕಲು ಸಮರ್ಥರಾಗಿದ್ದಾರೆ. ಅದನ್ನು ಅವರಿಗೆ ಬಿಟ್ಟು ಬಿಡಬೇಕು ಎಂದು ಅನಿಸುತ್ತದೆ.

ಏಕೆಂದರೆ ನನ್ನ ಮುಂದೆ ಮತ್ತೊಂದು ಪ್ರಶ್ನೆ ಇದೆ. ಮೂರು ದಿನಗಳ ಉತ್ಸವದಲ್ಲಿ ನಾನು ಯಾವ ಗೋಷ್ಠಿಯನ್ನೂ ತಪ್ಪಿಸಿಕೊಳ್ಳಲಿಲ್ಲ. ಒಂದು ಗೋಷ್ಠಿಯನ್ನು ಮುಗಿಸಿಕೊಂಡು ಹೊರಗೆ ಹೋಗಿ ಒಳಗೆ ಬರುವ ವರೆಗೆ ನಮ್ಮ ನಮ್ಮ ಸೀಟುಗಳನ್ನು ಕಾದಿರಿಸಿಕೊಳ್ಳಲು ನಮ್ಮ ನಮ್ಮ ಒಳಗೇ ನಡೆಯುತ್ತಿದ್ದ ಪೈಪೋಟಿ, ಮೂರು ನಾಲ್ಕು ಸೀಟುಗಳಿಗೆ ಶಾಲು, ಚೀಲ ಹಾಕಿ ಕಾದಿರಿಸುತ್ತಿದ್ದ ಬಗೆಯನ್ನು ನೋಡಿದಾಗಲೆಲ್ಲ, ನಮಗೆ ಸಾಹಿತ್ಯ ಬೇಕೇ? ಬೇಕಾದರೆ ಏಕೆ ಬೇಕು ಎಂಬ ಪ್ರಶ್ನೆ ಮನಸ್ಸಿನ ಮುಂದೆ ಮತ್ತೆ ಮತ್ತೆ ಹಾದು ಹೋಯಿತು. ಎಂ.ಎಚ್.ಕೃಷ್ಣಯ್ಯನವರು ತಮ್ಮ ಗೋಷ್ಠಿಯಲ್ಲಿ ಒಂದು ಮಾತು ಹೇಳಿದರು; 'ನಾವೆಲ್ಲ ಅಪೂರ್ಣರು. ಅದಕ್ಕೆ ನಮಗೆ ಸಾಹಿತ್ಯ ಬೇಕು' ಎಂದು. ಸಾಹಿತ್ಯ, ಸಂಗೀತ, ಚಿತ್ರಕಲೆಯಂಥ ಲಲಿತ ಕಲೆಗಳು ನಮ್ಮ ಒಳಗಿನ ಕೊರತೆಯನ್ನು ತುಂಬುತ್ತವೆ, ನೀಗಿಸುತ್ತವೆ. ಮತ್ತು ನಮ್ಮನ್ನು ಪರಿಪೂರ್ಣ ಮನುಷ್ಯರನ್ನಾಗಿ ಮಾಡಲು ಕಾರಣವಾಗುತ್ತವೆ. ಅಥವಾ ಕೊನೆಯ ಪಕ್ಷ ನಮ್ಮ ಮನಸ್ಸನ್ನು ಮೃದುಗೊಳಿಸುವ ಪ್ರಯತ್ನವನ್ನಾದರೂ ಮಾಡುತ್ತವೆ... ಬೇಂದ್ರೆ ಮತ್ತು ಕುವೆಂಪು ಕವಿತೆಗಳ ವಾಚನಗೋಷ್ಠಿಯಲ್ಲಿ ಇನ್ನೊಂದು ವಿಸ್ಮಯ ನಡೆಯಿತು. ಪುಟ್ಟ ಮಗುವಿನಂಥ ಹೆಣ್ಣು ಮಗಳು ತಮಿಳು ಸೆಲ್ವಿ, ಕುವೆಂಪು ಅವರ ಆರು ಪಟಗಳ, 137 ಸುದೀರ್ಘ ಸಾಲುಗಳ 'ಕಲ್ಕಿ' ಕವಿತೆಯನ್ನು ಯಾವ ನೆರವೂ ಇಲ್ಲದೆ ಬಾಯಿಪಾಠ ವಾಚಿಸುತ್ತಿದ್ದಂತೆ ಸಭಿಕರ ಕಣ್ಣಾಲಿಗಳು ತಂತಾನೇ ಒದ್ದೆಯಾಗಿದ್ದುವು. ಸಾಹಿತ್ಯವನ್ನು ಹೀಗಲ್ಲದೆ ಅಂತರಂಗಕ್ಕೆ ತೆಗೆದುಕೊಂಡ ಇನ್ನೊಂದು ಬಗೆಯನ್ನು ನಾನು ಕಾಣೆ. ಅದು ಬಹಿರಂಗಕ್ಕೆ ಮಾಡಿದ ಪ್ರಭಾವವನ್ನೂ ಕಾಣೆ... ಸಾಹಿತ್ಯ ಏಕೆ ಬೇಕು ಎಂಬುದಕ್ಕೆ ಕೃಷ್ಣಯ್ಯ ಉತ್ತರ ಕೊಟ್ಟರು. ಸಾಹಿತ್ಯದ ಜತೆಗೆ ಧಾರವಾಡದ ಸಾಹಿತ್ಯ ಸಂಭ್ರಮವೂ ಏಕೆ ಬೇಕು ಎಂಬುದಕ್ಕೆ ಸೆಲ್ವಿ ಉತ್ತರ ಕೊಟ್ಟರು. ಉತ್ತರಗಳ ಹುಡುಕಾಟ ಎಂದರೆ ಇದೇ ಅಲ್ಲವೇ?

26.01.2014

# ಹಂಗಿನರಮನೆಯ ಗುಂಗಿನಿಂದ ಪರಿಷತ್ತು

# ಹೊರಗೆ ಬರುವುದು ಯಾವಾಗ?

ಇದೆಲ್ಲ ಹೇಗೆ ಶುರುವಾಗುತ್ತದೆ? ಕೀಳರಿಮೆಯಿಂದ ಶುರುವಾಗುತ್ತದೆಯೇ? ಮೇಲರಿಮೆಯಿಂದ ಆಗುತ್ತದೆಯೇ? ಅಕ್ಷರ ಲೋಕದವರಿಗೆ ರಾಜಕಾರಣಿಗಳನ್ನು ಕಂಡರೆ ಅಷ್ಟಕ್ಕಷ್ಟೆ, ರಾಜಕಾರಣಿಗಳಿಗೂ ಅಕ್ಷರ ಲೋಕದವರ ಬಗ್ಗೆ ಅಮರ ಪ್ರೇಮವೇನೂ ಇಲ್ಲ! ಆದರೂ ಪರಸ್ಪರರ ಹೆಗಲ ಮೇಲೆ ಕೈ ಹಾಕಿಕೊಂಡು ಇರಬೇಕು ಎಂದು ಏಕೆ ಬಯಸುತ್ತಾರೆ? ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಪುಂಡಲೀಕ ಹಾಲಂಬಿ ಅವರಿಗೆ ದೇವರು ದೊಡ್ಡ ಗಂಟಲು ಕೊಟ್ಟಿದ್ದಾನೆ. ಅವರು ಇಡೀ ಕನ್ನಡ ನಾಡಿಗೆ ಕೇಳುವಂತೆ ಮಾತನಾಡುತ್ತಾರೆ.

ಕಳೆದ ಭಾನುವಾರ ಅವರು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ರಾಜಕಾರಣಿಗಳನ್ನು ತರಾಟೆಗೆ ತೆಗೆದುಕೊಳ್ಳುವುದನ್ನೇ ಸಭೆಯಲ್ಲಿ ಇದ್ದ ಎಲ್ಲರೂ ಕಾಯುತ್ತ ಇದ್ದಂತೆ ಇತ್ತು. ಧಿಕ್ಕಾರದ ಘೋಷಣೆಗಳು ಮೊಳಗಿಯೇ ಬಿಟ್ಟುವು. ಆದರೆ, ಏಕೆ? ಮುಖ್ಯಮಂತ್ರಿ ಮತ್ತು ಅವರ ಸಂಪುಟದ ಸದಸ್ಯರು ಸಾಹಿತ್ಯ ಪರಿಷತ್ತಿನ ಎಲ್ಲ ಕಾರ್ಯಕ್ರಮಗಳಿಗೆ ಏಕೆ ಬರಬೇಕು? ಸಿದ್ದರಾಮಯ್ಯ ಸಂಪುಟದಲ್ಲಿ ಇರುವ ಒಬ್ಬಿಬ್ಬರನ್ನು ಬಿಟ್ಟರೆ ಸಾಹಿತ್ಯ ಪರಿಷತ್ತಿನಲ್ಲಿ ಬಂದು ಯಾವ ಸಚಿವರು ಏನು ಮಾತನಾಡಲು ಸಾಧ್ಯ? ಅವರಲ್ಲಿ ಎಷ್ಟು ಮಂದಿ ಪುಸ್ತಕಗಳನ್ನು ಓದಿದ್ದಾರೆ? ಓದುತ್ತಾರೆ?

ಸಾಹಿತ್ಯ, ಹಂಗಿನ 'ಅರಮನೆ'ಯನ್ನು ಬಿಟ್ಟು ಬಂದು ಶತಮಾನಗಳೇ ಆಗಿವೆ. ಈಗಲೂ ರಾಜಕಾರಣಿಗಳು ತಮ್ಮ ಜತೆ ವೇದಿಕೆ ಹಂಚಿಕೊಳ್ಳಬೇಕು ಎಂದು ಸಾಹಿತಿಗಳು ಏಕೆ ಬಯಸುತ್ತಾರೆ? ಅವರೇ ಬಂದು ಪ್ರಶಸ್ತಿಗಳನ್ನು ಏಕೆ ಕೊಡಬೇಕು? ವಿಚಾರಗೋಷ್ಠಿಗಳನ್ನು ಏಕೆ ಉದ್ಘಾಟಿಸಬೇಕು? ಹಾಗೆ ನೋಡಿದರೆ ಸರ್ಕಾರ ಸಾಹಿತ್ಯ ಪರಿಷತ್ತಿಗೆ ಉದಾರ ದೇಣಿಗೆ ಕೊಡುತ್ತಲಿರುವುದು ತೀರಾ ಈಚಿನ ಹತ್ತು ಹನ್ನೆರಡು ವರ್ಷಗಳ ವಿದ್ಯಮಾನ. ಅದುವರೆಗೆ ಅದು ತನ್ನ ಶಕ್ತಿಯ ಮೇಲೆ, ಸರ್ಕಾರ ಕೊಡುವ ಅಲ್ಪಸ್ವಲ್ಪ ಅನುದಾನದ ಮೇಲೆ ಹೇಗೋ ನಡೆದುಕೊಂಡು ಬಂದಿತ್ತು. ಹಾಗೆ ನೋಡಿದರೆ ಆಗಲೇ ಅದು ಸಾಹಿತ್ಯಕವಾಗಿ ಹೆಚ್ಚು ಕ್ರಿಯಾಶೀಲವಾಗಿತ್ತು. ಉಳಿಯುವ ಕೆಲಸಗಳೂ ಆಗಲೇ ನಡೆದುವು. ಆದರೆ, ಒಂದು ಸಾರಿ ಕೋಟಿಗಟ್ಟಲೆ ಅನುದಾನ ಬರಲು ಆರಂಭಿಸುತ್ತಿದ್ದಂತೆಯೇ ಪರಿಷತ್ತು ಪೈಪೋಟಿಯ ಕೇಂದ್ರ ಬಿಂದುವಾಯಿತು. ವರ್ಷಕ್ಕೆ ಒಮ್ಮೆ ಸಾಹಿತ್ಯ ಸಮ್ಮೇಳನ ನಡೆಸುವುದನ್ನು ಬಿಟ್ಟು ಪರಿಷತ್ತಿನಿಂದ ಮತ್ತೆ ಏನು ಕೆಲಸವಾಗಿದೆ?

ನಿಜ, ಈಗ ಕನ್ನಡದ ಕೆಲಸ ಬಹುಮುಖವಾಗಿ ನಡೆದಿದೆ. ಅಕಾಡೆಮಿಗಳು ಇವೆ. ಕನ್ನಡ ವಿಶ್ವವಿದ್ಯಾಲಯ ಇದೆ. ರಾಜ್ಯದ ಉದ್ದಗಲಕ್ಕೂ ಇರುವ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳು ಇವೆ. ಎಲ್ಲರೂ ತಮಗೆ ತೋಚಿದ, ಸರಿಕಂಡ ರೀತಿಯಲ್ಲಿ ಕನ್ನಡದ ಕೆಲಸ ಮಾಡುತ್ತಿದ್ದಾರೆ. ಅದರಲ್ಲಿ ಕೆಲವು ಸಾರಿ ಪುನರಾವರ್ತನೆಯೂ ಕಂಡು ಬರುತ್ತಿದೆ. ಖಾಸಗಿ ವಲಯದಲ್ಲಿ ಪುಸ್ತಕ ಪ್ರಕಾಶನವೂ ಹಲವು ಮಡಿ ಹೆಚ್ಚಳ ಕಂಡಿದೆ. ಇದರ ಮಧ್ಯೆ ಪರಿಷತ್ತು ಕನ್ನಡದ ಕೆಲಸ ಮಾಡಬೇಕಿದೆ. ಕನ್ನಡದ ಯಾವ ಸಂಸ್ಥೆಗಳಿಗೂ ಇಲ್ಲದ ಪ್ರಾತಿನಿಧಿಕ ಸ್ವರೂಪ ಸಾಹಿತ್ಯ ಪರಿಷತ್ತಿಗೆ ಮಾತ್ರ ಇದೆ. ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಗುಡುಗಿದರೆ ಯಾರೂ ಕಾಳಜಿ ಮಾಡುವುದಿಲ್ಲ. ಪರಿಷತ್ತಿನ ಅಧ್ಯಕ್ಷರು ಗುಡುಗಿದ ಕೂಡಲೇ ಸರ್ಕಾರ ಹಣ ಬಿಡುಗಡೆ ಮಾಡಿರುವ ಪ್ರಕಟಣೆಯನ್ನು ಪತ್ರಿಕೆಗಳಿಗೆ ಕಳುಹಿಸಿಕೊಡುತ್ತದೆ! ಪರಿಷತ್ತಿಗೆ ಹಣ ಬಿಡುಗಡೆ ಮಾಡುವುದು ಸರ್ಕಾರದ ಕರ್ತವ್ಯ ಎಂದೇ ಭಾವಿಸೋಣ. ಆದರೆ, ರಾಜಕಾರಣಿಗಳು ಎಲ್ಲ ಕಾರ್ಯಕ್ರಮಕ್ಕೆ ಬರಲಿ ಎಂದು ನಾವು ಏಕೆ ಅಪೇಕ್ಷಿಸಬೇಕು? ಈ ರೂಢಿ ಮೊದಲು ಇರಲಿಲ್ಲ. ಸಾಹಿತ್ಯ ಸಮ್ಮೇಳನಕ್ಕೆ ಮುಖ್ಯಮಂತ್ರಿಗಳು ಬರುತ್ತಿದ್ದರು. ಬಂದು ಯಾರೋ ಬರೆದುಕೊಟ್ಟ ಭಾಷಣ ಓದಿ ಆತುರಾತುರವಾಗಿ ಹೊರಟು ಹೋಗುತ್ತಿದ್ದರು. ಅವರಿಗಿಂತ ಅವರು ಬರುವ ಹೆಲಿಕಾಪ್ಟರ್‌ಗಾಗಿಯೇ ಹೆಚ್ಚು ಜನರು ಕೌತುಕದಿಂದ ಕಾಯುತ್ತಿದ್ದರು! ಅದೆಲ್ಲ ಒಂದು ವಿಧ್ಯುಕ್ತ ಕ್ರಿಯೆ ಎನ್ನುವಂತೆ ಆಗಿತ್ತು. ಯಾರೂ ಅದನ್ನು ಗಂಭೀರವಾಗಿ ಪರಿಗಣಿಸುತ್ತಿರಲಿಲ್ಲ.

ಯಾವಾಗಲೂ ಅಧ್ಯಕ್ಷರೇ ಸಮ್ಮೇಳನದ ಕೇಂದ್ರ ಬಿಂದು ಆಗಿರುತ್ತಿದ್ದರು. ಮುಖ್ಯಮಂತ್ರಿ ಬಂದರೆ ಸಮ್ಮೇಳನಕ್ಕೆ ಲಾಭವೂ ಇಲ್ಲ, ಬರದೇ ಇದ್ದರೆ ನಷ್ಟವೂ ಇಲ್ಲ ಎಂದು ಗೊತ್ತಿದ್ದರೂ ಆ ರೂಢಿಯನ್ನು ಇದುವರೆಗೆ ಮುರಿಯಲು ಆಗಲಿಲ್ಲ. ಹೆಚ್ಚೆಂದರೆ ಉದ್ಘಾಟನೆಗೆ ಬರುವ ಮುಖ್ಯಮಂತ್ರಿ, ಸಮಾರೋಪಕ್ಕೆ ಬಂದಿರಬಹುದು. ವ್ಯತ್ಯಾಸ ಅಷ್ಟು ಮಾತ್ರ. ಸಾಹಿತ್ಯ ಪರಿಷತ್ತು ಈ ರೂಢಿಯನ್ನು ಮುರಿಯದೇ ಇರುವುದಕ್ಕೆ ಸರ್ಕಾರದ ನೆರವಿನ ಮೇಲೆ ಅದು ಅವಲಂಬಿಸಿದ್ದೇ ಕಾರಣ ಆಗಿರಬಹುದು. ಈ ಶತಮಾನದ ಆರಂಭದವರೆಗೆ ಕೇವಲ ಕೆಲವೇ

ಲಕ್ಷಗಳಲ್ಲಿ ಇದ್ದ ಅನುದಾನ ಎಸ್.ಎಂ.ಕೃಷ್ಣ ಮುಖ್ಯಮಂತ್ರಿ ಆಗಿದ್ದಾಗ ಒಂದು ಕೋಟಿಗೆ ಏರಿದ ಮೇಲೆ ಪರಿಷತ್ತಿನ ಖದರೇ ಬೇರೆ ಆಯಿತು. ಸರ್ಕಾರದ ಮೇಲಿನ ಅವಲಂಬನೆ ಹೆಚ್ಚುತ್ತ ಹೋಯಿತು. ಈಗ ಅದು ಸರ್ಕಾರಕ್ಕೆ ಹೆದರಿಸುವ ಮಟ್ಟಕ್ಕೆ ಏರಿದೆ. ಸರ್ಕಾರದ ಅನುದಾನ ಹೆಚ್ಚುತ್ತ ಹೋದಂತೆ ಪರಿಷತ್ತಿನ ಸತ್ವವೂ ಕಡಿಮೆ ಆಗುತ್ತ ಹೋಗಿರುವುದು ಕಾಕತಾಳೀಯ ಇರಲಾರದು.

ಕರ್ನಾಟಕ ಅನೇಕ ಮುಖ್ಯಮಂತ್ರಿ, ಮಂತ್ರಿಗಳನ್ನು ಕಂಡಿದೆ. ಆದರೆ, ದೇವರಾಜ ಅರಸು, ರಾಮಕೃಷ್ಣ ಹೆಗಡೆ, ಎಸ್.ಎಂ.ಕೃಷ್ಣ, ಜೆ.ಎಚ್.ಪಟೇಲ್, ಎಂ.ಪಿ.ಪ್ರಕಾಶ್, ಕೆ.ಎಚ್.ಶ್ರೀನಿವಾಸ್ ಅವರಂಥ ಕೆಲವರನ್ನು ಬಿಟ್ಟರೆ ಉಳಿದವರೆಲ್ಲ ಸಾಹಿತ್ಯವನ್ನು ಆಸಕ್ತಿಯಿಂದ ಓದಿದವರೂ ಅಲ್ಲ; ಆಳವಾಗಿ ಅಭ್ಯಾಸ ಮಾಡಿದವರೂ ಅಲ್ಲ. ಅರಸು ತುಂಬ ಓದುತ್ತಿದ್ದರು. ಪುಸ್ತಕಗಳ ಬಗ್ಗೆ ಗಂಭೀರವಾಗಿ ಚರ್ಚೆ ಮಾಡಬಲ್ಲ ತಿಳಿವಳಿಕೆ ಅವರಿಗೆ ಇತ್ತು. ಹೆಗಡೆ ಮತ್ತು ಕೃಷ್ಣ ಓದುತ್ತಿದ್ದರೋ ಇಲ್ಲವೋ ಗೊತ್ತಿಲ್ಲ. ಆದರೆ, ಅವರಿಗೆ ಸಾಹಿತಿಗಳ ಜತೆಗೆ ಒಡನಾಡುವ ಸೂಕ್ಷ್ಮತೆ ಇತ್ತು. ಪಟೇಲರು ತುಂಬ ಓದಿದವರು. ಆದರೆ, ಮುಖ್ಯಮಂತ್ರಿ ಆಗುವ ವೇಳೆಗೆ ಓದು ನಿರರ್ಥಕ ಎಂದು ಅವರಿಗೆ ಅನಿಸತೊಡಗಿತ್ತು. ಹಾಗೆ ನೋಡಿದರೆ ಶಾಂತವೇರಿ ಗೋಪಾಲಗೌಡರೇ ಹೆಚ್ಚು ಓದಿದವರು. ಗೋಪಾಲಕೃಷ್ಣ ಅಡಿಗರ ಪದ್ಯಗಳನ್ನು ಯು.ಆರ್. ಅನಂತಮೂರ್ತಿ ಅವರಷ್ಟೇ ಚೆನ್ನಾಗಿ ಅರ್ಥೈಸಬಲ್ಲ ಸಮರ್ಥರು ಅವರಾಗಿದ್ದರು. ಅಂಥವರು ಬಂದು ಸಾಹಿತಿಗಳ ಜತೆಗೆ ವೇದಿಕೆ ಹಂಚಿಕೊಂಡರೆ ಸಾಹಿತಿಗಳಿಗೂ ಗೌರವ, ರಾಜಕಾರಣಿಗಳಿಗೂ ಗೌರವ. ಈಗಿನ ಸಚಿವರಲ್ಲಿ ಅನೇಕರಿಗೆ ರನ್ನ ಮಹಾಕವಿ ಯಾರು ಎಂದು ಗೊತ್ತಿರುವುದಿಲ್ಲ. ವಾಲ್ಮೀಕಿ ಬರೆದ ಕಾವ್ಯ ಯಾವುದು ಎಂದೂ ತಿಳಿದಿರುವುದಿಲ್ಲ. ಅವರು ಬಂದು ಸಾಹಿತ್ಯದ ವೇದಿಕೆಯಲ್ಲಿ ಕುಳಿತರೆ ಯಾರಿಗೆ ಮುಜುಗರ?

ಸಾಹಿತ್ಯದಲ್ಲಿ, ಸಂಸ್ಕೃತಿಯಲ್ಲಿ, ಸಂಗೀತದಲ್ಲಿ, ನಾಟಕದಲ್ಲಿ ಆಸಕ್ತಿ ಇರಬೇಕಾದುದು ರಾಜಕಾರಣಿಗಳಿಗೆ ಇರಬೇಕಾದ ಕನಿಷ್ಠ ಗುಣಲಕ್ಷಣ. ಇಪ್ಪತ್ನಾಲ್ಕು ಗಂಟೆ ಕಾಲ ರಾಜಕಾರಣ ಮಾಡುವುದಕ್ಕಿಂತ ರಾಜಕೀಯದ ಮಧ್ಯೆ ಬಿಡುವು ಮಾಡಿಕೊಂಡು ಒಂದಿಷ್ಟು ಪುಸ್ತಕ ಓದುವುದು, ಸಂಗೀತ ಕೇಳುವುದು, ನೃತ್ಯ ನೋಡುವುದು ರಾಜಕಾರಣಿಗಳ ಮಾನಸಿಕ ಮತ್ತು ದೈಹಿಕ ಆರೋಗ್ಯಕ್ಕೆ ಒಳ್ಳೆಯದು. ಹೆಗಡೆ ಮತ್ತು ಕೃಷ್ಣ ಹೀಗೆ ಬಿಡುವು ಮಾಡಿಕೊಳ್ಳುತ್ತಿದ್ದರು.

ಬಂಗಾರಪ್ಪನವರು ಸ್ವತಃ ಒಳ್ಳೆಯ ಹಿಂದುಸ್ತಾನಿ ಗಾಯಕರಾಗಿದ್ದರು. ರಾಜಕೀಯದ ನಡುವೆ ಬಿಡುವು ಮಾಡಿಕೊಂಡು ಬರೆದವರಲ್ಲಿ ರಾಮಮನೋಹರ ಲೋಹಿಯಾ ಬಹಳ ದೊಡ್ಡ ಅಪರೂಪದ ಚಿಂತಕ. ಅವರ ಒಂದು ಪುಸ್ತಕದ ಹೆಸರು 'ರಾಜಕೀಯದ ಮಧ್ಯೆ ಬಿಡುವು! ಕೆ.ವಿ.ಸುಬ್ಬಣ್ಣ ಅದನ್ನು ಅನುವಾದ ಮಾಡಿದ್ದರು. ಲೋಹಿಯಾ ಒಂದು ತಲೆಮಾರನ್ನು ಪ್ರಭಾವಿಸಿದರು. ಅವರಷ್ಟೇ ಪ್ರಭಾವಿ ಲೇಖಕರಾಗಿದ್ದ ಜವಾಹರಲಾಲ್ ನೆಹರೂ ವಿರುದ್ಧ ಪ್ರತಿನಾಯಕನಾಗಿ ಬೆಳೆದು ನಿಂತರು. ಲೋಹಿಯಾ, ರಾಜಕಾರಣ ರೂಪಿಸಬಹುದಾದ ಬಹುದೊಡ್ಡ ಅಚ್ಚರಿ. ಅವರು ರಾಜಕಾರಣಿಯೇ? ಬರಹಗಾರನೇ? ಬಿಡಿಸಿ ಹೇಳುವುದು ಕಷ್ಟ. ಅವರ ಜತೆಗೆ ಒಡನಾಡಬೇಕು ಎಂದು ಸಾಹಿತಿಗಳು ಬಯಸಿದ್ದರೆ ಅದಕ್ಕೆ ಒಂದು ಅರ್ಥ ಇರುತ್ತಿತ್ತು. ಕೇರಳದ ಮೊದಲ ಮುಖ್ಯಮಂತ್ರಿ ಇ.ಎಂ.ಎಸ್

ನಂಬೂದ್ರಿಪಾದ್ ಕೂಡ ಬಹಳ ದೊಡ್ಡ ಲೇಖಕರಾಗಿದ್ದರು. ಮಹಾರಾಷ್ಟ್ರದಲ್ಲಿ, ಶರದ್ ಪವಾರ್ ಅವರು ಲೇಖಕರೇನೂ ಅಲ್ಲ. ಆದರೆ, ಸಾಹಿತ್ಯ ಸಮ್ಮೇಳನದಲ್ಲಿ ಯಾವ ಸದ್ದುಗದ್ದಲ ಮಾಡದೇ ಮುಂದೆ ಬಂದು ಕುಳಿತು ಭಾಷಣ ಕೇಳಿ ಹೋಗುವ ಸೌಜನ್ಯವನ್ನು ಅವರು ಬೆಳೆಸಿಕೊಂಡಿದ್ದಾರೆ. ಮಹಾರಾಷ್ಟ್ರದಲ್ಲಿ ರಾಜಕಾರಣಿಗಳನ್ನು ವೇದಿಕೆ ಮೇಲೆ ಕರೆಯುವುದೇ ಇಲ್ಲ. ಅವರದು ಹಟ ಎಂದರೆ ಹಟ ! ಅಲ್ಲಿನ ಸಾಹಿತ್ಯ ಪರಿಷತ್ತು ಸರ್ಕಾರದ ಹಣದ ಮೇಲೆ ಅವಲಂಬನೆಯೂ ಆಗಿಲ್ಲ. ಜನರು ಕೊಡುವ ವರ್ಗಣಿ ಹಣದ ಮೇಲೆಯೇ ಸಮ್ಮೇಳನ ನಡೆಯುತ್ತದೆ.

ನಮ್ಮ ಪರಿಷತ್ತಿಗೂ ಕೋಟಿಗಟ್ಟಲೆ ಹಣ ಬೇಡ ಅನಿಸುತ್ತದೆ. ನಮ್ಮ ಸಮ್ಮೇಳನಗಳಲ್ಲಿ ಊಟಕ್ಕೆ ಮತ್ತು ಪೆಂಡಾಲಿಗೆ ಮಾಡುವ ಖರ್ಚೇ ಬಹಳ ದೊಡ್ಡದು. ಲೆಕ್ಕ ಸಿಗದ ಅಥವಾ ಇಡಲಾಗದ ಖರ್ಚು ಕೂಡ ಅದೇ. ಸಮ್ಮೇಳನಕ್ಕೆ ಬಂದವರಿಗೆಲ್ಲ ಉಚಿತ ಊಟ ಏಕೆ ಹಾಕಬೇಕು? ಉಚಿತ ಊಟ ಎಲ್ಲಿ ಸಿಗುತ್ತದೆ? ಸಮ್ಮೇಳನಕ್ಕೆ ಬರುವವರೆಲ್ಲ ಬಡವರೇ? ಒಂದು ಊಟಕ್ಕೆ ಕನಿಷ್ಠ 30 ರೂಪಾಯಿ ಕೊಡುವ ಶಕ್ತಿ ಅವರಿಗೆ ಇರುವುದಿಲ್ಲವೇ? ಇದುವರೆಗೆ ಯಾವ ಸಮ್ಮೇಳನದಲ್ಲಿ ಊಟದ ವ್ಯವಸ್ಥೆ ಯಶಸ್ಸು ಕಂಡಿದೆ? ಅದಕ್ಕಾಗಿಯೇ ಹಾಲಂಬಿಯವರು ಕಳೆದ ವಿಜಾಪುರ ಸಮ್ಮೇಳನದಲ್ಲಿ ಇನ್ನು ಮುಂದೆ ಉಚಿತ ಊಟ ಹಾಕುವುದಿಲ್ಲ ಎಂದಿದ್ದರು. ಈಗ ಮಡಿಕೇರಿಯಲ್ಲಿ ಮತ್ತೆ ಅದೇ ಭೂರಿ ಭೋಜನದ ಸುದ್ದಿಯೇ ದೊಡ್ಡದಾಗಿದೆ.

ಸಾಹಿತ್ಯ ಸಮ್ಮೇಳನಕ್ಕೆ ತನ್ನದೇ ಆದ ಮಹತ್ವ ಇದೆ. ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಬೇಕು ಎನ್ನುವುದು ಎಲ್ಲ ಸಾಹಿತಿಗಳ ಜೀವನದ ಕನಸು, ಆಸೆ. ಇದನ್ನು ಮೀರಿದವರು ಬಹಳ ಕಡಿಮೆ. ಅದು ಕನ್ನಡ ನಾಡು ಕೊಡುವ ಬಹುದೊಡ್ಡ ಗೌರವ ಎಂಬುದು ಅವರ ಭಾವನೆ. ಅದನ್ನು ಕಡಿಮೆ ಮಾಡುವುದು ಬೇಡ. ಅದನ್ನು ಜಾತ್ರೆ ಎಂದು ಕರೆಯುವವರು ಹಾಗೆಯೇ ಕರೆಯಲಿ, ಸಂತೆ ಎನ್ನುವವರು ಹಾಗೆಯೇ ತಿಳಿಯಲಿ. ಸಮ್ಮೇಳನ ಮಾತ್ರ ನಡೆಯುತ್ತ ಇರಲಿ. ಊಟಕ್ಕೆ, ವಸತಿಗೆ ಕನಿಷ್ಠ ದರವನ್ನು ನಿಗದಿ ಮಾಡಿ ಅಷ್ಟು ಹಣ ಕೊಟ್ಟು ಬರುವವರು ಸಮ್ಮೇಳನಕ್ಕೆ ಬರಲಿ ಎಂದು ಪರಿಷತ್ತು ಹೇಳಲಿ, ಈಗ ಕೊಡುವ ಓಓಡಿ ಸೌಲಭ್ಯವನ್ನು ತೆಗೆದು ಹಾಕಿ ಸಮ್ಮೇಳನಕ್ಕೆ ಬರುವವರು ರಜೆ ಹಾಕಿ ಬರಲಿ ಎಂದೂ ಪರಿಷತ್ತು ಹೇಳಲಿ. ಆಗ ನಮ್ಮ ಜನರ ಕನ್ನಡದ ಅಭಿಮಾನ ಎಷ್ಟು ಎಂದು ಗೊತ್ತಾಗುತ್ತದೆ. ಈಗ ಸಾವಿರಗಟ್ಟಲೆ ಬರುವವರು ಆಗ ನೂರುಗಟ್ಟಲೆ ಬರಲಿ. ಹಾಗೆ ಬರುವವರು ನಿಜವಾದ ಸಾಹಿತ್ಯ ಆಸಕ್ತರು ಆಗಿರುತ್ತಾರೆ. ಅಲ್ಲಿ ನಡೆಯುವ ಚರ್ಚೆ ಅರ್ಥಪೂರ್ಣ ಆಗಿರುತ್ತದೆ. ಧಾರವಾಡದ ಸಾಹಿತ್ಯ ಸಂಭ್ರಮದಲ್ಲಿ ಇದನ್ನು ನಾನು ಕಂಡಿದ್ದೇನೆ. ಹೆಗ್ಗೋಡಿನ ಸಂಸ್ಕೃತಿ ಶಿಬಿರದಲ್ಲಿ ಅದನ್ನು ನೋಡಿದ್ದೇನೆ. ಅಲ್ಲಿ ಎರಡೂ ಕಡೆ ರಾಜಕಾರಣಿಗಳು ಇರಲಿಲ್ಲ. ಪರಿಷತ್ತು ರಾಜಕಾರಣಿಗಳ ಹೆಲಿಕಾಪ್ಟರುಗಳು ಮತ್ತು ಕಾರುಗಳು ಎಬ್ಬಿಸುವ ದೂಳಿನ ನಡುವೆ ತನ್ನ ಕಾಂತಿಯನ್ನು ಕಳೆದುಕೊಳ್ಳದಿರಲಿ.

22-12-2013

# ಹೆಗ್ಗೋಡಿನಲ್ಲಿ ನಾಲ್ಕು ದಿನ...

ಹೆಗ್ಗೋಡಿನ ಶಿವರಾಮ ಕಾರಂತ ರಂಗ ಮಂದಿರದಲ್ಲಿ ಇನ್ನೇನು ಸಂಸ್ಕೃತಿ ಶಿಬಿರದ ಮೊದಲ ದಿನದ ನಾಟಕ ಆರಂಭವಾಗಬೇಕಿತ್ತು. ರಂಗಮಂದಿರದಲ್ಲಿ ಆಸನಗಳೆಲ್ಲ ಭರ್ತಿಯಾಗಿದ್ದುವು. ಸಹಜವಾಗಿಯೇ ವಿಪರೀತ ಗೌಜು, ಗದ್ದಲ, ವೇದಿಕೆ ಮುಂಭಾಗದಲ್ಲಿ ಒಬ್ಬ ವ್ಯಕ್ತಿ ಬಂದು ನಿಂತರು. ಅವರ ಕೈಯಲ್ಲಿ ಮೈಕ್ ಇತ್ತು. ಅವರ ಮೇಲೆ ನಿಧಾನವಾಗಿ, ಅವರನ್ನು ಮಾತ್ರ ಆವರಿಸುವಂತೆ ಬೆಳಕು ಬಿತ್ತು. ಅವರು ಹಾಗೇ ಸುಮ್ಮನೆ ಕೆಲವು ಕ್ಷಣ ನಿಂತರು. ಏನನ್ನೂ ಮಾತನಾಡಲಿಲ್ಲ. ರಂಗಮಂದಿರ ಕಿತ್ತು ಹೋಗುವಂತೆ ಮಾತನಾಡುತ್ತಿದ್ದವರ ಧ್ವನಿ ನಿಧಾನವಾಗಿ ಕಡಿಮೆಯಾಗಿ ಸಂಪೂರ್ಣ ಮೌನ ನೆಲೆಸಿತು. ಮೈಕ್ ಹಿಡಿದ ವ್ಯಕ್ತಿ ಮಾತನಾಡಲು ಆರಂಭಿಸಿದರು. ನನ್ನ ಪಕ್ಕದಲ್ಲಿ ಕುಳಿತಿದ್ದ ದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಪ್ರೊ.ಗೋಪಾಲ ಗುರು, 'ನೈತಿಕ ಶಕ್ತಿ ಎಂದರೆ ಇದು. ನಾನೂ ತರಗತಿಯಲ್ಲಿ ಇದನ್ನು ಆಗಾಗ ಬಳಸುತ್ತೇನೆ' ಎಂದು ನನಗೆ ಹೇಳಿದರು. ನಮ್ಮ ಮುಂದೆ ಮೈಕ್ ಹಿಡಿದುಕೊಂಡು ನಿಂತಿದ್ದವರು ಕೆ.ವಿ.ಅಕ್ಷರ.

ಅಕ್ಷರ ಅವರಿಗೆ ಇಂಥ ಶಕ್ತಿ ಹಾಗೆಯೇ ಸುಮ್ಮನೆ ಬರಲು ಸಾಧ್ಯವಿಲ್ಲ. ಕಳೆದ ಭಾನುವಾರ ಆರಂಭವಾದ ಸಂಸ್ಕೃತಿ ಶಿಬಿರಕ್ಕೆ ನಾನೂ ಹೋಗಿದ್ದೆ. ಹೆಗ್ಗೋಡಿಗೆ ನಾನು ಹೋದುದು ಇದೇ ಮೊದಲು ಅಲ್ಲ. ಶಿಬಿರಕ್ಕೆ ಹೋದುದು ಇದೇ ಮೊದಲು. ಹಾಗೆ ಹೇಳಲು ಕೊಂಚ ಸಂಕೋಚ, ಕೊಂಚ ನಾಚಿಕೆ. ನಾಲ್ಕು ದಿನ ಅಲ್ಲಿ ಇದ್ದು ಬಂದ ಮೇಲೆ ಇದುವರೆಗೆ ಏಕೆ ಹೋಗಲಿಲ್ಲ ಎಂದು ನನ್ನನ್ನೇ ನಾನು ಶಪಿಸಿಕೊಂಡುದಕ್ಕೆ ಲೆಕ್ಕವಿಲ್ಲ.

ಅಕ್ಷರ ಅವರ ತಂದೆ ಕೆ.ವಿ.ಸುಬ್ಬಣ್ಣ ಅಂಥ ಅಪರೂಪದ ಒಂದು ಸಂಸ್ಥೆಯನ್ನು ಅಲ್ಲಿ ಕಟ್ಟಿದ್ದಾರೆ. ಅದನ್ನು ಅಕ್ಷರ ಅಷ್ಟೇ ಶ್ರದ್ಧೆಯಿಂದ ಮುಂದುವರಿಸಿಕೊಂಡು ಹೊರಟಿದ್ದಾರೆ. ಅಷ್ಟು ಪುಟ್ಟ ಊರಿನಲ್ಲಿ ಕಳೆದ ಮೂರು ದಶಕಗಳಿಗೂ ಹೆಚ್ಚು ಅವಧಿಯಿಂದ ಎಷ್ಟು ಉನ್ನತ ಮಟ್ಟದ ಚರ್ಚೆ, ಸಂವಾದ, ವಿಚಾರ ಮಂಥನ ನಡೆಯುತ್ತಿದೆ ಎಂದರೆ, ಆ ಊರು ಈಗ ಇಡೀ ಜಗತ್ತಿನ ಗಮನ ಸೆಳೆದಿದೆ. ಈ ಸಾರಿಯೂ ಅಲ್ಲಿ ಬರೀ ಕರ್ನಾಟಕ ಮಾತ್ರವಲ್ಲ, ದೂರದ ಪಶ್ಚಿಮ ಬಂಗಾಲ, ದೆಹಲಿ, ಅಷ್ಟೇ ಅಲ್ಲ ಅಮೆರಿಕೆಯ ಪ್ರತಿನಿಧಿಯೂ ಬಂದಿದ್ದರು.

ಮೈಸೂರು ವಿಶ್ವವಿದ್ಯಾಲಯದಿಂದ 50ರ ದಶಕದಲ್ಲಿ ಕನ್ನಡದಲ್ಲಿ ಸ್ನಾತಕೋತ್ತರ ಪದವಿ ಪಡೆದ ಕೆ.ವಿ.ಸುಬ್ಬಣ್ಣ ಅವರಿಗೆ ತಮ್ಮ ವಾರಿಗೆಯ ಯು.ಆರ್. ಅನಂತಮೂರ್ತಿ ಅವರ ಹಾಗೆ ಎಲ್ಲಿಯಾದರೂ ಕಾಲೇಜಿನಲ್ಲಿ ಅಧ್ಯಾಪಕ ನೌಕರಿ ಹಿಡಿಯುವುದು ಕಷ್ಟವಿರಲಿಲ್ಲ. ಅವರು ಅತ್ಯಂತ ಪ್ರತಿಭಾವಂತ ವಿದ್ಯಾರ್ಥಿಯೇ ಆಗಿದ್ದರು.

ಆದರೆ ಅವರು ನೌಕರಿ ಮಾಡುತ್ತ ಊರೂರು ಅಲೆದಿದ್ದರೆ ಅವರಿಗೆ ಇದ್ದ ಅಡಿಕೆ ತೋಟ ಅನಾಥವಾಗುತ್ತಿತ್ತು. ಕುಟುಂಬಕ್ಕೆ ಒಬ್ಬನೇ ಮಗನಾಗಿದ್ದ ಅವರು ಅಡಿಕೆ ತೋಟವನ್ನೇ ಆಯ್ದುಕೊಳ್ಳಬೇಕಿತ್ತು. ಅದರ ಜತೆಗೆ ಅವರು ಹೊರಗಿನ ಜಗತ್ತನ್ನು ತಮ್ಮ ಊರಿಗೆ ತರಬೇಕಿತ್ತು. ಅದು ಅವರಿಗೆ ವೈಯಕ್ತಿಕ ಜರೂರು ಆಗಿದ್ದಂತೆಯೇ ಆ ಊರಿನ ಜರೂರು ಕೂಡ ಆಗಿತ್ತು. ಅವರಿಗೆ ಶಿವರಾಮ ಕಾರಂತರು ಪುತ್ತೂರಿನಲ್ಲಿ ಮಾಡಿದ ಬಾಲವನದ ಪ್ರಯೋಗ ಮಾದರಿಯಾಗಿತ್ತು. ಕನ್ನಡ ಸಾಹಿತ್ಯದಲ್ಲಿ ಹೀಗೆ 'ಮರಳಿ ಮಣ್ಣಿಗೆ' ಹೋಗುವ ಕಥಾನಕ ನಿದರ್ಶನಗಳೂ ಸುಬ್ಬಣ್ಣ ಅವರ ಬೆನ್ನ ಹಿಂದೆ ಇದ್ದುವು. ಊರಿಗೆ ಮರಳಿ ಬಂದ ಕೆಲವೇ ವರ್ಷಗಳಲ್ಲಿ ಅಕ್ಷರ ಪ್ರಕಾಶನ ಪ್ರಾರಂಭಿಸುವ ಮೂಲಕ ಸುಬ್ಬಣ್ಣ ಕನ್ನಡದ ಎಲ್ಲ ಮುಖ್ಯ ಲೇಖಕರ ಪುಸ್ತಕಗಳು ಹೆಗ್ಗೋಡಿನಿಂದ ಪ್ರಕಟವಾಗುವಂತೆ ಮಾಡಿದರು.

ಮೊದಲೇ ಅವರ ತಂದೆ ಕಾಲದಿಂದಲೂ ಊರಿನಲ್ಲಿ ಇದ್ದ ನೀನಾಸಂನ ಚಟುವಟಿ- ಕೆಗಳಿಗೆ ಹೊಸ ಆಯಾಮ ಕೊಟ್ಟು ಅದರ ಆಶ್ರಯದಲ್ಲಿ ರಂಗ ಚಟುವಟಿಕೆ, ಸಿನಿಮಾಗಳ ಪ್ರದರ್ಶನ, ನಾಟಕ ಮತ್ತು ಸಿನಿಮಾಗಳ ರಸಗ್ರಹಣ ಶಿಬಿರಗಳನ್ನೂ ಏರ್ಪಾಡು ಮಾಡಿದರು. ಬಹುಶಃ ಸತ್ಯಜಿತ್ ರೇ, ಬರ್ಗಮನ್, ಅಕಿರಾ ಕುರಸೋವ ಅವರಂಥ ಸಾರ್ವಕಾಲಿಕ ಶ್ರೇಷ್ಠರ ಸಿನಿಮಾಗಳನ್ನು ನೋಡಿದ ಮೊದಲ ಹಳ್ಳಿಗರು ಎಂದರೆ ಹೆಗ್ಗೋಡಿನ ಜನರೇ ಇರಬೇಕು.

ಅಲ್ಲಿನ ಜನರಿಗೆ ಸಿನಿಮಾ, ನಾಟಕ ಎಂದರೆ ಎಂಥ ಹುಚ್ಚು ಎಂದರೆ, ಹಳ್ಳಿಯ ಪ್ರತಿಯೊಬ್ಬನಲ್ಲಿಯೂ ಅಭಿನಯ ಎಂಬುದು ರಕ್ತಗತವಾಗಿ ಬಿಟ್ಟಿದೆ. ಅವರೇನು ವರ್ಷಗಟ್ಟಲೆ ತರಬೇತಿ ಪಡೆಯುವುದಿಲ್ಲ; ತಾಲೀಮು ಮಾಡುವುದಿಲ್ಲ. ಪ್ರತಿವರ್ಷ ಸಂಸ್ಕೃತಿ ಶಿಬಿರದಲ್ಲಿ 'ತಿರುಗಾಟ'ದ ನಾಟಕಗಳ ಜತೆಗೆ ಊರಿನವರೇ ಆಡುವ ಒಂದು ನಾಟಕವೂ ಇರುತ್ತದೆ.

ಊರವರೆಲ್ಲ ಸೇರಿಕೊಂಡು 'ತಿರುಗಾಟ'ಕ್ಕಾಗಿ ತಾಲೀಮು ಮಾಡಿದ ನಟ ನಟಿಯರ ಹಾಗೆಯೇ, ಅಷ್ಟೇ ಚೆನ್ನಾಗಿ ನಾಟಕ ಆಡುತ್ತಾರೆ. ಆ ನಾಟಕ ನೋಡಲು ಊರಿನ ಮಂದಿಯೆಲ್ಲ ಬರುತ್ತಾರೆ. ಎಲ್ಲರೂ ಹಣ ಕೊಟ್ಟು ಟಿಕೆಟ್ ಕೊಳ್ಳುತ್ತಾರೆ. ಕುರ್ಚಿಯೇ ಬೇಕು



ಎಂದು ಹಟ ಹಿಡಿಯುವುದಿಲ್ಲ. ರಂಗ ಮಂದಿರದ ಮುಂಭಾಗದಲ್ಲಿ ನೆಲದ ಮೇಲೆ, ಕುರ್ಚಿಗಳ ನಡುವೆ, ಬಾಗಿಲ ಮೆಟ್ಟಿಲುಗಳ ಮೇಲೆ ಕುಳಿತುಕೊಂಡು ನಾಟಕ ನೋಡುತ್ತಾರೆ. ಅವರ ಜತೆಗೆ ಅಕ್ಷರ ಕೂಡ ಕುಳಿತುಕೊಂಡಿರುತ್ತಾರೆ. ಅವರ ಹೆಂಡತಿಯೂ ಅಷ್ಟೇ! ಬಹುಶಃ ಒಂದು ಸಂಸ್ಥೆಯ ನಿರ್ದೇಶಕ ಮತ್ತು ಅವರ ಹೆಂಡತಿ ಇಷ್ಟು ಸರಳವಾಗಿರುವುದು ಹೆಗ್ಗೋಡಿನಲ್ಲಿ ಮಾತ್ರ ಸಾಧ್ಯ ಅನಿಸುತ್ತದೆ. ಇಲ್ಲವಾದರೆ ಅಂಥವರಿಗಾಗಿ ಎಷ್ಟು ಕುರ್ಚಿಗಳನ್ನು ಕಾದಿರಿಸಿಕೊಂಡು ಎಷ್ಟು ಜನರು ಕಾಯುತ್ತ ಇರುತ್ತಾರೋ ಏನೋ?

ಸಂಸ್ಕೃತಿ ಶಿಬಿರದ ಗೋಷ್ಠಿಗಳಲ್ಲಿ ಕೂಡ ಅಷ್ಟೇ, ಅಕ್ಷರ ಎಲ್ಲಿಯೋ ಕಂಬಕ್ಕೆ ಬೆನ್ನು ಆನಿಸಿಕೊಂಡು ಎಲೆ ಅಡಿಕೆಯ ಸಂಚಿಯಿಂದ ಅಡಿಕೆ ತೆಗೆದು ಅಡಕೊತ್ತಿನಿಂದ ಕತ್ತರಿಸುತ್ತ, ಪುಟ್ಟ ಪುಟ್ಟ ಎಲೆಗಳನ್ನು ಸವರುತ್ತ, ಅದಕ್ಕೆ ಸುಣ್ಣ ಹಚ್ಚುತ್ತ, ಒಂದಿಷ್ಟು ತಂಬಾಕು ಸೇರಿಸುತ್ತ ನಿರಂತರವಾಗಿ ಮೆಲ್ಲುತ್ತಾ ಇರುತ್ತಾರೆ. ಅವರು ಕುರ್ಚಿಗಾಗಿ ಒಂದು ದಿನವೂ ತಡಕಾಡಿದ್ದು ನನಗೆ ಕಾಣಲಿಲ್ಲ.

ಬಹುಶಃ ಅವರು ಇರುವುದೇ ಹಾಗೆ ಅನಿಸುತ್ತದೆ. ಒಂದು ಸಂಸ್ಥೆ ಮತ್ತು ಅದರ ಪದಾಧಿಕಾರಿಗಳು ನಾಡಿನ ತುಂಬ ಮತ್ತು ಅದರ ಹೊರಗಡೆ ಪ್ರಭಾವ ಬೀರುವುದು ಹೀಗೆ ಸರಳವಾಗಿರುವ ಮೂಲಕ, ಕ್ರಿಯಾಶೀಲವಾಗಿರುವ ಮೂಲಕ ಮತ್ತು ಅದಕ್ಕಿಂತ ಹೆಚ್ಚಾಗಿ ಸದಾ ಚಿಂತನಶೀಲವಾಗಿರುವ ಮೂಲಕ. ಇಲ್ಲವಾದರೆ ಆ ಸಂಸ್ಥೆ ಇಷ್ಟು ಹೆಸರು ಮಾಡಲು ಸಾಧ್ಯವಿರಲಿಲ್ಲ. ನಿಜವಾದ ಅರ್ಥದಲ್ಲಿ ಸಂಸ್ಕೃತಿಯ ಹುಡುಕಾಟದ ಮತ್ತು ಅದರ ವಿಸ್ತರಣೆಯ ಕೇಂದ್ರವಾಗಲೂ ಸಾಧ್ಯವಿರಲಿಲ್ಲ.

ಇದೆಲ್ಲ ಅಲ್ಲಿ ಹೇಗೆ ಸಾಧ್ಯವಾಯಿತು ಎಂದರೆ ಅದೆಲ್ಲ ಒಂದು ದಿನದಲ್ಲಿ ಆದ ಮಾತಲ್ಲ. ಸುಬ್ಬಣ್ಣ 1957ರಲ್ಲಿಯೇ ಅಕ್ಷರ ಪ್ರಕಾಶನ ಪ್ರಾರಂಭ ಮಾಡಿದರು. ಆದರೆ, 1980ರವರೆಗೆ ತಾವು ಏನೂ ಬರೆಯಲಿಲ್ಲ. ಅವರು ಬೇರೆಯವರಿಂದ ಬರೆಸಿದರು. ಅವರ ಪ್ರಕಾಶನಕ್ಕೆ ಬರೆಯುವುದು ಒಂದು ಹೆಮ್ಮೆ ಎನ್ನುವಂಥ ವಾತಾವರಣ ನಿರ್ಮಿಸಿದರು.

ಅವರು ಹೀಗೆ ಹಿಂದೆ ನಿಂತು ಸಂಸ್ಥೆಯನ್ನು ಮುಂದೆ ನಡೆಸಿದರು ಎಂದೇ ಅವರ ಜತೆಗೆ ಹೆಗಲು ಕೊಡಲು ಹಲವರು ಮುಂದೆ ಬಂದರು. ಈಗಲೂ ಅಕ್ಷರ ಕರೆದರೆ ಸ್ವಂತ ಖರ್ಚು ಹಾಕಿಕೊಂಡು ಹಲವರು ವಿದ್ವಾಂಸರು, ಚಿಂತಕರು ಅಲ್ಲಿಗೆ ಬರುತ್ತಾರೆ. ಬಂದು ಉಪನ್ಯಾಸ ಕೊಡುತ್ತಾರೆ. ಒಂದು ವೇಳೆ ಸಂಭಾವನೆ ಕೊಟ್ಟರೆ ಅದನ್ನು ಸಂಸ್ಥೆಗೆ ವಾಪಸು ದೇಣಿಗೆ ಎಂದು ಬರೆಸಿ ಹೋಗುವವರೂ ಅಲ್ಲಿಗೆ ಬರುತ್ತಾರೆ. ಸಾಹಿತಿಗಳು, ಕಲಾವಿದರು ಬರೀ ಸಂಭಾವನೆಯ ಚೆಕ್ಕಿಗಾಗಿ ಕಾಯುತ್ತ ಇರುತ್ತಾರೆ ಎಂಬುದು ಹೆಗ್ಗೋಡಿನ ವಿಚಾರದಲ್ಲಿಯಂತೂ ನಿಜವಲ್ಲ!

ಬರೀ ಸಾಹಿತಿಗಳು ಮಾತ್ರವಲ್ಲ, ಸಂಸ್ಕೃತಿ ಶಿಬಿರದಲ್ಲಿ ಭಾಗವಹಿಸಲು ಆಸಕ್ತ ಹುಡುಗ, ಹುಡುಗಿಯರು, ಟೆಕ್ಕಿಗಳು ಸಾಲುಗಟ್ಟಿ ನಿಲ್ಲುವುದು, ರಜೆ ಹಾಕಿ ಬರುವುದು, ಚರ್ಚೆಗಳಲ್ಲಿ ಭಾಗವಹಿಸುವುದು, ಹಿರಿಯರ ಜತೆಗೆ ಒಡನಾಡಬೇಕು ಎನ್ನುವುದು, ಅವರ ಮಾತು ಕೇಳಬೇಕು ಎನ್ನುವುದು ಇಲ್ಲಿ ಮಾತ್ರ ಕಾಣುವ ಒಂದು ಸೋಜಿಗದ ವಿದ್ಯಮಾನ.



ಮಾತು ಬೇಸರವಾಗುವುದೇ ಹೆಚ್ಚು. ಆದರೆ, ಒಂದು ಮಾತನ್ನು ಕಳೆದುಕೊಂಡರೂ ಏನೋ ಅಮೂಲ್ಯವಾದುದು ಕಳೆದು ಹೋಗುತ್ತದೆ. ಅದನ್ನು ಧ್ಯಾನವಿಟ್ಟು ಕೇಳಬೇಕು, ಮನಸ್ಸನ್ನು ತುಂಬಿಕೊಳ್ಳಬೇಕು ಎಂದು ಅನಿಸುವುದೂ ಹೆಗ್ಗೋಡಿನಲ್ಲಿಯೇ. ಇದೆಲ್ಲ ಹೇಗೆ ಸಾಧ್ಯ? ನಮ್ಮ ಉದ್ದೇಶಗಳಲ್ಲಿ ಪ್ರಾಮಾಣಿಕರಾಗಿದ್ದರೆ, ಖರ್ಚು ವೆಚ್ಚಗಳಲ್ಲಿ ಪಾರದರ್ಶಕವಾಗಿದ್ದರೆ, ಗುಣಮಟ್ಟದಲ್ಲಿ ರಾಜಿ ಮಾಡಿಕೊಳ್ಳದೇ ಇದ್ದರೆ, ನಿರಂತರವಾಗಿ ಸೃಜನಶೀಲವಾಗಿದ್ದರೆ, ವ್ಯಸನ ಎನ್ನುವಂಥ ಸಮಯ ನಿಷ್ಠೆ ಇದ್ದರೆ ಇದೆಲ್ಲ ಸಾಧ್ಯ ಎನಿಸುತ್ತದೆ.

ಆದರೆ, ಅದನ್ನು ಸಾಧಿಸಲು ವರ್ಷಗಳೇ ಬೇಕಾಗುತ್ತವೆ. ಸುಬ್ಬಣ್ಣ ಅವರಾಗಲೀ, ಅಕ್ಷರ ಅವರಾಗಲೀ ಸರ್ಕಾರದಿಂದ ಅನುದಾನ ತೆಗೆದುಕೊಂಡಿಲ್ಲ ಎಂದು ಅಲ್ಲ. ಅದಕ್ಕಾಗಿ ಅವರು ಯಾರಿಗೂ ಲಂಚ ಕೊಟ್ಟಿಲ್ಲ. ಸುಬ್ಬಣ್ಣ ಇನ್ನೂ ಬದುಕಿದ್ದಾಗ ಎರಡು ವರ್ಷ ಅನುದಾನ ಬರಲೇ ಇಲ್ಲ. ಹಣ ಅಲ್ಲಿಯೇ ಬಿದ್ದುದನ್ನು ನೋಡಿ ಒಬ್ಬ ಅಧಿಕಾರಿ ಎರಡು ಪರ್ಸೆಂಟ್ ಬಿಟ್ಟುಕೊಟ್ಟರೆ ಹಣ ಬಿಡುಗಡೆ ಮಾಡುತ್ತೇನೆ ಎಂದ. ಸುಬ್ಬಣ್ಣ 'ಕೊಡುವುದಿಲ್ಲ' ಎಂದರು. ಎರಡು ವರ್ಷ ಸಾಲ ಸೋಲ ಮಾಡಿ ಸಂಸ್ಥೆ ನಡೆಸಿದರು. ನಂತರ ಹಣ ಬಂತು.

ಈ ಸಾರಿಯ ಶಿಬಿರಕ್ಕೆ ಒಂದು ಮಧ್ಯಾಹ್ನ ಶಿಕ್ಷಣ ಸಚಿವ ಕಿಮ್ಮನೆ ರತ್ನಾಕರ ಬಂದು ಹೋಗುತ್ತಾರೆ ಎಂದು ಸುದ್ದಿ ಬಂತು. ಅವರು ಅದೇ ಜಿಲ್ಲೆಯವರು. ಮಧ್ಯಾಹ್ನ ಊಟದ ಬಿಡುವಿನ ಸಮಯದಲ್ಲಿ ಅವರ ಕಾರು ಬಂತು. ಅವರಿಗೆ ಗೋಷ್ಠಿಯಲ್ಲಿ ಕುಳಿತುಕೊಳ್ಳಲು ವೇಳೆ ಇರಲಿಲ್ಲ. ಇರಬೇಕಿತ್ತು ಅಂದುಕೊಂಡೆ. ಅವರು ಹೊರಟು ನಿಂತಾಗ “ನಿಮ್ಮ ಜತೆಗೆ ಮಾತನಾಡಬೇಕು' ಎಂದೆ. ಅವರೇ ನನ್ನ ಕೈ ಹಿಡಿದು ಆಚೆ ಕರೆದುಕೊಂಡು ಹೋಗಿ 'ಏನು' ಎಂದರು.

'ನೀನಾಸಂ ನಿಮ್ಮ ಜಿಲ್ಲೆಗೆ ಮಾತ್ರವಲ್ಲ, ಇಡೀ ನಾಡಿಗೆ, ದೇಶಕ್ಕೆ ಹೆಮ್ಮೆ ಎನಿಸುವಂಥ ಸಂಸ್ಥೆ, ತುಂಬ ಕಟ್ಟು ನಿಟ್ಟಾಗಿ, ಪ್ರಾಮಾಣಿಕವಾಗಿ ಅವರು ಸಂಸ್ಥೆಯನ್ನು ನಡೆಸಿಕೊಂಡು ಹೊರಟಿದ್ದಾರೆ. ಇಡೀ ಜಗತ್ತಿನ ಗಮನವನ್ನು ಸೆಳೆಯುವಂಥ ಕೆಲಸವನ್ನು ಅವರು ಇಲ್ಲಿ ಮಾಡಿದ್ದಾರೆ. ಇಲ್ಲಿಯವರೆಗೆ ಬಂದು ನೀವು ಅಕ್ಷರ ಅವರಿಗೆ ಏನಾದರೂ ಸಹಾಯ ಬೇಕೇ ಎಂದು ಕೇಳದೆ ಹೋದರೆ ಹೇಗೆ' ಎಂದೆ. ಅದನ್ನು ಅಕ್ಷರ ಒಪ್ಪಿಕೊಳ್ಳದೇ ಇರಬಹುದು. ಅವರನ್ನು ಕೇಳಿ ನೋಡಿ' ಎಂದೂ ಸೇರಿಸಿದೆ.

ಯಾರಾದರೂ ಮಂತ್ರಿಗಳು ಬಂದರೆ ಅವರನ್ನು ಓಲೈಸಲು ಸಾವಿರ ಮಂದಿ ನಿಂತಿರುತ್ತಾರೆ. ನನ್ನ ಕಣ್ಣ ಮುಂದೆಯೇ ಗೋಷ್ಠಿಗಳ ಸಂಚಾಲಕ ಟಿ.ಪಿ.ಅಶೋಕ ಮತ್ತು ಅಕ್ಷರ 'ಕಾರ್ಯಕ್ರಮಕ್ಕೆ ತಡವಾಗುತ್ತದೆ' ಎಂದು ಮಂತ್ರಿಗೆ ವಿದಾಯ ಹೇಳಿ ಅದು ನಡೆಯುವ ಕಟ್ಟಡಕ್ಕೆ ಹೊರಟೇ ಹೋಗಿದ್ದರು!

ಕಿಮ್ಮನೆ ನನ್ನ ಕೈ ಹಿಡಿದುಕೊಂಡು, 'ಬನ್ನಿ ಅಕ್ಷರ ಅವರ ಜತೆಗೆ ಮಾತನಾಡೋಣ' ಎಂದು ಗೋಷ್ಠಿಗಳು ನಡೆಯುತ್ತಿದ್ದ ಕಟ್ಟಡದವರೆಗೆ ನಡೆದು ಬಂದರು. ಅಕ್ಷರ ತಾವೇ ನಿರ್ದೇಶಿಸಿದ ಪುಟ್ಟ ನಾಟಕದ ಪ್ರದರ್ಶನಕ್ಕೆ ಸಿದ್ಧತೆ ಮಾಡುತ್ತಿದ್ದರು. ಅವರಿಬ್ಬರೂ ಮಾತನಾಡಿದರು. ಅವರಿಬ್ಬರೇ ಮಾತನಾಡಲಿ ಎಂದು ದೂರ ನಿಂತಿದ್ದ ನನ್ನನ್ನು ಸಚಿವರೇ ಹತ್ತಿರ ಕರೆದರು.



ಅಕ್ಷರ ಏನು ಕೇಳಿದರು, ಕಿಮ್ಮನೆ ಏನು ಹೇಳಿದರು ಎನ್ನುವುದು ಮುಖ್ಯವಲ್ಲ. ಅದು ಅವರಿಬ್ಬರ ನಡುವೆ ನಡೆದ ಮಾತು. ಆದರೆ, ಸರ್ಕಾರದ ಬಳಿ ಬರುವವರು, ಕೈ ಒಡ್ಡಿ ಕೇಳುವವರು ಬಹಳ ಮಂದಿ ಇರುತ್ತಾರೆ. ಆದರೆ, ಸರ್ಕಾರವೇ ಕೆಲವರ ಹತ್ತಿರ ಹೋಗಬೇಕಾಗುತ್ತದೆ. ನಿಮಗೆ ಏನು ಬೇಕು ಎಂದು ಕೇಳಬೇಕಾಗುತ್ತದೆ. ಅವರು ಕೇಳಿದ್ದನ್ನು ಮಾಡಿಕೊಡುವುದು ತನ್ನ ಕರ್ತವ್ಯ ಎಂದು ಭಾವಿಸಬೇಕಾಗುತ್ತದೆ. ಹೆಗ್ಗೋಡಿನ ನೀನಾಸಂ ಅಂಥ ಒಂದು ಸಂಸ್ಥೆ. ಕಿಮ್ಮನೆ ಅವರಂಥ ಸರಳ ಸಚಿವರಿಗೆ ಇದು ಅರ್ಥವಾಗುತ್ತದೆ ಎಂದು

20-10-2013

# ಬೇಕಿರುವುದು...

# ತಬರನ ಕಥೆಗೆ ಕೊನೆಯೇ ಇಲ್ಲ...

ಮತ್ತೆ 'ತಬರನ ಕಥೆ' ನೆನಪಾಯಿತು. ಆತನಿಗೂ ಹೀಗೆಯೇ ಆಗಿತ್ತು. ಆತ ಹೆಚ್ಚಿನದೇನನ್ನೂ ಕೇಳಿರಲಿಲ್ಲ. ಕೇವಲ ತನ್ನ ಪಿಂಚಣಿ ಹಣ ಕೊಡಿ ಎಂದು ಸರ್ಕಾರಕ್ಕೆ ಎಡತಾಕಿದ್ದ. ಆತ ಲಂಚ ತೆಗೆದುಕೊಳ್ಳುತ್ತಿರಲಿಲ್ಲ. ಸರ್ಕಾರಕ್ಕೆ ಮೋಸವನ್ನೂ ಮಾಡಿರಲಿಲ್ಲ. ಪ್ಲಾಂಟರ್‌ಗಳು ಕಟ್ಟಬೇಕಾದ ತೆರಿಗೆ ಸಂಗ್ರಹ ಮಾಡಿಲ್ಲ ಎಂದು ಅವನ ಮೇಲೆ ಆರೋಪ ಇತ್ತು. ಮೇಲಧಿಕಾರಿಗಳು ಆತನ ಪಿಂಚಣಿ ಹಿಡಿದುಕೊಂಡಿದ್ದರು. ಹೆಂಡತಿಗೆ ಗ್ಯಾಂಗ್ರಿನ್ ಕಾಯಿಲೆ. ಖರ್ಚಿಗೆ ಕೈಯಲ್ಲಿ ಹಣವಿಲ್ಲ. ಆತ ಸರ್ಕಾರದ ಕಂಬ ಕಂಬ ಸುತ್ತಿದ. ಪಿಂಚಣಿ ಮಂಜೂರು ಆಗಲೇ ಇಲ್ಲ. ಅಲ್ಲಿಗೆ ದೇಶಕ್ಕೆ ಸ್ವಾತಂತ್ರ್ಯ ಬಂದು ಇಪ್ಪತ್ತೈದು ವರ್ಷ ತುಂಬಿತು. ಸ್ವಾತಂತ್ರ್ಯದ ಬೆಳ್ಳಿ ಹಬ್ಬದ ಆಚರಣೆಗೆ ದೇಣಿಗೆ ಕೊಟ್ಟರೆ ಪಿಂಚಣಿ ಕೊಡುತ್ತೇವೆ. ಎಂದಿತು ಸರ್ಕಾರ, ತಬರ ಇಡೀ ಪಿಂಚಣಿಯನ್ನೇ ಸರ್ಕಾರಕ್ಕೆ ಬರೆದುಕೊಟ್ಟು ನಿಮಗೆ ಧಿಕ್ಕಾರ ಇರಲಿ' ಎಂದು ಹೇಳಿ ಹೊರಟು ಬಂದ. ಇದು ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಅವರ ಕಥೆ.

ಜೀವನ ಕಥೆಗಿಂತ ಕಠೋರವಾಗಿರುತ್ತದೆ. ಈ ತಿಂಗಳು ಒಂದನೇ ತಾರೀಖು ಗಂಗಯ್ಯ ಎಂಬ ಎಂಬತ್ತರ ಆಸುಪಾಸಿನ ವೃದ್ಧ ರಾಮನಗರದ ವಿಧಾನಸೌಧ ಕಟ್ಟಡದ ಎರಡನೇ ಮಹಡಿಯಿಂದ ಹಾರಿ ಬಿದ್ದು ಸರ್ಕಾರಕ್ಕೆ ಜೀವ ಕೊಟ್ಟರು. ಅವರ ಬೇಡಿಕೆ ದೊಡ್ಡದೇನೂ ಇರಲಿಲ್ಲ. ಅವರೂ ಹದಿನೈದು ವರ್ಷಗಳಿಂದ ರಾಮನಗರದ ಸರ್ಕಾರಿ ಕಚೇರಿಗೆ ಅಲೆದಿದ್ದರು. ತನ್ನ 27 ಗುಂಟೆ ಜಮೀನನ್ನು ತನ್ನ ದಾಯಾದಿ ಅತಿಕ್ರಮಿಸಿಕೊಂಡಿದ್ದು ಅದನ್ನು ಬಿಡಿಸಿಕೊಡಬೇಕು ಎಂದು ಅವರು ಕೇಳಿದ್ದರು. ಅವರೇನೂ ಸರ್ಕಾರದ ಗಂಟು ಕೇಳಿರಲಿಲ್ಲ.

'ತಬರನ ಕಥೆ'ಯಲ್ಲಿನ ಹಾಗೆಯೇ ಇಲ್ಲಿಯೂ ಸರ್ಕಾರದ ಅಧಿಕಾರಿ, ಕಡತಗಳ ಮಧ್ಯೆ ಕಳೆದು ಹೋಗಿದ್ದಾನೆ. ತಾನು ಮಾತ್ರ ಕಳೆದು ಹೋಗಿಲ್ಲ. ಮನುಷ್ಯತ್ವವನ್ನೂ ಕಳೆದುಕೊಂಡು

ಬಿಟ್ಟಿದ್ದಾನೆ. ಆತನಿಗೆ ಜನರ ಕೆಲಸ ಮಾಡಿಕೊಡದಿರುವುದು ಹೇಗೆ ಎಂದು ಗೊತ್ತಿದೆ, ಹೇಗೆ ಸತಾಯಿಸಬೇಕು ಎಂದು ಗೊತ್ತಿದೆ. ಹೇಗೆ, ಎಷ್ಟು ಬೇಗ ಕೆಲಸ ಮಾಡಿಕೊಡಬೇಕು ಎಂದು ಆತನಿಗೆ ಗೊತ್ತಿಲ್ಲ. ಅದು ಅವನ ಜಾಯಮಾನದಲ್ಲಿಯೇ ಬಂದಿಲ್ಲ. ಗಂಗಯ್ಯ ಶ್ರೀಮಂತರೇನೂ ಅಲ್ಲ. ಊರಿನ ಶಿವನ ದೇವಾಲಯದಲ್ಲಿ ಅರ್ಚಕರಾಗಿ ಕೆಲಸ ಮಾಡುತ್ತಿದ್ದರು. ಒಬ್ಬ ಹೆಂಡತಿ. ಎರಡು ಮಕ್ಕಳು. ಅವರು ಆಗಿನ ಕಾಲದಲ್ಲಿಯೇ ಎಸ್ಸೆಸ್ಸೆಲ್ಸಿ ವರೆಗೆ ಓದಿದ್ದರು. ಅವರಿಗೆ ಲಂಚ ಕೊಡಬಾರದು ಎಂದು ಹಟ. ತನ್ನದು ನ್ಯಾಯವಾದ ಬೇಡಿಕೆ. ಎಲ್ಲ ದಾಖಲೆಗಳೂ ತನ್ನ ಪರವಾಗಿಯೇ ಇರುವಾಗ ಲಂಚ ಏಕೆ ಕೊಡಬೇಕು ಎಂದು ಪ್ರಶ್ನೆ, ಸರ್ಕಾರ ಹೆಚ್ಚೇನೂ ಮಾಡಬೇಕಿರಲಿಲ್ಲ. ಒಬ್ಬ ಸರ್ವೇಯರ್‌ನನ್ನು ಹೊಲಕ್ಕೆ ಕಳಿಸಿ ಮೋಜಣಿ ಮಾಡಿ ಹೊಲದ ಯಾವ ಭಾಗ ಯಾರದು ಎಂದು ಹೇಳಿ ಬಂದಿದ್ದರೆ ಸಾಕಿತ್ತು. ಅದನ್ನು ಮಾಡಲೂ ಹತ್ತು ವರ್ಷಗಳೇ ಬೇಕಾದುವು. ಆದರೂ ದಾಯಾದಿ, ಜಮೀನಿನ ಸ್ವಾಧೀನ ಬಿಟ್ಟು ಕೊಡಲಿಲ್ಲ. ಮತ್ತೆ ಗಂಗಯ್ಯ ಸರ್ಕಾರದ ಮೊರೆ ಹೊಕ್ಕರು. ಜಮೀನು ಬಿಡಿಸಿ ಕೊಡುವುದು ತನ್ನ ಕೆಲಸ ಅಲ್ಲ ಎಂದಿತು ಸರ್ಕಾರ. ಯಾರ ಕೆಲಸ ಎಂದು ಹೇಳಲಿಲ್ಲ. ಮತ್ತೆ ಐದು ವರ್ಷಗಳು ಕಳೆದು ಹೋದುವು.

ತನ್ನ ಕೆಲಸಕ್ಕೆ ಹೀಗೆ ಪಟ್ಟು ಹಿಡಿದು ಬಂದು ತಮ್ಮ ಮೇಜಿನ ಮುಂದೆ ಬಂದು ನಿಲ್ಲುವ ವ್ಯಕ್ತಿಯನ್ನು ಸರ್ಕಾರ, ಕಥೆಗಳಲ್ಲಿ ಮಾತ್ರ ನೋಡಿತ್ತು. ನಿಜ ಜೀವನದಲ್ಲಿ ನೋಡಿರಲಿಲ್ಲ. ಹಾಗಾದರೆ ಈತ ಹುಚ್ಚನೇ ಇರಬೇಕು ಎಂದು ತೀರ್ಮಾನ ಮಾಡಿತು. ಗಂಗಯ್ಯ ನಿಮ್ಹಾನ್ಸಿಗೆ ದಾಖಲೂ ಆಗಬೇಕಾಯಿತು. ತಬರನಿಗೂ ಹೀಗೆಯೇ ಆಯಿತು. ಅತನನ್ನೂ 'ಹುಚ್ಚ' ಎಂದು ಸರ್ಕಾರ ಹೇಳಿತು. ಸರ್ಕಾರದ ಕಚೇರಿಯ ಕಂಬ ಕಂಬಗಳನ್ನು ಹೀಗೆಯೇ ಸುತ್ತುತ್ತ ಇದ್ದರೆ ಯಾರಿಗಾದರೂ ಹುಚ್ಚು ಹಿಡಿಯುತ್ತದೆ. ಗಂಗಯ್ಯ ಪಟ್ಟು ಬಿಡಲಿಲ್ಲ. ತನ್ನ ದೈನೇಸಿ ಮೊರೆಗೆ ಸರ್ಕಾರ ಬಗ್ಗಲಿಲ್ಲ ಎಂದು ತಿಳಿದು ಒಂದು ದಿನ ವಿಧಾನಸೌಧದಲ್ಲಿಯೇ ಚಾಕು ತೆಗೆದುಕೊಂಡು ಕೈಯ ನರ ಕತ್ತರಿಸಿಕೊಂಡರು. 'ನೀವು ನನ್ನ ಕೆಲಸ ಮಾಡಿಕೊಡದೇ ಇದ್ದರೆ ನಾನು ಸತ್ತು ಬಿಡುತ್ತೇನೆ' ಎಂದು ಹೆದರಿಸಿದ್ದರು. ಸರ್ಕಾರಕ್ಕೆ ಯಾರ ಹೆದರಿಕೆ? ಹೃದಯ ಎನ್ನುವುದು ಇದ್ದರೆ ಹೆದರಿಕೆ, ಅಳುಕು ಇರುತ್ತದೆ. ಯಾವನಾದರೂ ಒಬ್ಬ ಮನುಷ್ಯ ಎನ್ನುವಂಥವನು ಅಲ್ಲಿ ಇದ್ದಿದ್ದರೆ, ಕುರ್ಚಿ ಬಿಟ್ಟು ಎದ್ದು ಬಂದು ಗಂಗಯ್ಯನವರ ಜಮೀನನ್ನು ಅವರಿಗೆ ಬಿಡಿಸಿ ಕೊಟ್ಟಿದ್ದರೆ ಜೀವನದಲ್ಲಿ ಒಂದು ಒಳ್ಳೆಯ ಕೆಲಸ ಮಾಡಿದೆ ಎಂದು ಆತನಿಗೆ ಅನಿಸುತ್ತಿತ್ತೋ ಏನೋ? ಈಗ ಗಂಗಯ್ಯ ಸತ್ತೇ ಹೋದರು. ಅವರು ಸತ್ತ ಮೇಲೆ ಸರ್ಕಾರ ಅವರ ಕೆಲಸ ಮಾಡಿಕೊಟ್ಟಿತು. ಏನು ಪ್ರಯೋಜನ? ಸತ್ತ ಗಂಗಯ್ಯನನ್ನು ಅವರ ಕುಟುಂಬ ಎಲ್ಲಿ ಹುಡುಕಬೇಕು? ಈಗ ಗಂಗಯ್ಯನ ಸಾವಿಗೆ ಸರ್ಕಾರಿ ವೈದ್ಯಾಧಿಕಾರಿಗಳ ನಿರ್ಲಕ್ಷ್ಯವೇ ಕಾರಣ ಎಂದು ರಾಮನಗರದ ವಿಧಾನಸೌಧ ಬೆಂಗಳೂರಿನ ವಿಧಾನಸೌಧಕ್ಕೆ ಪತ್ರ ಬರೆದಿದೆ... ನನ್ನ ಸರ್ಕಾರ ಬಂದರೆ ಇವರ ಚರ್ಮ ಸುಲಿಸುತ್ತೇನೆ' ಎಂದಿದ್ದಾರೆ ಕುಮಾರಸ್ವಾಮಿ!

ಎಲ್ಲ ಜಿಲ್ಲೆಯಲ್ಲಿ ಒಬ್ಬ ಜಿಲ್ಲಾಧಿಕಾರಿ ಇರುತ್ತಾರೆ. ಅವರ ಅಡಿಯಲ್ಲಿ ನಲವತ್ತು ಇಲಾಖೆಗಳು ಬರುತ್ತವೆ. ಜಿಲ್ಲೆಯ ಕುಂದುಕೊರತೆ ಅಧಿಕಾರಿ ಕೂಡ ಅವರೇ ಆಗಿರುತ್ತಾರೆ.

ತಾವೇ ಶಿಸ್ತುಕ್ರಮ ತೆಗೆದುಕೊಳ್ಳಲು ಆಗದ ಲೋಕೋಪಯೋಗಿ ಇಲಾಖೆಯಂಥ ಇಲಾಖೆಗಳ ಕುಂದುಕೊರತೆ ಕೂಡ ಅವರು ಕೇಳಬಹುದು; 'ಪರಿಹಾರ ಕೊಡಿ' ಎಂದು ಸೂಚಿಸಬಹುದು. ಗಂಗಯ್ಯನವರ ಕುಂದುಕೊರತೆ ಜಿಲ್ಲಾಧಿಕಾರಿ ಮುಂದೆ ಬರಲೇ ಇಲ್ಲವೇ? ಅದು ಕಂದಾಯ ಇಲಾಖೆಯದೇ ಕುಂದುಕೊರತೆ ಆಗಿತ್ತಲ್ಲವೇ? ಗಂಗಯ್ಯ ಬರೀ ಗ್ರಾಮಲೆಕ್ಕಿಗನಿಂದ ಹಿಡಿದು ಜಿಲ್ಲಾಧಿಕಾರಿ ವರೆಗೆ ಮಾತ್ರವಲ್ಲ ಮುಖ್ಯಮಂತ್ರಿಗಳಿಗೂ ಪತ್ರ ಬರೆದಿದ್ದರು. ಮುಖ್ಯಮಂತ್ರಿಗಳ ಕಚೇರಿಯಲ್ಲಿಯೂ ಒಂದು ಕುಂದುಕೊರತೆ ಘಟಕ ಇರುತ್ತದೆಯಲ್ಲ? ಹಾಗಾದರೆ ಸ್ವತಃ ಮುಖ್ಯಮಂತ್ರಿಗಳು ಜನತಾದರ್ಶನದಲ್ಲಿ ತೆಗೆದುಕೊಂಡ ಮನವಿಗಳ ಕಥೆ ಏನಾಗುತ್ತದೆ? ಅದೆಲ್ಲ ಬರೀ ತೋರಿಕೆಯೇ? ಸರ್ಕಾರದ ಆಡಳಿತ ಹೀಗೇಕೆ ಆಯಿತು? ಪ್ರಶ್ನೆಗೆ ಉತ್ತರ ಕಷ್ಟವೇನೂ ಕಷ್ಟವೇನೂ ಅಲ್ಲ. ಆಡಳಿತ ಯಂತ್ರವನ್ನು ಸರಿಪಡಿಸಬೇಕಾದವರೇ, ಬಿಗಿ ಮಾಡಬೇಕಾದವರೇ ಹಾಳು ಮಾಡಿದರು. ಅಧಿಕಾರಿಗಳು ಶಾಸಕರ, ಮಂತ್ರಿಗಳ, ಮರಿ ಪುಢಾರಿಗಳ ಮರ್ಜಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರು ಜನರ ಮರ್ಜಿಯಲ್ಲಿ ಇಲ್ಲ. ಏಕೆಂದರೆ ಜನರ ಮರ್ಜಿಗೆ ಅನುಸಾರವಾಗಿ ಯಾವ ಅಧಿಕಾ- ರಿಯ ವರ್ಗವೂ ಆಗುವುದಿಲ್ಲ. ವರ್ಗ ಮಾಡುವಾಗ 'ಸಾರ್ವಜನಿಕ ಅಗತ್ಯಕ್ಕೆ ಅನುಸಾರವಾಗಿ' ಎಂಬ ಷರಾ ಮಾತ್ರ ಇರುತ್ತದೆ. ಅದಕ್ಕೆ ಅರ್ಥವೇನೂ ಉಳಿದಿಲ್ಲ.

ಅಧಿಕಾರಿಗಳ ವರ್ಗಾವಣೆಯ ಕಾರಣ ಯಾರಿಗೆ ಗೊತ್ತಿಲ್ಲ? ಯಾವ ಜಿಲ್ಲೆಯ ಜಿಲ್ಲಾಧಿಕಾರಿ ಹುದ್ದೆಗೆ ಎಷ್ಟು ಹಣ ಎಂದು ನಿಗದಿಯೇ ಆಗಿಬಿಟ್ಟಿದೆಯಲ್ಲ? ಬೆಂಗಳೂರು ನಗರದಲ್ಲಿ ಮತ್ತು ಸುತ್ತಮುತ್ತ ಜಿಲ್ಲಾಧಿಕಾರಿ ಆಗುವುದಕ್ಕೆ ಅವರ ಕೆಳಗಿನ ಉಪ ವಿಭಾಗಾಧಿಕಾರಿ ಆಗುವುದಕ್ಕೆ ಎಷ್ಟು ಹಣ ಕೊಡಬೇಕು ಎಂದು ಕೇಳಿಬಿಟ್ಟರೆ ಎದೆ ಒಡೆದು ಹೋಗುತ್ತದೆ. ನೌಕರಿ ಹಿಡಿಯುವಾಗಲೂ ದುಡ್ಡು ಕೊಡಬೇಕು. ನೇಮಕ ಆಗುವಾಗಲೂ ದುಡ್ಡು ಕೊಡಬೇಕು. ಆ ದುಡ್ಡನ್ನು ಹೇಗೆ ಮರಳಿ ಗಳಿಸಬೇಕು ಎಂದು ಲೆಕ್ಕ ಹಾಕುತ್ತ ಇರುವ ಅಧಿಕಾರಿಗೆ ಜನರ ಸೇವೆ ಮಾಡುವ ಕಡೆಗೆ ಎಲ್ಲಿ ಗಮನ ಇರುತ್ತದೆ? ಮೇಲಿನ ಅಧಿಕಾರಿಗಳ ಹಾಗೆ ಕೆಳಗಿನ ಅಧಿಕಾರಿಗಳೂ ಶಕ್ತಾನುಸಾರ ಹಣ ಕೊಟ್ಟೇ ಬಂದಿರುತ್ತಾರೆ. ಇದು ಆಡಳಿತ ವ್ಯವಸ್ಥೆಯಲ್ಲಿನ ಶ್ರೇಣೀಕರಣವನ್ನೇ ಕೆಡಿಸಿಬಿಟ್ಟಿದೆ. ಎಲ್ಲರಿಗೂ ಒಬ್ಬನೇ 'ಮೇಲಧಿಕಾರಿ' : ಅವನು ದುಡ್ಡು ಇಸಿದುಕೊಂಡು ವರ್ಗ ಮಾಡಿಸಿದವನು. ಅವನಿಗೇ ಅವರವರ ನಿಷ್ಠೆ. ಕಚೇರಿಯ ಮೇಲಧಿಕಾರಿಯ ಹಿಡಿತ ಹೋಗಿಯೇ ಬಿಟ್ಟಿದೆ.

ಎಲ್ಲ ಕಡೆಯೂ ಹೀಗೆಯೇ ಇರುವುದಿಲ್ಲ. ಒಬ್ಬ ಒಳ್ಳೆಯ ಜಿಲ್ಲಾಧಿಕಾರಿ ಬಂದರೆ ಆಡಳಿತ ನೆಟ್ಟಗೆ ಆಗಿ ಬಿಡಬಹುದು. ಆದರೆ, ಆತ ಕನಿಷ್ಠ ಮೂರು ವರ್ಷವಾದರೂ ಆ ಹುದ್ದೆಯಲ್ಲಿ ಇರಲು ಸರ್ಕಾರ ಬಿಡಬೇಕು. ಉನ್ನತ ಪೊಲೀಸ್ ಅಧಿಕಾರಿಗಳು ಕನಿಷ್ಠ ಮೂರು ವರ್ಷವಾದರೂ ಆ ಹುದ್ದೆಯಲ್ಲಿ ಇರಬೇಕು ಎಂದು ಸುಪ್ರೀಂ ಕೋರ್ಟು ಕೊಟ್ಟ ಆದೇಶವನ್ನೇ ನಮ್ಮ ಸರ್ಕಾರಗಳು ಪಾಲಿಸಿಲ್ಲ. ಒಬ್ಬ ಜಿಲ್ಲಾಧಿಕಾರಿ ಒಂದಿಷ್ಟು ಒಳ್ಳೆಯ ಕೆಲಸ ಮಾಡಲು ಆರಂಭಿಸಿದ ತಕ್ಷಣವೇ ಮುಖ್ಯಮಂತ್ರಿಯ ಬಳಿ ಜಿಲ್ಲೆಯ ಸಚಿವರು, ಶಾಸಕರು, ಹಿತಾಸಕ್ತರು ಮತ್ತು ಭೂಗಳ್ಳರು ಓಡಿ ಬರುತ್ತಾರೆ. ಮುಖ್ಯಮಂತ್ರಿ ಜಿಲ್ಲಾಧಿಕಾರಿಗೆ ಫೋನು

ಮಾಡುತ್ತಾರೆ : 'ನೀವು ಒಳ್ಳೆಯ ಕೆಲಸ ಮಾಡುತ್ತಿದ್ದೀರಿ. ಆದರೆ, ನಾನು ಅಲ್ಲಿ ನಿಮ್ಮನ್ನು ಇಡಲಾರೆ!' ಮರುದಿನ ವರ್ಗ ಆಗುತ್ತದೆ. ವರ್ಗ ಮಾಡಿಸಿದ ಮಂತ್ರಿಗಳು, ಶಾಸಕರು, ಹಿತಾಸಕ್ತರು ಮತ್ತು ಭೂಗಳ್ಳರು, ಅಥವಾ ಎಲ್ಲವೂ ಒಬ್ಬರೇ ಆಗಿರುವವರು ಕೇಕೆ ಹಾಕುತ್ತಾರೆ. ಇನ್ನೊಬ್ಬ ಒಳ್ಳೆಯ ಜಿಲ್ಲಾಧಿಕಾರಿ ಅಲ್ಲಿ ಬರಲು ಹೇಗೆ ಸಾಧ್ಯ? ಅವನಿಗೂ ಮಕ್ಕಳು ಇರುತ್ತಾರೆ. ಹೆಂಡತಿ ಇರುತ್ತಾಳೆ. ಮೂರು ಮೂರು ತಿಂಗಳಿಗೆ ಒಮ್ಮೆ ವರ್ಗ ಆಗುತ್ತಿದ್ದರೆ ಅವರೇನು ಸುಮ್ಮನೆ ಇರುತ್ತಾರೆಯೇ? ಪ್ರಾಮಾಣಿಕತೆ ಎನ್ನುವುದು ನಿಷ್ಪ್ರಯೋಜಕ ಮತ್ತು ಪ್ರಾಮಾಣಿಕರಿಗೆ ಮೂರು ತಿಂಗಳಿಗೆ ಒಮ್ಮೆ ವರ್ಗ ಗ್ಯಾರಂಟಿ ಎಂದು ಸರ್ಕಾರ ನಿತ್ಯ ಪಾಠ ಹೇಳುತ್ತ ಇದ್ದರೆ ಯಾರಾದರೂ ಪ್ರಾಮಾಣಿಕರು ಆಗಿರಲು ಏಕೆ ತೊಂದರೆ ತೆಗೆದುಕೊಳ್ಳುತ್ತಾರೆ? ಅಥವಾ ಇಂಥ 'ತೊಂದರೆ' ತೆಗೆದುಕೊಳ್ಳುವವರ ಸಂಖ್ಯೆ ಕಡಿಮೆ ಆಗುತ್ತ ಹೋಗುತ್ತದೆ. ಆಮೇಲೆ ಸರ್ಕಾರ, 'ಬೇವು ಬಿತ್ತಿ ಮಾವು ಬೆಳೆಯುತ್ತೇವೆ' ಎಂದು ಹೇಳಿದರೆ ಯಾರು ನಂಬುತ್ತಾರೆ?

ನಾವು ಕಥೆ ಪುಸ್ತಕಗಳಿಂದ ಪಾಠ ಕಲಿಯುವುದಿಲ್ಲ. ಇತಿಹಾಸದಿಂದಲೂ ಪಾಠ ಕಲಿಯುವುದಿಲ್ಲ. ಗಂಗಯ್ಯ ಹೀಗೆ ವಿಧಾನಸೌಧದಿಂದ ಹಾರಿ ಜೀವ ಕೊಟ್ಟ ಮೊದಲಿಗರೇನೂ ಅಲ್ಲ. 'ಪ್ರಜಾವಾಣಿ'ಯ 50 ವರ್ಷಗಳ ಹಿಂದಿನ ಕಡತದಲ್ಲಿ ಇಂಥದೇ ಇನ್ನೊಂದು ಕಥೆ ಇದೆ. ಅದೂ ಮಾರ್ಚ್ ತಿಂಗಳಲ್ಲಿಯೇ ಆಗಿದೆ. ಆದಿಮೂಲಂ ಎಂಬ ಒಬ್ಬ ವ್ಯಕ್ತಿ 1963ರ ಮಾರ್ಚ್ ನಾಲ್ಕನೇ ತಾರೀಖು ವಿಧಾನಸೌಧದ ಮೂರನೇ ಮಹಡಿಯಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡರು. ನಮ್ಮ ಆ ದಿನದ ಸಂಚಿಕೆಯ ಪ್ರಕಾರ 'ಆದಿಮೂಲಂ ಅವರ ಕೆಲಸವನ್ನೂ ಆಗಿನ ಅಧಿಕಾರಿಗಳು ಮಾಡಿಕೊಟ್ಟಿರಲಿಲ್ಲ. ಅದರಿಂದಲೇ ಬೇಸತ್ತು ಅವರು ಆತ್ಮಹತ್ಯೆ ಮಾಡಿಕೊಂಡರು. ಆ ಸುದ್ದಿಗೆ 'ಯಜ್ಞಪಶು?' ಎಂದು ನಮ್ಮ ಹಿರಿಯರು ಶೀರ್ಷಿಕೆ ಕೊಟ್ಟಿದ್ದಾರೆ. ಸರ್ಕಾರ ಎಚ್ಚೆತ್ತುಕೊಳ್ಳಲು ಇನ್ನೂ ಎಷ್ಟು 'ಯಜ್ಞಪಶು'ಗಳು ಬೇಕು?

10.03.2013

# ನಿಸರ್ಗಕ್ಕೆ ಮಾತ್ರ ಏಕೆ ದಯೆ ಇರಬೇಕು?

ನಿಸರ್ಗ ಸೇಡು ತೀರಿಸಿಕೊಳ್ಳುವುದು ಎಂದರೆ ಹೀಗೆಯೇ ಇರಬೇಕು. ಅದಕ್ಕೆ ಯಾವ ಕರುಣೆಯೂ ಇರುವುದಿಲ್ಲ. ಅದು ಕಾದು ಕಾದು ಬಲಿಗಳನ್ನು ತೆಗೆದುಕೊಳ್ಳುತ್ತದೆ. ಬಲಿಯಾಗುವುದು ಯಾರದಾದರೂ ಸ್ವಂತ ಮಗನೋ, ಬೇರೆಯವರ ಮಗನೋ ಎಂದೂ ಅದಕ್ಕೆ ಗೊತ್ತಾಗುವುದಿಲ್ಲ. ಆರು ವರ್ಷದ ತಿಮ್ಮಣ್ಣ ಈಗ ಬಲಿಯಾಗಿದ್ದಾನೆ. ಆತ ನಮ್ಮ ತೀರದ ದಾಹಕ್ಕೆ ಬಲಿಯಾಗಿದ್ದಾನೆ. ಏಳು ಎಕರೆ ಭೂಮಿಯಲ್ಲಿ ಎಷ್ಟು ಕೊಳವೆ ಬಾವಿಗಳನ್ನು ಕೊರೆಯಬಹುದು ಎಂಬ ಕನಿಷ್ಠ ಜ್ಞಾನವೂ ನಮಗೆ ಇಲ್ಲ. ಒಟ್ಟು ನಿಸರ್ಗವನ್ನು ಬಗೆಯಬೇಕು, ಅದರ ಒಳಗಿನ ಜೀವಜಲವನ್ನೆಲ್ಲ ಹೊರಗೆ ಹಾಕಬೇಕು; ಬೆಳೆ ಬೆಳೆಯಬೇಕು ಎಂಬುದಷ್ಟೇ ನಮಗೆ ಗೊತ್ತಿದ್ದಂತೆ ಕಾಣುತ್ತದೆ. ಅದರಲ್ಲಿ ತಿಮ್ಮಣ್ಣನ ಅಪ್ಪ ಹಣಮಪ್ಪನ ತಪ್ಪೇನು ಎಂದರೆ ಉತ್ತರ ಕೊಡುವುದು ಕಷ್ಟ. ಇದು ಹಣಮಪ್ಪ ಎಂಬ ರೈತನ ದಾಹ ಮಾತ್ರವಲ್ಲ. ಎಲ್ಲ ರೈತರೂ ಇದೇ ದಾಹಕ್ಕೆ ಬಲಿಯಾಗಿದ್ದಾರೆ. ಹಾಗೆಂದು ಎಲ್ಲ ರೈತರೂ ತಪ್ಪು ಮಾಡುತ್ತಿದ್ದಾರೆಯೇ ಎಂದರೆ ಅದಕ್ಕೂ ಉತ್ತರ ಹೇಳುವುದು ಕಷ್ಟ ಬರೀ ಮಳೆಯನ್ನು ನೆಚ್ಚಿಕೊಂಡರೆ ತನ್ನ ಹೊಲದಲ್ಲಿ ಹುಲ್ಲು ಕಡ್ಡಿಯನ್ನೂ ಬೆಳೆಯುವುದು ಕಷ್ಟ ಎಂದು ಅಂಥ ಎಲ್ಲ ಒಣಭೂಮಿ ರೈತರಿಗೆ ಅನಿಸುತ್ತಿರಬಹುದು. ಒಂದೋ ಎರಡೋ ಕೊಳವೆ ಬಾವಿ ತೋಡಿದರೆ ಜೀವನೋಪಾಯಕ್ಕೆ ಏನಾದರೂ ಆದೀತು ಎಂದೂ ಅವರು ಅಂದುಕೊಂಡಿರಬಹುದು. ಸರ್ಕಾರಗಳು ದೊಡ್ಡ ದೊಡ್ಡ ಅಣೆಕಟ್ಟೆಗಳನ್ನು ಕಟ್ಟಿಯೂ ಕೇವಲ ಶೇಕಡ ಇಪ್ಪತ್ತರಷ್ಟು ಜಮೀನಿಗೆ ಮಾತ್ರ ನೀರಾವರಿ ಸೌಲಭ್ಯ ಕೊಟ್ಟರೆ ಉಳಿದವರು ಏನು ಮಾಡಬೇಕು? ಆದರೆ, ನಿಸರ್ಗಕ್ಕೆ ಇದೆಲ್ಲ ಗೊತ್ತಿರಬೇಕು ಎಂದು ನಾವು ಅಂದುಕೊಳ್ಳಲು ಆಗುವುದಿಲ್ಲ. ಅದು ಹೇಗೆ ಮತ್ತು ಯಾವ ರೀತಿ ಸೇಡು ತೀರಿಸಿಕೊಳ್ಳುತ್ತದೆ ಎಂದು ಊಹಿಸುವುದು ಕಷ್ಟ.

ತಿಮ್ಮಣ್ಣನ ರಕ್ಷಣಾ ಕಾರ್ಯ ಅತ್ತ ನಡೆಯುತ್ತಿದ್ದಾಗ ಇತ್ತ ನನ್ನ ಬಾಲ್ಯದ ದಿನಗಳೆಲ್ಲ ಕಾಡತೊಡಗಿದುವು. ನೆನಪುಗಳೇ ಹಾಗೆ, ಅದಕ್ಕೆ ಸಂಬಂಧ, ತರ್ಕ ಅಂತೆಲ್ಲ ಇರುತ್ತದೆ ಎಂದು ಇಲ್ಲ. ನಮ್ಮ ಊರಿನಲ್ಲಿ ಒಂದೇ ಒಂದು ಕೊಳವೆ ಬಾವಿ ಇರಲಿಲ್ಲ. ಇದ್ದುವು ಎಲ್ಲ ತೆರೆದ ಬಾವಿಗಳು, ಗಡಗಡೆ ಬಾವಿ ಎಂದು ಅವುಗಳಿಗೆ ಹೆಸರು. ಕೊಡಕ್ಕೆ ಹಗ್ಗ ಕಟ್ಟಿ ನೀರು ತರಬೇಕಿತ್ತು. ಅಲ್ಲಿಗೇ ಹೋಗಿ ನಾವು ನೀರು ತರುತ್ತಿದ್ದೆವು. ನಮ್ಮ ಓಣಿಯ ಶ್ರೀಮಂತರೊಬ್ಬರು ತಮ್ಮ ಮನೆಯ ಪಕ್ಕದಲ್ಲಿಯೇ ಮತ್ತೊಂದು ತೆರೆದ ಬಾವಿ ನಿರ್ಮಿಸಿದರು. ನಿರ್ಮಲವಾದಂಥ ತಿಳಿ ಜಲ. ಎಲ್ಲರೂ ಹಗ್ಗ ಕಟ್ಟಿ ನೀರು ಸೇದುತ್ತಿದ್ದೆವು. ಹೆಗಲು ಬಲಿಷ್ಠವಾಗಿದ್ದರೆ ಎರಡೂ ಹೆಗಲ ಮೇಲೆ ಒಂದೊಂದು ಕೊಡ ಹೊತ್ತುಕೊಂಡು ಮನೆಗೆ ತಂದು ನೀರು ಸಂಗ್ರಹಿಸುತ್ತಿದ್ದೆವು. ಪುರಸಭೆಯವರು ಆಗಾಗ ಕ್ಲೋರಿನೇಟ್ ಮಾಡಿ ನೀರನ್ನು ಶುದ್ಧೀಕರಿಸುತ್ತಿದ್ದರು. ಹೆಣ್ಣು ಮಕ್ಕಳು ಕಂಕುಳಲ್ಲಿ ಒಂದು ತಲೆಯ ಮೇಲೆ ಇನ್ನೊಂದು ಕೊಡ ಹೊತ್ತುಕೊಂಡು ನೀರು ಒಯ್ಯುತ್ತಿದ್ದರು. ಅವರವರ ರಟ್ಟೆಯ ಬಲಕ್ಕೆ ತಕ್ಕಂತೆ ಕೊಡಗಳು ದೊಡ್ಡವಾಗುತ್ತಿದ್ದುವು. ಎರಡೂ ಹೆಗಲ ಮೇಲಿನ ಕೊಡಗಳಿಗೆ ಹಗ್ಗದ ಕುಣಿಕೆ ಹಾಕಿ ಅವು ಬೀಳದಂತೆ ನೋಡಿಕೊಳ್ಳುತ್ತಿದ್ದೆವು. ಊರಿನ ಅಂಚಿನಲ್ಲಿ ಒಂದು ದೊಡ್ಡ ಕೆರೆ ಇತ್ತು. ಅದು ಮಳೆಗಾಲದಲ್ಲಿ ಸದಾ ತುಂಬಿಕೊಂಡು ಇರುತ್ತಿತ್ತು. ಅದರ ಪಕ್ಕದಲ್ಲಿಯೇ ಒಂದು ಸಣ್ಣ ಕೆರೆ ಇತ್ತು. ಯಾರೋ ಪುಣ್ಯಾತ್ಮರು ಯಾವಾಗಲೋ ಎರಡನ್ನೂ ಕಟ್ಟಿಸಿದ್ದರು. ಎರಡೂ ಕೆರೆ ತುಂಬಿದ ನಂತರ ನೀರು ಕೋಡಿ ಹರಿಯುತ್ತಿತ್ತು. ಹಳ್ಳಿಗಳ ಹೊಲಗಳಲ್ಲಿಯೂ ಇಂಥದೇ ಬಾವಿಗಳು ಇದ್ದುವು. ಬಾವಿಗಳಿಂದ ಮಟ್ಟಿಗಳಲ್ಲಿ ನೀರು ಎಳೆದು ಹೊಲಗಳಿಗೆ ಬಿಡುತ್ತಿದ್ದರು. ನದಿಗಳ ಪಕ್ಕದ ಊರುಗಳಿಗಂತೂ ಇನ್ನೂ ದೊಡ್ಡ ಸಂಭ್ರಮ. ಕೊಡಗಳಲ್ಲಿ ಎಷ್ಟು ನೀರು ತುಂಬಿಕೊಂಡರೂ ಹರಿಯುವ ನದಿಯ ಮಟ್ಟ ಇಳಿಯುತ್ತಿರಲಿಲ್ಲ. ಕುಡಿಯುವ ನೀರಿನ ಬಾವಿಗಳ ಹಾಗೆ ಈಜು ಹೊಡೆಯುವ ಬಾವಿಗಳೂ ಇದ್ದುವು. ಯಾವ ಬಾವಿಯೂ ಬತ್ತಿದ್ದು ನನಗೆ ನೆನಪ ಇಲ್ಲ. ಕೊಳವೆ ಬಾವಿಗಳಿಂದ ನೀರು ತಂದ ನೆನಪೂ ನನ್ನ ಬಾಲ್ಯದ ಜತೆಗೆ ತಳಕು ಹಾಕಿಕೊಂಡಿಲ್ಲ.

ಕೊಳವೆ ಬಾವಿಗಳನ್ನು ತೋಡುವುದು, ಮನೆ ಮನೆಗೆ ನೀರು ಪೂರೈಸುವುದು ಎಂಬತ್ತರ ದಶಕದ ವಿದ್ಯಮಾನ; ರಾಜ್ಯದಲ್ಲಿ ಜನತಾ ಪಕ್ಷದ ಸರ್ಕಾರ ಬಂದು ಅಬ್ದುಲ್ ನಜೀರ್ ಸಾಬರು ಗ್ರಾಮೀಣಾಭಿವೃದ್ಧಿ ಸಚಿವರಾದ ನಂತರದ ವಿದ್ಯಮಾನ. ನಗರಗಳಲ್ಲಿನ ಹಾಗೆ ಹಳ್ಳಿಗಳಲ್ಲಿಯೂ ಜನರು ನಲ್ಲಿಯ ನೀರನ್ನು ಕುಡಿಯಬೇಕು ಎಂಬುದು ಅವರ ಕನಸಾಗಿತ್ತು. ಎಲ್ಲೆಲ್ಲಿ ಕುಡಿಯುವ ನೀರಿನ ಸಮಸ್ಯೆ ಇತ್ತೋ ಅಲ್ಲೆಲ್ಲ ಅವರ ಇಲಾಖೆಯಿಂದ ಕೊಳವೆ ಬಾವಿ ಕೊರೆದರು. ಮನೆ ಮನೆಗೆ ತಲುಪಿಸುವ ಪ್ರಯತ್ನ ಮಾಡಿದರು. ಅವರಿಗೆ ಜನರು ಪ್ರೀತಿಯಿಂದ 'ನೀರುಸಾಬ್' ಎಂದು ಕರೆದರು. ನಜೀರ್ ಸಾಹೇಬರು ಜನರ ಕುಡಿಯುವ ನೀರಿನ ಸಮಸ್ಯೆಗೆ ಕಂಡುಕೊಂಡ ಪರಿಹಾರ ಬೇರೆ ಉದ್ದೇಶಕ್ಕೂ ಅಥವಾ ದುರುದ್ದೇಶಕ್ಕೂ ಬಳಕೆಯಾಯಿತು. ಊರಿನಲ್ಲಿ ಕುಡಿಯುವ ನೀರಿಗೆ ಕೊರೆದ ಬಾವಿಗಳಲ್ಲಿ ಉಕ್ಕಿ ಹರಿದ ನೀರನ್ನು ನೋಡಿ ಜನರು ಹೊಲಗಳಲ್ಲಿ ಕೊಳವೆ ಬಾವಿಗಳನ್ನು ಕೊರೆದರು. ಉದ್ಯಮಿಗಳು ತಮ್ಮ ಕಾರ್ಖಾನೆಗಳ ಆವರಣದಲ್ಲಿ ಬಾವಿ ಕೊರೆದರು. ಮನೆ ಕಟ್ಟುವವರು ಬಾವಿ ಕೊರೆದರು. ಯಾರಿಗೆ ನೀರು ಬೇಕೋ ಅವರು ಕೊಳವೆ

ಬಾವಿ ಕೊರೆಯುವುದು ಒಂದೇ ಪರಿಹಾರ ಎಂದುಕೊಂಡರು. ಸರ್ಕಾರಗಳೂ ಹಾಗೆಯೇ ಭಾವಿಸಿದುವು. ನೀರು ಬೇಕೇ? ಕೊಳವೆ ಬಾವಿ ಕೊರೆಯಿರಿ ಎಂದರು ಅಧಿಕಾರದಲ್ಲಿ ಇದ್ದವರು. ಈಗಲೂ ಅವರು ಅದನ್ನೇ ಹೇಳುವುದು.

ಯಾವ ಭಯವೂ ಇಲ್ಲದ ರಿಗ್ಗಿಂಗ್ ಯಂತ್ರಗಳಿಗೆ ಭೂಮಿಯ ಮೇಲೆ ಕರುಣೆಯೇ ಇರಲಿಲ್ಲ. ಕೊರೆದದ್ದೇ ಕೊರೆದದ್ದು. ಯಾವುದಕ್ಕೂ ನಿಯಮ ಎಂದು ಇರಲಿಲ್ಲ, ನಿರ್ಬಂಧ ಎಂದು ಇರಲಿಲ್ಲ. ಇದಿದ್ದರೆ ಹಣಮಪ್ಪ ತಮ್ಮ ಏಳು ಎಕರೆ ಹೊಲದಲ್ಲಿ ಒಂಬತ್ತು ಕೊಳವೆ ಬಾವಿ ಕೊರೆಯುತ್ತಿರಲಿಲ್ಲ!

ನಿಯಮಗಳು ಇರಲಿಲ್ಲವೇ? ಇದ್ದುವು. ಆದರೆ, ಅವುಗಳನ್ನು ಉಲ್ಲಂಘಿಸಿದರೆ ಯಾವ ಕಠಿಣ ಕ್ರಮವೂ ಇರಲಿಲ್ಲ. ಈಗಲೂ ಐವತ್ತು ರೂಪಾಯಿ ಕೊಟ್ಟು ಅನುಮತಿ ತೆಗೆದುಕೊಂಡು ಕೊಳವೆ ಬಾವಿ ತೋಡಬಹುದು ಎಂದೇ ನಿಯಮ ಇದೆ. ಒಂದು ಬಾವಿಯಲ್ಲಿ ನೀರು ಬರಲಿಲ್ಲವೇ, ಇನ್ನೊಂದು ಬಾವಿ ತೋಡು, ಮತ್ತೊಂದು ತೋಡು; ಮಗದೊಂದು ತೋಡು. ಕರ್ನಾಟಕ ಅಂತರ್ಜಲಕ್ಕೆ ಸಮೃದ್ಧವಾದ ನಾಡೇನೂ ಅಲ್ಲ. ರಾಜಸ್ತಾನ ಬಿಟ್ಟರೆ ಅತಿ ಹೆಚ್ಚು ಬರಡುಭೂಮಿ ಇರುವ ರಾಜ್ಯ ನಮ್ಮದು. ಕೊಳವೆ ಬಾವಿ ತೋಡಿ ತೋಡಿ ಇನ್ನೂ ಬರಡು ಮಾಡಿದ್ದೇವೆ.

ಈಗ ಯಾರೂ ತೆರೆದ ಬಾವಿಗಳಿಂದ ನೀರು ತರುವುದಿಲ್ಲ. ಎಲ್ಲ ಊರಿನ ಎಲ್ಲ ತೆರೆದ ಬಾವಿಗಳಲ್ಲಿ ನಾವೇ ಕಸ, ಕಲ್ಲು, ಚಪ್ಪಲಿ, ಮಣ್ಣು ಹಾಕಿ ತುಂಬಿಬಿಟ್ಟಿದ್ದೇವೆ. ಕೆರೆಗಳು ಬತ್ತಿ ಹೋಗಿವೆ. ಅದರಲ್ಲಿ ಹೂಳು ತುಂಬಿಕೊಂಡಿದೆ. ಆ ಜಲಮೂಲಗಳಿಗೆ ಮತ್ತೆ ಎಂದಾದರೂ ಜೀವ ಬಂದೀತು ಎಂದು ಅನಿಸುತ್ತಿಲ್ಲ. ಅಂತರ್ಜಲವನ್ನು ಹೀಗೆಲ್ಲ ಬೇಕಾಬಿಟ್ಟಿ ಬಗೆದರೆ ಅನಾಹುತ ಆಗಬಹುದು ಎಂದು ಭೂ ವಿಜ್ಞಾನಿಗಳಿಗೆ ಗೊತ್ತಿತ್ತು. 1970ರ ದಶಕದಲ್ಲಿ ಭೂವಿಜ್ಞಾನ ಮತ್ತು ಗಣಿ ಇಲಾಖೆಯ ನಿರ್ದೇಶಕರಾಗಿದ್ದ ಬಿ.ಪಿ.ರಾಧಾಕೃಷ್ಣ ಸರ್ಕಾರಕ್ಕೆ ಎಚ್ಚರಿಕೆ ಕೊಟ್ಟಿದ್ದರು. 250 ಅಡಿಗಿಂತ ಹೆಚ್ಚು ಆಳದ ಕೊಳವೆ ಬಾವಿ ಕೊರೆಯಬಾರದು ಎಂದಿದ್ದರು. ನಾವೇನಿದ್ದರೂ 'ಅಸಲು ಬಳಸಬಾರದು. 'ಬಡ್ಡಿ'ಯನ್ನು ಮಾತ್ರ ಬಳಸಬೇಕು. 'ಅಸಲ'ನ್ನು ಮುಂದಿನ ತಲೆಮಾರಿಗೆ ಬಿಡಬೇಕು ಎಂದೂ ಅವರೇ ಹೇಳಿದ್ದರು. ಈಗ 250 ಅಡಿ ಕೊರೆದರೆ ಯಾವ ಬಾವಿಯಲ್ಲಿ ನೀರು ಸಿಗುತ್ತದೆ? ಸಾವಿರ ಅಡಿ ಕೊರೆದರೂ ನೀರು ಸಿಗುತ್ತದೆಯೇ? ಕೋಲಾರ ಜಿಲ್ಲೆಯೇ ಜೀವಂತ ಉದಾಹರಣೆ ಇದೆಯಲ್ಲ? ನಾವು ಅಂತರ್ಜಲವನ್ನು ಎಷ್ಟು ಬಗೆದು ಬಿಟ್ಟಿದ್ದೇವೆ ಎಂದರೆ ಬಡ್ಡಿಯಲ್ಲ ಅಸಲೂ ಖಾಲಿಯಾಗಿದೆ. ಅದು ನಾವು ಇಟ್ಟ ಅಸಲು ಅಲ್ಲ. ನಮ್ಮ ಮುಂದಿನ ತಲೆಮಾರುಗಳಿಗೆ ಎಂದು ನಿಸರ್ಗ ಕಾದಿರಿಸಿದ್ದ ಅಸಲನ್ನೂ ಖಾಲಿ ಮಾಡಿದ್ದೇವೆ.

ರಾಜಕೀಯ ನಾಯಕರಿಗೆ ದೂರದೃಷ್ಟಿ ಎಂದು ಇರುವುದಿಲ್ಲ. ಅವರು ತಕ್ಷಣದ ಜನಪ್ರಿಯತೆಯನ್ನು ಮಾತ್ರ ನೋಡುತ್ತಾರೆ. ರಾಧಾಕೃಷ್ಣ ಎಚ್ಚರಿಕೆ ಕೊಟ್ಟು ನಾಲ್ಕು ದಶಕಗಳೇ ಕಳೆದಿವೆ. ಅಂತರ್ಜಲವನ್ನು ಪಾತಾಳಕ್ಕೆ ಕಳಿಸಿದ್ದೇವೆ. ಈಗಲೂ ನಾವು ಎಚ್ಚೆತ್ತುಕೊಂಡಿದ್ದೇವೆ. ಎಂದು ಅನಿಸುವುದಿಲ್ಲ. ಕಳೆದ ವಾರ ಉಡುಪಿಗೆ ಹೋಗಿದ್ದೆ. ಒಂದೇ ತಿಂಗಳಲ್ಲಿ ಅಲ್ಲಿ

ಸಾವಿರಕ್ಕೂ ಹೆಚ್ಚು ಸೆಂಟಿಮೀಟರ್ ಮಳೆ ಬಿದಿದ್ದೆ. ಇದು ಉಡುಪಿಯ ಮಾತು ಮಾತ್ರ ಅಲ್ಲ. ಇಡೀ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೀಗೆಯೇ ಮಳೆ ಬೀಳುತ್ತದೆ. ಆ ನೀರನ್ನು ಅದೇ ಊರಿನಲ್ಲಿ ಇಟ್ಟುಕೊಳ್ಳಲು ನಾವು ಯಾವ ಪ್ರಯತ್ನವನ್ನೂ ಮಾಡಿಲ್ಲ. ನೀರು ಹರಿದು ಸಮುದ್ರ ಸೇರುತ್ತದೆ. ಇದು ಇನ್ನೊಂದು ಅತಿರೇಕ. ಸಾಗರಕ್ಕೇನೂ ನೀರಿನ ಕೊರತೆ ಇರುವುದಿಲ್ಲ. ಆದರೆ, ನಮಗೆ ಅದು ಅರ್ಥವಾಗುವುದಿಲ್ಲ. ಅಷ್ಟು ಮಳೆ ಬೀಳುವ ಕರಾವಳಿ ಜಿಲ್ಲೆಗಳಲ್ಲಿ ಕೊಳವೆ ಬಾವಿಗಳಿಗೇನು ಕೊರತೆ ಇದೆಯೇ?

ನಾವು ಭೂಮಿಯಿಂದ ನೀರನ್ನು ಬಗೆಯುತ್ತೇವೆ. ಇನ್ನೊಂದು ಕಡೆಯಿಂದ ತುಂಬುವ ಕೆಲಸವನ್ನೂ ಮಾಡಬೇಕು. ಈಗ ಕೊರೆದ, ಆದರೆ ನೀರು ಇಲ್ಲದ ಕೊಳವೆ ಬಾವಿಗಳಿಗೇ ಮತ್ತೆ ಮಳೆ ನೀರು ಹರಿಯುವಂತೆ ಮಾಡಬಹುದು. ಆದರೆ, ಮನುಷ್ಯ ಎಷ್ಟು ನಿರ್ದಯಿ ಆಗಿದ್ದಾನೆ ಎಂದರೆ ಆತ ಆ ಬಾವಿಗಳನ್ನು ಹಾಗೆಯೇ ಬಿಟ್ಟು ಬಿಟ್ಟಿದ್ದಾನೆ. ಈಗ ಅವು ಜೀವಗಳ ಬಲಿ ಕೇಳುತ್ತಿವೆ. ಒಣಗಿರುವ ಬಾವಿಗಳಲ್ಲಿ ನಾವು ನೀರು ತುಂಬಿದ್ದರೆ ಅವು ಜೀವಗಳ ಬಲಿ ಕೇಳುತ್ತಿರಲಿಲ್ಲವೇನೋ? ಬಿಜೆಪಿಯವರೂ ಈಗ ಅವುಗಳನ್ನು ಮುಚ್ಚುತ್ತೇವೆ. ಎಂದು ಅಭಿಯಾನ ಹೊರಟಿದ್ದಾರೆ! ಯಾರಿಗೂ ಸಕಾರಾತ್ಮಕ ಯೋಚನೆಗಳು ಬರುವಂತೆಯೇ ಕಾಣುವುದಿಲ್ಲ. ಹಾಗಿದ್ದ ಮೇಲೆ ನಿಸರ್ಗಕ್ಕೆ ಮಾತ್ರ ದಯೆ ಇರಬೇಕು ಎಂದು ಏಕೆ ಬಯಸಬೇಕು?

10.08.2014

# ನಿಸರ್ಗವೇ ನಮಗೆ ಉತ್ತರ

# ಕೊಡುತ್ತಿರಬಹುದೇ?

ಆತನ ಹೆಸರು ತಿರಕಪ್ಪ, ಬಾದಾಮಿ ಆಸುಪಾಸಿನಲ್ಲಿ ವಾಸವಾಗಿದ್ದ. ಆತನ ನಿಜವಾದ ಊರು, ಕುಲ, ಗೋತ್ರ ಏನೇನೂ ಗೊತ್ತಿಲ್ಲ. ಎರಡನೇ ಮಹಾಯುದ್ಧದಲ್ಲಿ ಭಾಗವಹಿಸಿದ್ದ. ಸಮರಭೂಮಿಯಲ್ಲಿ ಎಡಗಾಲು ಕಳೆದುಕೊಂಡ. ವಿಲಾಯತಿ ಸರ್ಕಾರದಿಂದ ಆತನಿಗೆ ಒಂದಿಷ್ಟು ಹಣ ಬರುತ್ತಿತ್ತು. ಕೆಲಸ ಮಾಡದೇ ಸರ್ಕಾರದ ಹಣ ತಿನ್ನಬಾರದು ಎಂದು ಯೋಚಿಸಿದ. ಬಾದಾಮಿ ಪಟ್ಟಣದ ಸುತ್ತಮುತ್ತ ಐವತ್ತು ಕಿಲೋಮೀಟರ್ ಫಾಸಲೆಯಲ್ಲಿ ಒಂದೇ ಕಾಲಿನಲ್ಲಿ ಕುಂಟುತ್ತ ರಸ್ತೆಯ ಎರಡೂ ಬದಿ ಬೇವು, ಮಾವು, ಆಲ, ಹುಣಸೆ ಮರ ನೆಟ್ಟ. ತಾನೇ ದಿನಾಲೂ ಹೋಗಿ ನೀರು ಹಾಕಿದ. ಆತ ಹಾಗೆ ನೆಟ್ಟ ಮರಗಳ ಸಂಖ್ಯೆ ಮೂರು ಸಾವಿರಕ್ಕೂ ಹೆಚ್ಚು. ಬಾದಾಮಿಯ ರೈಲು ನಿಲ್ದಾಣದಲ್ಲಿ ಇಳಿದು ಹೊರಗೆ ಬಂದರೆ ರಸ್ತೆಯ ಎರಡೂ ಬದಿಯಲ್ಲಿ ಹಚ್ಚ ಹಸಿರು ಗಿಡಗಳು ಇಡೀ ಊರಿಗೇ ತೋರಣ ಕಟ್ಟಿದಂತೆ ಬಳುಕುತ್ತ ನಿಂತಿರುತ್ತಿದ್ದುವು. ತನ್ನ ಊರಿನ ಬನಶಂಕರಿಯನ್ನು, ಮೇಣದ ಬೆಟ್ಟದ ಗುಹೆಗಳನ್ನು ನೋಡಲು ಬರುವವರಿಗೆ ಬಿಸಿಲು ತಾಗಬಾರದು ಎಂದು ಆತ ಅಂದುಕೊಂಡಿದ್ದನೇ? ಬಾದಾಮಿಗೆ ಯಾವ ಊರಿನಿಂದ ಬಂದರೂ ಊರು ಇನ್ನೂ ದೂರ ಇರುವಾಗಲೇ ನೆರಳು ಶುರುವಾಗುತ್ತಿತ್ತು. ತಿರಕಪ್ಪ ಯಾವಾಗ ಸತ್ತು ಹೋದನೋ ಗೊತ್ತಿಲ್ಲ. ಆತನ ಮಕ್ಕಳು ಮರಿಗಳು ಯಾರಿದ್ದಾರೋ, ಎಲ್ಲಿದ್ದಾರೋ ಅದೂ ಗೊತ್ತಿಲ್ಲ. ಆದರೆ, ಆತ ಅರವತ್ತು ವರ್ಷಗಳ ಹಿಂದೆಯೇ ಮೂರನೇ ತರಗತಿ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕದ ಪಾಠವಾಗಿದ್ದ, ಆಗೆಲ್ಲ, ಈಗಿನ ಹಾಗೆ ಪರಿಸರದ ಕಾಳಜಿ ಇನ್ನೂ ಹುಟ್ಟಿಕೊಂಡಿರಲಿಲ್ಲ! ತಿರಕಪ್ಪ ಬಾದಾಮಿಯ ಆಸುಪಾಸಿನಲ್ಲಿ ಒಂದು ದಂತ ಕಥೆ.

ತಿರಕಪ್ಪ ನನ್ನ ನೆನಪಿನ ಕೋಶ ಸೇರಿಕೊಂಡದ್ದು ನಾನು ಏಳು ಅಥವಾ ಎಂಟನೇ ತರಗತಿ ವಿದ್ಯಾರ್ಥಿ ಆಗಿದ್ದಾಗ, ನನ್ನ ಊರು ಮುದ್ದೇಬಿಹಾಳದಿಂದ ನನ್ನ ಅಕ್ಕನ ಊರು ರಾಮದುರ್ಗಕ್ಕೆ ಹೋಗಬೇಕಿದ್ದರೆ ಬಾದಾಮಿ ರೈಲು ನಿಲ್ದಾಣಕ್ಕೆ ಬರಲೇಬೇಕಿತ್ತು. ರೈಲು ನಿಲ್ದಾಣದಿಂದ ಕುದುರೆ ಟಾಂಗಾ ಹಿಡಿದು ಬಸ್ ನಿಲ್ದಾಣಕ್ಕೆ ಬರಬೇಕಿತ್ತು. ಟಾಂಗಾ ಚಾಲಕ ನನಗೆ ತಿರಕಪ್ಪನ ಕಥೆ ಹೇಳಿದ್ದ. ಇದಾಗಿ ನಲವತ್ತೈದು ವರ್ಷಗಳೇ ಕಳೆದು ಹೋಗಿವೆ. ಒಬ್ಬ ಕಾಲಿಲ್ಲದ ಮನುಷ್ಯ ಅದು ಹೇಗೆ ಮೂರು ಸಾವಿರ ಗಿಡ ನೆಟ್ಟ ಅವುಗಳಿಗೆಲ್ಲ ಹೇಗೆ ನೀರು ಹಾಕಿದ. ಗಿಡವಾಗಿ ನೆಟ್ಟುದು ಮರವಾಗಿ ಬೆಳೆದು ನಿಲ್ಲುವ ವರೆಗೆ ಅವುಗಳಿಗೆ ಹೇಗೆ ರಕ್ಷಣೆ ಕೊಟ್ಟ? ಎಲ್ಲವೂ ಒಂದು ಕಥೆ. ಸಮಾಜ ತನಗೆ ಕೊಟ್ಟುದನ್ನು ಮತ್ತೆ ಸಮಾಜಕ್ಕೆ ಕೊಡಬೇಕು ಎಂದು ಅಷ್ಟೇನು ಶಾಲೆ ಕಲಿಯದ ಆತನಿಗೆ ಹೇಗೆ ತಿಳಿಯಿತು? ಪ್ರಶ್ನೆಗಳು ಕಾಡುತ್ತಲೇ ಇದ್ದುವು. ಮತ್ತೆ ಅನೇಕ ಸಾರಿ ಬಾದಾಮಿಗೆ ಹೋಗಿದ್ದೇನೆ. ತಿರಕಪ್ಪ ಮತ್ತೆ ಮತ್ತೆ ಕಾಡುತ್ತಲೇ ಇದ್ದ.

ಗಿಡಗಳನ್ನು ನೆಟ್ಟ ತಿರಕಪ್ಪ ಈಗ ಮತ್ತೆ ಕಾಡುತ್ತಿದ್ದಾನೆ; ಈಗ ಆತನ ಆತ್ಮ ಏನು ಅಂದುಕೊಳ್ಳುತ್ತಿರಬಹುದು ಎಂದು. ಆತ ನೆಟ್ಟ ಎಲ್ಲ ಮರಗಳನ್ನು ರಾಜ್ಯ ಹೆದ್ದಾರಿ ಇಲಾಖೆಯವರು ಬುಡ ಮಟ್ಟ ಕತ್ತರಿಸಿ ಹಾಕಿದ್ದಾರೆ. ಈಗ ನೀವು ಬಾದಾಮಿಗೆ ಹೋದರೆ ಬನಶಂಕರಿ ದೇವಸ್ಥಾನಕ್ಕೆ ಹೋಗುವ ರಸ್ತೆಯ ಬದಿ ಬಿಟ್ಟರೆ ಉಳಿದ ಎಲ್ಲಿಯೂ ಒಂದೇ ಒಂದು ಮರ ಕಾಣುವುದಿಲ್ಲ. ಅದರ ಮೇಲೆ ಕುಳಿತುಕೊಳ್ಳುತ್ತಿದ್ದ ಸಾವಿರಾರು ಮಂಗಗಳು ಬಿಸಿಲು ಉಕ್ಕಿಸುವ ಬೆಟ್ಟದ ಸಂದಿಗೊಂದಿಗಳಲ್ಲಿ ಇಲ್ಲವೇ, ಜನರ ಮನೆಯ ಮಾಡುಗಳಲ್ಲಿ ರಕ್ಷಣೆ ಪಡೆದುಕೊಳ್ಳುತ್ತಿವೆ. ಗಿಣಿ, ರತ್ನಪಕ್ಷಿ, ಕಾಗೆ, ಗೂಗೆಗಳು ಎಲ್ಲಿ ಹೋದುವೋ?

ಸವದತ್ತಿಯಿಂದ ಐಹೊಳೆಗೆ ಬಾದಾಮಿ ಮೂಲಕ ನಿರ್ಮಿಸಲಿರುವ ಈ ರಸ್ತೆ ಪ್ರವಾಸಿ ತಾಣಗಳನ್ನು ಕೂಡಿಸುವ ಉದ್ದೇಶದ್ದು. ತಿರಕಪ್ಪ ರಸ್ತೆಯ ಎರಡೂ ಬದಿಯಲ್ಲಿ ಸಾಕಷ್ಟು ಜಾಗವನ್ನು ಬಿಟ್ಟೇ ಗಿಡಗಳನ್ನು ನೆಟ್ಟಿದ್ದ. ಆದರೆ, ವಿಸ್ತರಣೆಯ ಹುಚ್ಚಿನ ನಮ್ಮ ಅಧಿಕಾರಿಗಳಿಗೆ ಯಾವುದನ್ನು ತೆಗೆಯಬೇಕು, ಯಾವುದನ್ನು ತೆಗೆಯಬಾರದು ಎಂಬ ವಿವೇಚನೆಯೇ ಇಲ್ಲ ಎನಿಸುತ್ತದೆ. ಹೈಕೋರ್ಟಿಗೆ ಹೋಗಿ ಎಂದೂ ರಿಟ್ ಸಲ್ಲಿಸದ ಮರಗಳನ್ನು ಅಧಿಕಾರಿಗಳು ಯಾವಾಗ ಬೇಕಾದಾಗ ಕತ್ತರಿಸಿ ಹಾಕಬಹುದಿತ್ತು. ಮೊದಲಾದರೆ ಕೊಡಲಿ ತೆಗೆದುಕೊಂಡು ಬಂದು ದಿನಗಟ್ಟಲೆ ಮರಗಳನ್ನು ಕತ್ತರಿಸಬೇಕಿತ್ತು. ಈಗಲೇನು ಇಡೀ ಬುಡವನ್ನು ಕತ್ತರಿಸಿ ಬಿಡುವ ರಕ್ಕಸ ಗಾತ್ರದ ಗರಗಸಗಳು ಬಂದಿವೆ. ಒಂದು ಸಾರಿ ಬುಡಸಮೇತ ಬಿದ್ದ ಮರದ ರೆಂಬೆ ಕೊಂಬೆಗಳನ್ನು ಕತ್ತರಿಸಿ ಲಾರಿಯಲ್ಲೋ, ಟ್ರ್ಯಾಕ್ಟರಿನಲ್ಲಿಯೋ ಹಾಕಿ ಯಾರಿಗೂ ಕಾಣದಂತೆ ಸಾಗಿಸಿಬಿಡುವುದು ಕ್ಷಣಾರ್ಧದ ಕೆಲಸ. ಮೂರು ಸಾವಿರ ಮರಗಳನ್ನು ಯಾವಾಗ ಕತ್ತರಿಸಿದರೋ, ಹೇಗೆ ಕತ್ತರಿಸಿದರೋ, ಹೇಗೆ ಸಾಗಿಸಿದರೋ ಯಾರಿಗೂ ಗೊತ್ತೇ ಆಗಲಿಲ್ಲ. ಇದೆಲ್ಲ ಆಗಿ ಒಂದು ವರ್ಷ ಆಗುತ್ತ ಬಂತು. ಇನ್ನೂ ಒಂದು ಅಡಿ ರಸ್ತೆ ಕೆಲಸವೂ ಆಗಿಲ್ಲ. ರಸ್ತೆ ನಿರ್ಮಾಣದ ಗುತ್ತಿಗೆ ಹಿಡಿದವನು ಯಾರೋ ಆಂಧ್ರದವರಂತೆ. ಅವರಿಗೆ ಏನೋ ತೊಂದರೆ ಆಯಿತಂತೆ. ಅದಕ್ಕೆ ರಸ್ತೆ ಕೆಲಸ ಆಗಿಲ್ಲವಂತೆ. ಇದೆಲ್ಲ ಅಂತೆ ಕಂತೆ. ಎಷ್ಟು ನಿಜವೋ ಎಷ್ಟು ಸುಳ್ಳೋ ಗೊತ್ತಿಲ್ಲ.

ಆ ಗುತ್ತಿಗೆದಾರ ಮತ್ತೆ ಯಾವಾಗ ಬರುತ್ತಾನೋ? ಅವನ ಸಮಸ್ಯೆ ಯಾವಾಗ ಪರಿಹಾರ ಆಗುತ್ತದೆಯೋ ಗೊತ್ತಿಲ್ಲ. ಆದರೆ, ಇಲಾಖೆಯವರು ಕತ್ತರಿಸಿ ಹಾಕಿದ ಮರಗಳು ಮತ್ತೆ ಬರುತ್ತವೆಯೇ? ಸಾಮಾನ್ಯರ ಹೊಲದಲ್ಲಿನ ಒಂದು ಮರವನ್ನು ಕತ್ತರಿಸಲು ಎಷ್ಟೆಲ್ಲ ಸತಾಯಿಸುವ, ಲಂಚ ಕಕ್ಕದೆ ಅನುಮತಿ ಕೊಡದ ಅರಣ್ಯ ಇಲಾಖೆಯ ಅಧಿಕಾರಿಗಳು ಅದು ಹೇಗೆ ಮೂರು ಸಾವಿರ ಮರಗಳನ್ನು ಕತ್ತರಿಸಲು ಒಪ್ಪಿದರು? ಈಗ ಅರಣ್ಯ ಇಲಾಖೆಯಲ್ಲಿ ಕೆಲಸ ಮಾಡುವ ಎಲ್ಲ ಅಧಿಕಾರಿಗಳು ಸೇರಿಕೊಂಡು ಒಬ್ಬ ತಿರಕಪ್ಪ ಮಾಡಿರುವಂಥ ಒಂದು ಕೆಲಸವನ್ನು ಮಾಡಿರಲು ಸಾಧ್ಯವೇ? ಅಧಿಕಾರಿಗಳಲ್ಲಿ ಇಂಥ ರಾಕ್ಷಸ ಮನೋವೃತ್ತಿ ಬರಲು ಹೇಗೆ ಸಾಧ್ಯ? ಈ ಮರಗಳನ್ನು ಕತ್ತರಿಸದೇ ರಸ್ತೆ ಮಾಡುವುದು ಸಾಧ್ಯವಿಲ್ಲವೇ ಎಂದು ಅವರು ಪರ್ಯಾಯಗಳನ್ನು ಯೋಚಿಸಿದರೇ? ಯಾವುದಾದರೂ ಪಶ್ಚಿಮದ ದೇಶದಲ್ಲಿ ಹೀಗೆ ಮರಗಳನ್ನು ಕತ್ತರಿಸಿ ಹಾಕಲು ಸಾಧ್ಯವಿತ್ತೇ? ಒಂದು ವೇಳೆ ಮರ ಕತ್ತರಿಸಲು ಅಧಿಕಾರಿಗಳು ಹೋಗಿದ್ದರೆ ಅಲ್ಲಿನ ಜನ ಬಿಡುತ್ತಿದ್ದರೇ? ಬಾದಾಮಿಯ ಜನರು ಸುಮ್ಮನಿದ್ದರಂತೆ. ತಲೆಮಾರುಗಳ ಕಾಲ ನೆರಳು ಕೊಟ್ಟ ಮರಗಳನ್ನು ಕತ್ತರಿಸುವುದನ್ನು ನೋಡಿಕೊಂಡು ಅವರು ಹೇಗೆ ಸುಮ್ಮನಿದ್ದರು? ಹತ್ತು ಹದಿನೈದು ಅಡಿ ಅಗಲದ ಬೊಡ್ಡೆಗಳಿಗೆ ಒಬ್ಬರಾದರೂ ತೆಕ್ಕೆ ಬಿದ್ದು ಅವುಗಳನ್ನು ರಕ್ಷಿಸಲು ಮುಂದಾಗಲಿಲ್ಲವಂತೆ. ಅಲ್ಲಿನ ಜನರು ಇದು ಬರೀ ತಮ್ಮ ತಲೆಯ ಮೇಲಿನ ನೆರಳು ಅಂದುಕೊಳ್ಳಬಾರದಿತ್ತು. ಭೂಮಿತಾಯಿಯ ತಲೆಯ ಮೇಲಿನ ನೆರಳು ಅಂದುಕೊಳ್ಳಬೇಕಿತ್ತು. ಮರ ಕತ್ತರಿಸುವುದನ್ನು ನೋಡಿ ಅಲ್ಲಿನ ಯಾವ ತಾಯಿಯ ಕರುಳೂ ಕರಗಲಿಲ್ಲವೇ? ನಮ್ಮ ಜನರಿಗೆ ಏನಾಗಿದೆ? ಸರ್ಕಾರ ಎಷ್ಟು ನಿರ್ಧಯವಾಗಿರುತ್ತದೆ ಎಂದರೆ ಮೂರು ಸಾವಿರ ಮರ ಕತ್ತರಿಸಿ ಹಾಕಿರುವ ಕರ್ನಾಟಕ ರಾಜ್ಯ ಹೆದ್ದಾರಿ ಇಲಾಖೆ ಇನ್ನೂರು ಮರಗಳನ್ನು ನೆಡಲು ಅರಣ್ಯ ಇಲಾಖೆಗೆ ಹಣ ಪಾವತಿ ಮಾಡಿದೆಯಂತೆ. ಮರ ಕತ್ತರಿಸಿ ಹಾಕಲು ಇರುವ ಧಾವಂತ ಗಿಡ ನೆಡಲು ಇರುತ್ತದೆಯೇ? ಯಾರು ಗಿಡ ನೆಡಬೇಕು? ಯಾರು ನೀರು ಹಾಕಬೇಕು? ಅಧಿಕಾರಿಗಳಿಗೆ ಎಷ್ಟೆಲ್ಲ ಕೆಲಸ. ಗಿಡ ನೆಡಲು ಅವರಿಗೆ ಎಲ್ಲಿ ವೇಳೆ? ಇದುವರೆಗೆ ಒಂದೂ ಗಿಡ ನೆಟ್ಟ ನೆನಪು ಊರಿನಲ್ಲಿ ಯಾರಿಗೂ ಇಲ್ಲ.

ಕತ್ತರಿಸಿ ಹಾಕುವವರಿಗೆ ಈ ಊರು ಆ ಊರು ಎಂದು ಭೇದ ಇರುವುದಿಲ್ಲ. ನನ್ನ ಹೆಂಡತಿಯ ಊರು ಮುಧೋಳಕ್ಕೆ ಹೋದಾಗಲೆಲ್ಲ ಮಹಾಲಿಂಗಪುರ ರಸ್ತೆಯಲ್ಲಿ ಬೆಳಿಗ್ಗೆ ಎದ್ದು ವಾಕಿಂಗ್ ಹೋಗುತ್ತಿದ್ದೆ. ಅಲ್ಲಿಯೂ ರಸ್ತೆಯ ಎರಡೂ ಬದಿಯಲ್ಲಿ ಅಗಲ ಬೊಡ್ಡೆಯ ನೂರಾರು ವರ್ಷಗಳ ಬೇವು, ಹುಣಸೆ, ಆಲದ ಮರಗಳು, ಕೆಳಗೆ ಚಾಚಿದ ಒಂದು ಬೇವಿನ ಕೊಲ್ಲೆಯನ್ನು ಇನ್ನಷ್ಟು ಕೆಳಕ್ಕೆ ಎಳೆದುಕೊಂಡು ಒಂದು ಕಡ್ಡಿಯನ್ನು ಕತ್ತರಿಸಿ ಅದನ್ನು ಹಲ್ಲಿನಲ್ಲಿ ಜಗಿದು ಟೂತ್ ಬ್ರಶ್ ಮಾಡಿಕೊಂಡು ಹಲ್ಲು ಉಜ್ಜುತ್ತ ಮನೆಗೆ ಬರುತ್ತಿದ್ದೆ. ಕೆಲವು ತಿಂಗಳ ಹಿಂದೆ ಮತ್ತೆ ಮುಧೋಳಕ್ಕೆ ಹೋದಾಗ ಅಲ್ಲಿಯೂ ಎರಡೂ ಬದಿಯ ಮರಗಳು ನಿರ್ನಾಮ ಆಗಿದ್ದುವು. ನನ್ನ ನೆನಪಿನ ಕೋಶ ಬರಿದಾದಂತೆ ಅನಿಸತೊಡಗಿತು. ಬಾದಾಮಿಯ ಜನರ ಹಾಗೆಯೇ ಮುಧೋಳ ಮಂದಿಯೂ ಮರಗಳನ್ನು ಕತ್ತರಿಸುವಾಗ

ಸುಮ್ಮನೇ ಇದ್ದರಂತೆ. ಯಾರೂ ಗರಗಸಿಗೆ ಅಡ್ಡ ಬಂದು ನಿಲ್ಲಲಿಲ್ಲವಂತೆ. ನಮ್ಮ ಊರಿನಲ್ಲಿ ನಾವು ಬೆಚ್ಚಗೆ ಇದ್ದರೆ ಸಾಕು ಎಂದು ಅವರು ಅಂದುಕೊಂಡರೋ ಏನೋ? ಈ ರಸ್ತೆಯನ್ನೂ ಅದೇ ಆಂಧ್ರಪ್ರದೇಶದ ಗುತ್ತಿಗೆದಾರನೇ ಮಾಡಬೇಕಿತ್ತೋ ಏನೋ? ಅವನಿಗೂ ಇಲಾಖೆಗೂ ಏನೋ ವಿವಾದ. ಇಲ್ಲಿಯೂ ನೂರಾರು ಗಿಡಗಳನ್ನು ಅದೇ ರಕ್ಕಸ ಗಾತ್ರದ ಗರಗಸಗಳು ಕ್ಷಣಾರ್ಧದಲ್ಲಿ ಕುಯ್ದು ತೆಗೆದುಕೊಂಡು ಹೋಗಿ ವರ್ಷವೇ ಆಗುತ್ತ ಬಂದಿದೆ. ಒಂದು ಅಡಿ ರಸ್ತೆ ಕೆಲಸವೂ ಆಗಿಲ್ಲ. ಆರಂಭ ಆಗುವ ಲಕ್ಷಣವೂ ಕಾಣುತ್ತಿಲ್ಲ. ಮರಗಳನ್ನು ಕತ್ತರಿಸಿ ತೆಗೆದುಕೊಂಡು ಹೋಗುವಾಗ ಇರುವ ಆತುರ ರಸ್ತೆ ಮಾಡುವಾಗ ಏಕೆ ಇರುವುದಿಲ್ಲ? ಮೂಕ ಮರಗಳನ್ನು ಬೇಗ ವಿಲೇವಾರಿ ಮಾಡಿಬಿಡಬಹುದು. ಅದರಿಂದ ಬೇಗ ದುಡ್ಡು ಬರುತ್ತದೆ. ರಸ್ತೆ ಮಾಡಬೇಕು ಎಂದರೆ ನೂರೆಂಟು ತಾಪತ್ರಯ. ದುಡ್ಡು ತಡವಾಗಿ ಬರುತ್ತದೆ. ಬೇಗ ದುಡ್ಡು ಬರುವ ಕೆಲಸವನ್ನು ಬೇಗ ಮಾಡಿಬಿಡಬೇಕು! ಹೀಗೆ ಹೇಳುವುದು ಕಠೋರ ಅನಿಸಬಹುದು. ಮತ್ತೆ ಇದನ್ನು ಹೇಗೆ ಅರ್ಥ ಮಾಡುವುದು?

ಅಭಿವೃದ್ಧಿ ಎಂಬುದು ಒಂದು ದ್ವಂದ್ವ, ಒಂದನ್ನು ನಾಶ ಮಾಡದೇ ಇನ್ನೊಂದನ್ನು ಕಟ್ಟಲು ಸಾಧ್ಯವಿಲ್ಲ ಎಂದು ನಾವು ತೀರ್ಮಾನಿಸಿದಂತೆ ಕಾಣುತ್ತದೆ. ಬೆಂಗಳೂರಿನಲ್ಲಿ ಮೆಟ್ರೊ ರೈಲು ಬರುತ್ತಿದೆ. ಬೆವರು ಸುರಿಸಿ ದುಡಿದ ಐವತ್ತು ಲಕ್ಷ ರೂಪಾಯಿ ಖರ್ಚು ಮಾಡಿ ಮನೆ ಕಟ್ಟಿಸಿಕೊಂಡು ಇನ್ನೇನು ಗೃಹಪ್ರವೇಶ ಮಾಡಬೇಕು ಎನ್ನುತ್ತಿದ್ದ ಗೃಹಸ್ಥರೊಬ್ಬರಿಗೆ ನಿಮ್ಮ ಮನೆ ನಮಗೆ ಬೇಕು' ಎಂದು ಮೆಟ್ರೊ ಅಧಿಕಾರಿಗಳು ಹೇಳಿದ್ದನ್ನು ಕೇಳಿ ಅಭಿವೃದ್ಧಿ ನಮ್ಮ ತಲೆಯ ಮೇಲಿನ ಸೂರನ್ನು ಮಾತ್ರವಲ್ಲ ಬಾದಾಮಿ, ಮುಧೋಳದಲ್ಲಿ ಆದ ಹಾಗೆ ಭೂಮಿಯ ಮೇಲಿನ ನೆರಳನ್ನೂ ಕಸಿದುಕೊಂಡು ಬಿಡುತ್ತದೆ ಎಂದು ಅನಿಸಿತು. ಅಭಿವೃದ್ಧಿ ಎಂಬುದು ಅಷ್ಟು ಕ್ರೂರವೇ? ಅದು ಒಂದು ಊರಿನ, ಅಲ್ಲಿನ ಕೆಲವರ ಸಮಸ್ಯೆಯೇ? ಸಮೂಹವಾಗಿ ನಾವು ಏನು ಮಾಡಲು ಸಾಧ್ಯ? ಗಂಗೆ, ಯಮುನೆ ಉಕ್ಕಿ ಹರಿಯುತ್ತಿರುವುದನ್ನು ನೋಡಿದರೆ ನಮ್ಮ ಅಭಿವೃದ್ಧಿಯ ವಿಧಾನಕ್ಕೆ ನಿಸರ್ಗವೇ ಉತ್ತರ ಕೊಡುತ್ತಿದೆ ಎಂದು ಅಂದುಕೊಳ್ಳೋಣವೇ?

23.06.2013

# ಉತ್ತರದಲ್ಲಿ ಉತ್ತರಕ್ಕೆ

# ಕಾಯುತ್ತಿರುವ ಪ್ರಶ್ನೆಗಳು.

ಇದು ಎಂದೆಂದೂ ಮುಗಿಯದ ಕಥೆ. ಮತ್ತೆ ಮತ್ತೆ ಮರುಕಳಿಸುತ್ತಲೇ ಇರುತ್ತದೆ. ಬದುಕುವ ದಾರಿಯನ್ನು ಹುಡುಕಿಕೊಂಡು ಬಂದವರು ಅರ್ಧದಲ್ಲಿಯೇ 'ಯಾತ್ರೆ' ಮುಗಿಸಿ ಹೊರಟು ಹೋಗುತ್ತಾರೆ. ಅವರು ಹಾಗೆ 'ಹೋದರು' ಎಂದು ಮತ್ತೆ ಬರುವವರು ಬಿಡುವುದಿಲ್ಲ. ಮತ್ತೆ ನಗರದ ದಾರಿ ಹಿಡಿಯುತ್ತಾರೆ. ಅಲ್ಲಿ ಅವರಿಗೆ ಬದುಕು ಕಾದಿರುತ್ತದೆಯೇ, ಸಾವು ಕಾದಿರುತ್ತದೆಯೇ ಗೊತ್ತಿಲ್ಲ. ಭವಿಷ್ಯವನ್ನು ಕಂಡವರು ಯಾರು? ಮೊನ್ನೆ ಬೆಂಗಳೂರಿನ ಜಯನಗರದ ಸೋಮೇಶ್ವರನಗರದಲ್ಲಿ, ಕುಸಿದು ಬಿದ್ದ ಕಟ್ಟಡದ ಅಡಿಯಲ್ಲಿ ಸಿಲುಕಿ ಸತ್ತ, ರಾಯಚೂರು ಜಿಲ್ಲೆ ಮಾನ್ವಿ ತಾಲ್ಲೂಕಿನ ಕವಿತಾಳ ಬಳಿಯ ಪುಟ್ಟ ಹಳ್ಳಿಯ ನಾಗಮ್ಮ (45), ಹೀಗೆಯೇ ಬದುಕುವ ದಾರಿ ಹುಡುಕಿಕೊಂಡು ಬಂದಿದ್ದಳು. ಎರಡು ವರ್ಷಗಳ ಹಿಂದೆ ಗಂಡನನ್ನು ಕಳೆದುಕೊಂಡಿದ್ದ ನಾಗಮ್ಮ ಮೂವರು ಹರೆಯದ ಮಕ್ಕಳನ್ನೂ ಜತೆಗೇ ಕರೆತಂದಿದ್ದಳು. ತಾಯಿ ಸತ್ತು ಹೋದಳು ಎಂದು ಹಳ್ಳಿಗೆ ಹೋಗಿ ಹತ್ತು ದಿನ ಅಳುವ ಮಕ್ಕಳು ಮತ್ತೆ ನಗರಕ್ಕೆ ಬರುತ್ತಾರೆ. ಇಲ್ಲಿಯ ಬದುಕೇ ಅವರಿಗೆ ಲೇಸು ಅನಿಸುತ್ತದೆ. ಅವರನ್ನು ಅವರ ಊರಿನಲ್ಲಿಯೇ ಉಳಿಸಲು ಸಾಧ್ಯವಿಲ್ಲವೇ?

ಇಲ್ಲ. ಅವರು ಅವರ ಊರಿನಲ್ಲಿ ಇರಲು ಸಾಧ್ಯವಿಲ್ಲ. ಅಲ್ಲಿ ಜೀವನೋಪಾಯದ ದಾರಿಗಳೇ ಉಳಿದಿಲ್ಲ. ಮಾನ್ವಿ ತಾಲ್ಲೂಕು ತುಂಗಭದ್ರಾ ನೀರಾವರಿ ಯೋಜನೆಯ ಕೊನೆಯ ಅಂಚು, ಕಾಲುವೆಯಲ್ಲಿ ಬಿಟ್ಟ ನೀರು ಕೊನೆಯ ವರೆಗೂ ಹರಿದು ಬರುವುದಿಲ್ಲ. ಮೇಲಿನವರೇ ಹಿಡಿದು ನಿಲ್ಲಿಸುತ್ತಾರೆ. ಕೆಳಗಿನವರು ತಮ್ಮ ಜಿಲ್ಲೆಯ ಜನರೇ ಎಂದು ಅವರಿಗೆ ಗೊತ್ತಿಲ್ಲ. ಅವರೂ ತಮ್ಮ ಅಣ್ಣತಮ್ಮಂದಿರೇ ಎಂದು ಅವರಿಗೆ ನೆನಪಿಲ್ಲ. ಹರಿದು ಬಂದ

ಜಿನುಗು ನೀರಿನಲ್ಲಿ ಹಾಗೂ ಹೀಗೂ ಒಂದು ಭತ್ತದ ಬೆಳೆ ಬರುತ್ತದೆ. ಭತ್ತ ನಾಟಿ ಮಾಡುವುದಕ್ಕೂ, ರಾಶಿ ಮಾಡುವುದಕ್ಕೂ ಈಗ ಯಂತ್ರಗಳೇ ಬಂದು ಬಿಟ್ಟಿವೆ. ಅಲ್ಲೆಲ್ಲ ಒಂದೋ ನೂರಾರು ಎಕರೆ ಗದ್ದೆಗಳ ಮಾಲೀಕರು ಇದ್ದಾರೆ. ಇಲ್ಲವೆ ಒಂದು ಎಕರೆ, ಎರಡು ಎಕರೆ ಭೂಮಿ ಇದ್ದವರು ಮಾತ್ರ ಬಹುತೇಕ ಎಲ್ಲ ಕಡೆಗೆ ಪುಟ್ಟ ಹಿಡುವಳಿಗಳು. ತಮ್ಮ ಹೊಲದಲ್ಲಿ ತಾವು ಕೆಲಸ ಮಾಡಿದರೂ ಅವರಿಗೆ ವರ್ಷದ ಅಶನ ಹುಟ್ಟುವುದಿಲ್ಲ. ಕೃಷಿ ಎಂಬುದು ಒಂದು ವಿಷ ವರ್ತುಲ. ರೈತ ಎಂದ ಮೇಲೆ ಆತ ಸಾಲ ಮಾಡಿರಲೇಬೇಕು. ಸಾಲ ಕೊಟ್ಟವನು ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಅಡತಿ ಅಂಗಡಿ ಇಟ್ಟುಕೊಂಡಿರುತ್ತಾನೆ. ಬೆಳೆದ ಬೆಳೆಯನ್ನು ಸಾಲ ಕೊಟ್ಟ ಅಡತಿ ಅಂಗಡಿಗೇ ಕೊಡಬೇಕು. ಬೆಳೆ ಬರುವಾಗ ಬೆಲೆಯೂ ಬಿದ್ದು ಹೋಗುವುದರಿಂದ ಮೂರು ತಿಂಗಳು, ಆರು ತಿಂಗಳು ಹೊಲದಲ್ಲಿ ಗೆ ಮಾಡಿದ್ದು ಕೈಗೆ ಹತ್ತುವುದಿಲ್ಲ. ಬರುವ ದುಡ್ಡಿನಲ್ಲಿ ಗೊಬ್ಬರದ ಅಂಗಡಿಯಲ್ಲಿ, ಬೀಜದ ಅಂಗಡಿಯಲ್ಲಿ, ಬಟ್ಟೆ ಅಂಗಡಿಯಲ್ಲಿ, ಕಿರಾಣಿ ಅಂಗಡಿಯಲ್ಲಿ ಮೊದಲೇ ಮಾಡಿದ ಸಾಲ ಪೂರೈಸಲೂ ಆಗುವುದಿಲ್ಲ.

ಊರ ಅಂಚಿನಲ್ಲಿ ಕೆಂಪು ಬಸ್ಸು ಬೆಂಗಳೂರಿಗೆ ಹೊರಡಲು ಸಿದ್ಧವಾಗಿ ನಿಂತಿರುತ್ತದೆ. ಹೆಂಡತಿ, ಮಕ್ಕಳು ಮರಿಗಳನ್ನು ಕಟ್ಟಿಕೊಂಡು ಬಸ್ಸು ಹತ್ತಿ ಬೆಂಗಳೂರು ತಲುಪಿದರೆ ಸಾಕು. ಗಂಡಾಳಿಗೆ ಐನೂರು, ಹೆಣ್ಣಾಳಿಗೆ ನಾನೂರು ಕೂಲಿ ಸಿಕ್ಕೇ ಸಿಗುತ್ತದೆ. ಮಕ್ಕಳಿಗೂ ಸಣ್ಣ ಪುಟ್ಟ ಕೆಲಸ. ಕಟ್ಟಡ ಕಟ್ಟುವವರು ತಲೆ ಮೇಲೊಂದು ಸೂರು ಕೊಟ್ಟೇ ಕೊಡುತ್ತಾರೆ. ಶ್ರೀಮಂತರು ಅಡ್ಡಾಡುವ ಉದ್ಯಾನಗಳಲ್ಲಿ ಉದುರಿ ಬಿದ್ದ ಪುರುಲೆಗಳನ್ನು ತಂದು ಬೆಳಿಗ್ಗೆ ಒಂದಿಷ್ಟು ಅನ್ನ ಬೇಯಿಸಿಕೊಂಡು, ಎರಡು ರೊಟ್ಟಿ, ಹಿಂಡಿ ತಿಂದು ಬಿಟ್ಟರೆ ದಿನವಿಡೀ ದುಡಿಯಬಹುದು. ತಿಂಗಳ ಆದಾಯ ಮೂವತ್ತು ಸಾವಿರದ ಅಂಚಿನ ವರೆಗೆ ತಲುಪುತ್ತದೆ. ಇದು ಬದುಕೇ? ಅಲ್ಲ ಎನ್ನುವವರು ಅವರಿಗೆ ಯಾವ ದಾರಿ ತೋರಿಸಿದ್ದಾರೆ? ಒಂದು ಕಟ್ಟಡದ ಕೆಲಸ ಮುಗಿಸಿ ಇನ್ನೊಂದು ಕಟ್ಟಡದ ಕೆಲಸ ಎನ್ನುತ್ತ ಬೆಂಗಳೂರೇ ತಮ್ಮ ಊರು ಎಂದು ಅಂದುಕೊಂಡವರು ಇವರೆಲ್ಲ. ಇವರಲ್ಲಿಯೇ ಕೆಲವರು ಮಕ್ಕಳಿಗೆ ಕೆಲಸ ಬಿಡಿಸಿ ಶಾಲೆ ಕಲಿಸಿದವರು ಇಲ್ಲ ಎಂದು ಅಲ್ಲ. ಅವರ ಸಂಖ್ಯೆ ಕಡಿಮೆ. ಹಳ್ಳಿ ಜನರು ಮಕ್ಕಳನ್ನು ಹುಟ್ಟಿಸುವುದೇ ದುಡಿಯುವುದಕ್ಕಾಗಿ! ಶಾಲೆ ಕಲಿಸಿ ನೌಕರಿ ಮಾಡಿಸುವುದು, ಅವರಿಗೆ ದೂರದ ಕನಸು. ಅದು ತಮ್ಮಿಂದ ಆಗದ ಮಾತು ಎಂದೇ ಅವರ ನಂಬಿಕೆ. ಜಾತ್ರೆ-ಗೀತ್ರೆ ಇದ್ದರೆ ಮಾತ್ರ ಊರಿಗೆ ಬರುತ್ತಾರೆ. ಊರಿನಲ್ಲಿ ಉಳಿಯುವವರು ದುಡಿಯಲು ಆಗದ ಅವ್ವ, ಅಪ್ಪ, ಅಥವಾ ಅತ್ತೆ, ಮಾವ.

ಇದು ಬರೀ ಮಾನ್ವಿ ತಾಲ್ಲೂಕಿನ ಸುದ್ದಿಯಲ್ಲ. ಇಡೀ ಹೈದರಾಬಾದ್ ಕರ್ನಾಟಕದ ಎಲ್ಲ ಜಿಲ್ಲೆಗಳು ಮತ್ತು ಮುಂಬೈ ಕರ್ನಾಟಕದ ವಿಜಾಪುರ ಹಾಗೂ ಬಾಗಲಕೋಟೆ ಜಿಲ್ಲೆಗಳಲ್ಲೂ ಇದೇ ಸುದ್ದಿ. ಕೆಲವರು ಬೆಂಗಳೂರಿಗೆ ಬರುತ್ತಾರೆ. ಇನ್ನು ಕೆಲವರು ಮುಂಬೈಗೆ ಹೋಗುತ್ತಾರೆ. ಮತ್ತೆ ಕೆಲವರು ವಾಸ್ಕೊ, ಪಣಜಿಗೆ ಹೋಗುತ್ತಾರೆ. ಹಳ್ಳಿ ಹಳ್ಳಿಗಳಿಂದ ಬೆಂಗಳೂರಿಗೆ, ಮುಂಬೈಗೆ, ಪಣಜಿಗೆ ಜನರನ್ನು ಕರೆದುಕೊಂಡು ಹೋಗಲು ಸಾರಿಗೆ ಸಂಸ್ಥೆಯವರು ಬಸ್ಸುಗಳ ವ್ಯವಸ್ಥೆ ಮಾಡುತ್ತಾರೆ. ಬೇಕಾದರೆ ನಿಮ್ಮ ಊರಿಗೇ ಬಂದು ಕರೆದುಕೊಂಡು ನೀವು ಎಲ್ಲಿಗೆ ಹೇಳುತ್ತೀರೋ

ಅಲ್ಲಿಗೇ ಬಿಡುತ್ತಾರೆ. ಜಯನಗರಕ್ಕೆ ಎಂದರೆ ಜಯನಗರಕ್ಕೆ, ಜೆ.ಪಿ ನಗರ ಎಂದರೆ ಜೆ.ಪಿ.ನಗರಕ್ಕೆ ಕೂಲಿಕಾರರನ್ನು ಒದಗಿಸುವ ಗುತ್ತಿಗೆದಾರರು ಕ್ರೂಸರ್ ಜೀಪುಗಳನ್ನು ಪ್ರತಿ ಶನಿವಾರ ಹಳ್ಳಿ ಹಳ್ಳಿಗಳಿಗೆ ತೆಗೆದುಕೊಂಡು ಹೋಗುತ್ತಾರೆ. ಕೃಷ್ಣ-ತುಂಗಭದ್ರೆ ಅಕ್ಕಪಕ್ಕದಲ್ಲಿ ಹರಿಯುವ ರಾಯಚೂರಿನ ತೀನ್ ಕಂದೀಲ್ ಸರ್ಕಲ್ಲಿಗೆ ಹೋಗಿ ನೀವು ನೋಡಬೇಕು; ರೈಲು ನಿಲ್ದಾಣಕ್ಕೆ ಹೋದರೂ ಆದೀತು. ಸುತ್ತಮುತ್ತಲ ಹಳ್ಳಿಗಳ ಕೂಲಿಕಾರರು ಬುತ್ತಿ ಕಟ್ಟಿಕೊಂಡು ಕೆಲಸ ಹುಡುಕಿಕೊಂಡು ಬಂದು ನಿಲ್ಲುತ್ತಾರೆ. ಯಾರಾದರೂ ಕೆಲಸಕ್ಕೆ ಕರೆದರೆ ಹೊರಟು ಹೋಗುತ್ತಾರೆ. ದಿನವಿಡೀ ದುಡಿದು ಮತ್ತೆ ತಮ್ಮ ಊರು ಸೇರುತ್ತಾರೆ. ಕೆಲಸ ಸಿಗದೇ ಇದ್ದರೆ ತಮ್ಮ ನಶೀಬಿಗೆ ಶಾಪ ಹಾಕುತ್ತಾರೆ. ಉದ್ಯೋಗ ಖಾತ್ರಿ ಯೋಜನೆ ಅಲ್ಲಿ ಇದೆಯೇ? ಇದ್ದಿದ್ದರೆ ಅವರೆಲ್ಲ ತೀನ್‌ಕಂದೀಲ್ ಸರ್ಕಲ್ಲಿನಲ್ಲಿ ಬಂದು ಏಕೆ ನಿಲ್ಲುತ್ತಿದ್ದರು?

ದಕ್ಷಿಣ ಏಷ್ಯಾದಲ್ಲಿ ಅತಿ ಹೆಚ್ಚು ಹತ್ತಿ ಬೆಳೆಯುವ ಪ್ರದೇಶ ಎಂದರೆ ರಾಯಚೂರು, ಆ ಊರಿನಲ್ಲಿ ಹತ್ತಿ ಖರೀದಿಗಾಗಿಯೇ ಪ್ರತ್ಯೇಕ ಮಾರುಕಟ್ಟೆ ಇದೆ. ಆದರೆ, ಬೆಳೆದ ಹತ್ತಿಯನ್ನು ನೂಲು ಮಾಡಿ, ಸಿದ್ಧ ಉಡುಪು ತಯಾರಿಸುವ ಒಂದು ಕಾರ್ಖಾನೆಯನ್ನು ಇದುವರೆಗೆ ಅಲ್ಲಿ ಸ್ಥಾಪನೆ ಮಾಡಲು ನಮ್ಮ ನೇತಾರರಿಗೆ ಸಾಧ್ಯವಾಗಲಿಲ್ಲ. ರಾಯಚೂರಿಗೆ ಉತ್ತಮ ರೈಲಿನ ಸಂಪರ್ಕವೂ ಇದೆ, ವಿಮಾನ ಸಂಪರ್ಕವೂ ಬಹಳ ದೂರ ಇಲ್ಲ. ಆಚೆ ಕೃಷ್ಣ ಹರಿಯುತ್ತಾಳೆ, ಈಚೆ ತುಂಗಭದ್ರೆ, ಊರ ಹೊರವಲಯದಲ್ಲಿಯೇ ಉಷ್ಣ ವಿದ್ಯುತ್ ಸ್ಥಾವರ ಇದೆ. ರಾಯಚೂರಿನಲ್ಲಿಯೇ ಕೈ ತುಂಬ ಕೆಲಸ ಸಿಕ್ಕರೆ ನಾಗಮ್ಮನಂಥವರು ಬೆಂಗಳೂರಿಗೆ ಏಕೆ ಹೋಗುತ್ತಿದ್ದರು? ರಾಯಚೂರಿನ ಆಚೆ ಈಚೆ ಹರಿಯುವ ನದಿಗಳ ಮೇಲಿನ ನೀರಾವರಿ ಯೋಜನೆಗಳಾದರೂ ಪೂರ್ಣಗೊಂಡವೇ? ಎಷ್ಟು ವರ್ಷವಾಯಿತು ಎಂದು ಯಾರಾದರೂ ಕೇಳಿದರೇ? ಕಾಲುವೆಯಲ್ಲಿ ಹರಿಯುವ ನೀರಾದರೂ ಸರಿಯಾಗಿ ತಲುಪುತ್ತದೆಯೇ? ತಲುಪಿದ ನೀರಿನಲ್ಲಿ ಬರೀ ಭತ್ತ, ಹತ್ತಿ ಬೆಳೆದರೆ ಆಗುತ್ತದೆಯೇ? ಹೊಟ್ಟೆಗೆ ರೊಟ್ಟಿ ತಿನ್ನಲು ಜೋಳ, ಗೋಧಿ, ಸಜ್ಜೆ ಬೆಳೆಯುವುದು ಬೇಡವೇ? ಪಲ್ಯ ಮಾಡಲು ಕಾಳು ಕಡಿ ಬೇಡವೇ? ತರಕಾರಿ ಬೇಡವೇ? ಅಲ್ಲಿ ಕೃಷಿ ಇಲಾಖೆ ಕೆಲಸವನ್ನೇ ಮಾಡುವಂತೆ ಕಾಣುವುದಿಲ್ಲ. ಅಥವಾ ಅದರ ಮಾತನ್ನು ಯಾರೂ ಕೇಳುವಂತೆಯೂ ಇಲ್ಲ. ಬರೀ ಮೂರು ಮೂರು ಪೀಕು ಭತ್ತ ಬೆಳೆದರೆ, 'ಹುಯ್' ಇಂದು ನೀರು ಬಿಟ್ಟರೆ, ಗೊಬ್ಬರ ಹಾಕಿದರೆ ಭೂಮಿ ಫಲವತ್ತತೆ ಕಳೆದುಕೊಳ್ಳುವುದಿಲ್ಲವೇ? ಭವಿಷ್ಯದ ಬಗ್ಗೆ ಯಾರಿಗೂ ಚಿಂತೆ ಇದ್ದಂತೆ ಅನಿಸುವುದಿಲ್ಲ.

ಒಂದು ನಾಡಿನ, ಪ್ರದೇಶದ, ಜನರ ಭವಿಷ್ಯದ ಬಗ್ಗೆ ಯೋಚಿಸಲು ಒಂದು ನಾಯಕತ್ವ ಎಂದು ಇರಬೇಕಾಗುತ್ತದೆ. ನಿಜಾಮರ ಆಡಳಿತಕ್ಕೆ ಸೇರಿದ ಈ ನಾಡಿನಲ್ಲಿ ನಾಯಕತ್ವ ಹುಟ್ಟಲೇ ಇಲ್ಲ. ನಿಜಾಮರ ನಂತರವೂ ಮುಂದುವರಿದ ಭೂಮಾಲೀಕರ ಪಾಳೆಗಾರಿಕೆಯಡಿ ನಲುಗಿ ಹೋದ ಜನರು ಪ್ರಶ್ನೆ ಮಾಡುವುದನ್ನೇ ಬಿಟ್ಟುಬಿಟ್ಟರು. ರಾಯಚೂರು ಜಿಲ್ಲೆಯಲ್ಲಿ ನಕ್ಸಲ್‌ಬಾರಿಯ ಮೊಳಕೆಗಳು ಕಾಣಿಸುತ್ತಿರುವುದು ಇದೇ ಕಾರಣಕ್ಕೆ ಇರಬಹುದೇ? ಇದೆಲ್ಲ ಬರೀ ರಾಯಚೂರು ಜಿಲ್ಲೆಯ ಕಥೆಯೇ? ವಿಜಾಪುರದಲ್ಲಿ, ಬಳ್ಳಾರಿಯಲ್ಲಿ, ಯಾದಗಿರಿಯಲ್ಲಿ ಇಂಥ ಕಥೆಗಳು ಇಲ್ಲವೇ? ಎಷ್ಟು ಬೇಕು? ಯಾದಗಿರಿ ಜಿಲ್ಲೆಯ ಸುರಪುರದಿಂದ ದುಡಿಯಲು ಹೊರಟ ಒಂದು ಬಸ್ಸು

ಮಂದಿ ಚಿತ್ರದುರ್ಗದ ಬಳಿ ರಸ್ತೆ ಹೆಣವಾದರಲ್ಲ? ನಾನು ಬರೀ ಕೂಲಿ ಕೆಲಸಕ್ಕೆ ಹೋಗಿ ಹೆಣವಾದವರ ಬಗ್ಗೆ ಮಾತ್ರ ಬರೆದಿರುವೆ. ಆ ಭಾಗದಲ್ಲಿ ಶಾಲೆಗೆ ಹೋಗದ ಹುಡುಗರ ಬಗೆಗೆ ಬರೆದಿಲ್ಲ. ಹುಡುಗಿಯರ ಬಗೆಗೂ ಬರೆದಿಲ್ಲ. ಹುಡುಗರು ಸ್ವಲ್ಪ ದೊಡ್ಡವರಾದ ಮೇಲೆ ಅವರೂ ದುಡಿಯಲು ಬೆಂಗಳೂರಿಗೆ, ಮುಂಬೈಗೆ, ಪಣಜಿಗೆ ಹೋಗಬಹುದು. ಹುಡುಗಿಯರು ಮದುವೆಯಾಗಿ ಹಡೆಯುವುದಕ್ಕೆ ಹೋಗಬೇಕು. ಅವರಿಗೆ ಬೇರೆ ದಾರಿಯೇ ಇಲ್ಲ. ದುಡಿಯಲು ನಗರಕ್ಕೆ ಹೋಗುವ ತಂದೆ ತಾಯಿಗೆ ಬೆಳೆದು ನಿಂತ ಮಗಳನ್ನು ತಮ್ಮ ಜತೆಗೆ ಕರೆದುಕೊಂಡು ಹೋಗುವುದಕ್ಕೂ ಅಂಜಿಕೆ. ಊರಿನಲ್ಲಿಯೇ ಬಿಡಲೂ ಹೆದರಿಕೆ, ಯಾರಿಗೋ ಒಬ್ಬರಿಗೆ ಗಂಟು ಹಾಕಿಬಿಟ್ಟರೆ ಹೊರೆಯನ್ನು ಇಳಿಸಿಕೊಂಡಂತೆ. ಇನ್ನೂ ಹದಿನೆಂಟು ತುಂಬುವುದಕ್ಕಿಂತ ಮೊದಲೇ ಮದುವೆ ಮಾಡಿಕೊಂಡು ಹೆರುವ ಮಕ್ಕಳು ಗಟ್ಟಿ ಮುಟ್ಟಾಗಿರುತ್ತವೆಯೇ? ಇಡೀ ರಾಜ್ಯದಲ್ಲಿಯೇ ಹುಟ್ಟುತ್ತಿದ್ದಂತೆಯೇ ಸಾಯುತ್ತಿರುವ ಮಕ್ಕಳ ಸಂಖ್ಯೆ ಈ ಭಾಗದಲ್ಲಿಯೇ ಹೆಚ್ಚು ಅಲ್ಲವೇ?. ಎಂದೆಂದೂ ಮುಗಿಯದ ಕಥೆಯನ್ನು ಎಷ್ಟೆಂದು ಹೇಳುವುದು?

25.8.2013

# ಹಿತ್ತಿಲ ವಿವೇಕದಲ್ಲಿ ಉತ್ತರ ಹುಡುಕಬೇಕು

ಆತ್ಮಹತ್ಯೆ ಒಂದು ಅಪರಾಧ, ಆತ್ಮಹತ್ಯೆಗೆ ಯತ್ನಿಸುವುದೂ ಅಪರಾಧ. ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ಎರಡೂ ಅಪರಾಧಗಳಿಗೆ ದಂಡನೆ ಇದೆ. ಆತ್ಮಹತ್ಯೆಗೆ ಯತ್ನಿಸಿದವರ ಅಥವಾ ಮಾಡಿಕೊಂಡವರ ವಿರುದ್ಧ ಸಂಬಂಧಪಟ್ಟ ಠಾಣೆಯಲ್ಲಿ ದೂರು ದಾಖಲು ಆಗುತ್ತದೆ. ಆತ್ಮಹತ್ಯೆ ಮಾಡಿಕೊಂಡವರನ್ನು ಕಾನೂನು ಏನೂ ಮಾಡಲು ಸಾಧ್ಯವಿಲ್ಲ.

ಏಕೆಂದರೆ ಅವರು ಸತ್ತು ಬಿಟ್ಟಿರುತ್ತಾರೆ. ಆದರೆ, ಆತ್ಮಹತ್ಯೆಗೆ ಯತ್ನಿಸಿ ಬದುಕಿ ಉಳಿದವರು ಖಟ್ಲ ಎದುರಿಸಬೇಕಾಗುತ್ತದೆ. ಈ ಕಾನೂನಿನಲ್ಲಿ ಯಾರಿಗೂ ವಿನಾಯಿತಿ ಇಲ್ಲ. ಆದರೆ, ವಿಚಿತ್ರ ನೋಡಿ, ಬೆಳಗಾವಿಯ ಸುವರ್ಣ ವಿಧಾನಸೌಧದ ಎದುರು ಆತ್ಮಹತ್ಯೆ ಮಾಡಿಕೊಂಡ ಕಂಕಣವಾಡಿಯ ರೈತ ವಿಠಲ ಅರಭಾವಿ ಹುತಾತ್ಮ ಎನಿಸಿಕೊಂಡ. ಅವರಿಗೆ ಸರ್ಕಾರ ಮತ್ತು ವಿರೋಧ ಪಕ್ಷಗಳು ಪೈಪೋಟಿಗೆ ಬಿದ್ದು ಪರಿಹಾರ ಘೋಷಿಸಿದುವು.

ಅವರ ಪಾರ್ಥಿವ ಶರೀರದ ಮೇಲೆ ಮಾಲೆ ಹಾಕಿ ಅಂತಿಮ ಗೌರವ ಸಲ್ಲಿಸಲು ಎಲ್ಲ ಪಕ್ಷಗಳ ನಾಯಕರು ಮುಗಿಬಿದ್ದರು. ವಿಠಲ ಅರಭಾವಿ ಏಕೆ ಆತ್ಮಹತ್ಯೆ ಮಾಡಿಕೊಂಡರು, ಅದರ ಹಿನ್ನೆಲೆ ಮುನ್ನೆಲೆ ಏನು, ಅವರಿಗೆ ಯಾರಾದರೂ ಚಿತಾವಣೆ ಮಾಡಿದರೇ ಇತ್ಯಾದಿ ಕುರಿತು ದಂಡಾಧಿಕಾರಿಗಳಿಂದ ತನಿಖೆ ನಡೆಯಲಿದೆ. ನಾನು ಸಂಗ್ರಹಿಸಿರುವ ಸಂಗತಿಗಳನ್ನು ಇಲ್ಲಿ ಬರೆಯುತ್ತಿಲ್ಲ.

ವಿಠಲ ಅರಭಾವಿ ಆತ್ಮಹತ್ಯೆ ಮಾಡಿಕೊಂಡುದು ತಪ್ಪು, ಯಾರಾದರೂ ಬದುಕಿ ಹೋರಾಟ ಮಾಡಬೇಕು. ಸತ್ತು ಹೋರಾಟ ಮಾಡಲು ಸಾಧ್ಯವಿಲ್ಲ. ಸಮಸ್ಯೆ ಏನು ಎಂದರೆ ಹೋರಾಟಗಾರರು ಸಾಯುವವರೆಗೆ ಅಥವಾ ಹಿಂಸಾಚಾರಕ್ಕೆ ಇಳಿಯುವವರೆಗೆ ಸರ್ಕಾರ

ಕಣ್ಣು ತೆರೆಯುವುದಿಲ್ಲ. ಮತ್ತು ಇಂಥ ಸಾವನ್ನು ಅಥವಾ ಹಿಂಸಾಚಾರವನ್ನು ಸದಾ ತಮ್ಮ ರಾಜಕೀಯ ಲಾಭಕ್ಕೆ ಬಳಸಿಕೊಳ್ಳಲು ವಿರೋಧ ಪಕ್ಷಗಳು ಕಾಯುತ್ತ ಇರುತ್ತವೆ. ವಿಠಲ ಅರಭಾವಿ ಸಾವಿನಲ್ಲಿಯೂ ಇದೇ ಆಯಿತು.

ಅವರು ಸತ್ತ ಕೂಡಲೇ ಸರ್ಕಾರ ಒತ್ತಡದಲ್ಲಿ ಸಿಲುಕಿತು. ಅವರ ಸಾವು ಒಂದು ಅಪರಾಧವಾಗಿದ್ದರೂ ಎಲ್ಲರೂ ಆ ಮುಖದ ಕಡೆಗೆ ಕುರುಡರಾದರು. ಭಾವನೆಗಳಲ್ಲಿ ಇಡೀ ಸದನ ತೇಲಿ ಹೋಯಿತು. ಸರ್ಕಾರ ಹತ್ತು ಲಕ್ಷ ರೂಪಾಯಿ ಪರಿಹಾರ ಘೋಷಣೆ ಮಾಡಿತು. ಎರಡು ವಿರೋಧ ಪಕ್ಷಗಳು ಸೇರಿಕೊಂಡು ಅಷ್ಟೇ ಮೊತ್ತದ ಪರಿಹಾರ ಕೊಡುವ ಮಾತು ಆಡಿದುವು.

ಅಂದರೆ, ಅಧಿವೇಶನ ನಡೆಯುವಾಗ ಯಾರಾದರೂ ಬಂದು ತಮ್ಮ ಕಷ್ಟಗಳ ಸಲುವಾಗಿ ವಿಧಾನಸೌಧದ ಮುಂದೆ ಆತ್ಮಹತ್ಯೆ ಮಾಡಿಕೊಂಡರೆ ಆ ಸಾವಿಗೆ ಹೆಚ್ಚು ಮಹತ್ವ ಬರುತ್ತದೆಯೇ? ದೂರದ ತನ್ನ ಊರಿನಲ್ಲಿ ಇದೇ ಸಾಲದ ಉರುಳಿಗೆ ಕೊರಳು ಕೊಡುವ ರೈತನ ಜೀವಕ್ಕೆ ಬೆಲೆ ಇಲ್ಲವೇ? ಎಲ್ಲ ಜೀವ ಒಂದೇ ಅಲ್ಲವೇ? ಇದೇನು ನಿನ್ನೆ ಮೊನ್ನೆ ಶುರುವಾದ ವಿದ್ಯಮಾನವಲ್ಲ.

1997ರಲ್ಲಿ ಬೀದರ್ ಜಿಲ್ಲೆಯಲ್ಲಿ ತೊಗರಿ ಬೆಳೆಗಾರನೊಬ್ಬ ಆತ್ಮಹತ್ಯೆ ಮಾಡಿಕೊಳ್ಳುವುದರೊಂದಿಗೆ ಈ ಮರಣಪರ್ವ ಶುರುವಾಯಿತು. ಆಗಿನಿಂದ ಈಗಿನವರೆಗೆ ಆತ್ಮಹತ್ಯೆ ಮಾಡಿಕೊಂಡ ರೈತರ ಲೆಕ್ಕವನ್ನು ಇಟ್ಟವರು ಇಲ್ಲ. ದೇಶದಲ್ಲಿ ಅರ್ಧಗಂಟೆಗೆ ಒಬ್ಬ ರೈತ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ ಎಂಬ ಲೆಕ್ಕ ಮಾತ್ರ ಸಿಕ್ಕಿದೆ! ರೈತರ ಆತ್ಮಹತ್ಯೆಯ ಕಾರಣಗಳು ಮತ್ತು ಅದಕ್ಕೆ ಪರಿಹಾರ ಹುಡುಕಲು ಸರ್ಕಾರ ಆಗಿನಿಂದಲೇ ಪ್ರಯತ್ನಗಳನ್ನೂ ಮಾಡಿದೆ.

ಶಾಸಕ ಜಿ.ಬಿ.ಶಿವಕುಮಾರ್ ನೇತೃತ್ವದ ಜಂಟಿ ಸದನ ಸಮಿತಿ ಮತ್ತು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ನಿವೃತ್ತ ಕುಲಪತಿ ಡಾ.ಜಿ.ಕೆ.ವೀರೇಶ್ ನೇತೃತ್ವದ ತಜ್ಞರ ಸಮಿತಿ ವರದಿಗಳ ಕುರಿತು ವಿಧಾನಮಂಡಲದಲ್ಲಿ ವಿಸ್ತೃತ ಚರ್ಚೆಯೂ ನಡೆದಿದೆ. ಅಚ್ಚರಿ ಎನ್ನುವಂತೆ ಎರಡೂ ಸಮಿತಿಗಳು, ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಗಳಿಗೆ ಪರಿಹಾರ ಕೊಡಬಾರದು ಎಂದು ಶಿಫಾರಸು ಮಾಡಿವೆ!

ವೀರೇಶ್ ಸಮಿತಿ ವರದಿ ಮೇಲೆ ನಡೆದ ಚರ್ಚೆಗೆ ವಿಧಾನಸಭೆಯಲ್ಲಿ ಉತ್ತರ ಕೊಡುತ್ತ ಆಗಿನ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರು ಎಲ್ಲ ರೈತರ ಆತ್ಮಹತ್ಯೆ ಪ್ರಕರಣಗಳನ್ನು ದಂಡಾಧಿಕಾರಿಗಳಿಂದ ತನಿಖೆ ಮಾಡಿಸಲು ಆದೇಶಿಸಿದ್ದರು. ಮತ್ತು ಸತ್ತ ರೈತರ ಕುಟುಂಬಗಳಿಗೆ ಪರಿಹಾರ ಕೊಡುವುದು ಆತ್ಮಹತ್ಯೆಯನ್ನು ಉತ್ತೇಜಿಸಿದಂತೆ, ಹಾಗಾಗಿ ತಮ್ಮ ಸರ್ಕಾರ ಪರಿಹಾರ ಕೊಡುವುದಿಲ್ಲ ಎಂದು ಹೇಳಿದ್ದರು. ತಮ್ಮ ನಿರ್ಧಾರಕ್ಕೆ ಅವರು ಅತಿ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ ಎನ್ನಲಾದ ಪಂಜಾಬ್ ರಾಜ್ಯದ ಸರ್ಕಾರ ತೆಗೆದುಕೊಂಡ ಇಂಥದೇ ನಿರ್ಣಯದ ಉದಾಹರಣೆ ಕೊಟ್ಟಿದ್ದರು. ಇದು ನಡೆದುದು 2002ರಲ್ಲಿ.

ವೀರೇಶ್ ಸಮಿತಿ ತನ್ನ ವರದಿ ಕೊಡುವಾಗ ಅದುವರೆಗಿನ 135 ರೈತರ ಆತ್ಮಹತ್ಯೆಗಳನ್ನು ತನ್ನ ಅಧ್ಯಯನಕ್ಕೆ ಒಳಪಡಿಸಿತ್ತು. ಇಷ್ಟೇ ಪ್ರಮಾಣದ 'ಕಂಟ್ರೋಲ್ ಕೇಸ್'ಗಳನ್ನೂ, ಅಂದರೆ

ಆತ್ಮಹತ್ಯೆ ಮಾಡಿಕೊಂಡ ರೈತರಂಥ ಸಂಕಷ್ಟಗಳನ್ನು ಎದುರಿಸಿಯೂ ಆತ್ಮಹತ್ಯೆ ಮಾಡಿಕೊಳ್ಳದ ರೈತರ ಪ್ರಕರಣಗಳನ್ನು ಅದು ಅಧ್ಯಯನಕ್ಕೆ ಬಳಸಿತ್ತು. ರೈತರು ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಅವರು ಮಾಡಿದ ಸಾಲಕ್ಕಿಂತ ಕುಡಿತ ಮುಖ್ಯ ಕಾರಣ ಎಂದು ಅದು ಅಭಿಪ್ರಾಯ ಪಟ್ಟಿತ್ತು.

ಆತ್ಮಹತ್ಯೆ ಮಾಡಿಕೊಳ್ಳುವ ರೈತರ ಕುಟುಂಬಗಳಿಗೆ ಪರಿಹಾರ ಕೊಡುವುದನ್ನು ರೈತ ನಾಯಕ ದಿವಂಗತ ಎಂ.ಡಿ.ನಂಜುಂಡಸ್ವಾಮಿ ಅವರೂ ಒಪ್ಪುತ್ತಿರಲಿಲ್ಲ. ಆದರೆ, ರೈತರು ಆತ್ಮಹತ್ಯೆ ಮಾಡಿಕೊಳ್ಳದಂಥ ಒಂದು ಸ್ಥಿತಿಯನ್ನು ನಿರ್ಮಿಸಬೇಕು ಎಂಬುದು ಅವರ ಆಶಯವಾಗಿತ್ತು. ಅಂಥ ಸ್ಥಿತಿಯನ್ನು, ವಾತಾವರಣವನ್ನು ಸೃಷ್ಟಿ ಮಾಡುವುದು ಮುಖ್ಯವಾಗಿ ಸರ್ಕಾರದ ಕೆಲಸ. ರೈತ ಬೆಳೆದ ಬೆಳೆಗೆ ನ್ಯಾಯಯುತವಾದ ಬೆಲೆ ಸಿಕ್ಕರೆ ಆತ ಆತ್ಮಹತ್ಯೆ ಮಾಡಿಕೊಳ್ಳುವುದಿಲ್ಲ. ಆದರೆ, ಬೆಲೆ ನಿಗದಿ ಮಾಡುವ ಅಧಿಕಾರವೇ ಅವನಿಗೆ ಇಲ್ಲ.

ಅದನ್ನು ಮಾರುಕಟ್ಟೆ ನಿರ್ಧರಿಸುತ್ತದೆ. ಆತ ಬೆಳೆದ ಬೆಳೆ ಮಾರುಕಟ್ಟೆಗೆ ಬರುವ ವೇಳೆಗೆ ಜಾದೂ ಮಾಡಿದಂತೆ ಬೆಲೆ ಬಿದ್ದು ಹೋಗಿರುತ್ತದೆ. ಆದರೆ, ಇದು ಬರೀ ಸರ್ಕಾರದ ಹೊಣೆಯೇ? ರೈತರ ಹೊಣೆ ಏನೂ ಇಲ್ಲವೇ? ಅವರು ಬರೀ ವಾಣಿಜ್ಯ ಬೆಳೆಯ ಬೆನ್ನು ಬಿದ್ದಿಲ್ಲವೇ? ಕಬ್ಬು ಬೆಳೆಯ ವಿಸ್ತೀರ್ಣ ದಿನದಿಂದ ದಿನಕ್ಕೆ ಅಗಾಧವಾಗಿ ಹೆಚ್ಚುತ್ತಿಲ್ಲವೇ? ಭತ್ತದ ಬೆಳೆಯ ವಿಸ್ತೀರ್ಣವೂ ಹೀಗೆಯೇ ಹೆಚ್ಚುತ್ತಿದೆ.

ಹಾಗಾದರೆ ನೀರಾವರಿ ಇರುವ ಪ್ರದೇಶದಲ್ಲಿ ಬರೀ ವಾಣಿಜ್ಯ ಬೆಳೆ ಮಾತ್ರ ಬೆಳೆಯಬೇಕೇ? ಬೆಳೆ ವೈವಿಧ್ಯ ಮತ್ತು ಮಿಶ್ರ ಬೆಳೆ ಎಂಬುದು ನಮ್ಮ ಕೃಷಿಯ ಹಳೆಯ ವಿವೇಕವಾಗಿತ್ತು. ನಮ್ಮ ಹಿರಿಯರು ತಮ್ಮ ಹೊಲದಲ್ಲಿ ತಮ್ಮ ಕುಟುಂಬಕ್ಕೆ ಬೇಕಾದುದು ಎಲ್ಲವನ್ನೂ ಬೆಳೆಯುತ್ತಿದ್ದರು. ಕೃಷಿ ಎಂಬುದು ಸ್ವಾವಲಂಬಿ ಬದುಕಿಗೆ ಒಂದು ಮಾದರಿ ಎನ್ನುವಂತೆ ಇತ್ತು. ಈಗ ಬರೀ ಕಬ್ಬು ಅಥವಾ ಭತ್ತ ಬೆಳೆದರೆ ಹೊಟ್ಟೆಗೆ ಏನು ತಿನ್ನುವುದು?

ಆಶ್ಚರ್ಯ ಎಂದರೆ ರೈತ ಸಂಘಟನೆ ಮತ್ತು ಅದರ ನಾಯಕತ್ವ ಇರುವುದು ಕೇವಲ ಕಬ್ಬು ಹಾಗೂ ಭತ್ತ ಬೆಳೆಯುವ ಪ್ರದೇಶದಲ್ಲಿ, ಈಚೆಗೆ ರೈತ ಸಂಘದ ನಾಯಕರು ಕಬ್ಬು ಬೆಳೆಗೆ ಮಾತ್ರ ಬೆಂಬಲ ಕೇಳಿ ಹೋರಾಟ ಮಾಡಿದ್ದಾರೆ. ಭತ್ತದ ಬೆಳೆಗೂ ಅವರು ಬೆಂಬಲ ಬೆಲೆ ಕೇಳಿಲ್ಲ. ಹಾಗಾದರೆ ಉಳಿದ ಎಲ್ಲ ಬೆಳೆಗಳಿಗೆ ಉತ್ತಮ ಬೆಲೆ ಸಿಗುತ್ತಿದೆಯೇ ಎಂದರೆ ಉತ್ತರ ಇಲ್ಲ. ಉತ್ತರ ಕರ್ನಾಟಕದಲ್ಲಿ ಜೋಳ ಬೆಳೆದ ರೈತರ ಜತೆಗೆ ಈಗ ಯಾರು ಇದ್ದಾರೆ? ಮೂವತ್ತು ವರ್ಷಗಳ ಹಿಂದೆ ರೈತ ಸಂಘಟನೆ ಹುಟ್ಟಿಕೊಂಡಾಗಿನಿಂದಲೂ ರೈತ ಸಂಘದ ವಿರುದ್ಧ ಇದ್ದ ಆರೋಪ ಇದು.

ಅದು ಬರೀ ದೊಡ್ಡ ರೈತರ ಪರವಾಗಿ ಇದೆ ಎಂಬುದು ಆ ಆರೋಪ. ಈ ಸಂಘಟನೆ ಹುಟ್ಟಿಕೊಂಡ ಆರಂಭದಲ್ಲಿ ಅದು ರೈತರಲ್ಲಿ ಹುಟ್ಟುಹಾಕಿದ ಜಾಗೃತಿ, ಅಭಿಮಾನ ಅನನ್ಯವಾದುದು. ಕಾಲಾನಂತರದಲ್ಲಿ ರೈತ ನಾಯಕರಲ್ಲಿ ಅಭಿಮಾನ ಹೋಗಿ ಅಹಂಕಾರ ತಲೆ ಎತ್ತಿತು. ಈ ಅಹಂಕಾರ ಮೊಳಕೆಯಲ್ಲಿಯೇ ಇತ್ತು ಎಂಬುದು ಬೇರೆ ಮಾತು! ಆ ಅಹಂಕಾರದ ಕಾರಣವಾಗಿ ರೈತ ಸಂಘ ಒಡೆದು ನುಚ್ಚು ನೂರಾಯಿತು. ಈಗ ಯಾವುದು ಅಧಿಕೃತ ಸಂಘ, ಯಾವುದು ಅನಧಿಕೃತ ಎಂದು ಹೇಳುವುದು ಕೂಡ ಕಷ್ಟ

ಹೆಗಲ ಮೇಲೆ ಹಸಿರು ಟವೆಲ್ ಹಾಕಿಕೊಳ್ಳುವುದು ಆಗ ಗೌರವದ ಸಂಕೇತ ಎನಿಸಿದ್ದರೆ ಈಗ ಆತ ಕೆಲಸವಿಲ್ಲದವನು ಎಂದು ಹೊಲದಲ್ಲಿ ನಡುಬಗ್ಗಿಸಿ ದುಡಿಯುವ ರೈತರೇ ಅಣಕಿಸುತ್ತಾರೆ. ರೈತ ಸಂಘದ ನಾಯಕರು ಬೆಂಬಲ ಬೆಲೆಗೆ ಹೋರಾಟ ಮಾಡುತ್ತಾರೆ. ಆದರೆ, ಎಲ್ಲ ರೈತರು ವಾಣಿಜ್ಯ ಬೆಳೆಯ ಬೆನ್ನು ಹತ್ತಿ ನಾಶವಾದೀರಿ ಎಂದು ಎಚ್ಚರಿಸುವುದಿಲ್ಲ. ರಾಸಾಯನಿಕಗಳು ಮತ್ತು ಕೀಟ ನಾಶಕಗಳಿಂದ ಆಗುತ್ತಿರುವ ಅನಾಹುತದ ಬಗೆಗೂ ಎಚ್ಚರಿಸುವುದಿಲ್ಲ.

ಹಾಗಾದರೆ, ಅವರಿಗೂ ರಾಜಕಾರಣಿಗಳಿಗೂ ಏನು ವ್ಯತ್ಯಾಸ? ನಮ್ಮ ಪಕ್ಕದ ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶದಲ್ಲಿ ರಾಸಾಯನಿಕ ಮತ್ತು ಕೀಟನಾಶಕ ಹೊರತಾದ ಕೃಷಿಗೆ ದೊಡ್ಡ ಪ್ರಮಾಣದಲ್ಲಿ ಪರ್ಯಾಯಗಳನ್ನು ಹುಡುಕುವ ಯತ್ನ ನಡೆದಿದೆ. ಕರ್ನಾಟಕದಲ್ಲಿ ಅನೇಕ ರೈತರು ವೈಯಕ್ತಿಕವಾಗಿ ಈ ಪ್ರಯತ್ನ ಮಾಡಿದ್ದಾರೆ ಮತ್ತು ಅವರು ಯಶಸ್ಸನ್ನೂ ಕಂಡಿದ್ದಾರೆ. ಆದರೆ, ಅದನ್ನು ಸಾಮೂಹಿಕಗೊಳಿಸುವ ಯತ್ನಗಳು ನಡೆದಿಲ್ಲ. ಅದಕ್ಕೆ ಏನು ಕಾರಣ ಎಂದು ಗೊತ್ತಿಲ್ಲ.

ರಾಜಸ್ತಾನ ಬಿಟ್ಟರೆ ಇಡೀ ದೇಶದಲ್ಲಿ ಕರ್ನಾಟಕ ಅತಿ ಹೆಚ್ಚು ಬಂಜರು ಭೂಮಿ ಇರುವ ರಾಜ್ಯ ಇಲ್ಲಿ ಒಂದು ಕಡೆ ಸಮೃದ್ಧ ನೀರಾವರಿ ಅನುಕೂಲ ಇದೆ. ಇನ್ನೊಂದು ಕಡೆ ಹನಿ ನೀರಿಗೂ ಪರಿತಪಿಸಬೇಕಾಗಿದೆ. ನೀರಾವರಿ ಪ್ರದೇಶದ ರೈತರಿಗೆ ಇದರ ಅರಿವು ಇದೆಯೇ ಎಂದರೆ ಉತ್ತರ ಹೇಳುವುದು ಕಷ್ಟ ನಾವು ನಮ್ಮ ಮನೆಯಲ್ಲಿ ಬಕೆಟ್‌ನಲ್ಲಿ ನೀರು ಹಿಡಿಯಲು ನಲ್ಲಿ ಚಾಲೂ ಮಾಡಿ ಬಿಟ್ಟು ಬಿಡುವುದಿಲ್ಲ. ಬಕೆಟ್ ತುಂಬಿದ ಕೂಡಲೇ ನಲ್ಲಿಯನ್ನು ಬಂದ್ ಮಾಡುತ್ತೇವೆ. ಆದರೆ, ರೈತರು ಹೊಲಕ್ಕೆ ನೀರನ್ನು ಹೇಗೆ ಹರಿಸುತ್ತಾರೆ? ರಾತ್ರಿ ವೇಳೆಯಲ್ಲಿ ಅವರು ಪಂಪ್‌ಸೆಟ್ ಚಾಲೂ ಮಾಡಿ ಮನೆಯಲ್ಲಿ ಬಂದು ಮಲಗಿ ಬಿಡುವುದಿಲ್ಲವೇ? ಹಗಲು ವೇಳೆಯಲ್ಲಿ ಸರ್ಕಾರ ಕರೆಂಟ್ ಕೊಡುವುದಿಲ್ಲ ಎಂಬುದು ಅದಕ್ಕೆ ಕಾರಣ ಆಗಿರಬಹುದು. ಜತೆಗೆ ಕರೆಂಟು ಮತ್ತು ನೀರಿಗೆ ರೈತರು ಹಣ ಕೊಡುವುದಿಲ್ಲ ಎಂಬುದೂ ಕಾರಣ ಆಗಿರಬಹುದಲ್ಲ? ಕರೆಂಟು ಮತ್ತು ನೀರು ಅವರದಲ್ಲದಿರಬಹುದು. ಆದರೆ, ಭೂಮಿ ಅವರದೇ ಹೌದಲ್ಲ? ಕಬ್ಬು ಮತ್ತು ಭತ್ತ ಬೆಳೆಯುವ ರೈತರ ಹೊಲಗಳು ಈಗ ಕಾಂಕ್ರೀಟ್ ರಸ್ತೆಗಳಿಗಿಂತ ಬಿರುಸಾಗಿವೆ. ಅಲ್ಲಿ ಇನ್ನು ಎಷ್ಟು ದಿನ ಬೆಳೆ ಬೆಳೆಯಲು ಸಾಧ್ಯವಾಗುತ್ತದೆಯೋ ಗೊತ್ತಿಲ್ಲ. ಭೂಮಿ ಬಸುರಾಗುವ ಶಕ್ತಿಯನ್ನೇ ಕಳೆದುಕೊಂಡು ಬಿಟ್ಟಿದೆ. ಅದರಲ್ಲಿ ಮೃದುತ್ವವೇ ಇಲ್ಲ. ಮೃದುತ್ವ ಇಲ್ಲದ ಕಡೆಯಲ್ಲಿ ಅರಳುವಿಕೆಯೂ ಇರುವುದಿಲ್ಲ. ಸುಮ್ಮನೇ ನಾವು ಚೀಲಗಟ್ಟಲೆ ಗೊಬ್ಬರ ಹಾಕಿ ಬಲವಂತದಿಂದ ಭೂಮಿಯನ್ನು ಅಗಲಿಸಿ, ಬೀಜ ಬಿತ್ತಿ ಗರ್ಭಧಾರಣೆ ಮಾಡಿಸುತ್ತಿದ್ದೇವೆ. ಇನ್ನೂ ಹೀಗೆಯೇ ಎಷ್ಟು ದಿನ?

ಕೃಷಿ ಎನ್ನುವುದು ಒಂದು ಕಾಳು ಬಿತ್ತಿ ಸಾವಿರ ಕಾಳು ಬೆಳೆಯುವ ಒಂದು ಕಾಯಕ, ಅದು ಬರೀ ಬೀಜ ಹಾಕಿ ಬೆಳೆ ಬೆಳೆಯುವುದು ಅಷ್ಟೇ ಅಲ್ಲ. ಅಲ್ಲಿ ಪ್ರಾಣಿಗಳು ಇದ್ದುವು, ಹುಳ ಹುಪ್ಪಟೆಗಳು ಇದ್ದುವು, ಪಕ್ಷಿಗಳು ಇದ್ದುವು. ಎಲ್ಲರೂ ಕೂಡಿ ಬಾಳುತ್ತಿದ್ದರು. ಹುಳ ಹುಪ್ಪಟೆಗಳನ್ನು, ಪಕ್ಷಿಗಳನ್ನು ರಾಸಾಯನಿಕ ಗೊಬ್ಬರಗಳು, ಕ್ರಿಮಿ ನಾಶಕಗಳು ಸಾಯಿಸಿಬಿಟ್ಟಿವೆ. ಪ್ರಾಣಿಗಳನ್ನು

ಟ್ರ್ಯಾಕ್ಟರ್‌ಗಳು, ಟಿಲ್ಲರ್‌ಗಳು ಓಡಿಸಿವೆ. ರೈತರನ್ನು ಮೋಟಾರ್ ಸೈಕಲ್‌ಗಳು ಹೊಲ ಗದ್ದೆಗಳಿಂದ ದೂರ ಕರೆದುಕೊಂಡು ಹೋಗಿವೆ. ನಗರದಲ್ಲಿ ಇರುವವರು ದುಡ್ಡಿನಿಂದ ಏನಾದರೂ ಕೊಂಡು ಕೊಂಡೇವು ಎಂಬ ಅಹಂಕಾರದಲ್ಲಿ ಇದ್ದಾರೆ.

ಸರ್ಕಾರದಲ್ಲಿ ಇದ್ದವರು ಸಬ್ಸಿಡಿ ಕೊಡುವುದು ಮಾತ್ರ ತಮ್ಮ ಕೆಲಸ ಎಂದುಕೊಂಡಿದ್ದಾರೆ. ವಿರೋಧ ಪಕ್ಷದಲ್ಲಿ ಇದ್ದವರು ಧರಣಿ ಮಾಡಿದರೆ ಸಾಕು ಎಂದು ಭಾವಿಸಿದ್ದಾರೆ. ರೈತ ಸಂಘದವರು ಹೋರಾಟ ಮಾಡುವುದು ಅಷ್ಟೆ ತಮ್ಮ ಕೆಲಸ ಎಂದು ಅಂದುಕೊಂಡಿದ್ದಾರೆ. ಕೃಷಿ ವಿಶ್ವವಿದ್ಯಾಲಯಗಳಲ್ಲಿ ಇರುವವರಿಗೂ ಹೊಲಗಳಿಗೂ ಸಂಬಂಧವೇ ಇಲ್ಲ. ಹಾಗಾದರೆ ಇದಕ್ಕೆ ಉತ್ತರ ಎಲ್ಲಿ ಇದೆ? ವಿಠಲ ಅರಭಾವಿ ಅವರ ಆತ್ಮಹತ್ಯೆಯಲ್ಲಿ ಖಂಡಿತ ಇಲ್ಲ. ನಮ್ಮ ಹಿತ್ತಿಲ ವಿವೇಕದಲ್ಲಿ ಇದೆ. ಮರಳಿ ಹೋಗಿ ಹುಡುಕುವ ವ್ಯವಧಾನ ಬೇಕು ಅಷ್ಟೇ.

12-8-2013

# ಪಾಪಪ್ರಜ್ಞೆಯೇ ಇಲ್ಲದ

# ಬೆಂಗಳೂರು ಎಂಬ ನಗರ...

ಅದಾಗಿ ಬಹಳ ದಿನಗಳೇನೂ ಆಗಿಲ್ಲ. ಒಂದೂವರೆ ವರ್ಷ ಆಗಿರಬಹುದು ಅಷ್ಟೇ. ಅಮೆರಿಕೆಯ 'ಇಂಟರ್‌ನ್ಯಾಷನಲ್ ಹೆರಾಲ್ಡ್ ಟ್ರಿಬ್ಯೂನ್ ಪತ್ರಿಕೆ'ಯಲ್ಲಿ ಬೆಂಗಳೂರು ಸುದ್ದಿ ಆಗಿತ್ತು. ಅದೇನು ದೊಡ್ಡ ಘನಂದಾರಿ ಸಾಧನೆಗೆ ಅಲ್ಲ. ಬೆಂಗಳೂರಿನಲ್ಲಿ ಎಲ್ಲೆಂದರಲ್ಲಿ ಕಸದ ಗುಡ್ಡೆಗಳು ಬಿದಿದ್ದುವು. ಊರ ತುಂಬೆಲ್ಲ ದುರ್ನಾತ ಹಬ್ಬಿತ್ತು. ಆಗಿನ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಅವರು, 'ಬೆಂಗಳೂರು ದೊಡ್ಡ ನಗರ, ಸುದ್ದಿ ಆಗುವುದು ಸಹಜ ಎಂದಿದ್ದರು. ಈಗ ಮತ್ತೆ ಬೆಂಗಳೂರು ಅದೇ ಕಾರಣಕ್ಕೆ ಸುದ್ದಿಯಲ್ಲಿ ಇದೆ. ಮಂಡೂರು ಜನರು ಬಂಡು ಎದಿದ್ದಾರೆ. ನಿಮ್ಮ ಊರಿನ ಕಸವನ್ನು ನಮ್ಮ ಊರಿನಲ್ಲಿ ತಂದು ಏಕೆ ಹಾಕುತ್ತಿದ್ದೀರಿ' ಎಂದು ಕೇಳುತ್ತಿದ್ದಾರೆ. ಸರ್ಕಾರಕ್ಕೆ ಅವರನ್ನು ನ್ಯಾಯವಾಗಿ ಎದುರಿಸಲು ಧೈರ್ಯವಿಲ್ಲ. ಪ್ರತಿಭಟಿಸುವ ಅವರ ಹಕ್ಕನ್ನು ಹತ್ತಿಕ್ಕಲು ನಿಷೇಧಾಜ್ಞೆ ವಿಧಿಸಿದೆ. ಇದು ಅನ್ಯಾಯ. ಅನೈತಿಕ,

ಬೆಂಗಳೂರು ಪಾಪಪ್ರಜ್ಞೆ ಇಲ್ಲದ ಊರು, ನಾಚಿಕೆ ಇಲ್ಲದೆ ಬೆಳೆಯುತ್ತಿದೆ. ಈ ಬೆಳವಣಿಗೆಗೆ ಒಂದು ವಿಧಾನ, ಒಂದು ಯೋಜನೆ ಇತ್ಯಾದಿ ಏನೂ ಇರುವಂತೆ ಕಾಣುವುದಿಲ್ಲ. ಬೆಳೆದರೆ ಬೆಳೆಯಲಿ, ತನಗೆ ಬೇಕಾದ ಕುಡಿಯುವ ನೀರನ್ನು ಎಲ್ಲಿಂದ ತರಬೇಕು ಎಂದು ಅದಕ್ಕೆ ಗೊತ್ತಿಲ್ಲ. ಕೊಳವೆ ಬಾವಿ ಕೊರೆದರೆ ಆಯಿತು ಎಂದು ಅಂದುಕೊಂಡಿದೆ. ತಾನು ಹುಟ್ಟಿ ಹಾಕುವ ಕಸವನ್ನು ಎಲ್ಲಿ ಹಾಕಬೇಕು ಎಂದೂ ಅದಕ್ಕೆ ಗೊತ್ತಿದ್ದಂತೆ ಇಲ್ಲ. ಮನೆಯ ಮುಂದೆ ಚೆಲ್ಲಿದರಾಯಿತು ಎಂದು ಅಂದುಕೊಂಡಿದೆ. ಮನೆಯ ಮುಂದೆ ಬಿದ್ದ ಕಸವನ್ನು ಒಟ್ಟುಗೂಡಿಸಿ ಪಾಲಿಕೆಯ ಸಿಬ್ಬಂದಿ ಮಂಡೂರು ಬಳಿ ಹೋಗಿ ಸುರಿಯುತ್ತಿದ್ದಾರೆ. ನಮ್ಮ ಮನೆಯ ಕಸವನ್ನು ರಸ್ತೆಗೆ ತಳ್ಳುವುದು ಎಷ್ಟು ನಾಚಿಕೆಗೇಡಿನ ಕೆಲಸವೋ, ಅದನ್ನು ತೆಗೆದುಕೊಂಡು ಇನ್ನೊಂದು ಊರಿನ ಹೊಸ್ತಿಲ ಬಳಿ ಹಾಕಿ ಬರುವುದು ಅಷ್ಟೇ ಪಾಪಿಷ್ಟ ಕೆಲಸ, ಯಾರಾದರೂ ಹೀಗೆ ಮಾಡುತ್ತಾರೆಯೇ? ನಾವು ಮಂಡೂರಿನ ಜನರನ್ನು ಏನೆಂದು ತಿಳಿದುಕೊಂಡಿದ್ದೇವೆ? ಅವರೂ ಮನುಷ್ಯರು ಎಂಬ ಖಬರು ನಮಗೆ ಇದೆಯೇ?

ಒಂದೂವರೆ ವರ್ಷದ ಹಿಂದೆ ಮಂಡೂರಿನ ಜನರು ಹೀಗೆಯೇ ಬಂದು ಎದಿದ್ದರು. ಅವರಿಗೆ ಈ ವರ್ಷದ ಫೆಬ್ರುವರಿ ನಂತರ ಮಂಡೂರಿನ ಬಳಿ ಕಸ ಹಾಕುವುದಿಲ್ಲ ಎಂದು ಸರ್ಕಾರ ಮುಚ್ಚಳಿಕೆ ಬರೆದು ಕೊಟ್ಟಿತ್ತು. ಗಡುವು ಮುಗಿದು ಮೂರು ತಿಂಗಳು ಕಳೆದು ಹೋಗಿವೆ. ಈಗ ಸರ್ಕಾರ ಮತ್ತೆ ಎಂಟು ತಿಂಗಳ ಸಮಯಾವಕಾಶ ಕೇಳುತ್ತಿದೆ. ಕಳೆದ ಒಂದೂವರೆ ವರ್ಷದಲ್ಲಿ ಮಾಡದ ಕೆಲಸವನ್ನು ಇನ್ನು ಎಂಟು ತಿಂಗಳಲ್ಲಿ ಸರ್ಕಾರ ಮಾಡುತ್ತದೆ ಎಂಬುದಕ್ಕೆ ಏನು ಖಾತ್ರಿ? ಸರ್ಕಾರ ಅದು ಬಿಜೆಪಿಯದೇ ಇರಲಿ, ಕಾಂಗ್ರೆಸ್ಸಿನದೇ ಇರಲಿ, ಜನರ ನಂಬಿಕೆ ಕಳೆದುಕೊಂಡಿದೆ. ಏಕೆಂದರೆ ಇಲ್ಲಿ ಸರ್ಕಾರದ ಮಾತು ನಡೆಯುತ್ತಿದೆ ಎಂದು ಯಾರಿಗೂ ಅನಿಸುತ್ತಿಲ್ಲ. ಬೆಂಗಳೂರಿನ ಕಸ ವಿಲೇವಾರಿ ಹಿಂದೆ ಬೇರೆ ಮಸಲತ್ತೇ ಇರುವಂತೆ ಕಾಣುತ್ತದೆ. ಪಾಲಿಕೆ ಹೇಳುವಂತೆ ಇಲ್ಲಿ ನಿತ್ಯ ನಾಲ್ಕು ಸಾವಿರ ಟನ್ ಕಸ ಉತ್ಪಾದನೆ ಆಗುತ್ತಿದೆಯೇ ಎಂಬುದರ ಬಗೆಗೇ ಅನುಮಾನ ಇದೆ. ಹಾಗೆಂದು ಹೇಳುವ ಗುತ್ತಿಗೆದಾರರಿಗೆ ಪಾಲಿಕೆ ಬಿಲ್ ಪಾವತಿ ಮಾಡುತ್ತಿದೆ. ಅದು ಕೋಟಿಗಟ್ಟಲೆ ಹಣ! ಕಸ ಸಾಗಿಸುವ ಯಾವ ಲಾರಿಯ ಭಾರವನ್ನೂ ತೂಗಿ ನೋಡುವ ವ್ಯವಸ್ಥೆ ಇಲ್ಲ. ಅದು ಯಾರಿಗೂ ಬೇಡವೂ ಆಗಿರಬಹುದು. ಕಸವನ್ನು ಸಂಸ್ಕರಿಸುವುದಕ್ಕಿಂತ ಮಂಡೂರಿನಲ್ಲಿ ಹಾಕಿ ಬರುವುದು ಹೆಚ್ಚು ಲಾಭಕರವಾಗಿರಬಹುದು. ಇಲ್ಲವಾದರೆ ಇಷ್ಟು ವರ್ಷಗಳು ಕಳೆದರೂ ಬೆಂಗಳೂರಿನಂಥ ಒಂದು ಅಂತರ ರಾಷ್ಟ್ರೀಯ ಊರಿನ ಕಸವನ್ನು ಸಂಸ್ಕರಿಸಲು ವ್ಯವಸ್ಥೆಯನ್ನೇ ಮಾಡುವುದಿಲ್ಲ ಎಂದರೆ ಏನು ಅರ್ಥ? ಇಸ್ರೇಲ್ ಸೇರಿದಂತೆ ಅನೇಕ ದೇಶಗಳ ತಜ್ಞರು ಬೆಂಗಳೂರಿನ ಕಸವನ್ನು ಸಂಸ್ಕರಿಸಲು ಮುಂದೆ ಬಂದಿದ್ದರು. ಬಂಡವಾಳ ಹಾಕಲು ಸಿದ್ಧರಿದ್ದರು. ಆದರೆ, ಬೆಂಗಳೂರನ್ನು ಸಚಿವರ ರೂಪದಲ್ಲಿ, ಪುರಪಿತೃಗಳ ರೂಪದಲ್ಲಿ, ಗುತ್ತಿಗೆದಾರರ ರೂಪದಲ್ಲಿ, ಅಧಿಕಾರಿಗಳ ರೂಪದಲ್ಲಿ ಹಿಂಡಿ ಹಿಪ್ಪೆ ಮಾಡುತ್ತಿರುವ ಹಿತಾಸಕ್ತಿಗಳು ಅದಕ್ಕೆ ಅಡ್ಡಗಾಲು ಹಾಕಿದುವು. ಕಳೆದ ಐದಾರು ವರ್ಷಗಳಿಂದ ನೋಡುತ್ತಿದ್ದೇನೆ. ಬೆಂಗಳೂರಿನ ವಿಚಾರದಲ್ಲಿ ಇಲ್ಲಿ ಒಂದು ಸರ್ಕಾರ ಇದೆ ಎಂದು ನನಗೆ ಅನಿಸಿಲ್ಲ. ಪಾಲಿಕೆಯಲ್ಲಿ ಆಡಳಿತ ಇದೆ ಎಂದೂ ಅನಿಸಿಲ್ಲ. ಒಂದೂವರೆ ವರ್ಷದ ಹಿಂದೆ ಇದೇ ರೀತಿ ಕಸ ಸುದ್ದಿ ಮಾಡಿದಾಗ ಹೈಕೋರ್ಟ್ ಮಧ್ಯ ಪ್ರವೇಶಿಸಿದ ನಂತರ ಸಮಸ್ಯೆ ಬಗೆಹರಿದಿತ್ತೇ ಹೊರತು ಸರ್ಕಾರದ ಮಧ್ಯಸ್ಥಿಕೆಯಿಂದ ಅಲ್ಲ. ಹಳೆಯ ಗುತ್ತಿಗೆದಾರರನ್ನು ಬದಲಿಸಬೇಕು ಎಂದು ಹೈಕೋರ್ಟ್ ತಾಕೀತು ಮಾಡಿತ್ತು. ಈಗಲೂ ಅದೇ ಗುತ್ತಿಗೆದಾರರು ಬೇರೆಯವರ ಹೆಸರಿನಲ್ಲಿ ಅದೇ 'ದಂಧೆ' ಮಾಡುತ್ತಿದ್ದಾರೆ ಎಂದು ಬಿಜೆಪಿ ಸದಸ್ಯರೇ ಆರೋಪಿಸುತ್ತಿದ್ದಾರೆ.

ಎಲ್ಲದಕ್ಕೂ ಒಂದು ದೂರದೃಷ್ಟಿ ಎಂದು ಇರಬೇಕು. ಒಂದು ಯೋಜನೆ ಎಂಬುದು ಇರಬೇಕು. ನಾಲ್ಕೂವರೆ ವರ್ಷಗಳ ಹಿಂದೆ ಬೆಂಗಳೂರು ನಗರದ ವಾರ್ಡ್‌ಗಳ ಸಂಖ್ಯೆಯನ್ನು 100ರಿಂದ 198ಕ್ಕೆ ಏರಿಸುವಾಗ ಇಂಥ ಯಾವ ದೂರದೃಷ್ಟಿಯಾಗಲಿ, ಯೋಜನೆಯಾಗಲಿ ಇದ್ದಂತೆ ಕಾಣಲಿಲ್ಲ. ಇದಿದ್ದರೆ ಈಗ ಅದು ತಪ್ಪು ಎಂದು ತೋರುತ್ತಿರಲಿಲ್ಲ. ಬೆಂಗಳೂರು ಈಗ ಬೆಳೆಯುತ್ತಿರುವ ರೀತಿಯನ್ನು ನಿಯಂತ್ರಿಸದೇ ಇದ್ದರೆ ಮುಂದೆ ಒಂದು ದಿನ ಅದನ್ನು ಹೀಗೆ ಬೆಳೆಯಲು ಬಿಡಬಾರದಿತ್ತು ಎಂದು ಅನಿಸಬಹುದು. ಆಗ ಏನೂ ಮಾಡಲು ಬರುವುದಿಲ್ಲ.

ರಾಜಕಾರಣಿಗಳು ಹಿಂದಿನ ಸರ್ಕಾರದ ಮೇಲೆ ದೂರು ಹೊರೆಸಿ ಹೋಗಿ ಬಿಡುತ್ತಾರೆ. ಇಲ್ಲಿ ವಾಸಿಸುವ ಜನರು ಯಾರನ್ನು ಹಿಡಿದುಕೊಳ್ಳಬೇಕು? ಈಗಲೂ ಬೆಂಗಳೂರಿನ ಕಸದ ಸಮಸ್ಯೆಗೆ ಹಿಂದಿನ ಸರ್ಕಾರವೇ ಹೊಣೆ ಎಂದು ಈಗಿನ ಸರ್ಕಾರ ಹೇಳಿಬಿಡಬಹುದು. ತನ್ನ ವೈಫಲ್ಯಗಳಿಂದಾಗಿಯೇ ಹಿಂದಿನ ಸರ್ಕಾರ ಕಸದ ಬುಟ್ಟಿಗೆ ಹೋಯಿತು. ಜನರು ಬದಲಾವಣೆ ಬಯಸಿಯೇ ಈಗಿನ ಸರ್ಕಾರವನ್ನು ಅಧಿಕಾರಕ್ಕೆ ತಂದಿದ್ದಾರೆ. ಈಗಿನ ಸರ್ಕಾರ ಏನು ಮಾಡಿದೆ? ಅಧಿಕಾರಕ್ಕೆ ಬಂದು ಒಂದು ವರ್ಷ ಆಗಿ ಹೋಯಿತಲ್ಲ? ಒಂದೂವರೆ ವರ್ಷದ ಹಿಂದೆ ಇದೇ ಕಸ ಸುದ್ದಿ ಮಾಡಿದಾಗ, ಆಗಲೂ ಕೆಪಿಸಿಸಿ ಅಧ್ಯಕ್ಷರಾಗಿದ್ದ ಡಾ.ಜಿ.ಪರಮೇಶ್ವರ್, 'ಉದ್ಯಾನನಗರಿಯನ್ನು ಬಿಜೆಪಿ ಸರ್ಕಾರ ಕಸದ ನಗರಿ ಮಾಡಿದೆ' ಎಂದು ಮಿನರ್ವ ವೃತ್ತದಲ್ಲಿ ಪ್ರತಿಭಟನೆ ಮಾಡಿ ದೂರಿದ್ದರು. ಬೆಂಗಳೂರಿಗೆ ಈಗಲೂ ಉದ್ಯಾನ ನಗರಿ ಎಂದು ಹೆಸರು ಇದೆ. ಪರಮೇಶ್ವರ್ ಅವರ ಪಕ್ಷದ ಸರ್ಕಾರ ಈಗೇನು ಮಾಡಿದೆ? ಈಗಲೂ ಬೆಂಗಳೂರು ಕಸದ ನಗರವೇ ಆಗಿದೆಯಲ್ಲ? ಸರ್ಕಾರಕ್ಕೂ ನೆನಪುಗಳು ಇರುವುದಿಲ್ಲ. ಸಾರ್ವಜನಿಕರಿಗೆ ಮೊದಲೇ ಇರುವುದಿಲ್ಲ. ಈಗ ಬಿಜೆಪಿಯವರು ಆಗ ಪರಮೇಶ್ವರ್ ಹೇಳಿದ ಮಾತುಗಳನ್ನೇ ಹೇಳಬಹುದು. ಬದಲಾವಣೆ ಎಂದರೆ ಅಷ್ಟೇ ತಾನೇ? ದಿನ ಕಳೆದಂತೆ ಸರ್ಕಾರಗಳು ಬದಲಾಗುತ್ತವೆ. ಆದರೆ, ಅವುಗಳನ್ನು ನಿಯಂತ್ರಿಸುವ ಹಿತಾಸಕ್ತಿಗಳು ಬದಲಾಗುವುದಿಲ್ಲ. ಇಡೀ ಬೆಂಗಳೂರು ನಗರ ಭೂ ಮತ್ತು ಗುತ್ತಿಗೆದಾರರ ಮಾಫಿಯಾ ಕೈಯಲ್ಲಿ ಸಿಲುಕಿ ನರಳುತ್ತಿದೆ. ಆ ಮಾಫಿಯಾ ಹಿಡಿತದಿಂದ ಬಿಡಿಸಿಕೊಂಡು ಇವೊತ್ತೇ ಬೆಂಗಳೂರಿನ ನಾಲ್ಕು ದಿಕ್ಕುಗಳಲ್ಲಿ ಕಸ ಸಂಸ್ಕರಣ ಘಟಕ ಹಾಕಿದರೂ ಅವು ಪೂರ್ಣಗೊಂಡು ಕೆಲಸ ಆರಂಭಿಸಲು ಇನ್ನೂ ಎರಡು ವರ್ಷ ಬೇಕಾಗುತ್ತದೆ. ಸರ್ಕಾರ ಕೇವಲ ಎಂಟು ತಿಂಗಳ ಕಾಲಾವಕಾಶ ಕೇಳುತ್ತಿದೆ. ಎಂಟು ತಿಂಗಳಲ್ಲಿ ಏನು ಜಾದು ಮಾಡಲು ಸಾಧ್ಯ? ಇಷ್ಟು ವರ್ಷ ರಾಜ್ಯದಲ್ಲಿ ಅಧಿಕಾರ ಮಾಡಿದ ಸರ್ಕಾರಗಳಿಗೆ ಮತ್ತು ಪಾಲಿಕೆಯನ್ನು ಆಳಿದ ಪಕ್ಷಗಳಿಗೆ ಇಂಥ ಘಟಕಗಳ ಅಗತ್ಯ ಕಾಣಲೇ ಇಲ್ಲ ಎಂಬುದು ವಿಸ್ಮಯವೇ? ದುರಂತವೇ? ತಂತ್ರಜ್ಞಾನದ ಬಳಕೆಯಲ್ಲಿ ಜಗತ್ತಿನ ಮುಂಚೂಣಿ ನಗರವಾಗಿರುವ ಬೆಂಗಳೂರಿನ ವಿಪರ್ಯಾಸವೇ ಇದು?

ಮಂಡೂರಿನ ಜನರ ಪ್ರತಿರೋಧಕ್ಕೆ ಸರ್ಕಾರ ತಾತ್ಕಾಲಿಕ ಕಡಿವಾಣ ಹಾಕಿದೆ. ಆದರೆ, ಹೀಗೆ ನಿಷೇಧಾಜ್ಞೆ ವಿಧಿಸಿ ಎಷ್ಟು ದಿನ ಎಂದು ಕಸ ಚೆಲ್ಲುವುದು ಸಾಧ್ಯ? ಆ ಊರಿನ ಜನರು ನ್ಯಾಯ ಕೇಳಿ ನ್ಯಾಯಾಲಯದ ಮೊರೆ ಹೊಕ್ಕರೆ ಏನು ಮಾಡುವುದು? ಅವರ ಪ್ರತಿರೋಧದ ಹಿಂದೆ ಭೂ ಮಾಫಿಯಾ ಇದೆ ಎಂದು ಆರೋಪಿಸುವುದು ಪಲಾಯನದ ದಾರಿ. ಇದ್ದರೂ ಇರಬಹುದು. ಆದರೆ, ನಮ್ಮ ಊರಿನ ಕಸವನ್ನು ಜನವಸತಿ ಇರುವ ಇನ್ನೊಂದು ಊರಿನ ಬಳಿ ಹೋಗಿ ಹಾಕುವುದು ಹೇಗೆ ಸಮರ್ಥನೀಯ ಎಂದೇ ಅರ್ಥವಾಗುವುದಿಲ್ಲ. ಸಮರ್ಥನೀಯ ಎನ್ನುವುದಾದರೆ ಬೆಂಗಳೂರಿನಲ್ಲಿಯೇ ಅದನ್ನು ಎಲ್ಲೆಂದರಲ್ಲಿ ಹಾಕಬಹುದಲ್ಲ. ಇಲ್ಲಿ ಇರುವವರು 'ನಾಗರಿಕ'ರು, ಅಲ್ಲಿ ಇರುವವರು ಅಲ್ಲವೇ?

ನಮ್ಮ ಶಾಸಕರು ಅಧ್ಯಯನಕ್ಕೆ ಎಂದು ವರ್ಷಕ್ಕೊಮ್ಮೆ ವಿದೇಶಗಳಿಗೆ ಸುತ್ತುತ್ತಾರೆ. ಅಲ್ಲಿ ಕಸ ಹೇಗೆ ನಿರ್ವಹಣೆ ಮಾಡುತ್ತಾರೆ ಎಂದು ತಿಳಿಯಲು ಯಾರೂ ಪ್ರವಾಸ ಹೋದಂತೆ ಕಾಣಲಿಲ್ಲ. ಅವರು ವಿದೇಶಕ್ಕೆ ಹೋಗುವುದು ಬೇಡ ಪಕ್ಕದ ಚೆನ್ನೈ, ಮುಂಬೈ, ಹೈದರಾಬಾದ್

ನಗರಗಳಿಗೆ ಹೋಗಿ ನೋಡಿದರೂ ಸಾಕು ಅಲ್ಲಿ ಹೇಗೆ ಕಸ ವಿಲೇವಾರಿ ಮಾಡುತ್ತಾರೆ ಎಂದು ತಿಳಿದುಕೊಂಡು ಬರಬಹುದು. ಸೇಲಂ, ಕೊಯಮತ್ತೂರು ನಗರಗಳಿಗೆ ಪಾಲಿಕೆಯ ಒಂದು ತಂಡ ಹೋಗಿ ಬಂತು. ಅಲ್ಲಿ ಹೋಗಿ ಏನು ನೋಡಿಕೊಂಡು ಬಂದರೋ ಏನು ಕಥೆಯೋ ಪರಿಸ್ಥಿತಿ ಮಾತ್ರ ಹಾಗೆಯೇ ಇದೆ. ಹಾಗಾದರೆ ರಾಜಕಾರಣಿಗಳು ಬೆಂಗಳೂರು ನಗರವನ್ನು ರಕ್ಷಿಸಲಾರರೇ? ಇದು ಗೊತ್ತಾದ ನಂತರವೂ ಈ ನಗರದ ರಕ್ಷಣೆಯ ಹೊಣೆಯನ್ನು ಅವರ ಕೈಗೇ ಕೊಟ್ಟು ನಾವು ಸುಮ್ಮನಿರಬೇಕೇ? ಬೆಂಗಳೂರಿನ ಸಾಂಸ್ಕೃತಿಕ ಲೋಕದ ಜನರು ಏಕೆ ಸುಮ್ಮನಿದ್ದಾರೆ? ಗಾಂಧಿ ಪ್ರತಿಮೆಯ ಮುಂದೆ ಬಾಯಿಗೆ ಕಪ್ಪು ಪಟ್ಟಿ ಕಟ್ಟಿಕೊಂಡು ಕುಳಿತುಕೊಳ್ಳಲು ಜಾಗ ಇಲ್ಲವೇ? ಸರ್ಕಾರಕ್ಕೆ, ಪಾಲಿಕೆಗೆ ನಾಚಿಕೆ ಬರುವಂತೆ ಮಾಡಲು ನಮಗೆ ಬೇರೆ ದಾರಿಯೇ ಇದ್ದಂತೆ ಇಲ್ಲ.

08.06.2014

# ಬೈನಾ ಕನ್ನಡಿಗರ ಗುಳೆಗೆ ಉತ್ತರ

# ಯಾರ ಬಳಿ ಇದೆ?

ಬದುಕು ಹೀಗೂ ಇರಲು ಸಾಧ್ಯವೇ? ಹಿಂದೆ ಮೊರೆಯುವ ಕಡಲು ಮುಂದೆ ನಾಳೆ ಎಂದು ದಿನ ಎಣಿಸುತ್ತಲೇ ಇರಬೇಕು. ಒಂದು ದಿನ ಕಳೆದರೆ ಅದೇ ದೊಡ್ಡದು. ಜೀವನ ಎಂದರೆ ಕಳೆದು ಹೋದುದರ ಲೆಕ್ಕ ಹಾಕುತ್ತ ಕೂಡಿ ಇಡುವುದೇ? ಕಾರವಾರದಿಂದ ನನ್ನ ಸಹೋದ್ಯೋಗಿ ಕಳುಹಿಸಿರುವ ಬೈನಾ ಬೀಚಿನ ಮನೆಗಳ ಚಿತ್ರಗಳನ್ನು ನೋಡುತ್ತಿದ್ದೆ. ಅಷ್ಟು ಇಕ್ಕಟ್ಟಾದ ಮನೆಗಳಲ್ಲಿ ಆ ಜನರು ಹೇಗೆ ಜೀವನ ಮಾಡುತ್ತಾರೆ? ಹತ್ತು ಅಡಿ ಅಗಲ, ಹತ್ತು ಅಡಿ ಉದ್ದವೂ ಇರದ ಮನೆಗಳಲ್ಲಿ ಆರೆಂಟು ಜನ ಇರುತ್ತಾರಂತೆ. ಗಂಡ, ಹೆಂಡತಿ, ಮಕ್ಕಳು. ಎಲ್ಲ ಒಂದೇ ಕೋಣೆಯ ಒಂದೇ ನೆಲದ ಮೇಲೆ, ಒಂದೇ ತಾರಸಿಯ ಕೆಳಗೆ ಇರುತ್ತಾರೆ, ಉಣ್ಣುತ್ತಾರೆ, ಉಡುತ್ತಾರೆ ಮತ್ತು ಮಲಗುತ್ತಾರೆ! ಅವರು ಆ ಬದುಕನ್ನು ಆಯ್ದುಕೊಂಡು ಹೋದರು. ಅದೇ ಸುಖ ಎಂದು ಅವರಿಗೆ ಅನಿಸತೊಡಗಿತು. ಅಲ್ಲಿಯೇ ನೆಲೆನಿಂತರು. ಅವರು ಅಲ್ಲಿಗೆ ದುಡಿಯಲು ಹೋಗಿದ್ದರು. ಒಂದಿಷ್ಟು ದುಡ್ಡು ಮಾಡಲು ಹೋಗಿದ್ದರು. ಆದರೆ, ಅವರು ದುಡ್ಡು ಮಾಡಿದರೇ? ಅದು ಅವರ ಕೈಯಲ್ಲಿ ಉಳಿಯಿತೇ ಗೊತ್ತಿಲ್ಲ. ಏಕೆಂದರೆ ಅವರ ಜೀವನದ ಮಟ್ಟವೇನೂ ಸುಧಾರಿಸಿದಂತೆ ಕಾಣುವುದಿಲ್ಲ. ಅವರು ಅಲ್ಲಿಗೆ ಹೋಗುವುದನ್ನು ಆಯ್ದುಕೊಂಡರು ಎಂದೆ. ಅವರಿಗೆ ಬೇರೆ ದಾರಿಯೇ ಇರಲಿಲ್ಲ. ಅವರ ಊರು ಆಗಿನ ಅಖಂಡ ವಿಜಾಪುರ ಜಿಲ್ಲೆಯ ಯಾವುದೋ ತಾಲ್ಲೂಕಿನ

ಯಾವುದೋ ಹಳ್ಳಿ ಒಂದಿಷ್ಟು ಒಣ ಜಮೀನು ಇತ್ತು. ಮಳೆ ಯಾವಾಗಲೋ ಮಂತ್ರಿಸಿದಂತೆ ಆಗುತ್ತಿತ್ತು. ಹೊಲದಲ್ಲಿ ಬಿತ್ತಿದ್ದು ಸರಿಯಾಗಿ ಬೆಳೆಯುತ್ತಿರಲಿಲ್ಲ. ನಿತ್ಯದ ಜೀವನಕ್ಕೆ ಕೂಲಿನಾಲಿ ಮಾಡಿದರೂ ಹೆಚ್ಚು ಹಣ ಸಿಗುತ್ತಿರಲಿಲ್ಲ. ಊರು ಬಿಟ್ಟು ಗುಳೆ ಹೋಗದೇ ಬೇರೆ ದಾರಿಯೇ ಇರಲಿಲ್ಲ. ಗೋವಾ ರಾಜ್ಯದ ವಾಸ್ಕೊ ಬಂದರು ನಗರ, ಅಲ್ಲಿಗೆ ಹೋದರೆ ಏನಾದರೂ

ಕೆಲಸ ಸಿಗುತ್ತದೆ ಎಂದು ಯಾರೋ ಹೇಳಿದರು. ಯಾವ ಕೆಲಸ ಸಿಗದೇ ಇದ್ದರೂ ಮೈ ಮಾರಿಯಾದರೂ ಬದುಕಬಹುದು ಎಂದು ಕೆಲವರು ಅಂದುಕೊಂಡರು. ಅಥವಾ ಅಲ್ಲಿಗೆ ಹೋದಮೇಲೆ ಅದನ್ನು ಕಂಡುಕೊಂಡರು. ಗುಳೆ ಹೋದವರೆಲ್ಲ ದುರ್ಬಲ ವರ್ಗದವರೇ ಆಗಿದ್ದರು ಎಂದು ಬಿಡಿಸಿ ಹೇಳಬೇಕಾಗಿಲ್ಲ. ಅವರು ಅಲ್ಲಿಗೆ ಹೋಗಿದ್ದು 1964ರಷ್ಟು ಹಿಂದೆ.

ಬಂದರು ನಗರ ವಾಸ್ಕೋದಲ್ಲಿ ಬಂದರಿನಲ್ಲಿ ಇರುವ ಎಲ್ಲ ಕೆಲಸವೂ ಇವರಿಗಾಗಿ ಕಾಯುತ್ತಿತ್ತು. ಜತೆಗೆ ದೂರದ ದೇಶಗಳಿಂದ ಹಡಗುಗಳಲ್ಲಿ ಬಂದವರು ದೇಹಕಾಮನೆಯಿಂದ ಬಳಲುತ್ತಿದ್ದರು. ಎಷ್ಟು ದುಡ್ಡು ಚೆಲ್ಲಲೂ ಅವರು ಸಿದ್ಧರಿರುತ್ತಿದ್ದರು. 1964ರಲ್ಲಿ ವಾಸ್ಕೊ ಪುರಸಭೆಯ ಅಧ್ಯಕ್ಷರಾಗಿದ್ದ ವೈ.ಡಿ.ಚೌಗಲೆ ಎಂಬುವರು, ಎಲ್ಲ ಬಂದರು ಪಟ್ಟಣಗಳಲ್ಲಿ ದೇಹಮಾರಾಟ ದಂಧೆ ಇರಲೇಬೇಕು. ಅದನ್ನು ತಪ್ಪಿಸಲು ಸಾಧ್ಯವಿಲ್ಲ' ಎಂದಿದ್ದರು. ಅವರು ಆಮ್ಸ್ಟರ್‌ಡ್ಯಾಂ ಮತ್ತು ಹ್ಯಾಂಬರ್ಗ್ ನಗರಗಳ ವೇಶ್ಯಾವಾಟಿಕೆಗಳ ಉದಾಹರಣೆಯನ್ನೂ ಕೊಟ್ಟಿದ್ದರು.

ಕಾಲ ಬದಲಾದಂತೆ ಪುಟ್ಟ ಮತ್ತು ಗಬ್ಬು ವಾಸನೆ ಬೀರುತ್ತಿದ್ದ ಕೊಠಡಿಗಳ ನಡುವೆ ನಡೆಯುತ್ತಿದ್ದ ದೇಹಮಾರಾಟ ದಂಧೆ ಈಗ ಪಂಚತಾರಾ ಹೋಟೆಲ್‌ಗಳ ಮಟ್ಟದ ವರೆಗೆ ಬೆಳೆದು ನಿಂತಿದೆ. ಗೋವಾ ರಾಜ್ಯದಲ್ಲಿ ಈಗ ಶ್ರೀಮಂತ ವರ್ಗ, ಮಧ್ಯಮ ವರ್ಗ ಮತ್ತು ಬಡ ವರ್ಗದ ವೇಶ್ಯೆಯರು ಇದ್ದಾರೆ. ಇವರಲ್ಲಿ ಎಲ್ಲ ಭಾಷಿಕರೂ ಇದ್ದಾರೆ, ಅವರು ತಮಗೆ ತಕ್ಕ ಜಾಗಗಳಲ್ಲಿ ವೇಶ್ಯಾವೃತ್ತಿ ಮಾಡುತ್ತಿದ್ದಾರೆ. : ಕೆಲವರು ಶೋಕಿಗಾಗಿ, ಹಲವರು ಒಂದಿಷ್ಟು ಹಣದ ಖುಷಿಗಾಗಿ, ಉಳಿದವರು ಹೊಟ್ಟೆಪಾಡಿಗಾಗಿ, ಟ್ಯಾಕ್ಸಿ ಚಾಲಕರು, ಮೋಟರ್‌ಸೈಕಲ್ ಪೈಲೆಟ್ ಗಳು, ಹೋಟೆಲುಗಳ ವೇಸ್ಟರ್ ಗಳು, ಬೀಚುಗಳಲ್ಲಿ ಹಣ್ಣುಗಳನ್ನು ಮಾರುವವರು, 'ಪೂರೈಸುವ ದಲ್ಲಾಳಿಗಳ ಕೆಲಸ ಮಾಡುತ್ತಿದ್ದಾರೆ. ಗೋವಾ ರಾಜ್ಯದಲ್ಲಿ ಈಗ ಅಂದಾಜು ಮೂರು ಸಾವಿರ ಮಂದಿ ವೇಶ್ಯೆಯರು ಇದ್ದಾರೆ. ಇದೆಲ್ಲ ಯಾರಿಗೂ ಗೊತ್ತಿರಲಿಲ್ಲ ಎಂದು ಅಲ್ಲ. ಗೋವಾ ಸರ್ಕಾರಕ್ಕೂ ಎಲ್ಲ ಗೊತ್ತಿತ್ತು. ಆದರೆ, ಜನರು ಇದೂ ಸೇರಿ ಅನೇಕ ಕಾರಣಗಳಿಗಾಗಿ ಆ ರಾಜ್ಯಕ್ಕೆ ಹೋಗುತ್ತಿದ್ದರು. ಸರ್ಕಾರದ ಬೊಕ್ಕಸಕ್ಕೆ ಹಣ ಬರುತ್ತಿತ್ತು. ಅದು ಕಣ್ಣು ಮುಚ್ಚಿಕೊಂಡು ಸುಮ್ಮನಿತ್ತು. ಎಲ್ಲ ಕಾಕತಾಳೀಯ ಇರಬಹುದು : ಆಂಗ್ಲ ವಾರಪತ್ರಿಕೆಯೊಂದು, 'ಗೋವಾದಲ್ಲಿ ಕಾಮ' ಎಂದು ಮುಖಪುಟದ ವರದಿಯೊಂದನ್ನು ಪ್ರಕಟಿಸಿತು. ಯಾವ ಯಾವ ರೀತಿಯಲ್ಲಿ ಮತ್ತು ಎಲೆಲ್ಲಿ ಕಾಮದ ದಂಧೆ ನಡೆಯುತ್ತಿದೆ ಎಂದು ಅದು ವರದಿ ಮಾಡಿತ್ತು. ಅಲ್ಲಿನ ಸರ್ಕಾರಕ್ಕೆ ನಾಚಿಕೆ ಅನಿಸಿತು. “ಗೋವಾ ಎಂದರೆ ಬರೀ ದೇಹ ಮಾರಾಟ' ಎಂದು ಅಂದ ಹಾಗೆ ಅದಕ್ಕೆ ಅನಿಸಿತು. ಮೂರು ವರ್ಷಗಳ ಹಿಂದೆ ಸ್ವಯಂ ಸೇವಾ ಸಂಸ್ಥೆಯೊಂದು ದೇಹ ಮಾರಾಟ ಮಾಡುವವರ ಆರೋಗ್ಯ ತಪಾಸಣೆ ಮಾಡಿತ್ತು. ತಪಾಸಣೆಗೆ ಒಳಗಾದ 467 ಮಂದಿ ವೇಶ್ಯಯರಲ್ಲಿ 440 ಮಂದಿಗೆ ಎಚ್‌ಐವಿ ಸೋಂಕು ಇರುವುದು ಪತ್ತೆಯಾಯಿತು ಮತ್ತು ಅದೆಲ್ಲ ಅಸುರಕ್ಷಿತ ಲೈಂಗಿಕ ಸಂಬಂಧದಿಂದ ಬಂದುದು ಎಂದೂ ಗೊತ್ತಾಯಿತು. ಆ ವೇಳೆಗಾಗಲೇ ಅಲ್ಲಿ ಬಿಜೆಪಿ ಸರ್ಕಾರವೂ ಅಧಿಕಾರಕ್ಕೆ ಬಂದಿತ್ತು. ಬೀಚುಗಳ ದಂಡೆಯಲ್ಲಿ

ವಾಸಿಸುವ ಮಂದಿ ಸರ್ಕಾರಕ್ಕೆ ಕಣ್ಣುಕಿಸರಾಗಿ ಕಾಣತೊಡಗಿದರು. ಆಚೆ ಮೊರೆಯುವ ಸಮುದ್ರವನ್ನು ಸಹಿಸಿಕೊಂಡಿದ್ದ, ಈಚೆ ನೆಲದಡಿಯ ಮರಳನ್ನು ಕುಸಿಯದಂತೆ ನೋಡಿ- ಕೊಂಡಿದ್ದ ಜೀವಗಳಿಗೆ ಮುಂದೆ ಬಂದು ನಿಂತ ಜೆ.ಸಿ.ಬಿ ಯಂತ್ರಗಳನ್ನು ಎದುರಿಸುವ ಶಕ್ತಿ ಇರಲಿಲ್ಲ. ಅಲ್ಲಿ 2004ರಲ್ಲಿಯೇ 309 ಗುಡಿಸಲುಗಳು ನಾಶವಾಗಿವೆ. ಈಗ ಉಳಿದಿರುವ ಗುಡಿಸಲುಗಳಿಗೆ ಒಂದು ವಾರದ ಜೀವ ಸಿಕ್ಕಿದೆ. ಬಹುಶಃ ಅಲ್ಲಿನ ಗುಡಿಸಲುಗಳು ಉಳಿಯುವುದು ಕಷ್ಟ. ಅಕ್ರಮ ಎನ್ನುವ ಎಲ್ಲ ವಸತಿಗಳ ಪಾಡು ಇಷ್ಟೇ, ಬೆಂಗಳೂರಿನ ಸಾರಕ್ಕಿ ಕೆರೆಯ ಹಿಂದಿನ ಮಹಲುಗಳೇ ಉರುಳಿ ಬಿದ್ದಿರುವಾಗ ಬೈನಾ ಬೀಚಿನ ಗುಡಿಸಲುಗಳದು ಯಾವ ಪಾಡು? ಇದು ಕನ್ನಡ, ಕೊಂಕಣಿ, ಮರಾಠಿ ಅಥವಾ ತೆಲುಗು ಭಾಷೆಯ ಸಮಸ್ಯೆಯಲ್ಲ; ಬದುಕಿನ ಸಮಸ್ಯೆ ಇಷ್ಟು ವರ್ಷ ಅಖಂಡ ವಿಜಯಪುರ ಜಿಲ್ಲೆಯಲ್ಲಿ ಆಗಿ ಹೋದ ಶಾಸಕರ, ಸಂಸದರ, ಸಚಿವರ ಮರ್ಯಾದೆಯ ಪ್ರಶ್ನೆ.

ವಿಜಯಪುರ ಜಿಲ್ಲೆಯ ಬಹುತೇಕ ಎಲ್ಲ ತಾಲ್ಲೂಕುಗಳಿಂದ ಜನರು ವಾಸ್ಕೊ, ಪಣಜಿ ನಗರಗಳಿಗೆ ವಲಸೆ ಹೋಗುತ್ತಲೇ ಇದ್ದಾರೆ. ಈಗ ಮುದ್ದೇಬಿಹಾಳ ಪಟ್ಟಣವೊಂದರಿಂದಲೇ ನಿತ್ಯ ಒಂಬತ್ತು ಬಸ್ಸುಗಳು ವಾಸ್ಕೊ ನಗರಕ್ಕೆ ಹೋಗುತ್ತವೆ. ಎಲ್ಲ ಬಸ್ಸುಗಳಲ್ಲಿ ಕುಳಿತುಕೊಳ್ಳಲು ಬಿಡಿ ನಿಲಲ್ಲೂ ಜಾಗ ಇರುವುದಿಲ್ಲ. 1960ರ ದಶಕದಲ್ಲಿ ಆರಂಭವಾದ ಈ ವಲಸೆ ಈಗಲೂ ನಿಂತಿಲ್ಲ. ಅಂದರೆ ಈಗ ಇರುವ ಶಾಸಕರು, ಸಚಿವರು, ಸಂಸದರೂ ಇದಕ್ಕೆ ಕಾರಣಗಳನ್ನು ಮತ್ತು ತಕ್ಕ ಉತ್ತರಗಳನ್ನು ಕಂಡುಕೊಳ್ಳಬೇಕು. ಆದರೆ, ನಮ್ಮ ಶಾಸಕರು ಅಪ್ರಾಮಾಣಿಕರಾಗಿದ್ದಾರೆ. ಈಗ ಪ್ರತ್ಯೇಕ ಉತ್ತರ ಕರ್ನಾಟಕ ರಾಜ್ಯಕ್ಕೆ ಬೇಡಿಕೆ ಇಟ್ಟಿರುವ ಎ.ಎಸ್.ಪಾಟೀಲ ನಡಹಳ್ಳಿಯವರಿಗೆ ಗೋವಾ ರಾಜ್ಯ ಅಪರಿಚಿತವೇನೂ ಅಲ್ಲ. ಅವರ ವ್ಯಾಪಾರ ವಹಿವಾಟು ಇರುವುದು ಅದೇ ರಾಜ್ಯದಲ್ಲಿ. ಇಷ್ಟು ವರ್ಷಗಳ ನಂತರ ಅವರ ಕಣ್ಣಿಗೆ ಬೈನಾ ಬೀಚಿನ ಕನ್ನಡಿಗರು ಕಂಡುದು ಸೋಜಿಗವಾಗಿದೆ. 2004ರಲ್ಲಿಯೂ ಗೋವಾ ರಾಜ್ಯದ ಮುಖ್ಯಮಂತ್ರಿಗಳು ಬೈನಾ ಬೀಚಿನ ಕನ್ನಡಿಗರನ್ನು ಎತ್ತಂಗಡಿ ಮಾಡುವ ಮಾತು ಆಡಿದ್ದರು, ಮುನ್ನೂರಕ್ಕೂ ಹೆಚ್ಚು ಗುಡಿಸಲುವಾಸಿಗಳನ್ನು ಎತ್ತಂಗಡಿಯೂ ಮಾಡಲಾಗಿತ್ತು. ಆಗಲೂ ನಡಹಳ್ಳಿ ಪಾಟೀಲರು ಗೋವಾಕ್ಕೆ ಹೋಗುತ್ತಿದ್ದರು. ಆಗ ಕಾಣದ ಕನ್ನಡಿಗರ ಪಾಡು ಈಗ ಅವರ ಕಣ್ಣಿಗೆ ಬೀಳುತ್ತಿರುವುದರ ಹಿಂದಿನ ಕಾರಣಗಳನ್ನು ಅರ್ಥ ಮಾಡಿಕೊಳ್ಳದಷ್ಟು ಜನರು ದಡ್ಡರು ಎಂದು ಅವರು ಅಂದುಕೊಳ್ಳಬಾರದು. ಪಾಟೀಲರ ಮುಂದಿನ ರಾಜಕೀಯ ಆಟಕ್ಕೂ ಈಗ ಇದ್ದಕ್ಕಿದ್ದಂತೆ ಗೋವಾ ಕನ್ನಡಿಗರ ಮೇಲೆ ಅವರ ಪ್ರೀತಿ ಉಕ್ಕುತ್ತಿರುವುದಕ್ಕೂ ತಾಳೆ ಇರುವಂತೆ ಕಾಣುತ್ತದೆ.

ಗೋವಾದ ರಾಜಕಾರಣಿಗಳೂ ನಮ್ಮ ರಾಜ್ಯದ ರಾಜಕಾರಣಿಗಳಷ್ಟೇ ಅಪ್ರಾಮಾಣಿಕರು. ಅವರಿಗೆ ಬೀಚುಗಳಲ್ಲಿ ವಾಸ ಮಾಡುವ ಕನ್ನಡಿಗರ ಮತಗಳು ಬೇಕು. ತಮ್ಮ ಮತಬ್ಯಾಂಕನ್ನು ಸಂಪ್ರೀತಗೊಳಿಸಲು ಮತದಾರರ ಊರ ದೇವರಿಗೆ ಅಲ್ಲಿನ ರಾಜಕಾರಣಿಗಳು 'ನಡೆದು'ಕೊಳ್ಳುತ್ತಾರೆ. ವಿಜಯಪುರ ತಾಲ್ಲೂಕಿನ ಸೋಮದೇವರಹಟ್ಟಿ ತಾಂಡಾ ಜಾತ್ರೆಗೆ ಅಲ್ಲಿನ ರಾಜಕಾರಣಿಗಳು ಪ್ರತಿವರ್ಷ ಬರುತ್ತಾರೆ. ಕಾಣಿಕೆ ಸಲ್ಲಿಸುತ್ತಾರೆ. ಮತದಾರ ಪ್ರಭುಗಳ

ದೇವರು ಎಂದರೆ ರಾಜಕಾರಣಿಗಳಿಗೆ ಎಷ್ಟು ಪ್ರೀತಿ! ಜತೆಗೆ ಮತದಾರರಿಗೆ ಬೇಕಾದ ಗುರುತಿನ ಚೀಟಿ, ಆಧಾರ ಸಂಖ್ಯೆ, ಪಡಿತರ ಚೀಟಿ ಇತ್ಯಾದಿ ಎಲ್ಲ ಸೌಲಭ್ಯಗಳನ್ನು ಒದಗಿಸಿಕೊಟ್ಟರು. ಅದೇ ಬದುಕಿಗೊಂದು ಭದ್ರತೆ, ನಿಂತ ನೆಲಕ್ಕೆ ಭರವಸೆ ಎನ್ನುವಂತೆ ಗುಳೆ ಬಂದ ಮಂದಿ ಸಂಭ್ರಮಪಟ್ಟರು. ಆದರೆ, ನಾಲ್ಕು, ಐದು ದಶಕಗಳು ಗತಿಸಿದರೂ ಅವರ ಗುಡಿಸಲಗಳ ಮಟ್ಟವೇನೂ ಬದಲಾಗಲಿಲ್ಲ. ಸಿಟ್ಟಿನಿಂದ ಹುಟ್ಟಿಸಿದ ಮಕ್ಕಳು ಮರಿಗಳ ಸಂಖ್ಯೆ ಹೆಚ್ಚಾಯಿತು. ಅಷ್ಟೇ. ಆ ಮಕ್ಕಳಿಗೂ ಈಗ ಮಕ್ಕಳಾಗಿವೆ. ಎಲ್ಲರೂ ಸೇರಿ ಹಬ್ಬಕ್ಕೆ, ಹುಣ್ಣಿವೆಗೆ, ಜಾತ್ರೆಗೆ ಎಂದು ತಮ್ಮ ಊರಿಗೆ ಬರುತ್ತಾರೆ. ಮತ್ತೆ ವಾಪಸು ಹೋಗುತ್ತಾರೆ. ಈಗಿನ ರಾಜ್ಯ ಸರ್ಕಾರ ಕೊಡುವ ಒಂದು ರೂಪಾಯಿಗೆ ಒಂದು ಕೆ.ಜಿ ಅಕ್ಕಿಯನ್ನೂ ತಿಂಗಳಿಗೆ ಒಮ್ಮೆ ಬಂದು ಅವರು ತೆಗೆದುಕೊಂಡು ಹೋಗುತ್ತಾರೆ ಎಂದು ಕೆಲವರು ಆಡಿಕೊಳ್ಳುತ್ತಾರೆ. ನಿಜವೋ ಸುಳ್ಳೋ ಹೇಳುವುದು ಕಷ್ಟ, ಸರ್ಕಾರ ಹಳ್ಳಿಗಾಡಿನ ಜನರ ಸಾಮಾಜಿಕ ಭದ್ರತೆಗಾಗಿ ಏನೆಲ್ಲ ಮಾಡಿದೆ ಎಂದು ಹೇಳಿಕೊಳ್ಳುತ್ತದೆ. ಒಂದು ರೂಪಾಯಿಗೆ ಒಂದು ಕಿಲೋ ಅಕ್ಕಿ ಕೊಡುತ್ತದೆ, ವೃದ್ಧಾಪ್ಯ ವೇತನ, ವಿಧವಾವೇತನ, ಆ ವೇತನ, ಈ ವೇತನ ಎಂದು ತಿಂಗಳಿಗೆ ಒಮ್ಮೆ ಹಣ ಮನಿಯಾರ್ಡರ್ ಮಾಡುತ್ತದೆ. ಆದರೂ ಜನರು ಏಕೆ ಗುಳೆ ಹೋಗುತ್ತಾರೆ? ಹೋದರೂ ಪರವಾಗಿಲ್ಲ, ಅವರ ಬದುಕಿಗೆ ಒಂದು ಭದ್ರತೆ ಬಂತೇ? ಬರದೇ ಇದ್ದರೆ ಏಕೆ ಬರಲಿಲ್ಲ? ಉಳಿದವರು ಬಿಡಿ. ಕನಿಷ್ಠ, ಉತ್ತರ ಕರ್ನಾಟಕಕ್ಕೆ ಪ್ರತ್ಯೇಕ ರಾಜ್ಯ ಕೇಳುವ ರಾಜ-ಕಾರಣಿಗಳು ಮತ್ತು ಕನ್ನಡದ ಹೆಸರಿನಲ್ಲಿ ದಂಧೆ ಮಾಡುವವರು ಕೂಡಿಯೇ ಕೇಳಿಕೊಳ್ಳಬೇಕಾದ ಪ್ರಶ್ನೆ ಇದು.

19.04.2015

# ಬೇಕಿರುವುದು ಒಂದಿಷ್ಟು

# ಸೂಕ್ಷ್ಮತೆ ಅಷ್ಟೇ!...

ಇದಾಗಿ ಬಹಳ ದಿನಗಳೇನೂ ಆಗಿಲ್ಲ. ಕೇವಲ ಹನ್ನೊಂದು ತಿಂಗಳು ಕಳೆದಿವೆ. 'ಚರಕ'ದ ಪ್ರಸನ್ನ ಮತ್ತೆ ಬೀದಿಗಿಳಿಯುವ, ಉಪವಾಸ ಕೂರುವ ಮಾತು ಆಡುತ್ತಿದ್ದಾರೆ. ಅವರು ಕಳೆದ ಡಿಸೆಂಬರ್‌ನಲ್ಲಿ ಇನ್ನೂರು ಕಿಲೋ ಮೀಟರ್ ಪಾದಯಾತ್ರೆ ಮಾಡಿದ್ದರು. ಜನವರಿ 30ರ ಗಾಂಧಿ ಪುಣ್ಯತಿಥಿ ದಿನ ಹೆಗ್ಗೋಡಿನಲ್ಲಿ ಆಮರಣ ಉಪವಾಸ ಸತ್ಯಾಗ್ರಹ ಕೈಗೊಂಡಿದ್ದರು. ಈಗ ನವೆಂಬರ್ ಒಂದರಿಂದ ಮತ್ತೆ ಸರದಿ ಉಪವಾಸ, ನಂತರ ಆಮರಣ ಉಪವಾಸ ಮಾಡುವುದಾಗಿ ಪ್ರಕಟಿಸಿದ್ದಾರೆ. ಪ್ರಸನ್ನ ಮತ್ತು ಅವರ ಗೆಳೆಯರು ಹೆಚ್ಚೇನನ್ನೂ ಕೇಳುತ್ತಿಲ್ಲ. ಎಂಟು ಬಗೆಯ ಪಾರಂಪರಿಕ ವಸ್ತ್ರಗಳನ್ನು ಕೈಮಗ್ಗದಿಂದಲೇ ಉತ್ಪಾದಿಸಬೇಕು ಎಂಬ 1985ರ ಕೇಂದ್ರ ಶಾಸನವನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಬೇಕು ಎಂದು ಒತ್ತಾಯಿಸುತ್ತಿದ್ದಾರೆ! ಆಶ್ಚರ್ಯ ಅಲ್ಲವೇ? ಸರ್ಕಾರವೇ ಮಾಡಿದ ಕಾಯ್ದೆಯನ್ನು ಜಾರಿಗೆ ತರಬೇಕು ಎಂದು ಖಾಸಗಿ ಜನರು ಒತ್ತಾಯಿಸುವುದು, ಉಪವಾಸ ಮಾಡುವುದು?

ಯಾವ ಸರ್ಕಾರವೂ ಅಷ್ಟು ಸೂಕ್ಷ್ಮಮತಿ ಆಗಿರುವುದಿಲ್ಲ. ಅದು ಕೆಲವರ ಉಪವಾಸಕ್ಕಾದರೂ ಹೆದರಬೇಕು. ಆದರೆ, ಹಾಗೆ ಕಾಣುವುದಿಲ್ಲ. ಬೆಂಗಳೂರಿನಲ್ಲಿ ಭೂಗಳ್ಳರ ವಿರುದ್ಧ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್.ದೊರೆಸ್ವಾಮಿ ನೇತೃತ್ವದ ಸತ್ಯಾಗ್ರಹಕ್ಕೆ ಉತ್ತರಿಸಲು ಸರ್ಕಾರ ಮೂವತ್ತು ದಿನ ತೆಗೆದುಕೊಂಡಿತು. ಸರ್ಕಾರಗಳು ಬದಲಾಗುತ್ತವೆ. ಆಡಳಿತಗಾರರು ಬದಲಾಗುತ್ತಾರೆ. ಆದರೆ, ಹಿತಾಸಕ್ತಿಗಳು ಬದಲಾಗುವುದಿಲ್ಲ. ಭೂಗಳ್ಳರ ವಿರುದ್ಧ ಕ್ರಮ ತೆಗೆದುಕೊಳ್ಳಲು ಈ ಸರ್ಕಾರಕ್ಕೆ ಏನು ಹೆದರಿಕೆ? ಹಿಂಜರಿಕೆ?

ಇದೆಲ್ಲ ವಿಪರ್ಯಾಸ ಇರಬಹುದು ಅಥವಾ ಡಂಭ ಇರಬಹುದು. ನಮ್ಮ ಬಹುತೇಕ ರಾಜಕಾರಣಿಗಳು ಖಾದಿ ವಸ್ತ್ರವನ್ನೇ ತೊಡುತ್ತಾರೆ. ಆದರೆ, ಅವರಲ್ಲಿ ಒಬ್ಬರಿಗಾದರೂ ಖಾದಿ ಗ್ರಾಮೋದ್ಯೋಗಗಳ ಕಥೆ ಈಗ ಏನಾಗಿದೆ ಎಂದು ಗೊತ್ತೇ? ಅವರದು ಬರೀ ವೇಷ. ಒಳಗೊಂದು, ಹೊರಗೊಂದು, ಖಾದಿ ಗ್ರಾಮೋದ್ಯೋಗಗಳ ಮಳಿಗೆಗಳ ಬದಲು ಈಗ ಹಾದಿಗೊಂದು ಬೀದಿಗೊಂದು ಖಾಸಗಿ ಖಾದಿ ಮಳಿಗೆಗಳು ಬಂದಿವೆ. ಅವು ಸರ್ಕಾರ ಕೊಡುವ ರಿಬೇಟಿನ ಲಾಭ ಪಡೆಯುತ್ತಿವೆ ಎಂಬ ದೂರೂ ಇದೆ. ಈ ಕುರಿತು ಸರ್ಕಾರಕ್ಕೆ ದೂರೂ ಬಂದಿದೆ. ಏನೂ ಫಲ ಸಿಕ್ಕಂತೆ ಕಾಣಲಿಲ್ಲ. ತನ್ನ ಆಸ್ಪತ್ರೆಗಳಿಗೆ, ಹಾಸ್ಟೆಲ್‌ಗಳಿಗೆ ಖಾದಿ ಬಟ್ಟೆ, ಸಾಬೂನು ಖರೀದಿಸಿದರೆ ಸಾಕು ಎಲ್ಲ ಗ್ರಾಮೋದ್ಯೋಗಗಳು ಬದುಕುತ್ತವೆ. ಎಂದು ಸರ್ಕಾರಕ್ಕೆ ಖಾದಿ ಚಳವಳಿಗಾರರು ಎಷ್ಟು ಸಾರಿ ಹೇಳಲಿಲ್ಲ? ಹೂಂ, ಹೂಂ. ಸರ್ಕಾರ ಸರಿಯಾದ ದಿಕ್ಕಿನಲ್ಲಿ ಸ್ಪಂದಿಸುವುದಿಲ್ಲ, ಚಲಿಸುವುದೂ ಇಲ್ಲ. ಹಾಗೆ ಸ್ಪಂದಿಸಲು ಬಿಡದವರು, ಚಲಿಸಲು ಬಿಡದವರು ಅಧಿಕಾರಸ್ಥರ ಹತ್ತಿರದಲ್ಲಿಯೇ ಇರುತ್ತಾರೆ. ಕಷ್ಟಪಟ್ಟು ದುಡಿಯುವವರಿಗೆ ಆ ಸಾಮೀಪ್ಯ ಸಿಗುವುದಿಲ್ಲ.

ಈಗ ಕೈಮಗ್ಗದ್ದೂ ಅದೇ ಕಥೆ. ರಾಜ್ಯದ ಎಲ್ಲ ನಾಲ್ಕೂ ಕಂದಾಯ ವಿಭಾಗಗಳಲ್ಲಿನ ಶಾಲೆಗಳಿಗೆ ಕೈಮಗ್ಗದ ಬಟ್ಟೆಗಳನ್ನೇ ಸಮವಸ್ತ್ರವಾಗಿ ಕೊಟ್ಟರೆ ಇಡೀ ರಾಜ್ಯದ ಕೈಮಗ್ಗಗಳು ಬದುಕುತ್ತವೆ. ಆದರೆ, ಸರ್ಕಾರ ಎರಡು ವಿಭಾಗಗಳನ್ನು ವಿದ್ಯುತ್ ಮಗ್ಗಗಳಿಗೂ ಇನ್ನು ಎರಡನ್ನು ಕೈಮಗ್ಗಕ್ಕೂ ಕೊಡುವ ಚೌಕಾಸಿ ಮಾಡುತ್ತಿದೆ. ಶಿಕ್ಷಣ ಇಲಾಖೆಯು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ (ಕೆಎಚ್‌ಡಿಸಿ) ಮೂಲಕ ಸಮವಸ್ತ್ರಗಳಿಗೆ ಬೇಡಿಕೆ ಸಲ್ಲಿಸುತ್ತದೆ. ಈ ಬೇಡಿಕೆ ಎಷ್ಟು ಕೊನೆ ಗಳಿಗೆಯಲ್ಲಿ ಬರುತ್ತದೆ ಎಂದರೆ ಕೆಎಚ್‌ಡಿಸಿ ಅಷ್ಟು ಪ್ರಮಾಣದಲ್ಲಿ ಬಟ್ಟೆ ಪೂರೈಸಲು ಆಗುವುದಿಲ್ಲ. ಬಹುಶಃ ಶಿಕ್ಷಣ ಇಲಾಖೆ ಅದಕ್ಕೆ ಕಾಯುತ್ತಿರುವಂತೆ ವಿದ್ಯುತ್ ಮಗ್ಗದ ಬಟ್ಟೆಗೆ ಆ ಬೇಡಿಕೆಯನ್ನು ವರ್ಗಾಯಿಸುತ್ತದೆ. ಇದನ್ನೆಲ್ಲ ಸರಳವಾಗಿ ಬಗೆಹರಿಸಬಹುದು. ಶಿಕ್ಷಣ ಇಲಾಖೆ ಪ್ರತಿವರ್ಷ ಸಮವಸ್ತ್ರಗಳನ್ನು ಪೂರೈಸುತ್ತದೆ. ವರ್ಷಕ್ಕೆ ಅಂದಾಜು ಎಷ್ಟು ಬಟ್ಟೆ ಬೇಕು ಎಂದು ಅದಕ್ಕೆ ಗೊತ್ತಿರುತ್ತದೆ. ತನ್ನ ಬಜೆಟ್‌ನಲ್ಲಿ ಅಷ್ಟು ಹಣವನ್ನು ಮೊದಲೇ ತೆಗೆದಿರಿಸಿ ವರ್ಷದ ಆರಂಭದಲ್ಲಿಯೇ ತನಗೆ ಬೇಕಾದ ಬೇಡಿಕೆಯನ್ನು ನಿಗಮಕ್ಕೆ ಕೊಡಬಹುದಲ್ಲ? ಇಷ್ಟು ಸರಳವಾಗಿ ಕೆಲಸ ಆದರೆ ಅದಕ್ಕೆ ಸರ್ಕಾರ ಎಂದು ಏಕೆ ಕರೆಯಬೇಕು? ಅಲ್ಲಿ ಇರುವವರೆಲ್ಲ ವಕ್ರರು ಎಂದು ಒಮ್ಮೊಮ್ಮೆ ಅನಿಸುತ್ತದೆ. ಅವರಿಗೆ ನೇರವಾಗಿ ಏನನ್ನೂ ಮಾಡಲು ಬರುವುದೇ ಇಲ್ಲವೇನೋ? ಸರ್ಕಾರಗಳು ನಡೆಯುವ ರೀತಿ ನೋಡಿದರೆ ಸುಲಭವಾಗಿ ಆಗುವುದೆಲ್ಲ ಎಷ್ಟು ಕಷ್ಟವಲ್ಲವೇ ಎಂದು ಅನಿಸುತ್ತದೆ. ಕಷ್ಟ ಎಂದು ಅನಿಸುವ ಹಾಗೆ ಯಾರು ಮಾಡುತ್ತಾರೆ? ಏಕೆ ಮಾಡುತ್ತಾರೆ. ಎಲ್ಲದರಲ್ಲಿಯೂ ಗಿಂಬಳ ಸಿಗಬೇಕು ಎಂದು ಎಲ್ಲರೂ ಬಯಸುತ್ತಾರೆಯೇ?

ಇಂಥದಕ್ಕೆಲ್ಲ ಒಂದಿಷ್ಟು ಸೂಕ್ಷ್ಮತೆ ಎಂಬುದು ಇರಬೇಕು. ಸರ್ಕಾರ ಎಂಬುದು ಒಂದು ಯಂತ್ರ ಅದಕ್ಕೆ ಸೂಕ್ಷ್ಮತೆ ಇರುವುದು ಕಷ್ಟ. ಆದರೆ, ಆಡಳಿತ ಮಾಡುವವರಿಗಾದರೂ ಒಂದಿಷ್ಟು ಸೂಕ್ಷ್ಮತೆ ಎಂಬುದು ಇರಬೇಕು. ಇವೆಲ್ಲ ಭಾರಿ ಸಂಗತಿಗಳೂ ಅಲ್ಲ. ಯಾವನೋ

ಒಬ್ಬ ಅಧಿಕಾರಿಯನ್ನು ಕರೆದು, 'ನೋಡಯ್ಯ, ನೀನು ಏನು ಮಾಡುತ್ತೀಯೋ ಗೊತ್ತಿಲ್ಲ, ಈ ಕೆಲಸ ಮಾಡಿ ನನಗೆ ವರದಿ ಕೊಡು' ಎಂದು ಮಂತ್ರಿಯಾದವರು ಹೇಳಿದರೆ ಆ ಅಧಿಕಾರಿ ಆ ಕೆಲಸವನ್ನು ತಲೆ ಮೇಲೆ ಹೊತ್ತುಕೊಂಡು ಮಾಡುತ್ತಾನೆ. ಸರ್ಕಾರಕ್ಕೆ ಮನಸ್ಸು ಎಂಬುದೂ ಇರುವುದಿಲ್ಲ. ಅದು ಯಂತ್ರ ಮನಸ್ಸು ಆಡಳಿತಗಾರರಲ್ಲಿಯೇ ಇರಬೇಕು.

ನಾನು ಕೇಂದ್ರ ಸರ್ಕಾರದ ಕೈಮಗ್ಗ ನೀತಿಯನ್ನು ತೆಗೆದು ನೋಡುತ್ತಿದ್ದೆ. ಅಲ್ಲಿ ಬರೀ ಸಾಲ ಮನ್ನಾ, ಬಡ್ಡಿ ಮನ್ನಾ ಮತ್ತು ಸಾಲ ನೀಡಿಕೆಯಂಥ ಅಂಶಗಳೇ ಇವೆ. ರೈತರು, ನೇಕಾರರು ಸಾಲ ಮಾಡಿಕೊಂಡಿದ್ದಾರೆ ನಿಜ. ಆದರೆ, ಬರೀ ಸಾಲ ಮತ್ತು ಬಡ್ಡಿ ಮನ್ನಾ ಮಾಡುವುದರಿಂದ ಅವರು ಬದುಕುತ್ತಾರೆಯೇ? ರೈತರ ಉತ್ಪನ್ನಗಳಿಗೆ ಹೇಗೆ ಲಾಭದಾಯಕ ಬೆಲೆ ಬೇಕೋ ಹಾಗೆಯೇ ನೇಕಾರರ ಉತ್ಪನ್ನಗಳಿಗೂ ಸೂಕ್ತ ಬೆಲೆ ಸಿಗಬೇಕು. ಅವರಿಬ್ಬರಿಗೂ ಉತ್ತಮ ಮಾರುಕಟ್ಟೆ ಸಿಕ್ಕರೆ ಸಾಲದ ಸುಳಿಯಲ್ಲಿ ಅವರು ಸಿಲುಕುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಸುಮ್ಮಸುಮ್ಮನೇ ಸಾಲ ಮಾಡಬೇಕು ಎಂದು ಯಾರು ಬಯಸುತ್ತಾರೆ? ಬಡ್ಡಿ ಮತ್ತು ಸಾಲ ಮನ್ನಾ ಮಾಡುವುದು ವೋಟು ತರುವ ಜನಪ್ರಿಯ ದಾರಿ ಆಗಿರಬಹುದು. ಆದರೆ, ಒಂದು ದೂರಗಾಮಿ ನೀತಿಯನ್ನು ರೂಪಿಸುವಾಗಲಾದರೂ ಒಂದು ಕ್ಷೇತ್ರದ ಮೂಲಭೂತ ಸಮಸ್ಯೆಗಳ ಕಡೆಗೆ ಗಮನ ಕೊಡದೇ ಇದ್ದರೆ ಆ ಸಮಸ್ಯೆ ಕೊನೆಯವರೆಗೂ ಹಾಗೆಯೇ ಉಳಿಯುತ್ತದೆ. ಈಗ ಆಗಿರುವುದೂ ಅದೇ.

'ಫ್ಯಾಬ್ ಇಂಡಿಯಾ', 'ದೇಸಿ' ಯಂಥ ಮಳಿಗೆಗಳಲ್ಲಿ ಈಗಲೂ ಖಾದಿ, ಕೈಮಗ್ಗದ ವಸ್ತ್ರಗಳಿಗೆ ಉತ್ತಮ ಬೇಡಿಕೆ ಇದೆ. ಅದೇ ಕೆಎಚ್‌ಡಿಸಿ ಅಂಗಡಿಯಲ್ಲಿ ನೊಣ ಹೊಡೆಯುವವರೂ ಇರುವುದಿಲ್ಲ. ಚಿಕ್ಕಪೇಟೆಯ ರೇಷ್ಮೆ ಅಂಗಡಿಗಳಲ್ಲಿ ಕುಳಿತುಕೊಳ್ಳಲೂ ಜಾಗ ಸಿಗುವುದಿಲ್ಲ. ಸರ್ಕಾರದ ರೇಷ್ಮೆ ಸೀರೆ ಮಳಿಗೆಗಳಲ್ಲಿ ಆ ಸಂಭ್ರಮವೇ ಇರುವುದಿಲ್ಲ. ನಾವೆಲ್ಲ ಎಷ್ಟೇ ಆಧುನಿಕ ಆಗಿರಬಹುದು, ಆದರೆ 'ದೇಸಿ' ಎಂಬುದು ನಮ್ಮ ಮನಸ್ಸಿನ ಮೃದು ಜಾಗದಲ್ಲಿ ಕುಳಿತುಕೊಂಡು ಬಿಟ್ಟಿದೆ. ಖಾದಿ, ಕೈಮಗ್ಗದ ಪ್ರದರ್ಶನಕ್ಕೆ ಸಾವಿರಾರು ಮಂದಿ ಈಗಲೂ ಹೋಗುತ್ತಾರೆ. ಏನನ್ನಾದರೂ ಖರೀದಿ ಮಾಡುತ್ತಾರೆ. ಗಾಂಧಿ ಸತ್ತು ಎಷ್ಟೋ ವರ್ಷಗಳೇ ಆಗಿರಬಹುದು, ನಾವು ಅವರನ್ನು ಮರೆತಿಲ್ಲ. ಗುಡಿ ಕೈಗಾರಿಕೆಗಳ ಪುನಶ್ಚೇತನದ ಎಲ್ಲ ಪ್ರಯತ್ನಗಳ ಹಿಂದೆ ಗಾಂಧಿಯ ಮನಸ್ಸೇ ಇದೆ. ಈಗಲೂ ಪ್ರಸನ್ನ ಅವರ ಜತೆಗೆ ತರುಣ ಪೀಳಿಗೆ ನಿಂತುಕೊಂಡಿದೆ. ಕೈಮಗ್ಗ ಕ್ಷೇತ್ರವನ್ನು ಉಳಿಸಲು ತಾವು ಏನು ಮಾಡಬೇಕು ಎಂದು ಅದು ಕೇಳುತ್ತಿದೆ. ಇ-ವಹಿವಾಟಿನ ಮೂಲಕ ಕೈಮಗ್ಗದ ಕೆಲವು ವಸ್ತ್ರಗಳನ್ನಾದರೂ ಮಾರಾಟ ಮಾಡಲು ಈ ಯುವ ಪೀಳಿಗೆ ಯೋಚನೆ ಮಾಡುತ್ತಿದೆ. ಕೇರಳದಲ್ಲಿ ವರ್ಷಗಳ ಹಿಂದೆಯೇ ಐವರು ಎಂಜಿನಿಯರಿಂಗ್ ಪದವೀಧರರು ಕೈಮಗ್ಗ ಕ್ಷೇತ್ರಕ್ಕೆ ಪ್ರವೇಶಿಸಿದರು. ಕೈಮಗ್ಗದಲ್ಲಿ ತಯಾರಾದ ಉತ್ಪನ್ನಗಳನ್ನು ಖರೀದಿಸಿ ಮಾರಲು ಮುಂದಾದರು. ಅವರಿಗೆ ಆ ರಾಜ್ಯದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ವಿ.ಸೋಮಸುಂದರಂ ಎಂಬುವರು ನೆರವಾದರು. ತಮಿಳುನಾಡಿನಲ್ಲಿಯೂ ಇಂಥ ಪ್ರಯತ್ನಗಳು ನಡೆದಿವೆ. ಅವೆಲ್ಲ ಯಶಸ್ಸಿನ ಕಥೆಗಳು. ಕರ್ನಾಟಕದಲ್ಲಿ ಪ್ರಸನ್ನ ಕಟ್ಟಿದ 'ಚರಕ' ಕೂಡ ಅಂಥದೇ ಒಂದು ಯಶಸ್ಸಿನ ಕಥೆ.

ಇಲ್ಲೆಲ್ಲ ಮೂಲ ವಸ್ತುವನ್ನು ಹಾಗೆಯೇ ಉಳಿಸಿಕೊಳ್ಳಲಾಗಿದೆ. ಅದಕ್ಕೆ ಒಂದಿಷ್ಟು ಆಧುನಿಕತೆಯ ಸ್ಪರ್ಶ ಕಲ್ಪಿಸಲಾಗಿದೆ. ವಿನ್ಯಾಸದಲ್ಲಿ ಒಂದಿಷ್ಟು ಹೊಸತನ ಬಂದಿದೆ. ಅದನ್ನು ಮಾರುವ ಅಂಗಡಿಗಳು ಬದಲಾಗಿವೆ. ಮಾರುವವರೂ ಬದಲಾಗಿದ್ದಾರೆ. ಸರ್ಕಾರ ಈಗ ಮಾಡಬೇಕಾದುದೂ ಅಷ್ಟೇ. ಇದೆಲ್ಲ ದುಡ್ಡು ಕಾಸಿನ ಸಂಗತಿಯಲ್ಲ. ಯಾವುದು 'ಪಾರಂಪರಿಕ' ಎಂದು ಸರ್ಕಾರವೇ ಗುರುತಿಸಿದೆಯೋ ಆ ಕ್ಷೇತ್ರವನ್ನು ಕೈಮಗ್ಗ ವಲಯಕ್ಕೇ ಬಿಟ್ಟು ಬಿಡಬೇಕು. ರಾಜ್ಯದ ಎಲ್ಲ ಮಕ್ಕಳಿಗೆ ಕೈ ಮಗ್ಗದ ಬಟ್ಟೆಯನ್ನೇ ಖರೀದಿ ಮಾಡಬೇಕು, ಅದು ರಾಜ್ಯದ ನೇಕಾರರಿಂದಲೇ ಖರೀದಿ ಆಗಬೇಕು ಎಂದು ಕಟ್ಟು ನಿಟ್ಟು ಮಾಡಬೇಕು. ಅದಕ್ಕೆ ಅಗತ್ಯವಾದ ಹಣವನ್ನು ವರ್ಷದ ಆರಂಭದಲ್ಲಿಯೇ ಬಿಡುಗಡೆ ಮಾಡಬೇಕು. ಉಳಿದ ಕಡೆ ಬೇಕಾದರೆ ವಿದ್ಯುತ್ ಮಗ್ಗದ ಬಟ್ಟೆಯನ್ನು ಖರೀದಿ ಮಾಡಬಹುದು.

ಇದೆಲ್ಲ ಸೋಜಿಗ ಎಂದು ಅನಿಸಬಹುದು: ಪ್ರಸನ್ನ ಮತ್ತು ಗೆಳೆಯರು 1985ರ ಕೈಮಗ್ಗ ಮೀಸಲು ಕಾಯ್ದೆ ಜಾರಿಗೆ ಒತ್ತಾಯಿಸುತ್ತಿದ್ದಾರೆ. ಬ್ರಿಟಿಷರೂ ಇಂಥದೇ ಕಾಯ್ದೆಯನ್ನು ಇನ್ನೂ 80 ವರ್ಷಗಳ ಹಿಂದೆ ರೂಪಿಸಿದ್ದರು. ಅವರಿಗೂ ಕೈಮಗ್ಗ ಉದ್ಧಾರ ಆಗುವುದು ಬೇಕಿರಲಿಲ್ಲ. ಕೈಮಗ್ಗಗಳ ಮಗ್ಗುಲು ಮುರಿಯಬೇಕು ಎಂದೇ ಅವರು ವಿದ್ಯುತ್ ಮಗ್ಗಗಳಿಗೆ ಉತ್ತೇಜನ ಕೊಟ್ಟಿದ್ದರು. ಆದರೆ, ಕೈಮಗ್ಗ ನೇಕಾರರ ಚಳವಳಿಗೆ ಮಣಿದು 1905ರಲ್ಲಿ ಕೈಮಗ್ಗ ಕ್ಷೇತ್ರಕ್ಕೆ 23 ವಸ್ತ್ರಗಳನ್ನು ನಿಗದಿ ಮಾಡಿ ಆದೇಶ ಹೊರಡಿಸಿದರು. ಅದನ್ನು ಕಟ್ಟು ನಿಟ್ಟಾಗಿ ಜಾರಿಗೂ ತಂದರು. ಈಗಿನ ಸರ್ಕಾರ ಅದಕ್ಕಿಂತ ಕಡೆಯೇ?

26-10-2014

# ಉತ್ತರ ಕರ್ನಾಟಕ ಎಂಬ

# ಅಳುವ ಕೂಸು

ಸತ್ಯವೇ ಹಾಗೆ. ಅದು ಕಹಿಯಾಗಿರುತ್ತದೆ, ಅರಗಿಸಿಕೊಳ್ಳಲು ಕಷ್ಟಕರವಾಗಿರುತ್ತದೆ, ಅರ್ಥ ಮಾಡಿಕೊಳ್ಳುವುದು ಬೇಡ ಎಂದು ಅನಿಸುತ್ತದೆ; ಎದುರಿಸುವುದೇ ಬೇಡ ಎಂದುಕೊಂಡರೂ ಮತ್ತೆ ಮತ್ತೆ ಎದುರು ಬಂದು ಧುತ್ತೆಂದು ನಿಲ್ಲುತ್ತದೆ. ಈಗ ಮತ್ತೆ ಎದ್ದು ಬಂದು ನಮ್ಮ ಮುಂದೆ ನಿಂತಿದೆ. ಕರ್ನಾಟಕವನ್ನು ಎರಡಾಗಿ ಒಡೆಯಬೇಕೇ ಎಂಬುದು ಆ ಪ್ರಶ್ನೆ, ಇದನ್ನು ಕೇಳಿದ ಶಾಸಕ ಉಮೇಶ ಕತ್ತಿಯವರೇನೂ ಮೊದಲಿಗರಲ್ಲ. ಬಹುಶಃ ಕೊನೆಯವರೂ ಆಗಿರಲಾರರು. ತೀರಾ ಮೊನ್ನೆ ಮೊನ್ನೆ ವರೆಗೆ ಹೈದರಾಬಾದ್ ಕರ್ನಾಟಕದಲ್ಲಿ ವೈಜನಾಥ ಪಾಟೀಲರು ಅದನ್ನೇ ಕೇಳುತ್ತಿದ್ದರು. ಅಳುವ ಕೂಸಿಗೆ ಮಾತ್ರ ಯಾರಾದರೂ ಹಾಲು ಕೊಡುತ್ತಾರೆ. ಸುಮ್ಮನಿದ್ದರೆ ಆಡಿಕೊಂಡು ಇರಲಿ ಬಿಡು ಎನ್ನುತ್ತಾರೆ. ಪ್ರಶ್ನೆಯನ್ನು ಎದುರಿಸುವುದೇ ಬೇಡ ಎಂದಾಗಲೆಲ್ಲ ಆ ಪ್ರಶ್ನೆ ಕೇಳಿದವರು ಯಾರು, ಅದಕ್ಕೆ ಹಿನ್ನೆಲೆಯೇನು, ಮುನ್ನೆಲೆಯೇನು ಎಂದು ಕಾರಣ ಹುಡುಕುತ್ತ ಪ್ರಶ್ನೆಯನ್ನೇ ಅವಗಣಿಸಿ ಬಿಡುವುದು ಇಂದು ನಿನ್ನೆಯ ವಿದ್ಯಮಾನವಲ್ಲ. ಕತ್ತಿಯವರ ವಿಚಾರದಲ್ಲಿಯೂ ಅದೇ ಆಗುತ್ತಿದೆ. ಅವರನ್ನು ಉಪೇಕ್ಷಿಸುವುದು ಸುಲಭ, ಅವರ ಮೈಮೇಲೆ ಬಿದ್ದು ಅವರನ್ನು ಅವಮಾನಿಸುವುದೂ ಸುಲಭ. ಮಾಧ್ಯಮಗಳಲ್ಲಿನ ಬಾಯಿಬಡಿಕರು ಮತ್ತು ಚಳವಳಿ ಹೆಸರಿನ ಪಡ್ಡೆ ಹುಡುಗರು ಅದನ್ನೇ ಮಾಡುತ್ತಿದ್ದಾರೆ. ಅದರಿಂದ ಅವರೇನು ಸಾಧಿಸುತ್ತಾರೆ ಗೊತ್ತಿಲ್ಲ. ಆದರೆ, ಮತ್ತೆ ಮತ್ತೆ ಎದ್ದು ಬರುವ ಒಂದು ನೈಜ ಪ್ರಶ್ನೆಯನ್ನು ಎದುರಿಸುವ ಬಗೆ ಇದಲ್ಲ. ಅದಕ್ಕೆ ಕಾರಣಗಳನ್ನು ಹುಡುಕಬೇಕು. ಅವರು ಏಕೆ ಹಾಗೆ ಹೇಳುತ್ತಿದ್ದಾರೆ ಎಂದು

ಶೋಧಿಸಬೇಕು. ವೈಜನಾಥ ಪಾಟೀಲರನ್ನೂ ಹೀಗೆಯೇ ಹೀಗಳೆದೆವು. ಹೀಗಳೆಯಲು ಬಹಳ ದೊಡ್ಡ ಬುದ್ಧಿವಂತಿಕೆಯೇನೂ ಬೇಕಾಗಿಲ್ಲ. ಬಾಯಿ ಜೋರಾಗಿದ್ದರೆ ಸಾಕು. ಆದರೆ, ಬಾಯಿ ಇಲ್ಲದವರು ಅನೇಕ ಜನರು ವೈಜನಾಥ ಪಾಟೀಲರನ್ನೋ, ಉಮೇಶ ಕತ್ತಿಯವರನ್ನೂ ಬೆಂಬಲಿಸುತ್ತಿರಬಹುದು ಎಂದು ಅರ್ಥ ಮಾಡಿಕೊಳ್ಳುವ ತಾಳ್ಮೆ ನಮ್ಮಲ್ಲಿ ಇರಬೇಕು. ಕತ್ತಿಯವರು ಕೇಳಿದ ಕೂಡಲೇ ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯ ಆಗಿ ಬಿಡುವುದಿಲ್ಲ. ಆದರೆ, ಅದು ಒಂದು ಸಶಕ್ತ ಭಾಗವಾಗಿ ಒಟ್ಟು ಕರ್ನಾಟಕದಲ್ಲಿ ಅಳವಡಬೇಕು ಎನ್ನುವವರು ಕತ್ತಿಯಂಥವರ ಮಾತನ್ನು ಹತ್ತಿಕ್ಕಲು ಪ್ರಯತ್ನ ಮಾಡುವುದಿಲ್ಲ.

ಕತ್ತಿಯವರು ಪ್ರತ್ಯೇಕ ಕರ್ನಾಟಕ ಕೇಳುತ್ತಿರುವುದಕ್ಕೆ ತಕ್ಷಣದ ಬಲಿಷ್ಠ ಕಾರಣಗಳೇನೂ ಇದ್ದಂತೆ ಇಲ್ಲ. ಆದರೆ, ಐತಿಹಾಸಿಕವಾದ ಅನೇಕ ಕಾರಣಗಳು ಈಗಲೂ ಜ್ವಲಂತವಾಗಿವೆ. 1990ರ ದಶಕದಲ್ಲಿ ಎಚ್.ಕೆ.ಪಾಟೀಲರು ವಿಧಾನ ಪರಿಷತ್ತಿನಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದಾಗ ಉತ್ತರ ಕರ್ನಾಟಕಕ್ಕೆ ಎಲ್ಲೆಲ್ಲಿ ಅನ್ಯಾಯವಾಯಿತು ಮತ್ತು ಇನ್ನೂ ಆಗುತ್ತಿದೆ ಎಂಬ ಕುರಿತು ಅಂಕಿ-ಅಂಶಗಳ ಆಧಾರ ಸಮೇತ ದೊಡ್ಡ ಪುಸ್ತಕವನ್ನೇ ಬರೆದಿದ್ದರು. ಮುಂದೆ ಏನಾಯಿತು ಗೊತ್ತಾಗಲಿಲ್ಲ. ಅವರ ಸರ್ಕಾರ ಬಂತು. ಅವರೂ ಅದರಲ್ಲಿ ಸಚಿವರಾದರು. ಎಚ್.ಕೆ.ಪಾಟೀಲರು ನಂತರ ಆ ಸುದ್ದಿ ಮಾತನಾಡಿದ್ದು ನಮಗೆ ಗೊತ್ತಿಲ್ಲ. ಹಾಗೆಂದು ಉತ್ತರ ಕರ್ನಾಟಕದ ಎಲ್ಲ ಸಮಸ್ಯೆಗಳು ಪರಿಹಾರ ಆದುವೇ ಎಂದರೆ ಉತ್ತರ ಸಮಾಧಾನಕರವಾಗಿ ಇರುವುದಿಲ್ಲ.

ಎಚ್.ಕೆ.ಪಾಟೀಲರು ಸುಮ್ಮನಾದುದಕ್ಕೆ ಅವರು ಸಚಿವರಾಗಿದ್ದ ಎಸ್.ಎಂ.ಕೃಷ್ಣ ಸರ್ಕಾರ ಡಾ.ಡಿ.ಎಂ.ನಂಜುಂಡಪ್ಪ ನೇತೃತ್ವದಲ್ಲಿ ಉನ್ನತಾಧಿಕಾರ ಸಮಿತಿ ರಚನೆ ಮಾಡಿದ್ದು ಕಾರಣವಾಗಿರಬಹುದು. 953 ಪುಟಗಳ 34 ಅಧ್ಯಾಯಗಳ ನಂಜುಂಡಪ್ಪ ಸಮಿತಿಯ ಸುದೀರ್ಘ ವರದಿಯಲ್ಲಿ ಇಡೀ ಕರ್ನಾಟಕದ ಅಸಮತೋಲನಕ್ಕೆ ಹಿಡಿದ ಕನ್ನಡಿ ಈಗಲೂ ನಮ್ಮ ಕಣ್ಣ ಮುಂದೆ ಇದೆ. ನಂಜುಂಡಪ್ಪ ಸಮಿತಿ ಬರೀ ಉತ್ತರ ಕರ್ನಾಟಕ ಮಾತ್ರ ಹಿಂದುಳಿದಿದೆ ಎಂದು ಹೇಳಲಿಲ್ಲ. ಆಗಿನ 175 ತಾಲ್ಲೂಕುಗಳ ಪೈಕಿ 114 ತಾಲ್ಲೂಕುಗಳು ಹಿಂದುಳಿದಿವೆ ಎಂದು ಅದು ಹೇಳಿತ್ತು. 2003ರಿಂದ 2010ರ ನಡುವಿನ ಅವಧಿಯಲ್ಲಿ 16,000 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಈ ಅಸಮತೋಲನವನ್ನು ನೀಗಿಸಬೇಕು ಎಂದೂ ವರದಿ ಹೇಳಿತ್ತು. ಕಳೆದ ಆರೇಳು ವರ್ಷಗಳಲ್ಲಿ ರಾಜ್ಯ ಸರ್ಕಾರ 10,000 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದೆ. ಆದರೆ, ಕರ್ನಾಟಕದ ಹಿಂದುಳಿದ ತಾಲ್ಲೂಕುಗಳ ಸ್ವರೂಪದಲ್ಲಿ ಏನಾದರೂ ಬದಲಾವಣೆ ಆಗಿದೆಯೇ ಎಂದರೆ ಉತ್ತರ ಕೊಡುವುದು ಕಷ್ಟ. ಒಂದು ಪ್ರದೇಶದ ಅಭಿವೃದ್ಧಿಗೆ ಗಟ್ಟಿಯಾದ ಬುನಾದಿ ಇರಬೇಕಾಗುತ್ತದೆ. ಆ ಬುನಾದಿ ಮೂಲ ಸೌಕರ್ಯಗಳದ್ದು. ದುರಂತ ನೋಡಿ, ಕದಂಬರಿಂದ ಹಿಡಿದು ವಿಜಯನಗರದ ಅರಸರ ವರೆಗಿನ ಕರ್ನಾಟಕದ ಎಲ್ಲ ರಾಜ ಮನೆತನಗಳು ಉತ್ತರ ಕರ್ನಾಟಕದ ಮೂಲದವು. ವಿಜಯನಗರದ ಅರಸರ ಕಾಲದಲ್ಲಿ ರಸ್ತೆಯಲ್ಲಿ ಮುತ್ತು ರತ್ನ ಮಾರಿದ್ದೇ ಆಯಿತು. ನಂತರ ಆ ನಾಡು ಅತ್ತ ಹೈದರಾಬಾದಿನ ನವಾಬರ ಕೈಯಲ್ಲಿ ಇತ್ತ

ಮರಾಠಾ ಸಂಸ್ಥಾನಿಕರ ಕೈಯಲ್ಲಿ ಸಿಕ್ಕು ನಲುಗಿ ಹೋಯಿತು. ಮೈಸೂರಿಗೆ ಅದೃಷ್ಟವಿತ್ತು : ಒಳ್ಳೆಯ ಅರಸರು ಸಿಕ್ಕರು. ಇನ್ನು ಎಷ್ಟು ವರ್ಷ ಕಳೆದರೂ ನಮ್ಮ ಹುಬ್ಬಳ್ಳಿ, ಬೆಳಗಾವಿ ಕಲ್ಬುರ್ಗಿಗಳು ಮೈಸೂರು ಆಗಲಾರವು. ಅಲ್ಲಿನ ಜನರು ಈಗಷ್ಟೇ ಒಳ್ಳೆಯ ರಸ್ತೆಗಳನ್ನು ನೋಡುತ್ತಿದ್ದಾರೆ! ಮೈಸೂರು ಭಾಗಕ್ಕೆ ಒಳ್ಳೆಯ ಅರಸರು ಮಾತ್ರವಲ್ಲ, ದಿವಾನರೂ ಸಿಕ್ಕರು. ಕನ್ನಂಬಾಡಿ ಮತ್ತು ಆಲಮಟ್ಟಿ ಅಣೆಕಟ್ಟೆಗಳ ನಿರ್ಮಾಣದ ನಡುವಿನ ಕಾಲದ ಅಂತರವನ್ನೇ ನೋಡಿಬಿಟ್ಟರೆ ಸಾಕು ಉತ್ತರ ಕರ್ನಾಟಕ ಹೇಗೆ ಮತ್ತು ಎಲ್ಲಿ ಹಿಂದೆ ಉಳಿಯಿತು ಎಂದು ತಿಳಿಯುತ್ತದೆ. ಹಸಿರು ಮತ್ತು ನೀರು ಇಲ್ಲದ ಊರುಗಳು ಬೆಳೆಯುವುದು ಕಷ್ಟ ನಂಜುಂಡಪ್ಪ ವರದಿಯ ಪ್ರಕಾರವೇ 114 ಹಿಂದುಳಿದ ತಾಲ್ಲೂಕುಗಳ ಪೈಕಿ 59 ತಾಲ್ಲೂಕುಗಳು ಉತ್ತರ ಕರ್ನಾಟಕದಲ್ಲಿಯೇ ಇವೆ. ಅದರಲ್ಲಿ 39 ಅತಿ ಹೆಚ್ಚು ಹಿಂದುಳಿದ ತಾಲ್ಲೂಕುಗಳು, ಅವು ಎಲ್ಲವೂ ಉತ್ತರದಲ್ಲಿಯೇ ಇವೆ. ಬೆಂಗಳೂರು ಮತ್ತು ಮೈಸೂರು ಕಂದಾಯ ವಿಭಾಗದ ಜಿಲ್ಲೆ ಮತ್ತು ತಾಲ್ಲೂಕುಗಳಿಗೆ ಹೋಲಿಸಿದರೆ ಉತ್ತರದ ಬೆಳಗಾವಿ ಮತ್ತು ಕಲ್ಬುರ್ಗಿ ಕಂದಾಯ ವಲಯಗಳಲ್ಲಿ ತಲಾವಾರು ಆದಾಯ ಈಗಲೂ ಕಡಿಮೆಯೇ ಇದೆ. ಒಂದು ಪ್ರದೇಶವನ್ನು ಹಿಂದುಳಿದ ಪ್ರದೇಶ ಎಂದು ಗುರುತಿಸಲು ಅನೇಕ ಮಾನದಂಡಗಳು ಇವೆ. ಈ ಯಾವ ಮಾನದಂಡಗಳಲ್ಲಿಯೂ ಉತ್ತರ ಕರ್ನಾಟಕದ ಜಿಲ್ಲೆಗಳು ಮುಂದೆ ಇಲ್ಲ.

ಒಂದು ಸಾರಿ ಒಂದು ಪ್ರದೇಶ ಹಿಂದುಳಿದುದು ಎಂಬ ತಲೆಪಟ್ಟಿ ಗಳಿಸಿಬಿಟ್ಟರೆ ಸಾಕು ಅಲ್ಲಿನ ಜನರು ಒರಟರು, ದಡ್ಡರು ಎಂಬ ಹಣೆಪಟ್ಟಿ ಹಚ್ಚಿಕೊಂಡು ಬಿಡುತ್ತಾರೆ. ಉತ್ತರ ಕರ್ನಾಟಕದ ಮಂದಿಗೆ ಈಗ ಆಗಿರುವುದೂ ಅದೇ, ಈಗ ಏಕೆ, ಆಗಿನ ಮೈಸೂರು ರಾಜ್ಯ ಒಂದಾಗಲು ದಕ್ಷಿಣದ ಮಂದಿ ಸಿದ್ಧರಿರಲಿಲ್ಲ. ಅವರಿಗೆ ಒಂದು ರಾಜ್ಯವಾಗದೇ ಇರಲು ಅನೇಕ ಕಾರಣಗಳು ಇದ್ದುವು. ಮುಖ್ಯವಾದುದು ರಾಜಕೀಯ ಅಧಿಕಾರ ತಮ್ಮ ಕೈ ಬಿಟ್ಟು ಹೋಗುತ್ತದೆ ಎಂದು ಅವರಿಗೆ ಗೊತ್ತಿತ್ತು. ಮುಂದೆ ಹಾಗೆಯೇ ಆಯಿತು ಕೂಡ. ಆದರೆ, ಮೈಸೂರಿನ ಜನರಿಗೆ ತಮ್ಮ ಪ್ರದೇಶದ ಬಗ್ಗೆ ಎಷ್ಟು ಹೆಮ್ಮೆ ಇತ್ತು ಎಂದರೆ ಒಂದು ಊರಿನ ಹೆಸರನ್ನು ಇಡೀ ರಾಜ್ಯಕ್ಕೂ ವಿಸ್ತರಿಸುವುದರಲ್ಲಿ ಅವರು ಯಶಸ್ವಿಯಾದರು. ಭಾಷಾವಾರು ಪ್ರಾಂತಗಳ ರಚನೆಯಾದಾಗ ಮದ್ರಾಸ್ ಅನ್ನು ಹೊರತುಪಡಿಸಿ ಹೀಗೆ ಒಂದು ಊರಿನ ಹೆಸರು ಇಡೀ ದೇಶದಲ್ಲಿ ಯಾವ ರಾಜ್ಯಕ್ಕೂ ಇಟ್ಟಿರಲಿಲ್ಲ. ರಾಜ್ಯದ ಹೆಸರು ಮೈಸೂರು ಹೋಗಿ ಕರ್ನಾಟಕ ಆಗಲು ಮತ್ತೆ 17 ವರ್ಷ ಕಾಯಬೇಕಾಯಿತು.

ಮೈಸೂರಿನವರು ಅಂದುಕೊಂಡ ಹಾಗೆಯೇ ಉತ್ತರ ಕರ್ನಾಟಕ ರಾಜ್ಯ ಸರ್ಕಾರದ ರಚನೆಯಲ್ಲಿ ದೊಡ್ಡ ಪಾಲನ್ನು ಹೊಂದಿತು. ಈ ಭಾಗದವರೇ ಮುಖ್ಯಮಂತ್ರಿಗಳೂ ಆದರು. ಅವರಿಗೆ ಇಚ್ಛಾಶಕ್ತಿ ಇರಲಿಲ್ಲವೋ, ಸಾಮರ್ಥ್ಯವೇ ಇರಲಿಲ್ಲವೋ ಅಥವಾ ಯಾರು ಮುಖ್ಯಮಂತ್ರಿಯಾದರೂ ಸರಿಪಡಿಸಬೇಕಾದ ಅಂತರ ಅಜಗಜಾಂತರ ಎನ್ನುವಂತೆ ಇತ್ತೋ ಉತ್ತರ ಕರ್ನಾಟಕ ಹಿಂದೆಯೇ ಉಳಿಯಿತು. ಆ ಭಾಗದಿಂದ ಆಯ್ಕೆಯಾಗಿ ಹೋದ ಬಹುಪಾಲು ಶಾಸಕರು ದೂರದೃಷ್ಟಿಯಿಲ್ಲದವರೂ, ಕಡುಭ್ರಷ್ಟರೂ, ವಿಲಾಸಿಗಳೂ, ಜಮೀನುದಾರರೂ, ಆಲಸಿಗಳೂ ಆಗಿದುದೂ ದಕ್ಷಿಣ ಕರ್ನಾಟಕದ ಸಮಕ್ಕೆ ಆ ಭಾಗ ಬರಲು ಸಾಧ್ಯವೇ ಆಗಲಿಲ್ಲ. ಅಭಿವೃದ್ಧಿ ಉದ್ದೇಶ ಇಟ್ಟುಕೊಂಡು ಅನೇಕ ಮಂಡಳಿಗಳೂ,

ನಿಗಮಗಳೂ ರಚನೆಯಾದುವು. ಯಾರಿಗೆ ಒಳಿತಾಯಿತೋ ಗೊತ್ತಾಗಲಿಲ್ಲ. ಒಳ್ಳೆಯ ರಸ್ತೆಗಳು, ಒಳ್ಳೆಯ ಶಾಲೆಗಳು, ಒಳ್ಳೆಯ ಆಸ್ಪತ್ರೆಗಳು ಈಗಲೂ ಉತ್ತರ ಕರ್ನಾಟಕದ ಅನೇಕ ಊರುಗಳಿಗೆ ನಡುರಾತ್ರಿ ಬೀಳುವ ಕನಸುಗಳು. ಧಿಗ್ಗನೆ ಎದ್ದು ಕುಳಿತರೆ ಕಣ್ಣ ಮುಂದೆ ಬರೀ ಗಾಢಾಂಧಕಾರ! ಜನರೂ ಬಾಯಿ ಇಲ್ಲದವರು. ಹಳ್ಳಿಯಲ್ಲಿ ಕೆಲಸ ಇಲ್ಲವೇ? ಯಾರಿಗೂ ಶಾಪ ಹಾಕದೆ ಗಂಟು ಮೂಟೆ ಕಟ್ಟಿಕೊಂಡು, ಮನೆಗೆ ಬೀಗ ಹಾಕಿ ಪಕ್ಕದ ರಾಜ್ಯಕ್ಕೆ ವಲಸೆ ಹೋಗುವವರು. ಇಡೀ ಊರಿಗೆ ಊರೇ ವಲಸೆ ಹೋಗುವ ಎಷ್ಟು ಹಳ್ಳಿಗಳು ಉತ್ತರ ಕರ್ನಾಟಕದಲ್ಲಿ ಇಲ್ಲ? ದಕ್ಷಿಣ ಕರ್ನಾಟಕದ ಯಾವ ತಾಲ್ಲೂಕಿನಿಂದ ಜನರು ಹೀಗೆ ವಲಸೆ ಹೋಗುತ್ತಾರೆ? ನಂಜುಂಡಪ್ಪ ವರದಿ ಪ್ರಕಾರ ಚಾಮರಾಜನಗರ, ಕೋಲಾರ, ತುಮಕೂರು ಮತ್ತು ಮಂಡ್ಯ ಜಿಲ್ಲೆಯ ಹಲವು ತಾಲ್ಲೂಕುಗಳೂ ಹಿಂದುಳಿದವು. ಆದರೆ, ಅಲ್ಲಿನ ಯಾವ ತಾಲ್ಲೂಕಿನಿಂದಲೂ ಜನರು ಪಕ್ಕದ ರಾಜ್ಯಕ್ಕೆ ವಲಸೆ ಹೋಗುವುದಿಲ್ಲ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಿಂದಲೂ ಜನರು ವಲಸೆ ಹೋಗುತ್ತಾರೆ. ಆದರೆ, ಅವರು ವಿಮಾನದಲ್ಲಿ ಹೋಗುತ್ತಾರೆ. ವಿಮಾನದಲ್ಲಿ ಬರುತ್ತಾರೆ! ಎಷ್ಟೊಂದು ವ್ಯತ್ಯಾಸ? ಉತ್ತರ ಕರ್ನಾಟಕದ ಜನರು ನಗರಕ್ಕೆ ವಲಸೆ ಹೋಗಿ ಗುಡಿಸಲುಗಳಲ್ಲಿ ವಾಸ ಮಾಡುತ್ತಾರೆ. ಅಲ್ಲಿಯೇ ಹೆರುತ್ತಾರೆ, ಕಲ್ಲು ಹೊರುತ್ತಾರೆ, ಮಣ್ಣು ಹೊರುತ್ತಾರೆ, ಮನೆ ಕಟ್ಟುತ್ತಾರೆ; ಅಪಘಾತವಾಗಿ ರಸ್ತೆಗಳಲ್ಲಿಯೇ ಸತ್ತೂ ಹೋಗುತ್ತಾರೆ.

ಅಲ್ಲಿನ ಮಂದಿಗೆ ಅಭಿವೃದ್ಧಿಯ ಹಾಗೆ ರಾಜಧಾನಿಯೂ ದೂರವಾಗಿದೆ. ರಾಜಧಾನಿ ಎಂಬುದು ಅಧಿಕಾರದ ಕೇಂದ್ರ, ನಿರ್ಧಾರಗಳನ್ನು ತೆಗೆದುಕೊಳ್ಳುವ ಸ್ಥಾನ. ಲಾಬಿ ಮಾಡುವವರ ತಾಣ. ಸ್ಥಾನಮಾನಗಳು ತೀರ್ಮಾನವಾಗುವ ಜಾಗ, ಮೈಸೂರು ವಿಶ್ವವಿದ್ಯಾಲಯಕ್ಕೆ ಇನ್ನೇನು ನೂರು ವರ್ಷ ತುಂಬುತ್ತದೆ. ಕಳೆದ 99 ವರ್ಷಗಳಲ್ಲಿ ಎಷ್ಟು ಮಂದಿ ಕುಲಪತಿಗಳು ಆಗಿ ಹೋದರೋ ಗೊತ್ತಿಲ್ಲ. ಆದರೆ, ಇದುವರೆಗೆ ಅಲ್ಲಿ ಆದ ಕುಲಪತಿಗಳಲ್ಲಿ ಒಬ್ಬರೇ ಒಬ್ಬರು ಉತ್ತರ ಕರ್ನಾಟಕದವರು. ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಐವತ್ತು ವರ್ಷ ತುಂಬುತ್ತಿದೆ. ಇದುವರೆಗೆ ಉತ್ತರ ಕರ್ನಾಟಕದಿಂದ ಕುಲಪತಿಗಳು ಆದವರು ಒಬ್ಬರೋ ಇಬ್ಬರೋ? ಅದೂ ಆದುದು ಮರೆತು ಹೋಗುವಷ್ಟು ಹಿಂದಿನ ಕಾಲದಲ್ಲಿ. ಗುಲ್ಬರ್ಗ ವಿಶ್ವವಿದ್ಯಾಲಯಕ್ಕೆ ಮೂವತ್ತು ವರ್ಷ ತುಂಬಿದೆ. ಅಲ್ಲಿಯೂ ಇದುವರೆಗೆ ಆ ಭಾಗದಿಂದ ಕುಲಪತಿ ಆದವರು ಒಬ್ಬರೇ! ಉಳಿದವರೆಲ್ಲ ದಕ್ಷಿಣ ಕರ್ನಾಟಕದವರೇ! ಇಡೀ ರಾಜ್ಯದ ಏಕೈಕ ತಾಂತ್ರಿಕ ವಿಶ್ವ ವಿದ್ಯಾಲಯ ಬೆಳಗಾವಿಯಲ್ಲಿ ಸ್ಥಾಪನೆಯಾಗಿ 16 ವರ್ಷಗಳೇ ಕಳೆದಿವೆ. ಉತ್ತರ ಕರ್ನಾಟಕದ ಒಬ್ಬರೂ ಅಲ್ಲಿ ಕುಲಪತಿ ಆಗಿಲ್ಲ. ಬೆಳಗಾವಿಯ ಸ್ನಾತಕೋತ್ತರ ಕೇಂದ್ರ ಬಡ್ತಿ ಪಡೆದು ವಿಶ್ವ ವಿದ್ಯಾಲಯ ಆಗಲು ಕಾಲು ಶತಮಾನವೇ ಬೇಕಾಯಿತು. ಅಲ್ಲಿಗೂ ದಕ್ಷಿಣ ಕರ್ನಾಟಕದವರೇ ಬಂದು ಕುಲಪತಿ ಆದರು. ನಮ್ಮದೂ ನಮಗೇ ಇರಲಿ, ನಿಮ್ಮದೂ ನಮಗೇ ಇರಲಿ ಎಂದು ಅವರು ಹೇಳುತ್ತಿದ್ದಾರೆಯೇ? ದಕ್ಷಿಣ ಕರ್ನಾಟಕದ ಬೌದ್ಧಿಕ ಪಾರುಪತ್ತೆದಾರಿಕೆಗೆ ಇನ್ನೆಷ್ಟು ಉದಾಹರಣೆಗಳನ್ನು ಕೊಡಬೇಕು? ಬೇಕಾದಷ್ಟು ಕೊಡಬಹುದು. ಇದು ಎಲ್ಲ ವಿದ್ವತ್ತು,

ಬುದ್ಧಿವಂತಿಕೆ, ಜಾಣೆ, ಚಾಣಾಕ್ಷತನ ದಕ್ಷಿಣದಲ್ಲಿಯೇ ಇದೆ ಎಂಬ ಅಹಂಕಾರದ ಫಲ ಆಗಿರಬಹುದು; ಅಥವಾ ಅದು ನಿಜ ಎಂದು ಒಪ್ಪಿಕೊಳ್ಳುವ ಉತ್ತರದವರ ದಾಸ್ಯದ ಫಲವೂ ಆಗಿರಬಹುದು.

ಇದನ್ನೆಲ್ಲ ಇನ್ನೂ ಎಷ್ಟು ದಿನ ಎಂದು ಸಹಿಸುವುದು? ನಿಮ್ಮ ಜತೆ ಬಂದು ಸುಖವೇನೂ ಆಗಲಿಲ್ಲ. ನಮ್ಮ ಪಾಡಿಗೆ ನಮ್ಮನ್ನು ಬಿಟ್ಟು ಬಿಡಿ ಎಂದು ಬೇಸತ್ತು ಹೇಳಿದರೆ ಎಲ್ಲರೂ ಎದ್ದು ಬಡಿಯಲು ಆರಂಭಿಸುತ್ತಾರೆ. ಸತ್ಯವನ್ನು ಹೇಳುವುದೇ ಬೇಡ ಎಂದರೆ ಹೇಗೆ? ಅದು ಕಹಿಯಾಗಿರುತ್ತದೆ; ಅರಗಿಸಿಕೊಳ್ಳಲು ಕಷ್ಟವಾಗಿರುತ್ತದೆ. ಆದರೆ, ಅರ್ಥ ಮಾಡಿಕೊಳ್ಳುವುದಾದರೂ ಬೇಡವೇ?

20.09.2014

# ಚಕ್ರ ಹಿಂದಕ್ಕೆ ಚಲಿಸುವುದು

# ಸುಲಭವೇ?

ಇದು ಕಷ್ಟದ ಕೆಲಸ. ಇಂಥ ಕಷ್ಟದ ಕೆಲಸವನ್ನು ಕೆಲವರು ಮಾತ್ರ ಮಾಡುತ್ತಾರೆ. ಪ್ರವಾಹ ಹೊರಟ ದಾರಿ ಸರಿಯಿಲ್ಲ ಎಂದು ಅವರಿಗೆ ಅನಿಸುತ್ತ ಇರುತ್ತದೆ. ಆದರೆ, ಚಕ್ರವನ್ನು ಹಿಂದಕ್ಕೆ ಚಲಿಸುವಂತೆ ಮಾಡುವುದು ಸುಲಭವೇ?

ಎರಡು ದಿನಗಳ ಹಿಂದೆ ಪ್ರಸನ್ನ ಸಿಕ್ಕಿದ್ದರು. ಅವರನ್ನು ನೋಡಿದಾಗಲೆಲ್ಲ ನನಗೆ ಒಬ್ಬ ಸಂತನನ್ನು ನೋಡಿದಂತೆ ಭಾಸವಾಗುತ್ತದೆ. ಕೆಲವು ತಿಂಗಳ ಹಿಂದೆ ಹೆಗ್ಗೋಡಿನಲ್ಲಿ ಅವರು ಕೈಯಲ್ಲಿ ಒಂದು ಛತ್ರಿ ಹಿಡಿದುಕೊಂಡು ಅಸ್ತವ್ಯಸ್ತ ಎನ್ನುವಂತೆ ಉರುಟು ಕೈಮಗ್ಗದ ಬಟ್ಟೆ ಧರಿಸಿಕೊಂಡು ಎದುರು ಬಂದಾಗಲೂ ಹಾಗೆಯೇ ಅನಿಸಿತ್ತು. ತಾವು ನಂಬಿದ ಸಂಗತಿಗಳಲ್ಲಿ ಇವರಿಗೆಲ್ಲ ಎಂಥ ಬದ್ಧತೆ, ನಂಬಿಕೆ ಎಂದು ಅವರನ್ನು ಕಂಡಾಗಲೆಲ್ಲ ಅಚ್ಚರಿಯಾಗುತ್ತದೆ.

ಈ ಪ್ರಸನ್ನ ಮತ್ತು ಅವರ ಗೆಳೆಯರು ಕೈಮಗ್ಗ ಉಳಿಸಲು ಹೋರಾಟದ ಹಾದಿ ಹಿಡಿದಿದ್ದಾರೆ. ಜನರಲ್ಲಿ, ಸರ್ಕಾರದ ಮಟ್ಟದಲ್ಲಿ ಜಾಗೃತಿ ಮೂಡಿಸಲು ಇನ್ನೂರು ಕಿಲೋಮೀಟರ್ ಪಾದಯಾತ್ರೆ ಮಾಡಲಿದ್ದಾರೆ. ಜನವರಿ 30ರಿಂದ ಆಮರಣ ಉಪವಾಸ ಕೂಡಲಿದ್ದಾರೆ. ನನಗೆ ಭಯ, ಸರ್ಕಾರಕ್ಕೆ, ಜನರಿಗೆ ಕೈ ಮಗ್ಗ ಬೇಕಾಗಿದೆಯೇ ಎಂದು. ಗಾಂಧಿ ಹೇಳಿದ ಗ್ರಾಮ ಸ್ವರಾಜ್ ಕಲ್ಪನೆಯಿಂದ ನಾವು ಬಹಳ ದೂರ ನಡೆದು ಬಂದಿದ್ದೇವೆ. ಗುಡಿ ಕೈಗಾರಿಕೆಗಳು ನಾಶವಾಗಿವೆ. ಯಾವ ಚಿಕ್ಕ ಹಳ್ಳಿಗೆ ನೀವು ಹೋದರೂ ಅಲ್ಲಿ ಒಬ್ಬ ಕುಂಬಾರ, ಕಂಬಾರ, ನೇಕಾರ, ಬಡಗಿ ನಿಮಗೆ ಸಿಗುವುದಿಲ್ಲ. ಅವರೆಲ್ಲ ಕುಶಲಕರ್ಮಿಗಳು ಆಗಿದ್ದರು. ಶ್ರಮ ಸಂಸ್ಕೃತಿಯ ಪ್ರತೀಕವಾಗಿದ್ದರು. ಈಗ ಅವರಿಗೂ ನಗರದ ಕನಸು. ಹಳ್ಳಿಯಲ್ಲಿ ಗಳಿಗೆಗೆ ಒಮ್ಮೆ ಬಂದು ನಿಲ್ಲುವ ಟಂಟಂ ಅಥವಾ ಸಾರಿಗೆ ಸಂಸ್ಥೆಯ ಬಸ್ಸನ್ನು

ಏರಿ ನಗರಕ್ಕೆ ಹೋಗಿ ಅಲೆದಾಡುವ ಆಸೆ. ನಗರವೇ ಹಾಗೆ, ಅದು ನಮ್ಮನ್ನು ನಿರಂತರವಾಗಿ ಕಾಡುತ್ತ ಇರುತ್ತ ಇರುತ್ತದೆ. ಕೆಟ್ಟು ಪಟ್ಟಣ ಸೇರು ಎಂದು ನಮ್ಮ ಹಿರಿಯರು ಏಕೆ ಹೇಳಿದರೋ ಗೊತ್ತಿಲ್ಲ. ನಮ್ಮ ಹಳ್ಳಿಯ ಜನರೆಲ್ಲ ತಮ್ಮ ಕೌಶಲಗಳನ್ನೆಲ್ಲ ತೊರೆದು ಪಟ್ಟಣ ಸೇರಿದ್ದಾರೆ; ಸೇರುತ್ತಿದ್ದಾರೆ. ಆ ಕೌಶಲಗಳನ್ನೆಲ್ಲ ನೆಚ್ಚಿಕೊಂಡು ತಾನು ಉದ್ಧಾರವಾಗಲಿಲ್ಲ. ತನ್ನ ಮಕ್ಕಳಾದರೂ ಉದ್ಧಾರವಾಗಲಿ ಎಂದು ಅವರನ್ನು ರೈತರು ಹೊಲಕ್ಕೆ ಬರಲು ಬಿಡುವುದಿಲ್ಲ. ಕಂಬಾರರು ಕುಲುಮೆ ಬಳಿ ಬರಲು ಬಿಡುವುದಿಲ್ಲ. ಕುಂಬಾರರು ಮಣ್ಣಿನ ಬಳಿ ಬರಲು ಬಿಡುವುದಿಲ್ಲ. ಬಡಗಿಗಳು ಉಳಿ, ಕೊಡತಿ ಹಿಡಿಯಲು ಬಿಡುವುದಿಲ್ಲ. ಆ ಎಲ್ಲ ಗ್ರಾಮೀಣ ಅಸ್ತ್ರ-ಶಸ್ತ್ರಗಳು ಅನಾಥವಾಗಿ ಬಿದ್ದುಕೊಂಡಿವೆ.

ಕೈಮಗ್ಗದ ಕುಣಿಯಲ್ಲಿ ಕುಳಿತು ಲಟಪಟ ಎಂದು ಮನೆಯವರೆಲ್ಲ ದಿನಗಟ್ಟಲೆ ದುಡಿದರೆ ಅವರಿಗೆ ಒಂದು ದಿನದ ಕೂಲಿಯೂ ಸಿಗುತ್ತಿರಲಿಲ್ಲ. ನನ್ನ ತಂದೆ ಮತ್ತು ತಾಯಿ ಕೂಡ ಚರಕದಲ್ಲಿ ನೂಲು ತೆಗೆಯುತ್ತಿದ್ದರು. ಅವರು ಮಾಡಿಕೊಟ್ಟ ಲಡಿಗಳನ್ನು ನಮ್ಮ ಊರಿನ ಖಾದಿ ಗ್ರಾಮೋದ್ಯೋಗಕ್ಕೆ ಹೋಗಿ ನಾನು ಕೊಡುತ್ತಿದ್ದೆ. ಒಂದು ಲಡಿಗೆ ಹನ್ನೆರಡು ಆಣೆಯನ್ನೇನೋ (ಎಪ್ಪತ್ತೈದು ಪೈಸೆ) ಕೊಡುತ್ತಿದ್ದರು ಎಂದು ನೆನಪು. ಅದು ಒಂದು ಹೊತ್ತಿನ ಊಟಕ್ಕೂ ಸಾಕಾಗುತ್ತಿರಲಿಲ್ಲ. ಚರಕ ಮೂಲೆ ಸೇರಲು ಬಹಳ ದಿನ ಹಿಡಿಯಲಿಲ್ಲ. ನನ್ನ ಹಿರಿಯ ಗೆಳೆಯರಾದ ಲೇಖಕ ಹಸನ್ ನಂ ಸುರಕೋಡ ಅವರ ಮನೆಯಲ್ಲಿ ಕೈ ಮಗ್ಗ ಇತ್ತು. ಅವರ ತಂದೆ ತಾಯಿ, ತಮ್ಮ, ಅಕ್ಕ ಎಲ್ಲ ಸೇರಿ ಮನೆಯಲ್ಲಿ ಕುಬುಸ ನೇಯುತ್ತಿದುದ್ದನ್ನು ನಾನು ನೋಡಿದ್ದೇನೆ. ಅವರೆಲ್ಲ ಸೇರಿ ದುಡಿದರೂ ಅವರಿಗೂ ಇನ್ನೂರು ರೂಪಾಯಿ ಕೂಲಿ ಸಿಗುತ್ತಿರಲಿಲ್ಲ. ತೊಟ್ಟಿಲಲ್ಲಿಯ ಮಗು ಕೂಡ ಬಂದು ಹರಿದ ಎಳೆ ಕೂಡಿಸಬೇಕು ಎಂದು ಸುರಕೋಡರು ನನಗೆ ಹೇಳುತ್ತಿದ್ದರು. ಅಂದರೆ ಮನೆಯಲ್ಲಿ ಇದ್ದವರೆಲ್ಲ ಬಂದು ಸಹಾಯ ಮಾಡಿದರೂ ಸಾಲದು ಎನ್ನುವಂಥ ಸ್ಥಿತಿ. ಕುಬುಸ ತೊಡುವವರು ಕಡಿಮೆ ಆಗುತ್ತ ಹೋದರು. ಸುರಕೋಡರ ಮನೆಯ ಮಗ್ಗದ ಉಸಿರು

ನಿಂತಿತು.

ಉತ್ತರ ಕರ್ನಾಟಕ ಇಳಕಲ್ಲು ಸೀರೆಗಳಿಗೆ ಪ್ರಸಿದ್ಧ. ನವಲಗುಂದ ಝೂಡಿಪಟ್ಟಿ, ಜಮಖಾನೆಗಳಿಗೆ ಪ್ರಸಿದ್ಧ, ಮೇಲುಕೋಟೆ ಪಂಚೆಗಳಿಗೆ ಪ್ರಸಿದ್ಧ. ಧಾರವಾಡ ಕಸೂತಿ ಸೀರೆಗಳಿಗೆ ಹೆಸರುವಾಸಿ, ಗಾಡಿದಡಿ ಸೀರೆಗಳಿಗೆ ಗದಗ ಪ್ರಸಿದ್ಧ. ಅಲೆಲ್ಲ ನಮ್ಮ ಅಸ್ಮಿತೆ ಇತ್ತು, ಸಂಸ್ಕೃತಿ ಇತ್ತು. ಈಗ ಇಳಕಲ್ಲು ಸೀರೆಗಳಿಗೆ ಪ್ರಸಿದ್ಧವಲ್ಲ. ಗ್ರಾನೈಟ್ ಕಲ್ಲು ಗಣಿಗಾರಿಕೆಗೆ ಪ್ರಸಿದ್ಧ, ಅದನ್ನು ದುರಂತ ಎನ್ನಬೇಕೇ? ನಾಗರಿಕತೆಯ ದಾಳಿ ಹೀಗೆಯೇ ಇರುತ್ತದೆ ಎಂದು ಸಮಾಧಾನ ಮಾಡಿಕೊಳ್ಳಬೇಕೇ? ಚಕ್ರ ತಿರುಗುತ್ತ ಇರುತ್ತದೆ. ಹಳ್ಳಿಗಳಲ್ಲಿ ಬದುಕಿನ ಆಧಾರವಾಗಿ ಇದುದ್ದೆಲ್ಲ ಈಗ ಕಳಚಿ ಬೀಳುತ್ತಿದೆ. ನಮ್ಮ ಜೀವನದ ವಿಧಾನ ಬದಲಾದುದೂ ಅದಕ್ಕೆ ಕಾರಣ. ನಮ್ಮೆಲ್ಲರ ಮನೆಗಳಲ್ಲಿ ಮಡಕೆಗಳಲ್ಲಿಯೇ ಅಡುಗೆ ಮಾಡುತ್ತಿದ್ದರು. ಅದು ರುಚಿಯಾಗಿಯೂ ಇರುತ್ತಿತ್ತು. ಈಗ ಯಾರ ಮನೆಯಲ್ಲಿಯೂ ಮಡಕೆಗಳು ಸಿಗುವುದಿಲ್ಲ. ಹಳ್ಳಿಗಳಲ್ಲಿಯೂ ಲೋಹದ ಪಾತ್ರೆಗಳದೇ ಸದ್ದು. ಕಂಬಾರರಿಗೆ ಅಲ್ಲಿ ಕೆಲಸವಿಲ್ಲ. ಟಾಟಾಗಳ ಸಲಿಕೆ, ಗುದ್ದಲಿಗಳೇ ಈಗ ನಮ್ಮ ಮನೆಯಲ್ಲಿ, ಹೊಲದಲ್ಲಿ, ಕೈಮಗ್ಗದ ನೇಕಾರರು ನೆಯ್ದ

ಬಟ್ಟೆಗಳನ್ನು ತೊಡುವವರು ಅವರ ಮನೆಯಲ್ಲಿಯೇ ಯಾರೂ ಇಲ್ಲದೇ ಇದ್ದರೆ ಅದಕ್ಕೆ ಏನು ಅರ್ಥ ಉಳಿಯುತ್ತದೆ. ಎಲ್ಲರಿಗೂ ನಾಜೂಕು, ನಯದ ಬಯಕೆ, ಪೇಟೆಯಲ್ಲಿ ಇದ್ದವರು ನಯವಾದ ಬಟ್ಟೆಯನ್ನು ಹಾಕಿಕೊಂಡು ತಿರುಗುವಾಗ ಉರುಟು, ಇಸ್ತ್ರಿ ಕೂಡದ ಹತ್ತಿ ಬಟ್ಟೆಯನ್ನು ಹಾಕಿಕೊಳ್ಳಲು ಯಾರು ಬಯಸುತ್ತಾರೆ?

ನಮ್ಮ ಹಳೆಯ ಹಳ್ಳಿಗಳು ಹೇಗೆ ಇದ್ದುವು ಎಂದರೆ ಅವು ಒಂದು ಪರಿಪೂರ್ಣ ಜಗತ್ತು ಎನ್ನುವಂತೆ ಇದ್ದುವು. ಅಲ್ಲಿ ಎಲ್ಲ ಸಿಗುತ್ತಿತ್ತು. ಅವರಿಗೆ ಇವರು ಕೊಡುತ್ತಿದ್ದರು. ಇವರಿಗೆ ಅವರು ಕೊಡುತ್ತಿದ್ದರು. ಬದುಕಿನಲ್ಲಿ ಸಂಭ್ರಮ ಇತ್ತು. ಸಂತೋಷ ಇತ್ತು, ಶ್ರಮ ಇತ್ತು; ಅಸ್ಮಿತೆ ಇತ್ತು. ಈಗ ಹಳ್ಳಿಯನ್ನು ನಗರ ನುಂಗಿ ಹಾಕಿದೆ. ಹಳ್ಳಿಗಳು ರಣಗುಟ್ಟುತ್ತಿವೆ. ಅಲ್ಲಿ ಇತ್ತ ಹಳ್ಳಿಯನ್ನೂ ಉಳಿಸಿಕೊಳ್ಳಲಾಗದ ಅತ್ತ ನಗರವನ್ನೂ ಸೇರಲಾಗದ ಸಂಕಟ ಕಾಣುತ್ತಿದೆ. ನೇಕಾರಿಕೆಯದೂ ಇದೇ ಸಂಕಟ, ದ್ವಂದ್ವ ಕೈಮಗ್ಗವನ್ನು ವಿದ್ಯುತ್ ಮಗ್ಗ ನುಂಗಿ ನೊಣೆದಿದೆ. ಅದು ಕೈಮಗ್ಗದ ಹೆಸರಿನಲ್ಲಿ ಎಲ್ಲ ಲಾಭ ಪಡೆಯುತ್ತಿದೆ. ಈಗ ಕೈಮಗ್ಗದ ಹೆಸರಿನಲ್ಲಿ ತಯಾರಾಗುವ ಶೇಕಡ ಎಪ್ಪತ್ತರಷ್ಟು ಮಾಲು ವಿದ್ಯುತ್ ಮಗ್ಗದಲ್ಲಿ ತಯಾರಾಗುತ್ತದೆ. ಕೈಮಗ್ಗಕ್ಕೆ ಸಿಗುವ ಎಲ್ಲ ರಿಯಾಯಿತಿ ವಿದ್ಯುತ್ ಮಗ್ಗಕ್ಕೆ ಹೋಗುತ್ತದೆ. ಅಂದರೆ ಕೊಡಲಿಕಾವು ಕುಲಕ್ಕೆ ಮೃತ್ಯು ಎನ್ನುವಂತೆ ದೊಡ್ಡ ನೇಕಾರರು ಸಣ್ಣ ನೇಕಾರರನ್ನು ಬಲಿ ತೆಗೆದುಕೊಂಡಿದ್ದಾರೆ. ಯಂತ್ರಗಳ ಕಬಂಧ ಬಾಹುಗಳ ಮುಂದೆ ನಿರಾಯುಧ ಕೈಗಳು ಹೇಗೆ ಹೋರಾಟ ಮಾಡಲು ಸಾಧ್ಯ? ಇಲ್ಲಿಯೂ ಸಾಲ ಕೊಡುವ ಯಜಮಾನ ನೇಕಾರರು ಇದ್ದಾರೆ. ತೆಗೆದುಕೊಳ್ಳುವ ಬಡ ನೇಕಾರರು ಇದ್ದಾರೆ. ಬಡ ನೇಕಾರರಿಗೆ ಸಿಗಬೇಕಾದ ಯಾವ ಸವಲತ್ತೂ ಸಿಗುವುದಿಲ್ಲ. ಅದನ್ನು ಯಜಮಾನ ನೇಕಾರರು ಎಂಬ ಲಾಬಿ ಎಲ್ಲವನ್ನೂ ಬಾಚಿ ಬಳಿದುಕೊಂಡು ಬಿಡುತ್ತದೆ. ಈಗಿನ ರಾಷ್ಟ್ರಪತಿಗಳು ಮೂರು ವರ್ಷಗಳ ಹಿಂದೆ ಹಣಕಾಸು ಸಚಿವರಾಗಿದ್ದಾಗ, ಕಷ್ಟದಲ್ಲಿ ಇರುವ ಕೈಮಗ್ಗದ ನೇಕಾರರಿಗೆ, ಮೂರು ಸಾವಿರ ಕೋಟಿ ರೂಪಾಯಿಗಳ ಒಂದು ಪ್ಯಾಕೇಜ್ ಪ್ರಕಟ ಮಾಡಿದ್ದರು. ಕರ್ನಾಟಕದ ಒಬ್ಬ ಕೈಮಗ್ಗ ನೇಕಾರನಿಗಾದರೂ ಒಂದು ಪೈಸೆ ಬಂದಿದೆಯೇ ಎಂದು ಕೇಳಿ ನೋಡಿ. ಸಂಘಟಿತವಲ್ಲದ ಒಂದು ವಲಯಕ್ಕೆ ಆಗುವುದೇ ಹೀಗೆ, ಕಬ್ಬು ಬೆಳೆಯುವ, ಭತ್ತ ಬೆಳೆಯುವ ರೈತನಿಗೆ ಇರುವ ಧ್ವನಿ ಬಿಳಿಜೋಳ ಬೆಳೆಯುವ, ರಾಗಿ ಬೆಳೆಯುವ ರೈತನಿಗೆ ಇರುವುದಿಲ್ಲ. ಪವರ್‌ಲೂಮ್ ಇಟ್ಟುಕೊಂಡ ನೇಕಾರನ ಧ್ವನಿ ಕೈಮಗ್ಗದ ನೇಕಾರನಿಗೆ ಇರುವುದಿಲ್ಲ. ದೇಶದ ಯೋಜನೆಗಳನ್ನು ರೂಪಿಸುವ ಯೋಜನಾ ಆಯೋಗದಲ್ಲಿ ಕೈಮಗ್ಗ ಕ್ಷೇತ್ರದ ಪ್ರತಿನಿಧಿಯಾಗಿ ಮೂರು ಸಾವಿರ ವಿದ್ಯುತ್ ಮಗ್ಗಗಳ ಒಡೆಯರೊಬ್ಬರು ಈಚಿನ ವರೆಗೂ ಸದಸ್ಯರಾಗಿದ್ದರು! ಇದು ಬೇಕೆಂದೇ ಆಗುತ್ತದೆಯೋ, ಸರ್ಕಾರಕ್ಕೆ ತಿಳಿಯುವುದೇ ಇಲ್ಲವೋ ಹೇಳುವುದು ಕಷ್ಟ. ತದ್ವಿರುದ್ಧ ಹಿತಾಸಕ್ತಿಗಳು ಒಂದೇ ಕಡೆ ಇರುವುದು ಕಷ್ಟ ಮಾತ್ರವಲ್ಲ, ಅಸಾಧ್ಯ ಕೂಡ. ಒಬ್ಬರನ್ನೊಬ್ಬರು ನುಂಗಿ ನೊಣೆಯಬೇಕು ಎನ್ನುವವರು ಜತೆಗೆ ಇರಬಾರದು. ಕೇಂದ್ರದ್ದೇ ಇರಲಿ, ರಾಜ್ಯದ್ದೇ ಇರಲಿ ಜವಳಿ ಖಾತೆಯಲ್ಲಿ ಕುರಿಗಳೂ ಇರುತ್ತವೆ; ಕುರಿಗಳನ್ನು ತಿನ್ನುವ ತೋಳಗಳೂ ಇರುತ್ತವೆ. ಇವರಿಬ್ಬರನ್ನೂ ಸ್ವಾಹಾ ಮಾಡಿ ಬಿಡಬಹುದಾದಂಥ ತಿಮಿಂಗಲುಗಳೂ ಇರುತ್ತವೆ. ಇದನ್ನು ಸರಳವಾಗಿ, ಕೈಮಗ್ಗ ನೇಕಾರರು,

ವಿದ್ಯುತ್ ಮಗ್ಗದ ನೇಕಾರರು ಮತ್ತು ಅಂಬಾನಿಗಳು ಎಂದು ವಿವರಿಸಬಹುದು! ಸರ್ಕಾರಕ್ಕೆ ಸೂಕ್ಷ್ಮತೆ ಎಂಬುದು ಇರುವುದಿಲ್ಲ. ಹೀಗೆ ತದ್ವಿರುದ್ಧ ಆಸಕ್ತಿಗಳು ಒಂದು ಕಡೆ ಇರಲು ಸಾಧ್ಯವಿಲ್ಲ ಎಂದು ಆಡಳಿತ ಮಾಡುವವರಿಗೆ ಗೊತ್ತಾಗುವುದಿಲ್ಲ. ಅಧಿಕಾರಿಗಳಿಗೆ ಗೊತ್ತಾಗದಿರುವುದು ಸಹಜವಾದರೂ ಜನರಿಂದಲೇ ಆರಿಸಿ ಹೋದ ಪ್ರತಿನಿಧಿಗಳಿಗಾದರೂ ಗೊತ್ತಾಗಬೇಕು. ಅವರಿಗೂ ಗೊತ್ತಾಗುವುದಿಲ್ಲ. ಕೃಷಿ ನಂತರ ಅತಿ ಹೆಚ್ಚು ಜನರು ಅವಲಂಬಿಸಿರುವ ಕ್ಷೇತ್ರ ನೇಕಾರಿಕೆ. ಆದರೆ, ಜವಳಿ ಖಾತೆ ಸಂಪುಟ ಸದಸ್ಯರ ಪಟ್ಟಿಯ ಕೊನೆಯ ಖಾತೆ ಆಗಿರುತ್ತದೆ. ಮೀನುಗಾರಿಕೆ ಬಂದರು ಖಾತೆ ಹಾಗೆ! ನನಗೆ ನೆನಪು ಇರುವ ಹಾಗೆ ಹದಿನೈದು ವರ್ಷಗಳ ಹಿಂದೆ ಎಚ್.ಕೆ.ಪಾಟೀಲರು ಜವಳಿ ಖಾತೆ ಸಚಿವರಾಗಿ ಕೆಲಸ ಮಾಡಿದ್ದರು. ಅವರ ನಂತರ ಯಾರಾದರೂ ಸೂಕ್ಷ್ಮ ಮನಸ್ಸಿನ ವ್ಯಕ್ತಿಯೊಬ್ಬರು ಆ ಖಾತೆಯ ಸಚಿವರಾದುದು ನನಗೆ ನೆನಪು ಇಲ್ಲ. ಅವರ ಹಿಂದೆ ಅಂಥವರು ಯಾರು ಆ ಖಾತೆಯಲ್ಲಿ ಇದ್ದರೂ ಎಂದು ನೆನಪು ಇಲ್ಲ. ಇದು ಕೈಮಗ್ಗ ನೇಕಾರರ ಸಮಸ್ಯೆ. ಅವರು ಹೋಗಿ ಯಾರ ಜತೆಗೆ ಮಾತನಾಡಬೇಕು? ಹೋಗಿ ಮಾತನಾಡಿದರೆ ಅವರಿಗೆ ಅರ್ಥ ಆಗುತ್ತದೆಯೇ?

ನೀವು ಪ್ರವಾಹದ ವಿರುದ್ಧ ಈಜುತ್ತಿದ್ದೀರಿ. ಮಗ್ಗದ ಕುಣಿಯಲ್ಲಿ ಕುಳಿತು ಲಟಪಟ ಎಂದು ನೇಯುವ ಕೆಲಸ ನೇಕಾರರಿಗೇ ಬೇಡವಾಗಿರುವಾಗ ನೀವೇಕೇ ಹೋರಾಟ ಮಾಡುತ್ತಿದ್ದೀರಿ' ಎಂದು ಪ್ರಸನ್ನ ಅವರನ್ನು ಕೇಳಿದೆ. 'ನಾನು ನಾಟಕದ ಮನುಷ್ಯ ಎಪ್ಪತ್ತರ ದಶಕದ ವೇಳೆಗೆ ಟೀವಿ ಬಂತು. ನಾಟಕ ನೇಪಥ್ಯಕ್ಕೆ ಸರಿಯಿತು. ಆದರೆ, ನನಗೆ ಟೀವಿ ಇಷ್ಟವಿಲ್ಲ. ಸಿನಿಮಾ ಇಷ್ಟವಿಲ್ಲ. ನನಗೆ ನಿಮ್ಮ ನಯದ ಬಟ್ಟೆ ಬೇಕಿಲ್ಲ. ಉರುಟು ಬಟ್ಟೆಯೇ ಬೇಕು. ಅದನ್ನು ಮಾಡಿ ಬದುಕಬಹುದು ಎಂದು ನಮ್ಮ 'ಚರಕ' ಮತ್ತು 'ದೇಸಿ' ಸಂಸ್ಥೆಗಳು ತೋರಿಸಿಕೊಟ್ಟಿವೆ. ನಾವು ಸರ್ಕಾರಕ್ಕೆ ಹೆಚ್ಚಿಗೇನೂ ಕೇಳುತ್ತಿಲ್ಲ. ಕೈಮಗ್ಗ ಬಲವಾಗಿ ಇರುವ ಇಳಕಲ್ಲು, ಗಜೇಂದ್ರಗಡ, ಮೇಲುಕೋಟೆ, ಕೆರೂರಿನಂಥ ಊರುಗಳಲ್ಲಿ ವಿದ್ಯುತ್ ಮಗ್ಗ ಹಾಕಬೇಡಿ ಎಂದು ಕೇಳುತ್ತಿದ್ದೇವೆ. ಕೈಮಗ್ಗ ಕ್ಷೇತ್ರಕ್ಕೆ ಕೊಡುತ್ತಿರುವ ಸವಲತ್ತುಗಳನ್ನು ಬೇರೆ ಕ್ಷೇತ್ರದ ಉತ್ಪನ್ನಗಳು ಕಬಳಿಸದಂತೆ ನೋಡಿಕೊಳ್ಳಿ ಎಂದು ಆಗ್ರಹಿಸುತ್ತಿದ್ದೇವೆ. ನಾವೇನು ಹೆಚ್ಚಿಗೆ ಕೇಳುತ್ತಿದ್ದೇವೆಯೇ' ಎಂದರು ಪ್ರಸನ್ನ, ಈ ಹೋರಾಟದಲ್ಲಿ ಪ್ರಸನ್ನ ಅವರು ಒಬ್ಬರೇ ಇಲ್ಲ ಎಂದು ನನಗೆ ಗೊತ್ತಿದೆ. ಅವರ ಹಾಗೆ ಮಾತನಾಡಲಾಗದ ನೂರಾರು, ಸಾವಿರಾರು ಮೌನಿ ಜನರು ಅವರ ಜತೆಗೆ ಇದ್ದಾರೆ. ಬಹುಶಃ ಅವರು ಪಾದಯಾತ್ರೆ ಹೋದಾಗ ಇದು ಗೊತ್ತಾಗಬಹುದು. ಮುಖ್ಯಮಂತ್ರಿ ಸಿದ್ದರಾಮಯ್ಯ ಕಂಬಳಿ ಸಮುದಾಯಕ್ಕೆ ಸೇರಿದ ಮನುಷ್ಯ. ಅವರು ಪ್ರಸನ್ನ ಅವರನ್ನು ಕರೆಸಿ ಮಾತನಾಡಬೇಕು. ಅವರು ಕೇಳಿದ್ದನ್ನು ಮಾಡಿ- ಕೊಡಬೇಕು. ಇಲ್ಲಿ ಬರೀ ಕಂಬಳಿ, ಮಡಕೆ, ಸೀರೆ, ಝಾಡಿಪಟ್ಟಿ, ಜಮಖಾನೆ ಮಾತ್ರ ಇಲ್ಲ. ನಮ್ಮ ನಾಡಿನ ಅಸ್ಮಿತೆ ಇದೆ. ಸಂಸ್ಕೃತಿ ಇದೆ. ಅದು ಉಳಿಯಬೇಕು. ನಾವು ಒಂದೊಂದು ಸಾರಿ ಚಕ್ರವನ್ನು ಹಿಂದಕ್ಕೆ ಚಲಿಸುವಂತೆಯೂ ಮಾಡಬೇಕು.

29.12.2013

# ಹುಡುಕಾಟ

# ಗಲ್ಲು ಶಿಕ್ಷೆ ಆಯಿತು. ಆದರೆ,

# ಅದು ಉತ್ತರವೇ?

ನೂರೆಂಟು ಪ್ರಶ್ನೆಗಳು ಮನಸ್ಸನ್ನು ಮುತ್ತಿ ಕಾಡುತ್ತಿವೆ. ಉತ್ತರಕ್ಕಾಗಿ ಮನಸ್ಸು ತಡಕಾಡುತ್ತದೆ. ದೆಹಲಿಯ ಸಾಕೇತ್ ನ್ಯಾಯಾಲಯ ಮೊನ್ನೆ ಅತ್ಯಾಚಾರ ಆರೋಪಿಗಳಿಗೆ ಗಲ್ಲು ಶಿಕ್ಷೆ ವಿಧಿಸಿದೆ. ಆದರೆ, ಅತ್ಯಾಚಾರ ಏಕೆ ಆಗುತ್ತದೆ? ಅತ್ಯಾಚಾರ ಮಾಡುವಂಥ ಸ್ಥಿತಿ ನಮ್ಮ ಮನಸ್ಸಿನಲ್ಲಿ ಎಲ್ಲಿ ಅವಿತುಕೊಂಡು ಕುಳಿತಿರುತ್ತದೆ? ಮನುಷ್ಯ ಇದ್ದಕ್ಕಿದ್ದಂತೆ ಕರಡಿ ಆಗಲು ಹೇಗೆ ಸಾಧ್ಯ? ಆ 23ರ ಹರಯದ ಯುವತಿ ಏನು ತಪ್ಪು ಮಾಡಿದ್ದಳು? ಅವಳ ಮೇಲೆ ಎಂಥ ಅನ್ಯಾಯ ನಡೆಯಿತಲ್ಲ? ಆಕೆಯ ಮೇಲೆ ಮೃಗಗಳ ಹಾಗೆ ಆಕ್ರಮಿಸಿದವರಿಗೆ ಗಲ್ಲು ಶಿಕ್ಷೆಯಾದರೆ ಆಕೆಗೆ ಆದ ಅನ್ಯಾಯಕ್ಕೆ ಪರಿಹಾರ ಸಿಕ್ಕಂತೆ ಆಯಿತೇ? ಆ ಹೆಣ್ಣು ಮಗಳು ಕಟ್ಟಿಕೊಂಡ ಕನಸುಗಳು ಕಮರಿ ಹೋಗಲಿಲ್ಲವೇ? ಆಕೆಯ ನಗುವನ್ನು, ಸೆಡವನ್ನು, ಅಂದವನ್ನು, ಸಾಂಗತ್ಯವನ್ನು ಅವಳ ತಂದೆ ತಾಯಿ, ಆಕೆಯ ಗೆಳೆಯ ಮತ್ತೆ ಎಲ್ಲಿ ಹುಡುಕಬೇಕು? ಅಪರಾಧಿಗಳಿಗೆ ಗಲ್ಲು ಶಿಕ್ಷೆಯಾದುದರಿಂದ ಯುವತಿಯ ಕುಟುಂಬಕ್ಕೆ ನ್ಯಾಯ ಸಿಕ್ಕಿತು ಎಂದರೆ ಏನು ಅರ್ಥ? ಸಂತ್ರಸ್ತರು ಇಷ್ಟಕ್ಕೇ ಸಮಾಧಾನ ಮಾಡಿ- ಕೊಳ್ಳಬೇಕೇ? ಅವರ ಹೋರಾಟ ಇಲ್ಲಿಗೇ ನಿಲ್ಲುತ್ತದೆಯೇ? ಮುಂದಿನ ನ್ಯಾಯಾಲಯಗಳೂ ಇವೆಯಲ್ಲ? ಅವರ ಕುಟುಂಬದ ಜತೆಗೆ ನಿಲ್ಲಲು ಉಳಿದವರಿಗೆ ವೇಳೆ ಇದೆಯೇ? ವ್ಯವಧಾನ ಇದೆಯೇ?

ದೆಹಲಿಯಲ್ಲಿ ನಡೆದ ಈ ಅತ್ಯಾಚಾರಕ್ಕೆ ಸಮನಾದ ಮತ್ತೊಂದು ಘಟನೆ ಆಧುನಿಕ ಭಾರತದ ಇತಿಹಾಸದಲ್ಲಿ ನಡೆದಂತೆ ಕಾಣುವುದಿಲ್ಲ. ಕನಿಷ್ಠ ವರದಿಯಾದಂತೆ ಇಲ್ಲ. ಅಲ್ಲಿ ಬರೀ ಅತ್ಯಾಚಾರ ಮಾತ್ರ ನಡೆದಿರಲಿಲ್ಲ. ಒಬ್ಬ ಹೆಣ್ಣುಮಗಳನ್ನು ಹೇಗೆ ನಡೆಸಿಕೊಳ್ಳಬಾರದು ಎಂಬುದಕ್ಕೆ ಅಲ್ಲಿ ಅನೇಕ ನಿದರ್ಶನಗಳು ಇದ್ದುವು. ಆಕೆಯ ದೇಹದ ಮೇಲೆ ಮಾತ್ರ ದೌರ್ಜನ್ಯ ನಡೆದಿರಲಿಲ್ಲ. ಒಟ್ಟು ಹೆಣ್ಣುಕುಲದ ಮಾನಸಿಕತೆಯ ಮೇಲೆಯೇ ಅಲ್ಲಿ ದಾಳಿ ನಡೆದಂತೆ ಇತ್ತು. ಇಲ್ಲವಾದರೆ ಆ ಯುವತಿಯ ಮೇಲೆ ಅತ್ಯಂತ ಕ್ರೂರ ಅತ್ಯಾಚಾರ ನಡೆದ ನಂತರವೂ ಆಕೆಯ

ದೇಹದ ಒಳಗೆ ಕಬ್ಬಿಣದ ಸರಳನ್ನು ಸೇರಿಸಬೇಕಾದ ಅಗತ್ಯ ಇರಲಿಲ್ಲ. ಕರುಳನ್ನು ಬಗೆದು ಹೊರಗೆ ಎಳೆಯಬೇಕು ಎಂದು ಅನಿಸುತ್ತಿರಲಿಲ್ಲ. ಮಗಳಂಥ, ಸೊಸೆಯಂಥ ಯುವತಿಯನ್ನು ಬೆತ್ತಲೆ ಮಾಡಿ ರಸ್ತೆಗೆ ಎಸೆದು ಹೋಗಬೇಕು ಎಂದು ತೋರುತ್ತಿರಲಿಲ್ಲ.

ದೆಹಲಿ ನಡುಗಿದ್ದು ಈ ಅತ್ಯಾಚಾರಕ್ಕೆ ಅಲ್ಲ. ದೌರ್ಜನ್ಯಕ್ಕೆ ಅಲ್ಲ. ಅದರ ಒಳಗೆ ಇದ್ದ ಕ್ರೌರ್ಯಕ್ಕೆ, ನಾಳೆ ನನಗೂ ಹೀಗೆಯೇ ಆದರೆ ಹೇಗೆ ಎಂಬ ಭಯಕ್ಕೆ. ಆ ಕ್ರೌರ್ಯದ ನಾಯಕತ್ವವನ್ನು ತನ್ನ ತಮ್ಮನೇ ಆಗಿರಬಹುದಾದ ಒಬ್ಬ ಬಾಲಕ ವಹಿಸಿಕೊಂಡಿದ್ದ ಎಂಬ ಆತಂಕಕ್ಕೆ, ಹಿರಿಯರಿಗೆ ಗಲ್ಲು ಶಿಕ್ಷೆ ಆಗಿದೆ. ಆದರೆ, ಆ ಬಾಲಕನಿಗೆ? ಆತ ನಿಜವಾಗಿಯೂ ಬಾಲಕನೇ ಹೌದೇ? ಬಾಲಕ ಎಂದರೆ ಯಾರು? ಅತ್ಯಾಚಾರ ಮಾಡುವ ಸಾಮರ್ಥ್ಯ ಇರುವವನನ್ನೂ ಬಾಲಕ ಎಂದು ಕರೆಯಬಹುದೇ? ಬರೀ ಅತ್ಯಾಚಾರ ಮಾತ್ರವಲ್ಲ ಆಕೆಯ ದೇಹದಲ್ಲಿ ಕಬ್ಬಿಣದ ಸಲಾಕೆಯನ್ನು ತೂರಿಸುವಂಥ ಮೃಗಕ್ಕೂ ಬಾಲಕ ಎಂದು ಹೇಳಬಹುದೇ? ತಾನು ಮಾತ್ರ ಅತ್ಯಾಚಾರ ಮಾಡಿ ಸುಮ್ಮನಾಗದೇ ಇತರರನ್ನು ಅದೇ ಕೃತ್ಯಕ್ಕೆ

ಹುರಿದುಂಬಿಸುವವನು ಹೇಗೆ ಕುಮಾರ ಆದಾನು?

ಅಲ್ಲಿ ಮಾತ್ರ ಬಾಲಕ ಇಲ್ಲ. ಮುಂಬೈನ ಶಕ್ತಿ ಮಿಲ್ ಆವರಣದಲ್ಲಿ ಪತ್ರಿಕಾ ಛಾಯಾಗ್ರಾಹಕಿ ಮೇಲೆ ಅತ್ಯಾಚಾರ ಮಾಡಿದ ಗುಂಪಿನಲ್ಲಿಯೂ ಒಬ್ಬ ಬಾಲಕ ಇದ್ದ. ಅವನೂ ಎಲ್ಲರಿಗಿಂತ ಕ್ರೂರನಾಗಿದ್ದ. ಅವನ ಜತೆಗೆ ಇದ್ದ ಇನ್ನೂ ಒಬ್ಬನೂ ಬಾಲಕ ಎಂದು ಆತನ ತಂದೆ ತಾಯಿ ಈಗ ಹೇಳ ಹೊರಟಿದ್ದಾರೆ. ಅದು ಅಪರಾಧದ ಗುರುತರತೆಯನ್ನು ಕಡಿಮೆ ಮಾಡುತ್ತದೆಯೇ? ಅಥವಾ ಹೆಚ್ಚು ಮಾಡುತ್ತದೆಯೇ? ಆ ಬಾಲಕನ ಜತೆಗೆ ಅವನ ಸೋದರ ಸಂಬಂಧಿಯೂ ಒಬ್ಬನಿದ್ದ. ಎಲ್ಲಿಯಾದರೂ ಉಂಟೇ? ಅಣ್ಣ ತಮ್ಮಂದಿರು ಸೇರಿಕೊಂಡು ಒಂದೇ ಕಡೆ ಒಬ್ಬಳೇ ಹೆಣ್ಣು ಮಗಳ ಜತೆಗೆ ಹೀಗೆ ನಡೆದುಕೊಳ್ಳುವುದು? ಮುಂಬೈ ಅತ್ಯಾಚಾರದಲ್ಲಿ ಇಬ್ಬರು ಸೋದರ ಸಂಬಂಧಿಗಳು ಇದ್ದರು. ದೆಹಲಿಯಲ್ಲಿ ಖಾಸಾ ಅಣ್ಣತಮ್ಮಂದಿರೇ ಪಾಲುಗೊಂಡಿದ್ದರು. ಅಣ್ಣ ಮಾಡುವುದು ತಪ್ಪು ಎಂದು ತಮ್ಮನಿಗೆ ಅನಿಸಲಿಲ್ಲ. ತಮ್ಮನಿಗೆ ಬುದ್ಧಿ ಹೇಳುವ ಸ್ಥಿತಿಯಲ್ಲಿ ಅಣ್ಣ ಇರಲಿಲ್ಲ.

ಎಷ್ಟು ಜನರಿಗೆ ಗೊತ್ತಿದೆಯೋ ಇಲ್ಲವೋ ಗೊತ್ತಿಲ್ಲ. ಮುಂಬೈ ಯುವತಿಯ ಜತೆಗೆ ಅಸಹಜ ಲೈಂಗಿಕ ಕ್ರಿಯೆ ನಡೆದಿದೆ. ಅದನ್ನು ಆ ದುಷ್ಟರು ತಮ್ಮ ಮೊಬೈಲ್‌ನಲ್ಲಿ ಚಿತ್ರೀಕರಣ ಮಾಡಿಕೊಂಡಿದ್ದಾರೆ. ದೆಹಲಿಯ ಅಪರಾಧಿಗಳ ವಿರುದ್ಧವೂ 'ಅಸ್ವಾಭಾವಿಕ ಲೈಂಗಿಕ ಅಪರಾಧ'ದ ಆರೋಪ ಇದೆ. ನಮ್ಮೊಳಗಿನ ಕ್ರೌರ್ಯ ಎಂಥದು? ವಿಕೃತಿ ಎಂಥದು? ಅದಕ್ಕೆ ಏನಾದರೂ ಮಿತಿಗಳು ಇವೆಯೇ ಇಲ್ಲವೇ? ಮತ್ತೆ ಪ್ರಶ್ನೆಗಳು...

ಮುಂಬೈನಲ್ಲಿ ಅಷ್ಟೇ ಬಾಲಕ ಇರಲಿಲ್ಲ. ಬೆಂಗಳೂರಿನ ಜ್ಞಾನಭಾರತಿ ಆವರಣದಲ್ಲಿ ಕಾನೂನು ವಿದ್ಯಾರ್ಥಿನಿ ಮೇಲೆ ನಡೆದ ಸಾಮೂಹಿಕ ಅತ್ಯಾಚಾರದಲ್ಲಿಯೂ ಒಬ್ಬ ಬಾಲಕನಿದ್ದ. ಅಲ್ಲಿ ಅದೃಷ್ಟಕ್ಕೆ ಅಣ್ಣ ತಮ್ಮಂದಿರು ಇರಲಿಲ್ಲ. ಆದರೆ, 'ನಾವು ಏನು ಮಾಡಬೇಕೋ ಅದನ್ನು ಮಾಡಿದ್ದೇವೆ' ಎಂದು ಬಹಿರಂಗವಾಗಿ ಹೇಳುವ ಮಾನಗೇಡಿಯೊಬ್ಬ ಅಲ್ಲಿ ಇದ್ದ. ಆತ ಇದುವರೆಗೆ ತಲೆ ತಪ್ಪಿಸಿಕೊಂಡು ಮೊನ್ನೆ ಮೊನ್ನೆ ಸಿಕ್ಕಿ ಬಿದ್ದಿದ್ದಾನೆ.

ಈ ಮೂರೂ ಘಟನೆಗಳು ಆಕಸ್ಮಿಕವಲ್ಲ. ಹರಯದ ಭರದಲ್ಲೋ, ಕುಡಿತದ ಅಮಲಿನಲ್ಲೋ ಆದುವೂ ಅಲ್ಲ. ಎಲ್ಲವೂ ಯೋಜಿತ. ಇವರೆಲ್ಲ ಬೇಟೆಗಾರರು, ಬಲಿಗಳು ತಮ್ಮ ಬಲೆಗೆ ಬಂದು ಬೀಳಲಿ ಎಂದು ಕಾಯುವವರು, ಬೀಳದಿದ್ದರೆ ಬೀಳುವ ಹಾಗೆ ಮಾಡುವವರು. ದೆಹಲಿಯಲ್ಲಿ ಅತ್ಯಾಚಾರಕ್ಕಿಂತ ಮುಂಚೆ ದರೋಡೆ ಮಾಡಿದ್ದರು. ಆಗ ಪುರುಷನ ಬದಲು ಹೆಣ್ಣು ಮಗಳು ಸಿಕ್ಕಿದ್ದರೆ ಅವಳಿಗೂ ಇದೇ ಗತಿಯಾಗುತ್ತಿತ್ತು. ಮುಂಬೈ ಬೇಟೆಗಾರರು ಈ ಛಾಯಾಗ್ರಾಹಕಿಗಿಂತ ಮುಂಚೆ ಕಸ ಎತ್ತಲು ಬರುವ ಹೆಣ್ಣು ಮಕ್ಕಳನ್ನೂ ಬಿಟ್ಟಿರಲಿಲ್ಲ. ಜ್ಞಾನಭಾರತಿ ಪ್ರಕರಣದಲ್ಲಿ ಸಿಕ್ಕಿಬಿದ್ದವರ ವಿರುದ್ಧವೂ ಅದೇ ಆರೋಪ ಇದೆ. ಏನು ಮಾಡಬೇಕು ಎಂದುಕೊಂಡಿದ್ದೆವೋ ಅದನ್ನು ಮಾಡಿದ್ದೇವೆ ಎಂಬ ಅವನ ಮಾತಿನಲ್ಲಿಯೇ ಅದರ ಇಂಗಿತ ಇದೆ.

ಆರು ವರ್ಷಗಳ ಹಿಂದೆ ದೆಹಲಿಯಲ್ಲಿ ಆರು ವರ್ಷದ ಹಸುಳೆಯೊಬ್ಬಳ ಮೇಲೆ ಅದೇ ಪ್ರದೇಶದ ವ್ಯಕ್ತಿಯೊಬ್ಬ ಅತ್ಯಾಚಾರ ಮಾಡಿದ. ಆಕೆಯ ದೇಹವನ್ನು ಆರು ತುಂಡು ಮಾಡಿ ಚರಂಡಿಯಲ್ಲಿ ಬಿಸಾಕಿದ. ಆತನಿಗೆ ಗಲ್ಲು ಶಿಕ್ಷೆಯಾಗಿತ್ತು. ಆದರೆ, ಆತ ಬಾಲಕ ಎಂದು ಪತ್ತೆಯಾಯಿತು. ಆತ ಮೂರು ವರ್ಷಗಳನ್ನು ಸ್ಟೇಟ್ ಹೋಂನಲ್ಲಿ ಕಳೆದು ಈಗ ಬಿಡುಗಡೆ ಆಗಿ ಬಂದಿದ್ದಾನೆ. ಆತನ ಮನೆಯ ಕೂಗಳತೆ ದೂರದಲ್ಲಿ ಆ ಹಸುಳೆಯ ತಂದೆ ತಾಯಿಯ ಮನೆಯೂ ಇದೆ. ಅವರಿಗೆ ಇನ್ನೂ ಒಬ್ಬಳು ಪುಟ್ಟ ಮಗಳು ಇದ್ದಾಳೆ. ಅವರು ಆ ಮನೆಯನ್ನು ಬಿಟ್ಟು ಹೋಗಬೇಕೇ? ಅಲ್ಲಿಯೇ ಇರಬೇಕೇ? ನ್ಯಾಯ ಎಂದರೆ ಏನು? ಬಾಲಕನ ಕಡೆಗೆ ನ್ಯಾಯ ಇರಬೇಕೇ? ಹಸುಳೆಯನ್ನು ಕಳೆದುಕೊಂಡ ಪಾಲಕರ ಕಡೆಗೆ ಇರಬೇಕೇ? ಎಂಥದೇ ಕುಕೃತ್ಯ ಮಾಡಿದರೂ ಬಾಲಾರೋಪಿಗಳ ಹೆಸರು ಬರೆಯಬಾರದು. ಅವನನ್ನು ಗುರುತಿಸಲೂ ಬಾರದು. ಮೂರು ವರ್ಷದ ಶಿಕ್ಷೆ ಮುಗಿಸಿಕೊಂಡು ಬಂದ ನಂತರ ಅದು ಅವನ ದಾಖಲೆಯಲ್ಲಿ ಉಳಿಯುವುದೂ ಇಲ್ಲ. ಅದನ್ನು ಅಳಿಸಿ ಹಾಕಬೇಕು ಎಂದು ಕಾನೂನೇ ಇದೆ. ಹಾಗಾದರೆ ರಕ್ಷಣೆ ಯಾರಿಗೆ ಸಿಗಬೇಕು?

ನಿಜ, ಕಾನೂನು ಕುರುಡು ಎನ್ನುತ್ತಾರೆ. ಅದು ಎಷ್ಟು ಕುರುಡಾಗಿರಬೇಕು? ಅದೂ ನಿಜ, ಎಲ್ಲರಿಗೂ ಸುಧಾರಿಸಿಕೊಳ್ಳಲು ಒಂದು ಅವಕಾಶ ಕೊಡಬೇಕು. ಬಾಲಾರೋಪಿಗಳಿಗೆ ಮೊದಲು ಅವಕಾಶ ಸಿಗಬೇಕು. ಅವನು ಇನ್ನೂ ಬಹುಕಾಲ ಬದುಕಬೇಕು. ಇತ್ಯಾದಿ... ಇತ್ಯಾದಿ. ಸರಿ, ಕಿಸೆಗಳ್ಳತನ ಮಾಡುವ ಬಾಲಕರಿಗೆ ಅವಕಾಶ ಕೊಡೋಣ. ದರೋಡೆ ಮಾಡಿದರೆ ಅದಕ್ಕೂ ಒಂದು ಅವಕಾಶ ಕೊಡೋಣ. ತುಂಟ ವಯಸ್ಸು ಈಗಷ್ಟೇ ಮೀಸೆ ಚಿಗುರುತ್ತಿವೆ. ಹುಡು ಗಿಯರನ್ನು ಚುಡಾಯಿಸುತ್ತಾನೆ. ಅದಕ್ಕೂ ರಿಯಾಯಿತಿ ಕೊಡೋಣ. ಏನೋ ಮಾಡಲು ಹೋಗಿ, ಏನೋ ಆಯಿತು. ಆತನಿಗೆ ಕೊಲೆ ಮಾಡುವ ಉದ್ದೇಶ ಇರಲಿಲ್ಲ. ಆದರೆ, ಮಾಡಿ ಬಿಟ್ಟ. ಸರಿ, ಅದಕ್ಕೂ ರಿಯಾಯಿತಿ ಕೊಡೋಣ. ಅತ್ಯಾಚಾರ ಮಾಡಿದರೆ? ಅತ್ಯಾಚಾರ ಮಾಡಲು ಕೌಮಾರ್ಯ ಕಳೆಯುವುದು ಬೇಡವೇ? ಹಾಗಾದರೆ ಕೌಮಾರ್ಯ ಎಂದರೆ ಏನು? ಹೋಗಲಿ, ಅಪರಾಧಕ್ಕೆ ಮತ್ತು ಶಿಕ್ಷೆಗೆ ತಾಳೆ ಇರುವುದು ಬೇಡವೇ? ತಾಳೆ ಆಗಬೇಕೇ ಬೇಡವೇ? ಅತ್ಯಾಚಾರ ಮತ್ತು ಕೊಲೆಗೆ ಗರಿಷ್ಠ ಶಿಕ್ಷೆ ಮೂರೂ ವರ್ಷ ಎನ್ನುವುದಾದರೆ ಸಣ್ಣ ಪುಟ್ಟ ಅಪರಾಧಗಳಿಗೆಲ್ಲ ಹೀಗೆ ಹೋಗಿ ಹಾಗೆ ಬಂದರೆ ಸಾಕಲ್ಲ?

ದೆಹಲಿ, ಮುಂಬೈ ಮತ್ತು ಬೆಂಗಳೂರಿನ ಕ್ರೂರ ಅತ್ಯಾಚಾರಗಳನ್ನು ಕಂಡ ನಂತರವೂ ಬಾಲಾರೋಪಿಗಳ ವಯಸ್ಸು ಕಡಿಮೆ ಮಾಡುವುದು ಬೇಡವೇ? ಇನ್ನೂ ಆ ಮಿತಿ ಹದಿನೆಂಟೇ ಇರಬೇಕೇ? ಕಡಿಮೆ ಮಾಡಬೇಕು ಎಂಬ ವಾದವನ್ನು ದೇಶದ ಸರ್ವೋಚ್ಚ ನ್ಯಾಯಾಲಯ ಒಪ್ಪಿಲ್ಲ. ಅದೇ ನ್ಯಾಯಾಲಯದ ನ್ಯಾಯಮೂರ್ತಿಯಾಗಿದ್ದ ಜೆ.ಎಸ್.ವರ್ಮಾ ಸಮಿತಿಯೂ ಒಪ್ಪಲಿಲ್ಲ. ಉದ್ದೇಶ ಒಳ್ಳೆಯದು. ಬಾಲಾರೋಪಿಗಳನ್ನು ಶಿಕ್ಷಿಸಬಾರದು. ಅವರನ್ನು ಸುಧಾರಿಸಬೇಕು ಎಂಬುದು ಕಾನೂನಿನ ಕಾಳಜಿ.

ಬಾಲಾರೋಪಿಗಳನ್ನು ಇಡುವ ಸ್ಟೇಟ್ ಹೋಮ್‌ಗಳಿಂದ ಹೊರಗೆ ಬಂದ ಬಾಲಕರ ಮನಃಸ್ಥಿತಿ ಸುಧಾರಿಸಿದೆಯೇ? ಅವು ನಮ್ಮ ಜೈಲುಗಳಿಗಿಂತ ಉತ್ತಮ ತಾಣಗಳೇ? ಅವುಗಳ ಸುಧಾರಣೆ ಬಗ್ಗೆ ಸರ್ಕಾರ ಏನು ಪ್ರಯತ್ನ ಮಾಡಿದೆ? ಮಾಡುವಂತೆ ಯಾವ ಒತ್ತಡ ಹಾಕಿದ್ದೇವೆ? ಸುಧಾರಣಾವಾದಿಗಳು ಆಗುವುದು ಸುಲಭ. ಉದಾರವಾದಿಗಳು ಆಗುವುದೂ ಸುಲಭ. ಮನುಷ್ಯರನ್ನು ಅಟ್ಟಿಸಿಕೊಂಡು ಹೋಗಿ ಕಚ್ಚುವ ಹುಚ್ಚು ನಾಯಿಗಳನ್ನು ರಕ್ಷಿಸಬೇಕು ಎನ್ನುವವರೂ ಹೀಗೆಯೇ ಮಾತನಾಡುತ್ತಾರೆ. ದೆಹಲಿ ಅತ್ಯಾಚಾರದ ಬಾಲಾರೋಪಿ ಬಿಡುಗಡೆಯಾದ ನಂತರ ಯಾರಾದರೂ ಒಬ್ಬ ಸುಧಾರಣಾವಾದಿ ಆತನನ್ನು ತಮ್ಮ ಮನೆಯಲ್ಲಿ ಇಟ್ಟುಕೊಳ್ಳುತ್ತಾರೆಯೇ? ಹೀಗೆ ಮಾಡಿ ಎಂದು ದೆಹಲಿಯ ಯುವತಿಯ ತಂದೆ ತಾಯಿ ಕೇಳಿದರೆ ಅವರು ಏನು ಉತ್ತರ ಕೊಡುತ್ತಾರೆ?

'ದೇಶದಲ್ಲಿ ಇನ್ನು ಎರಡು ತಿಂಗಳು ಅತ್ಯಾಚಾರ ನಡೆಯದೇ ಇದ್ದರೆ ನಾನೇ ದೆಹಲಿ ಅತ್ಯಾಚಾರದ ಆರೋಪಿಗಳನ್ನು ನೇಣಿಗೆ ಏರಿಸಲು ಒಪ್ಪುತ್ತೇನೆ' ಎಂದು ಅವರ ಪರ ವಕೀಲರು ಹೇಳಿದ್ದಾರೆ. ಎಂಥ ಶಿಕ್ಷೆ ಕೊಟ್ಟರೂ ಮನುಷ್ಯನ ಒಳಗಿನ ಕ್ರೌರ್ಯಕ್ಕೆ ಅದು ಉತ್ತರವಲ್ಲ ಎಂದು ಆ ವಕೀಲರಿಗೆ ಗೊತ್ತಿದೆ. ದೆಹಲಿಯ ಯುವತಿಯನ್ನು ರಕ್ಷಿಸುವುದು ಸಮಾಜದ ಹೊಣೆಯಾಗಿತ್ತು ಎಂದು ತೀರ್ಪು ಬರುವ ದಿನ ಆಕೆಯ ಗೆಳೆಯನೂ ಹೇಳಿದ್ದ. ನಾವು ಅಂಥ ಹೊಣೆಗಾರ ಸಮಾಜದಲ್ಲಿ ಬದುಕುತ್ತಿದ್ದೇವೆಯೇ? ಇಲ್ಲ ಎನಿಸುತ್ತದೆ.

15-9-2013

# ಅಸ್ವಸ್ಥ ಸಮಾಜವೂ, ಓಬೀರಾಯನ ಕಾಲದ ಕಾನೂನೂ...

ಇಡೀ ವಾರ ಮನಸ್ಸು ಅಸ್ವಸ್ಥವಾಗಿದೆ. ನಾನು ಗಂಡಸು ಜಾತಿಗೆ ಸೇರಿದವನು ಎಂದು ಹೇಳಿಕೊಳ್ಳಲು ನಾಚಿಕೆಯಾಗುತ್ತಿದೆ. ನನ್ನ ಒಳಗಿನ ಶಿಕ್ಷಕ, ಮೇಲಧಿಕಾರಿ, ನೆರೆಮನೆಯ ಅಜ್ಜ, ಪೊಲೀಸ್ ಯಾರೂ ಒಳ್ಳೆಯವರು ಅಲ್ಲ ಎಂದು ಅನಿಸತೊಡಗಿದೆ. ಅವರೆಲ್ಲ ಮೃಗಗಳು, ಯಾವುದರ ಹಂಗೂ ಇಲ್ಲದ ಕಾಮಪಿಶಾಚಿಗಳು ಎಂದು ಭಯವಾಗುತ್ತಿದೆ. ಇದೆಲ್ಲ ಹೇಗೆ ಆಗಲು ಸಾಧ್ಯ? ಯಾರಾದರೂ ನಾಲ್ವರು ಗಂಡಸರನ್ನು ಯಾರಾದರೂ ಹೆಂಗಸರು ಎಳೆದುಕೊಂಡು ಹೋಗಿ ಅತ್ಯಾಚಾರ ಮಾಡಿ ಮುಳ್ಳು ಕಂಟಿಯಲ್ಲಿ ಬಿಸಾಕಬಾರದೇ ಎಂದು ಮನಸ್ಸು ಕೇಳುತ್ತಿದೆ. ಪೊಲೀಸರು, ಆಡಳಿತಗಾರರು ನಮ್ಮ ಹೆಣ್ಣು ಮಕ್ಕಳನ್ನು ರಕ್ಷಿಸಲಾರರು ಎಂದು ಭಾಸವಾಗುತ್ತಿದೆ. ಅವರಿಗೆ ಬೇರೆ ಕೆಲಸಗಳು ಇದ್ದಂತೆ ಇವೆ. ಗೃಹ ಸಚಿವರು, 'ನಾನೇನು ಮಾಡಲು ಸಾಧ್ಯ? ಎಲ್ಲರೂ ನನ್ನ ರಾಜೀನಾಮೆ ಏಕೆ ಕೇಳುತ್ತಿದ್ದಾರೆ' ಎಂದು ಅನ್ನುತ್ತಿದ್ದಾರೆ. ಮುಖ್ಯಮಂತ್ರಿಗಳು, 'ನಿಮ್ಮ ಸರ್ಕಾರದಲ್ಲಿ ಅದು ಮಾಡಲಿಲ್ಲವೇ? ಇದು ಮಾಡಲಿಲ್ಲವೇ' ಎಂದು ನೆರಳು ಹುಡುಕುತ್ತಿದ್ದಾರೆ. ಯಾರಿಗೂ ಇದು ಒಂದು ನೈತಿಕ ಹೊಣೆ ಎಂದು ಅನಿಸುತ್ತಿಲ್ಲ. ಕೊಳೆತು ನಾರುತ್ತಿರುವ ನಮ್ಮ ಆತ್ಮಸಾಕ್ಷಿಗೆ ಹಿಡಿದ ಕನ್ನಡಿ ಎಂದು ತೋರುತ್ತಿಲ್ಲ. ದುರಂತ ನೋಡಿ, ಗಂಡಸಿಗೆ ಅವಮಾನ ಎಂಬುದು ಇಲ್ಲ. ಎಲ್ಲವನ್ನೂ ಈ ಸಮಾಜ ಹೆಣ್ಣಿಗೇ ಕೊಟ್ಟಂತಿದೆ. ಅದಕ್ಕೇ ಆಕೆ ಅಬಲೆಯಂತೆ ಕಾಣಿಸುತ್ತಿದ್ದಾಳೆ. ನನ್ನ ಸಹೋದ್ಯೋಗಿ ನಿನ್ನೆ ಬಂದು ನನ್ನ ಮಗಳನ್ನು ಎಲ್ಲಿ ಸುರಕ್ಷಿತವಾಗಿ ಇಡಲು ಸಾಧ್ಯ ಎಂದು ನನ್ನನ್ನು ಕೇಳಿದರು. ನಿಮ್ಮ ಹೊಟ್ಟೆ ಬಿಟ್ಟು ಬೇರೆ ಜಾಗ ಇದ್ದಂತೆ ಕಾಣುತ್ತಿಲ್ಲ ಎಂದೆ. ಅವರೂ 'ಹೌದು' ಎಂದು ಹೊರಗೆ ಹೋದರು. ಹೆಣ್ಣು ಹೆತ್ತವರ ಕಷ್ಟವನ್ನು ಏನು ಎಂದು ಹೇಳುವುದು?

ಆ ಹುಡುಗಿ ಏನು ತಪ್ಪು ಮಾಡಿದ್ದಳು? ಎಲ್ಲಿಯೋ ಓದಿಕೊಂಡು ಇದ್ದಳು. ತಂದೆ ಮನೆಗೆ ಎಂದು ಬಂದಳು. ಗೆಳೆಯನ ಜತೆ ರಾತ್ರಿ ಊಟ ಮಾಡಿದಳು. ಇನ್ನೇನು

ಮನೆಯೊಳಗೆ ಹೋಗಬೇಕು. ಒಂದು ಕ್ಷಣ ಆತನ ಜತೆ ಮಾತನಾಡುತ್ತ ನಿಂತಿದ್ದಳು. ಕಾಯುತ್ತ ನಿಂತಿದ್ದ ಮೃಗ ಬಂದು ಪಂಜ ಬೀಸಿಯೇ ಬಿಟ್ಟಿತು. ಆಕೆ ದಿಟ್ಟೆ ಎದುರಿಸಲು ಸಿದ್ಧಳಾಗಿದ್ದಾಳೆ. ಎಷ್ಟು ದಿನ? ಎರಡು ದವಡೆ ಮತ್ತು ಎರಡು ತೊಡೆಯ ನಡುವಿನದನ್ನು ನಿಯಂತ್ರಿಸಬೇಕಿದ್ದ ಮಾಸದಲ್ಲೇ ಆತ ಪಶುವಾಗಿದ್ದ, ದುರ್ದೈವ, ಯಾವ ಧರ್ಮವೂ ನಮ್ಮನ್ನು ಮನುಷ್ಯರನ್ನಾಗಿ ಮಾಡುತ್ತಿಲ್ಲ. ನಾವು ಇನ್ನಷ್ಟು, ಮತ್ತಷ್ಟು ದಾನವರೇ ಆಗುತ್ತಿದ್ದೇವೆ. ಆ ಹುಡುಗಿಗೆ ಆತ ಮಾತ್ರ ದಾನವನಾಗಿದ್ದನೇ? ಹಾಗೆ ಅನಿಸುತ್ತಿಲ್ಲ. ಒಟ್ಟು ಸಮಾಜವೇ ಅಸೂಕ್ಷ್ಮವಾಗಿದೆ. ಇಂಥ ಯುವತಿ ಠಾಣೆಗೆ ಬಂದರೆ ಪೊಲೀಸ್ ಅಧಿಕಾರಿ ಆಕೆಯ ಹೇಳಿಕೆಯನ್ನು ಮಹಿಳಾ ಅಧಿಕಾರಿ ಕಡೆಯಿಂದ ಬರೆಯಿಸಿಕೊಳ್ಳಬೇಕು. ಆ ಠಾಣೆಯಲ್ಲಿ ಆ ಅಧಿಕಾರಿಣಿ ಇರಲೇ ಇಲ್ಲ. ಠಾಣೆಯ ಅಧಿಕಾರಿಯೂ ಖಳ, ಏನೋ ಮಾತನಾಡಿದ. ಆತನೊಬ್ಬನೇ ಖಳನೇ? ಕೋಲಾರದಲ್ಲಿಯೂ ಅಂಥವನೇ ಮತ್ತೊಬ್ಬ ಇದ್ದ. ಇದು ಬೆಂಗಳೂರು, ಕೋಲಾರದ ಕಥೆ ಮಾತ್ರವಲ್ಲ, ಜೇವರಗಿಯಲ್ಲಿ, ಸಿಂದಗಿಯಲ್ಲಿ... ಎಲ್ಲಿ ಇಲ್ಲ ಹೇಳಿ? ಕೇಳಿದರೆ ಸಿಬ್ಬಂದಿಯ ಕೊರತೆ ಎಂಬ ಉತ್ತರ ಸಿಗುತ್ತದೆ. ಇದು ಸಿಬ್ಬಂದಿಯ ಕೊರತೆಯ ಪ್ರಶ್ನೆಯಿಲ್ಲ. ಠಾಣೆಯಲ್ಲಿ ಇರುವುದು ಮನುಷ್ಯತ್ವದ ಕೊರತೆ. ಪುಲಕೇಶಿನಗರದ ಠಾಣಾಧಿಕಾರಿಗೆ ಮನುಷ್ಯತ್ವ ಎಂಬುದು ಇದಿದ್ದರೆ ಆತ ಆ ಯುವತಿಯ ವೈಯಕ್ತಿಕ ವಿವರಗಳನ್ನು ಟೀವಿ ಚಾನೆಲ್‌ಗಳಿಗೆ ಕೊಡುತ್ತಿರಲಿಲ್ಲ. ಚಾನೆಲ್‌ಗಳಿಗಾದರೂ ಒಂದಿಷ್ಟು ವಿವೇಕ ಎನ್ನುವುದು ಇದಿದ್ದರೆ ಆ ಯುವತಿಯ ಮುಖವನ್ನು ಮಾತ್ರ ತೆಳುವಾಗಿ ಮುಚ್ಚಿ ಉಳಿದ ದೇಹದ ಭಾಗವನ್ನು ತೋರಿಸುತ್ತಿರಲಿಲ್ಲ. ಆಕೆಯ ಮನೆಯನ್ನು, ಪರಿಸರವನ್ನು ತೋರಿಸುತ್ತಿರಲಿಲ್ಲ. ಇದು ಒಂದೇ ಘಟನೆಯಲ್ಲ. ಇಡೀ ವಾರ ಇಂಥದೇ ಘಟನೆಗಳು ನಡೆದಿವೆ. ಇಂಥದೇ ಲೋಪವನ್ನು ಚಾನೆಲ್‌ಗಳು ಮಾಡಿವೆ. ಉಳಿದ ಪ್ರಕರಣಗಳಲ್ಲಿ ಅತ್ಯಾಚಾರ ಎದುರಿಸಿದ ಬಾಲಕಿಯ, ಹುಡುಗಿಯ, ಯುವತಿಯ ಸಂಬಂಧಿಕರ ಸಂದರ್ಶನಗಳು ಪ್ರಸಾರವಾಗಿವೆ. ಮುದ್ರಣ ಮಾಧ್ಯಮಗಳೂ ಲಕ್ಷಣ ರೇಖೆ ದಾಟಿವೆ. ಪುಲಕೇಶಿನಗರ ಅತ್ಯಾಚಾರ ಪ್ರಕರಣದ ಯುವತಿ ಎಲ್ಲಿ ಓದುತ್ತಿದ್ದರು ಎಂಬ ಗುಟ್ಟನ್ನು ಬಿಟ್ಟುಕೊಟ್ಟಿವೆ. ರಾತ್ರಿ ಆ ಯುವತಿ ಮತ್ತು ಆಕೆಯ ಗೆಳೆಯ ತಡರಾತ್ರಿ ವರೆಗೆ ಮೋಜು ಮಾಡಿದರು ಎಂದು ಬರೆದಿವೆ!

ನಾವು ಮಾಧ್ಯಮದವರು ಸುದ್ದಿ ಮಾತ್ರ ಬರೆಯುತ್ತಿಲ್ಲ. ತೀರ್ಮಾನಗಳನ್ನು ಬರೆಯುತ್ತಿದ್ದೇವೆ. ತೀರ್ಮಾನಗಳನ್ನು ಕೊಡಲು ತವಕಿಸುತ್ತಿದ್ದೇವೆ. ಪ್ರದರ್ಶನದ ಹಪಹಪಿಗೆ ಬಿದಿದ್ದೇವೆ. ಅತ್ಯಾಚಾರ ಎದುರಿಸಿದ (survivor) ಹೆಣ್ಣುಮಗಳ ಹೆಸರು ಬಹಿರಂಗ ಮಾಡಬಾರದು ಎಂಬುದಷ್ಟೇ ನಮಗೆ ಗೊತ್ತಿದೆ. ಅತ್ಯಾಚಾರ ಎದುರಿಸಿದ ಹೆಣ್ಣುಮಗಳ ಮನೆಯನ್ನು, ಶಾಲೆಯನ್ನು, ಕಾಲೇಜನ್ನು ಗುರುತಿಸಬಾರದು. ಆಕೆಯ ಪಾಲಕರನ್ನು ಗುರುತಿಸಬಾರದು. ಆಕೆಯ ನಿವಾಸವನ್ನು ಗುರುತಿಸಬಾರದು. ಆಕೆಯ ಸಂಬಂಧಿಕರನ್ನು ಗುರುತಿಸಬಾರದು. ಅವರ ಸಂದರ್ಶನ ಪ್ರಕಟ ಮಾಡಬಾರದು ಇತ್ಯಾದಿ, ಇತ್ಯಾದಿ ನಿರ್ಬಂಧ ವಿಧಿಸಿದ್ದು ಭಾರತೀಯ ಪತ್ರಿಕಾ ಮಂಡಳಿ, ಎಡಿಟರ್ಸ್ ಗಿಲ್ಡ್ ಆಫ್ ಇಂಡಿಯಾ,

ನ್ಯಾಷನಲ್ ಬ್ರಾಡಕಾಸ್ಟರ್ಸ್ ಅಸೋಸಿಯೇಷನ್, ನ್ಯಾಯಮೂರ್ತಿ ಜೆ.ಎಸ್.ವರ್ಮಾ ಸಮಿತಿ, ಸುಪ್ರೀಂ ಕೋರ್ಟಿನ ಅನೇಕ ತೀರ್ಪುಗಳು... ಎಲ್ಲ ಹೇಳಿದ್ದು ಮಾಧ್ಯಮ ಸಂಯಮ ವಹಿಸಬೇಕು ಎಂದೇ.

ಅತ್ಯಾಚಾರ ಎಂಬುದು ಒಬ್ಬ ಹೆಣ್ಣಿನ ಬದುಕಿನಲ್ಲಿ ಅಳಿಸಲಾಗದ ಗಾಯ; ಕಳಂಕ, ಯಾವ ಕುಟುಂಬದಲ್ಲಿ ಅಂಥ ಒಂದು ಘಟನೆ ನಡೆದರೂ ಅವರ ಇಡೀ ಬದುಕು ತತ್ತರಿಸಿ ಹೋಗುತ್ತದೆ. ಇಂಥದನ್ನೆಲ್ಲ ವರದಿ ಮಾಡಲೇಬೇಕು. ವ್ಯಕ್ತಿಗಳಿಗೆ ಅಭಿವ್ಯಕ್ತಿ ಸ್ವಾತಂತ್ರ್ಯ ಇದೆ. ಜತೆಗೆ ಸಮಾಜದಲ್ಲಿ ನಡೆಯುವುದನ್ನು ತಿಳಿಯುವ ಹಕ್ಕೂ ಇದೆ. ಪತ್ರಿಕೆಗಳೂ ಸಂವಿಧಾನದ ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕಿನ ಅಡಿಯಲ್ಲಿಯೇ ಕೆಲಸ ಮಾಡುತ್ತವೆ. ಜತೆಗೆ ಅವು ಸಮಾಜಕ್ಕೆ ಇರುವ ತಿಳಿಯುವ ಹಕ್ಕನ್ನೂ ಸಮಾಧಾನ ಮಾಡುತ್ತಿವೆ. ಆದರೆ, ಅದೇ ಸಂವಿಧಾನ, ವ್ಯಕ್ತಿಗೆ ಬದುಕುವ ಹಕ್ಕನ್ನೂ ಕೊಟ್ಟಿದೆ. ಖಾಸಗಿತನದ ಹಕ್ಕನ್ನೂ ನೀಡಿದೆ. ಬದುಕುವ ಹಕ್ಕಿನ ಅಡಿಯಲ್ಲಿಯೇ ಖಾಸಗಿತನದ ಹಕ್ಕೂ ಸೇರಿಕೊಂಡಿದೆ ಎಂದು ಸರ್ವೋಚ್ಚ ನ್ಯಾಯಾಲಯದ ಅನೇಕ ತೀರ್ಪುಗಳು ಹೇಳಿವೆ. ಅತ್ಯಾಚಾರ ಎದುರಿಸಿದ ಹೆಣ್ಣು ಮಗಳಿಗೆ ಖಾಸಗಿತನದ ಹಕ್ಕು ಇದೆ. ಅದು ಆಕೆಯ ಬದುಕುವ ಹಕ್ಕು ಕೂಡ ಎಂದು ಮಾಧ್ಯಮಗಳು ತಿಳಿದುಕೊಳ್ಳಬೇಕಿದೆ. ಗಾಸಿಗೊಂಡ ಹೆಣ್ಣು ಮಗಳ ಮುಖಕ್ಕೆ ಒಂದಿಷ್ಟು ಕವಚ ಹಾಕಿ ಆಕೆಯ ತಾಯಿಯನ್ನೋ, ತಂಗಿಯನ್ನೋ ಕ್ಯಾಮೆರಾ ಎದುರು ನಿಲ್ಲಿಸಿ, 'ಏನಾಯಿತು ಎಲ್ಲ ಹೇಳಿ' ಎಂದು ಕೇಳಿದರೆ ಏನರ್ಥ? ಸಂಬಂಧಿಕರು ಏಕೆ, ಅತ್ಯಾಚಾರ ಎದುರಿಸಿದವರಿಗೇ ಕ್ಯಾಮೆರಾಗಳು ಈ ಪ್ರಶ್ನೆ ಕೇಳಿವೆ. ಆಕೆ ಅದೆಲ್ಲ ಏನು ಎಂದು ತಿಳಿಯದ ಮುಗ್ಧ ಹಸುಳೆ ಎಂದೂ ಕ್ಯಾಮೆರಾಗಳಿಗೆ ಗೊತ್ತಾಗಿಲ್ಲ.

ಸಮಾಜದಲ್ಲಿ ಏನೆಲ್ಲ ನಡೆಯುತ್ತಿದೆ ಎಂದು ಹೇಳಬೇಕಾದುದು ಮಾಧ್ಯಮಗಳ ಹೊಣೆಗಾರಿಕೆ. ಆದರೆ, ಅತ್ಯಾಚಾರ ಎದುರಿಸಿದ ಕುಟುಂಬವನ್ನು ಹೊರಗೆ ಇಟ್ಟೂ ನಾವು ಇದನ್ನು ಹೇಳಲು ಏಕೆ ಸಾಧ್ಯವಿಲ್ಲ? ಸಮಾಜದಲ್ಲಿ ಅನುಕಂಪವನ್ನು, ದಯೆಯನ್ನು, ಮಾನವೀಯತೆಯನ್ನು ನಾವು ಬಿತ್ತಬೇಕು ನಿಜ. ಆದರೆ, ಅದನ್ನೇ ಸ್ಟುಡಿಯೊಗಳಲ್ಲಿ ಇಟ್ಟು ಮಾರಬಾರದು. ಮಾಧ್ಯಮಗಳು ಕಾಮವನ್ನು ಮಾರುತ್ತಿವೆ. ಕ್ರೌರ್ಯವನ್ನು ಮಾರುತ್ತಿವೆ. ಅಪರಾಧವನ್ನು ಮಾರುತ್ತಿವೆ. ಅದನ್ನೆಲ್ಲ ವೈಭವಿಸುವುದರಿಂದಲೇ ಅದು ಮಾರಾಟದ ಸರಕು ಎಂದು ಅನಿಸುತ್ತಿದೆ. ಹೀಗೆಲ್ಲ ಮಾಡಿದರೆ ಅತ್ಯಾಚಾರ ಎದುರಿಸಿದ ಜೀವಕ್ಕೆ, ಅವರ ಕುಟುಂಬಕ್ಕೆ ನ್ಯಾಯ ಸಿಗುತ್ತದೆ ಎಂದು ನಾವು ಅಂದುಕೊಳ್ಳಬಹುದು. ಆದರೆ, ಆ ಪ್ರಕ್ರಿಯೆಯಲ್ಲಿ ಆಕೆ ಮತ್ತು ಅವರ ಇಡೀ ಕುಟುಂಬ ಮತ್ತೆ ಮತ್ತೆ ಅದೇ ಅವಮಾನವನ್ನು, ನರಕವನ್ನು, ನೋವನ್ನು ಅನುಭವಿಸುವಂತೆಯೂ ನಾವು ಮಾಡುತ್ತೇವಲ್ಲ! ನ್ಯಾಯ ಒದಗಿಸುವ ನಮ್ಮ ಕೆಲಸವೇ ಒಂದು ಶಿಕ್ಷೆ ಎನ್ನುವಂತೆ ಆದರೆ ನಾವು ಏನು ಸಾಧಿಸಿದಂತೆ ಆಯಿತು? ಅತ್ಯಾಚಾರ ಎದುರಿಸುವುದು ಒಂದು ಅವಮಾನ. ಠಾಣೆಯಲ್ಲಿ ಅದನ್ನು ಹೇಳುವುದು ಇನ್ನೊಂದು ಅವಮಾನ, ಪ್ರಕರಣದ ವಿಚಾರಣೆ ಎಷ್ಟು ದಿನ ನಡೆಯುತ್ತದೋ ಅಷ್ಟು ದಿನ ನ್ಯಾಯಾಲಯಕ್ಕೆ ಅಲೆದಾಡಿ ಪುರಾವೆ ಹೇಳುವುದು ಮತ್ತೊಂದು ಅವಮಾನ.

ನಡುವೆ, ಮಾಧ್ಯಮದವರ ಮುಂದೆ ಎಲ್ಲವನ್ನೂ ಬಿಚ್ಚಿ ಇಡುವುದು ಇನ್ನೆಂಥ ಅಪಮಾನ! ಆ ಕುಟುಂಬಕ್ಕೆ ಇದೆಲ್ಲ ಬೇಕೇ? ಯಾರಾದರೂ ಕೇಳಿದ್ದೇವೆಯೇ? ಒಂದು ಸಾರಿ ಸಿಕ್ಕ ದೃಶ್ಯಗಳನ್ನೇ ದಿನವಿಡೀ ಹಾಕಿ ಚಚ್ಚುತ್ತ ಇದ್ದರೆ ಗಾಸಿಗೊಂಡವರು ಎಲ್ಲಿ ಹೋಗಿ ಅಡಗಿಕೊಳ್ಳಬೇಕು?

ಎಲ್ಲಿಯಾದರೂ ಅತ್ಯಾಚಾರ ನಡೆದರೆ ಸಾಕು. ಅದು ಘೋರವಾಗಿದ್ದರೆ ಇನ್ನೂ ಒಳ್ಳೆಯದು ಎನ್ನುವಂತೆ ನಾವು ನಡೆದುಕೊಳ್ಳುತ್ತಿದ್ದೇವೆ. ನಿರ್ಭಯಾ ಪ್ರಕರಣದಲ್ಲಿ ಹೀಗೆಯೇ ಆಯಿತು. ಮುಂಬೈ ಛಾಯಾಗ್ರಾಹಕಿ ಪ್ರಕರಣದಲ್ಲಿಯೂ ಅದೇ ಆಯಿತು. ತರುಣ್ ತೇಜಪಾಲ್ ಪ್ರಕರಣದಲ್ಲಿ ಮತ್ತೆ ಅದು ಮರುಕಳಿಸಿತು. ಮುಂಬೈ ಛಾಯಾಗ್ರಾಹಕಿ ಅತ್ಯಾಚಾರ ಪ್ರಕರಣದಲ್ಲಿ ಒಂದು ದೊಡ್ಡ ರಾಷ್ಟ್ರೀಯ ಪತ್ರಿಕೆ ಆಕೆ ಯಾವ ಸಮುದಾಯಕ್ಕೆ ಸೇರಿದವಳು ಎಂಬ ಗುಟ್ಟನ್ನು ಮೊದಲ ದಿನವೇ ಬಿಟ್ಟುಕೊಟ್ಟಿತು. ಎರಡನೇ ದಿನ ಇನ್ನೊಂದು ರಾಷ್ಟ್ರೀಯ ಚಾನೆಲ್‌ನವರು ಆ ಯುವತಿ ವಾಸವಾಗಿದ್ದ ಫ್ಲಾಟಿಗೆ ಹೋಗಿ, 'ಆಕೆ ಹೇಗೆ, ಏನು' ಎಂದೆಲ್ಲ ವಿಚಾರಿಸಿತು. ಅಲ್ಲಿ ಇದ್ದವರಿಗೆ ವಿಷಯವೇ ಗೊತ್ತಿರಲಿಲ್ಲ. ಇವರು ಹೋಗಿ ಕೇಳಿದ್ದೇ ತಡ, ಠಾಣಾ ಡಂಗುರವಾಯಿತು. ಫ್ರೇಜರ್‌ಟೌನ್ ಯುವತಿಗೂ ಈಗ ಅದೇ ಆಯಿತು. ಆಕೆ ಯಾವ ವಿಷಯದ ತರಗತಿಯಲ್ಲಿ ಓದುತ್ತಿದ್ದಳು ಎಂಬುದನ್ನು ಈಗ ಪತ್ರಿಕೆಗಳೇ ಬಹಿರಂಗ ಮಾಡಿವೆ. ಆಕೆಯ ವೇಷ ರಾಜ್ಯದ ಒಂದು ನಿರ್ದಿಷ್ಟ ಸಮುದಾಯಕ್ಕೆ ಸೇರಿದ್ದು ಎಂಬುದನ್ನು ಆಕೆಯ ಮುಖ ಮಾತ್ರ ಮುಚ್ಚಿದ್ದ ದೇಹ ತೋರಿಸಿ ಟೀವಿ ಚಾನೆಲ್‌ಗಳು ಬಹಿರಂಗ ಮಾಡಿವೆ. ಈಗ ಆ ಯುವತಿ ಯಾರು ಎಂದು ಇಡೀ ಜಗತ್ತಿಗೇ ಗೊತ್ತಾಗಿದೆ. ಇಷ್ಟೆಲ್ಲ ಮಾಡಿಯೂ ನಾವು ನ್ಯಾಯ ಒದಗಿಸುತ್ತಿದ್ದೇವೆ ಎಂದು ನಾವು ಹೇಳಿಕೊಳ್ಳಬಹುದೇ? ಯಾವ ಮುಖ ಇಟ್ಟುಕೊಂಡು?

ನಾವು ಅಸ್ವಸ್ಥರೂ, ಅಸೂಕ್ಷ್ಮರೂ ಆಗುತ್ತಿದ್ದೇವೆ. ಇಡೀ ಸಮಾಜವೇ ಹಾಗೆ ಆಗುತ್ತಿದೆ. ಅಸೂಕ್ಷ್ಮತೆ ಎಂಬುದು ಸಮಾಜದ ಒಂದು ಅಂಗದ ಲಕ್ಷಣವಾಗಿ ಈಗ ಉಳಿದಿಲ್ಲ. ವೈರಸ್ಸಿನ ಹಾಗೆ ಅದು ಎಲ್ಲವನ್ನೂ ವೇಗವಾಗಿ ವ್ಯಾಪಿಸುತ್ತಿರುವಂತಿದೆ. ನಿರ್ಭಯಾ ಪ್ರಕರಣ ನಮ್ಮ ಅಂತಃಕರಣ ಕಲಕಿತ್ತು. ಅದು ನಮ್ಮನ್ನು ಇನ್ನಷ್ಟು ಮಾನವೀಯ ಮಾಡಬೇಕಿತ್ತು. ಮೃದುಗೊಳಿಸಬೇಕಿತ್ತು. ನಿರ್ಭಯಾಳ ಹಿಂದೆಯೇ ಮುಂಬೈ ಛಾಯಾಗ್ರಾಹಕಿ ಮೇಲೆ ಅತ್ಯಾಚಾರ ನಡೆಯಿತು. ಪೆಟ್ಟಿನ ಮೇಲೆ ಮತ್ತೊಂದು ಪೆಟ್ಟು ಬಿತ್ತು. ನಾವು ಮತ್ತಷ್ಟು ಮೃದು ಆಗಬೇಕಿತ್ತು. ಮಾನವಂತರು ಆಗಬೇಕಿತ್ತು. ನಮ್ಮ ಮನೆಯಲ್ಲಿಯೂ ಹೆಣ್ಣು ಮಕ್ಕಳು ಇದ್ದಾರೆ, ಹಸುಗೂಸುಗಳು ಇವೆ ಎಂದು ನೆನಪು ಇಟ್ಟುಕೊಳ್ಳಬೇಕಿತ್ತು. ದಲಿತ ಬಾಲಕಿಯರ ಮೇಲೆ ಅತ್ಯಾಚಾರ ಮಾಡಿ ಅವರನ್ನು ಮರಕ್ಕೆ ತೂಗು ಹಾಕುವ, ಪಂಚಾಯ್ತಿ ಕಟ್ಟೆಯಲ್ಲಿ ಅತ್ಯಾಚಾರಕ್ಕೆ ಆದೇಶ ನೀಡುವ ಒಂದು ಸಮಾಜ ಸ್ವಸ್ಥ ಎನಿಸಲು ಹೇಗೆ ಸಾಧ್ಯ? ನಮಗೆ ಇಲ್ಲಿ ಯಾರಿಗೂ ಕಾನೂನಿನ ಭಯ ಎಂಬುದೇ ಇಲ್ಲ. ಓಬೀರಾಯನ ಕಾಲದ ಕಾನೂನು ಇಟ್ಟುಕೊಂಡು ಅದರ ಭಯ ಹುಟ್ಟಿಸಲು ಹೇಗೆ ಸಾಧ್ಯ?

# ನಾಶವಾಗುವ ದಾರಿ

# ನಿಕಟದಲ್ಲಿಯೇ ಇರುತ್ತದೆ...!

ಜೀವನದಲ್ಲಿ ಎತ್ತರಕ್ಕೆ ಏರಿದವರ ಕಷ್ಟ ಇದು. ತಮ್ಮ ಜತೆಗೇ ಇದ್ದವನು ಹೀಗೆ - ಎತ್ತರಕ್ಕೆ ಏರಿ ಕೈಗೆ ಎಟುಕದಂತೆ ನಿಲುಕದವ ಆದ ಕೂಡಲೇ ಕೆಳಗೆ ಇದ್ದವರಿಗೆ ಅಸೂಯೆ ಶುರುವಾಗುತ್ತದೆ. ಆತ ಎತ್ತರಕ್ಕೆ ಏರಲು ಪಟ್ಟ ಕಷ್ಟಗಳ ಅರಿವು ಅವರಿಗೆ ಇರುವುದಿಲ್ಲ; ಅಥವಾ ಅದನ್ನು ಗಮನಿಸುವುದು ಅವರಿಗೆ ಬೇಕಿರುವುದಿಲ್ಲ. ಒಂದು ಸಾರಿ ಎತ್ತರ ತಲುಪಿದವರು ಆಗಾಗ ಕೆಳಗೆ ನೋಡುತ್ತ ಇರಬೇಕು. ತಾನು ಎಷ್ಟು ಎತ್ತರ ನಡೆದು ಬಂದಿದ್ದೇನೆ ಎಂದು ಅದು ಆತನನ್ನು ಎಚ್ಚರಿಸುತ್ತ ಇರುತ್ತದೆ. ಎತ್ತರ ಹೆಚ್ಚಿದಷ್ಟೂ ಅಲ್ಲಿಂದ ಕೆಳಗೆ ಬಿದ್ದರೆ ಆಗುವ ಪೆಟ್ಟು ಜಾಸ್ತಿ ಎಂಬುದನ್ನೂ ಅದು ನೆನಪಿಸುತ್ತ ಇರುತ್ತದೆ. ಒಂದು ಸಾರಿ ಎತ್ತರವನ್ನು ಮುಟ್ಟಿದವರು ಸದಾಕಾಲ ಎಚ್ಚರದಿಂದ ಇರಬೇಕು. ತಾವು 'ಕೆಳಗೆ ಬೀಳುವಂಥ ತಪ್ಪನ್ನು ಮಾಡಬಾರದು. 'ತೆಹಲ್ಕಾ' ಪತ್ರಿಕೆಯ ಪ್ರಧಾನ ಸಂಪಾದಕ ತರುಣ್ ತೇಜಪಾಲ್ ಇದನ್ನು ಮರೆತರು ಎಂದು ಕಾಣುತ್ತದೆ.

ಅವರು ಮಾಧ್ಯಮದಲ್ಲಿ ಇದ್ದುಕೊಂಡು ಬೇರೆಯವರಿಗೆ ಏನು ಮಾಡಿದ್ದರೋ ಈಗ ಅದನ್ನೇ ಮಾಧ್ಯಮ ಅವರಿಗೆ ಮಾಡುತ್ತಿದೆ. ಆತ ನಮ್ಮ ಕ್ಷೇತ್ರದವನು, ನಮ್ಮ ಹಾಗೆ ಒಬ್ಬ ಮನುಷ್ಯ ಎಂಬುದೂ ನಮಗೆ ಬೇಡವಾಗಿದೆ. ಕೆಳಗೆ ಬಿದ್ದಿದ್ದಾನೆ, ಬಡಿದು ಸಾಯಿಸಿಬಿಡೋಣ ಎನ್ನುವಂತೆ ಮಾಡುತ್ತಿದ್ದೇವೆ. ಒಬ್ಬ ಆರೋಪಿಯ ಜತೆಗೇ ಮಾಧ್ಯಮದವರು ವಿಮಾನದಲ್ಲಿ ಪ್ರಯಾಣ ಮಾಡಿ, ಬೇಟೆಯಾಡಿದ್ದು ಇದೇ ಮೊದಲು ಎನಿಸುತ್ತದೆ.

ತರುಣ್ ತೇಜಪಾಲ್ ಪಂಜಾಬಿನವರು, ಐವತ್ತರ ವಯಸ್ಸು. ಕೇಂದ್ರ ಸಚಿವ ಕಪಿಲ್ ಸಿಬಲ್ ಅವರ ನಿಕಟ ಸಂಬಂಧಿ, ಸಹಜವಾಗಿಯೇ ಪ್ರಭಾವಿ ವ್ಯಕ್ತಿ. ಕೇವಲ ಹತ್ತು ಹನ್ನೆರಡು ವರ್ಷಗಳಲ್ಲಿ ಅವರು ಮಾಧ್ಯಮದಲ್ಲಿ ಮಾಡಿದ ಹೆಸರು ಇದೇ ಕ್ಷೇತ್ರದಲ್ಲಿ ಇದ್ದವರ ಕಣ್ಣು ಕಿಸರು ಮಾಡಿತ್ತು. ಎತ್ತರದ ಆಳು ತರುಣ್ ತಮ್ಮ ಎತ್ತರ'ಕ್ಕೆ ಯಾರೂ ಇಲ್ಲ ಎಂಬ

ಅಹಂ ಇದ್ದಂತೆ ಇತ್ತು. ಅವರ ಮಾತು, ಹಾವಭಾವ, ನಡೆ ನುಡಿ ಎಲ್ಲವೂ ಇತರರು ಹುಳುಗಳು ಎಂಬಂತೆ ಇತ್ತು. ಈಗ ಉಳಿದವರೆಲ್ಲ ಒಂದಾಗಿ ತರುಣ್ ಅವರನ್ನು ಹುಳುವಿನ ಹಾಗೆಯೇ ಹೊಸಕಿ ಹಾಕುತ್ತಿದ್ದಾರೆ.

ತರುಣ್ ತೇಜಪಾಲ್ ಪತ್ರಿಕೋದ್ಯಮದಲ್ಲಿ ಹೇಗೆ ಹೆಸರು ಮಾಡಿದರು ಎಂಬುದು ಈಗ ಇತಿಹಾಸ, ಅವರು ಮಾಡಿದ ಮಾರುವೇಷದ ಕಾರ್ಯಾಚರಣೆಯಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾಗಿದ್ದ ಬಂಗಾರು ಲಕ್ಷ್ಮಣ ಕೇವಲ ಒಂದು ಲಕ್ಷ ರೂಪಾಯಿ ಲಂಚ ತೆಗೆದುಕೊಂಡು ತಮ್ಮ ರಾಜಕೀಯ ಜೀವನವನ್ನೇ ಕೊನೆ ಮಾಡಿಕೊಂಡರು. ಕೆಂಡದಂಥ ಜಾರ್ಜ್ ಫರ್ನಾಂಡಿಸ್ ಅವರ ಗೆಳತಿ ಜಯಾ ಜೇಟ್ಲಿ ತಮ್ಮನ್ನು ತಾವು ಸಮರ್ಥನೆ ಮಾಡಿ- ಕೊಳ್ಳಲು ಕಡುಕಷ್ಟ ಪಟ್ಟರು. ಶಸ್ತ್ರಾಸ್ತ್ರ ಖರೀದಿಗೆ ಗುತ್ತಿಗೆಕೊಡುವ ವಿಚಾರ ಅದು. ಈ ಕಾರ್ಯಾಚರಣೆ ಮೂಲಕ ತರುಣ್, ಪತ್ರಿಕೋದ್ಯಮದಲ್ಲಿ ಹೊಸ ಅಧ್ಯಾಯವನ್ನೇ ಬರೆದರು. ನಂತರ, ಅದನ್ನೇ ಅನೇಕ ಮಂದಿ ಅನುಸರಿಸಿದರು ಕೂಡ. ಅವರು ನಡೆದ ದಾರಿಯೇ ಹಾಗೆ, ಎಲ್ಲರೂ ನಡೆದ ದಾರಿಯಲ್ಲಿ ಅವರು ನಡೆಯಲಿಲ್ಲ. ಬಿಜೆಪಿಯನ್ನು ಮತ್ತು ಹಿಂದುತ್ವವನ್ನು ಅವರು ನಿರಂತರವಾಗಿ ವಿರೋಧಿಸಿದರು. ಬಹುಶಃ ಅದೇ ಕಾರಣಕ್ಕಾಗಿ ಅವರಿಗೆ ಮುಸ್ಲಿಂ ರಾಷ್ಟ್ರಗಳಿಂದ ಹಣ ಬರುತ್ತದೆ ಎಂಬ ಆರೋಪವೂ ಕೇಳಿ ಬಂತು. ಅದು ನಿಜವೋ ಸುಳ್ಳೋ ಹೇಳುವುದು ಕಷ್ಟ. ಅವರ ವಿರುದ್ಧ ಇನ್ನು ಮುಂದೆ ಏನೇನು ಆರೋಪ ಕೇಳಿ ಬರುತ್ತವೆ ಎಂದೂ ಗೊತ್ತಿಲ್ಲ. ಆದರೆ, ಅವರ ಪತ್ರಿಕೆ ಜನಪ್ರಿಯವಾಗಿರಲಿಲ್ಲ. ಅದಕ್ಕೆ ಅದರ ಹೂರಣ ಕಾರಣವೇ? ಗೊತ್ತಿಲ್ಲ. ಜನರು ಓದದಂಥ ಒಂದು ಪತ್ರಿಕೆಯನ್ನು ಅವರು ಏಕೆ 'ಸಂಪಾದಿಸುತ್ತಿದ್ದರೋ ಏನೋ? ಅದೂ ಗೊತ್ತಿಲ್ಲ.

ಒಬ್ಬ ಧೀರ ಪತ್ರಕರ್ತ ಎಂದು ಹೆಸರು ಮಾಡಿದಂತೆಯೇ ಒಬ್ಬ ಶ್ರೇಷ್ಠ ಲೇಖಕ ಎಂದೂ ತರುಣ್ ಹೆಸರು ಮಾಡಿದವರು. ಅವರದು ಅಪ್ರತಿಮ ಎನ್ನುವಂಥ ಬರವಣಿಗೆ ಅವರು ಬರೆದ ಮೊದಲ ಕಾದಂಬರಿ The Alchemy of Desire ಅವರ ತಲೆಯಲ್ಲಿ Jów inw @48! At last... new and brilliantly original novel from India ಎಂದು ವಿ.ಎಸ್.ನೈಪಾಲ್ ಈ ಕಾದಂಬರಿಯನ್ನು ಶ್ಲಾಘಿಸಿದ್ದರು. ಅದು ಒಂದು ಶ್ಲಾಘನೆ ಮಾತ್ರ ಅಂಥ ಅನೇಕ ದೇಶ ವಿದೇಶಗಳ ಗಣ್ಯರ ಹೊಗಳಿಕೆಯ ಮಾತುಗಳು ಆ ಕಾದಂಬರಿಯ ಮೊದಲ ಮತ್ತು ಕೊನೆಯ ಪುಟಗಳಲ್ಲಿ ಇವೆ. ಏಷ್ಯಾದಲ್ಲಿ ಬದಲಾವಣೆ ತರುವ ನಾಯಕರಲ್ಲಿ ಮುಂಚೂಣಿಯಲ್ಲಿ ಇರುವವ' ಎಂದೂ ತರುಣ್ ತಮ್ಮನ್ನು ತಾವೇ ತಮ್ಮ ಕಾದಂಬರಿಯಲ್ಲಿ ಪರಿಚಯಿಸಿಕೊಂಡಿದ್ದರು! ಹಾಗೆಂದು ಒಂದು ಪತ್ರಿಕೆ ಅವರಿಗೆ ಕರೆದಿತ್ತಂತೆ.

ಅವರ ಕಾದಂಬರಿಯ ಆರಂಭದಲ್ಲಿಯೇ "The desire that does not see' ಎಂಬ ಒಂದು ವಾಕ್ಯ ಇದೆ. ತರುಣ್ ತಮ್ಮ ಒಳಗಿನ ಕಾಮನೆಗೆ ಕುರುಡರಾದರೇ? ಅವರು ನವೆಂಬರ್ 7ರಂದು ತಮ್ಮ ಚಿಕ್ಕ ಸಹೋದ್ಯೋಗಿ ಜತೆಗೆ ನಡೆದುಕೊಂಡ ರೀತಿಯನ್ನು ನೋಡಿದರೆ ಅವರು ಎಲ್ಲ ಅರ್ಥದಲ್ಲಿಯೂ ಕುರುಡರಾಗಿದ್ದರು ಎಂದು ಅನಿಸುತ್ತದೆ. ಆ

ಯುವತಿ ತನ್ನ ಸಂಸ್ಥೆಯ ವ್ಯವಸ್ಥಾಪಕ ಸಂಪಾದಕಿಗೆ ಬರೆದ ದೂರಿನ ಪ್ರತಿಯನ್ನು ನಾನು ನೋಡಿದ್ದೇನೆ. ಆ ವಿವರಗಳನ್ನು ಬರೆಯಬಾರದು ಎಂದು ಮಾಧ್ಯಮದಲ್ಲಿ ಇರುವ ನಾವೆಲ್ಲ ನಮಗೆ ನಾವೇ ನಿರ್ಬಂಧ ಹಾಕಿಕೊಂಡಿದ್ದೇವೆ. ಆದರೆ, ಒಂದು ಸಂಸ್ಥೆಯ ಮುಖ್ಯಸ್ಥರಾಗಿದ್ದವರು, ತನ್ನ ಸಹೋದ್ಯೋಗಿ ಜತೆಗೆ, ಅದೂ ಸಾರ್ವಜನಿಕ ಸ್ಥಳದಲ್ಲಿ ಹಾಗೆಲ್ಲ ನಡೆದುಕೊಳ್ಳಬಹುದೇ ಎಂದು ಸೋಜಿಗವಾಗುತ್ತದೆ, ವ್ಯಥೆಯಾಗುತ್ತದೆ; ದಿಗ್ಭ್ರಮೆಯಾಗುತ್ತದೆ.

ನಾವು ಬರೆದು ಬದುಕುವವರು. ಬರವಣಿಗೆಯೇ ನಮ್ಮ ಅನ್ನ, ಬರೆದು ಬದುಕುವವರನ್ನು ಸಮಾಜ ಎತ್ತರದ ಜಾಗದಲ್ಲಿ ಇಟ್ಟು ನೋಡುತ್ತ ಇರುತ್ತದೆ. ಅವರು ಸಮಾಜಕ್ಕೆ ಮಾದರಿಗಳನ್ನು ಒದಗಿಸುತ್ತಾರೆ ಎಂದು ನಂಬಿಕೊಂಡಿರುತ್ತದೆ. ಎಲ್ಲರಿಗೂ ಬದುಕಲು ಒಂದಿಷ್ಟು ಭರವಸೆ ಬೇಕು. ಆ ಭರವಸೆಯ ಬೆಳಕು ನಮ್ಮ ಬರವಣಿಗೆಯಲ್ಲಿ ಇರಲಿ ಎಂದು ಜನರು ಬಯಸುತ್ತ ಇರುತ್ತಾರೆ. ಆದರೆ, ಲೇಖಕರಾದವರು ಬರವಣಿಗೆ ಮತ್ತು ಬದುಕಿನ ನಡುವಿನ ದ್ವಂದ್ವವನ್ನು ತೀರಾ ಜಾಣತನದಿಂದ ತಪ್ಪಿಸಿಕೊಂಡು ಬಂದಿದ್ದಾರೆ. ನಾವು ಏನಾದರೂ ಬರೆಯಬಹುದು, ಆದರೆ ಹೇಗಾದರೂ ಬದುಕಬಹುದು ಎಂದೇ ಅವರು ಅಂದುಕೊಂಡಿದ್ದಾರೆ. ಅದಕ್ಕೆ ಏನೇನೋ ಹುಸಿ ಆವರಣಗಳನ್ನು ಸೃಷ್ಟಿಸಿ ಕೊಂಡಿದ್ದಾರೆ.

ತರುಣ್ ಕೂಡ ಏನೆಲ್ಲ ಬರೆದಿದ್ದರು! ಹೆಣ್ಣು ಮಕ್ಕಳ ಪರವಾಗಿ ಅವರು ಬರೆಯದ, ಬರೆಸದ ಸಂಗತಿಗಳೇ ಇರಲಿಲ್ಲ. ಅವರ ಹಕ್ಕುಗಳ ಬಗ್ಗೆ ಅವರು ಬರೆದಿದ್ದರು. ಅಡಿಯಾಳಾಗಿ ಸಿಲುಕಿ ಅತ್ಯಾಚಾರಕ್ಕೆ ಗುರಿಯಾದವರ ಬಗ್ಗೆ ಬರೆದಿದ್ದರು. ಕೆಲಸದ ಸ್ಥಳದಲ್ಲಿ ಆಗುವ ಲೈಂಗಿಕ ಕಿರುಕುಳದ ಬಗ್ಗೆ ಬರೆದಿದ್ದರು. ಲೈಂಗಿಕ ಕಿರುಕುಳಕ್ಕೆ ಒಳಗಾದವರನ್ನೇ ದೂಷಣೆ ಮಾಡುವುದರ ವಿರುದ್ಧ ಬರೆದಿದ್ದರು. ಇಂಥ ದೌರ್ಜನ್ಯಕ್ಕೆ ಒಳಗಾದವರು ಧೈರ್ಯದಿಂದ ಎದ್ದು ನಿಂತು ಪ್ರತಿಭಟಿಸುವಾಗ ಅವರನ್ನು ಭಾವನಾತ್ಮಕವಾಗಿ ಬೆದರಿಸುವುದನ್ನು, ಅವರ ಚಾರಿತ್ರ್ಯ ಹನನ ಮಾಡುವುದನ್ನು ಖಂಡಿಸಿ ಬರೆದಿದ್ದರು. ಆದರೆ, ಎಂಥ ವಿಪರ್ಯಾಸ? ಈಗ ತರುಣ್ ವಿರುದ್ಧವೇ ಈ ಎಲ್ಲ ಆರೋಪಗಳು ಇವೆ. ಆ ಹುಡುಗಿ ದಿಟ್ಟವಾಗಿ ಎಲ್ಲವನ್ನೂ ಎದುರಿಸುತ್ತಿದ್ದಾಳೆ. ಆಕೆಯ ಪರವಾಗಿ ಇಡೀ ಮಾಧ್ಯಮ ಜಗತ್ತು ನಿಂತುಕೊಂಡಿದೆ. ತರುಣ್ ಕಾಲ ಕೆಳಗಿನ ನೆಲ ಕುಸಿಯುತ್ತಿದೆ. ಇನ್ನು ಏನಿದ್ದರೂ ತರುಣ್ ತೇಜಪಾಲ್ ಮೊದಲಿನ 'ತೇಜಪಾಲ್' ಆಗಿರಲು ಸಾಧ್ಯವಿಲ್ಲ. ಅವರು ಆರಂಭದಲ್ಲಿ ಕೆಲಸ ಮಾಡಿದ 'ಔಟ್‌ಲುಕ್' ಪತ್ರಿಕೆಯ ಪ್ರಧಾನ ಸಂಪಾದಕರಾಗಿದ್ದ ವಿನೋದ್ ಮೆಸ್ತಾ ತಮ್ಮ ಆತ್ಮ ಚರಿತ್ರೆ 'ಲಖನೌ ಬಾಯ್'ನಲ್ಲಿ, ಕಚೇರಿಯ ಸಹೋದ್ಯೋಗಿಗಳ ಜತೆಗೆ ಸರಸ ವಾಡಲು ಹೋಗಿ ನಾಶವಾದವರ ಬಗ್ಗೆ ಬರೆದಿದ್ದರು; ಸರಸವಾಡಿದರೆ ನಾಶವಾಗುತ್ತೀರಿ ಎಂದು ಎಚ್ಚರಿಸಿದ್ದರು. ಹೊರಗಡೆ ಏನಾದರೂ ಹಾಳಾಗಿ ಹೋಗಿ ಎಂದು ಒಂದಿಷ್ಟು ವಿನಾಯಿತಿಯನ್ನೂ ಕೊಟ್ಟಿದ್ದರು! ಮೊದಲು ಇನ್ಫೋಸಿಸ್‌ನಲ್ಲಿ ನಂತರ ಐ ಗೇಟ್‌ನಲ್ಲಿ ಫಣೀಶ್ ಮೂರ್ತಿ ಇದೇ ರೀತಿ ಸರಸವಾಡಲು ಹೋಗಿ ಎರಡು ಸಾರಿ ಸಿಕ್ಕಿ ಬಿದಿದ್ದರು. ಅವರು ಇನ್ನೂ ನಾಶವಾಗಿಲ್ಲ ಎಂದರೆ ನಂಬುವುದು ಕಷ್ಟ. ತೇಜಪಾಲ್‌ರೂ ಹೀಗೆಯೇ ಸರಸವಾಡಿದ ವದಂತಿಗಳು ಈಗ ಸುಳಿದಾಡುತ್ತಿವೆ. ಆದರೆ, ಅವರು ಗೋವಾದ ಹೋಟೆಲ್‌ನಲ್ಲಿ ಮಾಡಿದ್ದು

ಅತ್ಯಾಚಾರ. ಅದು ಅಕ್ಷಮ್ಯ. ಆ ಹುಡುಗಿ ಧೈರ್ಯಸ್ಥೆ, ಮಾನವಂತೆ, 'ನಿನ್ನ ಪ್ಯಾಂಟು ಮುಚ್ಚಿಕೊಂಡು ಇರು' ಎಂದು ತನ್ನ ತಂದೆಗೆ, ತನ್ನ ಗೆಳತಿಯ ದಾರುಣ ಅನುಭವ ಕೇಳಿ ಎಚ್ಚರಿಸಿದ ತೇಜಪಾಲ್ ಮಗಳು ಕೂಡ ಧೈರ್ಯಸ್ಥೆ, ಮಾನವಂತೆ.

ಆದರೆ, ಹೀಗೆ ದೌರ್ಜನ್ಯಕ್ಕೆ ಈಡಾದ ಹುಡುಗಿಯರ ಮುಂದಿನದು ಕಷ್ಟದ ದಾರಿ. ತರುಣ್, ನಾಳೆ ಕಟಕಟೆಯಲ್ಲಿ ನಿಲ್ಲಬೇಕಾಗುತ್ತದೆ. ಅವರಿಗೆ ಇರುವ ಜನಪ್ರಿಯತೆ, ರಾಜಕೀಯ ಪ್ರಭಾವ, ಹಣದ ಬೆಂಬಲ ಯಾವುದೂ ಅವರ ಎದುರು ಸಾಕ್ಷ್ಯ ಹೇಳಲು ಬರುವ ಹುಡುಗಿಗೆ ಇರುವುದಿಲ್ಲ. ಕನಿಷ್ಠ ಉಪಜೀವನಕ್ಕೆ ಈಗ ಒಂದು ನೌಕರಿಯೂ ಆಕೆಗೆ ಇಲ್ಲ. ಅತ್ಯಾಚಾರ ವಿರೋಧಿ ಕಾನೂನಿನಲ್ಲಿ ಎಷ್ಟೇ ಬದಲಾವಣೆ, ಸುಧಾರಣೆ ಆಗಿದ್ದರೂ, ದೂರು ಕೊಟ್ಟ ಯುವತಿ ಮತ್ತೆ ಮತ್ತೆ ತನಗೆ ಏನಾಯಿತು ಎಂಬುದನ್ನು ನ್ಯಾಯಾಧೀಶರ ಮುಂದೆ, ವಕೀಲರ ಮುಂದೆ ಹೇಳಬೇಕು. ಮತ್ತೆ ಮತ್ತೆ ಆ ಅವಮಾನವನ್ನು, ತನ್ನ ದೇಹಕ್ಕೆ ಆದ ಗಾಯವನ್ನು ವಿವರಿಸಬೇಕು. ಆ ಮೂಲಕ ಮತ್ತೆ ಮತ್ತೆ ಆ ಯಾತನೆಯನ್ನು ಆಕೆ ಅನುಭವಿಸಬೇಕು. ಇಂಥ ಅವಮಾನ ಅನುಭವಿಸಿಯೂ ತಾನು ಸುಳ್ಳು ಹೇಳುತ್ತಿಲ್ಲ ಎಂದು ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಡಬೇಕು. ಏಕೆಂದರೆ ಆಕೆಯನ್ನು ಪ್ರಶ್ನಿಸಲು ಎಂಥ ದುರಂಧರ ವಕೀಲ ಎದುರು ಬಂದು ನಿಂತಿರುತ್ತಾನೆ ಯಾರಿಗೆ ಗೊತ್ತು? ಅವನಂಥ ಬಲಿಷ್ಠ ವಕೀಲನನ್ನೇ ಆಕೆ ಎಲ್ಲಿ ತಂದು ನಿಲ್ಲಿಸಲು ಸಾಧ್ಯ? ಇನ್ನೂ ದುರಂತ ಎಂದರೆ ತಾನು ತುಂಬ ಗೌರವದಿಂದ ಮತ್ತು ಆದರದಿಂದ ಕಂಡ, ತನ್ನ ಕಷ್ಟದಲ್ಲಿ ತನ್ನ ಸಹಾಯಕ್ಕೆ ಬಂದ ವ್ಯಕ್ತಿಯೇ ತನ್ನ ಜತೆ ಹೀಗೆ ನಡೆದುಕೊಂಡ ಎಂದು ಆಕೆ ಹೇಳಬೇಕಾಗಿ ಬರುವುದು.

ಪುರುಷ ಏಕೆ ಹೀಗೆ ನಡೆದುಕೊಳ್ಳುತ್ತಾನೆ? ಆತನ ಒಳಗೆ ಯಾವಾಗಲೂ ಒಬ್ಬ ಕೀಚಕ ಜಾಗೃತನಾಗಿರುತ್ತಾನೆಯೇ? ಸದಾ ಬೇಟೆಯಾಡಲು ಹೊಂಚು ಹಾಕುತ್ತ ಇರುತ್ತಾನೆಯೇ? ಅದು ಅವನಿಗೆ ತನ್ನ ಪುರುಷಾಕಾರದ ಬಗೆಗಿನ ಅಹಂಕಾರವೇ? ತಾನು ಆಕೆಗಿಂತ ಬಲಿಷ್ಠ ಎಂಬ ಗರ್ವವೇ? ಇದು ಎಲ್ಲ ಅಸಹಾಯಕರ ಕಥೆಯೇ? ತಂದೆಯ ವಯಸ್ಸು, ತಾತನ ವಯಸ್ಸು ಎಂಬುದೆಲ್ಲ ಹುಸಿಯೇ? ಸುಪ್ರೀಂ ಕೋರ್ಟಿನ ನಿವೃತ್ತ ನ್ಯಾಯಮೂರ್ತಿಯೂ ಇದಕ್ಕೆ ಹೊರತಲ್ಲ ಎಂದರೆ ಏನು ಅರ್ಥ? ಪುರುಷರು ನಾಚಿಗೆಯಿಲ್ಲದವರು ಎಂದು ಈ ಇಬ್ಬರು ಹುಡುಗಿಯರು ಹೇಳಿಬಿಟ್ಟರಲ್ಲ? ನಾವು ಮುಖ ಮುಚ್ಚಿಕೊಳ್ಳಲು ಇನ್ನೂ ಏನೇನು ಆಗಬೇಕು?

1.12.2013

# ಐಪಿಎಲ್ ಎಂಬ

# ನಮ್ಮೊಳಗಿನ ಒಬ್ಬ ವೇಶ್ಯ...!

ಅದು 1982ನೇ ಇಸವಿ ಮಾರ್ಚ್, ಕರ್ನಾಟಕ ಮತ್ತು ಮುಂಬೈ ನಡುವೆ ಬೆಂಗಳೂರಿನಲ್ಲಿ ರಣಜಿ ಉಪಾಂತ್ಯ ಪಂದ್ಯದ ಕೊನೆಯ ದಿನ. ಮುಂಬೈ ತಂಡ ಸೋಲಿನ ಭೀತಿಯಲ್ಲಿ ಇತ್ತು. ಎಡಗೈ ಸ್ಪಿನ್ನರ್ ರಘುರಾಂ ಭಟ್ ದಾಳಿಗೆ ಅದು ತತ್ತರಿಸಿ ಹೋಗಿತ್ತು. ಮೊದಲ ಇನ್ನಿಂಗ್ಸ್ ಮುನ್ನಡೆ ಗಳಿಸಿದ್ದ ಕರ್ನಾಟಕ ಗೆಲುವಿನ ಅಂಚಿನಲ್ಲಿ ಇತ್ತು. ಮುಂಬೈ ತಂಡದ ನಾಯಕ ಸುನೀಲ್ ಗಾವಸ್ಕರ್ ಅಂಗಳಕ್ಕೆ ಇಳಿದು ಬಂದರು. ಎಡಗೈ ಸ್ಪಿನ್ನರ್ ದಾಳಿ ಮಾಡುವಾಗ ಎಡಗೈನಿಂದಲೂ ಬಲಗೈ ಬೌಲರ್ ದಾಳಿ ಮಾಡುವಾಗ ಬಲಗೈನಿಂದಲೂ ಗಾವಸ್ಕರ್ ಚೆಂಡನ್ನು ಎದುರಿಸತೊಡಗಿದರು. ಪ್ರೇಕ್ಷಕರಲ್ಲಿ ಒಂದು ಕ್ಷಣ ಸಂಚಲನ. ಗಾವಸ್ಕರ್ ಏನು ಮಾಡಲು ಹೊರಟಿದ್ದಾರೆ, ಹೀಗೆ ಬ್ಯಾಟ್ ಮಾಡುವ ಮೂಲಕ ಏನು ಸಾಧಿಸಲು ಹೊರಟಿದ್ದಾರೆ ಎಂದು ಕ್ರೀಡಾಂಗಣದಲ್ಲಿ ಇದ್ದವರಿಗೆಲ್ಲ ಗಲಿಬಿಲಿ. ಹೀಗೆಯೇ ಎಷ್ಟು ಹೊತ್ತು ಆಡಿಯಾರು ಎಂದು ಶಂಕೆ. ಆದರೆ, ದಿನದ ಕೊನೆಯ ವರೆಗೂ ಅವರು ಔಟಾಗದೆ ಕ್ರೀಸ್‌ನಲ್ಲಿ ನಿಂತರು. ಮುಂಬೈ ತಂಡವನ್ನು ಪೂರ್ಣ ಸೋಲಿನ ಅಂಚಿನಿಂದ ಪಾರು ಮಾಡಿದರು. ಇದಾಗಿ 32 ವರ್ಷಗಳು ಕಳೆದು ಹೋಗಿವೆ. ಒಂದು

ತಲೆಮಾರೇ ಮುಗಿದೂ ಹೋಗಿದೆ. ಮತ್ತೆ ಯಾರೂ ಯಾರ ವಿರುದ್ಧವೂ ಇಂಥ ಸಾಹಸ ಮಾಡಲು ಹೋಗಿಲ್ಲ. ಗಾವಸ್ಕರ್ ಮೂಲತಃ ಬಲಗೈ ಬ್ಯಾಟ್ಸ್‌ಮನ್, ಎಡಗೈನಿಂದ ಬ್ಯಾಟು ಮಾಡುವುದು ಅಸಾಧ್ಯದ ಸಂಗತಿ, ಬ್ಯಾಟಿಂಗ್ ಎಂದರೆ ಎತ್ತೆಂದರತ್ತ ಬ್ಯಾಟು ಬೀಸಿ ಒಂದಿಷ್ಟು ರನ್ನು ಗಳಿಸಿ ಪೆವಿಲಿಯನ್‌ಗೆ ಹೋಗುವುದು ಅಲ್ಲ, ತನ್ನನ್ನು ಔಟ್ ಮಾಡಬೇಕು ಎಂದೇ ಬೀಸಿ ಬರುವ ಚೆಂಡನ್ನು ಕ್ರೀಸ್‌ನಲ್ಲಿ ನಿಂತು ಎದುರಿಸಿ ನಿಲ್ಲುವುದು. ಹಾಗೆ ನಿಲಲ್ಲು ಕೌಶಲ ಬೇಕು, ತಂತ್ರಗಾರಿಕೆ ಬೇಕು ಎಂದು ತೋರಿಸಿಕೊಟ್ಟವರು ಗಾವಸ್ಕರ್. ಭಾರತ ಕಂಡ ಅತ್ಯಂತ ಶ್ರೇಷ್ಠ ಕುಶಲ ದಾಂಡಿಗ ಅವರೇ ಇರಬೇಕು. ಅವರನ್ನು ಬಿಟ್ಟರೆ ನಮ್ಮವರೇ ಆದ ರಾಹುಲ್ ದ್ರಾವಿಡ್ ಅಷ್ಟೇ ಶ್ರೇಷ್ಠ ಕ್ರಿಕೆಟ್ ತಂತ್ರಜ್ಞ ಅಂತಲೇ ಅವರಿಗೆ 'ಗೋಡೆ' ಎಂಬ ಹೆಸರೂ ಬಂತು. ದ್ರಾವಿಡ್ ತಮ್ಮ ವಿಕೆಟ್ ಅನ್ನು ಹೇಗೆ ಸಂರಕ್ಷಿಸಿಕೊಳ್ಳುತ್ತಿದ್ದರು ಎಂದರೆ ಅವರನ್ನು ಔಟ್ ಮಾಡುವುದು ಸಾಧ್ಯವೇ ಆಗುತ್ತಿರಲಿಲ್ಲ, ಎಂಥ ಚೆಂಡನ್ನಾದರೂ ಅವರು ಎದುರಿಸುತ್ತಿದ್ದರು.

ಮೊನ್ನೆ ಇಂಗ್ಲೆಂಡಿನಲ್ಲಿ ಭಾರತ ತಂಡದ ಅತಿರಥ ಮಹಾರಥರೆಲ್ಲ ಇಂಗ್ಲೆಂಡ್‌ನ ದಾಳಿಯ ಎದುರು ತರಗೆಲೆಗಳಂತೆ ಉದುರಿ ಬಿದ್ದಾಗ ನನಗೆ ಗಾವಸ್ಕರ್ ಆಟದ ನೆನಪಾಯಿತು. ಅವರ ಆಗಿನ ಆಟವನ್ನು ಕರ್ನಾಟಕದ ಕ್ರೀಡಾ ಬರಹಗಾರರು 'ನಾಚಿಕೆಗೇಡು' ಎಂದೆಲ್ಲ ಟೀಕಿಸಿ ಬರೆದಿದ್ದರು. ಈಗ ಅವರ ಅಭಿಪ್ರಾಯವೂ ಬದಲಾದಂತೆ ಕಾಣುತ್ತದೆ. ತನ್ನ ತಂಡದ ಮಾನ ರಕ್ಷಣೆಗಾಗಿ ಗಾವಸ್ಕರ್ ಏನು ಮಾಡಬೇಕಿತ್ತೋ ಅದನ್ನೇ ಮಾಡಿದರು. ತನ್ನ ತಂಡದ ಆಟಗಾರರು ಪೆವಿಲಿಯನ್‌ಗೆ ಪೆರೇಡ್ ಮಾಡುತ್ತಿದ್ದಾಗ ಕರ್ನಾಟಕದ ಬೌಲಿಂಗ್‌ನಲ್ಲಿ ಹೆದರುವಂಥದು ಏನೂ ಇಲ್ಲ ಎಂದು ಗಾವಸ್ಕರ್ ಎರಡೂ ಕೈಗಳಿಂದ ಆಡಿ ತೋರಿಸಿಕೊಟ್ಟರು! ಗಾವಸ್ಕರ್ ಮತ್ತು ನಮ್ಮವರೇ ಆದ ಗುಂಡಪ್ಪ ವಿಶ್ವನಾಥ್ ಇಬ್ಬರೂ ವಾರಿಗೆಯವರು; ಬೀಗರು. ವಿಶ್ವನಾಥ್ ತಂಡಕ್ಕಾಗಿ ಆಡುತ್ತಿದ್ದರು. ಎಲ್ಲ ಬಾಲ್‌ಗಳು ಹೊಡೆಯುವುದಕ್ಕೆ ಯೋಗ್ಯವಾದುವು ಎಂದು ಅಂದುಕೊಂಡವರು ವಿಶ್ವನಾಥ್, ಹೇಗೆ ಹೊಡೆಯಬೇಕು ಎಂದು ಅವರಿಗೆ ಗೊತ್ತಿತ್ತು. ಗಾವಸ್ಕರ್ ತಮಗಾಗಿ ಮತ್ತು ದಾಖಲೆಗಾಗಿ ಆಡುತ್ತಿದ್ದರು. ಅವರು 60 ಓವರ್‌ಗಳ ಕಾಲ ಕ್ರೀಸ್‌ನಲ್ಲಿ ನಿಂತು ಕೇವಲ 36 ರನ್ ಹೊಡೆದು ಔಟಾಗದೆ ಬ್ಯಾಟ್ ಹಿಡಿದುಕೊಂಡು ಪೆವಿಲಿಯನ್‌ಗೆ ಹೋಗಲೂ ನಾಚುತ್ತಿರಲಿಲ್ಲ. ಕ್ರಿಕೆಟ್ ಎಂದರೆ ಧಾರಣ ಶಕ್ತಿ. ಇಡೀ ದಿನ ನಡು ಬಾಗಿಸಿ ಬ್ಯಾಟು ಹಿಡಿದು ನಿಂತು ರನ್‌ಗಾಗಿ ಓಡಿ, ಮತ್ತೆ ಬಂದು ಬೌಲ್ ಮಾಡಿ, ಕ್ಷೇತ್ರ ರಕ್ಷಣೆ ಮಾಡಿ, ವಿಕೆಟ್ ರಕ್ಷಣೆ ಮಾಡಿ, ಹಣ ಕೊಟ್ಟು ಬಂದು ಕುಳಿತ ಪ್ರೇಕ್ಷಕರನ್ನು ರಂಜಿಸುವುದು ಎಂದರೆ ಸಣ್ಣ ಸಂಗತಿಯಲ್ಲ. ಹಣ ಕೊಟ್ಟು ಬರುವ ಪ್ರೇಕ್ಷಕ ಇಡೀದಿನ ರಂಜನೆ ಬೇಕು ಎನ್ನುವವ.

ಈಗ ಭಾರತದ ಪ್ರೇಕ್ಷಕರು ನಿರಾಶೆಯ ಮಡುವಿನಲ್ಲಿ ಮುಳುಗಿದ್ದಾರೆ. ಎಲ್ಲರೂ ಧೋನಿ ತಲೆದಂಡಕ್ಕೆ ಕಾಯುತ್ತಿದ್ದಾರೆ. ಬರೀ ಧೋನಿಯವರನ್ನು ದೂರಿದರೆ ಸಾಕೇ? ಧೋನಿ ತಲೆದಂಡ ಕೊಟ್ಟರೂ ಭಾರತದ ಕ್ರಿಕೆಟ್ ಬದಲಾಗುತ್ತದೆಯೇ? ಕಷ್ಟ ಎನಿಸುತ್ತದೆ.

ಕಳೆದ ಎಂಟು ಹತ್ತು ವರ್ಷಗಳಲ್ಲಿ ಒಟ್ಟು ಕ್ರಿಕೆಟ್ ಕ್ರೀಡೆಯೇ ಒಂದು ವ್ಯಾಪಾರ ಎನ್ನುವಂತೆ ಆಗಿದೆ. ಮೂರು ಗಂಟೆಯ ಒಂದು ಸಿನಿಮಾದಂತೆ ಮೂರು ಗಂಟೆಯಲ್ಲಿ ಕ್ರಿಕೆಟ್ ಆಟವೂ ಮುಗಿಯಬೇಕು ಎಂದು ಪ್ರೇಕ್ಷಕರು ಬಯಸುತ್ತಿದ್ದಾರೆ. ಅಥವಾ ಆ ಸ್ಥಿತಿಯನ್ನು ಒಪ್ಪಿಕೊಳ್ಳುವಂತೆ ವ್ಯವಸ್ಥೆ ಬದಲಾಗಿ ಬಿಟ್ಟಿದೆ. ಅನೇಕ ಸಾರಿ ಎಲ್ಲವೂ ಸರಳವಾಗಿ ಇರಬೇಕು ಎಂದು ಅನಿಸುತ್ತದೆ. ಅನಂತ ಸೆಟಲ್‌ವಾಡ್, ಸುರೇಶ್ ಸರಯ್ಯ ಅವರ ಕಣ್ಣಿಗೆ ಕಟ್ಟುವಂಥ ವೀಕ್ಷಕ ವಿವರಣೆ, ವಿಜಯ್ ಮರ್ಚಂಟ್ ಅವರ ಪರಿಣತ ವಿವರಣೆಗಳನ್ನೆಲ್ಲ ರೇಡಿಯೊಗೆ ಕಿವಿಗೊಟ್ಟು ಕೇಳುವಾಗ ಇಡೀ ಕ್ರೀಡಾಂಗಣವೇ ಕಣ್ಣ ಮುಂದೆ ಬಂದಂತೆ ಭಾಸವಾಗುತ್ತಿತ್ತು. ವಿಶ್ವನಾಥ್ ಅವರು 13ನೇ ರನ್ ಹೊಡೆದು ನಿಂತು ಬಿಟ್ಟರೆ ಅಪಶಕುನದ ಭಯದಿಂದ ಎದೆ ಹೊಡೆದುಕೊಳ್ಳುತ್ತಿತ್ತು. ಅವರು ಇನ್ನೊಂದು ರನ್ ಹೊಡೆದರೆ ಇನ್ನು ಸೆಂಚುರಿ ಆದಂತೆಯೇ ಎಂದು ಮನಸ್ಸು ಸಂಭ್ರಮಿಸುತ್ತಿತ್ತು.

ಕ್ರಿಕೆಟ್ ಎನ್ನುವುದು ಆಗ ಸಭ್ಯರ ಆಟ ಎನ್ನುವಂತೆ ಆಗಿತ್ತು. ಆಸ್ಟ್ರೇಲಿಯಾದಲ್ಲಿ ಕೆರಿ ಪ್ಯಾಕರ್ ಸರಣಿ ಆರಂಭ ಆಗುವ ವರೆಗೂ ಕ್ರಿಕೆಟ್ ಒಂದು ವ್ಯಾಪಾರ ಎಂದು ಯಾರಿಗೂ

ಅನಿಸಿರಲಿಲ್ಲ. ಪ್ಯಾಕರ್ ಎಂಥ ದುಷ್ಟ ಎಂದರೆ, `ಎಲ್ಲರ ಒಳಗೂ ಒಬ್ಬ ವೇಶ್ಯ ಇದ್ದಾಳೆ; ನಿಮ್ಮ ಬೆಲೆ ಎಷ್ಟು ಹೇಳಿ' ಎಂದು ಕೇಳಿದವನು ಆತ. ಪ್ಯಾಕರ್ ಸರಣಿಯಲ್ಲಿ ಭಾರತೀಯ ಆಟಗಾರರು ಭಾಗವಹಿಸಲಿಲ್ಲ. ಆದರೆ, ಭಾರತದಲ್ಲಿಯೂ ಒಬ್ಬ ಪ್ಯಾಕರ್ ಹುಟ್ಟಿಕೊಂಡ. ಅವರು ಲಲಿತ್ ಮೋದಿ. ಐಪಿಎಲ್ ಸರಣಿ ಒಂದು ಅದ್ಭುತ ಪರಿಕಲ್ಪನೆ ಎಂಬುದರಲ್ಲಿ ಅನುಮಾನ ಇಲ್ಲ. ಇದರಲ್ಲಿ ಆಟಗಾರರು ದುಡ್ಡು ಮಾಡಬಹುದು, ಆಡಳಿತ ವರ್ಗ ಹಣ ಮಾಡಬಹುದು, ಬಿಸಿಸಿಐ ಹಣ ಮಾಡಬಹುದು, ಪ್ರಾಯೋಜಕರು, ಮಾಧ್ಯಮದವರೂ ಹಣ ಮಾಡಬಹುದು. ಮತ್ತು ಗುಟ್ಟಾಗಿ ಬುಕ್ಕಿಗಳೂ ಹಣ ಮಾಡಬಹುದು! ಪ್ರೇಕ್ಷಕರು ಹುಚ್ಚೆದ್ದು ಕುಣಿಯಬಹುದು. ಪ್ರೇಕ್ಷಕರನ್ನು ರಂಜಿಸಲು ಅಲ್ಲಿ ಏನಿರಲಿಲ್ಲ? ಅಲ್ಲಿ ಕ್ಷಣಕ್ಕೆ ಒಮ್ಮೆ ಗಾಳಿಯಲ್ಲಿ ಮುತ್ತು ತೇಲಿ ಬಿಡುವ ನಟ ನಟಿಯರು ಇದ್ದರು. ಹೊರಗೆ ಎಲ್ಲಿಯೂ ಕಣ್ಣಿಗೆ ಬೀಳದ ಕೋಟ್ಯಧೀಶರು ಇದ್ದರು. ಕ್ರೀಡಾಂಗಣದ ಅಂಚಿನಲ್ಲಿ ತುಂಡು ಬಟ್ಟೆ ತೊಟ್ಟು ಕುಣಿಯುವ ಚೆಲುವೆಯರು ಇದ್ದರು. ಆಗೀಗ ಕೇಳಿ ಬರುವ ಸಂಗೀತ ಇತ್ತು. ವಾದ್ಯಗೋಷ್ಠಿ ಇತ್ತು. ಆಟಗಾರರಿಗೂ ಅಷ್ಟೇ. ಬರೀ ಹಣ ಮಾತ್ರ ಇತ್ತೇ? ಅದ್ಭುತವಾಗಿ ಆಡಿದರೆ ಓಡಿ ಬಂದು ತಬ್ಬಿಕೊಳ್ಳುವ ನಟಿಯರು ಇದ್ದರು, ಉದ್ಯಮಗಳ ಒಡತಿಯರು ಇದ್ದರು! ರಾತ್ರಿ ಪಾರ್ಟಿಗಳು, ರಾಸಲೀಲೆಗಳು ಇದ್ದುವು. ಕ್ರಿಸ್ ಗೇಲ್ ವೆಸ್ಟ್ ಇಂಡೀಸ್ ತಂಡಕ್ಕೆ ಆಡುವುದನ್ನು ಬಿಟ್ಟು ಐಪಿಎಲ್‌ನಲ್ಲಿ ಏಕೆ ಆಡಿದ ಎಂಬುದಕ್ಕೆ ಇನ್ನೆಷ್ಟು ಕಾರಣ ಬೇಕು?

ಇನ್ನೇನು ಬೇಕು? ಒಂದು ಟೆಸ್ಟ್‌ಗೆ ಆಡಿದರೆ ಗರಿಷ್ಠ ಒಂದು ಕೋಟಿ ರೂಪಾಯಿ 'ವೇತನ' ಗಳಿಸುತ್ತಿದ್ದ ಆಟಗಾರ ಹರಾಜಿಗೆ ಸಿದ್ಧನಾದ. ಕೋಟಿಗಟ್ಟಲೆ ಹಣಕ್ಕೆ ಮಾರಾಟವಾದ. ಭಾರತಕ್ಕೆ ಆಡುವುದು ಬೇರೆ, ಸಾಹುಕಾರರಿಗೆ ಆಡುವುದು ಬೇರೆ. ಸಾಹುಕಾರ ತಾನು ಖರೀದಿ ಮಾಡಿದ ಹಣವನ್ನು ಮತ್ತೆ ಗಳಿಸಬೇಕು. ಆಟಗಾರ ಒತ್ತಡಕ್ಕೆ ಸಿಲುಕಿದ. ನಾನೂ ಬೆಂಗಳೂರಿನಲ್ಲಿ ಕೆಲವು ಐಪಿಎಲ್ ಪಂದ್ಯಗಳನ್ನು ನೋಡಲು ಹೋಗಿದ್ದೆ. ಕೈಯಲ್ಲಿ ಸಿಕ್ಸ ಮತ್ತು ಬೌಂಡರಿ ಕಾರ್ಡ್‌ಗಳನ್ನು ಹಿಡಿದು ಅರಚುವ ಯುವಕ ಯುವತಿಯರ ಸುಮ್ಮುಖದಲ್ಲಿ ನಡುಬಗ್ಗಿಸಿ ನಿಲ್ಲುವ ಆಟಗಾರ ಎದುರಿಸುವ ಒತ್ತಡ ಎಂಥದು ಎಂದು ಯೋಚಿಸಿ ದಿಗ್ಭ್ರಮೆಗೊಂಡೆ. ಐಪಿಎಲ್ ಯಾವತ್ತೂ ಬ್ಯಾಟು ಮತ್ತು ಚೆಂಡಿನ ಆಟ ಎಂದು ನನಗೆ ಅನಿಸಿಲ್ಲ. ಅದು ಮುಖ್ಯವಾಗಿ ಬ್ಯಾಟಿನ ಆಟ ಎಂದೇ ಅನಿಸಿದೆ. ಬ್ಯಾಟ್ಸ್‌ಮನ್‌ಗಳು ಇಪ್ಪತ್ತು ಓವರ್‌ಗಳಲ್ಲಿ ಹೆಚ್ಚು ಹೆಚ್ಚು ರನ್ ಗಳಿಸಬೇಕು. ನೂರು ಇನ್ನೂರು ಗಳಿಸುವುದಕ್ಕಿಂತ ಮುನ್ನೂರು ಗಳಿಸಿಬಿಟ್ಟರೆ ಇನ್ನೂ ಒಳ್ಳೆಯದು. ಇಲ್ಲಿ ತಾಳ್ಮೆ ಇಲ್ಲ, ತಂತ್ರಗಾರಿಕೆ ಇಲ್ಲ. ತೋಳಿನ ಶಕ್ತಿ ಮಾತ್ರ ಸಾಕು. ಸುಮ್ಮನೆ ಬ್ಯಾಟು ಬೀಸುತ್ತ ಇರುವುದು. ಅದೃಷ್ಟ ಇದ್ದರೆ ಅದು ಬೌಂಡರಿ ಗೆರೆಯನ್ನು ದಾಟುತ್ತದೆ. ಹೀಗೆ ಚೆಂಡನ್ನು ಬೌಂಡರಿ ಗೆರೆಗೆ ಅಟ್ಟಿ ಅಟ್ಟಿ ಯುವತಿಯರ ಎದೆ ಝಲ್ ಎನ್ನುವಂತೆ ಮಾಡಿದ್ದ ಕ್ರಿಸ್ ಗೇಲ್ ನಾಶವಾಗಿ ಹೋದ. ಈ ಸಾರಿ 12 ಕೋಟಿಗೆ ಹರಾಜಾಗಿದ್ದ, ಒಂದೇ ಓವರ್‌ನಲ್ಲಿ ಆರು ಸಿಕ್ಸರ್ ಹೊಡೆದು ವಿಶ್ವ ದಾಖಲೆ ನಿರ್ಮಿಸಿದ್ದ, ಯುವರಾಜ್ ಈಗ ಭಾರತ ತಂಡದಲ್ಲಿ ಸ್ಥಾನ ಗಿಟ್ಟಿಸಿಕೊಳ್ಳಲು ಹೆಣಗುತ್ತಿದ್ದಾರೆ. ಐಪಿಎಲ್ ಎಂಬುದು ಆಟಗಾರರನ್ನೂ ನಾಶ ಮಾಡಿತು; ಆಟವನ್ನೂ ನಾಶ

ಮಾಡಿತು. ಹೊಡೆ ಅಥವಾ ಹೊರನಡೆ ಎಂಬುದು ಕ್ರಿಕೆಟ್ ಅಲ್ಲ. ಐದು ದಿನದ ಒಂದು ಟೆಸ್ಟಿನಲ್ಲಿ ನಿತ್ಯ ಕನಿಷ್ಠ 90 ಓವರ್ ಆಡಬೇಕು. ಪ್ರತಿ ತಂಡವೂ ಒಂದೂವರೆ ಎರಡು ದಿನವಾದರೂ ಆಡಬೇಕು. ಬೋರ್ಡಿನ ಮೇಲೆ ನಾನೂರು ರನ್ನನ್ನಾದರೂ ಪೇರಿಸಬೇಕು. ಬ್ಯಾಟ್ಸ್‌ಮನ್‌ಗಳಿಗೆ ಅನುಕೂಲ ಕಲ್ಪಿಸುವ ಪಿಚ್ಚು ನಂತರ ಬೌಲರ್‌ಗಳಿಗೂ ವರವಾಗಬೇಕು. ಬ್ಯಾಟು ಮತ್ತು ಚೆಂಡಿನ ನಡುವೆ ಸೆಣಸಾಟ ನಡೆಯಬೇಕು. ಈ ಕ್ರಿಕೆಟ್ ಜಗತ್ತು ಎಂಥೆಂಥ ಬ್ಯಾಟ್ಸ್ ಮನ್ ರನ್ನು ಕಂಡಿದೆ, ಬೌಲರ್‌ಗಳನ್ನು ಕಂಡಿದೆ. ಅವರ ಹೆಸರನ್ನೆಲ್ಲ ನೆನಪಿಸಿಕೊಂಡರೆ ಈಗಿನವರೆಲ್ಲ ಕುಳ್ಳರಂತೆ ಕಾಣುತ್ತಾರೆ. ಆಗ ಈಗಿನ ಹಾಗೆ ತಲೆಗೊಂದು ಹೆಲ್ಮೆಟ್ ಮತ್ತು ಸೂಕ್ಷ್ಮ ಜಾಗಗಳನ್ನು ರಕ್ಷಿಸಿಕೊಳ್ಳಲು ಪ್ಯಾಡ್‌ಗಳು ಇರಲಿಲ್ಲ! ಗಾವಸ್ಕರ್, ಬ್ರಿಜೇಶ್, ಸಿದ್ದು ಅವರೆಲ್ಲ ಯಾವ ರಕ್ಷಕಗಳೂ ಇಲ್ಲದೇ ಆಡುತ್ತಿದ್ದರು. ಅಲ್ಲಿ ಕೌಶಲಕ್ಕೆ ಜಾಗ ಇತ್ತು. ತಲೆ ಬುರುಡೆ ಒಡೆದು ಬಿಡುವ, ಪಕ್ಕೆಲುವನ್ನು ಮುರಿದು ಬಿಡುವ ಚೆಂಡನ್ನು ಹೇಗೆ ಎದುರಿಸಬೇಕು ಎಂದು ಅವರಿಗೆ ಗೊತ್ತಿತ್ತು. ಅವರೆಲ್ಲ ದೇಶಕ್ಕಾಗಿ ಆಡುತ್ತಿದ್ದರು. ಐಪಿಎಲ್ ಆ 'ದೇಶ' ಎಂಬುದನ್ನೇ ಕೊಂದು ಬಿಟ್ಟಿತು. ಈಗ ಒಂದು ತಂಡದಲ್ಲಿ ಎಲ್ಲ ಪ್ರದೇಶದವರೂ ಇರುತ್ತಾರೆ. ಎಲ್ಲ ದೇಶದವರೂ ಇರುತ್ತಾರೆ. ಯಾವ ತಂಡದಲ್ಲಿಯೂ ದೇಶದ ಪ್ರತಿಷ್ಠೆ ಎಂಬುದು ಇಲ್ಲ. ವಿಜಯ್ ಮಲ್ಯ ಅವರು ಈ ಸಾರಿ ಬೆಂಗಳೂರು ತಂಡದಲ್ಲಿ ಒಬ್ಬ ಬೆಂಗಳೂರಿಗನನ್ನೂ ತೆಗೆದುಕೊಂಡಿರಲಿಲ್ಲ. ಎಲ್ಲರೂ ಆಡುವುದು ರಂಜನೆಗಾಗಿ, ಹಣಕ್ಕಾಗಿ; ಪಣಕ್ಕಾಗಿ, ದೂರದಲ್ಲಿ ಎಲ್ಲಿಯೋ ಕುಳಿತ ಬುಕ್ಕಿ ಒಡ್ಡುವ ಪಣಕ್ಕಾಗಿ, ಅದ್ಭುತವಾಗಿ ಆಡಿ ಯಾರೋ ಕೊಡುವ ಒಂದೋ ಎರಡೋ ಲಕ್ಷ ಬಹುಮಾನದ ಬದಲಾಗಿ ಯಾರೋ ಬುಕ್ಕಿ ಕೊಡುವ 25 ಲಕ್ಷಕ್ಕಾಗಿ ಒಂದು ಆಟದಲ್ಲಿ ಸೋಲುವುದು ಲಾಭಕರ ಅಲ್ಲವೇ? ಮತ್ತೆ, ಸೊಂಟದಲ್ಲಿ ಟವೆಲ್ ಇಟ್ಟುಕೊಂಡು ಶ್ರೀಶಾಂತ್‌ನಂಥ ಯುವಕರು ಯಾರಿಗೋ ಸೂಚನೆ ಕೊಡಲು ಬೌಲ್ ಮಾಡಿದ್ದು ಏಕೆ? ಆತನೇನೋ ಸಿಕ್ಕಿಬಿದ್ದ, ಸಿಕ್ಕಿಬೀಳದವರೇನೂ ಸಂಭಾವಿತರೇ? ಮುದಲ್ ವರದಿಯಲ್ಲಿ ಐವರು ಹೆಸರಾಂತ ಆಟಗಾರರೇ ಇದ್ದಾರೆ ಎನ್ನುತ್ತಾರೆ. ಏಕೋ ಏನೋ ಅವರ ಹೆಸರು ಹೊರಗೆ ಬಂದಿಲ್ಲ. ಎಲ್ಲದಕ್ಕೂ ಭ್ರಮ ನಿರಸನ ಎಂದು ಇರುತ್ತದೆ. ಆದರೆ, ಹಣವೊಂದಕ್ಕೆ ಅದು ಇರುವುದಿಲ್ಲ. ಅದು ಎಷ್ಟು ಸಂಗ್ರಹವಾದರೂ ಸಾಕು ಎನಿಸುವುದಿಲ್ಲ. ಆದರೆ, ಅದರ ಅಡ್ಡಪರಿಣಾಮಗಳು ಗೋಚರಿಸುತ್ತ ಇರುತ್ತವೆ. ವೇಗ ಯಾವಾಗಲೂ ನಮ್ಮನ್ನು ಕೊಲ್ಲುತ್ತದೆ. ಐದು ದಿನಗಳ ನಿಧಾನಗತಿಯ ಆಟವನ್ನು ಐಪಿಎಲ್ ಇಪ್ಪತ್ತು ಓವರ್‌ಗಳ ವೇಗ ಕೊಂದು ಹಾಕಿದೆ. ಐದು ದಿನಗಳ ಟೆಸ್ಟ್ ಪಂದ್ಯಗಳೇ ಅರ್ಥ ಕಳೆದುಕೊಂಡಿರುವಾಗ ರಣಜಿ, ದೇವಧರ್ ಟ್ರೋಫಿ ಪಂದ್ಯಗಳನ್ನು ನೋಡುವವರು ಯಾರು?

ಪ್ಯಾಕರ್, 'ಪ್ರತಿಯೊಬ್ಬರಲ್ಲೂ ಒಂಚೂರು ವೇಶ್ಯ ಇರುತ್ತಾಳೆ ಎಂದಿದ್ದರು. ಅವಳ ಬೆಲೆ ಎಷ್ಟು' ಎಂದೂ ಕೇಳಿದ್ದರು. ಈಗ ಐಪಿಎಲ್ ಇಡೀ ಆಟವನ್ನೇ ವೇಶ್ಯಾವಾಟಿಕೆ ಮಟ್ಟಕ್ಕೆ ತಂದು ನಿಲ್ಲಿಸಿದೆ. ಸಾಕೇ? ಇನ್ನೂ ಬೇಕೇ?

24.08.2014

# ಉಕ್ಕಿನ ಚೌಕಟ್ಟು ಒಡೆದು ಹಾಕುವುದು ಕಷ್ಟವೇನೂ ಅಲ್ಲ

ಆಚೆ ಒಂದು ಉಕ್ಕಿನ ಭದ್ರ ಚೌಕಟ್ಟು, ಈಚೆಗೂ ಅಂಥದೇ ಇನ್ನೊಂದು ಚೌಕಟ್ಟು, ಎರಡರ ಒಳಗೂ ಒಬ್ಬರಿಗೊಬ್ಬರು ಮಿಡಿಯುವ ಜೀವಗಳು. ಎರಡೂ ಜೀವಗಳು ಹೊರಗೆ ಬರುವಂತಿಲ್ಲ. ಪರಸ್ಪರರನ್ನು ಭೇಟಿ ಮಾಡುವಂತಿಲ್ಲ. ಮಾತನಾಡುವಂತಿಲ್ಲ. ಯಾರಿಗೂ ಕಾಣದಂತೆ ಎಲ್ಲಿಯೋ ಸಮುದ್ರದ ದಂಡೆಗೋ, ಮರಗಳ ಅಡಿಯೋ ಹೋಗಿ ಕುಳಿತು ಪಿಸುಗುಡುವುದಕ್ಕಿಂತ ಮುಂಚೆಯೇ ಮಧ್ಯಯುಗಕ್ಕೆ ಸೇರಿದ ಮಂದಿ ಬಂದು ಬಿಡುತ್ತಾರೆ. ಒಬ್ಬರ ಮೇಲೆ ಕೇಸರಿ ಬಟ್ಟೆ. ಇನ್ನೊಬ್ಬರ ಮೇಲೆ ಹಸಿರು ಬಟ್ಟೆ

ಅಡಗಿ ಕುಳಿತ ಜೀವಗಳನ್ನು ಹೊರಗೆ ಎಳೆಯುತ್ತಾರೆ. ಮನಸ್ಸಿಗೆ ಬಂದಂತೆ ಥಳಿಸುತ್ತಾರೆ. ಕೇಕೆ ಹಾಕುತ್ತಾರೆ. ಅಟ್ಟಹಾಸ ಮಾಡುತ್ತಾರೆ. ಮತ್ತೆ ಅಂಥದೇ ಜೋಡಿಗಳನ್ನು ಹುಡುಕಿಕೊಂಡು ಹೊರಟು ಹೋಗುತ್ತಾರೆ. ಎರಡೂ ಜೀವಗಳಿಗೂ ಯೋಚನೆ: ಚೌಕಟ್ಟಿನಿಂದ ಹೊರಗೆ ಹೋಗಿ ಬದುಕುವುದು ಹೇಗೆ? ನಮಗೆ ಇಷ್ಟವಾದಂತೆ ಬದುಕಲು ನಮಗೆ ಹಕ್ಕು ಇಲ್ಲವೇ? ಸಂವಿಧಾನ ಎಂದರೆ ಏನು? ವ್ಯಕ್ತಿ ಸ್ವಾತಂತ್ರ ಎಂದರೆ ಏನು? ಬದುಕುವ ಹಕ್ಕು ಎಂದರೆ ಏನು?

ಐದು ವರ್ಷಗಳ ಹಿಂದೆಯೂ ಹೀಗೆಯೇ ಆಗಿತ್ತು. ಮಂಗಳೂರಿನಲ್ಲಿ ಯಾವುದೋ ಪಬ್ಬಿನಲ್ಲಿ ಯಾರೋ ನಾಲ್ಕೈದು ಮಂದಿ ಹೆಣ್ಣು ಮಕ್ಕಳು ಕುಳಿತು ಹರಟೆ ಹೊಡೆಯುತ್ತಿದ್ದರು. ಗುಂಡೂ ಹಾಕುತ್ತಿರಬಹುದು. ಕೇಸರಿ ಬಟ್ಟೆ ಹಾಕಿಕೊಂಡ ಮಂದಿ ಅಲ್ಲಿಗೆ ಬಂದರು. ಹೆಣ್ಣು ಮಕ್ಕಳನ್ನು ಎಳೆದಾಡಿದರು. ಕೆಲವರು ಅವರಿಗೆ ಒದ್ದರು. 'ನಮ್ಮ ಸಂಸ್ಕೃತಿ ಎಂದರೆ ಏನು? ನೀವು ಈ ರೀತಿ ಪಬ್ಬುಗಳಿಗೆಲ್ಲ ಬರುವುದು ಎಂದರೆ ಏನು? ಎಲ್ಲಿಯಾದರೂ ಉಂಟೆ' ಎಂದು ಅಬ್ಬರಿಸಿದರು. ಆದರೆ ತಮ್ಮ ಸಂಸ್ಕೃತಿಯಲ್ಲಿ ಹೆಣ್ಣು ಮಕ್ಕಳನ್ನು ಹೀಗೆ ಎಳೆದಾಡಬಹುದೇ? ಅವರಿಗೆ ಒದೆಯಬಹುದೇ? ಅದಕ್ಕೆ ಅನುಮತಿ ಇದೆಯೇ ಎಂದು ಅವರಿಗೆ ಗೊತ್ತೇ ಇರಲಿಲ್ಲ.

ಪ್ರೇಮಿಗಳ ದಿನ ಯಾರಾದರೂ ಜೋಡಿ ಸಿಕ್ಕಿ ಬಿದ್ದರೆ ಅವರಿಗೆ ಅಲ್ಲಿಯೇ ಅರಿಶಿಣ ಬೋಟು ಕೊರಳಿಗೆ ಕಟ್ಟಿ ಮದುವೆ ಮಾಡಿ ಬಿಡುತ್ತೇವೆ ಎಂದೂ ಅವರು ಹೆದರಿಕೆ ಹಾಕಿದರು. ಹೆಣ್ಣು ಮಕ್ಕಳಿಗೂ ರೋಸಿ ಹೋಗಿತ್ತು. ಎಲ್ಲರೂ ಬಟ್ಟೆ ಅಂಗಡಿಗೆ ಹೋದರು. ಗುಲಾಬಿ ಬಣ್ಣದ ಚೆಡ್ಡಿಗಳನ್ನು ಖರೀದಿ ಮಾಡಿದರು. ಹುಬ್ಬಳ್ಳಿಗೆ ಕಳುಹಿಸಿ ಕೊಟ್ಟರು. ಹುಬ್ಬಳ್ಳಿಯಲ್ಲಿಯೇ ಕೇಸರಿ ಬಟ್ಟೆಯವರ ಮನೆ ಇತ್ತು.

ಈಗ ಮತ್ತೆ ಕೇಸರಿ ಮತ್ತು ಹಸಿರು ಬಟ್ಟೆಯವರ ಅಟ್ಟಹಾಸ. ಹದಿಹರಯದ ಹುಡುಗ ಹುಡುಗಿ ಎಲ್ಲಿಯೂ ಜೊತೆಯಾಗಿ ನಿಲ್ಲುವಂತಿಲ್ಲ. ನಿಂತು ಮಾತನಾಡುವಂತಿಲ್ಲ. ಬಸ್ಸಿನಲ್ಲಿ ಅಕ್ಕ ಪಕ್ಕ ಕುಳಿತುಕೊಳ್ಳುವಂತಿಲ್ಲ. ನಿಂತರೆ ಸಾಕು, ಕುಳಿತರೆ ಸಾಕು, ಮಾತನಾಡಿದರೆ ಸಾಕು. ಎಲ್ಲಿಂದಲೋ ಮಾಯದಂತೆ ಬಂದು ಬಿಡುತ್ತಾರೆ. ಮನಸ್ಸಿಗೆ ಬಂದಂತೆ ಇಬ್ಬರನ್ನೂ ಥಳಿಸುತ್ತಾರೆ. ಮತ್ತೆ ಅವರ ಬೇಟೆ ಅದೇ ರೀತಿ ಮುಂದುವರಿಯುತ್ತದೆ. ಅದಕ್ಕೆ ಅಲ್ಲಿ 'ನೈತಿಕ ಪೊಲೀಸ್‌ಗಿರಿ' ಎಂದು ಕರೆಯುತ್ತಾರೆ. ಜನರು ಹೇಗೆ ಬದುಕಬೇಕು ಎಂದು ಹೇಳಿಕೊಡುವುದು ತಮ್ಮ ಕೆಲಸ ಎಂದು ಅವರು ತಾವು ತಾವೇ ನಿರ್ಧರಿಸಿ ಬಿಟ್ಟಿದ್ದಾರೆ. ಸೋಜಿಗ ಏನು ಗೊತ್ತಾ? ಸಾಕ್ಷರತೆ ಹೆಚ್ಚು ಇರುವ ಕೇರಳದಲ್ಲಿ ಇದು ಹೆಚ್ಚು. ಅದಕ್ಕೆ ಹೊಂದಿಕೊಂಡ ಬುದ್ಧಿವಂತರ ಜಿಲ್ಲೆಗಳು ಅನಿಸಿರುವ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆಗಳಲ್ಲಿಯೂ ಹೆಚ್ಚು. ಸಾಕ್ಷರತೆ ಎಂದರೆ ಏನು? ಹೆಚ್ಚು ಹೆಚ್ಚು ನಾಗರಿಕರು, ತಿಳಿವಳಿಕೆಯವರು ಎಂದು ಅಲ್ಲವೇ? ಅದು ಹೇಗೆ ಮಧ್ಯಯುಗಕ್ಕೆ ಅವರು ಮರಳಲು ಸಾಧ್ಯ?

ಮೊದಲು ಮಧ್ಯಯುಗಕ್ಕೆ ಹೋಗಿದ್ದು ಕೇರಳವೇ? ದಕ್ಷಿಣ ಕನ್ನಡವೇ? ಗೊತ್ತಿಲ್ಲ. ಪ್ರತಿಭಟನೆ ಆರಂಭವಾದುದಂತೂ ಕೇರಳದಲ್ಲಿಯೇ ಮೊದಲು. ಅಲ್ಲಿನ ಬೀಚುಗಳ ಮೇಲೆ ನಡೆಯುವ 'ಅನೈತಿಕ ಚಟುವಟಿಕೆಗಳನ್ನು ವಿಡಿಯೊ ಮಾಡಿಕೊಂಡು ಕಾಂಗ್ರೆಸ್ ಒಡೆತನದ ಜೈ ಹಿಂದ್ ಟೀವಿ ಚಾನೆಲ್‌ನಲ್ಲಿ ಒಂದು ಇಡೀ ದಿನ ತೋರಿಸಿದರು. ಎಲ್ಲದಕ್ಕೂ ಒಂದು ಮಿತಿ ಎಂದು ಇರುತ್ತದೆ ಎಂದು ಕಾಣುತ್ತದೆ. ಈಗ ಸಹನೆಯ ಕಟ್ಟೆ ಒಡೆದಿದೆ. ಕರಾವಳಿಯ ಸಮುದ್ರದ ಹಾಗೆಯೇ ಅದು ಅಬ್ಬರಿಸತೊಡಗಿದೆ. 'ನಾವು ಎಲ್ಲಿಯೋ ಮರದ ನೆರಳಲ್ಲಿ, ಸಮುದ್ರದ ಮರಳಿನಲ್ಲಿ ಕುಳಿತರೆ ನೀವು ನಮ್ಮ ಮೇಲೆ ದಾಳಿ ಮಾಡುತ್ತೀರಲ್ಲ? ಈಗ ನಾವು ನಿಮ್ಮ ಮುಂದೆಯೇ ಪರಸ್ಪರರನ್ನು ಅಪ್ಪಿಕೊಳ್ಳುತ್ತೇವೆ. ಮುತ್ತು ಕೊಡುತ್ತೇವೆ ಏನು ಮಾಡುತ್ತೀರಿ ಮಾಡಿಕೊಳ್ಳಿ' ಎಂದು ಯುವ ಪೀಳಿಗೆ ಬಂಡೆದಿದ್ದೆ. ರಾಹುಲ್ ಪಶುಪಾಲನ್ ಎಂಬ ಯುವಕ ಅದಕ್ಕೆ ನಾಂದಿ ಹಾಡಿದ್ದಾರೆ. ಕೇರಳ ರಾಜ್ಯದ ಸಮುದ್ರ ದಂಡೆಯ ಮೇಲೆ ಆರಂಭವಾದ ಈ ಬಂಡಾಯ ಈಗ ಎಲ್ಲ ಕಡೆಗೂ ಸುನಾಮಿ ಅಲೆಯ ಹಾಗೆ ಅಪ್ಪಳಿಸತೊಡಗಿದೆ. ಕೇವಲ ಒಂದೇ ತಿಂಗಳಲ್ಲಿ ಹೈದರಾಬಾದ್ ವಿಶ್ವವಿದ್ಯಾಲಯ, ದೆಹಲಿಯ ಜವಾಹರಲಾಲ್ ನೆಹರೂ ವಿಶ್ವ ವಿದ್ಯಾಲಯ, ಮುಂಬೈ ಮತ್ತು ಮದ್ರಾಸ್ ಐಐಟಿ ಹೀಗೆ ಎಲ್ಲ ಕಡೆ ಮುತ್ತಿನ ಮೇಳಗಳು ನಡೆದು ಈಗ ಅದು ಮುಂದಿನ ಶನಿವಾರ ಬೆಂಗಳೂರಿಗೆ ಬರಲಿದೆ.

'ನೈತಿಕತೆ'ಯ ಗುತ್ತಿಗೆ ಹಿಡಿದವರಿಗೆ ಇದೆಲ್ಲ ಅರಗಿಸಿಕೊಳ್ಳಲಾಗದ ಸಂಗತಿ. ಆದರೆ, ಅವರ ಜತೆಗೆ ಕೇವಲ ಕೇಸರಿ ಮತ್ತು ಹಸಿರು ಬಟ್ಟೆ ಹಾಕಿಕೊಂಡವರು ಮಾತ್ರ ಇದ್ದರೇ? ಈಗ ಅವರ ವೇಷದಲ್ಲಿ ಇನ್ನು ಯಾರು ಯಾರೋ ಇದ್ದರು ಎಂದೂ ಗೊತ್ತಾಗುತ್ತಿದೆ.

ಇಲ್ಲದಿದ್ದರೆ 'ನಾಯಿಗೆ ಮುತ್ತು ಕೊಡಿ', 'ಹಂದಿಗೆ ಮುತ್ತು ಕೊಡಿ' ಎಂದು ಅವರು ಹೇಳುತ್ತಿರಲಿಲ್ಲ. 'ಇದು ನಮ್ಮ ಸಂಸ್ಕೃತಿಯಲ್ಲ' ಎಂದು ಎಲ್ಲ ಪಕ್ಷಗಳ ಮುಖಂಡರೂ ಒಂದೇ ಧ್ವನಿಯಲ್ಲಿ ಹೇಳುತ್ತಿರಲಿಲ್ಲ. ಎಲ್ಲರಿಗೂ ನಮ್ಮ ಸಂಸ್ಕೃತಿ ಬಗ್ಗೆ ಎಷ್ಟು ಕಾಳಜಿ ಅಲ್ಲವೇ? ನಗಬೇಕೇ? ಅಳಬೇಕೇ? ಗೊತ್ತಾಗುವುದಿಲ್ಲ. ಕಾಂಗ್ರೆಸ್ಸಿನ ಮುಖ್ಯಮಂತ್ರಿಗಳೂ, 'ಕಾನೂನಿಗೆ ಭಂಗ ಬರಬಾರದು' ಎಂದು ಅನ್ನುತ್ತಿದ್ದಾರೆ.

ನಮ್ಮ ಪಾಡಿಗೆ ನಾವು ಎಲ್ಲಿಯೋ ಸೇರಿ ಮುತ್ತು ಕೊಟ್ಟರೆ ಕಾನೂನಿಗೆ ಹೇಗೆ ಭಂಗ ಬರುತ್ತದೆ? ಏಕೆ ಭಂಗ ಬರುತ್ತದೆ? ಯಾವ ಪ್ರತಿಭಟನೆಯನ್ನೂ ಸರ್ಕಾರ ಸಹಿಸುವುದಿಲ್ಲ. ಅಂತಿಮವಾಗಿ ಕೇರಳದಲ್ಲಿ ಆದ ಹಾಗೆಯೇ ಕರ್ನಾಟಕದಲ್ಲಿಯೂ ಆಗುತ್ತದೆ. ಮುತ್ತಿನ ಮೇಳಕ್ಕೆ ಅನುಮತಿ ಸಿಗುವುದು ಕಷ್ಟ. ಹೋಗಲಿ, ಕಾನೂನು ಏನು ಹೇಳುತ್ತದೆ? ಭಾರತೀಯ ದಂಡ ಸಂಹಿತೆಯ 294 (ಎ) ಕಲಮಿನ ಪ್ರಕಾರ ಬೇರೆಯವರಿಗೆ ಅಸಹ್ಯವಾಗುವಂತೆ ಯಾರೂ ಅಶ್ಲೀಲವಾಗಿ ನಡೆದುಕೊಳ್ಳಬಾರದು. ನಡೆದುಕೊಂಡರೆ ಅವರಿಗೆ ಮೂರು ತಿಂಗಳು ಶಿಕ್ಷೆ ಮತ್ತು ದಂಡ ಅಥವಾ ಎರಡನ್ನೂ ವಿಧಿಸಲಾಗುವುದು.

'ಅಶ್ಲೀಲ' ಎಂದರೆ ಏನು ಎಂದು ದಂಡ ಸಂಹಿತೆಯಲ್ಲಿ ಎಲ್ಲಿಯೂ ವಿವರಿಸಿಲ್ಲ. ಸಾರ್ವಜನಿಕವಾಗಿ ಮುತ್ತು ಕೊಡುವುದು ದಂಡನಾರ್ಹವೇ? ಅಲ್ಲ ಎಂದು ದೆಹಲಿ ಹೈಕೋರ್ಟೂ ಹೇಳಿದೆ. ದೇಶದ ಸರ್ವೋಚ್ಚ ನ್ಯಾಯಾಲಯವೂ ಹೇಳಿದೆ. ಪಾಶ್ಚಾತ್ಯ ನಟ ರಿಚರ್ಡ್ ಜೇರೆ ಯಾವುದೋ ಸಭೆಯಲ್ಲಿ ನಮ್ಮ ನಟಿ ಶಿಲ್ಪಾ ಶೆಟ್ಟಿಯನ್ನು ಬರಸೆಳೆದು ಕೆನ್ನೆಗೆ ಮುತ್ತು ಕೊಟ್ಟಿದ್ದ. ಅದು ಸರ್ವೋಚ್ಚ ನ್ಯಾಯಾಲಯದವರೆಗೆ ಹೋಗಿತ್ತು. ಅಲ್ಲಿ ಜೇರೆ ಗೆದ್ದರು. ಯಾರೋ ಎಲ್ಲಿಯೋ ಒಟ್ಟಾಗಿ ಸೇರಿ ಪರಸ್ಪರ ಮುತ್ತು ಕೊಟ್ಟರೆ ಕಾನೂನಿಗೆ ಹೇಗೆ ಭಂಗ ಬರುತ್ತದೆ? ಹಾಗೆ ಮಾಡುವುದರಿಂದ ಕಾನೂನಿಗೆ ಭಂಗ ಬರುವುದಿಲ್ಲ. ಭಂಗ ಬರುವಂಥ ಸನ್ನಿವೇಶವನ್ನು ಮತ್ತೆ ಅದೇ ಕೇಸರಿ ಹಸಿರು ಮಂದಿ ಸೃಷ್ಟಿಸುತ್ತಾರೆ. 'ಜಾತ್ಯತೀತ', 'ಪ್ರಗತಿಪರ ಎಂದು ಹೇಳಿಕೊಳ್ಳುವ ಸರ್ಕಾರಗಳು ಅಂಥ ಮಂದಿಗೇ ಮಣಿಯುತ್ತಾರೆ. ಅದು ಕೇರಳದ ಸರ್ಕಾರವೇ ಇರಬಹುದು, ಕರ್ನಾಟಕದ ಸರ್ಕಾರವೇ ಇರಬಹುದು. ಅದಕ್ಕೆ ಯಾರೂ ಅಪವಾದವಲ್ಲ. ರಾಹುಲ್ ಪಶುಪಾಲನ್ ಅವರಂಥ ಯುವಕ-ಯುವತಿಯರಿಗೆ ಬೇರೆ ಕೆಲಸವಿಲ್ಲ ಎಂದು ಯಾರೂ ಅಂದುಕೊಳ್ಳಬಾರದು. ಅವರಿಗೆ ಎಲ್ಲರ ಮುಂದೆ ತಮ್ಮ ಗೆಳೆಯ ಅಥವಾ ಗೆಳತಿಗೆ ಮುತ್ತು ಕೊಡುವ ತೆವಲೂ ಇಲ್ಲ. ಅವರಿಗೂ ನೋಡಿ ನೋಡಿ ಸಾಕಾಗಿದೆ. ಎಷ್ಟೆಲ್ಲ ನಿಯಂತ್ರಣಗಳು ಎಂದು ಆತಂಕವಾಗಿದೆ. ಮನೆಯಲ್ಲಿ ಅಪ್ಪ ಅಮ್ಮನ ನಿಯಂತ್ರಣ. ಕಚೇರಿಗೆ ಹೋದರೆ ಬಾಸ್‌ನ ನಿಯಂತ್ರಣ, ಎಲ್ಲಿಯೋ ಸಮುದ್ರದ ದಂಡೆಗೋ, ಮರದ ನೆರಳಿಗೋ ಹೋಗಿ ಕುಳಿತುಕೊಳ್ಳೋಣ ಎಂದರೆ ಮರೆಯಲ್ಲಿ ಕಾಯುತ್ತ ನಿಂತ ನೆರಳುಗಳ ನಿಯಂತ್ರಣ. ನಮ್ಮ ಪಾಡಿಗೆ ನಮ್ಮನ್ನು ಬದುಕಲು ಬಿಡಿ ಎಂದು ಅವರು ಈ ಆಂದೋಲನ

ಆರಂಭಿಸಿದ್ದಾರೆ. ಅಚ್ಚರಿಯಾಗುತ್ತದೆ : ಫೇಸ್‌ಬುಕ್ಕಿನಲ್ಲಿ ಅವರು 'ಕಿಸ್ ಆಫ್ ಲವ್' ಎಂದೇ ಆಂದೋಲನ ಆರಂಭಿಸಿದ್ದಾರೆ. 1.41 ಲಕ್ಷ ಮಂದಿ ಕೆಲವೇ ದಿನಗಳಲ್ಲಿ ಈ ಆಂದೋಲನದಲ್ಲಿ ಭಾಗವಹಿಸಿದ್ದಾರೆ. ಒಂದೇ ಸಾರಿ ಈ ಖಾತೆಯಲ್ಲಿ ಸೇರಿಕೊಂಡವರ ಸಂಖ್ಯೆ ಐವತ್ತು ಸಾವಿರ ಮೀರಿದಾಗ ಖಾತೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿತ್ತು.

ಮತ್ತೆ ಅದನ್ನು ಆರಂಭಿಸಿದಾಗ ಒಂದೇ ಸಾರಿ ಮತ್ತೆ ಎಪ್ಪತ್ತೈದು ಸಾವಿರ ಮಂದಿ ಬಂದು ಸೇರಿಕೊಂಡರು. ಅವರೆಲ್ಲ ತಮಗೆ ಅನಿಸಿದ್ದನ್ನು ತುಂಬ ಅಚ್ಚುಕಟ್ಟಾಗಿ ಅದರಲ್ಲಿ ಬರೆದಿದ್ದಾರೆ. ಅದರಲ್ಲಿ ಯಾವ ಆಕ್ರೋಶವೂ ಇಲ್ಲ. ಇರುವುದು ಸಾತ್ವಿಕ ಸಿಟ್ಟು ಮಾತ್ರ ನಿಮ್ಮ ನೈತಿಕತೆಯ ಬಾಟಲಿಯಲ್ಲಿ ಇನ್ನು ಎಷ್ಟು ದಿನ ನಾವು ಹೀಗೆಯೇ ಉಸಿರು ಕಟ್ಟಿಕೊಂಡು ಇರುವುದು' ಎಂದು ಒಬ್ಬರು ಕೇಳಿದ್ದರೆ ಇನ್ನೊಬ್ಬರು, 'ಬಿಕಿನಿ ಹಾಕಿಕೊಂಡು ಬೀದಿಗೆ ಬನ್ನಿ' ಎಂದು ಕರೆ ಕೊಟ್ಟಿದ್ದಾರೆ. ಎಲ್ಲರೂ ಹೇಳುವುದು ಒಂದೇ ಮಾತು : ನಾವು ನಿಮ್ಮ ಬದುಕಿನಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ, ನಿಮಗೆ ನಮ್ಮ ಬದುಕಿನಲ್ಲಿ ಹಸ್ತಕ್ಷೇಪ ಮಾಡಲು ಅಧಿಕಾರವಿಲ್ಲ ಎಂದೇ.

ಅದು ಎಷ್ಟು ರೂಪ ಪಡೆಯಬಹುದೋ ಅಷ್ಟು ರೂಪ ಪಡೆದಿದೆ. ಎಷ್ಟು ಸೃಜನಾತ್ಮಕ ಆಗಬಹುದೋ ಅಷ್ಟು ಸೃಜನಾತ್ಮಕ ಆಗಿದೆ. ಅವರಿಗೆ ಆಳದಲ್ಲಿ ಎಷ್ಟು ಹಿಂಸೆ ಆಗುತ್ತಿತ್ತು ಎಂಬುದಕ್ಕೆ ಅವರು ಫೇಸ್‌ಬುಕ್ಕಿನಲ್ಲಿ ಬರೆದಿರುವ ಮಾತುಗಳೇ ಸಾಕ್ಷ್ಯ ಹೇಳುತ್ತಿವೆ. ಮಲೆಯಾಳಿ ಭಾಷೆಯ ಪ್ರಸಿದ್ಧ ನಟ ಮೋಹನ್‌ಲಾಲ್ ಸಿನಿಮಾದ ಒಂದು ಪಾತ್ರವಾಗಿ, 'ನಿಮ್ಮ ಹೆಂಡತಿಗೆ ಬೇಕಾದರೆ ಹೇಳಿ, ನಮಗೆ ಹೇಳಲು ನೀವು ಯಾರು?' ಎಂಬ ಮಾತನ್ನು ಈಗ ಅವರು ಒಬ್ಬ ವ್ಯಕ್ತಿಯಾಗಿಯೂ ಹೇಳಿರುವುದು ರಾಹುಲ್ ಪಶುಪಾಲನ್ ಮತ್ತು ಅವರ ಗೆಳೆಯ ಗೆಳತಿಯರಿಗೆ ಸಾವಿರ ಆನೆಯ ಬಲ ಬಂದಂತೆ ಆಗಿದೆ.

ಅನೇಕ ಹಿರಿಯರು ಕೂಡ ತಮ್ಮ ಪತ್ನಿ ಅಥವಾ ಗೆಳತಿಯ ಕೆನ್ನೆಗೆ ಮುತ್ತು ಕೊಡುವ ಚಿತ್ರಗಳನ್ನು ಪೋಸ್ಟ್ ಮಾಡಿದ್ದಾರೆ. ಇವರಿಗೆ ವಿರೋಧ ಮಾಡುವವರೂ ಒಂದು ಖಾತೆಯನ್ನು ತೆರೆದಿದ್ದಾರೆ. ಅದರಲ್ಲಿ ಆರೂವರೆ ಸಾವಿರದ ಸಂಖ್ಯೆಯನ್ನು ದಾಟಲು ತಿಣುಕಾಟ ನಡೆದಿದೆ. ಅದೇ, ಅವರು 'ನಮ್ಮ ಹೆಮ್ಮೆಯ ಸಂಸ್ಕೃತಿ'ಯ ಬಗ್ಗೆ ಬಡಬಡಿಸುತ್ತಿದ್ದಾರೆ. ಸಾರಾಂಶ ಇಷ್ಟೇ : ನಮ್ಮ ಮಕ್ಕಳು ಯಾವುದು ಸರಿ ಯಾವುದು ತಪ್ಪು ಎಂದು ತಿಳಿಯದ ಅವಿವೇಕಿಗಳೇನೂ ಅಲ್ಲ. ಮತ್ತು ಅವರವರ ಮಕ್ಕಳನ್ನು ನಿಯಂತ್ರಿಸುವ, ಬುದ್ಧಿ ಹೇಳುವ ಎಲ್ಲ ಅಧಿಕಾರವೂ ಅವರನ್ನು ಹೆತ್ತವರಿಗೆ ಇದ್ದೇ ಇರುತ್ತದೆ.

ಹಾದಿಯಲ್ಲಿ, ಬೀದಿಯಲ್ಲಿ ಹೋಗುವವರು ಇದನ್ನು ಅವರಿಗೆ ಹೇಳಿ ಕೊಡಬೇಕಾದ ಅಗತ್ಯವೇನೂ ಇಲ್ಲ. ಜೀವನ ಎಂಬುದು ಹರಿಯುವ ನದಿ ಇದ್ದ ಹಾಗೆ, ಅದು ಹೇಗೆ ಹೇಗೋ ದಾರಿ ಮಾಡಿಕೊಂಡು ಹರಿಯುತ್ತ ಹೋಗುತ್ತದೆ. ಹೀಗೆಯೇ ಹರಿಯಬೇಕು ಎಂದು ಹೇಳುವುದೆಲ್ಲ ಹುಚ್ಚು ಸಾಹಸ. ನದಿಗೆ ಅಡ್ಡ ಹಾಕಿದಾಗಲೆಲ್ಲ ಒಡ್ಡುಗಳು ಒಡೆದು ಹೋಗಿವೆ. ಈಗಲೂ ಅದೇ ಆಗುತ್ತದೆ : ಉಕ್ಕಿನ ಚೌಕಟ್ಟುಗಳನ್ನು ಒಡೆದು ಹಾಕುವುದು ನಮ್ಮ ಯುವತಿಯರ ಬಾಹುಗಳಿಗೆ ಕಷ್ಟದ್ದೇನೂ ಅಲ್ಲ! 23-11-2014

# ಸತ್ತು ಹೋದ ಮೇಲೆ

# ಮುಗಿಯಿತಲ್ಲ? ಇನ್ನೆಲ್ಲಿಯ ನ್ಯಾಯ?

ಮನಸ್ಸು ಮನಸ್ಸು ತಲ್ಲಣಗೊಂಡಿದೆ. ರಾತ್ರಿ ಹಗಲು ಅದೇ ಚಿತ್ರಗಳು ಕಾಡುತ್ತಿವೆ.ಎಲ್ಲ ಕ್ಷಣಾರ್ಧದಲ್ಲಿ ನಡೆದುಹೋಯಿತು. ಮೂವತ್ತು ಸೆಕೆಂಡು. ಅಷ್ಟೂ ಇರಲಾರದು. ಕಣ್ಣ ಮುಂದೆಯೇ ಸಾವು ಬಂದು ಅವರನ್ನು ಎಳೆದುಕೊಂಡು ಹೋಯಿತು. ಒಂದೇ ಕುಟುಂಬದ ಐವರು. ತಂದೆ, ಇಬ್ಬರು ಹೆಣ್ಣು ಮಕ್ಕಳು, ಇಬ್ಬರು ಗಂಡು ಮಕ್ಕಳು. ಅಥವಾ ತಂದೆ, ಇಬ್ಬರು ಗಂಡು ಮಕ್ಕಳು ಮತ್ತು ಅವರ ಹೆಂಡಂದಿರು. ಅಥವಾ ತಂದೆ, ಇಬ್ಬರು ಹೆಣ್ಣು ಮಕ್ಕಳು ಮತ್ತು ಅವರ ಗಂಡಂದಿರು. ಸಾವಿನ ಮುಂದೆ ಸಂಬಂಧಕ್ಕೆ ಯಾವ ಲೆಕ್ಕ?

ಗೆಳತಿ ಆಶಾ ಕೃಷ್ಣಸ್ವಾಮಿ ಕಳಿಸಿದ ಒಂದು ವಿಡಿಯೊ ತುಣುಕು ಇದು. ಅವರೆಲ್ಲ ದೇವಭೂಮಿ ಎಂದೇ ಹೆಸರಾದ ಉತ್ತರಾಖಂಡಕ್ಕೆ ಹೋಗಿದ್ದರು. ದೇವರ ದರ್ಶನ ಮುಗಿಸಿಕೊಂಡು ನದಿಯ ಆಚೆ ದಡಕ್ಕೆ ಹೋದರು. ಅಲ್ಲಿ ನೋಡುವಂಥದು ಏನಿತ್ತೋ ಗೊತ್ತಿಲ್ಲ. ಏನೂ ಇರಲಿಲ್ಲ ಎನಿಸುತ್ತದೆ. ಆಚೆ ಮತ್ತು ಈಚೆ ದಡದ ನಡುವೆ ನದಿಪಾತ್ರ ಅಷ್ಟು ದೊಡ್ಡದೇನೂ ಆಗಿರಲಿಲ್ಲ. ಆಚೆ ಕಡೆ ಹೋದವರು ಈಚೆ ಕಡೆ ಬರಬೇಕಿತ್ತು. ಹೋಗುವಾಗ ನದಿಯಲ್ಲಿ ಜಾಸ್ತಿ ನೀರೂ ಹರಿಯುತ್ತಿರಲಿಲ್ಲ. ಇದ್ದಕ್ಕಿದ್ದಂತೆ ನದಿಯಲ್ಲಿ ದಿಢೀರ್ ಎಂದು ನೀರು ಬರುತ್ತಿದೆ ಎನಿಸತೊಡಗಿತು. ಮುಂದೆ ಇದ್ದವರು ಓಡಿ ಈಚೆ ದಡ ಸೇರಿದರು. ಬೇಗ ಬೇಗ ಬನ್ನಿ ಎಂದು ಹಿಂದೆ ಇದ್ದವರಿಗೆ ಹೇಳತೊಡಗಿದರು. ಅವರು ಐವರು ನದಿಯ ನಡುಭಾಗದಲ್ಲಿ ಇದ್ದರು. ಮೂವರು ಕೊಂಚ ಮುಂದೆ ಬಂದರು. ಒಬ್ಬ ಹುಡುಗಿ ಕೊಂಚ ಹಿಂದೆ ಬಿದ್ದಳು. ಆಕೆಯನ್ನು ಕರೆದುಕೊಂಡು ಬರಲು ಹಿರಿಯ ವ್ಯಕ್ತಿ ಎರಡು ಹೆಜ್ಜೆ ಹಿಂದೆ ಹೋದರು. ಅವರನ್ನು ಜತೆಗೂಡಬೇಕು ಎಂದು ಉಳಿದ ಮೂವರೂ

ನಿಂತರು. ನೀರು ಪಾದದ ಬಳಿಗೆ ನುಗ್ಗಿಕೊಂಡು ಬಂದೇ ಬಿಟ್ಟಿತು. ಕೊಂಚ ಎತ್ತರದ ಕಲ್ಲಿನ ಮೇಲೆ ಮೂವರೂ ನಿಂತುಕೊಂಡರು. ನಿಂತುಕೊಂಡರೇ? ಹಾಗೆ ಅನಿಸುತ್ತಿರಲಿಲ್ಲ. ಕ್ಷಣ ಕ್ಷಣಕ್ಕೂ ನುಗ್ಗಿ ಬರುವ ನೀರಿಗೆ ಕರುಣೆ ಇರಲಿಲ್ಲ. ತೆರೆಗಳ ಎತ್ತರ ಹೆಚ್ಚುತ್ತಲೇ ಹೋಯಿತು. ಗೋಟುಕಲ್ಲಿನ ಮೇಲೆ ನಿಂತವರಿಗೆ ಕೆಳಗಿನ ನೆಲ ಕುಸಿಯುತ್ತಿದೆ ಎಂದು ಅನಿಸತೊಡಗಿತು. ಆಯ ತಪ್ಪುತ್ತಿದೆ ಎಂದು ಅನಿಸತೊಡಗಿತು. ಒಬ್ಬ ನೀರು ನುಗ್ಗಿ ಬರುವ ದಿಕ್ಕಿನ ಕಡೆಗೆ ನೋಡಿದರು. ಸಾವಿನಂತೆ ನೀರಿನ ರಭಸ ಹೆಚ್ಚುತ್ತಲೇ ಇತ್ತು. ಎಲ್ಲ ಐದು ಜನ ಕೈ ಹಿಡಿದುಕೊಂಡರು, ಪರಸ್ಪರರಿಗೆ ಆಸರೆಯಾಗಲಿ ಎಂದು. ಅವರಿಗೆ ಗೊತ್ತಿತ್ತೇ? ಬದುಕಿದರೆ ಎಲ್ಲರೂ ಬದುಕಬಹುದು, ಇಲ್ಲವಾದರೆ ಎಲ್ಲರೂ ಕೊಚ್ಚಿಕೊಂಡು ಹೋಗಬಹುದು ಎಂದು. ಒಂದು ಕ್ಷಣ ಹಿಂದೆ ನೋಡಿದರು. ದೊಡ್ಡ ಪ್ರಪಾತ ಬಾಯಿ ತೆರೆದುಕೊಂಡು ನಿಂತಂತೆ ಇತ್ತು. ಎದುರು ಧುಮ್ಮಿಕ್ಕಿ ಬರುತ್ತಿದ್ದ ನೀರು. ಹಿಂದೆ ಆಳವಾದ ಕಂದರ, ನೀರಿನ ವೇಗಕ್ಕೆ ಹಿರಿಯನ ಕಾಲು ಜರುಗಿತು. ಕೈ ಹಿಡಿದುಕೊಂಡಿದ್ದ ಎಲ್ಲ ಒಂದೇ ಸಾರಿ ಕೆಳಗೆ ಬಿದ್ದರು. 'ಅಯ್ಯೋ' 'ಅಯ್ಯಯ್ಯೋ' ಆಕ್ರಂದನ, ಹೆಣ್ಣು ಮಗಳದು. ಕಣ್ಣು ರೆಪ್ಪೆ ಮಿಟುಕಿಸುವುದರ ಒಳಗೆ ಎಲ್ಲ ಪ್ರಪಾತ ಸೇರಿಯಾಗಿತ್ತು. ಸಾವಿನ ಸನ್ನಿಧಿಯಲ್ಲಿ ಅವರು ಏನು ಅಂದುಕೊಂಡಿರಬಹುದು? ಅವರ ಇಡೀ ಬದುಕು ಅವರ ಮುಂದೆ ಬಂದು ನಿಂತಂತೆ ಅನಿಸಿತೇ? ಇನ್ನು ಮುಗಿಯಿತು ಎಂದು ಅನಿಸಿತೇ? ಅಷ್ಟೆಲ್ಲ ಅಂದುಕೊಳ್ಳಲು ಸಾವು ಸಮಯವನ್ನಾದರೂ ಕೊಟ್ಟಿತ್ತೇ?

ಅವರ ದೇಹಗಳು ಸಿಕ್ಕವೇ? ಅವರು ಯಾರು? ಈಚೆ ದಡಕ್ಕೆ ಓಡಿ ಬಂದು ನಿಂತ ಅವರ ಸಂಬಂಧಿಕರಿಗೆ ಏನು ಅನಿಸಿರಬಹುದು? ಅವರ ಇಡೀ ಕುಟುಂಬ ನಿರ್ಗತಿಕ ಆಗಿರಬಹುದು. ದುಡಿಯುವ ಎಲ್ಲರೂ ಕೊಚ್ಚಿಕೊಂಡು ಹೋಗಿರಬಹುದು. ಹಿರಿಯನ ಹೆಂಡತಿ ಮಾತ್ರ ಈಚೆ ಉಳಿದಿರಬಹುದು. ಅವಳು ನಿಜವಾಗಿಯೂ ಬದುಕಿದಳೇ? ಎಲ್ಲರನ್ನೂ ಕಳೆದುಕೊಂಡು ಬದುಕಿಯೂ ಸತ್ತಳೇ? ನೀರಿನಲ್ಲಿ ಕೊಚ್ಚಿಕೊಂಡು ಹೋದವರು ನನ್ನ ಸಂಬಂಧಿಕರೂ ಆಗಿರಬಹುದಿತ್ತೇ? ಅಥವಾ ನಾನೇ ನೀರಿನ ನಡುವೆ ನಿಂತಿರಬಹುದಿತ್ತೇ? ಕಣ್ಣ ಮುಂದೆಯೇ ಹೀಗೆ ಸಾವು ನಮ್ಮನ್ನೆಲ್ಲ ಕಬಳಿಸಿಕೊಂಡು ಹೋಗುವುದನ್ನು ನೋಡುತ್ತ ನಿಂತಿದ್ದ ನನ್ನ ಸಂಬಂಧಿಕರಿಗೆ ಏನು ಅನಿಸಬಹುದಿತ್ತು? ಸಾವು ಅಂದರೆ ಏನು? ದೇವರ ಸನ್ನಿಧಾನಕ್ಕೆ ಹೋದವರನ್ನೂ ಅದು ಏಕೆ ಬಿಡುವುದಿಲ್ಲ? ಪುಣ್ಯಭೂಮಿಯಲ್ಲಿ ಸಾವು ಬಂತು ಎಂದು ಸಮಾಧಾನ ಪಡಬಹುದೇ? ಸಾವು ಬರಲಿ ಎಂದು ಅಂದುಕೊಂಡು ಯಾರಾದರೂ ಪುಣ್ಯಕ್ಷೇತ್ರಕ್ಕೆ ಹೋಗುತ್ತಾರೆಯೇ? ನೀರಿನಲ್ಲಿ ಕೊಚ್ಚಿಕೊಂಡು ಹೋದವರಲ್ಲಿ ಹದಿ ಹರಯದವರು, ಯುವ ವಯಸ್ಸಿನವರು ಇದ್ದರು. ಅವರು ಬದುಕಿನ ಬಗ್ಗೆ ಏನೆಲ್ಲ ಕನಸು ಕಂಡಿದ್ದರೋ? ಅವರಿಗೆ ಪುಟ್ಟ ಮಕ್ಕಳು ಇದ್ದಿರಬಹುದೇ?

ಅವರು ದುಡುಕಿದರೇ? ಅಥವಾ ನಿಧಾನ ಮಾಡಿದರೇ? ಈಚೆ ಕಡೆ ಬೇಗ ಓಡಿ ಬಂದು ದಡ ಸೇರಿದವರ ಹಾಗೆ ಅವರೂ ಓಡಿ ಬರಬೇಕಿತ್ತೇ? ಅಥವಾ ಆಚೆ ಕಡೆಗೆ

ಹೋಗಲೇಬಾರದಿತ್ತೇ? ಅಲ್ಲಿ ನೋಡುವಂಥದು ಏನೂ ಇರಲಿಲ್ಲವಲ್ಲ? ಕಾಡು ಬಿಟ್ಟು ಮತ್ತೆ ಅಲ್ಲಿ ಏನು ಇತ್ತು? ಅಥವಾ ಸಾವು ಅಲ್ಲಿಯವರೆಗೆ ಅವರನ್ನು ಕರೆದುಕೊಂಡು ಹೋಯಿತೇ? ಬೇಗ ಈಚೆ ಬಂದು ದಡಕ್ಕೆ ಸೇರದಂತೆ ತಡೆಯಿತೇ? ಸಾವು ನಮ್ಮನ್ನು ಎಲ್ಲಿಯ ವರೆಗೆ ಕರೆದುಕೊಂಡು ಹೋಗುತ್ತದೆ? ಅವರು ಈಚೆ ದಡದಲ್ಲಿಯೇ ಇದ್ದರೂ ಇನ್ನೊಂದು ಏನೋ ಅವಘಡ ಆಗಿ ಯಮರಾಯ ಅವರನ್ನು ತನ್ನ ಪಾದದ ಬಳಿ ಕರೆದುಕೊಂಡು ಬಿಡುತ್ತಿದ್ದನೆಯೇ? ಒಂದು ದಿನ ಎಲ್ಲರೂ ಸಾಯಬೇಕು? ಆದರೆ ಹೇಗೆ ಸಾಯಬೇಕು? ಹೀಗೂ ಸಾಯಬಹುದೇ? ಇಡೀ ಕುಟುಂಬವೇ ಸರ್ವನಾಶ ಆಗಿಬಿಡಬಹುದೇ? ದೇವರ ಕರುಣೆ ಎಂದರೆ ಏನು? ಅದು ಇರುತ್ತದೆಯೇ? ಎಲ್ಲ ಸಾವಿಗೂ ಒಂದು ಕಾರಣ ಇರುತ್ತದೆ. ದೇವರು ತನ್ನ ಮೈಮೇಲೆ ಹಾಕಿಕೊಳ್ಳುವುದಿಲ್ಲ. ಎಲ್ಲವೂ ವಿಧಿಲಿಖಿತವೇ? ಅದನ್ನು ತಪ್ಪಿಸಲು ಸಾಧ್ಯವಿಲ್ಲವೇ? ಅದನ್ನು ಯಾರು ಬರೆಯುತ್ತಾರೆ? ಮನುಷ್ಯ ಎಷ್ಟು ಅಸಹಾಯಕ!

ಒಂದು ದಿನ ಸಾವು ಖಚಿತ ಎಂದ ಮೇಲೆ ಬದುಕಿಗೆ ಅರ್ಥ ಇದೆಯೇ? ಸಾವು ಹೇಗಾದರೂ ಬಂದು ಬಿಡಬಹುದಲ್ಲ? ಹಾಗೆಂದು ಮನೆಯಲ್ಲಿ ಕುಳಿತುಕೊಳ್ಳಲು ಆಗುತ್ತದೆಯೇ? ಕಾಡಿಗೆ ಹೊರಟು ಬಿಡಲು ಆಗುತ್ತದೆಯೇ? ಇವರು ದೇವರ ಬಳಿಯೇ ಬಂದಿದ್ದರಲ್ಲ? ಏನು ಕೇಳಿಕೊಳ್ಳಲು ಬಂದಿದ್ದರೋ? ಆರೋಗ್ಯ ಕೇಳಲು ಬಂದಿದ್ದರೇ? ಸಂಪತ್ತು ಕೇಳಲು ಬಂದಿದ್ದರೇ? ಮಕ್ಕಳ ಮದುವೆ ಮಾಡಬೇಕು ಎಂದು ಹರಕೆ ಹೊತ್ತುಕೊಂಡಿದ್ದರೇ? ಎಷ್ಟೆಲ್ಲ ಕನಸುಗಳು. ದೇವರ ಬಳಿ ಹೋದ ಇವರು ಅಮಾಯಕರು ಅಲ್ಲವೇ? ಪ್ರತಿ ವರ್ಷ ಲಕ್ಷ ಲಕ್ಷ ಜನ ಅಲ್ಲಿಗೆ ಹೋಗುತ್ತಾರಂತಲ್ಲ. ಗುಡ್ಡ ಹತ್ತಿ ಇಳಿದು, ಹಳ್ಳ ಕೊಳ್ಳ ನಡೆದು, ಚಳಿಯಲ್ಲಿ ನಡುಗಿ, ಮಳೆಯಲ್ಲಿ ನೆಂದು, ಬಿಸಿಲಲ್ಲಿ ಬಳಲಿ ದೇವರ ಬಳಿ ಜನರು ಏಕೆ ಹೋಗುತ್ತಾರೆ? ದೇವರು ಅಂದರೆ ಏನು? ಅಲ್ಲಿ ಹೋಗಿ ಹರಕೆ ಹೊತ್ತರೆ ಒಳ್ಳೆಯದು ಆಗುತ್ತದೆಯೇ? ಆಗುತ್ತದೆ ಎಂದು ನಾವು ನಂಬಿಕೊಂಡು ಬಂದಿದ್ದೇವೆ; ಬದುಕಿದ್ದೇವೆ. ಬರುವಾಗ ಸಾವು ಎದುರಾದರೇ? ದೇವಸ್ಥಾನಕ್ಕೆ, ಪುಣ್ಯ ಕ್ಷೇತ್ರಕ್ಕೆ ಹೋಗಿ ಬರುವಾಗ ಎಷ್ಟು ಜನ ಸತ್ತಿಲ್ಲ? ಅದು ಅವರ ಕರ್ಮ ಎಂದು ಅಂದುಬಿಡಬಹುದೇ? ಕಳ್ಳ ಕಾಕರು, ಪುಂಡು ಪೋಕರಿಗಳೂ ದೇವರ ಬಳಿ ಹೋಗುತ್ತಾರೆ. ಅವರಿಗೆ ಏನಾದರೂ ಆಗಬೇಕಿತ್ತೇ? ಅವರಿಗೆ ಏನಾದರೂ ಆಗಬೇಕು ಎಂದು ಬಯಸುವುದು ಸರಿಯೇ? ಹಾಗಾದರೆ ಪಾಪಿ ಚಿರಾಯು ಎಂದು ಏಕೆ ಅನ್ನುತ್ತಾರೆ? ದೇವರಿಗೆ ಒಳ್ಳೆಯವರ ಮೇಲೆ ಪ್ರೀತಿ ಹೆಚ್ಚು ಎಂದೂ ಅನ್ನುತ್ತಾರಲ್ಲ? ಏಕೆ? ಇವರು ಮನೆ ಬಿಡುವಾಗಲೇ ಅಪಶಕುನ ಆಗಿತ್ತೇ? ಎಡಗಣ್ಣು ಹಾರಿತ್ತೇ? ಈ ಸಾರಿ ಯಾತ್ರೆಗೆ ಹೋಗುವುದು ಬೇಡ ಎಂದು ಮನೆಯಲ್ಲಿಯೇ ಇದ್ದು ಬಿಟ್ಟಿದ್ದರೆ ಅವರು ಬದುಕಿ ಉಳಿಯಬಹುದಿತ್ತೇ?

ಸಾಯಬೇಕು ಎಂದು ಯಾರು ಬಯಸುತ್ತಾರೆ? ಎಲ್ಲರಿಗೂ ಬದುಕಬೇಕು ಎಂದೇ ಆಸೆ ಇರುತ್ತದೆ. ಬದುಕಬೇಕು ಎಂಬುದು ಒಂದು ಆದಿಮ ಬಯಕೆ. ಅದಕ್ಕಾಗಿಯೇ ಇಡೀ ಜೀವನ ಹೋರಾಟ, ತಾಯಿಯ ಹೊಟ್ಟೆಯಲ್ಲಿ ಹುಟ್ಟಿ ನೆಲಕ್ಕೆ ಬಿದ್ದ ದಿನದಾಗಿನಿಂದ. ಆದರೆ ಒಂದು ದಿನ ಸಾಯಲೇಬೇಕಲ್ಲ. ತಾಯಿಯ ಗರ್ಭದಿಂದ ನೆಲಕ್ಕೆ ಬಿದ್ದ ಮಗುವಿನ ಹೊಕ್ಕಳ

ಬಳ್ಳಿಯಿಂದ ರಕ್ತ ಹರಿದು ಹೋಗಿ ಮೊದಲ ದಿನವೇ ಸತ್ತ ಮಕ್ಕಳು ಇಲ್ಲವೇ? ಹಾಗಾದರೆ ಆ ಮಗು ಏಕೆ ಹುಟ್ಟಿತು? ತಾಯಿಯ ಗರ್ಭದಲ್ಲಿ ಒಂಬತ್ತು ತಿಂಗಳು ಏಕೆ ಕುಳಿತಿತ್ತು. ನೆಲಕ್ಕೆ ಬಂದ ದಿನವೇ ಸತ್ತು ಹೋಗಬೇಕು ಎಂದು ಅದರ ಹಣೆಯಲ್ಲಿ ಬರೆದಿತ್ತೇ? ಅಥವಾ ವೈದ್ಯರು ಇನ್ನಷ್ಟು ಕಾಳಜಿ ವಹಿಸಬೇಕಿತ್ತೇ? ಮತ್ತೆ ಅದೇ ಪ್ರಶ್ನೆ. ಸಾವು ಎಂದರೆ ಏನು ಮತ್ತೆ? ವಿಧಿಲಿಖಿತ ಎಂದರೆ ಏನು ಮತ್ತೆ? ಎರಡರ ನಡುವೆ ದ್ವಂದ್ವ ಇದೆಯೇ? ಎಲ್ಲ ಧರ್ಮಗಳು, ಸಂತರು ಹುಡುಕಲು ಹೊರಟ ಪ್ರಶ್ನೆಯೇ ಇದು? ಅವರಿಗೆ ಉತ್ತರ ಸಿಕ್ಕಿದೆಯೇ? ಮನಸ್ಸಿಗೆ ಏನೋ ತಲ್ಲಣ. ಆ ಐದು ಜನ ಸಾಯಬಾರದಿತ್ತು ಎಂದು ಮತ್ತೆ ಮತ್ತೆ ಅನಿಸುತ್ತಿದೆ. ಆದರೆ, ಅಲ್ಲಿ ಅವರಷ್ಟೇ ಸಾಯಲಿಲ್ಲ. ಎಷ್ಟು ಜನ ಸತ್ತರೋ? ಲೆಕ್ಕವೇ ಇಲ್ಲ. ಅವರೆಲ್ಲರ ಸಾವಿಗೆ ಅವರೇ ಕಾರಣರಾಗಿದ್ದರೇ? ಅಥವಾ ನಿಸರ್ಗ ಅವರ ಮೇಲೆ ಸೇಡು ತೀರಿಸಿಕೊಂಡಿತೇ? ಯಾರದೋ ತಪ್ಪಿಗೆ ಯಾರದೋ ಮೇಲೆ ಸೇಡು ತೀರಿಸಿಕೊಳ್ಳಬಹುದೇ? ಮತ್ತೆ ನಿಸರ್ಗ ನ್ಯಾಯ ಎಂಬುದು ಒಂದು ಇರುತ್ತದೆ ಎಂದು ಹೇಳುತ್ತಾರಲ್ಲ? ಸತ್ತೇ ಹೋದ ಮೇಲೆ ಮುಗಿಯಿತಲ್ಲ? ಇನ್ನೆಲ್ಲಿಯ ನ್ಯಾಯ?

7.7.2013

# ಚೂರುಪಾರು ಪ್ರೀತಿಗೆ

# ಹಂಬಲಿಸುವ ಮನ...

ಸಿನಿಮಾ ಮುಗಿಯುವುದನ್ನೇ ಅವರೆಲ್ಲ ಕಾಯುತ್ತ ಇದ್ದಂತೆ ಇತ್ತು. ಮುಂದಿನ ಸಾಲಿನಲ್ಲಿ “ ಕುಳಿತಿದ್ದ ಮರಾಠಿಯ ಪ್ರಖ್ಯಾತ ನಟ ಮತ್ತು ನಿರ್ದೇಶಕ ಡಾ.ಮೋಹನ ಅಗಾಶೆ ಅವರಿಗೆ ಎಲ್ಲರೂ ಮುತ್ತಿಗೆ ಹಾಕಿದರು. ಎಲ್ಲರೂ ಅವರಿಗೆ ಅಭಿನಂದನೆ ಹೇಳುವವರೇ. ಕೆಲವರು ಅವರ ಕಾಲಿಗೆ ನಮಸ್ಕಾರ ಮಾಡಿದರು. ಕೆಲವರು ಕೈ ಕುಲುಕಿದರು. ಎಲ್ಲರ ಕಣ್ಣು ಒದ್ದೆಯಾಗಿದ್ದುವು. ಕೆಲವರ ಕಣ್ಣಲ್ಲಿ ಧಾರಾಕಾರ ನೀರು ಹರಿಯುತ್ತಿತ್ತು. ಕೊನೆಯ ದೃಶ್ಯದ ವರೆಗೆ ನನ್ನ ಕಣ್ಣಲ್ಲಿಯೂ ಕಾದು ಕುಳಿತಂತೆ ಇದ್ದ ನೀರು ಕೆನ್ನೆಗುಂಟ ಇಳಿಯಿತು. ನಾನೂ ಅಗಾಶೆ ಅವರ ಕೈ ಕುಲುಕಿ ಒದ್ದೆ ಕಣ್ಣನ್ನು ಒರೆಸಿಕೊಳ್ಳುತ್ತ, 'ತಡವಾಯಿತು' ಎಂದು ಕರೆಯುತ್ತಿದ್ದ ಕಚೇರಿ ಕಡೆಗೆ ಓಡಿ ಬಂದೆ.

ಹೊಸ ವರ್ಷದ ಮೊದಲ ದಿನ ದೂರದ ಚೆನ್ನೈನಿಂದ ಕರೆ ಮಾಡಿದ ಗೆಳೆಯ ಭರತಕುಮಾರ್, 'ಈಗ ಮಧ್ಯಾಹ್ನ 12.30ಕ್ಕೆ ಲಿಡೋದಲ್ಲಿ ಮರಾಠಿಯ 'ಅಸ್ತು' ಸಿನಿಮಾ ಇದೆ. ನೀವು ನೋಡಬೇಕು. ಚಿತ್ರಮಂದಿರಕ್ಕೆ ಹೋಗಿ ನನಗೆ ಫೋನ್ ಮಾಡಬೇಕು' ಎಂದು ಆದೇಶ ಕೊಟ್ಟು ಫೋನ್ ಕಟ್ ಮಾಡಿದರು. ಹೊಸ ವರ್ಷದ ಹ್ಯಾಂಗ್‌ಓವರ್‌ನಿಂದ ನಾನು ಇನ್ನೂ ಹೊರಗೆ ಬಂದಿರಲಿಲ್ಲ! ದಡಬಡಿಸಿ ಎದ್ದು ಚಿತ್ರಮಂದಿರಕ್ಕೆ ದೌಡಾಯಿಸಿದೆ. 123 ನಿಮಿಷದ 'ಅಸ್ತು (So be it) ನೋಡದೇ ಇದ್ದರೆ ನಾನು ಜೀವನದಲ್ಲಿ ಬಹುಮೂಲ್ಯವಾದುದನ್ನು ಕಳೆದುಕೊಳ್ಳುತ್ತಿದ್ದೆ ಎನಿಸಿತು.

ಭಾರತದಲ್ಲಿ ನಡೆದ ಎಲ್ಲ ಅಂತರ ರಾಷ್ಟ್ರೀಯ ಚಲನಚಿತ್ರ ಉತ್ಸವಗಳಲ್ಲಿ ತೆರೆ ಕಂಡಿರುವ 'ಅಸ್ತು' ಚಿತ್ರಕ್ಕೆ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರ ಉತ್ಸವದಲ್ಲಿ ತೀರ್ಪುಗಾರರ ವಿಶೇಷ ಮೆಚ್ಚುಗೆ ಪ್ರಶಸ್ತಿಯೂ ಸಿಕ್ಕಿದೆ. 'ಅಸ್ತು' ಸಿನಿಮಾಕ್ಕೆ ಆರಿಸಿಕೊಂಡಿರುವ ವಸ್ತುವೇ ಅಪರೂಪದ್ದು, ಕಥಾ ನಾಯಕ ಡಾ.ಚಕ್ರಪಾಣಿ ಶಾಸ್ತ್ರಿ ಒಬ್ಬ ದೊಡ್ಡ ಸಂಸ್ಕೃತ ವಿದ್ವಾಂಸ, ವಯಸ್ಸು 70ರ ಆಸುಪಾಸು. ಅವರು ಓರಿಯಂಟಲ್ ರೀಸರ್ಚ್ ಇನ್ಸಿಟ್ಯೂಟ್‌ನ ನಿರ್ದೇಶಕರಾಗಿ ನಿವೃತ್ತರಾಗಿದ್ದಾರೆ. ಈಚೆಗೆ ಅವರಿಗೆ ಮರೆಗುಳಿತನ. ತಮ್ಮ ಹೆಸರನ್ನೂ ಮರೆಯುತ್ತಿದ್ದಾರೆ. ವೈದ್ಯರು ಅದಕ್ಕೆ 'ಅಮರ್' ಎಂದು ಹೆಸರು ಇಟ್ಟಿದ್ದಾರೆ. ಅವರಿಗೆ ಇಬ್ಬರು ಹೆಣ್ಣು ಮಕ್ಕಳು. ಒಬ್ಬಳು ವಿದೇಶದಲ್ಲಿ ಇದ್ದಾಳೆ. ಅವಳ ಹೆಸರು ರಾಹಿ. ಇನ್ನೊಬ್ಬಳು ಇವರು ಇರುವ ಊರಿನಲ್ಲಿಯೇ ಇದ್ದಾಳೆ. ಇವಳ ಹೆಸರು ಇರಾ, ಶಾಸ್ತ್ರಿ ಅವರ ಪತ್ನಿ ತೀರಿಕೊಂಡಿದ್ದಾಳೆ. ಬೇರೆ ಮನೆ ಮಾಡಿಕೊಂಡು ಇರುವ ಶಾಸ್ತ್ರಿ ಅವರನ್ನು ಒಂದು ದಿನ ಬೆಳಿಗ್ಗೆ ತನ್ನ ಮಗಳಿಗೆ ಬಟ್ಟೆ ಖರೀದಿಸಲು ಇರಾ ಕರೆದುಕೊಂಡು ಹೋಗುತ್ತಾಳೆ. ಆಕೆ ಅಂಗಡಿಗೆ ಹೋಗಿ ಬರುವುದರೊಳಗೆ ಶಾಸ್ತ್ರಿಗಳು ಕಾರು ಇಳಿದು ಒಂದು ಆನೆಯ ಬೆನ್ನು ಹತ್ತಿ ಹೊರಟು ಹೋಗುತ್ತಾರೆ. ಇಪ್ಪತ್ತು ಗಂಟೆಗಳ ಕಾಲ ಅವರನ್ನು ಹುಡುಕುವ ಇರಾ ಮತ್ತು ಆಕೆಯ ಕುಟುಂಬದ ಸುತ್ತಲಿನ ಕಥೆ ಇದು.

ಇರಾಗೆ ನೆನಪುಗಳು ಇವೆ. ಶಾಸ್ತ್ರಿಗಳಿಗೆ ನೆನಪಿನ ಶಕ್ತಿ ಕಳೆದು ಹೋಗಿದೆ. ಆನೆಯ ಬೆನ್ನು ಹತ್ತಿ ಹೋದ ಶಾಸ್ತ್ರಿಗಳು ಆನೆ ಸಾಕುವವನ ಕುಟುಂಬದ ಜತೆಗೆ ಕಾಲ ಕಳೆಯುತ್ತಾರೆ. ಇರಾಗೆ ತಂದೆಯ ಬದುಕಿನ ಸುತ್ತಲಿನ ನೆನಪುಗಳು ಬಿಚ್ಚಿಕೊಳ್ಳುತ್ತ ಹೋಗುತ್ತವೆ. ಇದು ಒಂದು ಕಡೆ ಅಪ್ಪ-ಮಗಳ ಕಥೆ. ಇನ್ನೊಂದು ಕಡೆ ತಾಯಿ-ಮಗನ ಕಥೆ, ಶಾಸ್ತ್ರಿಗಳು ಆನೆ ಸಾಕುವವನ ಹೆಂಡತಿಯಲ್ಲಿ ತಾಯಿಯನ್ನು ಕಾಣುತ್ತಾರೆ. ಕನ್ನಡ ಮಾತನಾಡುವ ಈ ಹೆಣ್ಣು ಮಗಳು 'ಅಳಬ್ಯಾಡಾ ನನ ಕಂದಾ, ಹಾಲ ಮಾರಿ ಬರ್ತೇನೆ" ಎಂದು ಹಾಡುವ ಹಾಡು ತನ್ನ ತಂದೆಯ ವಯಸ್ಸಿನ ಶಾಸ್ತ್ರಿಗಳನ್ನು ಕುರಿತೇ ಇದೆ. 'ಅವ್ವ ಅಪ್ಪನನ್ನು ನಾವು ಎಷ್ಟೇ ನೋಡಿಕೊಳ್ಳುತ್ತೇವೆ ಎಂದರೂ ಮಸಣದ ಹಾದಿ ವರೆಗೆ ಮಾತ್ರ' ಎಂದು ಗೊತ್ತಿರುವ ಇರಾ ತನ್ನ ಬೇಜವಾಬ್ದಾರಿಯಿಂದಲೇ ತಂದೆ ತಪ್ಪಿಸಿಕೊಂಡರು ಎಂದು ಅಪರಾಧ ಪ್ರಜ್ಞೆಯಿಂದ ನರಳುತ್ತಾಳೆ.

ತನ್ನ ತಂದೆಯನ್ನು ತನ್ನ ಮನೆಯಲ್ಲಿ ಇಟ್ಟುಕೊಳ್ಳಲು ಆಗದ ಅಪರಾಧ ಭಾವವೂ ಆಕೆಯನ್ನು ಕಾಡುತ್ತ ಇರುತ್ತದೆ. ಕಾಲೇಜಿಗೆ ಹೋಗುವ ಇರಾ ಮಗಳಿಗೂ ವಯೋವೃದ್ಧ ಶಾಸ್ತ್ರಿಗಳಿಗೂ ತಲೆಮಾರುಗಳ ಅಂತರ. ಮರೆಗುಳಿ ತಾತ ಸ್ನಾನದ ಮನೆಗೆ ಹೋಗುವಾಗ ಬಾಗಿಲು ಹಾಕಿಕೊಳ್ಳುವುದಿಲ್ಲ ಮತ್ತು ತನಗೆ ಒತ್ತಾಯ ಮಾಡಿ ಕೇಕ್ ತಿನ್ನಿಸುತ್ತಾನೆ ಎಂದು ಅಮ್ಮನ ಜತೆಗೆ ಆಕೆಗೆ ನಿತ್ಯ ಜಗಳ. ತಂದೆಯನ್ನು ವೃದ್ಧಾಶ್ರಮಕ್ಕೆ ಕಳಿಸಬೇಕು ಎಂದು ಇರಾ ಒಂದೆರಡು ಆಶ್ರಮಗಳಿಗೆ ಹೋಗಿಯೂ ಬರುತ್ತಾಳೆ. ಅಲ್ಲಿನ ಶೋಚನೀಯ ಸ್ಥಿತಿಗತಿ ಕಂಡು ವಾಪಸು ಮನೆಗೆ ಬರುತ್ತಾಳೆ. ಅಲ್ಲಿ ಅಪ್ಪನನ್ನು ಇಡಲಾಗದು ಎಂದು ಆಕೆಗೆ ಗೊತ್ತಾಗುತ್ತದೆ. ಕೊನೆಗೆ ಅಪ್ಪನ ಮನೆಯಲ್ಲಿಯೇ ಒಬ್ಬ ಕೆಲಸದ ಹುಡುಗನನ್ನು ಜತೆ ಮಾಡಿ

ಬಿಟ್ಟು ಬರುತ್ತಾಳೆ. ಆ ಹುಡುಗ ಶಾಸ್ತ್ರಿಗಳ ಮುಖಕ್ಷೌರವೂ ಸೇರಿದಂತೆ ಎಲ್ಲ ಸೇವೆ ಮಾಡುತ್ತಾನೆ. ಆತನಿಗೆ ಅಂದು ಪರೀಕ್ಷೆ ಎಂಬ ಕಾರಣಕ್ಕಾಗಿ ಒಂದು ದಿನದ ಮಟ್ಟಿಗೆ ಶಾಸ್ತ್ರಿಗಳನ್ನು ನೋಡಿಕೊಳ್ಳಬೇಕಿದ್ದ ಇರಾ ತಂದೆಯನ್ನು ಕರೆದುಕೊಂಡೇ ಮಾರುಕಟ್ಟೆಗೆ ಹೋಗುತ್ತಾಳೆ. 'ಐದು ನಿಮಿಷದಲ್ಲಿ ಬರುತ್ತೇನಲ್ಲ' ಎಂದು ಕಾರಿನ ಬಾಗಿಲು ಹಾಕದೆ ಹೋಗಿ ಬಿಡುತ್ತಾಳೆ. ದಾರಿಯಲ್ಲಿ ಆನೆಯನ್ನು ಕಂಡಿದ್ದ ಶಾಸ್ತ್ರಿಗಳು ಕಾರಿನಿಂದ ಇಳಿದು ಹೋದವರು ಅದರ ಹಿಂದೆಯೇ ಹೊರಟು ಬಿಡುತ್ತಾರೆ. ಅವರು ಹೆಚ್ಚ ಕಡಿಮೆ ಈಗ ಮಗುವಿನ ಹಾಗೆಯೇ.ಆಗಾಗ ಅವರ ಬಾಯಿಯಿಂದ ಉದುರುವ ಸಂಸ್ಕೃತ ಶ್ಲೋಕ ಕೇಳಿ ಆನೆ ಸಾಕಿದವನ ಹೆಂಡತಿ ಈತ ಎಲ್ಲಿಯೋ ದೇವಾಂಶ ಸಂಭೂತನೇ ಇರಬೇಕು ಎಂದುಕೊಂಡು ಆತನ ಆರೈಕೆ ಮಾಡುತ್ತಾಳೆ. ಮಗುವಿನ ಹಾಗೆಯೇ ಪೈಜಾಮದಲ್ಲಿ ಮೂತ್ರ ಮಾಡಿಕೊಳ್ಳುವ ಶಾಸ್ತ್ರಿಗಳ ಬಟ್ಟೆಯನ್ನು ಆಕೆ ಬದಲಿಸುತ್ತಾಳೆ. ನಗರದ ಮಗಳು ಇರಾ ತಂದೆಯನ್ನು ಟಬ್‌ನಲ್ಲಿ ಕೂಡ್ರಿಸಿ ಬಟ್ಟೆ ಕೊಟ್ಟು ಹೊರಗೆ ಬಂದಿರುತ್ತಾಳೆ. ಅಜ್ಜ ಬಾಗಿಲು ಹಾಕಿಕೊಳ್ಳುವುದಿಲ್ಲ ಎಂದು ಮೊಮ್ಮಗಳು ಜಗಳ ಮಾಡುತ್ತ ಇರುತ್ತಾಳೆ. ಕಥೆ ಹೀಗೆಯೇ ಸಮಾನಾಂತರವಾಗಿ ಬಿಚ್ಚಿಕೊಳ್ಳುತ್ತ ಸಂಬಂಧಗಳ ಗಟ್ಟಿತನವನ್ನು ಮತ್ತು ಪೊಳ್ಳುತನವನ್ನು ಏಕಕಾಲದಲ್ಲಿಯೇ ಅನಾವರಣ ಮಾಡುತ್ತ ಹೋಗುತ್ತದೆ. ನಗರವಾಸಿಗಳು, ಹಳ್ಳಿವಾಸಿಗಳು, ಸುಶಿಕ್ಷಿತರು, ಅಶಿಕ್ಷಿತರು ಮತ್ತು ಅವರ ಸಂಬಂಧಗಳ ನೆಲೆಗಳೂ ತೆರೆದುಕೊಳ್ಳುತ್ತ ಹೋಗುತ್ತವೆ.

ಇನ್ನೊಂದು ನೆಲೆಯಲ್ಲಿ ಭಾಷೆಯ ದುರಂತ ಸ್ಥಿತಿಯನ್ನೂ ಸಿನಿಮಾ ಧ್ವನಿಸುತ್ತದೆ. ಶಾಸ್ತ್ರಿಗಳ ಮಾತೃಭಾಷೆ ಮರಾಠಿ. ಆದರೆ, ಅವರು ಸಂಸ್ಕೃತದಲ್ಲಿಯೇ ಮಾತನಾಡುವುದು ಹೆಚ್ಚು. ಮರೆಗುಳಿತನ ಅಂಟಿಕೊಂಡ ನಂತರವಂತೂ ಅವರು ಹೇಳುವುದು ಒಂದೋ ಎರಡೋ ಸಂಸ್ಕೃತ ಶ್ಲೋಕಗಳನ್ನು ಮಾತ್ರ ಅವರಿಗೆ ಮಾತೃಭಾಷೆ ಮರೆತೇ ಹೋಗಿದೆ. ಅವರು ಆನೆಗೆ 'ಗಜ' ಎಂದೇ ಕರೆಯುತ್ತಾರೆ. ತಾಯಿಗೆ ಆಯಿ ಅನ್ನುವ ಬದಲು 'ಮಾ' ಎನ್ನುತ್ತಾರೆ. ನೂರೆಂಟು ವಾಹನಗಳು ಗಿಜಿಗಿಡುವ ಮಾರುಕಟ್ಟೆಯಲ್ಲಿ ಈ ಸಂಸ್ಕೃತ ವಿದ್ವಾಂಸ ಆನೆ ಮೇಲೆ ಕುಳಿತು ಹೋದರೂ ಅವರ ವಿದ್ವತ್ತಿಗೆ ಏನೂ ಬೆಲೆ ಇರುವುದಿಲ್ಲ. ನೆನಪಿನಿಂದ ದೂರ ಉಳಿದ ಮನುಷ್ಯದ ದುರಂತದ ಜತೆಗೆ ಜನರಿಂದ ದೂರ ಹೋದ ಭಾಷೆಯ ದುರಂತವೂ ಬಯಲಾಗುತ್ತದೆ.

ಕಳೆದು ಹೋದ ತನ್ನ ತಂದೆಯನ್ನು ಹುಡುಕುತ್ತಲೇ ಬದುಕಿನ ಅರ್ಥವನ್ನೂ ಇರಾ ಶೋಧಿಸುತ್ತಾಳೆ. ತನ್ನ ತಂದೆ ಮತ್ತು ತಾಯಿಯ ನಡುವಿನ ಸಂಬಂಧದಲ್ಲಿನ ಸಂಶಯದ ಬಿರುಕು. ಮತ್ತು ಅದಕ್ಕೆ ತನ್ನ ತಂದೆ ತನ್ನ ಸಹೋದ್ಯೋಗಿ ಜತೆ ಕಾಪಾಡಿಕೊಂಡ 'ರಹಸ್ಯ ಒಪ್ಪಂದ' ಕಾರಣವಾದುದು. ತನ್ನ ತಂಗಿಗೆ ತನ್ನ ತಂದೆಯ ಬಗ್ಗೆ ಅಂಥ ಪ್ರೀತಿಯೇನೂ ಇಲ್ಲದೇ ಇದ್ದುದು. ತನ್ನ ಜೀವನದ ಕೋಟಲೆಗಳು... ಸಿನಿಮಾದ ಕೊನೆಯಲ್ಲಿ ಸಿಗುವ ತಂದೆಯನ್ನು 'ಅಪ್ಪಾ' ಎಂದು ತಬ್ಬಿಕೊಳ್ಳಲು ಹೋಗುವ ಮಗಳು. ಅದುವರೆಗೆ ತನ್ನನ್ನು ಸಾಕಿ ಸಲುಹಿದ ಹಳ್ಳಿಯ ಕನ್ನಡದ ಹೆಣ್ಣುಮಗಳನ್ನು 'ಅಬ್ಬಾ' ಎಂದು ತಬ್ಬಿಕೊಳ್ಳಲು ಹೋಗುವ ತಂದೆ... ಅಂತಿಮವಾಗಿ ಜೀವನದಲ್ಲಿ ಎಲ್ಲರೂ ಹಂಬಲಿಸುವುದು ಚೂರುಪಾರು ಪ್ರೀತಿಗಾಗಿ ಮಾತ್ರ ಎಂದು ಸಿನಿಮಾ ಹೇಳುವಂತೆ ಕಾಣುತ್ತದೆ.

ಸ್ವತಃ ಮನಃಶಾಸ್ತ್ರಜ್ಞರಾದ ಡಾ.ಮೋಹನ ಅಗಾಶೆ ಮತ್ತು ಇರಾವತಿ ಹರ್ಷ ತಂದೆ ಮಗಳ ಪಾತ್ರದಲ್ಲಿ ಇಡೀ ಸಿನಿಮಾವನ್ನು ಆವರಿಸಿದ್ದಾರೆ. ನಮ್ಮ ಎಲ್ಲ ಆಂತರಿಕ ತುಮುಲಗಳನ್ನು ಇರಾವತಿ ಅತ್ಯಂತ ಸಹಜ ಎನ್ನುವಂತೆ ಅಭಿವ್ಯಕ್ತಿ ಮಾಡಿದ್ದಾರೆ. ಅಗಾಶೆ ಒಬ್ಬ ಅಂತರರಾಷ್ಟ್ರೀಯ ಮಟ್ಟದ ನಟ. ಅವರು ಪಾತ್ರವನ್ನು ಅಭಿನಯಿಸಿದ್ದಾರೆಯೇ ಅಥವಾ ಬದುಕಿದ್ದಾರೆಯೇ ಎಂದು ಹೇಳುವುದು ಕಷ್ಟ. ಯಾವ ಗ್ಲಾಮರ್, ಮೆಲೋಡ್ರಾಮಾ ಇಲ್ಲದೆ, ಕೈಯಲ್ಲಿ ಹಿಡಿದುಕೊಳ್ಳುವ ಕ್ಯಾಮರಾದಿಂದಲೇ ಇಡೀ ಸಿನಿಮಾ ಸೂಟ್ ಮಾಡಿರುವ ನಿರ್ದೇಶಕರಾದ ಸುಮಿತ್ರಾ ಭಾವೆ ಮತ್ತು ಸುನಿಲ್ ಸುಖಂಕರ್ 'ಅಸ್ತು' ಚಿತ್ರದ ಮೂಲಕ ಒಂದು ಸಾರ್ಥಕ ಅನುಭವವನ್ನು ಕಟ್ಟಿಕೊಟ್ಟಿದ್ದಾರೆ... ಯಾರಿಗೆ ಕೃತಜ್ಞತೆ ಹೇಳಲಿ? ಸಿನಿಮಾ ನೋಡು ಎಂದು ಹೇಳಿದ ದೂರದ ಗೆಳೆಯನಿಗೇ? ಇರಾಳಿಗೇ? ಶಾಸ್ತ್ರಿಗಳಿಗೇ?...ಅಥವಾ ನನ್ನ ಅವ್ವನಂತೆ “ಅಳಬ್ಯಾಡಾ ನನ ಕಂದಾ...' ಎಂದು ಹಾಡಿದ ಆ ಕನ್ನಡದ ಹೆಣ್ಣು ಮಗಳಿಗೇ?

05.01.2014

# ಬೆಳಕು ಇಲ್ಲದ ದಿನಗಳಲ್ಲಿ

# ಕನಸುಗಳ ಬೆನ್ನು ಹತ್ತಿ...

ಕನಸುಗಳನ್ನು ಕಾಣದೇ ಬದುಕುವುದು ಕಷ್ಟ. ಆದರೆ, ಕನಸು ಕೇಳುವ ಬೆಲೆ ದೊಡ್ಡದು. ಆ ದಂಪತಿಗೆ ದೊಡ್ಡ ಕನಸೇನೂ ಇರಲಿಲ್ಲ. ಅವರೂ ನಮ್ಮ ನಿಮ್ಮೆಲ್ಲರ ಹಾಗೆ ಹುಲು ಮಾನವರು. ಒಂದು ಪುಟ್ಟ ಮನೆ ಕಟ್ಟಬೇಕು ಎಂದುಕೊಂಡರು. ಅದು ದೊಡ್ಡದಾಗಿರಬೇಕು ಎಂದೂ ಬಯಸಿದರು! ಅದರ ಸುತ್ತ ಒಂದು ತೋಟ ಇರಲಿ ಎಂದರು. ತೋಟದ ತುಂಬೆಲ್ಲ ಕನಸುಗಳ ಹೂಗಳು ಹಾಸಿರಲಿ ಎಂದು ಹಾರೈಸಿದರು.

ಇದು ದೊಡ್ಡ ಕನಸೇ? ಬೆಲೆ ಕೇಳುವ ಕನಸೇ? ಆದರೆ ಆ ಅಮಾಯಕ ದಂಪತಿ ಬಹುದೊಡ್ಡ ಬೆಲೆ ಕೊಟ್ಟರು. ನಾವೆಲ್ಲ ಕೊಡುತ್ತಿರುವ ಹಾಗೆ, ರಾಜಿ ಇಲ್ಲದೆ ಕನಸುಗಳು ನನಸು ಆಗುವುದು ಸಾಧ್ಯವಿಲ್ಲವೇ? ಭ್ರಷ್ಟರಾಗದೆ ಬದುಕುವುದು ಸಾಧ್ಯವೇ ಇಲ್ಲವೇ?... ನಮ್ಮ ಎಲ್ಲರ ಒಳಗೂ ಒಬ್ಬ ನಾಜೂಕಯ್ಯ ಇದ್ದೇ ಇರುತ್ತಾನೆಯೇ? ಪ್ರಾಮಾಣಿಕರು ಎಂದು ಹೇಳಿಕೊಳ್ಳುತ್ತಲೇ ನಾವು ಅಪ್ರಾಮಾಣಿಕರಾಗಲು ಹೊರಟಿರುತ್ತೇವೆಯೇ? ಅಥವಾ ಪರಿಸ್ಥಿತಿ ನಮ್ಮನ್ನು ಅಬ್ಬಕ ಮಾಡುತ್ತ, ಸಡಿಲ ಮಾಡುತ್ತ ಹೋಗುತ್ತದೆಯೇ? ಟಿ.ಎನ್.ಸೀತಾರಾಮ್ 'ನಮ್ಮೊಳಗೊಬ್ಬ ನಾಜೂಕಯ್ಯ' ನಾಟಕ ಬರೆದು ಕಾಲು ಶತಮಾನವೇ ಆಯಿತು. 14 ವರ್ಷಗಳ ಹಿಂದೆ ಈ ನಾಟಕ ಕೊನೆಯದಾಗಿ ರಂಗದ ಮೇಲೆ ಅಭಿನಯಗೊಂಡಿತ್ತು. ಕಳೆದ ವಾರ ರವೀಂದ್ರ ಕಲಾಕ್ಷೇತ್ರದಲ್ಲಿ ಮತ್ತೆ ನಟರಂಗ ತಂಡದವರು ಈ ನಾಟಕ ಆಡಿದರು. ಸೀತಾರಾಮ್ ಮುಖ್ಯ ಭೂಮಿಕೆಯಲ್ಲಿ ಇದ್ದರು.

ಈ ನಾಟಕ ಬರೆದಾಗ ಸೀತಾರಾಮ್ ಏನೂ ಆಗಿರಲಿಲ್ಲ. ಒಂದು ಸಣ್ಣ ಕೈಗಾರಿಕೆ ಸ್ಥಾಪಿಸಿ ಎಂಥದೋ ಒಂದು ಬ್ಯಾಟರಿ ತಯಾರಿಸಿ ಅದನ್ನು ಸರ್ಕಾರಕ್ಕೆ ಮಾರಬೇಕು ಎಂದುಕೊಂಡಿದ್ದರು. ಆಗ ಸರ್ಕಾರದಲ್ಲಿ ಎಡಪಂಥೀಯ ವಾದವನ್ನು ನೆಚ್ಚಿಕೊಂಡಿದ್ದವರೇ ಕೈಗಾರಿಕೆ ಸಚಿವರು ಆಗಿದ್ದರು. ತಾನು ತಯಾರಿಸಿದ ಬ್ಯಾಟರಿ ಮಾರಲು ಸೀತಾರಾಮ್ ಪಟ್ಟ ಪಡಿಪಾಟಲು ಅಷ್ಟಿಷ್ಟು ಅಲ್ಲ. ತಮ್ಮ ಗೆಳೆಯರೇ ಆಗಿದ್ದ, ಒಂದು ಕಾಲದಲ್ಲಿ ರಾಯ್ ವಾದಿಯೋ, ಮಾರ್ಕ್ಸ್ ವಾದಿಯೋ ಆಗಿದ್ದ ಕೈಗಾರಿಕೆ ಸಚಿವರು ಅದೇ ಬ್ಯಾಟರಿ ಮಾರಲು ಬಂದ ಉದ್ಯಮಿಯನ್ನು ಓಲೈಸಿದರು, ಒಂದು ಕಾಲದ ಗೆಳೆಯನನ್ನು ತಿರಸ್ಕರಿಸಿದರು; ಸಣ್ಣ ಕೈಗಾರಿಕೆಗಳಿಗೆ ಮಣೆ ಹಾಕಬೇಕು ಎಂಬ ಸರ್ಕಾರದ ನೀತಿಯನ್ನೂ ಕಸದ ಬುಟ್ಟಿಗೆ ಹಾಕಿದರು.

ಇದು ಕಥೆ ಎಂದರೆ ಕಥೆ, ನಿಜ ಎಂದರೆ ನಿಜ. ಕಥೆ ಮತ್ತೆ ಮತ್ತೆ ಪುನರಾವರ್ತನೆ ಆಗುತ್ತದೆ. ಆ ಮೂಲಕ ನಿಜವೂ ಪುನರಾವರ್ತನೆ ಆಗುತ್ತದೆ. 'ನಾಜೂಕಯ್ಯ' ನಾಟಕದಲ್ಲಿ ಶಿವಪ್ರಸಾದ್ ಎಂಬ ಪ್ರಾಮಾಣಿಕ ಎಂಜಿನಿಯ ರಹಸ್ಯಗಳನ್ನು ಭೇದಿಸುವ ಉಪಕರಣವೊಂದನ್ನು ತಯಾರಿಸಿ ರಕ್ಷಣಾ ಇಲಾಖೆಗೆ ಮಾರಲು ಬಯಸುತ್ತಾನೆ. ಅದು ಇದುವರೆಗೆ ವಿದೇಶದಿಂದ ಆಮದು ಆಗುತ್ತಿದ್ದ ಉಪಕರಣ. ಆಮದು ಮಾಡಿ ಮಾರುವ ಉದ್ಯಮಿಗಳಿಗೆ ಅದು ಸಾವಿರಾರು ಕೋಟಿ ರೂಪಾಯಿಗಳ ವಹಿವಾಟು. ಈತ ಕೇವಲ ಅರವತ್ತು ಎಪ್ಪತ್ತು ಲಕ್ಷ ರೂಪಾಯಿಗೆ ಅದೇ ಉಪಕರಣವನ್ನು ಮಾರಲು ಮುಂದಾಗುತ್ತಾನೆ. ಹಿತಾಸಕ್ತಿಗಳ ಸಂಘರ್ಷ ಶುರುವಾಗುತ್ತದೆ. ಆತ ಒಬ್ಬ ಫ್ರೀಲಾನ್ಸ್ ಪತ್ರಕರ್ತನೂ ಆಗಿರುತ್ತಾನೆ. ನಿರ್ಭಿಡೆಯಿಂದ ಪತ್ರಿಕೆಗಳಿಗೆ ಬರೆಯುತ್ತ ಇರುತ್ತಾನೆ. ಸಾವಿರಾರು ಕೋಟಿ ರೂಪಾಯಿ ವಹಿವಾಟು ಮಾಡುವ ಉದ್ಯಮಿಯ ವಿರುದ್ಧವೂ ಬರೆದಿರುತ್ತಾನೆ.

ಅಷ್ಟೇ ಸಾಕಾಗುತ್ತದೆ. ಇಡೀ ವ್ಯವಸ್ಥೆ ಆತನ ಬೇಟೆಯಾಡಲು ಶುರು ಮಾಡುತ್ತದೆ. ಎಲ್ಲರೂ ಅವನ ವಿರುದ್ಧ ನಿಲ್ಲುತ್ತಾರೆ. ಪ್ರಾಮಾಣಿಕತೆಯನ್ನು ಉಸಿರು ಎನ್ನುವಂತೆ ಬಾಳಿದ್ದ, ನಿಷ್ಠುರತೆಯನ್ನು, ರಾಜಿಯಾಗದ ಸ್ವಭಾವವನ್ನು ಸಹಜ ಎನ್ನುವಂತೆ ಅನುಸರಿಸಿಕೊಂಡು ಬಂದಿದ್ದ ಶಿವಪ್ರಸಾದ್ ಬಾಗಲು ತೊಡಗುತ್ತಾನೆ. ಪುಟ್ಟ ಕೈಗಾರಿಕೆಯ ಆರಂಭಕ್ಕಾಗಿ ಅಡವು ಇಟ್ಟಿದ್ದ ಹೊಲ, ಅದರ ಮೇಲೆ ಬೆಳೆಯುತ್ತಿದ್ದ ಬಡ್ಡಿ, ಚಕ್ರಬಡ್ಡಿ, ಸುಸ್ತಿ ಬಡ್ಡಿ, ಊರಿನಲ್ಲಿ ಮದುವೆಗಾಗಿ ಕಾಯುತ್ತಿದ್ದ ತಂಗಿ, ತಂಗಿಯ ಮದುವೆ ಯಾವಾಗ ಮಾಡುತ್ತಿ ಎಂದು ಮತ್ತೆ ಮತ್ತೆ ತಲೆ ತಿನ್ನುತ್ತಿದ್ದ ತಾಯಿಯ ಒತ್ತಡ ಒಂದು ಕಡೆ. ಕಷ್ಟಪಟ್ಟು ತಯಾರು ಮಾಡಿದ ಅತ್ಯುತ್ತಮ ಉಪಕರಣ ಖರೀದಿಸಬೇಕಾದರೆ ತಾನು ಐದು ವರ್ಷದ ಹಿಂದೆ ರಾಜೀನಾಮೆ ಕೊಟ್ಟಿದ್ದ ಇಲಾಖೆಯಿಂದ 'ಕ್ಲಿಯರೆನ್ಸ್' ತರಬೇಕಾಗುತ್ತದೆ ಎಂಬ ಆಗ್ರಹ ಇನ್ನೊಂದು ಕಡೆ, ಶಿವಪ್ರಸಾದ್ ನಂಬಿದ ಯಾವ ಮೌಲ್ಯಗಳೂ ಅವನ ನೆರವಿಗೆ ಬರುವುದಿಲ್ಲ. ಇನ್ನೇನು ಅವನನ್ನು ಜೈಲಿಗೆ ತಳ್ಳಬಹುದು ಎನ್ನುವಂಥ ಸಂದರ್ಭವನ್ನು ವ್ಯವಸ್ಥೆ ನಿರ್ಮಿಸಿಬಿಡುತ್ತದೆ. ಕಾನೂನು ಮತ್ತು ನ್ಯಾಯದ ನಡುವೆ ತುಯ್ದಾಡುವ ತಕ್ಕಡಿ ಕಾನೂನಿನ ಕಡೆಗೆ ವಾಲುವಂತೆ ಕಾಣುತ್ತದೆ! ಭ್ರಷ್ಟರು, ಕೊಳಕರು ಎನಿಸಿದಂಥ ವ್ಯಕ್ತಿಗಳ ಕೈ

ಕುಲುಕಲೂ ಹೇಸುತ್ತಿದ್ದ ಶಿವಪ್ರಸಾದ್ ಅದೇ ವ್ಯಕ್ತಿಯ ಕೈ ಕುಲುಕುವುದು ಮಾತ್ರವಲ್ಲ ಆತನ ಹೂಗಳನ್ನು ತನ್ನ ಕೈಯಿಂದಲೇ ಎತ್ತಿ ಕೊಡಬೇಕಾಗುತ್ತದೆ.

ಈ ವ್ಯಕ್ತಿ ಅಧ್ಯಕ್ಷನಾಗಿರುವ ಸಂಸ್ಥೆಯಲ್ಲಿ ಶಿವಪ್ರಸಾದನ ಹೆಂಡತಿ ಮಾಲತಿ ಶಿಕ್ಷಕಿಯಾಗಿ ಕೆಲಸ ಮಾಡುತ್ತ ಇರುತ್ತಾಳೆ. ಅಧ್ಯಕ್ಷನಾದ ವ್ಯಕ್ತಿ ಮಾಲತಿಗೆ ಐದು ಸಾವಿರ ರೂಪಾಯಿ ಸಂಬಳ ಹೆಚ್ಚು ಮಾಡುತ್ತಾನೆ. ತನ್ನ ಹೆಂಡತಿ ಸೂಳೆಗಿರಿ ಮಾಡಿ ಸಂಬಳ ಹೆಚ್ಚು ಮಾಡಿ- ಕೊಂಡಳು ಎಂದು ಶಿವಪ್ರಸಾದ್ ಚುಚ್ಚುತ್ತಾನೆ. ಮುಂದೆ ತನ್ನ ಉಪಕರಣದ ಮಾರಾಟಕ್ಕೆ ಕ್ಲಿಯರೆನ್ಸ್ ಪಡೆಯಲು ತನ್ನ ಹೆಂಡತಿಯನ್ನು ಉಪಮುಖ್ಯಮಂತ್ರಿ ಜತೆಗೆ ಕಾಶ್ಮೀರಕ್ಕೆ ಕಳುಹಿಸಿಕೊಡಲು ಇದೇ ಶಿವಪ್ರಸಾದ್ ಒಪ್ಪುತ್ತಾನೆ. ನೀವು ತುಂಬಾ 'ಮಡೀನಾ' ಎಂದು ಕೇಳುವ ಉಪಮುಖ್ಯಮಂತ್ರಿಗೆ ಆತ ಉತ್ತರ ಕೊಡುವುದಿಲ್ಲ.

ಪತ್ರಿಕೆಯಲ್ಲಿ ತಾನು ನಿರಂತರವಾಗಿ ಟೀಕಿಸಿದ ಉದ್ಯಮಿಯ ಬಗ್ಗೆ ಹೊಗಳಿ ಬರೆಯಲು ಸಿದ್ಧನಾಗುತ್ತಾನೆ. ಅವನು ತನ್ನ ವೈಯಕ್ತಿಕ ಜೀವನದ ನೆಲೆಯಲ್ಲಿ ಮಾತ್ರವಲ್ಲ ವೈಚಾರಿಕ ನಿಲುವಿನ ನೆಲೆಯಲ್ಲಿಯೂ ಭ್ರಷ್ಟನಾಗಲು ಸಿದ್ಧನಾಗುತ್ತಾನೆ. ವ್ಯವಸ್ಥೆ ಎನ್ನುವುದು ಎಷ್ಟು ಕ್ರೂರ, ಅದನ್ನು ಎದುರಿಸುವುದು ಎಷ್ಟು ಕಷ್ಟ ಎಂದು ಅರ್ಥ ಆಗುವುದರೊಂದಿಗೆ ನಾಟಕ ಮು- ಗಿಯುತ್ತದೆ. ನಮ್ಮೊಳಗಿನ ಭಗ್ನ ಕನಸುಗಳು ಎದುರುಗೊಂಡು ಗಾಢ ವಿಷಾದ ಮನಸ್ಸನ್ನು ಆವರಿಸುತ್ತದೆ. ಮೊನ್ನೆ ಹನುಮಂತನಗರದ ರಂಗ ಮಂದಿರದಲ್ಲಿ ಈ ನಾಟಕ ನೋಡಿದ ಒಬ್ಬ ಯುವತಿ, Thate you for this drama' ಎಂದು ಸೀತಾರಾಮ್‌ಗೆ ಎಸ್‌ಎಂಎಸ್ ಕಳಿಸಿದರಂತೆ. ನಿಜ, ನಾಟಕ ನಮ್ಮನ್ನು ತುಂಬ ಅಸ್ವಸ್ಥಗೊಳಿಸುತ್ತದೆ. ಮನಸ್ಸು 'ಡಿಸ್ಟರ್ಬ್' ಆಗುತ್ತದೆ.

ರವೀಂದ್ರ ಕಲಾಕ್ಷೇತ್ರದಲ್ಲಿ ಡಿಸೆಂಬರ್ ಆರನೇ ತಾರೀಖು ಈ ನಾಟಕ ಪ್ರದರ್ಶನಗೊಂಡಾಗ ನಾನೂ ನೋಡಲು ಹೋಗಿದ್ದೆ. ಕಲಾಕ್ಷೇತ್ರದಲ್ಲಿ ಅಷ್ಟು ಜನರನ್ನು ನಾನು ಎಂದೂ ನೋಡಿರಲಿಲ್ಲ. ನಾಟಕ ಆಡಿದ ನಟರಂಗ ತಂಡದ ಸ್ಥಾಪಕ ಕಾರ್ಯದರ್ಶಿ ಕಪ್ಪಣ್ಣ ನನಗೆ ಒಂದಿಷ್ಟು ಜಾಗ ಕಾದಿರಿಸಿದ್ದರು ಎಂದು ನಾನು ಕುಳಿತುಕೊಳ್ಳಲು ಸಾಧ್ಯವಾಯಿತು. ಕೆಳಗಿನ ರಂಗ ಮಂದಿರ ಭರ್ತಿಯಾಗಿ ಬಾಲ್ಕನಿ ಕಡೆಗೆ ತಂಡ ತಂಡವಾಗಿ ಹೋಗುತ್ತಿದ್ದ ಪ್ರೇಕ್ಷಕರನ್ನು ಕಂಡು ಅವರಿಗೂ ದಿಗ್ಭ್ರಮೆ. ಯಾರಿಗೂ ಟಿಕೆಟ್ ಕೊಡಲೂ ಸಾಧ್ಯವಿರಲಿಲ್ಲ, ಅವರು ತೆಗೆದುಕೊಳ್ಳಲೂ ಸಾಧ್ಯವಿರಲಿಲ್ಲ. ನಾಟಕ ಶುರುವಾಗುವ ವೇಳೆಗೆ ಕಲಾಕ್ಷೇತ್ರದ ಮೆಟ್ಟಿಲುಗಳ ಮೇಲೆಯೂ ಕುಳಿತುಕೊಳ್ಳಲು ಜಾಗವಿರಲಿಲ್ಲ. ಜನ ಸಿಕ್ಕ ಸಿಕ್ಕ ಕಡೆಗಳಲ್ಲಿ ತಳವೂರಿ, ನಿಂತು ನಾಟಕ ನೋಡಿದರು.

14 ವರ್ಷಗಳ ಹಿಂದೆ ಈ ನಾಟಕ ಆಡಿದಾಗ ಸೀತಾರಾಮ್ ಈಗಿನ ಹಾಗೆ ತಾರೆಯಾಗಿರಲಿಲ್ಲ. ಅವರು ಬರೀ ನಾಟಕಕಾರ ಮಾತ್ರ ಆಗಿದ್ದರು. ಈಗ ಅವರು ಹೋದ ಬಂದಲ್ಲೆಲ್ಲ ಜನ ಸೇರುತ್ತಾರೆ. ನಾಟಕದಲ್ಲಿ ಅವರು ಮೊದಲ ಬಾರಿಗೆ ರಂಗ ಪ್ರವೇಶಿಸಿದಾಗ ಚಪ್ಪಾಳೆ ಬಿದ್ದುದು ಅದಕ್ಕೆ ನಿದರ್ಶನ. ಆದರೆ, ನಾಟಕದ ಪರಿಣಾಮಕ್ಕೂ ಅವರು ಟೀವಿಯ ತಾರೆಯಾಗಿದ್ದುದಕ್ಕೂ ಏನೇನೂ ಸಂಬಂಧವಿಲ್ಲ. ಮೊನ್ನೆಯಷ್ಟೇ ಕುಳಿತುಕೊಂಡು ಆ

ನಾಟಕವನ್ನು ಮತ್ತೆ ಓದಿದೆ. ಶುರು ಮಾಡಿದ ಮೇಲೆ ಮುಗಿಯುವವರೆಗೂ ಬಿಡಲು ಆಗಲಿಲ್ಲ. ಅಚ್ಚರಿ ಎನಿಸಿತು: ಈಗಿನ ಕಾರ್ಪೊರೇಟ್ ಜಗತ್ತಿನಲ್ಲಿ, ಮಾಧ್ಯಮ ಕ್ಷೇತ್ರದಲ್ಲಿ ಏನೆಲ್ಲ ಆಗುತ್ತಿದೆಯೋ ಅದನ್ನೆಲ್ಲ ಅವರು ಆಗಲೇ ಬರೆದಿದ್ದಾರೆ!

ನಾಟಕದಲ್ಲಿ ಸೀತಾರಾಮ್ ಅವರಿಗೇ ಸಾಧ್ಯವಾಗುವ ಒಂದು ಕ್ಷಣ ಚಾಟಿ ಎನಿಸುವಂಥ, ಇನ್ನೊಂದು ಕ್ಷಣ ಅಸಂಗತ ಎನಿಸುವಂಥ, ಮತ್ತೊಂದು ಕ್ಷಣ ತದ್ವಿರುದ್ಧ ಎನಿಸುವಂಥ ಸಂಭಾಷಣೆಗಳು ಇವೆ. ಅವರು ವ್ಯವಸ್ಥೆಯ ವಿರುದ್ಧ ಸಿಟ್ಟು ತರಿಸುವುದಕ್ಕಿಂತ ವಿಷಾದ ಮೂಡಿಸುತ್ತಾರೆ. ಭ್ರಷ್ಟಾಚಾರದ ಬಗ್ಗೆ ಮಾಸ್ಟರ್ ಹಿರಣ್ಣಯ್ಯ ಅವರು ಆಡಿದ 'ಲಂಚಾವತಾರ' ನಾಟಕದ ಪ್ರದರ್ಶನಗಳ ಲೆಕ್ಕವಿಟ್ಟವರು ಇಲ್ಲ. ಆದರೆ, ಹಿರಣ್ಣಯ್ಯ ಹಾಸ್ಯ ನಾಟಕಕಾರ ಎನಿಸಿಬಿಟ್ಟರು. ಅವರು ಧೈರ್ಯವಂತ ನಾಟಕಕಾರ. ಯಾವ ಮುಖ್ಯಮಂತ್ರಿಯನ್ನೂ ಅವರು ಟೀಕಿಸದೇ ಬಿಟ್ಟವರು ಅಲ್ಲ.

ಆದರೆ, ಅವರ ಟೀಕೆ ವಾಚ್ಯವಾಗಿ ಬಿಡುತ್ತಿತ್ತು. ಅವರ ಸಂಭಾಷಣೆಗಳಿಗೆ ಅರ್ಥವಿಸ್ತಾರ ಸಿಗುತ್ತಿರಲಿಲ್ಲ. ಜನ ನಕ್ಕು ಸುಮ್ಮನಾಗುತ್ತಿದ್ದರು. ಅಥವಾ ರಂಜನೆಗಾಗಿ ಅವರ ನಾಟಕ ನೋಡಲು ಹೋಗುತ್ತಿದ್ದರು. ಸೀತಾರಾಮ್ ಕೂಡ ಅದೇ ವಸ್ತುವನ್ನು ಈ ನಾಟಕದಲ್ಲಿ ನಿರ್ವಹಿಸಿದ್ದಾರೆ. ಜನ ಇಲ್ಲಿಯೂ ನಗುತ್ತಾರೆ. ಚಪ್ಪಾಳೆ ತಟ್ಟುತ್ತಾರೆ. ಆದರೆ, ನಾಟಕ ಮು ಗಿಯುವ ವೇಳೆಗೆ ಅವರು ಮೌನವಾಗುತ್ತಾರೆ. ನಾಟಕದ ಸನ್ನಿವೇಶಗಳು, ದೃಶ್ಯಗಳು, ಮಾತುಗಳು ಆಳಕ್ಕೆ ಹೊಕ್ಕು ಪ್ರಶ್ನೆಗಳಾಗಿ ಕಾಡತೊಡಗುತ್ತವೆ. ನಮ್ಮ ಮುಂದೆ ಧುತ್ತೆಂದು ನಿಂತು ಉತ್ತರಕ್ಕೆ ಒತ್ತಾಯಿಸುತ್ತವೆ.

ಕಾರಣ ಏನಾದರೂ ಇರಬಹುದು. 'ನಾಜೂಕಯ್ಯ' ನಾಟಕದ ಪ್ರದರ್ಶನದ ಅದ್ಭುತ ಯಶಸ್ಸು, ಹವ್ಯಾಸಿ ರಂಗಭೂಮಿಯ ಹುಟ್ಟು, ಉಚ್ಛ್ರಾಯ ಮತ್ತು ಅವನತಿಯನ್ನು ಕಂಡಿದ್ದ ರವೀಂದ್ರ ಕಲಾಕ್ಷೇತ್ರಕ್ಕೆ ಐವತ್ತು ವರ್ಷ ತುಂಬಿದ ಈ ಸಂದರ್ಭದಲ್ಲಿ ಮತ್ತೆ ಹೊಸ ಕನಸುಗಳನ್ನು ಹುಟ್ಟು ಹಾಕುವಂತೆ ಕಾಣುತ್ತಿದೆ.

ಬಣ್ಣದ ಟೀವಿಯ ಆಗಮನದೊಂದಿಗೆ ಕಲಾಕ್ಷೇತ್ರದ ರಂಗು ಕಡಿಮೆ ಆಗಿತ್ತು. ಜನರಿಗೆ ಈಗ ಬಣ್ಣದ ಟೀವಿಯ ರಂಗು ಸಾಕು ಅನಿಸುತ್ತಿದೆ. ಜನರು ಮತ್ತೆ ಭ್ರಮಾಲೋಕದಿಂದ ಕನಸುಗಳ ಲೋಕಕ್ಕೆ ಬರಲು ಹಾತೊರೆಯುವಂತೆ ಕಾಣುತ್ತಿದೆ. 'ನಾಜೂಕಯ್ಯ' ನಾಟಕದ ಕೊನೆಯಲ್ಲಿ ನಾಯಕ ಮತ್ತು ನಾಯಕಿ ಕೈ ಹಿಡಿದುಕೊಂಡು 'ದರಿದ್ರ ನಾಯಿಗಳು' ಇಲ್ಲದ ಸ್ವಸ್ಥ ಸಮಾಜದಲ್ಲಿ ಮತ್ತೆ ಒಂದು ಪುಟ್ಟದಾದ ದೊಡ್ಡ ಮನೆಯ, ಅದರ ಸುತ್ತ ತೋಟ ಇರುವ, ಅದರಲ್ಲೆಲ್ಲ ಹೂವಿನಂಥ ಕನಸುಗಳು ಹಾಸಿರುವ ಕನಸು ಕಾಣುತ್ತಾರೆ. ಬೆಳಕು ಇಲ್ಲದ ದಿನಗಳಲ್ಲಿ ಕನಸುಗಳಾದರೂ ಬೇಡವೇ?

15-12-2013

# ಸಾಲು ಸೋಲುಗಳ ನಡುವೆ

# ಸೊಗಸು ಹುಡುಕುತ್ತ...

ಒಂದು ಪಾತ್ರ ನನ್ನನ್ನು ಹೀಗೆ ಕಾಡಿದ್ದು ವಿರಳ. ಆಕೆಯನ್ನು ನೋಡಿ ಬಂದು ಒಂದು ವಾರವೇ ಆಯಿತು. ಮತ್ತೆ ಮತ್ತೆ ಮನದ ಕಿಂಡಿಯಲ್ಲಿ ಬಂದು ನಿಲ್ಲುತ್ತಾಳೆ. ಆಕೆ ನಮ್ಮ ನೆರೆ ಹೊರೆಯ ಹೆಣ್ಣು ಮಗಳು ಆಗಿರಬಹುದು; ಅಥವಾ ನಮ್ಮ ನಿಮ್ಮ ಮನೆಯಲ್ಲಿಯೇ ವಾಸಿಸುತ್ತ ಇರಬಹುದು. ಹೆಗಲ ಮೇಲೆ ಕುಳಿತು ಕತ್ತು ಹಿಸುಕುವ ದೈನಿಕದ ಕೆಲಸ, ನೀರಸ ದಾಂಪತ್ಯ, ನಗರ ಜೀವನದ ಜಂಜಡ, ಅದರ ನಡುವೆ ಎಲ್ಲಿಯೋ ಕೈ ಚಾಚಿ ಕರೆದಂತೆ ಮಾಡುವ ಪ್ರೀತಿಯ ಜಿನುಗು ಸೆಲೆ. ಆ ಸೆಲೆ ಆಕೆಗೆ ಸಿಕ್ಕಿತೇ?... ಆಕೆಯ ಹೆಸರು ಇಳಾ, ಎಲ್ಲಿಯೋ ಕೇಳಿದಂತೆ ಇದೆಯೇ?

ಆಕೆ, ಮಧ್ಯಮ ಅಥವಾ ಕೆಳಮಧ್ಯಮವರ್ಗದ ಹೆಣ್ಣುಮಗಳು. ಕಿಷ್ಕಂಧೆಯಂಥ ಪುಟ್ಟ ಮನೆ. ಮುಂದಲೆಯ ಎರಡೂ ಕಡೆ ಕೂದಲು ಇಳಿ ಬಿದ್ದಿದೆ. ಧರಿಸಿದ ವಸ್ತ್ರ ಅಸ್ತವ್ಯಸ್ತ. ಅದನ್ನು ಆಕೆ ಕೊನೆಯ ವರೆಗೂ ಬದಲಿಸಲು ಆಗುವುದೇ ಇಲ್ಲ. ಅಥವಾ ಅಂಥದನ್ನೇ ಮತ್ತೆ ಮತ್ತೆ ಹಾಕುತ್ತ ಇರುತ್ತಾಳೆ. ಅಂಥ ಅಂದಗಾತಿಯೇನೂ ಅಲ್ಲ. ಆದರೆ, ಎಲ್ಲ ಹೆಣ್ಣು ಮಕ್ಕಳಲ್ಲಿ ಇರುವ ಸೌಂದರ್ಯ ಅವಳಲ್ಲಿಯೂ ಇದೆ. ಗಂಡ ಎದ್ದು ಯಾವಾಗಲೋ ಕಚೇರಿಗೆ ಹೋಗಿದ್ದಾನೆ. ಒಬ್ಬಳೇ ಪುಟ್ಟ ಮಗಳು. ಆಕೆಯನ್ನು ಶಾಲೆಗೆ ಸಿದ್ಧ ಮಾಡಬೇಕು. ಕೆಳಗೆ ಆಕೆಯನ್ನು ಕರೆದುಕೊಂಡು ಹೋಗಲು ಬಂದ ಆಟೊ ಚಾಲಕ ಕಿರಿಚುತ್ತಿದ್ದಾನೆ. ಅವನು ಹೋದ ಎನ್ನುತ್ತಿದ್ದಂತೆಯೇ ಗಂಡನಿಗೆ ಊಟದ ಡಬ್ಬಿ ತೆಗೆದುಕೊಂಡು ಹೋಗುವ ಡಬ್ಬಾವಾಲಾ ಬಂದು ಸೈಕಲ್ ಗಂಟೆ ಬಾರಿಸುತ್ತ ನಿಲ್ಲುತ್ತಾನೆ. ಗಂಡನಿಗೆ ಏನೋ ಬೇಸರ. ಮೊದಲಿನ ಹಾಗೆ ಇಲ್ಲ. ಹತ್ತಿರ ಬಂದು ಪ್ರೀತಿ ಮಾಡಿ ಎಷ್ಟು ದಿನವಾಯಿತೋ? ನಗರ ಜೀವನ ಅವನನ್ನು ಸುಸ್ತು ಮಾಡಿದೆಯೇ? ಇವಳನ್ನು ಸುಸ್ತುಗೊಳಿಸಿದೆಯೇ? ಗಂಡನನ್ನು ಮೆಚ್ಚಿಸಲು ಮನೆ ಮೇಲಿನ ಆಂಟಿಯನ್ನು ಕೇಳಿ ಕೇಳಿ ಅಡುಗೆ ಮಾಡುತ್ತಾಳೆ. ಆದರೆ, ಸಿದ್ಧ ಮಾಡಿದ ಊಟದ ಡಬ್ಬಿ ಆತನ ಬದಲು ಇನ್ನಾರಿಗೋ ಹೋಗಿ ತಲುಪುತ್ತದೆ.

ಈಚಿನ ವರ್ಷಗಳಲ್ಲಿ ಬಂದ ಅತ್ಯಂತ ಅಪರೂಪದ, ಮೃದು, ನವಿರು ಪ್ರೇಮ ಭಾವಗಳನ್ನು ಮೀಟುವ 'ಲಂಚ್ ಬಾಕ್ಸ್' ಸಿನಿಮಾ ತೆರೆದುಕೊಳ್ಳುವ ಬಗೆ ಇದು. ಮುಂಬೈನಲ್ಲಿ ನಿತ್ಯ ಲಕ್ಷಾಂತರ ಜನರಿಗೆ ಊಟದ ಡಬ್ಬಿ ತಲುಪಿಸುವ ಡಬ್ಬಾವಾಲಾಗಳು ತಪ್ಪು ಮಾಡಿದ್ದೇ ಇಲ್ಲ. ಸಿನಿಮಾದಲ್ಲಿ ಹಾಗೆ ಆಗುವುದಿಲ್ಲ. ಸರಿ ಇದ್ದರೆ ಅದು ಸಿನಿಮಾ ಹೇಗೆ ಆಗುತ್ತದೆ? ಊಟದ ಡಬ್ಬಿ ತಲುಪುವುದು ಒಬ್ಬ ವಿಧುರನಿಗೆ. ಆತನ ಹೆಸರು ಸಾಜನ್ ಫರ್ನಾಂಡಿಸ್. ಇನ್ನೇನು ಒಂದು ತಿಂಗಳಲ್ಲಿ ನಿವೃತ್ತನಾಗುತ್ತಿದ್ದಾನೆ. ಹೋಟೆಲ್‌ನಿಂದ ಊಟದ ಡಬ್ಬಿ ತರಿಸಿಕೊಂಡು ತಿನ್ನುವವನಿಗೆ, ತಿಂದು ತಿಂದು ನಾಲಿಗೆಯ ರುಚಿಯನ್ನೇ ಕಳೆದುಕೊಂಡವನಿಗೆ, ಇದ್ದಕ್ಕಿದ್ದಂತೆ ಊಟದ ನಾಲ್ಕೂ ಡಬ್ಬಿಗಳಲ್ಲಿ ಅಡುಗೆ ಮಾತ್ರವಲ್ಲ, ತನ್ನ ಕೋಮಲ ಪ್ರೀತಿಯನ್ನೂ ತುಂಬಿ ಕಳುಹಿಸಿದ ಒಬ್ಬ ಅಮಾಯಕ ಹೆಣ್ಣು ಮಗಳ ಕೈ ಅಡುಗೆಯ ಘಮ, ಅವನ ಜೀವನವನ್ನೇ ಬದಲಿಸಿಬಿಡುತ್ತದೆ. ಅಥವಾ ಬದಲಿಸುವ ಘಟ್ಟಕ್ಕೆ ತಂದು ನಿಲ್ಲಿಸುತ್ತದೆ.

ನಾಲ್ಕೂ ಡಬ್ಬಗಳಲ್ಲಿ ಇರುವ ರಸಗವಳವನ್ನು ತಿಂದು ಡಬ್ಬಿ ಖಾಲಿ ಮಾಡಿ ವಾಪಸು ಕಳಿಸುತ್ತಾನೆ. ಸಂಜೆ ಮನೆಗೆ ಬಂದ ಗಂಡ ರಸಗವಳ ತಿಂದು ಬದಲಾಗಿರುತ್ತಾನೆ ಎಂದುಕೊಂಡರೆ ಆತ ಮೊದಲಿನ ಹಾಗೆಯೇ ಹೆಚ್ಚು ಮುಖದವನೇ ಆಗಿರುತ್ತಾನೆ. ಆತ ತಿಂದುದು ಹೋಟೆಲಿನ ಊಟ! ಹೆಂಡತಿಗೆ ದಿಗ್ಭ್ರಮೆ. ತಾನು ಗಂಡನಿಗೆಂದು ಕಳಿಸಿದ ಊಟವನ್ನು ಉಂಡವರು ಯಾರು? ಊಟ ಮಾಡಿದವನ ಕೃತಘ್ನತೆ ಖಂಡಿಸಿ ಒಂದು ನೋಟ್‌ಬುಕ್ಕಿನ ಹಾಳೆಯಲ್ಲಿ ಚೀಟಿ ಬರೆದು ಇಟ್ಟು ಮತ್ತೆ ಇನ್ನಷ್ಟು ರುಚಿಕಟ್ಟಾಗಿ ಊಟ ಮಾಡಿ ಕಳುಹಿಸಿಕೊಡುತ್ತಾಳೆ. ಹೊಸ ಪ್ರೀತಿ ಚಿಗುರು ಒಡೆಯುವುದು ಹೀಗೆ, ಅದು ಸರಿ ತಪ್ಪುಗಳನ್ನು ಎಣಿಸುವುದಿಲ್ಲ. ಅದು ಮುಂದೆ ಎಲ್ಲಿಗೆ ಹೋಗಿ ತಲುಪಿತು ಎಂಬುದನ್ನೂ ಲೆಕ್ಕಿಸುವುದಿಲ್ಲ. ಸಮಸ್ಯೆ ಏನು ಎಂದರೆ ಅದು ಚಿಗುರು ಒಡೆಯುತ್ತಿದೆ ಎಂದು ಆರಂಭದಲ್ಲಿ ತಿಳಿಯುವುದಿಲ್ಲ. ತಿಳಿದಾಗ ತಡವಾಗಿರುತ್ತದೆ.

ಎಷ್ಟೋ ವರ್ಷಗಳೇ ಆಗಿತ್ತು, ಇಂಥ ಒಂದು ಮೃದು ಮಧುರ ಭಾವನೆ ಅರಳಿಸುವ ಸಿನಿಮಾ ನೋಡಿ. ಎಪ್ಪತ್ತನೇ ದಶಕದ ಕೊನೆಯಲ್ಲಿ ಇಂಥ ಸಿನಿಮಾಗಳು ಸಾಲು ಸಾಲಾಗಿ ಬರುತ್ತಿದ್ದುವು. ಅಮೋಲ ಪಾಲೇಕರ್, ವಿದ್ಯಾ ಸಿನ್ಹಾ, ಶಬಾನಾ. ಫಾರೂಖ್ ಶೇಖ್, ದೀಪ್ತಿ ನಾವಲ್, ಸ್ಮಿತಾ ಪಾಟೀಲ್ ಬರೀ ಪಾತ್ರಗಳಾಗಿ ಅಲ್ಲ ನೀವು ನಾವೇ ಆಗಿ ನಮ್ಮನ್ನು ಕಾಡುತ್ತಿದ್ದರು. ನಮ್ಮ ಜತೆಗೆ ಓದುವ ಹುಡುಗಿಯರಾಗಿ, ಹುಡುಗರಾಗಿ ಹಂಗಿಸುತ್ತಿದ್ದರು. ಅಳಿಸುತ್ತಿದ್ದರು. ನಗಿಸುತ್ತಿದ್ದರು.

ಇಳಾ ಪಾತ್ರದ ನಿಮ್ರುತ್ ಕೌರ್‌ಗೆ ಇದು ಮೊದಲ ಸಿನಿಮಾ. ಆಕೆ ರಂಗಭೂಮಿಯ ನಟಿ, ನಾಯಕ ಇರ್ಫಾನ್ ಖಾನ್ ಬೆಳ್ಳಿ ತೆರೆಗೆ ಹೊಸಬರೇನೂ ಅಲ್ಲ. ಆದರೆ, ಅವರೂ ಎನ್‌ಎಸ್‌ಡಿಯ ಉತ್ಪಾದನೆ. ನಿಜ ಜೀವನದಲ್ಲಿ 'ನಾನು ನಿನ್ನನ್ನು ಪ್ರೀತಿಸುತ್ತೇನೆ' ಎಂದು ಹೇಳುವ ಧೈರ್ಯ ಸಾಲದೆ ಅನೇಕ ಪ್ರೀತಿಗಳನ್ನು ಕಳೆದುಕೊಂಡವ. ಇಲ್ಲಿಯೂ ಹಾಗೆಯೇ ಆಗುತ್ತದೆ!

ಇಳಾಗೆ ಹೆಚ್ಚೇನೂ ವಯಸ್ಸು ಆಗಿಲ್ಲ. ಮದುವೆ ಆಗಿ ಎಂಟು ಹತ್ತು ವರ್ಷ ಆಗಿರಬಹುದು. ಮುಂಬೈನ ಇಕ್ಕಟ್ಟು ಜೀವನ ಆಕೆಯನ್ನು ಹಣ್ಣು ಮಾಡಿದೆ. ಆಕೆ ಗಂಡನ ಕಡೆ ಮುಖ ಮಾಡಿ ಮಲಗಿ, ಮುಲುಗಿ ಎಷ್ಟು ದಿನಗಳಾಯಿತೋ? ಗಂಡನೋ ಶುದ್ಧ ಬೇಕೂಫನಂಥವ, ಕಚೇರಿಯಿಂದ ಮನೆಗೆ ಬರುವಾಗ ಒಂದು ಮೊಳ ಮಲ್ಲಿಗೆ ಮಾಲೆ ತಂದವನು ಅಲ್ಲ. ಈ ಪುಟ್ಟ ಸಿನಿಮಾದಲ್ಲಿ ಮನುಷ್ಯರೆಲ್ಲ ಯಂತ್ರಗಳಂತೆ. ನಿಂತುಕೊಳ್ಳಲೂ ಜಾಗವಿಲ್ಲದ ರೈಲುಗಳಲ್ಲಿ ಅವರು ಹೇಗೆ ಬದುಕುತ್ತಾರೋ? ಅದೇ ಅವರ ಜೀವವನ್ನು ಅರ್ಧ ಹಿಂಡಿ ಬಿಡುತ್ತದೋ ಏನೋ? ನಗರ ಜೀವನವೇ ಹಾಗೆ, ನಿತ್ಯ ಓಟ. ತಲೆಯ ಮೇಲೆ ತಿರುಗುವ ಫ್ಯಾನಿನ ಹಾಗೆ ಅದು ನಿರಂತರ ತಿರುಗುತ್ತಲೇ ಇರುತ್ತದೆ. ಸಿನಿಮಾದಲ್ಲಿಯೂ ಅದೇ ಪಂಖ ತಿರುಗುತ್ತ ಇರುತ್ತದೆ; ಪಂಖ ನಿಂತಿತು ಎಂದರೆ ಜೀವ ಹೋಯಿತು ಎನ್ನುವಂತೆ. ಹೊರಗೆ ದುಡಿಯಲು ಹೋಗುವ ಗಂಡಸು ಹೀಗೆ ವೇಳೆಯ ಜತೆ ಸೆಣಸುತ್ತಿದ್ದರೆ ಮನೆಯಲ್ಲಿ ಇರುವ ಹೆಣ್ಣಿಗೇನೂ ಸುಖವಿಲ್ಲ. ಗಂಡನನ್ನು ಓಡಿಸಿಕೊಂಡು ಹೋಗುವ ವೇಳೆಯ ಜತೆಗೇ ಆಕೆಯೂ ಓಡಬೇಕು. ಪ್ರೀತಿ ಮಾಡಲು, ಕಷ್ಟ ಸುಖ ಹಂಚಿಕೊಳ್ಳಲು ಎಲ್ಲಿ ವೇಳೆ ಇರುತ್ತದೆ? ಆತ ಹೊರಗೆ ಹೋಗಿಯಾದರೂ ಬರುತ್ತಾನೆ. ಈಕೆ ಮನೆಯಲ್ಲಿ ಇದ್ದೇ ಏಗಬೇಕು. ಏನು ಫಲ?

ಹೆಂಡತಿಯನ್ನು ಎಂದೋ ಕಳೆದುಕೊಂಡ ಸಾಜನ್, ಮನೆಯಲ್ಲಿ ಒಂಟಿ, ಮಕ್ಕಳೂ ಇಲ್ಲ. ಆತ ಏನಿದ್ದರೂ ತನ್ನ ಮನೆಯ ಮುಂದೆ ಬ್ಯಾಟು ಚೆಂಡು ಆಡುವ ಮಕ್ಕಳ ಜತೆಗೆ ಒಂದೆರಡು ಮಾತು ಆಡಿದರೆ ಹೆಚ್ಚು. ಹೆಂಡತಿ ಸತ್ತು ಹೋಗಿ ಬಹಳ ದಿನಗಳಾದ ಕಾರಣವೋ, ಅದೇತಾನದ ನೌಕರಿಯಲ್ಲಿ ಬವಳಿ ಬೆಂಡಾಗಿ ಹೋದ ಕಾರಣವೋ ಅವನದು ಸದಾ ಬಿಗಿದ ಮುಖ, ಮನೆಗೆ ಬಂದು ಕಾಡುವ ನೆನಪುಗಳ ಸಂತೆಯಲ್ಲಿ ಒಂದು ಸಿಗರೇಟ್ ಸೇದಿ, ಅದೇ ಜಾಗದಲ್ಲಿ ಇದ್ದ ಬೂದಿತಟ್ಟೆಗೆ ಒರೆಸಿ, ಪಕ್ಕದ ಮನೆಯ ಕಿಟಕಿಯಲ್ಲಿ ಕಾಣುವ ಪರಿಚಿತ ಮುಖಗಳಿಗೆ ಒಂದು 'ಹಾಯ್' ಹೇಳುವುದರಲ್ಲಿ ಏಕತಾನತೆಯನ್ನು ಮುರಿಯಲು ಪ್ರಯತ್ನಿಸುವವ.

ಊಟದ ಡಬ್ಬಿಯ ಮೂಲಕ ವಿನಿಮಯವಾಗುವ ನೋಟ್‌ಬುಕ್ಕಿನ ಹಾಳೆಗಳ ಚೀಟಿಗಳಲ್ಲಿ ಇಳಾ ಮತ್ತು ಸಾಜನ್‌ನ ಒಂಟಿತನ, ಬವಣೆ, ಬೇಸರ, ಸಂತಸ, ಜಂಜಾಟ, ಲಘು ಹಾಸ್ಯಗಳೆಲ್ಲ ವಿನಿಮಯವಾಗುತ್ತವೆ. ದಿನ ಕಳೆದಂತೆ ಪತ್ರಗಳು ಇಬ್ಬರ ಒಳಗನ್ನು ಹೊರಗೆ ತೆರೆದು ಇಡುತ್ತವೆ. ತಾನು ಯಾರೋ ಕಾಣದವನ ಕಡೆಗೆ ಒಲಿಯುತ್ತಿದ್ದೇನೆ ಎಂದು ಆಕೆಗೆ ಅನಿಸುವುದಕ್ಕಿಂತ ಮುಂಚೆಯೇ ಗಂಡ ಇನ್ನೊಬ್ಬಳ ಸೆರಗು ಹಿಡಿದಿರಬಹುದು ಎಂದು ಅನುಮಾನ ಅವಳನ್ನು ಕಾಡತೊಡಗುತ್ತದೆ. ಅವಳಿಗೆ ಗಂಡನ ಬಟ್ಟೆಗಳನ್ನೆಲ್ಲ ಮೂಸಿ ನೋಡಿ ಮಷೀನ್‌ಗೆ ಹಾಕುವುದು ರೂಢಿ, ಗಂಡ ಸಿಗರೇಟು ಸೇದಿ ಬಂದಿರಬಹುದೇ? ಹೊರಗೆ ಹೋದಾಗ ತನಗೆ ತಿಳಿಯದಂತೆ ಒಂದಿಷ್ಟು ಗುಂಡು ಹಾಕುತ್ತಿರಬಹುದೇ ಎಂದು ಅವಳು ಅನುಮಾನ ಪಡುತ್ತಿದ್ದರೆ ಆತ ಇನ್ನೇನೋ ಮಾಡಿದ್ದಾನೆ ಎಂದು ಭಯವಾಗುತ್ತದೆ. ಆದರೆ, ಆಕೆಯ ಹೃದಯದಲ್ಲಿಯೇ ತಾಂಡವ ನಡೆದಿರುತ್ತದೆ!


ಆಕೆ ಇನ್ನೊಬ್ಬನ ಜತೆ ಓಡಿ ಹೋಗುವಂಥ ಸಾಹಸಿಯೇನೂ ಅಲ್ಲ. ಅಂಥ 'ಫ್ಲರ್ಟ್ ಎಂದೂ ಅನಿಸುವುದಿಲ್ಲ. ಆದರೂ ಇಬ್ಬರೂ ಭೇಟಿ ಮಾಡಬೇಕು ಎಂದು ತೀರ್ಮಾನಿಸುತ್ತಾರೆ. ಹಾಗೆ ನೋಡಿದರೆ ಈಕೆಯೇ ದಿನ ಮತ್ತು ಜಾಗ ನಿಗದಿ ಮಾಡುತ್ತಾಳೆ. ಸಿನಿಮಾದ ಅತ್ಯುತ್ತಮ ಭಾಗ ಎಂದರೆ ಇದೇ. ಆಕೆ ಬಂದು ತಾನು ಹೇಳಿದ ಜಾಗದಲ್ಲಿ ಕುಳಿತುಕೊಳ್ಳುತ್ತಾಳೆ. ಹೊಳೆಯುವ ಅವಳ ಕಣ್ಣುಗಳಲ್ಲಿ, ಆಚೆ ಈಚೆ ತಿರುಗಿಸುವ ಕತ್ತಿನಲ್ಲಿ, ಬಂದಾನೋ, ಬಾರನೋ ಎಂದು ಬೇಯುವ ಅವಳ ಆತಂಕದಲ್ಲಿ ನಾವೂ ಸೇರಿಕೊಂಡು ಬಿಡುತ್ತೇವೆ. ನಿರೀಕ್ಷೆ ಕೆಟ್ಟದಲ್ಲ. ನಿರೀಕ್ಷೆಯ ನಂತರ ಬರುವ ನಿರಾಶೆ ಕೆಟ್ಟುದು. ಆತ ಅವಳು ಹೇಳಿದ ಜಾಗಕ್ಕೆ ಬರುತ್ತಾನೆ. ಆದರೆ, ಅವಳನ್ನು ಭೇಟಿ ಮಾಡುವುದಿಲ್ಲ. ಅವನನ್ನು ಎಂದೂ ಕಂಡಿರದ ಆಕೆಗೆ ಆತ ಯಾರು ಎಂದು ಗೊತ್ತಾಗುವುದಿಲ್ಲ. ಆದರೆ, ಇವನಿಗೆ ಅವಳು ಯಾರು ಎಂದು ಗೊತ್ತಾಗುತ್ತದೆ. ಆಕೆ, ತನಗಿಂತ ಚಿಕ್ಕವಳು ಎಂದು ಈತನಿಗೆ ಅನಿಸುತ್ತದೆಯೇ? ಅವಳಿಗೆ ಒಬ್ಬ ಗಂಡ ಇದ್ದಾನೆ, ಮಗಳು ಇದ್ದಾಳೆ. ತನ್ನ ಜತೆಗೆ ಬಂದರೆ ಅವಳ ಬದುಕು ಮೂರಾಬಟ್ಟೆ ಆದೀತು ಎಂದು ಆತ ಹೆದರಿದನೇ? ಮುಂಬೈ, ಆಕೆಗಿಂತ ಈತನನ್ನು ಹೆಚ್ಚು ಹಣ್ಣು ಮಾಡಿದ್ದರಿಂದ ಆಕೆಯ ಅಮಾಯಕತೆಯನ್ನು ದುರುಪಯೋಗ ಮಾಡಿಕೊಳ್ಳಬಾರದು ಎಂದು ಈತ ಅಂದುಕೊಳ್ಳುತ್ತಾನೆಯೇ? ಗಡಿಯನ್ನು ದಾಟಿ ಚಾಚಿಕೊಳ್ಳುವ ಪ್ರೀತಿಯನ್ನು ಹಿಡಿದುಕೊಂಡರೆ ಒಳ್ಳೆಯದೇ, ಹಾಗೆಯೇ ಬಿಟ್ಟು ಬಿಟ್ಟರೆ ಹೆಚ್ಚು ಒಳ್ಳೆಯದೇ? ಪ್ರೀತಿಸಿ ಮದುವೆಯಾದರೆ ಒಳ್ಳೆಯದೇ? ಮದುವೆಯಾಗದೇ ಇದ್ದರೆ ಒಳ್ಳೆಯದೇ? ಯಾವುದು ಹೆಚ್ಚು ಕಾಡುತ್ತದೇ? ಆಕೆ ಅಂದುಕೊಂಡಂತೆ ಆಕೆ ಮತ್ತು ಆತ ಸೇರಿಕೊಂಡು ಅಷ್ಟೇನೂ ದುಬಾರಿಯಲ್ಲದ ಭೂತಾನಿಗೆ ಓಡಿ ಹೋಗಿದ್ದರೆ ಏನು ಆಗುತ್ತಿತ್ತು? ಪ್ರಶ್ನೆ ಉಳಿದು ಬಿಡುತ್ತದೆ.

ಅಂತಿಮವಾಗಿ, ಕೊಲ್ಲುವ ಯಾಂತ್ರಿಕತೆಯಲ್ಲಿಯೇ ಮನುಷ್ಯ ಉತ್ತರ, ಪರಿಹಾರ, ಸಾಂತ್ವನ, ಬಿಡುಗಡೆ ಕಂಡುಕೊಳ್ಳಬೇಕೇ? ಸಿನಿಮಾ ಸ್ಪಷ್ಟವಾಗಿ ಏನನ್ನೂ ಹೇಳುವುದಿಲ್ಲ. ಆದರೆ, ಇಳಾಳ ತಾಯಿ ತನ್ನ ಗಂಡ ಸತ್ತು ಹೋದಾಗ ಜೀವನದ ನಿರರ್ಥಕತೆ ಕುರಿತು ಮಾತನಾಡುತ್ತಾಳೆ. ಬಹುಶಃ ಆಕೆಯೂ ಮುಂಬೈನ ಇನ್ನೊಂದು ತುದಿಯಲ್ಲಿ ತನ್ನ ಗಂಡನ ಜತೆಗೆ ಹೀಗೆಯೇ ಏಗಿರುತ್ತಾಳೆ. ಸಿನಿಮಾದಲ್ಲಿ ಸಂಬಂಧಗಳ ನಡುವಿನ ಇಂಥ ಬಿಕ್ಕಟ್ಟನ್ನು ಸಡಿಲ ಮಾಡುವವನು ಎಂದರೆ ಸಾಜನ್ ಫರ್ನಾಂಡಿಸ್‌ನ ಜಾಗದಲ್ಲಿ ನೇಮಕವಾದ ನವಾಜುದ್ದೀನ್ (ಸಿದ್ದಿಕಿ). 'ರ' ಮತ್ತು 'ಲ' ನಡುವೆ ವ್ಯತ್ಯಾಸವಿಲ್ಲದಂತೆ, ಬಿಡುವೇ ಇಲ್ಲದೇ ಮಾತನಾಡುವ ನವಾಜುದ್ದೀನ್ ಒಬ್ಬ ವಿದೂಷಕ. ನಗರ ಜೀವನದ ಸುಳ್ಳು ನಿಜಗಳ ನಡುವಿನ ತೆಳುವಾದ ಗೆರೆಯಂಥ ಮನುಷ್ಯ ಆತ. ಅವನ ಹಾಗೆ ಎಲ್ಲರೂ ಆಗಲಾರರು.

ಸಿನಿಮಾದಲ್ಲಿನ ಇನ್ನೊಂದು ಪಾತ್ರ, ಇಳಾ ಮನೆಯ ಅಟ್ಟದ ಮೇಲಿನ ಆಂಟಿ. ಆಕೆ ಕೇವಲ ಧ್ವನಿ ಮಾತ್ರ ನಾವು ಆಕೆಯನ್ನು ನೋಡುವುದೇ ಇಲ್ಲ. ನಗರ ಜೀವನದ ಮತ್ತೊಂದು ದುರಂತದ ಸಂಕೇತ ಅದು. ಪಕ್ಕದ ಮನೆಯವರು ನಮಗೆ ಅನೇಕ ಸಾರಿ ಧ್ವನಿ ಮಾತ್ರ ಅವರ ಮುಖವನ್ನು ನಾವು ಎಷ್ಟು ಸಾರಿ ನೊಡುತ್ತೇವೆಯೋ? ನೋಡಿದರೂ ಅವರ ಪರಿಚಯ ನಮಗೆ ಎಷ್ಟು ನಿಕಟ ಇರುತ್ತದೆಯೋ?

ಜೀವನದ ಇಂಥ ವ್ಯಂಗ್ಯಗಳನ್ನು ಒಂದು, ಎರಡು ಎಂದು ಎಣಿಸುತ್ತ ಇರಲು ಆಗದು. ರಿತೇಶ್ ಬಾತ್ರಾ ನಿರ್ದೇಶನದ, ಈಚಿನ ಕಾಲದ ಒಂದು ಅಚ್ಚರಿ ಎನ್ನಿಸುವಂಥ ಈ ಸಿನಿಮಾ 'ಆಸ್ಕರ್'ಗೆ ಆಯ್ಕೆಯಾಗಲಿಲ್ಲ ಎಂದರೆ ಏನು ಹೇಳುವುದು? ಅಂತಿಮವಾಗಿ ಸೋಲುಗಳ ಜತೆಗೇ ನಾವು ನಿರಂತರವಾಗಿ ಹೆಣಗುತ್ತ ಇರಬೇಕಾಗುತ್ತದೆಯೋ ಏನೋ? ಇಳಾ ಸೋಲು ಅದನ್ನೇ ಹೇಳುತ್ತ ಇರಬಹುದು.

13.10.2013



ಸಾದಾ ಹಳ್ಳಿಗನ ನಿರ್ಭಿಡೆಯ ನೇರ ನುಡಿ ಮತ್ತು ರಾಜಧಾನಿಯ ಪತ್ರಕರ್ತನ ಸೂಕ್ಷ್ಮ ಪರಿಣತಿ — ಇವೆರಡರ ಒಂದು ವಿಶಿಷ್ಟ ಸಂಗಮ ಪದ್ಮರಾಜ ದಂಡಾವತಿಯವರ ಬರಹಗಳಲ್ಲಿದೆ. ಉದಾಹರಣೆಗೆ, ಸರ್ಕಾರಿ ಶಾಲೆಗಳಲ್ಲಿ ಜಾತಿಭೇದ ಮಾಡುವ ಯೋಜನೆಗಳನ್ನು ತರುವುದು ತಪ್ಪೆಂದು ಅವರು ವಾದಿಸುವಾಗ ಅದರ ಹಿಂದೆ ಹಳ್ಳಿಗನ ನಿರ್ಭಿಡೆಯ ನುಡಿ ಕಂಡರೆ, ಅಸ್ಮಿತೆಯ ರಾಜಕಾರಣದ ಐತಿಹಾಸಿಕ ಮಜಲುಗಳ ಕಥನವನ್ನು ಅವರು ಮಾಡುತ್ತಿರುವಾಗ ನಮಗೆ ಪರಿಣತ ಪತ್ರಕರ್ತನೊಬ್ಬನ ಸೂಕ್ಷ್ಮಜ್ಞತೆ ಎದುರಾಗುತ್ತದೆ. ಈ ಪುಸ್ತಕದುದ್ದಕ್ಕೂ ಕಾಣಸಿಗುವ ಇಂಥ ಹದದಿಂದಾಗಿಯೇ, ಇಲ್ಲಿಯ ಬರಹಗಳಲ್ಲಿ ಮೊನಚೂ ಇದೆ, ಮಾರ್ದವತೆಯೂ ಇದೆ; ವಿಕೃತಿಯನ್ನು ಝಾಡಿಸುವ ವಿಡಂಬನೆಯೂ ಇದೆ, ಆದರ್ಶದ ಝಲಕುಗಳು ಕಂಡಾಗ ಮೆದುಗೊಳ್ಳುವ ಭಾವುಕತೆಯೂ ಇದೆ. ಪದ್ಮರಾಜ ದಂಡಾವತಿಯವರ ಬರಹಗಳನ್ನು ನಾನು ಇಷ್ಟಪಟ್ಟು ಓದುವುದು ವಿಷಯದ ವಿಶ್ಲೇಷಣೆ ಮತ್ತು ವ್ಯಂಜಕ ಧ್ವನಿಗಳೆರಡೂ ಕೂಡಿದ ಇಂಥ ಹದಕ್ಕಾಗಿ.

– ಅಕ್ಷರ ಕೆ.ವಿ.

www.aksharaprakashana.com

ಅಕ್ಷರ ಪ್ರಕಾಶನ